ರಾಘವಾಂಕ

ಹರಿಶ್ಚಂದ್ರ ಕಾವ್ಯ ಪ್ರಸಂಗ ಓದು



ಸಿ ಪಿ ನಾಗರಾಜ

ರಾಘವಾಂಕ
ಹರಿಶ್ಚಂದ್ರ ಕಾವ್ಯ ಪ್ರಸಂಗ ಓದು

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ
೨೫, ೫ನೆಯ ಕ್ರಾಸ್, 'ಎ 'ಬ್ಲಾಕ್, ಕ್ರಿಶ್ಣ ಗಾರ್ಡನ್
ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು–೫೬೦ ೦೫೯

RAGHAVANKA HARISHCHANDRA KAVYA PRASANGA ODU by C.P.Nagaraja.
Published by Nagu Smaraka Prakashana, 75,
5th cross, ' A ' Block, Krishna Garden, Bengaluru-560 059.
Mobile : 9986347521.

First Edition	:	2025
Page	:	336
Price	:	**Rs.** 400
Paper	:	Stora Cremy
Size	:	Demy 1/8
Copy right	:	Author
Cover Design	:	AI Generated with prompts by Omshivaprakash
Page Layout	:	Harish K.R., 8553184584

ಪ್ರತಿಗಳು ದೊರೆಯುತ್ತವೆ:

ಆರ್.ಸುಧೀಂದ್ರ ಕುಮಾರ್
9, 20ನೆಯ ಮೈನ್, 3ನೆಯ ಕ್ರಾಸ್
ವಿಜಯನಗರ 2ನೆಯ ಹಂತ
ಹಂಪಿ ಸರ್ಕಲ್ ಹತ್ತಿರ, ಮೈಸೂರು–570017
ಮೊ. 8892626269

ಮುನ್ನುಡಿ

ಸಿ.ಪಿ.ನಾಗರಾಜ ಅವರ ಸಾಹಿತ್ಯ ಚಟುವಟಿಕೆಗಳನ್ನು ನೋಡುತ್ತಿದ್ದರೆ, ನನಗೆ ಜಿ.ಪಿ.ರಾಜರತ್ನಂ ಅವರು ನೆನಪಾಗುತ್ತಾರೆ. ಇದಕ್ಕೆ ಕಾರಣಗಳು ಹಲವಾರು.

ಜಿ.ಪಿ.ರಾಜರತ್ನಂ ಕನ್ನಡದ ಒಂದು ವಿಶಿಷ್ಟ ಸಂಕೀರ್ಣ ಪ್ರತಿಭೆ. ಆಧುನಿಕ ಕನ್ನಡಕ್ಕೆ ಸಲ್ಲಬೇಕಾದ ಜ್ಞಾನಭಂಡಾರದ ಬೆಳಕಿನ ಎಳೆಗಳನ್ನು ಹಿಡಿದು, ಆಧುನಿಕ ಸರಳಗನ್ನಡದಲ್ಲಿ ಅವುಗಳನ್ನು ನಮ್ಮ ತರುಣ ಓದುಗ ವರ್ಗಕ್ಕೆ ತಲುಪಿಸಬೇಕೆಂಬ ಹಂಬಲವನ್ನು ಹೊಂದಿದ್ದ ವ್ಯಕ್ತಿತ್ವ ಅದು. ಆ ದೃಷ್ಟಿಯಿಂದಲೇ ಅವರು ಮೌಲ್ಯಯುತವಾದ ಬೌದ್ಧ ಮತ್ತು ಜೈನ ದರ್ಶನದ ಕಥೆಗಳನ್ನು ಕನ್ನಡಕ್ಕೆ ತಂದರು. 'ಪಂಪ ಭಾರತ ಸಾರ', 'ರನ್ನನ ಗದಾಯುದ್ಧ', 'ವಡ್ಡಾರಾಧನೆಯ ಕಥೆಗಳು' ಹೀಗೆ ಹಳೆಗನ್ನಡದ ಕೃತಿಗಳನ್ನು ವರ್ತಮಾನ ಕಾಲಕ್ಕೆ ಅರ್ಥೈಸುವ ಹಾಗೆ ಹೊಸಗನ್ನಡದಲ್ಲಿ ಸರಳವಾಗಿ ಸಂಗ್ರಹಿಸಿ ಓದುಗರಿಗೆ ಕೊಟ್ಟರು. ಇಷ್ಟೇ ಅಲ್ಲದೆ ತಮ್ಮ ನಡುವಿನ ಹಿರಿಯ ಬರಹಗಾರರಾದ ಗೋವಿಂದ ಪೈ, ಕೈಲಾಸಂ, ಸಂಸ ಮುಂತಾದವರನ್ನು ಸುಂದರವಾಗಿ ಪರಿಚಯಿಸಿದರು. ಬಹು ಮುಖ್ಯವಾಗಿ ದಕ್ಷಿಣ ಕರ್ನಾಟಕದ ದೇಸಿಯಲ್ಲಿ 'ರತ್ನನ ಪದಗಳು', 'ನಾಗನ ಪದಗಳು' ಕವನಗಳನ್ನು ಬರೆದು, ಗಡಂಗುಗಳ ನಡುವೆ ಇರುವ ಕನ್ನಡದ ಪ್ರೀತಿಯನ್ನು ವಿಶಿಷ್ಟ ರೀತಿಯಲ್ಲಿ ಓದುಗರಿಗೆ ಪರಿಚಯಿಸಿದರು.

ಇಂಥದ್ದೇ ಕೆಲಸವನ್ನು ಇನ್ನಷ್ಟು ತೀವ್ರತೆಯಿಂದ ಮಾಡುತ್ತಿರುವ ಸಿ.ಪಿ.ನಾಗರಾಜ ಅವರು ಕನ್ನಡದ ಓದುಗರಿಗೆ ಅನೇಕ ಹಂತಗಳಲ್ಲಿ ವರ್ತಮಾನಕ್ಕೆ

ಪ್ರಸ್ತುತವಾಗುವಂತೆ ವಿವಿಧ ಚಿಂತನೆಗಳನ್ನು ಹಾಗೂ ಓದುಗಳನ್ನು ಪ್ರಸ್ತುತ ಪಡಿಸುತ್ತಿದ್ದಾರೆ.

ಕನ್ನಡಿಗರ ವೈವಿಧ್ಯಮಯ ಬಯ್ಗುಳಗಳನ್ನು ಅವರು ಸಂಶೋಧನೆಗೆ ತೆಗೆದುಕೊಂಡು ಮಂಡಿಸಿರುವುದು ವಸ್ತುವಿನ ಆಯ್ಕೆಯ ವಿಶಿಷ್ಟತೆಯನ್ನು ಅವರು ಹೇಗೆ ಹಿಡಿಯುತ್ತಾರೆ ಎನ್ನುವುದನ್ನು ಸ್ಪಷ್ಟವಾಗಿ, ಈ ಆಯ್ದುಕೊಂಡ ವಿಷಯವೂ ತೋರಿಸುತ್ತದೆ. ಅನೇಕ ನಾಟಕಗಳನ್ನೂ ಬರೆದಿರುವ ಸಿ.ಪಿ.ನಾಗರಾಜ ಅವರ ಸಾಹಿತ್ಯ ಕೃಷಿಯು ಕೇವಲ ತಮ್ಮನ್ನು ಮುಂದೆ ಮಾಡಿಕೊಳ್ಳುವ ರೀತಿಯದ್ದು ಅಲ್ಲ. ಅವರ ಸಾಹಿತ್ಯ ಪ್ರತಿಭೆಯು ವ್ಯಕ್ತವಾಗಿರುವುದು ಕನ್ನಡದ ಹೊಸ ಓದುಗರಿಗೆ ಒಳ್ಳೆಯದನ್ನು ಕೊಡಬೇಕು ಎನ್ನುವ ಹಂಬಲದಲ್ಲಿ ಜಿ.ಪಿ.ರಾಜರತ್ನಂ ಅವರ ಹಾಗೆಯೇ ಪಂಪ, ರನ್ನ, ವಚನಕಾರರು, ಕನಕದಾಸ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದವರನ್ನು ಆಧುನಿಕ ಓದಿಗೆ ಒಳಪಡಿಸಿ ಪ್ರಕಟಿಸಿರುವುದು ಈ ಹಿನ್ನೆಲೆಯಲ್ಲಿ ಅವರ ಬಹು ಮುಖ್ಯ ಸಾಧನೆಯಾಗಿದೆ.

ನಮ್ಮ ವರ್ತಮಾನದ ಜನಾಂಗವು ಓದುವುದಕ್ಕಿಂತ ನೋಡುವ, ಕೇಳುವ ಸಂಸ್ಕೃತಿಗೆ ಹೆಚ್ಚು ಅಂಟಿಕೊಂಡಿರುವುದು ನಾಗರಾಜ ಅವರಿಗೆ ಚೆನ್ನಾಗಿ ಗೊತ್ತಿದೆ. ಹೀಗಾಗಿ ಇವುಗಳನ್ನು ಡಿಜಿಟಲ್ ಆಡಿಯೋ ಬುಕ್ಕುಗಳನ್ನಾಗಿಯೂ ಮಾಡಿ, ಅವರು ಓದುಗರಿಗೆ ಕೇಳಲು ಬಿಟ್ಟಿದ್ದಾರೆ. ಅಷ್ಟೇ ಅಲ್ಲದೆ ಇವೆಲ್ಲವುಗಳನ್ನು ಯೂಟ್ಯೂಬ್‌ನಲ್ಲಿ ತಾವೇ ಸ್ವತಃ ಓದಿ, ಕೇಳಿಸುವ ಹಾಗೆ ಮಾಡಿದ್ದಾರೆ. ಹೊಸ ಕಾಲಕ್ಕೆ ಕನ್ನಡದ ವಿವಿಧ ಬಗೆಯ ಸಾಂಸ್ಕೃತಿಕ, ಸಾಹಿತ್ಯಕ ಸತ್ತ್ವಗಳನ್ನು ಮುಂದೆ ದಾಟಿಸುವ ತಹತಹ ನಾಗರಾಜ ಅವರಲ್ಲಿ ಮನೆ ಮಾಡಿದೆ. ಇದು ಅವರ ಬಗ್ಗೆ ಪ್ರೀತಿ ಗೌರವಗಳನ್ನು ಹುಟ್ಟಿಸುವ ಹಾಗೆ ಮಾಡುತ್ತದೆ.

ಕನ್ನಡ ಸಾಹಿತ್ಯದ ಓದು ಬಹು ದಶಕದಿಂದ ನಮ್ಮಲ್ಲಿ ಶಿಕ್ಷಣದ ಕ್ಷೇತ್ರದಲ್ಲಿ ಮಾತ್ರವೇ ಅಲ್ಲದೇ, ಸಾಹಿತ್ಯವನ್ನು ತಿಳಿಯುವ ರೀತಿಯಲ್ಲಿಯೂ ವಸ್ತು ಮತ್ತು ವಿವರಗಳನ್ನು ಮಾತ್ರ ಅವಲಂಬಿಸಿದೆ. ಸಾಹಿತ್ಯದ ಭಾಷೆಯನ್ನು ಅರಿಯುವ ಸಾಹಿತ್ಯಕ ಸಾಧನಗಳ ಬಗ್ಗೆ ಕೆಲವರು ವಿವರಿಸುವ ಪ್ರಯತ್ನಪಟ್ಟರೂ ಅದು ಪ್ರಾಕ್ಟಿಕಲ್ ಆಗಿ ಸಫಲವಾಗದೆ ಹೋಗಿದೆ.

ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಭಾಷೆ ವರ್ಣಕದಲ್ಲಿ ಇದೆ ಎನ್ನುವುದನ್ನು ಗುರುತಿಸಲಾಗಿದೆ. ವಸ್ತುಕವನ್ನು ವರ್ಣಕದಲ್ಲಿ ಹಿಡಿದ ಬಗೆ ಎಂಥದ್ದು ಎನ್ನುವ ಪ್ರಶ್ನೆಯನ್ನು ಅಲ್ಲಲ್ಲಿ ವಿವರಿಸಲಾಗಿದೆ. ನಾಟಕೀಯತೆ ಮತ್ತು ಚಿತ್ರಕದ ಶಕ್ತಿ ಇದರ ಮೂಲ ಗುಣ. ಆಧುನಿಕ ಪೂರ್ವ ಸಾಹಿತ್ಯ ಕಾವ್ಯ ಪ್ರಧಾನವೇ ಆಗಿದೆ ನಿಜ. ಆದರೆ ಇದನ್ನು ಸಾರಾಸಗಟಾಗಿ ಕಾವ್ಯವೆಂದು ಕರೆದರೆ, ಕಾವ್ಯಭಾಷೆಯನ್ನು ಹಿಡಿದ

ಹಾಗಾಗಲಿಲ್ಲ. ಇಲ್ಲಿನ ವರ್ಣಕ ಸ್ವರೂಪವನ್ನು ತಿಳಿಯಬೇಕಾದರೆ ಹೊಸ ರೀತಿಯಲ್ಲಿ ಮುರಿದು ಓದಬೇಕು. ಹೀಗೆ ಓದುವುದು ಅಂದರೇನು ಅನ್ನುವುದನ್ನು ಸಿ.ಪಿ.ನಾಗರಾಜ ಅವರು ಹಳೆಗನ್ನಡ ಕಾವ್ಯ ಪಠ್ಯಗಳನ್ನು ಮರುಸಂಯೋಜಿಸಿ ಇಡುವುದರ ಮೂಲಕ ಓದುಗರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಕನ್ನಡ ಕಾವ್ಯ ಪಠ್ಯಗಳ ಓದಿಗೆ ಇದು ಹೊಸತನ ಕೊಟ್ಟಿದ್ದಲ್ಲದೆ, ಹಳೆಗನ್ನಡ ಸಾಹಿತ್ಯ ಸ್ವರೂಪವನ್ನೂ ಬಿಚ್ಚಿ ತೋರಿಸಿದ ಹಾಗೆ ಮಾಡಿದೆ. ಕನ್ನಡ ಕಾವ್ಯದಲ್ಲಿ ಒಂದಾಗಿರುವ–ದೃಶ್ಯಮಯತೆ, ನಾಟಕೀಯತೆ, ವರ್ಣನೆಯಲ್ಲಿ ಬರುವ ಚಿತ್ರಕ ಶಕ್ತಿ–ಇವೆಲ್ಲವೂ ನಾಗರಾಜ ಅವರು ಕಟ್ಟಿದ ಹೊಸರೂಪದಲ್ಲಿ ಎದ್ದು ಕಾಣುತ್ತವೆ. ತಾತ್ತ್ವಿಕವಾದ ವಿವರಣೆಗಿಂತ ಪ್ರಾಕ್ಟಿಕಲ್ ಆದ ಈ ಸಂಯೋಜನೆ ಹೆಚ್ಚು ಪರಿಣಾಮಕಾರಿಯಾಗಿದೆ. ಹಳೆಗನ್ನಡ ಕಾವ್ಯಗಳ ಸರಳ ಗದ್ಯಾನುವಾದಗಳ ಪ್ರಯತ್ನವನ್ನು ಅನೇಕ ಧೀಮಂತರು ಮಾಡಿದ್ದಾರೆ. ಆದರೆ ಕಾವ್ಯದ ಆಸ್ವಾದನೆ ಇದರಿಂದ ಕುಂಠಿತವಾಗಿ ಹೋಗಿದೆ. ನಾಗರಾಜ ಅವರ ಈ ಹೊಸ ಪ್ರಯತ್ನ ಕಾವ್ಯದ ಓದಿಗೆ ಹೊಸ ರೀತಿಯ ದಾರಿ ಮಾಡಿದೆ ಮತ್ತು ಈ ಮೂಲಕ ಕಾವ್ಯದ ವಿಶಿಷ್ಟತೆಯನ್ನು ಹಿಡಿಯಲು ಪ್ರಯತ್ನಿಸುತ್ತದೆ.

ಪಂಪ ಭಾರತದ ಓದಿನಲ್ಲಿ ಈ ಪ್ರಯತ್ನವನ್ನು ಅವರು ಮಾಡಿದ್ದರು. ಅಲ್ಲಿಯ ನಾಟಕೀಯ ಪ್ರಸಂಗಗಳನ್ನು ಆಶ್ವಾಸ ಅನುಕ್ರಮವಾಗಿ ಸಂಭಾಷಣೆಯ ರೀತಿಯಲ್ಲಿ ಕೊಟ್ಟು, ಪಂಪನ ಈ ಕೃತಿಯ ಓದಿಗೆ ಹೊಸ ಮಾರ್ಗ ತೋರಿದ್ದರು. ಈಗ ಹರಿಶ್ಚಂದ್ರ ಕಾವ್ಯವನ್ನು ಅದೇ ಬಗೆಯಲ್ಲಿ ಸಂಭಾಷಣೆಯ 'ನಾಟಕೀಯತೆ'ಯಲ್ಲಿ ಪ್ರಸಂಗಗಳನ್ನು ವಿಂಗಡಿಸಿ ಇಟ್ಟಿದ್ದಾರೆ. ನಂತರ ಪ್ರತಿ ಪ್ರಸಂಗಗಳ ತಿರುಳನ್ನು ಕಾವ್ಯಭಾಷೆಯಲ್ಲಿಯೇ ಹಿಡಿಯುವ ಮೂಲಕ ಓದುಗನಿಗೆ ಒಟ್ಟು ಕಾವ್ಯದ ಸಾರ ಒದಗುವಂತೆ ರೂಪಿಸಿದ್ದಾರೆ.

ಹರಿಶ್ಚಂದ್ರ ಕಾವ್ಯವು ಸಂಭಾಷಣೆಯ ಮೂಲಕವೇ ನಾಟಕೀಯತೆಯನ್ನೂ ಕಥನದ ಚೌಕಟ್ಟನ್ನೂ ಕಟ್ಟಿಕೊಡುವ ಏಕೈಕ ಪ್ರಾಚೀನ ಕಾವ್ಯವಾಗಿದೆ. ರಾಘವಾಂಕನು ಸತ್ಯ ಮತ್ತು ಸುಳ್ಳಿಗೆ ಸಂಬಂಧಪಟ್ಟ ಹರಿಶ್ಚಂದ್ರನ ವರ್ತನೆಯ ಪ್ರಾಚೀನ ಪ್ರಶ್ನೆಯನ್ನು ವರ್ತಮಾನ ಕಾಲದಲ್ಲಿ ತೆಗೆದುಕೊಂಡು ಬಿಡಿಸಲು ಹೋಗಿದ್ದಾನೆ. ವೇದಕಾಲೀನ ಹರಿಶ್ಚಂದ್ರನು ಮಾತಿಗೆ ತಪ್ಪಿದವನು. ತನಗೆ ಹುಟ್ಟಿದ ಮಗುವನ್ನು ಯಜ್ಞದಲ್ಲಿ ಬಲಿ ಕೊಡಲು ಒಪ್ಪಿದ್ದ ಹರಿಶ್ಚಂದ್ರನು ಹಲವಾರು ನೆಪಗಳನ್ನು ಹೂಡಿ ತಪ್ಪಿಸುತ್ತಾನೆ. ಅಜೀಗರ್ತನ ಮಗ ಶುನಶ್ಶೇಪನನ್ನು ಬಲಿ ಕೊಡುವಂತೆ ಮಾಡಿದ ಕಥೆ ಪುರಾತನದ್ದು. ಅಲ್ಲಿ ಅವನು ಸತ್ಯಕ್ಕೆ ದೂರವಾದವನು.

ಆದರೆ ವರ್ತಮಾನ ಕಾಲದಲ್ಲಿ ರಾಘವಾಂಕನು ಹರಿಶ್ಚಂದ್ರನ ಸತ್ಯತೆಯನ್ನು ನಿರ್ಧರಿಸಲು ಮರು ಪರೀಕ್ಷೆಗೆ ಒಡ್ಡುತ್ತಾನೆ. ಹಂಪೆಯ ವಿರೂಪಾಕ್ಷನ ಸುತ್ತಮುತ್ತ ಓಡಾಡುವ ಈ ಹರಿಶ್ಚಂದ್ರನಿಗೆ ಕನ್ನಡದ ಈ ಕಾಲವು ಹಾಕುವ ಪ್ರಶ್ನೆಯನ್ನು ಎದುರಿಸಬೇಕಾಗುತ್ತದೆ. ಅವನು ಸತ್ಯಸಂಧನೆಂದು ಗುರುವಾದ ವಸಿಷ್ಠನು ಹೇಳಿದಾಗ ಕೋಪಗೊಂಡ ರಾಜರ್ಷಿ ವಿಶ್ವಾಮಿತ್ರನು ಅದಕ್ಕೆ ಸವಾಲು ಎಸೆಯುತ್ತಾನೆ. ಈ ಸವಾಲು ನಂತರ ಪರೀಕ್ಷೆಯಲ್ಲಿ ಮಾರ್ಪಟ್ಟಾಗ ಒಂದು ಮುಖ್ಯವಾದ ಪರೀಕ್ಷೆ, ವಿಶ್ವಾಮಿತ್ರ ಸೃಷ್ಟಿಸಿ ಕಳಿಸಿದ ಹೊಲತಿಯರಾದ ಗಾಣರಾಣಿಯರ ಪ್ರಸಂಗ. ಅವರ ಹಾಡು ನೃತ್ಯಕ್ಕೆ ಕೊಡುಗೆಯಾಗಿ ಹೊಲತಿಯರಾದ ಗಾಣರಾಣಿಯರು ತಮ್ಮನ್ನು ಮದುವೆಯಾಗು ಎಂದು ಕೇಳಿಕೊಂಡಾಗ "ಹೊಲತಿಯರು ಬಂದು ಆವು ಸತಿಯರಾದಪ್ಪೆವು ಎಂಬ ಉಲಿಹವೆಂಬುದು ಬಂದ ಕಾಲ ಗುಣವೋ... ನಿಂತ ನೆಲದ ಗುಣವೋ... ನೋಡು ನೋಡು ಎಂದು ಅವನೀಶನು ಕಡುಮುಳಿದು ಕೋಪಿಸಿದನ್."

ವಿಶ್ವಾಮಿತ್ರನು ಹರಿಶ್ಚಂದ್ರನನ್ನು ತನ್ನ ಬೆವರಿನಿಂದ ಹುಟ್ಟಿದ ಹೊಲತಿಯರಾದ ಗಾಣರಾಣಿಯರನ್ನು ಮದುವೆಯಾಗು ಎಂದು ಕೇಳಿದಾಗ, ಹರಿಶ್ಚಂದ್ರನು ತನ್ನ ಸಮಸ್ತ ರಾಜವನ್ನೇ ಕೊಟ್ಟೇನು, ಅದು ಆಗದು ಎಂದು ಮಾತಿನಲ್ಲಿ ಸಿಕ್ಕು ಬಿಡುತ್ತಾನೆ. ಹಾಗಾದರೆ ನಿನ್ನ ಸರ್ವಸ್ವ ರಾಜ್ಯವನ್ನು ದಾನವಾಗಿ ನೀಡು ಎಂದು ವಿಶ್ವಾಮಿತ್ರ ಕೇಳಿದಾಗ ರಾಜನು ಸಮಸ್ತವನ್ನೂ ದಾನ ಕೊಡುತ್ತಾನೆ. ಏನೂ ಇಲ್ಲದಂತೆ ಆದಾಗ, ದಕ್ಷಿಣೆಯನ್ನು ಇತ್ತು ದಾನ ಕೊಟ್ಟಿಲ್ಲ, ದಕ್ಷಿಣೆಯ ಬಾಕಿಯನ್ನು ಕೊಡಬೇಕು ಎಂದು ವಿಶ್ವಾಮಿತ್ರ ಅವನಿಗೆ ಕೆಲವು ದಿನಗಳ ಗಡುವು ಕೊಡುತ್ತಾನೆ. ಇದರ ಪರಿಣಾಮ ಅವನು ತನ್ನನ್ನೂ ಮಾರಿಕೊಂಡು ಚಂಡಾಲನ ಹತ್ತಿರ ಹೊಲೆಯನಾಗಿ ಸ್ಮಶಾನದಲ್ಲಿ ಸೇವೆ ಮಾಡಬೇಕಾದ ವ್ಯಂಗ್ಯಕ್ಕೆ ಬಂದು ನಿಲ್ಲುತ್ತಾನೆ.

ಹರಿಶ್ಚಂದ್ರ ಕಾವ್ಯದಲ್ಲಿ ಸತ್ಯದ ಪ್ರಶ್ನೆಯು ಅನೇಕ ಬಗೆಯದ್ದಾಗಿದೆ. ತಾನು ರಾಜನಾಗಿ ಹೊಲತಿಯರನ್ನು ಮದುವೆಯಾಗಲಾರದ ಸತ್ಯದ ಜೊತೆಗೆ, ಅನೇಕ ಆನುಷಂಗಿಕ ಸತ್ಯಗಳ ಪರೀಕ್ಷೆಯು ಇಲ್ಲಿ ಕಾಣಿಸಿಕೊಳ್ಳುತ್ತವೆ. ಅವುಗಳು–ತನ್ನ ಸರ್ವಸ್ವ ರಾಜ್ಯವನ್ನು ದಾನ ಕೊಡುವ ಸತ್ಯ, ನಂತರ ದಕ್ಷಿಣೆಯನ್ನು ಹೇಗಾದರೂ ಮಾಡಿ ದಾರುಣ ಕಷ್ಟಕ್ಕೆ ಒಳಗಾಗಿ ಸಲ್ಲಿಸಬೇಕಾದ ಪ್ರಸಂಗಕ್ಕೆ ಒಡ್ಡಿಕೊಂಡ ಸತ್ಯ. ಆದರೆ ವರ್ಣಧರ್ಮವನ್ನು ಕಾಪಾಡಿಕೊಳ್ಳಬೇಕಾದ ರಾಜಧರ್ಮವೇ ಅಂತಿಮವಾಗಿ ಸತ್ಯವಾಗಿ ಉಳಿಯುತ್ತದೆ. ಕೊನೆಗೆ ವಿಶ್ವನಾಥನೇ "ಅತಿ ಹುಸಿವ ಯತಿ ಹೊಲೆಯ... ಹುಸಿಯದಿಹ ಹೊಲೆಯನ್ ಉನ್ನತ ಯತಿವರನು... ಹುಸಿದು ಮಾಡುವ ಮಹಾಯಜ್ಞ ಶತವು ಎಯ್ದೆ ಪಂಚಪಾತಕ... ಸತ್ಯ ಬೆರೆಸಿದ

ನ್ಯಾಯವದು ಲಿಂಗಾರ್ಚನೆ... ಶ್ರುತಿಮತವಿದು ಎನ್ನಾಜ್ಞೆ... ನಿನ್ನಂತೆ ಸತ್ಯರ್ ಈ ಕ್ಷಿತಿಯೊಳ್ ಇನ್ನಾರುಂಟು ಹೇಳ್" ಎಂದು ಸತ್ಯ–ಅಸತ್ಯವನ್ನು ವಿವರಿಸುತ್ತಾನೆ.

ಕವಿಯೂ ಕಾವ್ಯದ ಕೊನೆಗೆ "ಹರನೆಂಬುದೇ ಸತ್ಯ... ಸತ್ಯವೆಂಬುದು ಹರನು... ಎರಡಿಲ್ಲವೆಂದು ಶ್ರುತಿ ಸಾರುತಿರಲು... ಅರರೇ, ಆ ವಾಕ್ಯವ ನಿರುತವ ಮಾಡಿ... ಮೂಜಗಕ್ಕೆ ತೋರಿದ ಹರಿಶ್ಚಂದ್ರ ಕಥೆ ಕೇಳ್ದಡೆ... ಅನೃತವರಿಯದ ಹೊಲೆಯನನ್ ನೆನೆಯೆ ಪುಣ್ಯವೆಂದು ಎನೆ... ಸೂರ್ಯಕುಲಜ ಕಲಿದಾನಿ ಸತ್ಯನ್... ವಸಿಷ್ಠನ ಶಿಷ್ಯನ್... ಅಧಿಕ ಶೈವನ್... ಕಾಶಿಯೊಳ್ ಮೆರೆದ ವೇದ ಪ್ರಮಾಣ ಪುರುಷ ಘನನೃಪ ಹರಿಶ್ಚಂದ್ರನ್" ಎಂದು ಘೋಷಿಸುತ್ತಾನೆ. "ಹುಸಿಯದಿಹ ಹೊಲೆಯನ್" ಶ್ರೇಷ್ಠ ಎನ್ನುವಲ್ಲಿ ಯಾವ ಸತ್ಯಕ್ಕೆ ಇವನು ಬದ್ಧನಾಗಬೇಕು ಎನ್ನುವ ಸೂಚನೆಯೂ ಇದೆ. ಹೊಲೆಯನ/ಹೊಲೆತನದ ಸಾಮಾಜಿಕ ಸಮಸ್ಯೆ ಹಾಗೇ ಉಳಿಯುತ್ತದೆ. ಈ ಬಗೆಗಿನ ಚರ್ಚೆ ಬೇರೆಯದೇ ಆದ ವೇದಿಕೆಯನ್ನು ಬಯಸುತ್ತದೆ. ಈ ಪುಸ್ತಕದ ಸಂರಚನೆಯ ವ್ಯಾಪ್ತಿಯಲ್ಲಿ ಅದನ್ನು ವಿವರಿಸಲು ಪ್ರಸ್ತುತವಲ್ಲ.

ವರ್ಣಧರ್ಮದ ಕಾಪು ಮತ್ತು ಹರ–ಸತ್ಯ ಅಭಿನ್ನತೆಯನ್ನು ಸಾರಿ ವರ್ತಮಾನದಲ್ಲಿ ವಚನ ಚರಿತವನ್ನು ಪಲ್ಲಟಗೊಳಿಸಿದ ರಾಘವಾಂಕನ ಹರಿಶ್ಚಂದ್ರ ಕಾವ್ಯವು ಈ ಸತ್ಯವನ್ನು ಹೇಳಲು ಪರಿಣಾಮಕಾರಿಯಾದ ಕಾವ್ಯ ಕೌಶಲವನ್ನು ಉಪಯೋಗಿಸಿಕೊಳ್ಳುತ್ತದೆ. ಕನ್ನಡದ ಕಿವಿ ಮತ್ತು ಕಣ್ಣಿಗೆ ಒಗ್ಗಿಕೊಂಡಿದ್ದ ನಾಟಕೀಯತೆ ಹಾಗೂ ದೃಶ್ಯಮಯತೆಯನ್ನು ಕನ್ನಡದ ಬೇರೆ ಯಾವ ಕಾವ್ಯವೂ ಈ ಪರಿಯಲ್ಲಿ ಬಳಸಿಕೊಂಡಿಲ್ಲ.

ನಾಗರಾಜ ಅವರು ಇಪ್ಪತ್ತೈದು ಪ್ರಸಂಗಗಳಲ್ಲಿ ಇಡೀ ಕಾವ್ಯದ ನಾಟಕೀಯತೆಯ ಶೈಲಿ–ವಿಸ್ತಾರವನ್ನು ಕವಿಯ ನಾಟಕೀಯ ಭಾಷೆಯ ಚೌಕಟ್ಟಿನಲ್ಲಿಯೇ ಹಿಡಿದಿದ್ದಾರೆ. ಕಾವ್ಯದ ಧೋರಣೆಯನ್ನು ಎತ್ತಿಹಿಡಿಯಲು ಕವಿಯು ಎತ್ತಿಕೊಂಡ ವಸ್ತುವೂ ಕೇಳುಗರಿಗೆ/ನೋಡುಗರಿಗೆ ರಸಜನ್ಯವಾಗುವಂತದ್ದೇ ಆಗಿದೆ. ವೈಭವದ ಉತ್ಕರ್ಷದಿಂದ ಪಾತಾಳಕ್ಕೆ ಇಳಿಯುವ ರಾಜ ಕುಟುಂಬದ ಕಥೆ ಕರುಣರಸವನ್ನು ಉಕ್ಕಿಸುತ್ತದೆ. ಪಾತ್ರಗಳ ಸಂವಾದ, ಸ್ವಗತಗಳು ಇದನ್ನು ಆಗುಮಾಡುತ್ತವೆ.

ಅದರಿಂದ ಇದನ್ನು ನಾಗರಾಜ ಅವರು ನಾಟಕೀಯ ಪ್ರಸಂಗಗಳನ್ನಾಗಿ ಮಾಡಿರುವುದರಲ್ಲಿ ಔಚಿತ್ಯವಿದೆ. ಕತೆಯ ಎಲ್ಲಾ ರಸಘಟ್ಟಗಳೂ ಈ ಪ್ರಸಂಗಗಳನ್ನು ಓದುವಾಗಲೇ ದಕ್ಕುತ್ತವೆ. ಇಡೀ ಹರಿಶ್ಚಂದ್ರ ಕಾವ್ಯದ ಸಂವಾದದ ನಾಟಕೀಯತೆಯನ್ನೇ ಬಳಸಿ ನೀನಾಸಂನಲ್ಲಿ ಹರಿಶ್ಚಂದ್ರ ನಾಟಕವನ್ನು ಮಾಡಿದ್ದನ್ನು ಇಲ್ಲಿ ನೆನೆಯಬಹುದು.

ನಾಗರಾಜ ಅವರೇ ರೂಪಿಸಿದ ಪಂಪ ಭಾರತದ ಪ್ರಸಂಗದಲ್ಲಿ ಪಾತ್ರಗಳು ಮಾತಾಡುವ ಕನ್ನಡಕ್ಕೂ, ಹರಿಶ್ಚಂದ್ರ ಕಾವ್ಯ ಪ್ರಸಂಗದಲ್ಲಿ ಪಾತ್ರಗಳು ಮಾತಾಡುವ ಕನ್ನಡಕ್ಕೂ ವ್ಯತ್ಯಾಸವಿದೆ ಎನ್ನುವುದನ್ನು ಓದಿ ನೋಡಿದರೆ ಗೊತ್ತಾಗುತ್ತದೆ. ಈ ವ್ಯತ್ಯಾಸವು ವಸ್ತುವನ್ನು ನಿರ್ವಹಿಸಿದ ಕವಿಯ ಭಾಷೆಯ ಗುಣಾತ್ಮಕ ವ್ಯತ್ಯಾಸವೇ ಆಗಿದೆ. ಇಂಥ ಕಾರಣಕ್ಕೂ ನಾಗರಾಜ ಅವರ ಈ ಪ್ರಯೋಗಗಳು ಪ್ರಯೋಜನಕಾರಿಯಾಗಿವೆ. ಕಾವ್ಯದ ಪದಗಳನ್ನು ಬಿಡಿಸಿ ವಿಂಗಡಿಸಿ ಆಡುಮಾತಿನ ಕಾಕುವಿಗೆ ತರುವ ನಾಗರಾಜ ಅವರ ಪರಿಶ್ರಮದಿಂದಾಗಿ ವಿಭಿನ್ನ ಚೈತನ್ಯವು ಓದುವಿಕೆಗೆ ದಕ್ಕುತ್ತದೆ. ಸಿ.ಪಿ.ನಾಗರಾಜ ಅವರ ಈ ಪ್ರಯತ್ನಗಳು ಹಳೆಗನ್ನಡ ಕಾವ್ಯಗಳ ಹೊಸ ಓದಿಗೆ ಪ್ರಚೋದಿಸುವ ಮೀಟುಗೋಲಾಗಲಿ ಎಂದು ಹಾರೈಸುತ್ತೇನೆ.

ಬಸವರಾಜ ಕಲ್ಗುಡಿ

ಬೆಂಗಳೂರು

ನನ್ನ ನುಡಿ

ಕ್ರಿ.ಶ.೧೯೩೧ರಲ್ಲಿ ಟಿ.ಎಸ್.ವೆಂಕಣ್ಣಯ್ಯನವರು ಮತ್ತು ಎ.ಆರ್.ಕೃಷ್ಣಶಾಸ್ತ್ರಿಗಳು ಸಂಪಾದಕರಾಗಿ ಪ್ರಕಟಿಸಿದ 'ಹರಿಶ್ಚಂದ್ರ ಕಾವ್ಯ ಸಂಗ್ರಹ' ಕೃತಿಯನ್ನು ಆಕರವಾಗಿಟ್ಟುಕೊಂಡು 'ರಾಘವಾಂಕ ಹರಿಶ್ಚಂದ್ರ ಕಾವ್ಯ ಪ್ರಸಂಗ ಓದು' ಎಂಬ ಈ ಹೊತ್ತಗೆಯನ್ನು ಸಿದ್ಧಪಡಿಸಿದ್ದೇನೆ. ಹರಿಶ್ಚಂದ್ರ ಕಾವ್ಯ ಸಂಗ್ರಹದಲ್ಲಿನ ಕಾವ್ಯದ ನುಡಿ ರಚನೆಯನ್ನು ಇಪ್ಪತ್ತೈದು ಪ್ರಸಂಗಗಳನ್ನಾಗಿ ವಿಂಗಡಿಸಿಕೊಂಡು, ನಾಟಕ ರೂಪಕ್ಕೆ ಅಳವಡಿಸಿ, ನಡುಗನ್ನಡದ ಕಾವ್ಯದ ನುಡಿಗೆ ಹೊಸಗನ್ನಡದಲ್ಲಿ ತಿರುಳನ್ನು ಬರೆದಿದ್ದೇನೆ. ಈ ಬರಹದ ರಚನೆಗೆ ಗುರುಗಳಾದ ಕೆ.ವಿ.ನಾರಾಯಣ ಅವರು ಮಾರ್ಗದರ್ಶನ ನೀಡಿದ್ದಾರೆ. ಆನ್‌ಲೈನ್ ಮ್ಯಾಗಜಿನ್ 'ಹೊನಲು' ಮಿಂದಾಣದಲ್ಲಿ (honalu.net) ಇಪ್ಪತ್ತೈದು ಕಂತುಗಳಲ್ಲಿ ಈ ಬರಹ ಪ್ರಕಟಗೊಂಡಿದೆ. ಮೂಡಿಬಂದ ಬರಹಕ್ಕೆ ಹೊನಲು ಮಿಂದಾಣದ ಓದುಗರು ಮೆಚ್ಚುಗೆಯನ್ನು ಸೂಚಿಸಿದರು. ಈ ರೀತಿ ಬರಹ ರೂಪುಗೊಳ್ಳಲು ಗುರುಗಳಾದ ಕೆ.ವಿ.ನಾರಾಯಣ ಅವರ ಮಾರ್ಗದರ್ಶನ, ಹೊನಲು ಮಿಂದಾಣದ ಸಂಪಾದಕ ವರ್ಗ ಮತ್ತು ಓದುಗರು ನೀಡಿದ ಉತ್ತೇಜನವೇ ಕಾರಣವಾಗಿದೆ.

ಈ ಬರಹದ ಕರಡು ಪ್ರತಿಯನ್ನು ನನ್ನ ಗುರು ಹಿರಿಯರು ಮತ್ತು ಗೆಳೆಯರಿಗೆ ಅಂಚೆ ಮೂಲಕ ಕಳುಹಿಸಿದ್ದೆನು. ಅವರೆಲ್ಲರೂ ಓದಿ ನೋಡಿ ಉತ್ತೇಜನದ ನುಡಿಗಳನ್ನಾಡಿದ್ದಾರೆ. ನನ್ನೆಲ್ಲಾ ಬರಹಗಳ ಮೊದಲ ಓದುಗಳಾದ ನನ್ನ ಹೆಂಡತಿ ಗಾಯತ್ರಿ ತನ್ನ ಅನಿಸಿಕೆಯನ್ನು ತಿಳಿಸಿದ್ದಾಳೆ. ಗೆಳೆಯರಾದ ಆರ್.ಸುಧೀಂದ್ರ ಕುಮಾರ್ ಅವರು ನಾನು ಬರೆದು ಪ್ರಕಟಿಸಿದ ಪುಸ್ತಕಗಳನ್ನು ಓದುಗರಿಗೆ

ತಲುಪಿಸಲು ನೆರವಾಗುತ್ತಿದ್ದಾರೆ. ಗೆಳೆಯರಾದ ಓಂಶಿವಪ್ರಕಾಶ್ ಅವರು ಮುಖಪುಟವನ್ನು ರಚಿಸಿಕೊಟ್ಟಿದ್ದಾರೆ. ಈ ಹೊತ್ತಿಗೆಯ ಪುಟ ವಿನ್ಯಾಸವನ್ನು ಕೆ.ಆರ್.ಹರೀಶ್ ಅವರು ಸಿದ್ಧಪಡಿಸಿದ್ದಾರೆ.

ನಡುಗನ್ನಡದ ಕಾವ್ಯರಚನೆಗೆ ಹೊಸಗನ್ನಡ ವಾಕ್ಯಗಳನ್ನು ಬರೆಯುವಾಗ ಗುರು ಸಮಾನರಾದ ಡಿ.ಎನ್.ಶಂಕರ ಬಟ್ ಅವರು ಕನ್ನಡ ಬರಹದಲ್ಲಿ ಬಳಸ ಬೇಕಾದ ಲಿಪಿಗಳ ಬಗ್ಗೆ ಹೇಳಿರುವ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ.

ಸರ್ವಜ್ಞ ಮತ್ತು ಶಿವಶರಣಶರಣೆಯರ ವಚನಗಳಿಗೆ ನಾನು ಟಿಪ್ಪಣಿಯನ್ನು ಬರೆಯಲು ತೊಡಗಿದಾಗ, ಗೆಳೆಯರಾದ ಬಸವರಾಜ ಕಲ್ಗುಡಿ ಅವರು ಆ ಬರಹವನ್ನು ಓದಿ ನೋಡಿ "ನಿಮ್ಮ ಟಿಪ್ಪಣಿಯ ಸರಳವಾದ ನುಡಿರಚನೆಯು ಇಂದಿನ ತಲೆಮಾರಿನ ಓದುಗರಿಗೆ ತುಂಬಾ ಉಪಯುಕ್ತವಾಗುತ್ತದೆ. ಇದನ್ನು ಮುಂದುವರಿಸಿ" ಎಂದು ಉತ್ತೇಜನ ನೀಡಿದ್ದರು. ಈಗ ಅವರನ್ನು "ಹರಿಶ್ಚಂದ್ರ ಕಾವ್ಯ ಪ್ರಸಂಗಕ್ಕೆ ಮುನ್ನುಡಿಯನ್ನು ಬರೆದುಕೊಡಿ" ಎಂದು ಕೇಳಿಕೊಂಡೆನು. ನನ್ನ ಕೋರಿಕೆಯನ್ನು ಮನ್ನಿಸಿ, ಪ್ರೀತಿಪೂರ್ವಕವಾಗಿ ಮತ್ತು ಉತ್ತೇಜನಪೂರ್ವಕವಾಗಿ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ.

'ರಾಘವಾಂಕ ಹರಿಶ್ಚಂದ್ರ ಕಾವ್ಯ ಪ್ರಸಂಗ ಓದು' ಹೊತ್ತಗೆಯ ರಚನೆಗೆ ನೆರವಾದ ಈ ಎಲ್ಲಾ ಗುರುಹಿರಿಯರಿಗೆ, ಗೆಳೆಯರಿಗೆ ಸಂಪಾದಕ ವರ್ಗದವರಿಗೆ ಮತ್ತು ಬಸವರಾಜ ಕಲ್ಗುಡಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಿ.ಪಿ.ನಾಗರಾಜ

ಓದಿಗೆ ನೆರವಾದ ಪುಸ್ತಕಗಳು

೧. ಟಿ.ಎಸ್.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರಿ
ಸಂಪಾದಕರು
ಹರಿಶ್ಚಂದ್ರ ಕಾವ್ಯ ಸಂಗ್ರಹ
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.
ಆರನೆಯ ಮುದ್ರಣ: ೧೯೫೬

೨. ಎನ್.ಬಸವಾರಾಧ್ಯ ಮತ್ತು ಪಂಡಿತ ಎಸ್.ಬಸಪ್ಪ
ಸಂಪಾದಕರು
ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯಂ
ಪ್ರಾಚ್ಯಕಾವ್ಯ ಪ್ರಕಾಶ ಮಂದಿರ
ಸರಸ್ವತಿಪುರಂ, ಮೈಸೂರು.
ಮೂರನೆಯ ಮುದ್ರಣ:೧೯೭೫

೩. ವೈ.ನಾಗೇಶ ಶಾಸ್ತ್ರಿ ಮತ್ತು ಎಂ.ಜಿ.ವೆಂಕಟೇಶಯ್ಯ
ಸಂಪಾದಕರು
ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು. ಮರುಮುದ್ರಣ: ೧೯೮೫

೪. ಕೆ.ವೈ.ಶಿವಕುಮಾರ್
ರಾಘವಾಂಕನ ಹರಿಶ್ಚಂದ್ರ ಕಾವ್ಯ
(ಸಮಗ್ರ ಗದ್ಯಾನುವಾದ)
ಪ್ರೀತಿ ಪ್ರಕಾಶನ, ಮೈಸೂರು.
ಪ್ರಕಟಣೆಯ ವರ್ಷ: ನಮೂದಿಸಿಲ್ಲ.

ಪರಿವಿಡಿ

ಕವಿ ಪರಿಚಯ

ಕವಿಯ ಹೆಸರು : ರಾಘವಾಂಕ

ಕಾಲ : ಕ್ರಿ.ಶ.೧೨೮೦

ಹುಟ್ಟಿದ ಊರು : ಪಂಪಾಪುರ

ತಾಯಿ : ರುದ್ರಾಣಿ

ತಂದೆ : ಮಹಾದೇವ ಭಟ್ಟ

ಸೋದರ ಮಾವ ಮತ್ತು ಗುರು: ಹರಿಹರ ಕವಿ

ರಚಿಸಿದ ಕಾವ್ಯಗಳು

೧. ಹರಿಶ್ಚಂದ್ರ ಕಾವ್ಯ
೨. ಸಿದ್ಧರಾಮ ಪುರಾಣ
೩. ಸೋಮನಾಥ ಚರಿತೆ
೪. ವೀರೇಶ ಚರಿತೆ
೫. ಶರಭ ಚಾರಿತ್ರ
೬. ಹರಿಹರ ಮಹತ್ವ

ಪ್ರಸಂಗ–೧

ವಸಿಷ್ಠ ವಿಶ್ವಾಮಿತ್ರರ ವಿವಾದ

ಟಿ.ಎಸ್.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ **'**ವಸಿಷ್ಠ ವಿಶ್ವಾಮಿತ್ರರ ವಿವಾದ**'** ಎಂಬ ಎರಡನೆಯ ಅಧ್ಯಾಯದ ೨೧ ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.)

ಪಾತ್ರಗಳು

ದೇವೇಂದ್ರ : ದೇವಲೋಕದ ಒಡೆಯ.

ವಸಿಷ್ಠ : ಒಬ್ಬ ಋಷಿ.

ವಿಶ್ವಾಮಿತ್ರ : ಒಬ್ಬ ಋಷಿ.

ದೇವತೆಗಳು ಮತ್ತು ಋಷಿಗಳು

ವಸಿಷ್ಠ ವಿಶ್ವಾಮಿತ್ರರ ವಿವಾದ

ಪರುಷವು ಅಂಗಣದ ಕಲು; ಸುರಭಿ ಕರಹಮ್; ಕಲ್ಪತರು ವನಮ್; ಸ್ವರ್ಗ ನಿಜದೇಶ; ಅಮರಾವತಿಯೆ ಪುರದುರ್ಗ; ಅಮರರ್ ಆಳ್; ಮೇರು ಕೇಳೀಶೈಲ; ಅಮೃತವೇ ಮನೆಯ ಬೀಯಮ್; ವರರಂಭೆ ಸೂಳೆ; ಶಚಿ ರಾಣಿ; ಐರಾವತಮ್ ಕರಿ; ವಜ್ರವು ಆಯುಧಮ್; ನವನಿಧಿಯೆ ಭಂಡಾರ; ಹೊರೆವಾಳ್ದನ್ ಅಭವನ್ ಎಂದೆನಿಪ ದೇವೇಂದ್ರನ್ ಒಂದಿರುಳ್ ಓಲಗವನಿತ್ತನು.

ಒಡಲನ್ ಆವರಿಸಿದ ಅಂಗೋಪಾಂಗ ಸಂಕುಳದ ನಡುವೆ ನಯನ ದ್ವಯಂಗಳು; ನವಗ್ರಹದ ನಡುವೆ ಚಂದ್ರ ಆದಿತ್ಯರ್; ಉರ್ವಿಯಮ್ ಪರ್ವಿ ಪಸರಿಸಿದ ನಾನಾ ನದಿಗಳ ನಡುವೆ ಸುರುಚಿರ ಗಂಗೆ ತುಂಗಭದ್ರೆಗಳ್ ಸಲೆ ಒಪ್ಪವಡೆದು ಮಹಿಮೆಯೊಳ್ ಎಸೆವ ತೆರದಿ, ಸುರಪನ ಸಭೆಯನ್ ಎಡೆಗೊಂಡ ಮುನಿಕುಲದ ನಡುವೆ ಅಧಿಕ ವಿಶ್ವಾಮಿತ್ರ ವಾಸಿಷ್ಠರು ಇರ್ದರ್. ಆಗ ದೇವೇಂದ್ರನು ವಸಿಷ್ಠ ಮುನಿಯನ್ನು ಉದ್ದೇಶಿಸಿ

ದೇವೇಂದ್ರ : ಎಲೆ ಮುನಿಪ ಹೇಳ್, ಅಲಸದೆ ಸಮಸ್ತ ಭೂಮಂಡಲವನ್ ಆಳ್ವ ರವಿಕುಲಜರಪ್ಪ ಇಕ್ಷ್ವಾಕುವಂಶದ ಅರಸುಗಳೊಳ್ ಅತಿಬಲರೆನಿಸಿ ಮನ ವಚನ ಕಾಯದೊಳಗೆ ಒಮ್ಮೆಯುಮ್ ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ ಹೇಳ್. ಅವರ ಪಾರಂಪರೆಗೆ ಸಲೆ ಸಂದ ರಾಜಗುರು ನೀನ್ ಅರಿಯದವರಿಲ್ಲ.

(ಎಂದು ಹಲವು ಕಣ್ಣಾದವನ್ ವಸಿಷ್ಠ ಮುನಿಗೆ ನುಡಿದನು.)

ವಸಿಷ್ಠ : ಬೆಸಗೊಂಡಡೆ, ಇಂದುತನಕ ಆನ್ ಅರಿಯೆ ಇಕ್ಷ್ವಾಕುವಂಶದೊಳಗಣ ಚತುರ್ದಶ ಭುವನಪತಿಗಳೊಳಗೆ ಹುಸಿ ಹೊದ್ದದವರಿಲ್ಲ. ಹಿಂದಣ ಅರಸುಗಳನ್ ಉದ್ಧರಿಸಲೆಂದು ವಸುಧಾಧಿಪತಿ ಹರಿಶ್ಚಂದ್ರನ್ ಅವತರಿಸಿದ. ಆತನ ಸತ್ಯದ ಎಸಕಮನ್ ಪೊಗಳಲ್ ಎನ್ನಳವೆ... ಶಶಿಮೌಳಿಯಾಣೆ ಫಣಿಪತಿಗೆ ಅರಿದು.

(ಎನಲ್ ವಿಶ್ವಾಮಿತ್ರನು ಆ ವಸಿಷ್ಠಂಗೆ ಕೋಪಿಸಿದ. ತೀವಿದ ಒಡ್ಡೋಲಗದ ನಡುವೆ ತನ್ನನ್ ಮೊದಲೊಳ್ ಓವಿ ನುಡಿಸದ ಕೋಪವೊಂದು; ಆ ವಸಿಷ್ಠ ಮುನಿಯು ಆವುದಮ್ ಪೇಳ್ದಡೆ ಅದನ್ 'ಅಲ್ಲ' ಎಂಬ ಭಾಷೆ ಎರಡು; ಅಖಿಳ ಜೀವಾವಳಿಯಲಿ ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ ಭಾವ ಮುಪ್ಪುರಿಗೊಂಡು ಕುಡಿವರಿದು ಕಡುಗೋಪವು ಆವರಿಸಿ ಕೌಶಿಕನ್ ನಿಂದು...)

ವಿಶ್ವಾಮಿತ್ರ : ನಿಲ್ ನುಡಿಯಬೇಡ.

(ಎಂದು ಜರೆದು ಇಂತೆಂದನು.)

ವಿಶ್ವಾಮಿತ್ರ : ವಾಸಿಷ್ಠ, ಬೇಸರದೆ ಕೇಳ್ವ ದೇವೇಂದ್ರನುಂಟೆಂದು, ಅಕಟಕಟ.. ಇಂತು ಹೇಸದೆ ಸೊರಹುವರೆ.

ವಸಿಷ್ಠ : ನಾ ಸೊರಹಿದಾತನೆ... ಅವನ್ ಅಧಿಕನಲ್ಲದನೆ. ಮುನಿದ ಮೋರೆಯೊಳ್ ಎಂದೆನೆ ಹೇಳ್.

ವಿಶ್ವಾಮಿತ್ರ : ರಾಸಿ ಹೊನ್ನುಂಟು ಅಧಿಕನಹನ್.

ವಸಿಷ್ಠ : ಈ ಸಭೆಯೊಳೇಕೆ ಹೊನ್ನ ಮಾತು... ಸತ್ಯನೆ ಹೇಳ್.

ವಿಶ್ವಾಮಿತ್ರ : ಅಂತು ಅವನ್ ಆಳ್ವ ದೇಶದೊಳು ಸತ್ಯಲೇಶವ ಕೇಳ್ದರಿಯೆನ್. ಎಸೆವ ಮಗನಿಲ್ಲದಡೆ ನರಕವಹುದೆಂದು ಚಿಂತಿಸಿ, ವರುಣನಲಿ ವರಂಬಡೆಯಲ್ **"ಆತನ ಯಾಗ ಪಶುವ ಮಾಡುವೆನ್"** ಎಂದು... **"ಮರಳಿ ಈವೆಯಾದಡೆ ಈವೆನು ಮಗನ ನಿನಗೆ"** ಎಂದೆನೆ... **"ಶಿಶುವಾದನ್ ಎಂಬುದಾದಡೆ ಸಾಕು"** ಎನಲ್ ಕೊಡಲು ಹುಸಿದು... ಅಡವಿಗಟ್ಟಿ ಬಯ್ಚಿಟ್ಟನ್ ಎಂಬುದನ್ ಇಂತು ಎಸೆವ ವೇದಂಗಳೊಳು ಕೇಳಿ, ಪೊಗಳುವಡೆ ನಿನ್ನ ಧೀವಶವು ಅರಿದು. ಹಿರಿದು ಹುಸಿಗೆ ಅಬುಧಿಪತಿ ಮುನಿದು

ಮಾಡಿದ ಜಳೋದರವ ಭಾವಿಸದೆ ಕಂಗೆಟ್ಟ ಜಾಡ್ಯಮ್, ಮೋಹದಿಂದೆ ಮಹಾಧ್ವರಕೆ ಮಗನ ಪಶುವನ್ ಮಾಡಲಾರದೆ, ಅಜೀಗರ್ತಮುನಿಯ ವರಸುತ ಶುನಶ್ಶೇಪನನ್ ತಂದು ಯಾಗವಿಧಿಗೆ ಅರಿದು ಬೇಳಲ್ಕೆ ಮನದಂದ ಪಾತಕನು. ಭೂವರನನ್ ಏತಕ್ಕೆ ಹೇಸದೆ ಹೊಗಳ್ವೆ.

(ಎಂದು ವಾಸಿಷ್ಠನನ್ ಕೆಡೆನುಡಿದನು.)

ವಸಿಷ್ಠ : ಹಲವು ಮಾತೇಕೆ... ಆ ಹರಿಶ್ಚಂದ್ರ ಭೂನಾಥನೊಳಗೆ ಅಸತ್ಯವನು ಕಾಣಿಸಲು ಬಲ್ಲರು ಧಾತ್ರಿಯೊಳು ಮುನ್ನ ಹುಟ್ಟಿದವರಿಲ್ಲ... ಇನ್ನು ಹುಟ್ಟುವರ ಕಾಣೆ. ನಾನ್ ಇದ ಬಲ್ಲೆನು. ಉಳಿದವರ ಹವಣ್ ಆವುದು.

(ಎಂದು ವಾಸಿಷ್ಠ ಮುನಿ ಕುಲತಿಲಕನ್ ಎನಲು, ವಿಶ್ವಾಮಿತ್ರ ಮನದೊಳ್ ಅತಿ ಮುಳಿದು...)

ವಿಶ್ವಾಮಿತ್ರ : ನಿಲ್ ಬಾಯಿ ಹಿರಿದುಂಟೆಂದು ಆಡದಿರು.

(ಎನುತ್ತ ಮತ್ತೆ ಇಂತೆಂದನು.)

ವಿಶ್ವಾಮಿತ್ರ : ಆತನ್ ವನಧಿ ಪರಿಯಂತ ಧರೆಗೆ ಅರಸು. ಅದರೊಳಮ್ ಧನವುಳ್ಳ ಶಿಷ್ಯನಾಗಿಹನು. ನಿನಗೆ ಅತಿ ವಿಪುಳ ಧನವನ್ ಆರಾಧಿಸುವನ್. ಅಂತಲ್ಲದೆ ನೀನು ಆತನ ಆರಯ್ಕೆ ಯೊಳಗಿರ್ಪೆ. ಎನಿತನ್ ಅಗ್ಗಳಿಸಿ ಬಣ್ಣಿಸಲೊಪ್ಪದಯ್ಯ ಹೇಳ್.

ವಸಿಷ್ಠ : ನಾನ್ ರಾಜಪ್ರತಿಗ್ರಹದ ಬಲದವನೆ.

ವಿಶ್ವಾಮಿತ್ರ : ಮುನಿಯಬೇಡ... ಆತ ಹುಸಿದನಾದಡೆ ನಿನ್ನನು ಏಗಯ್ಯಬಹುದು.

ವಸಿಷ್ಠ : ಹರಿಶ್ಚಂದ್ರ ಮರೆದು ಹುಸಿಯಮ್ ನುಡಿದಡೆ ಶ್ರುತಿ, ಮತ, ಕುಲಾಚಾರ, ಧರ್ಮಮಾರ್ಗಮ್, ಮಹಾವ್ರತ ಅನುಷ್ಠಾನ, ಗುರುವಾಜ್ಞೆ, ಲಿಂಗಾರ್ಚನೆ, ಉನ್ನತ ತಪಮ್, ಬ್ರಹ್ಮಕರ್ಮಮ್ ಬೆಳೆದ ಪುಣ್ಯವೊಳಗಾದವಮ್ ತೊರೆದು ಕಳೆದು, ಸತಿಯನ್ ಉಳಿದು, ಅತಿ ದಿಗಂಬರನಾಗಿ ಮುಕ್ತಕೇಶಿತನಾಗಿ ನರಕಪಾಲದೊಳು ಸುರೆ ಎರೆದು ಕುಡಿಯುತ ತೆಂಕಮುಖನಾಗಿ ಹೋಹೆನ್.

ಒಡ್ಡೋಲಗದಲ್ಲಿದ್ದವರು : (ತಮ್ಮ ತಮ್ಮಲ್ಲಿಯೇ)

ಧರೆ ಗಗನ ಅಡಸಿ ಕಾದುವಡೆ ಎಡೆಯಲಿಹ ಚರಾಚರವೆಲ್ಲಿ ಹೊಗಲಿ; ಮುನಿದು ಅಖಿಳಮಮ್ ಸುಟ್ಟೊಸೆದು ಮರಳಿ ಹುಟ್ಟಿಸಬಲ್ಲ ಮುನಿಗಳಿಬ್ಬರ ಶಾಂತಿ ಸವೆದ ಕದನದ ಮುಖದಲಿ ಇರಬಾರದು... ಏಳಬಾರದು... ನುಡಿಯ ಬಾರದು... ಅಂತಿರಬಾರದು... **"ಅಹುದು"** ಎನಲುಬಾರದು... **"ಅಲ್ಲ"** ಎನಬಾರದು.

(ಎರಡುಮ್ ನಿರೋಧದಿಂದ ಒಡ್ಡೋಲಗಮ್ ಚಿಂತೆ ಮುಸುಕಿ ಸೈವೆರಗಾದುದು.)

ದೇವೇಂದ್ರ : (ತನ್ನ ಮನದಲ್ಲಿ)

ಒಂದಕ್ಕೆ ಹಿತನುಡಿಯೆ ಪಕ್ಷವೆಂದು... ಎರಡುವಮ್ ಹಿಂದುಗಳೆದಿರಲ್ ಉಪೇಕ್ಷಿತನೆಂದು... ಜರೆದಡೆ ಎಮ್ಮಿಂದ ಅಧಿಕನೇ ಎಂದು... ಹೊಗಳ್ದಡೆ ಉಪಚಾರವೆಂದು... ಎತ್ತಿದಡೆ ಧೂರ್ತನೆಂದು ನೊಂದು ಶಾಪವನ್ ಈಯದೆ ಇರರು.

(ಎಂದು ಸುರಪನು ಆನಂದರಸವರತು, ಬೆರಗಿನ ಮೊಗದೊಳಿರಲು ನಾರದ ಧಟ್ಟಿಸುತ ಎದ್ದು...)

ನಾರದ : ಕೌಶಿಕ, ವಸಿಷ್ಠಂಗೆ ಭಾಷೆಯನು ಕೊಡು.

(ಎಂದನು)

ವಿಶ್ವಾಮಿತ್ರ : ಹರಿಶ್ಚಂದ್ರ ಹುಸಿಯನ್ ನುಡಿಯದಿರಲ್... ಎನಗೆ ಪ್ರತಿಜ್ಞೆ, ಧರೆಯೊಳು ಚತುರ್ಯುಗಂಗಳು ಮರಳಿ ಮರಳಿ ಸಾವಿರ ಬಾರಿ ಬಂದಡೆ ಅಜಗೆ ಒಂದು ದಿನ... ಆ ದಿನದ ಪರಿ ದಿನಮ್ ಮೂವತ್ತು ಬರಲ್ ಏಕಮಾಸ... ಆ ಮಾಸ ಹನ್ನೆರಡಾಗಲು ವರುಷ... ಆ ವರುಷ... ಶತ ಎಂಬುದು ಈ ಸುರಪತಿಗೆ ಪರಮ ಆಯು... ಈತನ್ ಈರೇಳ್ ಭವಮ್ ಬಪ್ಪನ್ನೆವರ ದೇವಲೋಕಕ್ಕೆ ಬಾರೆನ್. ಭಕ್ತಿ, ಶಮೆ, ದಮೆ, ಯೋಗ, ಯಾಗ, ಶ್ರುತಿಮತ ಮಯ, ವಿರಕ್ತಿ, ಘೋರವ್ರತ, ತಪೋನಿಷ್ಠೆ, ಜಪ, ಗುಣಾಸಕ್ತತೆ, ಸ್ನಾನ, ಮೌನ, ಧ್ಯಾನ, ಆಚಾರ, ಸತ್ಯತಪ, ನಿತ್ಯನೇಮ, ಯುಕ್ತಿ, ವೇದ ಆಗಮ ಅಭ್ಯಾಸ, ಲಿಂಗಾರ್ಚನಾ ಆಸಕ್ತಿಯಿಮ್ ಬೆಳೆದ ಪುಣ್ಯದೊಳು ಅರ್ಧಮಮ್ ಸುಧಾಭುಕ್ತರ್ ಅರಿಯಲು ಕೊಡುವೆನ್.

ವಸಿಷ್ಠ	:	ಎಂದು ಭೂವರನನ್ ಪರೀಕ್ಷಿಸುವೆ?
ವಿಶ್ವಾಮಿತ್ರ	:	ಎನ್ನ ಮನ ಬಂದ ದಿನ.
ವಸಿಷ್ಠ	:	ಎನಿತು ಸೂಳ್?
ವಿಶ್ವಾಮಿತ್ರ	:	ಆತನ್ ಈ ಧರೆಯೊಳ್ ಇಪ್ಪಂದು ತನಕ.
ವಸಿಷ್ಠ	:	ಆವಾವ ಪರಿಯೊಳು?
ವಿಶ್ವಾಮಿತ್ರ	:	ಸಹಸ್ರ ವಿಧದೊಳು.
ವಸಿಷ್ಠ	:	ದಿಟವೆ?
ವಿಶ್ವಾಮಿತ್ರ	:	ದಿಟ. (ಎಂದು ಎನೆ)
ವಸಿಷ್ಠ	:	ಹಿಂದುಗಳೆಯಲ್ ಅದೇಕೆ ನಡೆ.
ವಿಶ್ವಾಮಿತ್ರ	:	ನೀನ್ ಆಡುವ ಅಂದವು ಅನುವಾಗಿರದು. (ಎನುತ್ತೆ ಕೌಶಿಕನ್ ಅಣಕದಿಂದ ಆಡಲು...)
ವಸಿಷ್ಠ	:	ಎಮ್ಮ ಕೂಡ ಇನಿತು ಅಣಕವೇಕೆ. ಇನಿತು ಮುಳಿಸು ಆವುದು. (ಎಂದು ವಾಸಿಷ್ಠ ಮುನಿ ನುಡಿದನು.)
ವಿಶ್ವಾಮಿತ್ರ	:	ಹರಿಶ್ಚಂದ್ರ ಭೂಭುಜನ ಮನೆಗೆ ಈಗಳ್ ಇಂತು ನೀ ಹೋಗಿ, ಕೌಶಿಕನು ನೆಟ್ಟನೆ ನಿನ್ನನ್ ಇಂತಿಂತು ಕೆಡಿಸಿದಪ... ನೀನ್ ಆವ ಪರಿಯಲ್ ಎಚ್ಚತ್ತಿರೆಂದು ನೆನಸಿಕೊಡು ಹೋಗು.
ವಸಿಷ್ಠ	:	ಆನು ಆಡುವವನೆ ಹೇಳ್.
ವಿಶ್ವಾಮಿತ್ರ	:	ಎನ್ನ ಗಾಸಿಗಾರದೆ ನೃಪನ್ ಹುಸಿನುಡಿಯೆ ಮುನಿತನವನ್ ಈಡಾಡಿ ಹೋಹಂತಿರೆ ಆದಪುದು. ಹೋಗಿ ನೀನ್ ಹೇಳ್.
ವಸಿಷ್ಠ	:	ತರಣಿ ತೇಜಮ್ ಕಿಡದರ್; ಅಗ್ನಿ ಬಿಸುಪಾರದಿರು; ಸರಸಿರುಹವ್ವೈರಿ ತಂಪಮ್ ಬಿಡದಿರ್; ಎಲೆಲೆ, ಮಂದರವೆ ಚಲಿಸದಿರ್ ಎಂದು ಬೋಧಿಸಲದೇಕೆ. ಸುಮ್ಮನಿರಲು ನಿಜವ ಅಳಿವವೇ. ವರಹರಿಶ್ಚಂದ್ರ ಸತ್ಯಮ್ ಕೆಡದಿರ್ ಎಂದು ಬೋಸರಿಸುವಂತಾಗಿ ಹುಸಿಯುಂಟೆ...ಕೊಂಡೆಯವೆ... ಎನಗೆ... ಹಿರಿಯತನ ಕೆಟ್ಟಿಂತು ನುಡಿಯಲಹುದೇ. (ಎಂದು ವಾಸಿಷ್ಠಮುನಿ ನುಡಿದನು.)

ವಿಶ್ವಾಮಿತ್ರ : ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ...ಮುನಿದು ಪೊಡವಿ ನುಂಗುವಡೆ ಮನೆ ತಾಂಗುವುದೆ... ಕವಿದು ಹೆಗ್ಗಡಲುಕ್ಕಿ ಜಗವ ಮೊಗೆವಡೆ ಮಳೆಗಳ್ ಅಡ್ಡಬಹವೇ ಹೇಳು. ಮುನಿಪ, ನಿನ್ನ ಬಡ ಬೋಧೆಗೀಧೆಗಳು ರಕ್ಷಿಸುವುವಲ್ಲ. ನಾನ್ ಕಡುಮುಳಿದ ಬಳಿಕಲ್ ಏಗುವುವು. ನೀ ಹೇಳದಿರ್ದಡೆ ಮದನಹರನಾಣೆ ಹೋಗು.

(ಎಂದು ಕೌಶಿಕನ್ ವಸಿಷ್ಠ ಮುನಿಯ ಜರೆದನು.)

ವಸಿಷ್ಠ : "ಕುಲವ ನಾಲಗೆ ಅರುಹಿತು" ಎಂಬ ನಾಣ್ನುಡಿಗೆ ಇಂದು ನೆಲೆಯಾಯ್ತಲಾ. ಬ್ರಹ್ಮ ಋಷಿಯಾದಡೆ ಒಳಗು ನಿರ್ಮಳವಪ್ಪುದಯ್ಯ. ನೀನ್ ರಾಜರ್ಷಿ. ಕೋಪಿಸದೆ... ಧಟ್ಟಿಸದೆ... ಕೆಡೆನುಡಿಯದೆ... ನಿಲಲ್ ಎಂತು ಬಲ್ಲೆ.

ವಿಶ್ವಾಮಿತ್ರ : ಎನ್ನ ನೀನೀಗ ಹೆಪ್ಪಳಿಸದೆ ಆಡಿದೆ.

ವಸಿಷ್ಠ : ಅಹುದಹುದು ನಿನ್ನಲಿಹ ನೆಲೆಯಾಡಿತು.

(ಎನೆ ಕೌಶಿಕನ್ ಕುಪಿತನಾದನ್. ಅದನ್ ಆವ ಕವಿ ಬಣ್ಣಿಸುವನು.)

ವಿಶ್ವಾಮಿತ್ರ : ನೋಡು ನೋಡು. ಇಂದು ಎನ್ನ ರಾಜ ಋಷಿಯೆಂದು ಕೆಟ್ಟಾಡಿತಕ್ಕೆ, ಆ ಹರಿಶ್ಚಂದ್ರನನ್ ಅಸತ್ಯನನ್ ಮಾಡಿಸುವೆನ್. ಅಧಿಕ ಪ್ರತಿಜ್ಞೆಗಳನ್ ಆಂತ ನಿನ್ನನ್ ವ್ರತಭ್ರಷ್ಟನ್ ಎನಿಸಿ, ರೋಡಾಡಿ ಕಾಡುವೆನ್.

(ಎನುತ್ತ ವಿಶ್ವಾಮಿತ್ರನ್ ಎದ್ದು, ಸಿಡಿಲು ಗಜರಿ ಘರ್ಜಿಸಿ ಮೇಘ ದಿಂದ ಪೊರಮಡುವ ಅಂದದಿ, ಸಾವನ್ ಈಡಾಡಿದವರ ಒಡೆಯನ ಆಡಂಬರದ ಓಲಗದಿಂದ ಹೊರವಂಟನ್.)

❖

ಪ್ರಸಂಗ–೨

ಬಹು ಸುವರ್ಣಯಾಗ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ ‘ಮೃಗಯಾ ಪ್ರಸಂಗ’ ಎಂಬ ಮೂರನೆಯ ಅಧ್ಯಾಯದ ೧ ರಿಂದ ೭ ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ವಿಶ್ವಾಮಿತ್ರ : ಒಬ್ಬ ಮುನಿ

ಹರಿಶ್ಚಂದ್ರ : ಅಯೋಧ್ಯೆಯ ರಾಜ

ವಿಶ್ವಾಮಿತ್ರನ ಆಶ್ರಮದ ಮುನಿಗಳು

ಬಹು ಸುವರ್ಣಯಾಗ

'ಕೋಣನೆರಡುಮ್ ಹೋರೆ ಗಿಡುವಿಂಗೆ ಮಿತ್ತು' ಎಂಬ ಕ್ಷೋಣಿಯಾಡುವ ಗಾದೆಯಮ್ ದಿಟಮ್ ಮಾಳ್ಪಂತೆ ಕೌಶಿಕನ್ ವಸಿಷ್ಠಂಗೆ ಹೂಣಿಸಿ...

ವಿಶ್ವಾಮಿತ್ರ : (ತನ್ನಲ್ಲಿಯೇ)

ನುಡಿದ ಪ್ರತಿಜ್ಞೆಯಮ್ ಗೆಲುವಡೆ ಇನ್ನು ಜಾಣಿಮ್ ಹರಿಶ್ಚಂದ್ರರಾಯನ ಉನ್ನತಿಯಳಿವ ಕಾಣಬೇಕು.

(ಎಂದು ಅಖಿಳ ಸಾಮಾರ್ಥದ ಕಲಾಪ್ರವೀಣನ್... ಅಂತಸ್ಥದ ಏಕಾಂತದೊಳ್ ಚಿಂತೆಯಿಮ್ ಭ್ರಾಂತಿಯೋಗದೊಳ್ ಇರ್ದನು.)

ವಿಶ್ವಾಮಿತ್ರ : (ತನ್ನ ಮನದಲ್ಲಿ)

ಧರೆಯೊಳು ಹರಶ್ಚಂದ್ರನನ್ ಹುಸಿಕನ್ ಎಂದೆನಿಪ ಪರಿಯು ಆವುದು...

(ಎಂದು ಚಿಂತಿಸಲ್ ಒಂದು ಉಪಾಯವು ಅಂಕುರಿಸೆ ಕಂಡು ಉಬ್ಬಿ, ಭುಜವೊಯ್ದು, ನಿಜವೈರದ ಅಂತಸ್ಥ ಅರಿಯದ ಮುನಿಗಳ ಕರೆದು...)

ವಿಶ್ವಾಮಿತ್ರ : ನೀವ್ ಇಂತೀಗ ಹೋಗಿ ಭೂವರನನ್ ಉಪಚರಿಸಿ

ಬೋಧಿಸಿ, ಆವ ಪರಿಯೊಳಮ್ ಬಹುಸುವರ್ಣಯಾಗವನ್ ಮಾಳ್ಪ ಅನುವನು ಉರೆ ಮಾಳ್ಪುದು.

(ಎಂದು ವಿಶ್ವಾಮಿತ್ರನು ಕಳುಹಿದನು. ಮುನಿಗಳ್ ಕೌಶಿಕನ ಕುಟಿಲವ ಅರಿಯದೆ ಹೋಗಿ, ಅವನೀಶಂಗೆ ಮಂಗಳ ಆಶೀರ್ವಾದ ಶೇಷೆಯನ್ ಸೂಸಲ್...)

ಹರಿಶ್ಚಂದ್ರ : ಏನು ಕಾರ್ಯ ಬಿಜಯಂಗೆಯ್ದಿರಿ.

ಮುನಿಗಳು : ಸಕಲ ವೇದ ಪೌರಾಣ ಆಗಮ ರಾಶಿಗಳೊಳ್ ಅಧಿಕ ಧರ್ಮಮಮ್ ಕಂಡು ಅರಿಪಲೋಸುಗಮ್ ಬಂದೆವು.

ಹರಿಶ್ಚಂದ್ರ : ಆವುದು?

ಮುನಿಗಳು : ಮಾಳ್ಪ ವಿಶ್ವಾಸಮಮ್ ನುಡಿಯೆ ಪೇಳ್ದಪೆವು. ಮಾಡದಡೆ ಅದಮ್ ನುಡಿದು ಫಲವೇನ್.

(ಎಂದರು. ಮನವೊಸೆದು ಮಾಡುವಂತಾಗಿ..)

ಹರಿಶ್ಚಂದ್ರ : ಗುರುವಾಸಿಷ್ಠಮುನಿಯ ಪದಪಂಕೇಜದಾಣೆ ನೆಟ್ಟನೆ ಪೇಳ್ವುದು.

ಮುನಿಗಳು : ಬಹು ಸುವರ್ಣಯಾಗಮ್. ಯಾಗ ಕೋಟಾನು ಕೋಟಿಗಳೊಳ್ ಅಧಿಕಫಲವು ನಿನಗಲ್ಲದೆ ಉಳಿದ ಭೂಪರ್ಗೆ ಆಗದು.

ಹರಿಶ್ಚಂದ್ರ : ಅದರ ಅನುವು ಆವುದು?

ಮುನಿಗಳು : ದೋಷ ನೆಟ್ಟನೆ ನಿನಗೆ ಬಾರದ ಅಂದದಿ ನೆರೆದ ಮುನಿಗಳಿಗೆ ಬೇಡಿದನಿತು ವಸ್ತುವನ್ ಈಯಬೇಕು.

(ಎಂದರು. ಆ ವಿಮಳ ಮುನಿಗಳ ಹಿತೋಪದೇಶವಮ್ ಆಂತು ಭೂವರನ್ ಸರ್ವಮುನಿವರ್ಗಮಮ್ ಬರಿಸಿ, ನಾನಾ ವೇದವಿಹಿತ ಧರ್ಮ ಆಗಮ ಅರ್ಥದಿಮ್ ಯಾಗಮಮ್ ಮಾಡಿ, ಬಳಿಕ ಆವಾವ ಮುನಿಗಳ್ ಆವಾವ ಧನವಮ್ ಬೇಡಲ್, ಓವಿ ಕೊಟ್ಟು ಉಪಚರಿಸುತಿರೆ, ಸುಜನ ಮೃಗಧೀವರನ್ ಕಪಟವಟು ಕೌಶಿಕನ್ ವಾಸಿಷ್ಠ ಮುನಿ ಹೋದ ಹೊತ್ತಮ್ ಅರಿದು ಬಂದ. ಹರಿದು ವಿಶ್ವಾಮಿತ್ರ

ಮುನಿಗೆ ಎರಗಿ ಚರಣಸರಸಿರುಹಮಮ್ ತೊಳೆದು..)

ಹರಿಶ್ಚಂದ್ರ : ನೆನೆದ ಅರ್ಥಮಮ್ ಬೆಸಸಿಮ್.

ವಿಶ್ವಾಮಿತ್ರ : ಅರಸ, ಪಿರಿಯ ಕರಿಯಮ್ ಮೆಟ್ಟಿ, ಕವಡೆಯಮ್ ಮಿಡಿದಡೆ ಎನಿತು ಉದ್ದಕ್ಕೆ ಹೋಹುದು, ಅದರ ಸರಿಯೆನಿಸಿ ಸುರಿದ ಹೊಸ ಹೊನ್ನ ರಾಸಿಯನ್ ಈವುದು.

ಹರಿಶ್ಚಂದ್ರ : ಹಸಾದಮ್ ಕೊಟ್ಟೆನ್. ಅದಮ್ ಈಗಲೆ ಇರದೆ ಒಯ್ವುದು.

ವಿಶ್ವಾಮಿತ್ರ : ನಿನ್ನ ಮೇಲಿರಲಿ. ಬೇಹಾಗ ತರಿಸಿಕೊಂಡಪೆನ್.

(ಎಂದನು. ಕೊಂಡ ಹೊಸ ಹೊನ್ನ ರಾಸಿಯನ್ ಅವನಿ ಪಾಲಕನ ಭಂಡಾರದೊಳಗೆ ಇರಿಸಿ ತನ್ನಾಶ್ರಮಕೆ ಮರಳಿ...)

❖

ಪ್ರಸಂಗ–೩

ವಿಶ್ವಾಮಿತ್ರನ ಒಳಸಂಚು

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಮೃಗಯಾ ಪ್ರಸಂಗ' ಎಂಬ ಮೂರನೆಯ ಅಧ್ಯಾಯದ ೭ರಿಂದ ೧೧ರವರೆಗಿನ ಅಯ್ದು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ವಿಶ್ವಾಮಿತ್ರ : ಒಬ್ಬ ಮುನಿ.

ಹರಿಶ್ಚಂದ್ರನ ಪ್ರಜೆಗಳು

ವಿಶ್ವಾಮಿತ್ರನ ಒಳಸಂಚು

ಕೊಂಡ ಹೊಸ ಹೊನ್ನ ರಾಸಿಯನ್ ಅವನಿಪಾಲಕನ ಭಂಡಾರದೊಳಗೆ ಇರಿಸಿ, ತನ್ನಾಶ್ರಮಕೆ ಮರಳಿ...

ವಿಶ್ವಾಮಿತ್ರ : (ತನ್ನಲ್ಲಿಯೇ ಆಲೋಚಿಸತೊಡಗುತ್ತಾನೆ.)

ಚಂಡಕರನ ಅರುಣ ಕಿರಣಮ್ ಹೊಗುವ ಠಾವೆಲ್ಲಮಮ್ ಅವನ ಸತ್ಯ ತೀವಿತು. ಭೂಪತಿಯಲಿ ಅನೃತವನ್ ಇಲ್ಲಿ ಕಂಡೆನಾದಡೆ, ದೇವೇಂದ್ರನಿದಿರಲಿ ಪಂಡಿತರ ಮುಂದೆ ಮುನಿಯ ಭಂಡನನ್ ಮಾಳ್ಪೆ... ಕಾಣ್ಬ ತೆರನ್ ಆವುದು?

(ಎಂದು ವಿಶ್ವಾಮಿತ್ರನು ಚಿಂತಿಸಿದ. ವಸಿಷ್ಠ ಮುನಿಯ ಬಗ್ಗೆ ಮುಳಿದಿರುವ ವಿಶ್ವಾಮಿತ್ರನು ಹರಿಶ್ಚಂದ್ರನು ಸುಳ್ಳನ್ನಾಡುವಂತೆ ಮಾಡಲು ಒಂದು ಸಂಚನ್ನು ಹೂಡುತ್ತಾನೆ.)

ವಿಶ್ವಾಮಿತ್ರ : (ತನ್ನಲ್ಲಿಯೇ ಹೇಳಿಕೊಳ್ಳತೊಡಗುತ್ತಾನೆ.)

ಮೃಗಸಂಕುಳಂಗಳನು ಹುಟ್ಟಿಸಿ... ನಾಡ ಬೆಳೆಗಳಮ್ ಕೆಡಿಸಿ... ಕೇಡಿಂಗೆ ಬೆಂಡಾಗಿ ಜನವು ಅಳವಳಿದು ಬಾಯ್ವಿಟ್ಟು ದೂರಿದಡೆ... ಕೇಳ್ದು, ಸೈರಿಸಲಾರದೆ... ಆ ಹುಯ್ಯಲ ಬಳಿವಿಡಿದು ಬೇಂಟೆಗೆ ಎಯ್ತಂದ ಭೂಪಾಲಕನನ್ ಎಳತಟಮ್ ಮಾಡಿ ತೆಗೆದು ಎನ್ನ ಆಶ್ರಮಕ್ಕೆ ಒಯ್ದು... ಬಳಿಕ ಅವನ ಸತ್ಯಗಿತ್ಯದ ಬಲುಹನ್ ನೋಡುವೆನ್.

(ಎಂದ ವಿಶ್ವಾಮಿತ್ರನು, ಒಳಸಂಚನ್ನು ರೂಪಿಸುತ್ತಾನೆ.)

ವಿಶ್ವಾಮಿತ್ರ : ಅನುವುಳ್ಳ ಬುದ್ಧಿಯಮ್ ಕಂಡೆನ್.

(ಎಂದು ಅತಿ ಮೆಚ್ಚಿ ತನಗೆ ತಾ ತೂಪಿರಿದುಕೊಂಡು ಕಣ್ಮುಚ್ಚುತಮ್ ಮನದೊಳ್ ಉತ್ಪತ್ತಿಮಂತ್ರವ ಮಂತ್ರಿಸಿದ ಜಲವನ್ ಒಸೆದು... ದೆಸೆದೆಸೆಗೆ ತಳಿದು ವಿನಯದಿಮ್ ನೋಡ ನೋಡಲು... ದಿಕ್ಕು ಧರಣಿ ತೆಕ್ಕನೆ ತೀವಿ ನಿಂದ ನಾನಾ ಪಕ್ಷಿಮೃಗ ಕುಲಕೆ... ಕೊನೆವೆರಳನ್ ಅಲುಗಿ ತಲೆದೂಗಿ ದೇಶಮಮ್ ಗೋಳಿಡಿಸಲು ಕೈವೀಸಿದನ್

ಮೊಳೆವ ಬೀಜವನು ಕ್ರಿಮಿಕೀಟಕಂಗಳು; ಸಸಿಯಮ್ ಎಳಹುಲ್ಲೆಗಳು; ಹೊಡೆಯನ್ ಎರಳೆಗಳು; ಸವಿದಂಟುಗಳನ್ ಆವುಗಳು; ತೆನೆಗಳಮ್ ಗಿಳಿ ನವಿಲು ಕೊಂಚೆ ಮೊದಲಾದ ಖಗತತಿಗಳು; ಉಳಿದ ಬೆಳೆಯಮ್ ನಕುಲ ಹೆಗ್ಗಣಂಗಳು; ಕಾವ ಬಳವಂತರೆಲ್ಲರಮ್ ಸರ್ಪಸಂತತಿ ತಿಂದು ತಳಪಟಮ್ ಮಾಡಿ... ನಾಡೆಲ್ಲಮಮ್ ಗೋಳಿಡಿಸುತಿರ್ದುವು. ಏನ್ ಬಣ್ಣಿಸುವೆನು.

ಬೆಳೆಯ ದೆಸೆಯಿಂತಾಯ್ತು; ಉಳಿದ ತೋಟದ ಗೆಡ್ಡೆ ಗೆಳಸು ಹಂದಿಗೆ ಹವಣು; ಹಣ್ಣು ಕಾಯ್ ಕಬ್ಬುಗಳನ್ ಅಳಿಲು ನಿಲಲೀಯವು; ಉದಕದೊಳ್ ಆವೆ ಮೀನ್ ಮೊಸಳೆಗಳ ಭಯಮ್ ಘನವಾದುದು; ಎಳಗರುಗಳಮ್ ತೋಳನ್; ಆಕಳಮ್ ಹುಲಿ; ಮೀರಿ ಸುಳಿವವರಮ್ ಅಮ್ಮಾವು ಕರಡಿ ಕಾಳ್ಕೋಣಂಗಳ್ ಉಳಿಯಲೀಯದಿರೆ; ನಾಡೆಯ್ದೆ ಬಾಯ್ಬಿಟ್ಟು ದೂರಲು ಅವನಿಪತಿಗೆ ಹರಿದರು.)

❖

ಪ್ರಸಂಗ–೪

ರಾಜ ಹರಿಶ್ಚಂದ್ರನಲ್ಲಿ ಪ್ರಜೆಗಳ ಮೊರೆ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಮೃಗಯಾ ಪ್ರಸಂಗ' ಎಂಬ ಮೂರನೆಯ ಅಧ್ಯಾಯದ ೧೨ರಿಂದ ೧೬ರವರೆಗಿನ ಆಯ್ದು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯೆಯ ರಾಜ

ಹರಿಶ್ಚಂದ್ರನ ಪ್ರಜೆಗಳು

ಬೇಡ ಪಡೆಯ ಒಡೆಯರು

ರಾಜ ಹರಿಶ್ಚಂದ್ರನಲ್ಲಿ ಪ್ರಜೆಗಳ ಮೊರೆ

ಆಗ ಭೂಸುರರು ಮಂತ್ರಾಕ್ಷತೆಯನಿತ್ತು... ಶಿವಭಕ್ತರು ಆಸುರದಿ ಭಸಿತಮಮ್ ಕೊಟ್ಟು... ಉಳಿದ ಜನವೆಲ್ಲ ಲೇಸೆನಿಪ ವಸ್ತುವಮ್ ಕಾಣಿಕೆಯನಿತ್ತು...

ಪ್ರಜೆಗಳು : ಭೂಪ ಚಿತ್ತೈಸು.

(ಎಂದು ದೇಶದೊಳಗಾದ ಖಗಮೃಗದ ಬಾಧೆಯನು ಧರಣೀಶನ್ ಎನಿಸುವ ಹರಿಶ್ಚಂದ್ರರಾಯಂಗೆ ತಮ್ಮ ಆಸರಳಿವಂತೆ ಬಿನ್ನೈಸುತ್ತ ಕೈಮುಗಿಯುತಿರ್ದರು... ಏವಣ್ಣಿಸುವೆನು.)

ಪ್ರಜೆಗಳು : ಬಲ್ಲಹ ಚಿತ್ತೈಸು, ಅರಸುಬಾಧೆಗಳಿಲ್ಲ... ಬಿಟ್ಟಿಯೂಳಿಗವಿಲ್ಲ... ಪರನೃಪರ ಭಯವಿಲ್ಲ... ಸಾಲದ ಅಂಡಲೆಯಿಲ್ಲ; ನೆರೆಯೂರ ಕದನವಿಲ್ಲ... ಅದ್ಭುತವ ಏನ್ ಎಂಬೆವು. ಖಗಮೃಗದ ಕಾಟದಿಂದ ಧರೆಯೊಳಗೆ ಬಿತ್ತಿಲ್ಲ... ಬೆಳೆಯಿಲ್ಲ... ನೀರಿಲ್ಲ... ತರಹರಿಸಿ ಹದುಳವಿರಲಿಲ್ಲ. ದುಃಖಮಮ್ ಪರಿಹರಿಸಬೇಕು.

(ಎಂದು ಭೂಜನಮ್ ಮೊರೆಯಿಟ್ಟುದು. ಜಯಲೋಲ ಭೂಪಾಲಕನ್ ಲೀಲೆಯಿಂದ ಓಲಗಮ್ ಕೊಟ್ಟು...)

ಹರಿಶ್ಚಂದ್ರ : ಸಮಸ್ತ ಬೇಂಟೆಯ ಶಬರ ಜಾಲಮಮ್ ಕರೆ ಕರೆ... ಖಗ ಹೃದಯದ ಶೂಲಮಮ್ ಮೃಗದ ಕಡೆಗಾಲಮಮ್ ಬೇಗ.

(ಎಂದು ಮೇಲೆ ಮೇಲಾಕ್ರಮಿಸಿ ಕರಸೆ, ಅಮಮ... ನಿಟ್ಟಿಸುವ ಕಣ್ಣಾಲಿ ಕತ್ತಲಿಸೆ... ಕತ್ತಲೆಯ ತತ್ತಿಗಳಂತೆ ಹೋಲಿಕೆಗೆ

ಹೊರಗಾಗೆ... ಕರ್ಕಶಬೇಡ ಪಡೆ ಒಡೆಯರು ಬರುತಿರ್ದರು....

ಮದಹಸ್ತಿ ಇರಿದ ಘಾಯಂಗಳ; ವರಾಹನ್ ಎತ್ತಿದ ಡೋರುಗಳ; ಮೃಗಾಧಿಪನ್ ಉಗಿದು ಬಗಿದು ತೋಡಿದ ಬಾದಣದ; ಕರಡಿ ಕಾರಿ ಬತ್ತಿದ ತೋಳ; ಹುಲಿ ಹೊಯ್ದು ಜರಿದ ಹೆಗಲ; ಕೋಣಮ್ ಪದದಿ ಹೊಯಿದ ಹೋರ; ಭೇರುಂಡನ್ ಎರಗಿದ ಗಂಟುಗಳ; ಕಡವೆ ತುಳಿದ ಹಜ್ಜೆಗಳ ಚಿಹ್ನದ ಬೇಡನಾಯಕರು ಹರಿಶ್ಚಂದ್ರ ಭೂನಾಥನ ಓಲಗದೊಳು ನೆರೆದರು.

ಕಡವೆಗೆ ಅತ್ಯಾಸ್ವಾದಿಯೆಂಬ; ಉಡು ಮೊಲಗಳಿಗೆ ದಡಿವೊಯ್ಲನೆಂಬ; ಕರಡಿಯ ಗಂಡನೆಂಬ; ಬಿಟ್ಟಡೆ ತೋಳಜಜ್ಝಾರನೆಂಬ; ನರಿದಿನಿಹಿಯಿಂದೆಂಬ ಕುನ್ನಿಗಳನ್ ಆಯ್ದು ಗಡಣದಿಮ್ ಬೇಡ ಪಡೆ ಒಡೆಯರೆಲ್ಲರು ನೆರೆದು, ಪೊಡವಿಪತಿಯಾ ಹರಿಶ್ಚಂದ್ರರಾಯನ ಮುಂದೆ ನಿಂತು..)

ಬೇಡಪಡೆ ಒಡೆಯರು : ನಡೆ ಜೀಯ... ತಡವೇಕೆ... ಕಣ್ಗೆ ಹಬ್ಬವ ಮಾಡುವ ಎಡೆಯ ತೋರುವೆವು.

(ಎಂದರು)

❖

ಪ್ರಸಂಗ–೫

ಕಾಡಿನಲ್ಲಿ ಬೇಡರ ಪಡೆಯೊಡನೆ ಹರಿಶ್ಚಂದ್ರ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಮೃಗಯಾ ಪ್ರಸಂಗ' ಎಂಬ ಮೂರನೆಯ ಅಧ್ಯಾಯದ ೧೭ ರಿಂದ ೨೪ ರ ವರೆಗಿನ ಎಂಟು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯೆಯ ರಾಜ.

ಹರಿಶ್ಚಂದ್ರನ ಒಡ್ಡೋಲಗದ ವಂದಿಮಾಗಧರು. ರಾಜನ ಗುಣಗಾನ ಮಾಡುವ ಹೊಗಳುಭಟ್ಟರು.

ಬೇಡ ಪಡೆಯ ಒಡೆಯರು.

ಕಾಡಿನಲ್ಲಿ ಬೇಡರ ಪಡೆಯೊಡನೆ ಹರಿಶ್ಚಂದ್ರ

ಸೇನೆ ನೆರೆಯಿತ್ತು.

ವಂದಿಮಾಗಧರು : ರಿಪುಕುಮುದ ಮಾರ್ತಾಂಡ... ಪುಣ್ಯಾನೂನ ತುಂಡ... ಬಲಭರಿತ ದೋರ್ದಂಡ... ಭೂಮಾನಿನಿಯ ಗಂಡ... ವಿಜಯಾಂಗನೆಯ ಮಿಂಡ... ರಣರಂಗಮುಖ ಕಾಲದಂಡ... ದಾನಿ ಚಿತ್ತೈಸು.

(ಎಂಬ ಮಾತಿನೊಳಗೆ ಭಾನುಕುಲತಿಲಕನ್ ಹರಿಶ್ಚಂದ್ರ ರಾಯನ್ ಎದ್ದು, ಸತಿ ಪುತ್ರ ಮಂತ್ರಿಸಹಿತ ಸುಮ್ಮಾನದಿಮ್ ಮಣಿಮಯ ರಥವನು ಅಡಿಯಿಟ್ಟು ಏರಿದನು. ಪೊಡವಿ ಜಡಿಯಲು... ದೆಸೆಗಳ್ ಉಬ್ಬಸಮ್ ಪಡೆಫಣಿಯ ಹೆಡೆ ಕೊರಳೊಳ್ ಆಳೆ... ಕೂರ್ಮನ ಬೆನ್ನು ತಗ್ಗಿ ಬಸುರೆಡೆಯ ಹೊಗೆ... ಬಲು ಬೇಡ ಪಡೆ ಬೊಬ್ಬೆ ಕೊಟ್ಟು ಅಬ್ಬರಿಸಿ ನಗರಿಯಿಮ್ ಹೊರಗೆ ಹೊರಬೀಡ ಬಿಟ್ಟು ಘುಡುಘುಡಿಸಿ ರಥವನ್ ಒಲವಿಮ್ ನೂಂಕಿ... ಕಡಗಿ ಹರಕರಿಸಿ ನಡೆಯೆ... ಹೇರಡವಿ ಕೈಮಿಕ್ಕು ಗೋಳಿಡಲು... ನಿಜದೇಶ ಜನವನಧಿ ಕುಮುದಸಖನು ದಾಳಿಕ್ಕಿದನ್. ಬೇಡರ ಪಡೆಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಕೂಗುತ್ತ ಬೇಟೆಯಾಡಲು ಕಾಡೆಲ್ಲವನ್ನೂ ಜಾಲಾಡಲು ತೊಡಗುತ್ತಾರೆ.)

ಬೇಡ ಪಡೆ–೧ : ಹಿಡಿ ನವಿಲನ್.

ಬೇಡ ಪಡೆ–೨ : ಇರಿ ಹುಲಿಯನ್.

ಬೇಡ ಪಡೆ–೩ : ಅಟ್ಟು ಮರೆವಿಂಡ.

ಬೇಡ ಪಡೆ–೪ : ದರಿಗೆಡಹು ಕರಿಯಮ್.

ಬೇಡ ಪಡೆ–೫ : ರೊಪ್ಪವಿಡಿದ ಹಂದಿಗೆ ತಡವಿ ಬಿಡು ನಾಯನ್.

ಬೇಡ ಪಡೆ–೬ : ಎಚ್ಚು ಎರಳೆಯಮ್.

ಬೇಡ ಪಡೆ–೭ : ಕಲ್ಲಲಿ ಇಕ್ಕು ಕೋಣನನು.

ಬೇಡ ಪಡೆ–೮ : ಹೊರಹೋಗಲೀಯದೆ ಹೊಡೆ ಉಡುವ.

ಬೇಡ ಪಡೆ–೧೦ : ಮರೆವಿಡಿದು ಕುತ್ತು ಕೋಣನನ್.

ಬೇಡ ಪಡೆ–೧೧ : ಒಯ್ಯನಿಡು ಮೊಲನ.

ಬೇಡ ಪಡೆ–೧೨ : ಮರಚು ಸಿಂಹವ.

ಬೇಡ ಪಡೆ–೧೩ : ಹಲವು ಬಲೆ ಕೆದರಿ ನಡೆಗೆಡಿಸು ಹಕ್ಕಿಗಳನ್.

(ಎಂಬ ಬೇಡರ ಬೊಬ್ಬೆಯಿಂದ ಅಡವಿ ಘೀಳಿಟ್ಟುದು. ಪ್ರಾಣಿಗಳ ಚಲನವಲನವನ್ನು ಗಮನಿಸಿ, ಅವುಗಳ ಜಾಡನ್ನು ಹಿಡಿದು ಮುನ್ನುಗ್ಗುತ್ತಿದ್ದಾರೆ.)

ಬೇಡ ಪಡೆ–೧೪ : ಇಲ್ಲಿ ಎರಳೆ ಸರಳಿಸಿ ಹೋದುದು... ಹಿಂಗಾಲೊದೆದು ತೆರಳ್ದ ಮಣ್ಣಿದೆ.

ಬೇಡ ಪಡೆ–೧೫ : ಸೊಕ್ಕಿದ ಎಕ್ಕಲಂಗಳು ಹೋದವು... ಎರಡು ಕಟವಾಯಿಕಡೆ ಸುರಿದ ನೊರೆಯಿದೆ.

ಬೇಡ ಪಡೆ–೧೬ : ಇಲ್ಲಿ ಕರಡಿ ತಣಿದಾಡಿ ಹೋದುದು.

ಬೇಡ ಪಡೆ –೧೭ : ನೆರೆದ ಇರುಹೆಗಳ ಹೊರೆಯೊಳೆಡೆದ ಹುತ್ತಿದೆ.

ಬೇಡ ಪಡೆ–೧೮ : ಹುಲಿಯು ಮರೆಯನ್ ಎಳೆಯಿತ್ತಿಲ್ಲಿ... ಬಿಸುನೆತ್ತರಿದ್ದುದು.

(ಎಂದಿರದೆ ಎರಗಿ... ಹಜ್ಜೆಯಮ್ ನೋಡಿ... ಬೆಂಬಳಿ ವಿಡಿದು ಹರಿವ ಲುಬ್ಧಕರ್ ಎಸೆದರು. ಕಂಟಣಿಸಿದ ಆ ಖಗವನ್... ಈ ಮೃಗವನ್... ಎಂತಕ್ಕೆ ಬೇಂಟೆಯಾಡಿದನ್ ಎಂದು ಪೊಗಳಲ್ ಏವುದು. ಗೋರಿವೇಂಟೆ... ಪಳಹರವೇಂಟೆ... ಪಟವೇಂಟೆ... ವಿದ್ಯಾಧರರ ಬೇಂಟೆ... ಚಿತ್ರವೇಂಟೆ ಅಂಟುಜಲವೇಂಟೆ... ತೋಹಿನ ಬೇಂಟೆ...

ಘನ ಸೋಹುವೇಂಟೆಗಳ್ ಎನಿಪ್ಪ ಹೆಸರಮ್ ಹೊತ್ತು ಮೆರೆಯುತಿಪ್ಪ ಎಂಟು ತೆರದ ಉಚಿತವೇಂಟೆಯನ್ ಹರಿಶ್ಚಂದ್ರ ವಸುಧಾಧೀಶನು ಆಡಿದನ್.

ಹರಿಶ್ಚಂದ್ರ ನೃಪನು ಗಣ್ಯತರ ಗೌತಮಾರಣ್ಯದಲಿ... ದಂಡ ಕಾರಣ್ಯದಲಿ... ಕ್ರೌಂಚಕಾರಣ್ಯದಲಿ... ಭಯ ಗುಹಾರಣ್ಯದಲಿ... ನುತ ದಶಾರಣ್ಯದಲಿ... ಘೋರ ಕಂಠೀರವಾರಣ್ಯದಲ್ಲಿ... ಪುಣ್ಯವಿಡಿದ ಅನಿಮಿಷಾರಣ್ಯದಲಿ... ಮಾನುಷಾರಣ್ಯದಲಿ ಬೇಂಟೆಯಾಡುತ್ತ ನಡೆತಂದು ಅಖಿಳ ಪುಣ್ಯವೆಂದೆನಿಪ ಕಿಷ್ಕಿಂಧಾಚಳಕ್ಕೆ ಬಂದನು.)

❖

ಪ್ರಸಂಗ–೬

ವಸಿಷ್ಠ ಮುನಿಯ ಆಶ್ರಮಕ್ಕೆ ಬಂದ ಹರಿಶ್ಚಂದ್ರ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಮೃಗಯಾ ಪ್ರಸಂಗ' ಎಂಬ ಮೂರನೆಯ ಅಧ್ಯಾಯದ ೨೫ ರಿಂದ ೩೯ರ ವರೆಗಿನ ೧೫ ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯೆಯ ರಾಜ.

ವಸಿಷ್ಠ : ಒಬ್ಬ ಮುನಿ.

ಪರಾಶರ : ವಸಿಷ್ಠ ಮುನಿಯ ಮೊಮ್ಮಗ

ಬೇಡ ಪಡೆಯ ಒಡೆಯರು

ವಸಿಷ್ಠ ಮುನಿಯ ಆಶ್ರಮಕ್ಕೆ ಬಂದ ಹರಿಶ್ಚಂದ್ರ

ಬೇಡಪಡೆ : ಉರಿ ಶೈತ್ಯವಾದಂತೆ; ವಿಷ ಅಮೃತವಾದಂತೆ; ತರಣಿ ತಂಪಾದಂತೆ ನೃಪನ ಬೇಂಟೆಯ ಬಿನದದ ಉರವಣೆಯನ್ ಒದವಿಸುವ ಹರಿವೈರಿ ಕರಿವೈರಿ ಹರಿಣವೈರಿಗಳು ಮೃಗವ ಹರಿದಟ್ಟಿ ಪಿಡಿದು ಅಡಸಿ ಮೋದಿ ಮುರಿಯದೆ ನಿಂದು ಮರವಟ್ಟ ಕಾರಣವನ್ ಅರುಪಬೇಕು.

(ಎಂದು ಅಂತು ಆ ಬೇಡರು ಎಯ್ದಿ ಸರಸಿರುಹಸಖಕುಲ ಹರಿಶ್ಚಂದ್ರ ಭೂಪಂಗೆ ಪೇಳ್ದರ್.)

ಹರಿಶ್ಚಂದ್ರ : ಇಂದು ಈ ಕಾನನಮ್ ಚಿತ್ರತರವಾದುದು. ಮಹಾಕ್ಷೇತ್ರದ ಒಳಗಣದಾಗದೆ ಇರದು...

(ಎನುತ ಭೂಪತಿ ಬರೆ, ಮುಂದೆ ಚಿತ್ರಕಾಯಾಜಿನದ ಸುಲಿಪಲ್ಲ ಭಸ್ಮದ ಜಟಾಭರದ ಮುನಿನಾಥನು ಮಿತ್ರರೊಡಗೂಡಿ ಮಿತ್ರ ಪ್ರಕಾಶಮ್ ಲೋಕಮಿತ್ರನ್ ಆತ್ಮಪವಿತ್ರ ಚರಿತವಾಕ್ಯನ್ ಮರುತ ಮಿತ್ರಕಾರ್ಯದ ಪರಿಕರಂಗಳ ಸವಕಟ್ಟುತಿರಲು ಕಂಡನು. ಹೆಂದದ ಆನಂದದಿಮ್ ಬಂದು ವಂದಿಸಿ ಮುಂದೆ ನಿಂದು.)

ಹರಿಶ್ಚಂದ್ರ : ಇಂದು ಎಮ್ಮ ಮೃಗವು ಎಂದಿನ ಅಂದದಿಂದ ಮುದದಿಂದ ಮೃಗ ವೃಂದೊಳಗೆ ಒಂದುವಮ್ ಕೊಂದಿಕ್ಕದೆ ಇರ್ದುದಕೆ ಕಾರಣವನು ತಂದೆ ಕುಂದದೆ ಕರುಣಿಸು.

(ಎಂದು ವಂದಿಸಿ ಭೂಪಕಂದರ್ಪನ್ ಇನಕುಲ ಹರಿಶ್ಚಂದ್ರ ಭೂನಾಥನ್ ಎಂದಡೆ, ಆ ಮುನಿನಾಥನ್ ಅಂದು ಮಾರುತ್ತರಮ್ ಕುಡಲೆಂದು ತರಿಸಂದನು.)

ಪರಾಶರ : ನೆರೆದ ವೇದಂಗಳ ಉಗ್ಗಡ; ಉಪನಿಷತ್ತುಗಳ ಗರವಟಿಗೆ; ಅಣಿಮಾದಿಗಳ ಬೊಬ್ಬೆ; ಧರ್ಮದ ಅಬ್ಬರ; ಘನ ಜ್ಞಾನ ಪ್ರಭಾ ದೀಪ್ತಿಗಳು; ಹರಿ ಬ್ರಹ್ಮಾದಿ ಸುರರ ಕಾಹು; ಪುರುಷಾರ್ಥ ನಾಲ್ಕರೊಳು ಸಲುಗೆ; ಪುಣ್ಯದ ಮಂದೆ; ಸಿರಿ ಸರಸ್ವತಿಯರ ಎಡೆಯಾಟ ಎಸೆದಿರೆ ಜಗದ್ಗುರು ವಿರೂಪಾಕ್ಷನ್ ಇಲ್ಲಿಯೆ ಸುಖದೊಳಿಪ್ಪ ಪಂಪಾಕ್ಷೇತ್ರವಿದು. ಬಿಡದೆ ಒಮ್ಮೆ ಕಂಡ ಜೀವರ ಭವವ್ರಜದ ಬೆಂಬಡಿಗೆ; ಪಾತಕಕೋಟಿಯಾ ಕತ್ತಿ; ದುಷ್ಕರ್ಮದ ಎಡೆಗೊರಳ ಕತ್ತರಿ; ಸಮಸ್ತರೋಗಂಗಳ ಎಡೆಗೆ ಒಡ್ಡಿದ ಅಲಗು; ಜ್ಞಾನದ ನಡುದಲೆಯ ಗರಗಸಮ್; ಮಲೆವ ಮಾಯೆಯ ಬಸುರನ್ ಒಡೆಹೊಯ್ವ ಶೂಲ; ಇನ್ನುಳಿದ ದುರಿತವನ್ ಉರುಹಿ ಸುಡುವ ಕಿಚ್ಚು ಎಂದೆನಿಪ ತುಂಗಭದ್ರಾನದಿಯನ್ ಅವನೀಶ ನೋಡು.

ಹರಿಶ್ಚಂದ್ರ : ನುಡಿದು ಎನ್ನ ಸಂಶಯದ ಸಾಲ ಸವರಿದೆ. ನಿನ್ನ ಪಡೆದ ಪುಣ್ಯಾಧಿಕನ ಹೆಸರಾವುದಯ್ಯ. ನೀ ನುಡಿ.

ಪರಾಶರ : ಎರಡನೆಯ ಪುರವೈರಿಯೆನಿಪ ವಾಸಿಷ್ಠ ಮುನಿಪನ ಮೊಮ್ಮನು. ಬಿಡೆ ಪರಾಶರನು ನಾನ್.

(ಎನೆ ಹೆಚ್ಚಿ ಹಿಗ್ಗಿ)

ಹರಿಶ್ಚಂದ್ರ : ನಡೆ ನಡೆ ತಂದೆ ಮದ್ಗುರುಗಳ ಅಡಿಗಳ ಎಡೆಗೆ...

(ಎಂದು ಅವನಿಪವರೇಣ್ಯನು ಬಳಿವಿಡಿದು ನಡೆತಂದು ಮುಂದೆ ಮುನಿವರೇಣ್ಯನನ್ ಕಂಡನು. ತಿಳಿಗೊಳನ ಬಳಸಿ ನಳನಳಸಿ ಬೆಳೆದ ಎಳಮಾವುಗಳ ತಳದ ಮಲ್ಲಿಕಾ ಮಂಟಪದ ತಣ್ಣೆಳಲ ತೆಳುಗಾಳಿಯೊಳು... ಪುಣ್ಯವಪ್ಪ ಪುಳಿನ ಸ್ಥಳದ ಮೇಲೆ... ಅಶೋಕೆಯ ತರುವಿನ ತಳಿರ ತೊಂಗಲ ಗದ್ದುಗೆಯೊಳ್ ಓಲಗಮ್ ಕೊಟ್ಟು ಬಳಸಿ ಹಿಂದೆ ಎಡಬಲದೊಳಿಪ್ಪ ಮುನಿಗಳ ಕೂಸ ನಲವಿನಿಮ್ ನುಡಿವ ಪಶುಪತಿಯಂತಿರ್ದ ಮುನಿನಾಥ ಕಣ್ಗೆ ಎಸೆದಿರ್ದನು.

ನೀತಿ ಬಲಿದುದೊ...ಶಾಂತಿ ರೂಪಾಯ್ತೊ... ಸದ್ಗುಣ ವ್ರಾತವೇ ಮುನಿಯಾಯ್ತೊ... ಮುಕ್ತಿ ಜಡೆವೊತ್ತುದೋ... ಭೂತ ದಯೆ ವಲ್ಕಲಾಂಚಲವಾಂತುದೋ... ಪುಣ್ಯವೆಳಸಿ ಭಸಿತವನಿಟ್ಟುದೋ... ನೂತನ ಶ್ರುತ್ಯರ್ಥ ನುಡಿಗಲಿತುದೋ... ಘನ ಸ್ವಾತಂತ್ರ್ಯವೃತ್ತಿ ಗೋಚರಿಸಲ್ ಎಳಸಿತೊ... ಎಂಬ ಚಾತುರ್ಯದಿಂದ ಇರ್ದ ಮುನಿನಾಥನನ್ ಕಂಡು ಹರುಷದಿಮ್ ಭೂನಾಥನು...)

ಹರಿಶ್ಚಂದ್ರ : ಸುರ ನರೋರಗ ನಮಿತ ಚರಣ... ಜಯ ಜಯ ದಯಾಭರಣ ಜಯ ಜಯ ಕೃಪಾವರಣ... ಜಯ ಜಯ ಶಾಂತಿಕಿರಣ... ಜಯ ಜಯ ವಿಗತಮರಣ...ಜಯಜಯ ದುರಿತ ಹರಣ... ಜಯ ಜಯತು ಜಯತು ಗುರುವೆ...ಕುಲ ಗುರುವೆ... ಘನ ಗುರುವೆ... ಪರ ಗುರುವೆ... ಮದ್ಗುರುವೆ... ಸದ್ಗುರುವೆ ಶರಣಾಗು ಶರಣಾಗು.

(ಎಂದು ಆ ಧರಣಿಪತಿ ಮುನಿಯ ಚರಣ ಸರಸಿಜದ ಎಡೆಯೊಳು ನಿಜತನುವನ್ ಹರಹಿದನು. ಬಗೆ ಮೀರಿ ಲೋಚನದೊಳ್ ಒಗೆವ ಸುಖಜಲ... ಮೆಯ್ಯೊಳ್ ಒಗೆವ ಪುಳಕಮ್... ಕೈಯೊಳ್ ಒಗೆವ ಕಂಪನ... ನುಡಿಯೊಳ್ ಒಗೆವ ತೊದಳ್... ಅಮಳ ಕದಪಿನೊಳ್ ಒಗೆವ ಬೆಮರು... ಕಂಠದೊಳ್ ಒಗೆವ ಹೊಸ ಗದ್ಗದ...ಮಿಗೆ ಮೊಗದೊಳ್ ಒಗೆವ ನಸುನಗೆ... ಘನಮನೋಮತಿಯೊಳ್ ಒಗೆವ ಪರವಶವೆರಸಿ ಮೆರೆವ ಭೂರಮಣನನ್ ಮೊಗವೆತ್ತಿ ಕುಳ್ಳಿರಿಸಿ... ಮೆಯ್ದಡವಿ... ಬೋಳೈಸಿ ಮುನಿನಾಥನ್ ಇಂತೆಂದನು.)

ವಸಿಷ್ಠ : ನೀನ್ ಎತ್ತಲ್... ಈ ವಿಪಿನವೆತ್ತಲ್; ಈ ಬನಕೆ ನೀನೇನು ಕಾರಣ ಬಂದೆ. ಎಲೆ ಮಗನೆ ಹೇಳ್.

(ಎನಲು ಭೂನಾಥನ್ ಎಂದ.)

ಹರಿಶ್ಚಂದ್ರ : ಖಗಮೃಗದ ಕಾಟಕ್ಕೆ ಸೈರಿಸಲಾರದೆ ಅವನೀಜನಮ್ ಹಾನಿವೆತ್ತು ಒರಲಿ ಮೊರೆಯಿಡೆ ಕೇಳ್ದು, ಬೇಂಟೆಯ ಸುಮಾನಕ್ಕೆ ಬಂದೆನ್.

(ಎಂದೆನೆ... ತ್ರಿಕಾಲೋಚಿತ ಜ್ಞಾನಿ ಮುನಿಯು ಅರಸನ ಮೇಲೆ ಕೌಶಿಕನ ಕಾಟ ಅಡಿಯಿಟ್ಟ ಅನುವನು ಅರಿದನ್.)

ವಸಿಷ್ಠ : (ತನ್ನಲ್ಲಿಯೇ ಚಿಂತಿಸತೊಡಗುತ್ತಾನೆ.)

"ವಿಷಮ ವಿಶ್ವಾಮಿತ್ರಮುನಿ ಮುನಿದು ತಪ್ಪ ಸಾಧಿಸುವ... ನೀನ್ ಅರಿದಿರ್" ಎಂದು ಅರುಪಬೇಕು. ಅರಿಪಿದಡೆ ಪಿಸುಣತ್ವ.

ಅರುಪದಿರ್ದಡೆ ನೃಪನ ಕೇಡನ್ ಆನ್ ಓತು ಉಪೇಕ್ಷಿದಾತನು. ಗಸಣಿಯಾಯ್ತು. ಏಗೆಯ್ವೆನ್.

(ಎಂದು ಮನದೊಳಗೆ ಚಿಂತಿಸಿ, ಮತ್ತೆ ತನ್ನಲ್ಲಿಯೇ ತೀರ್ಮಾನಿಸುತ್ತಾನೆ.)

ವಸಿಷ್ಠ : ಮನೆಗೆ ಬಂದ ಶಿಷ್ಯನನು ಬೋಧಿಸಲು ಕುಂದು ಎಸೆಯದಿರದು. ಆನ್ ಪೇಳದಂತೆ ಪೇಳ್ದಪೆನ್...

(ಎಂದು ಆ ಮುನಿನಾಥನು ನೆನೆದನ್.)

ವಸಿಷ್ಠ : (ಹರಿಶ್ಚಂದ್ರನನ್ನು ಉದ್ದೇಶಿಸಿ)

ಎನ್ನನ್ ಒಲುವೊಡೆ... ಕುಲಾಚಾರಮಮ್ ಬಿಡದಿರ್ಪಡೆ... ಉನ್ನತಿಕೆ ಬೇಹಡೆ... ಉತ್ತಮ ಕೀರ್ತಿ ಕೆಡದಿಹಡೆ... ನನ್ನಿ ಉಳಿವಡೆ... ಮಗನೆ, ವಿಶ್ವಾಮಿತ್ರನ ಆಶ್ರಮಕ್ಕೆ ಮರೆದು ಹೋಗದಿರು. ಗನ್ನದಿಮ್ ಮರಹಿಕ್ಕಿ ಕೊಂಡೊಯ್ದು, ಬಳಿಕ ಮುನಿ ಬನ್ನ ಬಡಿಸಿಯೆ ಕಾಡಿದಪನ್. ಅರಿದಿರು.

(ಎಂದು ಪೇಳ್ದು...)

ವಸಿಷ್ಠ : ಇನ್ನೊಂದು ಚೋದ್ಯಮಮ್ ನೋಡು ಬಾ.

(ಎಂದು ವಿರೂಪಾಕ್ಷನೆಡೆಗೆ ತಂದನು. ನೋಡಿ ಪರಮಾನಂದ ಮೂಡಿ, ಮನದೊಳು ಸಂತಸದೊಳ್ ಓಲಾಡಿ, ಪುಳಕ ಸ್ವೇದ ತೊದಳು ಕಂಪನ ಮರವೆಗೂಡಿ, ತನುವಿನ ಎಚ್ಚರಿಂದ ಉಬ್ಬಿ ಹಾರೈಸಿ, ಹರುಷದ ಸುಖದಲಿ ಹಾಡಿ, ನಾನಾ ಸ್ನಪನ ಯಕ್ಷ ಕರ್ದಮ ಪುಷ್ಪ ಗಾಡಿ ಪಡೆಯಲು, ಹರಿಶ್ಚಂದ್ರ ನೃಪನು ಜೋಡಿಯಿಮ್ ಪಂಪಾಂಬಿಕಾಪತಿಯ ಮಹಾರುದ್ರಾಭಿಷೇಚನದ ಪೂಜೆ ಮಾಡಿದ.)

ಹರಿಶ್ಚಂದ್ರ : ಇಂದು ಆನು ಕೃತಕೃತ್ಯನಾದೆನ್. ಇಂದು ಎನ್ನಯ ಜನ್ಮ ಸಾಫಲ್ಯ ವಾಯ್ತು. ಅಖಿಳ ಜಗದ ಅಳಲುರಿಯ ನಂದಿಸುವ ಪಾರದಿಯೆ ಸಂಸಾರ ವಾರಿಧಿಯನ್ ಉತ್ತರಿಪ ಗುರುಪದವನು ತಂದು ತೋರಿತ್ತಲಾ. ಶ್ರೀಗುರು ವಿರೂಪಾಕ್ಷ ತಂದೆಯನ್ ಕಾಣಿಸಿತು. ನಾಡ ಗಾದೆಯ 'ಬಿಟ್ಟಿಯಿಂದ ಕಟಕವ ಕಂಡೆನ್' ಎಂಬುದು ಎನಗಾಯ್ತು.

(ಎನುತ್ತೆ ಭೂನಾಥನು ಎರಗಿದನ್.)

❖

ಪ್ರಸಂಗ–೭

ವಿಶ್ವಾಮಿತ್ರ ಮುನಿಯ ಮಾಯಾ ವರಾಹದ ಬೇಟೆ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ವಿಶ್ವಾಮಿತ್ರಾಶ್ರಮ ಪ್ರವೇಶ' ಎಂಬ ನಾಲ್ಕನೆಯ ಅಧ್ಯಾಯದ ೧ ರಿಂದ ೧೦ ರ ವರೆಗಿನ ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯೆಯ ರಾಜ.

ಬೇಡ ಪಡೆಯವರು.

ವಿಶ್ವಾಮಿತ್ರ ಮುನಿಯು ನಿರ್ಮಿಸಿ ಕಳುಹಿಸಿರುವ ಒಂದು ವರಾಹ (ಹಂದಿ)

ವಿಶ್ವಾಮಿತ್ರ ಮುನಿಯ ಮಾಯಾ ವರಾಹದ ಬೇಟೆ

ಭೂಪಾಲ ಮಕರಧ್ವಜನ್ ಗುರುವಸಿಷ್ಠಂಗೆ ಎರಗಿ ನೇಮವಮ್ ಪಡೆದು, ಅಖಿಳ ಗುರು ವಿರೂಪಾಕ್ಷ ಲಿಂಗವನು ಬೀಳ್ಕೊಂಡು, ಭಾಸುರ ವರೂಥವನೇರಿ ತಡೆವೇಂಟೆಗೆ ನಡೆಯೆ, ಪರಿಕರದ ಪರಿವಾರ ಅನುವಾಗಿ ವಿಪಿನದೊಳು ಅತ್ತಲ್ ಹರೆದು ನಡೆಯಲ್ಕೆ , ಇತ್ತ ಕೌಶಿಕ ಮುನೀಶ್ವರನ್ ಒಂದು ಮಾಯಾ ವರಾಹನಮ್ ಮಾಡಿ ಭೂರಮಣನೆಡೆಗೆ ಕಳುಹಿದನು.

ಬೇಡಪಡೆ : ಎಲೆಲೆಲೆಲೆಲೇ ಹಂದಿ ಅನುವಾದುದು ಉಬುಬು...

(ಎಂದು ಉಲಿದು ನಾಯ್ಗಳ್ ಬೆರಸಿ ಮುಕ್ಕುರಿಕ್ಕಲು... ಕಾಡೊಳ್ ಅಂದು ರಕ್ಕಸ ಮಿಗಮ್ ಮೆಲ್ಲನೆ ಒಲೆದು ಉಬ್ಬಿ ಪುಟನೆಗೆದು ಗಜರಿ... ಗರ್ಜಿಸಿ... ಪುಳಿಂದರ ಮೇಲೆ ಬವರಿ ತಿರುಗಿ ಬಲವಂದು ಹೊಯ್ದ ಬೇಗಕ್ಕೆ... ನಾಳಲ ಹೊರೆಗಳಮ್ ಕೊಚ್ಚಿದಂತೆ ಬಿರು ಮಂದಿ ಎಲ್ಲರ ಒಡಲ ಕಳವಳಿ ಗೆಯ್ದು... ಬೀದಿವರಿದು ಒಕ್ಕಲಿಕ್ಕಿತ್ತು.

ಒರ್ವನ್ ಬಿಟ್ಟ ತಲೆ... ಗಿಡು ಹಿಡಿದು ಕಳೆದ ಉಡುಗೆ... ಕಾಡ ಮುಳು ನಟ್ಟು ಕುಂಟುವ ಪದಮ್... ಬೆನ್ನ ಬಿಗು ಹಳಿದು ಎಳಲ್ವ ಮೊಟ್ಟೆಗೂಳ್... ಎಡಹಿ ಕೆಡೆದು ಒಡೆದ ಮೊಳಕಾಲ್... ತೇಕುವ ಅಳ್ಳೆಗಳ್ ಬೆರಸು ಒರಲುತ ಕೆಟ್ಟೋಡುತಿರಲ್... ಅವನ ಕಂಡು ಇದಿರು ಅಡ್ಡಗಟ್ಟಿ ಕೇಳಲು...)

ಬೇಡ–೧ : ಹುಹುಹು... ಹುಲಿಯಲ್ಲ... ಹಂದಿ... ಅರೆಯಟ್ಟಿ ಬರುತಿರ್ದುದು.

ಬೇಡಪಡೆ : ಎಲ್ಲಿ...ತೋರು.

ಬೇಡ–೧ : ನೀವೇ ಅರಸಿಕೊಂಬುದು.

(ಎಂದ ಹೆದರೆದೆಯ ಬೇಡನನ್ ಬೋಳೈಸಿ, ನೃಪರೂಪ ಮದನನಲ್ಲಿಗೆ ತಂದು ನುಡಿಸಿ ಕೇಳಲು...)

ಬೇಡ–೧ : ಅರಸ, ಪೇಳ್ವ ಕುದಿಹವೇಕೆ... ಅದು ಇದು ಎನ್ನದೆ ಎಲ್ಲಾ ಕಿರಾತ ಸಂಕುಲದ ಗುರಿ ನೆರೆದುದು. ಇಂದು ಬೇಗದೊಳು ಹದುಳದಿಂದೆ ಮನ್ನೆಯ ಗಂಡನಾಗು.

ಹರಿಶ್ಚಂದ್ರ : ಏನ್ ಕಾರಣಮ್ ಪೇಳ್.

ಬೇಡ–೧ : ಪೇಳ್ವುದಕೆ ತೆರಹಿಲ್ಲ ಹೋಗು.

(ಎಂದಡೆ ಅವನೀಶನ್ ಅವನನ್ ಜರೆದು ಬೆಸಗೊಂಡನು.)

ಬೇಡ–೧ : ಅರಸ, ಚಿತ್ತೈಸು... ಕಡುಗಲಿ ಹಿರಣ್ಯಾಕ್ಷನೆಂಬ ರಕ್ಕಸನ ಬೆನ್ನ ಅಡಗನ್ ಉಗಿದ ಅಂದಿನ ವರಾಹನೋ... ಪುರಹರನ್ ಪೊಡೆಯೆ ತೋಳ್ ಪರಿದ ಭೀಕರ ಗಜಾಸುರನೊ... ಜಗದ ಅಳಲನ್ ಆರಿಸುವೆನೆಂದು ಕಡುಕೈದು ದುರ್ಗಿ ನಿರ್ಘಾತನಮ್ ಗೆಯ್ಯೆ ಕೋಡು ಉಡಿದ ಮಹಿಷಾಸುರನೊ ಎಂದೆಂಬ ಸಂದೇಹಕೆ ಎಡೆಯಾದ ಸೊಕ್ಕಿದ ಎಕ್ಕಲನನ್ ಒಂದನ್ ಕಂಡೆನ್.

ಹರಿಶ್ಚಂದ್ರ : ಅಬ್ಬರಿಸಿ ನುಡಿವೆ... ಕಾಡೊಳ್ ಕೊಬ್ಬಿ ಬೆಳೆದ ವರಾಹನ್ ಇರಲಾಗದೇ... ಅದರಿಮ್ ಬೇಡವಡೆಗೆ ಬಪ್ಪ ಉಬ್ಬಸವದೇನೊ... ಎಲವೋ, ನೀನು ಓಡಿಹೋಹುದಕೆ ಕಾರಣವಾವುದು.

ಬೇಡ–೧ : ನಾನೇಕೆ... ಉಬ್ಬಿ ಮುಂಗುಡಿವರಿದು ಕಡುಕೈದ ಶಬರರೊಳಗೆ ಒಬ್ಬರುಳಿಯದ ತೆರದಿ ಕೊಂದಿಕ್ಕಿ... ನಾಯ್ಗಳಮ್ ಗಬ್ಬವಿಕ್ಕಿಸಿದ ರಕ್ಕಸ ಹಂದಿ ತಾನೆ ಹೇಳಿತ್ತು.

ಹರಿಶ್ಚಂದ್ರ : ಪಡೆ ಎಯ್ದೆ ಮಡಿಯಿತ್ತೆ?

ಬೇಡ–೧ : ಮಡಿಯಿತ್ತು.

ಹರಿಶ್ಚಂದ್ರ : ನಾಯ್ ಕೂಡೆ ಕೆಡೆದವೇ?

ಬೇಡ–೧ : ಕೆಡೆದವು.

ಹರಿಶ್ಚಂದ್ರ : ಹಂದಿ ಇರ್ದಪುದೆ?

ಬೇಡ–೧ : ಅದೆ.

ಹರಿಶ್ಚಂದ್ರ : ಎಡೆ ಎನಿತು.

ಬೇಡ–೧ : ಸಾರೆ.

ಹರಿಶ್ಚಂದ್ರ : ತೋರಿಸಿದಪಾ?

ಬೇಡ–೧ : ತೋರಿದಪೆನ್.

ಹರಿಶ್ಚಂದ್ರ : ಏಳ್ವೆವೇ?

ಬೇಡ–೧ : ನಡೆಯಿಮ್.

(ಎನಲು ಕಡುಮುಳಿದು ರಥವನ್ ಉರವಣಿಸಿ ನೂಂಕುವ ಭೂಮಿಯೊಡೆಯಂಗೆ ನಾನಾ ಬೇಡವಡೆ ಒಡೆಯರ್ ಎಯ್ದೆ ಭಾಷೆಯಮ್ ಕೊಟ್ಟು, ರೊಪ್ಪಮಮ್ ಮಲಗಿ ದಾಡೆಗಡಿವ ಎಕ್ಕಲನನು ಕಂಡು, ಮಸೆದ ದಾಡೆಯ ಕುಡಿಗಳಿಂದ ಕಿಡಿ ಸುರಿಯೆ ಘೂರ್ಮಿಸುವ ಮೂಗಿನಿಂದ ಕರ್ಬೊಗೆ ನೆಗೆಯೆ... ಮುನಿದು ದಿಟ್ಟಿಸುವ ಕೆಂಗಣ್ಣ ಕಡೆಯಿಂದ ದಳ್ಳುರಿ ಸೂಸೆ... ಬಲಿದ ಕೊರಳ್ ಒಲೆದ ಮುಸುಡು... ಕುಸಿದ ತಲೆನೆಗೆದ ಬೆನ್ ನಟ್ಟ ರೋಮಾಳಿ... ಮಿಳ್ಳಿಸುವ ಬಾಲಮ್... ರೌದ್ರ ಕೋಪಮಮ್ ಬೀರಿ ಗರ್ಜಿಸಿ ಬೀದಿವರಿದು ಲುಬ್ಧಕರನು ತೊತ್ತಳದುಳಿದು ಕೊಂದು ಕೂಗಿಡಿಸಿತ್ತು. ಇದ್ದ ಬೇಟರನ್ ಎಯ್ದೆ ಕೆಡಹಿದಡೆ, ರಥದ ಮೇಲಿದ್ದು, ಕೋಪಾಟೋಪದಿಂದ ಕರತಳವ ಮಾರುದ್ದಿ, ಕೋದಂಡಮಮ್ ಸೆಳೆದು ಶರಮೂಡಿಗೆಯ ಮಡಲಿರಿದು, ಕೈಹೊಡೆಯನು ತಿದ್ದಿ, ನಾರಿಯ ನೀವಿ ಮಿಡಿದು, ಬಾಗಿದ ಕೊಪ್ಪಿನ ಇದ್ದೆಸೆಯನ್ ಆರಯ್ದು...)

ಹರಿಶ್ಚಂದ್ರ : ಮೃತ್ಯುದೇವತೆಗೆ ನೆರೆ ಬಿದ್ದನ್ ಇಕ್ಕುವೆನ್.

(ಎಂದು ಭೂವಲ್ಲಭನ್ ನುಡಿಯೆ, ದಿಗುಪಾಲರ್ ಅಳವಳಿದರು. ಗರಳ ಕೊರಳವನ್ ಅರಳ ಸರಳಂಗೆ ಮುನಿವಂತೆ...ಇರುಳ ತಿರುಳಿನ ಹೊರಳಿಗೆ ಆ ತರಣಿ ಕೆರಳ್ವಂತೆ... ಸರಳ ತೆರಳಿಕೆಗೆ ಕರುಳ ಸುರುಳಿಯೊಳು ಹೊರಳುತ್ತ ಬೀಳುತ್ತಲು ಮರಳಿತು... ಸರಳ್ ಉರ್ಚೆ ಹುರುಳ್ ಅಳಿದುದು... ಉರವೊಡೆದು... ನರಳುತ್ತ ನರಳುತ್ತ ತೊರಳೆ ಅಡಸಲು ಮೂಗನ್ ಅರಳಿಸಿ... ಎಚ್ಚ ಅಂಬ ಹೊತ್ತು ಉರುಳ್ವ ಕಂಬನಿಯಿಂದ ತರಳ ಚಿತ್ತದ ಹಂದಿ ಮರಳಿ ಕಾನನಕೆ ಎಯ್ದಿದ್ದು.)

❖

ಪ್ರಸಂಗ–೮

ಹರಿಶ್ಚಂದ್ರನಿಗೆ ಬಿದ್ದ ಕನಸು

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ವಿಶ್ವಾಮಿತ್ರಾಶ್ರಮ ಪ್ರವೇಶ' ಎಂಬ ನಾಲ್ಕನೆಯ ಅಧ್ಯಾಯದ ೧೧ ರಿಂದ ೨೩ರ ವರೆಗಿನ ಹದಿಮೂರು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯೆಯ ರಾಜ.

ಚಂದ್ರಮತಿ : ಹರಿಶ್ಚಂದ್ರನ ಹೆಂಡತಿ. ಪಟ್ಟದ ರಾಣಿ.

ಸತ್ಯಕೀರ್ತಿ : ಹರಿಶ್ಚಂದ್ರನ ಮಂತ್ರಿ.

ಮುನಿ : ವಿಶ್ವಾಮಿತ್ರನ ಆಶ್ರಮದಲ್ಲಿರುವ ಒಬ್ಬ ಮುನಿ.

ಹರಿಶ್ಚಂದ್ರನಿಗೆ ಬಿದ್ದ ಕನಸು

ಬಳಿಚಿದ ಅಂಬಿಮ್ ಮುಂದೆ ಹರಿದು ವನದೊಳಗೆ ಅಡಗಿ ಮಾಯವಾದ ಎಕ್ಕಲನನ್ ಬಳಿವಿಡಿದು ಅಲ್ಲಲ್ಲಿ ಸುಳಿದು ಅರಸಿ ಕಾಣದೆ, ಮನಮ್ ನೊಂದು, ಧೃತಿ ಅಡಗಿ, ಡಗೆ ತೋರಿ, ಕಟ್ಸಾಸರು ಮೊಳೆತು ಬಾಯಾರಿ, ತನು ಬೆಮರಿ, ಮುಖ ಬಾಡಿ ರವಿ ಕುಲಶಿರೋಮಣಿ ಹರಿಶ್ಚಂದ್ರರಾಯನ್ ಅಳವಿಯೊಳು ನಾನಾ ವಿಶೇಷ ವಿಭವಮ್ ಪಡೆದ ಮಂಗಳ ತಪೋವನವನು ಕಂಡನ್.

ಕಂದಮೂಲಮ್ ಕೀಳ್ವ; ಪೂ ಕೊಯ್ವ; ಕೃಷ್ಣಾಜಿನಮ್ ತಳೆವ; ರುದ್ರಾಕ್ಷೆ ಕೋವ; ವಲ್ಕಲ ವಸನ ವೃಂದವಮ್ ತೊಳೆವ; ಮಿಸುಪ ಆ ದಾರಮಮ್ ಬಿಗಿವ; ಮೌಂಜಿ ಮೇಖಲೆ ಕಟ್ಟುವ; ಒಂದಿ ಭಸಿತವನ್ ಇಡುವ; ಯಜ್ಞೋಪವೀತಮಮ್ ಬಂಧಿಸುವ; ಜಡೆಯ ಸುಂಕಿಡುವ; ಸಮಿತಮ್ ತಪ್ಪ ಹೆಂದದ ಮುನೀಶ್ವರ ಕುಮಾರರಮ್ ಕಂಡು ಹರಿಶ್ಚಂದ್ರನು ಕೈಮುಗಿದನ್. ವಿದಿತವೆನೆ ವೇದಘೋಷದ; ಪುರಾಣ ಪ್ರಸಂಗದ; ತರ್ಕ ತಂತ್ರ ಸಂವಾದದ; ಆಗಮ ವಿಚಾರದ; ಸತ್ ಉಪನಿಷತ್ ಅರ್ಥಶ್ರವಣದ; ಸ್ತೋತ್ರ ಸ್ತವ ಪಠನ ಪ್ರಕರದ; ಕಾವ್ಯಲಕ್ಷಣ ಮೃದು ಆಲಾಪದ; ಶಿವಾರ್ಚನಾ ಅಂಗದ; ಘಂಟಿಕಾ ರವದ; ನಿತ್ಯ ಹೋಮ ಸ್ವಧಾಂತ್ಯದ ಶ್ರವಣ ಸಂಭ್ರಮಕೆ ಹರಿಶ್ಚಂದ್ರ ಭೂನಾಥನು ಬೆರಗಾಗುತಿರ್ದನು.

ಫಳಭಾರದಿಂದ ಒಲೆದು ತೂಗಿ ಬಾಗುವ ಮರಂಗಳ ಕೆಳಗೆ ತುರುಗಿ ನಳನಳಿಸಿ ಬೆಳೆದ ಎಳ ಲತೆಯ ತಳಿರ; ತಿಳಿಗೊಳನ ಪುಳಿನ ಸ್ಥಳದ; ಕಮಲ ಕೈರವದ ತನಿಗಂಪು ಬೆರಸಿ ಸುಳಿವ ತಣ್ಣೆಲರ ತಂಪಮ್ ಮಂತ್ರಿ ಕಂಡು...

ಸತ್ಯಕೀರ್ತಿ : ಭೂತಳನಾಥ, ಬಿಡುವಡೆ ಇದು ಠಾವು.

(ಎಂದು ಬಿನ್ನೈಸೆ, ಅಂದು ಜಲಜಸಖಕುಲನ್ ಪಟ್ಟದಂಗನೆ ಕುಮಾರ ಸಹಿತ ರಥಮಮ್ ಇಳಿದನ್. ಬಳವಳಿದ ರಥ ತುರಗ ವೃಂದಮಮ್ ಬಿಟ್ಟು, ಶೀತಳ ವಾರಿಯಮ್ ತೋರಿ, ಮೆಯ್ದೊಳೆದು, ಲಲಿತ ಶಾಡ್ವಳವನ್ ಒಲವಿಮ್ ಕೊಯ್ದು ಮುಂದಿಟ್ಟು ಕಟ್ಟಿ, ಪ್ರಧಾನ ನಟ್ಟಡವಿಯೊಳಗೆ ಬಳಿವಿಡಿದು ಬಂದ ಕಟಕವನ್ ಎಯ್ದೆ ಬಿಡಿಸಿ, ಭೂತಳಪತಿಗೆ ಕೈಗೊಟ್ಟು ನಿರ್ಮಳ ಸರೋವರದೊಳ್ ಇಳುಪಿ, ಡಗೆ ತೊಲಗಿ ವಿಶ್ರಮಿಸಲು ಶಿಶಿರೋಪಚಾರಂಗಳಮ್ ಮಾಡಿದನ್.)

ಹರಿಶ್ಚಂದ್ರ : ಘನಪುಣ್ಯಮಯ ಎನಿಪ್ಪ ಈ ತಪೋವನದೊಳಿಹ ಮುನಿ ಆವನೋ ಮಹಾದೇವನೇ ಬಲ್ಲನ್; ಆತನ ಶಾಂತಿಯಿಂದ ಶಶಿ; ಚಾರಿತ್ರದಿಮ್ ಗಂಗೆ; ವರ ತಪಸ್ತೇಜದಿಂದ ದಿನಕರನ್; ಸುಳಿವಿಂದ ತಂಗಾಳಿ; ನುಡಿಯ ಮೋಹನದಿಂದ ಸುಧೆ; ಉದಾರತ್ವದಿಮ್ ಸುರಕುಜಮ್ ಜನಿಸದೆ ಇರವು.

(ಎಂದು ಮಂತ್ರಿಯೊಡನೆ ಆ ಹರಿಶ್ಚಂದ್ರನ್ ಕೊಂಡಾಡುತಿರ್ದನ್. ಹೊಗಳುತ್ತ ಹಾರಯಿಸುತ ಉಬ್ಬುತ್ತ ಕೊಬ್ಬುತ್ತ ನಗುತ ನಲಿಯುತ್ತ ಹಾಡುತ್ತ ಆಡುತ ಆನಂದ ಒಗೆಯುತಿರಲ್ ಒಬ್ಬ ಮುನಿಯನ್ ಕಂಡು...)

ಹರಿಶ್ಚಂದ್ರ : ಇದು ಆವನ ಆಶ್ರಮ.

(ಎಂದು ಬೆಸಗೊಂಡಡೆ...)

ಮುನಿ : ವಿಗಡ ವಿಶ್ವಾಮಿತ್ರಮುನಿಯ ಬನ.

(ಎನೆ... ಸುಖಮ್ ಸುಗಿದು ಪೊಯ್ವೆಡೆದಂತೆ... ಹಾವು ಅಗಿದು ಬಿಟ್ಟಂತೆ ಬಗೆ ಬೆದರಿ...)

ಹರಿಶ್ಚಂದ್ರ : ಗುರುವಾಜ್ಞೆ ಅಳಿದುದು. ಇನ್ನೇವೆನ್.

(ಎಂದನು ಹರಿಶ್ಚಂದ್ರನೃಪನು. ಹೊಳೆವ ಮೇರುವ ಸುತ್ತಿ ಬೆಂಡಾದ ರವಿ... ಚಂದ್ರ ಕಳೆಯ ತೊಡೆ ಎಡೆಯೊಳ್ ಒಯ್ಯನೆ ಮಲಗುವಂತೆ... ರವಿ ಕುಲಲಲಾಮನ್ ವರಾಹನ ಹಿಂದೆ ಹತ್ತಿದ ಆಸರ, ಮೇಲೆ ಗುರುವಾಜ್ಞೆಯ ಕಳೆದ, ಕೌಶಿಕನ ಆಶ್ರಮಮ್ ಪೊಕ್ಕ ಚಿಂತೆಯಿಮ್ ಮುಳುಗುತ್ತ, ಆಗಳು ನಿಜಸತಿಯ ತೋರ ತೊಡೆಗಳ

ಮೇಲೆ ಲಲಿತ ಮಣಿಮಕುಟ ಮಂಡಿತ ಮಸ್ತಕವನಿಕ್ಕಿ ಮಗ್ಗುಲಿಕ್ಕಿದನ್.

ಸತಿ ಮಡಿಸಿ ನೀಡುವ ಎಲೆವಿಡಿದ ಕೈ; ಬಸವಳಿವುತ ಅತಿಚಿಂತೆಯೊಳು ಮರೆದ ತನು; ಜೊಮ್ಮುವಿಡದ ಪುರ್ಬು; ಅತಿಭಾರಮಾಗಿ ಕಣ್ ಮುಚ್ಚಿ; ತೋಳ್ ತೊಡೆ ಮಿಡುಕೆ; ಸುಯ್ ಸೂಸೆ; ನಿದ್ರೆ ಕವಿದು ವಿತತ ಸುಖದಿಂದ ಇರುತಿರಲ್ಕೆ... ನಾನಾ ದುಃಖಯುತವಪ್ಪುದೊಂದು ಕನಸಮ್ ಕಂಡು... ನೊಂದು... ಭೂಪತಿ ಬೆದರಿದಂತೆ ಭೋಂಕೆನಲ್ ಎದ್ದು... ಬೆಬ್ಬಳಿಸಿ... ನಾಲ್ದೆಸೆಯನ್ ಆರಯ್ದನು.)

ಚಂದ್ರಮತಿ : ದುರದೊಳ್ ಅರಿ ಭೂಭುಜರನ್ ಅಂಜಿಸುವ ನಡುಗಿಸುವ ಕೊರಗಿಸುವ ಕೋಡಿಸುವ ಬಳುಕಿಸುವ ಜಳಕಿಸುವ ಬಿರುದಂಕಮಲ್ಲ ನೀ ನಡುಗಲೇತಕ್ಕೆ ಹೇಳ್.

(ಎಂದು ಮೆಲ್ಲನೆ ನುಡಿಸಲು...)

ಹರಿಶ್ಚಂದ್ರ : ತರುಣಿ ಕೇಳ್, ಒಂದು ಕನಸಮ್ ಕಂಡೆನ್. ಆ ಕನಸು ನಿರುತವೆಂದೇ ಕಣ್ಣ ತೆರೆದೆ. ನೀನ್ ಇಂತು ಇದರ ಪರಿಯಮ್ ವಿಚಾರಿಸು.

(ಎಂದು ಅವನೀಶ ನುಡಿಯಲ್ ಆ ನುಡಿಗೆ ಸತಿ ಹೂಂಕೊಂಡಳು.)

ಹರಿಶ್ಚಂದ್ರ : ಘುಡಿಘುಡಿಸುತ ಒಬ್ಬ ಮುನಿ ಬಂದು ನಾನ್ ಓಲಗಮ್ ಕೊಡುವ ಮಣಿಮಂಟಪದ ಕಂಭವೆಲ್ಲವನು ತಡೆಗಡಿದು ಹೊಂಗಳಸಂಗಳಮ್ ಮಾಣದೆ ಒಡೆಬಡಿದು ನೆರೆದ ಸಭೆಯೊಳಗೆ ಎನ್ನನು ಕೆಡಹಿ ಸಿಂಹಾಸನವನ್ ಒಯ್ವಾಗಳ್ ಎನ್ನ ಎದೆಯನ್ ಅಡರ್ದು ಒಂದು ಕಾಗೆ ಕರೆದುದು. ಬಳಿಕ್ಕ ಆನ್ ಗಿರಿಯನ್ ಅಡರ್ದು ಶಿಖರದೊಳ್ ಎಸೆವ ಮಣಿಗೃಹಮ್ ಪೊಕ್ಕೆನ್. ಇದರ ಅಂತಸ್ಥವೇನು.

ಚಂದ್ರಮತಿ : ಅವನೀಶ, ಬಗೆವಡೆ ಈ ಕನಸು ಗುರುವಾಜ್ಞೆಯಮ್ ಮೀರಿತಕ್ಕೆ ಒಗೆವ ಕೇಡಿಂಗೆ ಸೂಚನೆ. ಮುನಿಯಬೇಡ. ಮಂತ್ರಿಗೆ ಮಗಂಗೆ ಎನಗೆ ರಾಜ್ಯಕ್ಕೆ ಚತುರಂಗ ಸೇನೆಗೆ ಸಕಲ ಭಂಡಾರಕೆ ನಗರಕ್ಕೆ ಸರ್ವ ಪರಿವಾರಕ್ಕೆ ತೇಜದ ಏಳ್ಗೆಗೆ ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿ. ಮಿಗೆ ಸತ್ಯವಮ್ ಬಿಟ್ಟು ಕೆಡದಿರ್. ಕೈಮುಗಿದು ಬೇಡಿದೆನ್. (ಎಂದಳು.)

ಸತ್ಯಕೀರ್ತಿ : ಬಿಡೆ ತಪೋವನವ ಕಾಣುತ್ತ... ಕಡೆಗಣಿಸಿ ಬಿಡೆ ಪೋದಡೆ ಕೇಳ್ದು, ಮುನಿವನ್. ಅಲ್ಲದೆ ಇಂದಿನ ಹಗಲ ಕಡೆತನಕ ನೋಡಿದೆವು. ಕೌಶಿಕ ಮುನೀಶ್ವರಂಗೆ ಅರಸ ವಂದಿಸಿದನೆಂದು ನುಡಿದು ನಡೆಗೊಂಬವು. ಏಳು ಏಳು.

(ಎಂದು ಮಂತ್ರಿ ತನ್ನೊಡೆಯಂಗೆ ಬುದ್ಧಿ ಪೇಳ್ದು ಎಬ್ಬಿಸುತ್ತಿರಲ್ ಅತ್ತ ಪೊಡವೀಶನನ್ ತಂದ ಹಂದಿ... ಕೌಶಿಕನ ಅನುಷ್ಠಾನದ ಎಡೆಗೆ ಹರಿಯಿತ್ತು.)

❖

ಪ್ರಸಂಗ–೯

ಗಾಣ ರಾಣಿಯರ ಪ್ರಸಂಗ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ವಿಶ್ವಾಮಿತ್ರಾಶ್ರಮ ಪ್ರವೇಶ' ಎಂಬ ನಾಲ್ಕನೆಯ ಅಧ್ಯಾಯದ ೨೪ ರಿಂದ ೪೪ರವರೆಗಿನ ಇಪ್ಪತ್ತೊಂದು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ವಿಶ್ವಾಮಿತ್ರ : ಒಬ್ಬ ಮುನಿ. ಈತನು ಕುಶಿಕನೆಂಬ ರಾಜನ ಮಗನಾದ್ದರಿಂದ ಕೌಶಿಕ ಎಂಬ ಮತ್ತೊಂದು ಹೆಸರಿದೆ.

ಇಬ್ಬರು ಗಾಣ ರಾಣಿಯರು : ವಿಶ್ವಾಮಿತ್ರನಿಂದ ರೂಪುಗೊಂಡ ಇಬ್ಬರು ತರುಣಿಯರು. 'ಗಾಣ' ಎಂಬ ಪದಕ್ಕೆ 'ಗಾಯನ/ಗಾನ/ಹಾಡುವಿಕೆ' ಎಂಬ ತಿರುಳು ಇದೆ.

ಹರಿಶ್ಚಂದ್ರ : ಅಯೋಧ್ಯೆಯ ರಾಜ.

ಗಾಣ ರಾಣಿಯರ ಪ್ರಸಂಗ

ನಿಡುಸರದೊಳ್ ಇಳಿವ ಉಸುರು... ಹೊಯ್ವ ಅಳ್ಳೆ... ಡೆಂಡಣಿಸುವ ಅಡಿ... ಹನಿವ ಬೆಮರು... ಮರುಮೊನೆಗಂಡ ಬಾಣಂಗಳ ಎಡೆಯಿಂದ ಸುರಿವ ಬಿಸಿನೆತ್ತರ್... ಏರುಗಳ ವೇದನೆಗೆ ಆರದೆ... ಅರೆಮುಚ್ಚುವ ಕಡೆಗಣ್ಗಳ್... ಅರಳ್ವ ನಾಸಾಪುಟಮ್...ಬಲಿದ ನೊರೆಯಿಡುವ ಕಟವಾಯ್... ಕುಸಿದ ತಲೆ... ಸುಗಿದ ದರ್ಪ... ಹುರಿಯೊಡೆದ ರೋಮಮ್... ತೂಗಿ ತೊನೆದು ಮೆಯ್ ಮರೆವ ಹಂದಿಯನು ಕೌಶಿಕ ಕಂಡನು. ಹಂದಿಯನ್ ಕಾಣುಹ ತಡಮ್ ಕೋಪಗಿಚ್ಚು ಭುಗಿಲೆಂದು ಜಪ ಜಾರಿ...ತಪ ತಗ್ಗಿ... ಮತಿ ಗತವಾಗಿ... ಸಂದ ಯೋಗಮ್ ಹಿಂಗಿ... ದಯೆ ದಾಂಟಿ... ನೀತಿ ಬೀತು... ಆನಂದ ಅರತು ಹೋಗಿ...ಹಿಂದ ನೆನೆದು ಉರಿದೆದ್ದು...

ವಿಶ್ವಾಮಿತ್ರ : ಸಿಕ್ಕಿದನಲಾ ಭೂಪನ್... ಇಂದು ನಾನಾಯ್ತು ತಾನಾಯ್ತು... ಕೆಡಿಸದೆ ಮಾಣೆನ್.

(ಎಂದು ಗರ್ಜಿಸುವ ಕೌಶಿಕನ ಹೂಂಕಾರದಿಂದ ಇಬ್ಬರು ಸತಿಯರು ಒಗೆದರ್. ಮುನಿಗೆ ಹೊಲೆ ಆವುದು. ಅತಿ ಕೋಪ... ಬದ್ಧ ದ್ವೇಷ... ಅನಿಮಿತ್ತವೈರ. ಅದರಿಂದ ಹುಟ್ಟಿದರಾಗಿ ವನಿತೆಯರು ಕಡೆಗೆ ಹೊಲತಿಯರಾಗಿ ಕೆಲಸಾರಿ ನಿಂದು...)

ವನಿತೆಯರು : ಬೆಸನ್ ಆವುದು?

ವಿಶ್ವಾಮಿತ್ರ : ಜನಪತಿ ಹರಿಶ್ಚಂದ್ರ ಬಂದು ನಮ್ಮಯ ತಪೋವನ ದೊಳೈದನೆ. ನೀವು ಸರ್ವಬುದ್ಧಿಗಳೊಳ್ ಆತನ ಮರುಳು ಮಾಡುತಿರಿ... ಹೋಗಿ.

(ಎಂದು ದುರ್ಮಂತ್ರ ಬಲವಂತನು ಅಟ್ಟಿದನ್. ಸಂದ ಕಾರಿರುಳ ಕನ್ನೆಯರು ಹಗಲಮ್ ನೋಡಲೆಂದು ಬಂದರೊ... ಸುರಾಸುರರ್ ಅಬುಧಿಯಮ್ ಮಥಿಸುವಂದು ಹೊಸ ವಿಷದ ಹೊಗೆ ಹೊಯ್ದು ಕಗ್ಗನೆ ಕಂದಿ ಜಲದೇವಿಯರು ಮನದಲಿ ನೊಂದು ಮಾನಿಸರಾದರೋ... ಕಮಲಜನ್ ನೀಲದಿಂದ ಮಾಡಿದ ಸಾಲಭಂಜಿಕೆಗಳ್ ಒದವಿ ಜೀವಮ್ ತಳೆದವೋ ಎನಿಪ್ಪ ಅಂದದಿಮ್ ಅಂಗನೆಯರ್ ಅವನೀಶನೆಡೆಗೆ ಬಂದರ್. ಮಾಯದ ಅಬಲೆಯರು ಕಾಣುತ್ತ...)

ಗಾಣ ರಾಣಿಯರು : ಮಝು... ಭಾಪು...ಅದಟ... ರಾಯಮಝುರೇ... ರಾಯರಾಯ... ದಳವುಳಕಾರ... ರಾಯ... ಕಂಟಕ ರಾಯ... ಜಗಜಟ್ಟಿ ರಾಯ... ತಲ್ಲಣ ರಾಯ ಕೋಳಾಹಳರಾಯ... ಭುಜಬಲ ಭೀಮರಾಯ... ಮರ್ದನ ರಾಯ... ಜೀಯ ಸ್ಥಿರಂಜೀವ.

(ಎಂದು ಕೀರ್ತಿಸಿ, ಗಾಣ ನಾಯಕಿಯರ್ ಒಲಿದು, ಪೊಡ ಮಟ್ಟು, ದಂಡಿಗೆ ಪಿಡಿದು ಹಾಡಲು ಉದ್ಯೋಗಿಸಿದರು. ಎಕ್ಕಲನ ಬಳಿವಿಡಿದು ಸುತ್ತಿದ ಆಸರನು... ಮುನಿ ರಕ್ಕಸನ ಬನಕೆ ಬಂದ ಅಂಜಿಕೆಯನ್... ಎರಡನೆಯ ಮುಕ್ಕಣ್ಣನ್ ಎನಿಪ ಗುರುವಾಜ್ಞೆಗೆಟ್ಟ ಅಳಲನ್... ಅಲ್ಲದೆ ಕನಸ ಕಂಡ ಭಯವ ಮಿಕ್ಕು ಮರೆವಂತೆ... ಅಡಸಿ ಕವಿವ ಗತಿಗಳ ಸೊಗಸನ್ ಅಕ್ಕಿಸದೆ, ಸಮಯೋಚಿತದ ಪಸಾಯಕ್ಕೆ ಮನವುಕ್ಕಿ ಸರ್ವ ಆಭರಣಮಮ್ ಗಾಣರಾಣಿಯರಿಗೆ ಹರಿಶ್ಚಂದ್ರನು ಇತ್ತನು. ಆಗ ಗಾಣ ರಾಣಿಯರು ಆಭರಣಗಳ ಕೊಡುಗೆಯನ್ನು ನಿರಾಕರಿಸುತ್ತ...)

ಗಾಣ ರಾಣಿಯರು : ಭೂಪಾಲ, ಬಡತನದ ಹೊತ್ತು ಆನೆ ದೊರಕಿ ಫಲವೇನು... ನೀರಡಸಿರ್ದ ಹೊತ್ತು ಆಜ್ಯ ದೊರಕಿ ಫಲವೇನು... ರುಜೆಯಡಸಿ ಕೆಡೆದಿಹ ಹೊತ್ತು ರಂಭೆ ದೊರೆಕೊಂಡಲ್ಲಿ

ಫಲವೇನು... ಸಾವ ಹೊತ್ತು ಪೊಡವಿಯ ಒಡೆತನ ದೊರಕಿ ಫಲವೇನು... ಕಡುವಿಸಿಲು ಹೊಡೆದು ಬೆಂಡಾಗಿ ಬೀಳ್ವ ಎಮಗೆ ನೀನ್ ಒಲಿದು ಮಣಿ ತೊಡಿಗೆಗಳನ್ ಇತ್ತು ಫಲವೇನು ಹೇಳ್.

(ಎನುತ ಮತ್ತೆ ಇಂತು ಎಂದರು.)

ಗಾಣ ರಾಣಿಯರು : ಕಡಲೊಳ್ ಆಳ್ವಂಗೆ ತೆಪ್ಪವನು... ದಾರಿದ್ರಂಗೆ ಕಡವರವನ್ ಅತಿರೋಗಿಗೆ ಅಮೃತಮಮ್ ಕೊಟ್ಟಡೆ, ಅವರ್ ಅಡಿಗಡಿಗೆ ಅದಾವ ಹರುಷವನ್ ಎಯ್ದುತಿಪ್ಪರ್ ಅವರಮ್ ಪೋಲ್ವರ್. ಈ ಪೊತ್ತಿನ ಸುಡುಸುಡನೆ ಸುಡುವ ಬಿರುಬಿಸಿಲ ಸೆಕೆಯುಸುರ ಬಿಸಿ ಹೊಡೆದುದು. ಉರಿ ಹತ್ತಿ... ಬಾಯ್ ಬತ್ತಿ... ಡಗೆ ಸುತ್ತಿ... ಸಾವ್ ಅಡಸುತಿದೆ. ನಿನ್ನ ಮುತ್ತಿನ ಸತ್ತಿಗೆಯನ್ ಇತ್ತು ಸಲಹು ಭೂಭುಜ.

ಹರಿಶ್ಚಂದ್ರ : ರವಿಕುಲದ ಪೀಳಿಗೆಯೊಳ್ ಒಗೆದ ರಾಯರ್ಗೆ ಪಟ್ಟವ ಕಟ್ಟುವಂದು ಇದಿಲ್ಲದಡೆ ಅರಸುತನ ಸಲ್ಲದು; ಅವನಿಯೊಳು ಯುದ್ಧರಂಗದೊಳ್ ಇದಮ್ ಕಂಡ ಹಗೆಗಳು ನಿಲ್ಲರು; ಇದರ ಕೆಳಗೆ ಕವಿವ ನೆಳಲೊಳಗೆ ಆವನ್ ಇರ್ದನ್ ಆತಂಗೆ ತಾನ್ ತವಿಲ್, ಎಡರು, ಬಡತನಮ್, ರೋಗ, ಅಪಕೀರ್ತಿ, ಪರಿಭವ, ಭಯಮ್ ಹರೆವುದು. ಇದನ್ ಅರಿದರಿದು ಸತ್ತಿಗೆಯ ಕೊಡಬಹುದೆ ಹೇಳ್.

ಗಾಣ ರಾಣಿಯರು : ಅನುನಯದೊಳ್ ಎಲ್ಲವಮ್ ಕೊಡಬಹುದು ಬಿಡಬಹುದು.

ಹರಿಶ್ಚಂದ್ರ : ಜನನಿಯನ್ ಜನಕನನ್ ನಲ್ಲಳನ್ ದೈವವಮ್ ಮನವಾರೆ ನಂಬಿ ನಚ್ಚಿರ್ದ ಪರಿವಾರಮಮ್ ಕೊಡುವ ಬಿಡುವ ಅತಿಕಲಿಗಳು ಜನರೊಳಗೆ ಜನಿಸರ್.

ಗಾಣ ರಾಣಿಯರು : ಅರಸ, ನೀನೀಗ ಪೇಳ್ದ ಅನಿತರೊಳು ಬೇಡಿದಡೆ ಕೊಡಬೇಡ. ಲೋಭವೇಕೆ... ಕೊಡೆಯನ್ ಈಯ.

ಹರಿಶ್ಚಂದ್ರ : ಇದಲ್ಲದೆ ಬೇರೆ ಮಾತೆಪಿತರಿಲ್ಲ. ಈ ಛತ್ರ ಲೋಗರಿಗೆ ಕೊಡಬಾರದಾಗಿ ಸತಿ; ವಂಶಗತವಾಗಿ ಬಂದುದರಿಂದ

ತಂದೆ; ಪಟ್ಟವ ಕಟ್ಟುವಾಗಲ್ ಅರ್ಚಿಸಿಕೊಂಬುದಾಗಿ ದೈವಮ್ : ನೆಳಲ ತಂಪನ್ ಒಸೆದೀವುದಾಗಿ ಸಾಗಿಸುವ ತಾಯ್; ಧುರದೊಳ್ ಅರಿಗಳಮ್ ನಡುಗಿಸುವುದಾಗಿ ಚತುರಂಗಬಲ ಎನಿಸಿತು ಎಂಬಾಗಳ್... ಇದನ್ ಅರಿದರಿದು ಬೇಡುವರನ್ ಮೂಜಗದೊಳು ಅತಿಮರುಳರ್ ಎನ್ನರೇ.

ಗಾಣ ರಾಣಿಯರು : ಇಳೆಯೊಳಗೆ ಹೆಸರುಳ್ಳ ದಾನಿ ಹರಿಶ್ಚಂದ್ರ ಭೂನಾಥ ಎಂಬುದನು ಕೇಳ್ದು... ಎಳಸಿ... ಕಟ್ಟಾಸೆ ಪಟ್ಟು... ಎಯ್ತಂದು... ಬೇಡಿ ನಿಷ್ಫಳವಾಗದಂತೆ, ನಾವ್ ಅತಿ ಮರುಗದಂತೆ... ಅಳಲದಂತೆ, ಬಿಸುಸುಯ್ಯದಂತೆ ತಿಳಿದು ನೀನ್ ಎಮಗೆ ವಲ್ಲಭನಾಗಿ ಚಿತ್ತದ ಉಮ್ಮಳಿಕೆಯಮ್ ಕಳೆ.

(ಎಂದು ಅಳವಳಿದು ಬಾಯ್ಬಿಟ್ಟು ಕೈಮುಗಿದು ಒಲವಿಂದ ಅನಾಮಿಕ ಸತಿಯರು ನುಡಿದರ್.)

ಹರಿಶ್ಚಂದ್ರ : ಇಂದು ತನಕ ಲಲಿತ ವಸುಮತಿ ಹುಟ್ಟುವಂದು ಹುಟ್ಟಿದ ಸೂರ್ಯಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜಬಲದೊಳ್ ಒರೆದೊರೆ ಎನಿಸಿ ಕನ್ನಿಕೆಯರಮ್ ಕೊಡುವ ಭೂಪರಿಲ್ಲ. ಹೊಲತಿಯರು ಬಂದು ಆವು ಸತಿಯರಾದಪ್ಪೆವು ಎಂಬ ಉಲಿಹವೆಂಬುದು ಬಂದ ಕಾಲಗುಣವೋ... ನಿಂದ ನೆಲದ ಗುಣವೋ... ನೋಡು ನೋಡು.

(ಎಂದು ಅವನೀಶನು ಕಡುಮುಳಿದು ಕೋಪಿಸಿದನ್.)

ಗಾಣ ರಾಣಿಯರು : ಅವನೀಶ ಕೇಳ್, ಪಾವನಕ್ಷೀರಮಮ್ ಕೊಡುವ ಕೆಚ್ಚಲ ಮಾಂಸ ಆವ ಲೇಸು... ಇನಿದುಳ್ಳ ಮಧುವನ್ ಒಸೆದೀವ ನೊಳ ಆವ ಲೇಸು... ಅಧಿಕ ಕಸ್ತೂರಿಯಮ್ ಕೊಡುವ ಮೃಗನಾಭಿ ತಾನ್ ಆವ ಲೇಸು... ದೇವರಿಗೆ ಸಲ್ಲವೇ... ಉತ್ತಮ ಗುಣಂಗಳಿರ್ದು ಆವ ಕುಂದಮ್ ಕಳೆಯಲಾರವು... ಭಾವಿಸುವಡೆ ಇಂದು ಎಮ್ಮ ರೂಪು ಜವ್ವನವಿರಲು ಕುಲದ ಮಾತೇಕೆ?

ಹರಿಶ್ಚಂದ್ರ : ಅಕ್ಕಕ್ಕು... ಬಚ್ಚಲ ಉದಕಮ್ ತಿಳಿದಡೆ ಆರ ಮೀಹಕ್ಕೆ ಯೋಗ್ಯಮ್... ನಾಯ್ಗೆ ಹಾಲುಳ್ಳಡೆ ಆವನ ಊಟಕ್ಕೆ

ಯೋಗ್ಯಮ್... ಪ್ರೇತವನದೊಳಗೆ ಬೆಳೆದ ಹೂವು ಆರ ಮುಡಿಹಕ್ಕೆ ಯೋಗ್ಯಮ್... ಮಿಕ್ಕ ಹೊಲತಿಯರು ನೀವೆನೆ... ನಿಮ್ಮ ಜವ್ವನದ ಸೊಕ್ಕು... ರೂಪಿನ ಗಾಡಿ... ಜಾಣತನದ ಒಪ್ಪ... ಏತಕ್ಕೆ ಯೋಗ್ಯಮ್; ರಮಿಸಿದವರುಂಟೆ... ಶಿವ ಶಿವ ಈ ಮಾತು ತಾ ಹೊಲೆ.

ಗಾಣ ರಾಣಿಯರು : ಹಾಡನ್ ಒಲಿದು ಆಲಿಸಿದ ಕಿವಿಗೆ ಹೊಲೆಯಿಲ್ಲ... ಮಾತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ... ರೂಪ ನೆರೆ ನೋಡಿದ ವಿಲೋಚನಕೆ ಹೊಲೆಯಿಲ್ಲ... ಮೆಯ್ ಮುಡಿಗಳಿಮ್ ಸುಳಿವ ತಂಗಾಳಿಯಿಮ್ ತೀಡುವ ಸುಗಂಧಮಮ್ ವಾಸಿಸಿದ ನಾಸಿಕಕೆ ನಾಡೆ ಹೊಲೆಯಿಲ್ಲ... ಸೋಂಕಿಂಗೆ ಹೊಲೆಯುಂಟಾಯ್ತೆ. ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕು ಅಧಮ ಒಂದು ಅಧಿಕವೇ.

ಹರಿಶ್ಚಂದ್ರ : ನಯನೇಂದ್ರಿಯಮ್ ಕಂಡು ಅರಿವವೈಸಲೇ... ಘ್ರಾಣ ವಾಸನೆಯ ಕೊಂಡು ಅರಿವವೈಸಲೇ... ಕರ್ಣಂಗಳ್ ಶಬ್ದಮಮ್ ಉಂಡು ಅರಿವವೈಸಲೇ... ದೂರದಿಂದಲ್ಲದೆ ಅವು ಮುಟ್ಟಲಿಲ್ಲ. ಭಂಡತನವು ಈ ಮಾತು. ಇದಕ್ಕೆ ಉಪಮಾನವೇ. ಕೆಂಡವನು ಮುಟ್ಟಿದಡೆ ಬೇವಂತೆ ಕೇಳ್ದಡಮ್, ಕಂಡು ವಾಸಿಸಿದಡಮ್ ಬೆಂದವೇ. ನೀವ್ ಕಾಳುಗೆಡೆಯದೆ ಹೋಗಿ.

ಗಾಣ ರಾಣಿಯರು : ಸತ್ಕುಲಜ ಭೂಪ, ಶಾಪದಿಂದೆ ಎಮಗಾದ ದುಷ್ಕುಲಮ್ ನಿನ್ನಯ ಸಂಗದಿಮ್ ಶುದ್ಧವಪ್ಪುದು ಎಂಬ ಅಪೇಕ್ಷೆಯಿಮ್ ಬಂದೆವು.

(ಎನಲೊಡನೆ)

ಹರಿಶ್ಚಂದ್ರ : ನಿಮಗೋಸುಗ ಎನ್ನ ಕುಲಮಮ್ ಕೆಡಿಪೆನೆ.

ಗಾಣ ರಾಣಿಯರು : ಅರಸ, ಹೇಳ್... ಪಾಪಿಗಳ ಪಾಪಮನ್ ತೊಳೆವ ಗಂಗೆಗೆ ಪಾಪ ಲೇಪವುಂಟಾಯ್ತೆ.

ಹರಿಶ್ಚಂದ್ರ : ಕುಲಧರ್ಮ ಈ ಪಂಥವಲ್ಲ. ಕೊಡವಾಲ ಕೆಡಿಸುವಡೆ ಆಮ್ಲ ಎನಿತಾಗಬೇಕು?

ಗಾಣ ರಾಣಿಯರು : ಮಾತಿಂಗೆ ಮಾತು ಕೊಡಲು ಅರಿದು. ನಿನ್ನಯ ನುತ ಖ್ಯಾತಿಗೆ... ಅದಟಿಂಗೆ ರೂಪಿಂಗೆ ಸುರುಚಿರ ಗುಣವ್ರಾತಕ್ಕೆ ಹರೆಯಕ್ಕೆ ಗರುವಿಕೆಗೆ ಮನಸಂದು ಮತಿಗೆಟ್ಟು ಮರುಳಾದೆವು. ಓತು ಬಂದವರನ್ ಉಪಚರಿಸದಿಪ್ಪುದು ನಿನಗೆ ನೀತಿಯಲ್ಲ... ಏಗೆಯ್ದಡಮ್ ಗಂಡನಾದಲ್ಲದೆ ಆತುರಮ್ ಪೋಗದು. ಇನ್ನು ಒಲಿದಂತೆ ಮಾಡು. ನಿನ್ನಯ ಬೆನ್ನ ಬಿಡೆವು.

ಹರಿಶ್ಚಂದ್ರ : ಬಳಿವಿಡಿದು ಬಂದು ಮಾಡುವುದೇನು. ನಮ್ಮ ಬೆಂಬಳಿಯಲಿ ಎನಿಬರು ಹೊಲೆಯರಿಲ್ಲ.

ಗಾಣ ರಾಣಿಯರು : ಅಹಗೆ. ಬಿಡೆವು... ಎಳಸಿ... ಮಚ್ಚಿಸಿ... ಮರುಳ್ಗೊಳಿಸಿ... ಮತ್ತೆ ಒಲ್ಲನ್ ಅವನಿಪನ್ ಎಂದು ಮೊರೆಯಿಡುತ್ತ... ಇಳೆಯೊಳಗೆ ಸಾರುತ್ತ... ದೂರುತ್ತ ಬಪ್ಪೆವು.

(ಎನೆ ಹರಿಶ್ಚಂದ್ರನ್ ಮುಳಿದು ಘುಡುಘುಡಿಸಿ ಕೋಪಾಟೋಪದಿಮ್)

ಹರಿಶ್ಚಂದ್ರ : ಹಲ್ಲ ಕಳೆ... ಬಾಯ ಹರಿಯ ಹೊಯ್ ಹೊಡೆ... ಹೊಡೆ...

(ಎನುತ್ತ ಭೂನಾಥನು ಉರವಣಿಸಿ ಎದ್ದನ್. ಪ್ರಧಾನ ಬಳಿವಿಡಿದು ಚಮ್ಮಟಿಗೆಯಮ್ ತುಡುಕಿ ಸೆಳೆದು ಏಳಲ್ ಒಬ್ಬರೊಬ್ಬರನು ಬೆನ್ನೊಡೆಯೆ... ಮುಡಿ ಹುಡಿಯೊಳಗೆ ಹೊರಳೆ...ಹಲು ಬೀಳೆ... ಬಾಯ್ ಒಡೆಯೆ... ಮೆಯ್ ನೋಯೆ... ಕೈಯುಳುಕೆ... ಮೀರಿ ನಡೆದಲ್ಲಿ ನಡೆದು... ಹೊಕ್ಕಲ್ಲಿ ಹೊಕ್ಕು... ಓಡಿ ಹೋದ ಎಡೆಗೆ ಬೆನ್ನಟ್ಟಿ... ರುಧಿರಮ್ ಬಸಿಯೆ ಹೊಯ್ದು... ಹೊಗರ್ ಉಡುಗಲ್... ಅರಸನ್ ತಿರುಗಲ್... ಅತ್ತಲ್ ಅವರ್ ಒರಲುತ್ತ ಆ ಮುನಿಪನೆಡೆಗೆ ಹರಿದರ್.)

❖

ಪ್ರಸಂಗ–೧೦

ಗಾಣ ರಾಣಿಯರ ಮೊರೆ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ವಿಶ್ವಾಮಿತ್ರಾಶ್ರಮ ಪ್ರವೇಶ' ಎಂಬ ನಾಲ್ಕನೆಯ ಅಧ್ಯಾಯದ ೪೫ ಮತ್ತು ೪೬ನೆಯ ಎರಡು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ವಿಶ್ವಾಮಿತ್ರ : ಒಬ್ಬ ಮುನಿ. ಈತನು ಕುಶಿಕನೆಂಬ ರಾಜನ ಮಗನಾದ್ದರಿಂದ ಕೌಶಿಕ ಎಂಬ ಮತ್ತೊಂದು ಹೆಸರಿದೆ.

ಇಬ್ಬರು ಗಾಣ ರಾಣಿಯರು : ವಿಶ್ವಾಮಿತ್ರನಿಂದ ರೂಪುಗೊಂಡ ಇಬ್ಬರು ತರುಣಿಯರು. 'ಗಾಣ' ಎಂಬ ಪದಕ್ಕೆ 'ಗಾಯನ/ಗಾನ/ಹಾಡುವಿಕೆ' ಎಂಬ ತಿರುಳು ಇದೆ.

ಗಾಣ ರಾಣಿಯರ ಮೊರೆ

ಬಿಡುಮುಡಿಯ... ಸುರಿವ ಕಂಬನಿವೊನಲ... ಕಳೆದ ಎಳಲುವುಡುಗೆಗಳ ಬೆನ್ನೊಡೆದು ಹನಿವ ರಕುತದ... ಹೊಯ್ವು ಕುಡಿ ಅಳ್ಳೆಗಳ... ಹರಿವ ಕಾಲುಗಳ... ಮರಳಿ ನೋಡುವ ಹೆದರುಗಣ್ಣ... ತೃಣವ ತುಡುಕಿ ನೆಗಹಿದ ಕೈಯ ಗಾಣ ರಾಣಿಯರು

ಗಾಣ ರಾಣಿಯರು : ಎಲೆ ಕೌಶಿಕ ಮುನೀಂದ್ರ, ನೃಪತಿ ನಿಷ್ಕಾರಣಮ್ ಹೊಡೆದನ್... ಮೊರೆಯೋ..

(ಎಂಬ ನಿಡುಸರದ ಮಡದಿಯರ ದನಿಯನ್ ಆಲಿಸಿ ಪರ್ಣಶಾಲೆಯಮ್ ಹೊರಮಟ್ಟನು.)

ಗಾಣ ರಾಣಿಯರು : ತಂದೆ, ಓರಂತೆ ಕೇಳ್. “ಆರ ಮನೆಯವರ್” ಎಂದು ಕೇಳ್ದಡೆ, “ಎರಡನೆಯ ಪುರವೈರಿ ವಿಶ್ವಾಮಿತ್ರಮುನಿಯ ಮನೆಯವರ್” ಎಂದಡೆ, ಆ ರಾಯನ್ ಎದ್ದು ಕೈಯಾರೆ ಎಮ್ಮನ್ ಸದೆಬಡಿದನ್. ನಿರಪರಾಧಿಗಳನು ಕಾರುಣ್ಯಚಿತ್ತದಿಮ್ ಕಳುಹಿ ಕೊಲಿಸಿದೆ.

(ಎಂದು ಮೊರೆಯಿಟ್ಟಡೆ...)

ವಿಶ್ವಾಮಿತ್ರ : ಎನ್ನಯ ಮನೋರಥಮ್ ಕೈಸಾರ್ದುದು ಅಳಲಬೇಡಿ.

(ಎಂದು ಕೋಪಾಟೋಪದಿಮ್ ಹರಿದನು.)

❖

ಪ್ರಸಂಗ ೧೧

ರಾಜ್ಯ ಸರ್ವಸ್ವ ದಾನ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ರಾಜ್ಯ ಸರ್ವಸ್ವ ದಾನ' ಎಂಬ ಅಯ್ದನೆಯ ಅಧ್ಯಾಯದ ೧ ರಿಂದ ೩೪ರ ವರೆಗಿನ ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ವಿಶ್ವಾಮಿತ್ರ : ಒಬ್ಬ ಮುನಿ. ಈತನು ಕುಶಿಕನೆಂಬ ರಾಜನ ಮಗನಾದ್ದರಿಂದ ಕೌಶಿಕ ಎಂಬ ಮತ್ತೊಂದು ಹೆಸರಿದೆ.

ಹರಿಶ್ಚಂದ್ರ : ಅಯೋಧ್ಯೆಯ ರಾಜ.

ಚಂದ್ರಮತಿ : ಹರಿಶ್ಚಂದ್ರನ ಹೆಂಡತಿ. ಪಟ್ಟದ ರಾಣಿ.

ಲೋಹಿತಾಶ್ವ : ಹರಿಶ್ಚಂದ್ರನ ಮಗ.

ಸತ್ಯಕೀರ್ತಿ : ಹರಿಶ್ಚಂದ್ರನ ಮಂತ್ರಿ.

ರಾಜ್ಯ ಸರ್ವಸ್ವ ದಾನ

ವಡಬಾಗ್ನಿ ಜಡೆವೊತ್ತುದೋ... ಸಿಡಿಲು ಹೊಸ ಭಸಿತವ ಇಡಕಲಿತುದೋ... ಕಾಡ ಕಿಚ್ಚು ಕೃಷ್ಣಾಜಿನವನ್ ಉಡಕಲಿತುದೋ... ಪ್ರಳಯ ವಹ್ನಿ ತಪವಿರ್ದುದೋ... ಭಾಳಲೋಚನನ ಕೋಪ ಕಡುಗಿ ಮುನಿಯಾಯ್ತೊ ಹೇಳ್ ಎನೆ... ಕಣ್ಣ ಕಡೆ ತೋರಗಿಡಿ ಕೆದರೆ... ಮೀಸೆಗೂದಲು ಹೊತ್ತಿ ಹೊಗೆಯ ಬಿರುನುಡಿಗಳ್ ಉರಿಯುಗುಳೆ... ವಿಶ್ವಾಮಿತ್ರನ್ ಅವನೀಶನ ಎಡೆಗೆ ಉರವಣಿಸಿ ಬಂದನ್.

ವಿಶ್ವಾಮಿತ್ರ : ಅನಿಲನ್ ಬಿರುಗಾಳಿಯನ್ ಬೀಸಲಮ್ಮನ್; ಸುರಪನ್ ಅರೆವಳೆಗಳನ್ ಕರೆಯಲಮ್ಮನ್; ತರಣಿ ಅತಿ ಕಡುವಿಸಿಲ ಕರೆಯಲಮ್ಮನ್; ದಾವಾಗ್ನಿ ಮೇರೆಯನ್ ಮೀರಲಮ್ಮನ್; ಲೋಕವ ಮುರಿವ ಜವಗಿವನ ದೂತರು ಗೀತರ್ ಎಂಬರ್ ಎದ್ದು ಎರಗಲಮ್ಮರು. ನಿನ್ನ ಧೀವಶ. ತಪೋವನದೊಳ್ ಇಂದು ಎಮ್ಮ ನೀನ್ ಕೊರಚಾಡಲೆಂದು ಅರಿದರಿದು ಬೀಡಮ್ ಬಿಟ್ಟೆ.

ಹರಿಶ್ಚಂದ್ರ : ತಂದೆ, ಎಳಸಿ ಪುಣ್ಯಾರ್ಥದಿಮ್ ವಂದನೆ ನಿಮಿತ್ತ ಗುರುನಿಳಯಕ್ಕೆ ಶಿಷ್ಯನ್ ಎಯ್ತಪ್ಪುದಕೆ ಸಾಹಸದ ಬಲವೇಕೆ.

ವಿಶ್ವಾಮಿತ್ರ : ನುಡಿಯೊಳು ನಯಮ್ ಪಡೆದು, ಕಾರ್ಯದೊಳು ಗುರುವಿನ ಅಸುಗೆ ಮುಳಿದು, ಸರ್ವಸ್ವ ಅಪಹರಣವಮ್ ಮಾಳ್ಪ ಕಡುಗಲಿ ತನವು... ಇದಾವ ಪುಣ್ಯವ ಪಡೆವ ಶಿಷ್ಯತನದ ಒಳಗು ಪೇಳು.

ಹರಿಶ್ಚಂದ್ರ : ಎನ್ನ ದೆಸೆಯಿಂದ ಕೆಟ್ಟುದೇನ್!

ವಿಶ್ವಾಮಿತ್ರ : ಅರಸುಗಳಿಗೆ ಉಪದೇಶವನ್ ಮಾಡಿ ವಸ್ತುವನ್ ನೆರಹಬಲ್ಲವನಲ್ಲ. ನಿಜವೈರವಮ್ ಬಿಟ್ಟು ಹರುಷದಿಂದಿರ್ಪ ಮೃಗಸಂಕುಳಮ್; ಸರ್ವಋತುಗಳೊಳು ಫಲವಿಡಿದು ಒರಗುವ ತರುಕುಲಮ್; ಬತ್ತದೆ ಒಂದೇ ಪರಿಯಲಿಹ ಸರೋವರವೆಂಬ ಧನ. ಇದೆಲ್ಲವನ್ ಇರಿದು ಮುರಿದು ಕುಡಿದು ಅರೆಮಾಳ್ಪ ಬಲುಹು ಸರ್ವಸ್ವ ಅಪಹರಣವಲ್ಲದೆ ಬಳಿಕ್ಕ ಏನು?

ಹರಿಶ್ಚಂದ್ರ : ಬರುಮುನಿಸನ್ ಇಟ್ಟುಕೊಂಡು ಅರುಹುವಂತಾಗಿ... ನಾನ್ ಇರಿದ ಮೃಗ... ಮುರಿದ ಮರ... ಕುಡಿದ ಕೊಳನ್ ಆವುದು? ಎಲೆ, ಕಿರುಜಡೆಯ ನೀತಿವಿದ ತೋರಿಸು.

(ಎನೆ, ಘುಡುಘುಡುಸುತ ಎದ್ದು.. ಹಳಗಾಲದಂದು ಅರತ ಕೊಳನಮ್... ಕೊಳೆತು ಮುರಿದ ಮರನಮ್... ನೃಪನನ್ ಉರೆ ತಂದ ಹಲವು ಗಾಯದ ಹಂದಿಯನ್ ತೋರಿ ಜರೆದು...)

ವಿಶ್ವಾಮಿತ್ರ : ಪಾಪಿ, ನೀನ್ ಇನ್ನಾವ ನೆವವನ್ ಒಡ್ಡುವೆ.

(ಎನುತ ಮತ್ತೆ ಇಂತು ಎಂದನು.)

ವಿಶ್ವಾಮಿತ್ರ : ಹಿಂದೆ ಸಂಪದದೊಳ್ ಉರೆ ಗರ್ವದಿಮ್ ಮೆರೆದ ಸಕ್ರಂದನನ ಸಿರಿಯ ನೀರೊಳಗೆ ನೆರಹಿದ ಮುನಿಪನ ಅಂದವನ್ ಮಾಡುವೆನು. ಹರನ ಹಣೆಗಣ್ಣ ಹಗ್ಗಿಯನು ಹಗೆಗೊಂಬ ಅಂದದಿನ್ ಇಂದು ಎನ್ನ ಹಗೆಗೊಂಡೆ... ಬಿಟ್ಟ ಬೀಡೆಲ್ಲಮನ್ ಕೊಂದು ಕೂಗಿಡಿಸಿ ನೆರೆ ಸುಟ್ಟು ಬೊಟ್ಟಿಡುವೆನ್. ಆರ್ ಎಂದು ಇರ್ದೆ... ನಿನ್ನ ಗುರು ಹೇಳನೇ... ತನ್ನ ಸುತರ ಅಳಲ ತಿಣ್ಣವನ್.

ಹರಿಶ್ಚಂದ್ರ : ಒಸೆದು ಹುಟ್ಟಿಸುವ, ಪಾಲಿಸುವ, ಮರ್ದಿಸುವ ಸತ್ವ ಸಮರ್ಥನ್ ಎನಿಪ ನೀನೇ ತಪ್ಪ ಹೊರಿಸಿ ದಟ್ಟಿಸುವಡೆ... ಇನ್ನು ಉತ್ತರಿಸಿ ಶುದ್ಧವಹುದು ಅರಿದಯ್ಯ. ತಂದೆ, ಆನ್ ನಿಮ್ಮ ಕರುಣದ ತೊಟ್ಟಿಲ ಹಸುಳೆ... ಆನ್ ಸರ್ವ ಅಪರಾಧಿ... ಕರುಣಿಸು... ದಯಮ್ ಕೆಡದಿರ್ ಉದ್ರೇಕಿಸದಿರ್.

(ಎಂದು ಪದ ಬಿಸರುಹದ ಮೇಲೆ ನಿಜಮಣಿ ಮಕುಟ ಮಂಡಿತ ಶಿರೋಂಬುಜವನು ಕೆಡಹಿದನು.)

ಹರಿಶ್ಚಂದ್ರ : ನೋಡಿ ವಂದಿಸಿ ಹೋಹ ಶಿಷ್ಯಂಗೆ ನೀಮ್ ಕೃಪೆಯ ಮಾಡುವುದು. ಹದುಳದಿಮ್ ಬಲವನೆಲ್ಲವ ಹೊಳ್ಳು ಮಾಡ ಬಗೆವರೆ ಹೇಳ್.

ವಿಶ್ವಾಮಿತ್ರ : ಪ್ರಳಯ ಫಣಿಯ ಅಣಲ ಹೊಳಲೊಳಗೆ ಕೈಯ ನೀಡಿ ದಾಡೆಯಮ್ ಮುರಿಯ ಬಗೆವಂತೆ... ಎನ್ನ ಬಸುರಿಂದ ಮೂಡಿರ್ದ ಕನ್ನೆಯರ ಚೆನ್ನೆಯರನ್ ಅಬಲೆಯರ ಗಾಡಿಕಾತಿ ಯರನ್ ಅರಿದರಿದು... ಇಂತು ಸಾಯ ಸದೆಬಡಿವರೇ ಹೇಳು.

ಹರಿಶ್ಚಂದ್ರ : ಬೇಗದಲಿ ನಿಮ್ಮ ಮನೆಯವರೆಂದು ಮೊರೆಯಿಟ್ಟರಾಗಿ ಕರುಣಿಸಿ ಬಿಟ್ಟೆನ್. ಅಲ್ಲದಿರ್ದಡೆ ಕೆಡಹಿ ಮೂಗನ್ ಅರಿದು, ಎಳಹೂಟೆಯಮ್ ಕಟ್ಟಿ, ಬಟ್ಟಬಯಲೊಳ್ ಹೆಟ್ಟಿ ಎಳಸುವೆ.

ವಿಶ್ವಾಮಿತ್ರ : ಏಗೆಯ್ದರ್... ಅವರೊಳ್ ಅನ್ಯಾಯವೇನ್?

ಹರಿಶ್ಚಂದ್ರ : ಮುನೀಶ ಚಿತ್ತೈಸು, ಎನ್ನ ಮೇಗಿರ್ದ ಸತ್ತಿಗೆಯನ್ ಈಯ... ಅಲ್ಲದೊಡೆ ಗಂಡನಾಗು... ನೀನ್ ಆಗದೊಡೆ ಮೊರೆಯಿಡುವೆವು ಎಂದರು.

ವಿಶ್ವಾಮಿತ್ರ : ಹೊಡೆ... ಅದಕ್ಕೇನು. ಅವದಿರನ್ ಹೊಡೆದ ಕೈಗಳಮ್ ಕಡಿವೆ. ನಿನ್ನನ್ ನಚ್ಚಿ ಮಲೆತ ದೇಶವನ್ ಉರುಹಿ ಸುಡುವೆನ್. ಆ ದೇಶಕ್ಕೆ ಹಿತವಾಗಿ ಬಂದ ಮುನಿಯನ್ ಮುರಿವೆನ್. ಆ ಮುನಿಯನು ಹಿಡಿದು, ಕದನಕ್ಕೆಂದು ಬಂದ ಅಮರರಮ್ ಕೆಡಹಿ ಹುಡುಕುನೀರ್ ಅದ್ದುವೆ. ಎನ್ನ ಅಳವನ್ ಅರಿಯಾ. ಮುನ್ನ ತೊಡಕಿ ತನಗಾದ ಭಂಗಗಳಮ್ ಕಮಲಕಂದನು ನಿನಗೆ ಹೇಳನೇ.

(ತರಿಸಂದ ಮುನಿಯ ಕೋಪದ ಕಿಚ್ಚನ್, ಉಬ್ಬರದ ಬಿರುಬನ್ ಅರಿದು...)

ಹರಿಶ್ಚಂದ್ರ : (ತನ್ನ ಮನದಲ್ಲಿ)

ಅತಿ ತೀವ್ರತರವಾಯಿತು. ಇನ್ನು ಕಿರಿದರಲಿ ತಗ್ಗುವುದಲ್ಲ. ಗರ್ವಿಸುವುದು ಉಚಿತವಲ್ಲ.

(ಎಂದು ವಸುಧಾಧೀಶನು)

ಹರಿಶ್ಚಂದ್ರ : ಅರಿಯದೆ ಅನ್ಯಾಯಮನ್ ಮಾಡಿದೆನ್. ಇದು ಒಮ್ಮಿಂಗೆ ನೆರೆದ ಕೋಪಾಗ್ನಿಯಮ್ ಬಿಡು ತಂದೆ.

(ಎಂದು ಧರೆಗೆ ಉರುವ ಸತಿಸುತವೆರಸಿ ಪೊಡವಟ್ಟಡೆ, ಆಸುರದ ಕೋರಡಿಗನು ಅಣಕಿಸಿದನ್.)

ವಿಶ್ವಾಮಿತ್ರ : ಕೋಡದೆ...ಅಂಜದೆ...ಲೆಕ್ಕಿಸದೆ ಬಂದು ಬನದೊಳಗೆ ಬೀಡ ಬಿಟ್ಟು ಅನಿಮಿತ್ತ ಅನ್ಯಾಯ ಕೋಟಿಯಮ್ ಮಾಡಿ... ಮಕ್ಕಳುಗಳನ್ ಸಾಯ ಸದೆಬಡಿದುದಲ್ಲದೆ... ಬನ್ನವೆತ್ತಿ ಹಲವು ಕೇಡು ಮಾತುಗಳಿಂದ ಕೆಡೆನುಡಿದು... ಮತ್ತೆ ಈಗ ಬೇಡ, ಕೋಪವನ್ ಉಡುಗು ತಂದೆ ಎಂದೆನೆ... ಎಲವೊ ಕೇಳ್, ನಿನ್ನ ಕೋಡ ಕೊರೆಯದೆ ಬರಿದೆ ಬಿಟ್ಟಪೆನೆ.

ಹರಿಶ್ಚಂದ್ರ : ಕ್ರೂರರ್, ಅತ್ಯಧಮರ್, ಉದ್ರೇಕಿಗಳು, ದುರ್ಜನಾಕಾರರುಮ್ ಧೂರ್ತರೊಳಗಾಗಿ ಶರಣ್ ಎನಲು... ನಿಜ ವೈರವಮ್ ಬಿಡುವರ್ ಎಂಬಾಗ, ನೆರೆ ಸರ್ವಸಂಗನಿವೃತ್ತರ್ ಎನಿಪ ನಿಮಗೆ ಓರಂತೆ ಬೇಡಿಕೊಳುತಿಪ್ಪ ಎನ್ನ ಮೇಲೆ ಇನಿತು ಕಾರುಣ್ಯವೇಕಿಲ್ಲ ತಂದೆ.

ವಿಶ್ವಾಮಿತ್ರ : ಇಂತು ಈಗ ಎನ್ನಯ ಕುಮಾರಿಯರ ಮದುವೆಯಾಗು. ಎಲ್ಲಾ ನಿರೋಧಮಮ್ ಬಿಡುವೆನ್.

ಹರಿಶ್ಚಂದ್ರ : ವಿವಿಧ ಗುರ್ವಾಜ್ಞೆಯೊಳು ಕೆಲವು ಮಾಡುವವು... ಕೆಲವು ಮೀರುವವು.

ವಿಶ್ವಾಮಿತ್ರ : ಆ ಕಾರ್ಯಮ್ ಉಳ್ಳವಮ್ ಮಾಳ್ಪುದು, ಉಳಿದವ ಬಿಡುವುದೈಸಲೇ ಗುರುಭಕ್ತಿ.

ಹರಿಶ್ಚಂದ್ರ : ಮುನಿಪ ಕೇಳ್, ನೀವ್ ಎನ್ನ ಮನದ ಹವಣನ್ ಆರಯ್ಯಲೆಂದು ಅನುಗೆಯ್ದಿರಲ್ಲದೆ, ಈ ನವ ನರಕಮನ್ ಮಾಡ ಹೇಳಿದವರುಂಟೆ. ನಾ ನಿಮ್ಮವನು. ನಿಮ್ಮ ಮನದ ಅನುವನ್ ಅರಿಯೆನೆ.

ವಿಶ್ವಾಮಿತ್ರ : ನಿನ್ನಯ ಮನದ ಹವಣರಿಯಲೆಂದು ಒತ್ತಿ ನುಡಿಯಿತಿಲ್ಲ. ತಾತ್ಪರ್ಯವಾಗಿ ನುಡಿದೆವು. ನಿನ್ನ ಚಿತ್ತದಲಿ ಶಂಕಿಸದೆ ಮದುವೆಯಾಗು.

(ಎಂದು ಕೌಶಿಕ ಮುನೀಂದ್ರನ್ ನುಡಿಯಲು.)

ಹರಿಶ್ಚಂದ್ರ : ಉತ್ತಮದ ರವಿಕುಲದೊಳ್ ಉದಿಸಿ, ಚಾಂಡಾಲತ್ವ ಪೆತ್ತ ಸತಿಯರ್ಗೆ ಎಳಸಿ, ಘೋರ ನರಕಾಳಿಗೆ ಅನಿಮಿತ್ತ

ಹೋಹವನಲ್ಲ... ಇದನ್ ಬೆಸಸಬೇಡಿ.

(ಎಂದು ಭೂಭುಜನ್ ಕೈಮುಗಿದನು.)

ವಿಶ್ವಾಮಿತ್ರ : ಬಿಡದೆ ಸತಿಯರ ಹೊಲೆಯರೆಂಬ ನೆವ ಏಕೆ... ಅವರ ಹಡೆದ ಎನ್ನನೇ ಹೊಲೆಯನ್ ಎಂದು ಆಡಿದಾತನ್.

ಹರಿಶ್ಚಂದ್ರ : ಮುನಿಪ, ಭಸಿಧರನ್ ಎನಲು ರುದ್ರನನ್ ಬಯ್ದವನೆ... ಹೊಲೆಗೆರೆಯ ಜಲದ ನಡುವೆ ಬಿಂಬಿಸುವ ರವಿ ಹೊಲೆಯನೇ... ಕಮಲಭವನೊಡನೆ ಹುರುಡಿಸಿ, ಬೇರೆ ಸರ್ವಜೀವರ ಮಾಡುವೆಡೆಯೊಳ್ ಆ ಜೀವರೊಳಗಾದವನೆ. ನಿಮ್ಮ ಹವಣರಿಯದೆ ಆಡಿದರಿ.

ವಿಶ್ವಾಮಿತ್ರ : ಅಂಬುಧಿವ್ರಜಪರಿಮಿತ ಅವನೀತಳದೊಳ್ ಆಡಂಬರದ ಕೀರ್ತಿಯಮ್ ತಳೆದ ನಾನಾ ಮುನಿ ಕದಂಬ ಅಧಿನಾಥ ವಿಶ್ವಾಮಿತ್ರಮುನಿ ಸುತೆಯರನ್, ಜಗಚ್ಚಕ್ಷು ಎನಿಪ ಅಂಬುಜಪ್ರಿಯ ಕುಲ ಲಲಾಮನ್ ಅವನೀಶ ನಿಕುರುಂಬ ಅಧಿಪತಿ ಹರಿಶ್ಚಂದ್ರರಾಯನ್ ತಂದನ್ ಎಂಬೊಂದು ತೇಜಮಮ್ ಕೊಡಬೇಕು. ಭೂಪ, ಕೈಮುಗಿದು ಬೇಡಿದೆನ್.

ಹರಿಶ್ಚಂದ್ರ : ಎಡೆವಿಡದೆ ಬೇಡಿ ಕಾಡುವಿರಾದಡೆ ಇನ್ನು ಕೇಳ್... ಕಡೆಗೆ ಎನ್ನ ಸರ್ವರಾಜ್ಯವನಾದಡಮ್ ನಿಮಗೆ ಕೊಡಹಡೆವೆನ್ಯೆ... ಸಲ್ಲದು ಈ ಒಂದು ತೇಜಮನ್ ಕೊಡೆನ್.

(ಎಂದು ಭೂಪಾಲನು ನುಡಿಯಲು.)

ವಿಶ್ವಾಮಿತ್ರ : ತಥಾಸ್ತು... ಹಡೆದೆನ್ ಹಡೆದೆನ್. ಅವನೀಶರ ಒಡೆಯ, ದಾನಿ ಲಲಾಮ, ಸತ್ಯಾವತಂಸ...

(ಎಂದು ಎಡೆವಿಡದೆ ಹೊಗಳಿ ಬಿಡದೆ ಸಂಗಡದ ಮುನಿವರರು ಸಹಿತ ಆಘೋಷಿಸಿದನು.)

ವಿಶ್ವಾಮಿತ್ರ : ನೃಪ, ಇಂತು ಎನ್ನ ಕಾಟಕ್ಕೆ ಬೇಸತ್ತು ನೀನೊಬ್ಬನ್ ಎಂತಕ್ಕೆ ಕೊಟ್ಟನ್ ಎಂದಡೆ ಬಿಡೆನು. ನಿನ್ನ ಕಾಂತೆ, ಸುತ, ಮಂತ್ರಿಗಳ ಮತ ಬೇಹುದು. ಅವರುಗಳನ್ ಬೇಗ ಒಡಬಡಿಸು.

ಹರಿಶ್ಚಂದ್ರ : ಭ್ರಾಂತಮುನಿ, ನಾನೊಬ್ಬ ಸಾಲದೇ... ಸ್ತ್ರೀಬಾಲರ್ ಎಂತಾದಡಮ್ ನುಡಿವರ್. ಅವರ ಇಚ್ಛೆಯೇ, ಎನ್ನ ಸಂತಸದೆ ಕೋ...

ವಿಶ್ವಾಮಿತ್ರ : ಅದರ ಮಾತನ್ ಬಿಟ್ಟು ಧಾರೆಯಮ್ ತಾ.

ಹರಿಶ್ಚಂದ್ರ : ಅಡವಿಯಮ್ ಮೊಗೆದು ಸುಡುವ ಅಗ್ನಿಗೆ ಆಪೋಶನದ ಗೊಡವೆ ಏವುದು? ಬಲಾತ್ಕಾರದಿಮ್ ಕೊಂಬಿರಾದಡೆ ಧಾರೆಯೇಕಯ್ಯ. ಧಾರೆ ಕೊಡದಿರೆ, ಮರಳಿ ನೀನ್ ಬಿಡುವುದುಂಟೆ.

ವಿಶ್ವಾಮಿತ್ರ : ಬಿಡುವೆನ್, ಎನ್ನಯ ಮಕ್ಕಳನ್ ಮದುವೆಯಾಗು.

ಹರಿಶ್ಚಂದ್ರ : ಅಡಿಗಡಿಗೆ ಕೆಟ್ಟ ನುಡಿಯನ್ ನುಡಿಯುತಿರಬೇಡ. ಹಿಡಿ.

(ಎಂದು ಅವನೀಶನು ಸರ್ವಸಾಮ್ರಾಜ್ಯಮನ್ ಮುನಿಗೆ ಧಾರೆಯನ್ ಎರೆದನ್.)

ವಿಶ್ವಾಮಿತ್ರ : ಏನೇನನ್ ಧಾರೆಯನ್ ಎರೆದೆ.

ಹರಿಶ್ಚಂದ್ರ : ಚತುರಂಗ ಸೇನೆಯಮ್... ಸಕಲ ಭಂಡಾರವಮ್... ನಿಜ ರಾಜಧಾನಿಯಮ್... ಜಗದಾಣೆ ಘೋಷಣೆಯುಮನ್... ಕಟಕವನು... ಸಪ್ತದ್ವೀಪಂಗಳ ಆನಂದದಿಂದೆ ಇತ್ತೆನ್. ಇನ್ನು ಸರ್ವ ಅನುಸಂಧಾನಮನ್ ಬಿಟ್ಟು, ಕರುಣಿಸಿ ಹರಸುತಿಹುದು.

(ಎಂದು ಭೂನಾಥನ್ ಎರಗಿ ಬೀಳ್ಕೊಂಡಡೆ, ಅಣಕಿಸಿ ನಗುತ...)

ವಿಶ್ವಾಮಿತ್ರ : ಹೋಗಯ್ಯ ಹೋಗು.

ಹರಿಶ್ಚಂದ್ರ : (ತನ್ನ ಮನದಲ್ಲಿ)

ಹರಣಮನ್ ಬೇಡದೆ ಉಳುಹಿದನು. ಲೇಸಾಯ್ತು, ಮುನಿ ಕರುಣಿಸಿದನ್.

(ಎಂದು ತಲೆದಡವಿಕೊಳುತ ಉತ್ಸವದೊಳ್ ಉರವಣಿಸಿ ರಥವೇರಿ ನಡೆಗೊಳಲು...)

ವಿಶ್ವಾಮಿತ್ರ : ಬಂದು ಹೋಗು. ಒಂದು ನುಡಿ ಪೇಳ್ವೆನ್.

(ಎಂದು ಹುರುಡಿಗನು ಮತ್ತೆ ಕರೆಯಲು, ಮರಳಿ ಬಂದು...)

ಹರಿಶ್ಚಂದ್ರ : ಚಚ್ಚರ... ಬೆಸಸು... ಬೆಸನ್ ಆವುದು?

(ಎಂದು ಧೀರೋದಾತ್ತನ್ ಎರಡು ಕೈಮುಗಿಯಲ್, ಆ ಮುನಿ ನುಡಿದ ಕಷ್ಟವನ್ ಅದಾವ ಜೀವರು ಕೇಳ್ವರು...)

ವಿಶ್ವಾಮಿತ್ರ : ಎಳಸಿ ನೀನ್ ಎನಗೆ ಧಾರೆಯನ್ ಎರೆದ ಸರ್ವಸ್ವದೊಳಗಣವು ನಿನ್ನ ತೊಡಿಗೆಗಳ್. ಅವಮ್ ನೀಡು.

(ಎನಲು, ಕಳೆದು ನೀಡಿದಡೆ...)

ವಿಶ್ವಾಮಿತ್ರ : ಇನ್ನು ಮಂತ್ರಿ ಸತಿ ಸುತರ ತೊಡಿಗೆಗಳ ಈಗಳ್ ನೀಡು.

(ಎನಲು, ಕಳೆದು ಕೊಟ್ಟಡೆ...)

ವಿಶ್ವಾಮಿತ್ರ : ಮೇಲೆ ನೀವೆಲ್ಲರು ಉಟ್ಟ ಉಡುಗೆಗಳನು ನೀಡು.

ಹರಿಶ್ಚಂದ್ರ : ಅವನ್ ಈವ ಪರಿ ಆವುದು?

(ಎಂದು ಅಳುಕಿ ಮನಗುಂದಿ ಚಿಂತಿಸುತ ಕೈಮುಗಿದಿರ್ಪ ಭೂಪನನ್ ಕಂಡು...)

ವಿಶ್ವಾಮಿತ್ರ : ಅವನಿಪರು ಮರುಳರ್ ಎಂಬುದು ತಪ್ಪದು. ಇದಕೆ ಉಪಾಯವ ಕಾಣ್ಬುದು ಅರಿದೆ. ನಾ ತೋರಿದಪೆನ್.

(ಎಂದು ತನ್ನವನ್ ಒಬ್ಬನ್ ಉಟ್ಟ ಹಣ್ಣರುವೆ ಸೀರೆಯನ್ ಈಸಿಕೊಂಡು, ನಾಲ್ಕಾಗಿ ಸೀಳಿ, ಶಿವಶಿವ... ಮಹಾದೇವ... ಕರುಣವಿಲ್ಲದ ಪಾಪಿ... ಅವಿಚಾರದಿಮ್ ನೀಡೆ... ನಾಚದೆ... ಒಗಡಿಸದೆ... ಅಳುಕದೆ ಅವರ್ ಒಬ್ಬರು ಒಂದೊಂದನು ಉಟ್ಟು ದಿವ್ಯಾಂಬರವನ್ ಇತ್ತಡೆ ಅಲಸದೆ ಕೊಂಡನು. ತೃಣ ಸಸಿ ಮುಖ್ಯ ಜೀವಿಗಳಿಗೆ ಮಿಸುಪ ಕಳೆಗಳನು ಒಸೆದೊಸೆದು ದಾನವಿತ್ತು ಅಂಬರವನು ಉಳಿದ ಅಮಳ ಶಶಿಯಂತೆ ಅಂಬರವನ್ ಉಳಿದು ಅರುವೆಯುಟ್ಟ ಅರಸನು ಸರ್ವತೊಡಿಗೆಗಳನ್ ಇತ್ತು. ಕುಸಿದು ಪೊಡಮಟ್ಟು...)

ಹರಿಶ್ಚಂದ್ರ : ಇನ್ನು ಹೋಹೆನೈ ತಂದೆ. ಸಂತಸವೆ ನಿಮಗೆ.

(ಎನಲ್ ಅಡ್ಡಮೋರೆಯೊಳ್ ಉದಾಸೀನ ಮಸಕದಿಮ್)

ವಿಶ್ವಾಮಿತ್ರ : ಹೋಗು.

(ಎಂದು ಹೋಗಬಿಟ್ಟು, ಅಳುಪಿ ಮತ್ತೆ ಆ ಕೈಯಲೇ ಕರೆದನು.)

ವಿಶ್ವಾಮಿತ್ರ : ಮನದೊಳ್ ಇರ್ದುದನ್ ಒಂದನ್ ಆಡಬೇಕು. ಆಡಿದಡೆ ಮುನಿಯಲೇ...

ಹರಿಶ್ಚಂದ್ರ : ಎಲೆ ತಂದೆ, ಮುನ್ನ ಏನನ್ ಆಡಿದಡೆ ನಾ ಮುನಿದೆನ್ ಪೇಳ್.

ವಿಶ್ವಾಮಿತ್ರ : ನೀನು ಬಹು ಸುವರ್ಣಯಾಗವ ಮಾಡಿದಂದು ಎನಗೆ ದಕ್ಷಿಣೆಗೆ

ಇತ್ತ ಧನವನ್ ಈವುದು. ದೇಶವನು ಬಿಟ್ಟು ಹೋಹಾತನ್... ಅನ್ಯಸಾಲವನು ನೆಟ್ಟನೆ ಹೊತ್ತು ಹೋಗಲಾಗದು... ನಿಲಿಸಲಾಗದು... ಇತ್ತು ಬಳಿಕ ಅಡಿಯನಿಡು.

ಹರಿಶ್ಚಂದ್ರ : ಅನುಗೆಟ್ಟ ಮರುಳೆ, ನೀನ್ ಎಂದ ಅಲ್ಪದಕ್ಷಿಣೆಯ ಧನವು ಎನಿತು. ನಿನ್ನ ಮನದಾರ್ತವ ಎನಿತರೊಳ್ ಅಳಿವುದು. ಅನಿತರ್ಥ ಮೊದಲ ಭಂಡಾರದೊಳಗೆ ಅದೆ. ನೀನ್ ಇನ್ನು ಬಳಲಿಸದಿರ್.

(ಎನಲು ಕೊನೆ ಬೆರಳನು ಅಲುಗಿ ತಲೆದೂಗಿ...)

ವಿಶ್ವಾಮಿತ್ರ : ಲೇಸೈ, ನಿನ್ನ ಮನಕೆ ಸರಿಯಿಲ್ಲ. ಮಝು... ಭಾಪು... ಭಾಪರರೆ... ನೆಟ್ಟನೆ ಕೊಟ್ಟು, ಕಾಳ್ಗೆಡೆದು ನುಡಿವ ನುಡಿ ಹಸನಾಯಿತು.

(ಎಂದು ಘೂರ್ಮಿಸಿ ನಕ್ಕನು.)

ಹರಿಶ್ಚಂದ್ರ : ಕಡೆಗಣಿಸಿ ನಗಲೇಕೆ ತಂದೆ.

ವಿಶ್ವಾಮಿತ್ರ : ಧಾರೆಯಮ್ ಕೊಡುವಾಗ ದಕ್ಷಿಣೆಯ ಧನವು ಅದರೊಳ್ ಅದೆಯೆಂದು ನುಡಿದುದುಂಟೇ.

ಹರಿಶ್ಚಂದ್ರ : ಹೇರನ್ ಒಪ್ಪಿಸಿದವಂಗೆ ಎಲ್ಲಿಯದು ಸುಂಕ.

ವಿಶ್ವಾಮಿತ್ರ : ಒಡಲ್ ಅಳಿದಡಮ್ ಸಾಲ ಅಳಿಯದು ಎನಲ್... ಈ ಧರಣಿ ಒಡೆತನಮ್ ಹೋದಡೆ ಏನ್ ಸಾಲ ಹೋಹುದೆ. ಮುನ್ನಿನ ಒಡವೆಯನ್ ಕೊಡು. ಕೊಡದಡೆ ಎಲ್ಲವಮ್ ಮರಳಿ ಕೈಕೊಳು. ಬರಿದೆ ಬಿಡೆನ್.

(ಎಂದನು. ಜತ್ತಕನ ನುಡಿಗೆ ತೆಕ್ಕಿದನೆ... ತೆರಳಿದನೆ... ತಲೆಗುತ್ತಿದನೆ... ಸಡಿಫಡಿಲ್ ಇಲ್ಲ.)

ಹರಿಶ್ಚಂದ್ರ : ಅವಧಿಯಮ್ ಕೊಟ್ಟು ಚಿತ್ತವಿತ್ತು ಅನುಸರಿಸಿ ಕೊಂಬಿರಾದೆಡೆ ತಂದು ನಿರ್ಣಯಿಸಿ ಕೊಡುವೆನ್.

ವಿಶ್ವಾಮಿತ್ರ : ಹತ್ತು ದಿನ.

ಹರಿಶ್ಚಂದ್ರ : ಆರೆನ್.

ವಿಶ್ವಾಮಿತ್ರ : ಇಪ್ಪತ್ತು ದಿನ.

ಹರಿಶ್ಚಂದ್ರ : ದೊರಕದು.

ವಿಶ್ವಾಮಿತ್ರ : ಮೂವತ್ತು ದಿನ.

ಹರಿಶ್ಚಂದ್ರ : ಆಗದು.

ವಿಶ್ವಾಮಿತ್ರ : ನಾಲ್ವತ್ತೆಂಟು ದಿನ.

ಹರಿಶ್ಚಂದ್ರ : ಅಲ್ಲವೆಂದೆನ್ನೆ. ನೀನ್ ಇತ್ತ ಅವಧಿ ಕಿರಿದು. ಈವರಿಲ್ಲ. ಧನವಮ್ ಗಳಿಸಿ ತಂದು ಈವೆನ್ ಎನಲು ದಿನವಿಲ್ಲ. ಒಬ್ಬ ತೆರಕಾರನನ್ ನಿರ್ಣಯಿಸಿ ಕೊಟ್ಟಡೆ ಆತಂಗೆ ಕೊಡುವೆನ್.

ವಿಶ್ವಾಮಿತ್ರ : ಬಲ್ಲಿದನನ್ ಒಬ್ಬನನ್ ಕೊಡುವೆನ್. ಆತಂಗೆ ಧನವೆಲ್ಲವಮ್ ನಿರ್ಣಯಿಸಿ ಕೊಡುವಂತಿರೆ ಎನಗೆ ಇಲ್ಲಿ ಹೊಲ್ಲಹಮ್. ಸೂರುಳು ಸೂರುಳಿಡು. ಬೇಗ ಕಾಡದೆ ಕಳುಹಿದಪೆನ್.

ಹರಿಶ್ಚಂದ್ರ : ಅವಧಿಗೆ ನಿಮ್ಮ ಧನವಮ್ ಈಯದಡೆ ಶಿವಪೂಜೆಯಮ್ ಮಾಡದವನು; ಗುರ್ವಾಜ್ಞೆ ಕೆಟ್ಟವನು; ಪರಸತಿಗೆ ಅಳುಪುವವನು; ಪರರ ಅಸುಗೆ ಮುಳಿವವನು; ತಾಯನ್ ಬಗೆಯದವನು; ತಂದೆಯನ್ ಒಲ್ಲದವನು; ಪರನಿಂದೆ ಗೆಯ್ವವವನು; ಇಟ್ಟಿಗೆಯ ಸುಟ್ಟವನು; ಬೇಗೆಯನ್ ಇಕ್ಕುವವನ್; ಅಧಮರನು ಬೆರಸುವವನು; ಕುಲಧರ್ಮ ಕೆಟ್ಟವನ್ ಇಳಿವ ನರಕದೊಳಗೆ ಇಳಿವೆನ್.

ವಿಶ್ವಾಮಿತ್ರ : ಮೇಲಿನ್ನು ನಾನು ಆಳ್ವ ದೇಶದೊಳು ಬೇಡದಂತೆ, ಓಲೈಸದಂತೆ, ಕೃಷಿ ವ್ಯವಸಾಯಮ್ ಮಾಡದೆ, ಆಲಯಮ್ ಕಟ್ಟಿರದೆ, ಅವಧಿಯೊಳು ಹೊನ್ನ ನಿರ್ಣಯಿಸುವುದು ಬೇಗ.

(ಎನಲು ಭೂಲೋಲನ್ ಅದಕೆ ಒಡಂಬಡಲು...)

ವಿಶ್ವಾಮಿತ್ರ : ಸಪ್ತದ್ವೀಪಜಾಲವೆಲ್ಲ ಎನ್ನವು ಅವರಿಂದ ಹೊರಗೆ ಆವುದು. (ಎಂದಾಲಿಸಲು)

ಹರಿಶ್ಚಂದ್ರ : ಮುನಿ ಕೇಳ್, ಹೇಮಕೂಟಮ್ ವಾರಣಾಸಿಗಳು ಹೊರಗು. ಪ್ರಳಯಕ್ಕೆ ಹೊರಗು; ಕಲಿಕಾಲ ಹೊಗದು; ಅಂತಕನ ಸುಳಿವು ಅವರೊಳಿಲ್ಲ; ಕಾಮನ ಡಾವರಮ್ ಕೊಳ್ಳದು. ಉಳಿದ ಮಾಯೆಯ ಮಾತು ಬೇಡ. ಪಾಪಂಗಳ ಆಟಮ್ ನಾಟವು; ಅನ್ಯಾಯದ ಕಳೆಗೆ ತೆಕ್ಕವು; ಮಾರಿ ಮೃತ್ಯುಗಿತ್ಯುಗಳ ಬಲೆಗೆ ಒಳಗಾಗದು; ಅಧಿಕ ಪುಣ್ಯದ ಬೀಡು; ಮಂಗಳದ ನಿಳಯ; ಮುಕ್ತಿಯ ಮೂಲ ಎನಿಸುವವು ಕಾಶಿ ಹಂಪೆಗಳು. ಮುನಿ ಕೇಳು, ಅವಕೆ ವಿಶ್ವೇಶ್ವರ ವಿರೂಪಾಕ್ಷರೇ ಒಡೆಯರ್; ಅವನಿಯೊಳಗೆ ಅಲ್ಲಿ ನಿನ್ನ ಆಜ್ಞೆಗಳು ಸಲ್ಲ; ಬರಿಯ ವಿಚಾರ

ಹೊಲ್ಲ; ಹಂಪೆಗೆ ಹೋಹದೆ ಎಡೆಯಿಲ್ಲ; ಕಾಶೀಪುರವನೆ ಸಾರ್ದು ನಿವಗೆ ಕೊಡುವ ಅರ್ಥಮನ್ ಕೊಡುವೆನ್. ಇನ್ನು ಅಳಲಿಸದೆ ಶಿವಮೂರ್ತಿ ಮುನಿನಾಥ ಕರುಣಿಸು.

ವಿಶ್ವಾಮಿತ್ರ : ಹೋಗು... ವಸ್ತುವ ಬೇಗ ಮಾಡು.

(ಎಂದಡೆ ಆ ಧೈರ್ಯನಿಧಿ ಭೂಪಾಲನು ವಿಶ್ವಾಮಿತ್ರ ಮುನಿಯ ಅಡಿಗೆ ಎರಗಿ ನಡೆದನು.)

❖

ಪ್ರಸಂಗ ೧೨

ವಿಶ್ವಾಮಿತ್ರ ಮುನಿಯ ಮತ್ತೊಂದು ಒಳಸಂಚು

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ರಾಜ್ಯ ಸರ್ವಸ್ವ ದಾನ' ಎಂಬ ಅಯ್ದನೆಯ ಅಧ್ಯಾಯದ ೩೫ ರಿಂದ ೪೧ರವರೆಗಿನ ಏಳು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ವಿಶ್ವಾಮಿತ್ರ : ಒಬ್ಬ ಮುನಿ. ಈತನು ಕುಶಿಕನೆಂಬ ರಾಜನ ಮಗನಾದ್ದರಿಂದ ಕೌಶಿಕ ಎಂಬ ಮತ್ತೊಂದು ಹೆಸರಿದೆ.

ಹರಿಶ್ಚಂದ್ರ : ಅಯೋಧ್ಯೆಯ ರಾಜ.

ವಿಶ್ವಾಮಿತ್ರ ಮುನಿಯ ಮತ್ತೊಂದು ಒಳಸಂಚು

ಬಿಟ್ಟು ಹೆದರದೆ ಹೋಹ ನೃಪನ ಕಳೆಯಮ್ ಕಂಡು...

ವಿಶ್ವಾಮಿತ್ರ : (ತನ್ನಲ್ಲಿಯೇ)

ಕೆಟ್ಟೆನ್. ಅವನಿಯನ್ ಎಯ್ದೆ ಕೊಂಡಡೆ ಅಂತು ಅದನ್ ಒಡಂಬಟ್ಟು ಶಪಥಕ್ಕೆ ಮೆಯ್ಯೊಗ್ಗಿಟ್ಟನ್. ಅವನಲ್ಲಿ ಹುಸಿ ಹುಟ್ಟದು. ಅಕಟ... ಇನ್ನು ನಾನು ನಟ್ಟು ಕೋಟಲೆಗೊಂಡು ಅನಂತ ಕಾಲಮ್ ತಪಮ್ ಪಟ್ಟ ಪುಣ್ಯವನ್ ಈವೆನ್ ಎಂದೆನ್. ಅದು ಹೋದಡೆ ಮುನಿಗಳ್ ಎನ್ನನ್ ಒಳಗಿಟ್ಟುಕೊಂಬರೆ.

(ಎಂದು ಓರಂತೆ ಮುನಿನಾಥನು ಮರುಗಿದನ್.)

ವಿಶ್ವಾಮಿತ್ರ : (ಮತ್ತೆ ತನ್ನಲ್ಲಿಯೇ ಈ ರೀತಿ ಆಲೋಚಿಸತೊಡಗಿದನು.)

ಕುಂದದೆ ವಸಿಷ್ಠನೊಳು ಮಲೆತು ಬೆಂಗೊಟ್ಟು... ಉಳ್ಳ ಹೆಂದದ ತಪಃಫಲವ ಹೋಗಾಡಿದಾತನ್... ಈ ಬಂದನ್ ಎಂದು ಎನ್ನನ್ ಎಲ್ಲಾ ಮುನೀಶ್ವರರು ನಗದೆ ಇರರ್.

(ಎಂದು ತನ್ನ ತಾನು ಕೊಂದುಕೊಳ ಬಗೆದು, ಮತ್ತೆ ಎಚ್ಚತ್ತು)

ಚಿತ್ತದಲಿ ನೊಂದಡೆ ಏನಹುದು. ಇದಕೆ ತಕ್ಕುದಮ್ ಕಾಣಬೇಕು...

(ಎಂದು ಚಿಂತಿಸಿ ನೋಡಿ ಆ ನಿಷ್ಕರುಣನು ಮತ್ತೊಂದು ಉಪಾಯಮಮ್ ಕಂಡನ್.)

ವಿಶ್ವಾಮಿತ್ರ : (ಮತ್ತೆ ತನ್ನಲ್ಲಿಯೇ ಈ ರೀತಿ ಆಲೋಚಿಸತೊಡಗಿದನು)

ಪುರದ ವಿಭವದ, ಜನದ ಸಿರಿಯ, ವಿಸ್ತರದ ಕೇರಿಗಳ, ಕೈಗೆಯ್ದ ದುರ್ಗದ ಬಲುಹ, ತನ್ನ ಹಿರಿಯ ಅರಮನೆಯ, ಕೇಳೀವನದ, ಲತಾಗೃಹದ, ದೀಹದ ಖಗ ಮೃಗಾವಳಿಗಳ, ವರ ಚಿತ್ರಶಾಲೆಗಳ, ಧನ ಧಾನ್ಯ ಸಂಚಯದ, ಪರಮ ವನಿತೆಯರ, ನಾನಾ ರತ್ನಕೋಶದ ಉಬ್ಬರದ ಸೊಗಸನ್ ಕಂಡು ಮನ ಮರುಗದೇ... ಪುರಕ್ಕೆ ಒಯ್ದು ನೋಡವೆನ್.

(ಎಂದು ಹೋಗುತ್ತಿದ್ದ ಹರಿಶ್ಚಂದ್ರನನ್ನು ಮತ್ತೆ ತನ್ನತ್ತ ಬರುವಂತೆ ಕೂಗಿ ಕರೆದು...)

ವಿಶ್ವಾಮಿತ್ರ : ಧರಣೀಶ, ಒಂದು ಮಾತುಂಟು. ಬಂದು ಹೋಗು.

(ಎಂದು ಕರೆದು)

ನಿನ್ನ ನಂಬಿ ನಾನು ರಾಜ್ಯಮ್ ಗೆಯ್ವ ಭರದೊಳ್ ಅರಿಯದೆ ಹೋದಡೆ... ಎಲೆ ಮರುಳೆ, ನಿನಗೆ ಎಲ್ಲಿಯ ಅರಸುತನವೆಂದು ಮೀರಿ, ಪುರದ ಬಾಗಿಲ ಬಲಿದು, ಗದರಿಕೊಂಡು ಅಬ್ಬರಿಸಿ ಪರಿಜನಮ್ ಕಲುಗುಂಡ ಕರೆಯದೆ ಇರರ್. ಎನ್ನನ್ ಒಯ್ದಿರಿಸಿ ಸರ್ವವನ್ ಒಪ್ಪುಗೊಟ್ಟು ಹೋಗು.

(ಎಂದಡೆ ಅವನಿಪನ್ ಒಡಂಬಟ್ಟನು.)

ವಿಶ್ವಾಮಿತ್ರ : ನಡೆ ರಥವನ್ ಏರಿಕೊಳ್.

ಹರಿಶ್ಚಂದ್ರ : ಒಲ್ಲೆನ್.

ವಿಶ್ವಾಮಿತ್ರ : ಏಕೊಲ್ಲೆ?

ಹರಿಶ್ಚಂದ್ರ : ಪರರ ಒಡವೆ ಎನಗೆ ಆಗದು.

ವಿಶ್ವಾಮಿತ್ರ : ಏಕೆ ಆಗದು?... ಆನ್ ಇತ್ತೆನ್.

ಹರಿಶ್ಚಂದ್ರ : ಇತ್ತಡೆ... ಕೊಳಲುಬಾರದು.

ವಿಶ್ವಾಮಿತ್ರ : ಏನ್ ಕಾರಣಮ್ ಬಾರದು.

ಹರಿಶ್ಚಂದ್ರ : ಎಮಗಮ್ ಪ್ರತಿಗ್ರಹ ಸಲ್ಲದು.

ವಿಶ್ವಾಮಿತ್ರ : ಕಡೆಗೆ ನಿನ್ನೊಡವೆ ಅಲ್ಲವೆ?

ಹರಿಶ್ಚಂದ್ರ : ಅಲ್ಲ.

ವಿಶ್ವಾಮಿತ್ರ : ಏಕಲ್ಲ?

ಹರಿಶ್ಚಂದ್ರ : ಕೊಡದ ಮುನ್ನ ಎನ್ನ ಒಡವೆ. ಕೊಟ್ಟ ಬಳಿಕ...ಎನಗೆ ಎಲ್ಲಿಯ ಒಡವೆ.

(ಎಂದು ಅರರೆ ದಾನಿಗಳ ಬಲ್ಲಹನು ಮುನಿಯೊಡನೆ ಸೂಳ್ ನುಡಿಗೊಟ್ಟನು.)

ವಿಶ್ವಾಮಿತ್ರ : ಬೇಡಿಕೊಂಬೆನ್ ಭೂಪ.

ಹರಿಶ್ಚಂದ್ರ : ಬೇಡಬೇಡ... ನಾ... ಮಾಡಿದುದನ್ ಎನ್ನ ಕಣ್ಣಾರೆ ನೋಡುವೆನು. ನೀನ್ ಆಡಂಬರದೊಳು ರಥವೇರಿ ಚತುರಂಗ ಬಲವೆರಸಿ ನಡೆ ತಂದೆ. ಎನ್ನ ಕಾಡಬೇಡ. ಅವಧಿ ಕಿರಿದು. ಎಡೆ ದೂರ. ಹೊತ್ತ ಹೋಗಾಡದಿರ್ದಡೆ ತನ್ನನ್ ಒಯ್ದು ಮೇರುವಿನ ತುದಿ ಕೋಡನ್ ಏರಿಸಿದಾತ ನೀನ್.

(ಎಂದು ಮುನಿಪತಿಗೆ ಭೂಭುಜನ್ ಕೈಮುಗಿದನು.)

ವಿಶ್ವಾಮಿತ್ರ : ಅಕ್ಕರಿಂದಲ್ಲ ನೀನ್ ಓಡಿಹೋದಹೆ ಎಂಬ ಕಕ್ಕುಲಿತೆಗೆ ಏರು ಎಂದೆನೈಸೆ.

ಹರಿಶ್ಚಂದ್ರ : ಬಲುಗಾಹನ್ ಇಕ್ಕಯ್ಯ.

ವಿಶ್ವಾಮಿತ್ರ : ಕಾಹಿನವರು ನಿನ್ನವರ್.

ಹರಿಶ್ಚಂದ್ರ : ಅವರು ಬೇಡಯ್ಯ. ನಿನ್ನ ಮಕ್ಕಳಹ ಮುನಿಗಳನ್ ಬೆಸಸು.

(ಎನಲು, ಬೆಸಸಿ ಮುನಿ ರಕ್ಕಸನ್ ರಥವೇರಿ ಚತುರಂಗಬಲ ಬೆರಸಿ ಸರ್ವಸಂಭ್ರಮದ ಸಡಗರಮ್ ಮಿಕ್ಕು ಮಿಗಲ್ ಅಯೋಧ್ಯಾಪುರಕೆ ನಡೆದನ್.)

❖

ಪ್ರಸಂಗ–೧೩

ರಾಜ್ಯ ಸಮರ್ಪಣ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ರಾಜ್ಯ ಸಮರ್ಪಣ' ಎಂಬ ಆರನೆಯ ಅಧ್ಯಾಯದ ೧ ರಿಂದ ೨೭ ರ ವರೆಗಿನ ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ವಿಶ್ವಾಮಿತ್ರ : ಒಬ್ಬ ಮುನಿ. ಈತನು ಕುಶಿಕನೆಂಬ ರಾಜನ ಮಗನಾದ್ದರಿಂದ ಕೌಶಿಕ ಎಂಬ ಮತ್ತೊಂದು ಹೆಸರಿದೆ.

ಹರಿಶ್ಚಂದ್ರ : ಅಯೋಧ್ಯೆಯ ರಾಜ.

ರಾಜ್ಯ ಸಮರ್ಪಣ

ಧರೆ ಬಿರಿಯಲ್ ಅಳ್ಳಿರಿವ ಅನಂತ ನಿಸ್ಸಾಳದ ಅಬ್ಬರವನ್ ಆಲಿಸಿ... ಪುರದ ಕೇರಿಗಳನ್ ಒಪ್ಪೆ ಸಿಂಗರಿಸಿ... ಮನೆಮನೆಗಳೊಳು ಗುಡಿತೋರಣಂಗಳ ಸರ ತೆಗೆದು... ಸಂಭ್ರಮದಲಿ... ಅರರೆ... ಪರಿಜನಮ್ ಆ ಹರಿಶ್ಚಂದ್ರ ಭೂವರನನ್ ಮತ್ತೆ ಇದಿರ್ಗೊಳಲು... ಶಶಿಯನ್ ಇದಿರ್ಗೊಂಡು ಹೆಚ್ಚುವ ಅಂಭೋಧಿಯಂತೆ ಕೋಟಾಕೋಟಿ ಕರಿ ತುರಗ ರಥ ಪತ್ತಿ ಬೆರಸಿ ನಡೆದರು...

ಮುತ್ತಿ ಮುಸುಕಿದ ಹಲವು ಕೈದುಗಳ ಝಲ್ಲರಿಗಳ ಒತ್ತಿನೊಳು, ತಳಿತ ಬೆಳುಗೊಡೆಗಳ ಇಡುಕುರ ನೆಳಲ ಕುತ್ತುರೊಳು, ಡಾಳಿಸುವ ಚಮರಿ ಸೀಗುರಿಗಳ ಒಗ್ಗಿನ ಕುರುಹು ಪಿಡಿದು ನಡೆದು... ಎತ್ತಿದ ಮೊಗಮ್... ನಿಲುಕಿ ನೋಳ್ಪ ಕಂಗಳು... ಮುಗಿದು ಹೊತ್ತ ಕೈ...

ಪ್ರಜೆಗಳು : ಅವಧಾರು ಜೀಯ...

(ಎಂದೆಂಬ ನುಡಿವೆತ್ತು ಹತ್ತಿರೆ ಬಂದು... ಮುನಿಯ ಮೊಗವಮ್ ಕಂಡ ಹೊತ್ತನ್... ಇನ್ನು ಏನ್ ಪೊಗಳ್ವೆನು.

ನಸು ನನೆಯನ್ ಅಪ್ಪಿದ ಅಳಿಕುಳದಂತೆ; ಕಡುಹಸಿದು ಕಸುಗಾಯನ್ ಅಗಿದ ಗಿಳಿಗಳ ಬಳಗದಂತೆ; ನಿಟ್ಟಿಸದೆ ವಿಷಮನ್ ಸವಿದ ಶಿಶುವಿಸರದಂತೆ; ಕೊರಡಮ್ ಕರ್ದುಕಿ ಚಂಚು ನೊಂದು ಕುಸಿದ ಪಿಕನಿಕರದಂತೆ ಪುರಜನಮ್ ಆಸತ್ತು ಬೇಸತ್ತು ಬಸವಳಿಯುತ, ಹೊಲಗೆಟ್ಟ ಕರು ತಾಯನ್ ಅರಸುವಂತೆ

ಮಾಮಸಕದಿಮ್ ಅಂದು ಮಂದಿಗಳೊಳ್ ಭೂಪನನ್ ಅರಸಿದರು.

ಹಗಲ್ ಒಗೆದ ಚಂದ್ರಕಳೆಯಂತೆ; ಬಿರುವೈಶಾಖ ಅಗಿದ ಬನದಂತೆ; ಬಿಸಿಲೊಲು ಬಿಸುಟ ತಳಿರಂತೆ; ಮೊಗ ಕಂದಿ ಕಳೆಗುಂದಿ; ಅರುವೆ ಕಪ್ಪಡವುಟ್ಟು, ರಾಗವಳಿದು ಒಪ್ಪಗೆಟ್ಟು, ಮಗನ್ ಅರಸಿ ಮಂತ್ರಿ ಸಹಿತ ಅವನಿಪನ್ ಕೌಶಿಕನ ಹಿಂದೆ ದೇಸಿಗನಂತೆ ಕಾಹಿನೊಳು ಬರೆ ಕಂಡು, ಬಗೆ ಬೆದರಿ ಹೊದ್ದಿ ಹೊಡೆವಟ್ಟು...)

ಪ್ರಜೆಗಳು : ಕಾಣಿಕೆಯ ಚಿತ್ತೈಸು ಭೂಭುಜ...

(ಎಂದರು. ಆಗ ಹರಿಶ್ಚಂದ್ರನು)

ಹರಿಶ್ಚಂದ್ರ : ಎನಗೆ ಅರಸುತನ ಮಾದು ಹೋಗಿ, ವಿಶ್ವಾಮಿತ್ರಮುನಿಗೆ ಆದುದು. ಆತನನ್ ಕಂಡು ಕಾಣಿಕೆಯನಿತ್ತು ಅನುದಿನಮ್ ಬೆಸಕೈವುದು.

ಪ್ರಜೆಗಳು : ಒಲ್ಲೆವು.

(ಎನಲು ಬೋಧಿಸಿ, ಬಲಾತ್ಕಾರದಿಂದ ಜನವ ಕಾಣಿಸಿ, ಕಾಣಿಕೆಯ ಕೊಡಿಸಿ, ಹಿಂದುಗೊಂಡು ಇನಕುಲಲಲಾಮನ್ ಎಯ್ತಂದು ಪುರಮಮ್ ಹೊಕ್ಕು, ಮನದೊಳ್ ಉತ್ಸವದ ಹೆಚ್ಚುಗೆ ಅಳಿದು ನಿಂದ ಮಂದಿಯ ನೋಡುತಮ್ ನಡೆದನು. ನೂಕಿ ನಡೆದು ಅರಮನೆಯ ಹೊಕ್ಕು... ಸಿಂಹಾಸನಕ್ಕೆ ಆ ಕೌಶಿಕನ್ ಬಂದು, ಭೂಭುಜನ ಕೈಯ ಪಿಡಿದು...)

ವಿಶ್ವಾಮಿತ್ರ : ಈ ಕಟಕ... ಈ ಕೋಟೆ... ಈ ಕರಿಗಳ್... ಈ ತುರಗ... ಈ ರಥಗಳ್... ಈ ಪರಿಜನ... ಈ ಕೋಶ... ಈ ಕಾಂತೆ... ಈ ಕುವರನ್... ಈ ಮಂತ್ರಿ... ಈ ಕಾಮಿನೀ ಜನಮ್ ಮರುಗದಂತೆ ಅರಸಾಗಬೇಕಾದಡೆ, ಎನ್ನ ಮಕ್ಕಳ ಮದುವೆಯಾಗು. ಕಾಡದೆ ಬಿಟ್ಟು ಹೋಹೆನ್.

ಹರಿಶ್ಚಂದ್ರ : ಹೆತ್ತ ತಾಯನ್ ಮಾರಿ, ತೊತ್ತ ಕೊಂಬರೆ... ಮೂಗನ್ ಇತ್ತು, ಕನ್ನಡಿಯ ನೋಡುವರೆ... ಮಾಣಿಕದ ತೊಡವನ್ ಒತ್ತೆಯಿಟ್ಟು, ಒಡೆದ ಗಾಜಮ್ ಹಿಡಿವರೇ... ಕೋಪದಿಮ್ ಸತ್ತು, ಮದುವೆಯಹರೆ... ಕತ್ತುರಿಯ ಸುಟ್ಟು, ಅರಳ ಕುರುಕಲನು

ಗೆಯ್ವರೇ... ಚಿತ್ತೈಸು, ಹೊಲತಿಯರ ನೆರೆದು, ನಾನ್ ಓವದಿ ಇಪ್ಪತ್ತೊಂದು ತಲೆವೆರಸಿ ನರಕಕ್ಕೆ ಹೋಹೇನೇ... ಮುನಿನಾಥ ಹೇಳ್.

ವಿಶ್ವಾಮಿತ್ರ : ಒಲ್ಲನಿರಬೇಡ.

ಹರಿಶ್ಚಂದ್ರ : ಲೇಸು... ಒಲ್ಲೆ.

ವಿಶ್ವಾಮಿತ್ರ : ಏಕೊಲ್ಲೆ.

ಹರಿಶ್ಚಂದ್ರ : ಎಮ್ಮಲ್ಲಿ ತಪ್ಪಿಲ್ಲಾ.

ವಿಶ್ವಾಮಿತ್ರ : ಆದಡೆ ಇನ್ನು ನೀನೀಗ ನಿನಗುಳ್ಳ ಪರಿವಾರಮಮ್ ಬೇಗದಲಿ ಕರೆಸು. ಇಂತು ಚತುರಂಗಬಲ ಸೇನೆಯ... ಸಲ್ಲಲಿತ ದೇಶ ಕೋಶವನು, ಕಟಕವನು, ಅವಕ್ಕುಳ್ಳ ಕುಲಕರಣ ದುರ್ಗಮ್ ಮುದ್ರೆ ಮೊದಲಾದುವೆಲ್ಲವಮ್ ಬಿಡದೆ ಒಪ್ಪುಗೊಟ್ಟು ಹೋಗು... ಏಳು.

(ಎನಲು, ಭೂನಾಥನು ಕರಸಿದನ್... ಬಾಡಿದ ಮೊಗಮ್... ಬರತ ಬಾಯ್... ಸುರಿವ ನಯನಾಂಬು... ಪಾಡಳಿದ ಮತಿ... ನೀಡಿ ಬೆಳೆದ ಸುಯ್... ದುಗುಡ ಒಕ್ಕಾಡುವ ಅಂಗಮ್... ನಿರೋಧಾಗ್ನಿಯಿಮ್ ಕುದಿದು ಮರುಗುವ ಮನಮ್... ಮಾಸಿದ ಮುದಮ್ ಕೂಡೆ ಬಂದ ಅಖಿಳ ಪರಿವಾರಮಮ್, ಸತಿಯರಮ್, ನಾಡೆ ಚತುರಂಗ ಬಲವಮ್, ಪುರಜನಂಗಳಮ್ ಆ ಧೈರ್ಯನಿಧಿ ಭೂಪನು ನೋಡಿ ತೋರಿಸಿ... ಬೇರೆ ಬೇರೆ ಒಪ್ಪುಗೊಡುತಿರ್ದನ್.)

ಹರಿಶ್ಚಂದ್ರ : ಇದು ರತ್ನ ಭಂಡಾರ... ಇದು ಹೇಮ ಭಂಡಾರ... ಇದು ಸುನಾಣೆಯ ವರ್ಗ... ಇದು ಪಟ್ಟ... ಕರ್ಮಕುಲ... ಇದು ಬೆಳ್ಳಿ ಉಗ್ರಾಣ... ಇದು ಕಂಚಿನ ಗ್ರಾಣ... ಇದು ಸರ್ವ ಶಸ್ತ್ರಶಾಲೆ... ಇದು ಹಸ್ತಿ ಸಂದೋಹ... ಇದು ತುರಗ ಸಂತಾನ... ಇದು ವರೂಥ ಪ್ರಕರ... ಇದು ಪದಾತಿ ವ್ರಾತ... ನೋಡಿಕೋ.

(ಎನುತ ಭೂನಾಥ ಕಂದರ್ಪನು ಆ ಮುನಿಗೆ ಒಪ್ಪಿಸಿದನ್.)

ಹರಿಶ್ಚಂದ್ರ : ಇದು ಹಿರಿಯ ಬಿರುದಿನ ಮುದ್ರೆ... ಇದು ನಗರ... ಇದು ಪೂರ್ವದ ಅರಮನೆ... ಇದು ಅಖಿಳ ಪರಿವಾರ... ಇದು ಸಿವುಡಿ... ಇದು ಕರಣ... ಇದು ಮೇಲುಳ್ಳ... ಸರ್ವಸ್ವ ನೋಡಿಕೋ, ಮಹಾಪುರುಷ.

(ಎಂದು ವರ ಕೌಶಿಂಗೆ ಒಪ್ಪುಗೊಟ್ಟು...)

ಹರಿಶ್ಚಂದ್ರ : ಎಲ್ಲ ಸಂದುದೇ... ಪರಿಣಾಮವೇ... ಇನ್ನು ಹೋಹೇನೇ... ಮುನಿನಾಥ ಕರುಣಿಸಿದಿರೇ...

(ಎಂದು ಪೊಡವಂಟು ಹೋಹ ಅರಸನೊಡನೆ ಆ ಮುನಿಪನು ಎದ್ದನ್. ಪೊರಮಡುವ ಭೂಪಾಲನನ್ ಕಂಡು ಕಣ್ಗೆಟ್ಟು ಮರುಗಿ ಬಸುರಮ್ ಹೊಸೆದು ಬಸವಳಿದು... ಬಿಸುಸುಯ್ದು... ಮೊರೆಯಿಟ್ಟು... ಬಾಯ್ಬಿಟ್ಟು... ಕೈನೀಡಿ ಕರೆದು ಕಟ್ಟೊರಲಿ ಸೈರಿಸಲಾರದೆ...)

ಪೌರಜನ : ನೆರೆ ನಿನ್ನ ನಂಬಿ ನಚ್ಚಿರ್ದ ಪರಿವಾರಮಮ್ ಮರೆದೆಯೋ ತೊರೆದೆಯೋ ಮಾರಿದೆಯೊ. ಪೇಳು, ನೇಸರ ಕುಲಜ...

(ಎಂದೆಂದು ಪೌರಜನವು ನುಡಿನುಡಿದು ಮಿಡುಮಿಡನೆ ಮಿಡುಕಿತ್ತು.)

ಪೌರಜನ : ದಂತಿಯಿಂದಿಳಿದು ನಡೆದು ಅರಿಯದವ, ಬರಿಗಾಲೊಳ್ ಎಂತು ಅಡಿಯನ್ ಇಡುವೆ... ಹಾಸಿನೊಳು ಪವಡಿಸುವಾತನ್ ಎಂತು ಕಲು ನೆಲದೊಳು ಒರಗುವೆ... ಸಿತಚ್ಛತ್ರ ತಂಪಿನೊಳು ಬಪ್ಪಾತ ನೀನು ಎಂತು ಬರ ಬಿಸಿಲನ್ ಆನುವೆ... ಪುರದೊಳ್ ಇಪ್ಪಾತನ್ ಎಂತು ಅರಣ್ಯದೊಳಿಪ್ಪೆ... ಜನವನ್ ಅಗಲ್ದು ಅರಿಯದವನ್ ಎಂತು ಏಕಾಕಿಯಾಗಿಪ್ಪೆ ಪೇಳ್.

(ಎಂದು ಸಮಸ್ತ ಜನವು ಬಾಯ್ಬಿಟ್ಟುದು.)

ಪೌರಜನರ ಗುಂಪು–೧ : ಕೊಟ್ಟು ಬೇಸರದ ಮುಗುದ ಅರಸು ದೊರಕಿದನಲಾ ಎಂದು ಹೊರಗೆ ದಾನವ ಬೇಡುವವರುಂಟೆ. ಕಟ್ಟರೆಗಂಡ... ಪಾಪಿ ನಿಷ್ಕರುಣಿ ನಿರ್ದಯ ಮೂರ್ಖ ನೀಚ ನೀರಸ ನಿರ್ಗುಣ ನೆರೆ ಕೊಂದೆ. ನಂಬಿ ನಚ್ಚಿರ್ದರ್ ಎಮ್ಮ ಒಡಲೊಳ್ ಅಳ್ಳಿರಿಯುತಿಪ್ಪ ಅಳಲ ಬೇಗೆಯ ಬೆಂಕಿಯುರಿ ನಿನ್ನನ್ ಇರಿಯದೇ ಹೇಳು. ವಿಶ್ವಾಮೃತ್ಯವಾದೆ ವಿಶ್ವಾಮಿತ್ರ.

(ಎನುತ ಇರ್ದರು.)

ಪೌರಜನರ ಗುಂಪು–೨ : ಜಡೆಗಳೆದು ಮಕುಟಮಮ್; ನಾರ ಸೀರೆಯನು ತೊರೆದು, ಉಡಿಗೆಯಮ್; ರುದ್ರಾಕ್ಷಮಾಲೆಯಮ್ ಕಳೆದು, ಮಣಿ ತೊಡಿಗೆಯಮ್: ಕಂದಮೂಲವಮ್ ಒಲ್ಲದೆ, ಊಟಮನ್; ದರ್ಭೆಯಮ್ ಬಿಟ್ಟು, ಅಸಿಯನು; ಅಡವಿಯಮ್

ಬಿಟ್ಟು, ನಗರಿಯ; ಭಸಿತಮಮ್ ಬಿಟ್ಟು, ಕಡು ಸುಗಂಧಗಳ; ಜಗವರಿಯೆ ಜಿತೇಂದ್ರಿಯತ್ವವ ಬಿಟ್ಟು, ಮಡದಿಯರ ಕೂಡಲು... ವ್ರತಕ್ಕೆ ಮುಪ್ಪಿನೊಳ್ ಮುಪ್ಪಾಯ್ತೆ.

ಪೌರಜನರ ಗುಂಪು–೩ : ಮಲೆತು ಬೆನ್ನಟ್ಟುವ ಮಹಾ ಅರಿಷಡುವರ್ಗಮನ್ ಗೆಲಲ್ ಅರಿಯದವನ್, ಆವ ಹಗೆಗಳಮ್ ಗೆಲುವೆ; ನಿನ್ನೊಳಗೆ ಕರಣವ ಸಂತವಿಡಲ್ ಅರಿಯದವನ್, ಆವ ದೇಶವಮ್ ಸಂತವಿಡುವೆ; ಸಲೆ ತಪಸ್ತೇಜದಿನ್ ಪುರುಷಾರ್ಥಕೋಶಮನ್ ಬಳಸಲ್ ಅರಿಯದನ್, ಆವ ತೇಜದಿಮ್ ಕೋಶಮಮ್ ಬಳಸಿದಪೆ. ಕಂಗೆಟ್ಟು, ಕಡುಪಾಪಿ ಮೂರ್ಖ ಕೌಶಿಕ ಕೇಳು... ಕೇಳ್.

ಪೌರಜನ : ಪುರದ ಪುಣ್ಯಮ್ ಪುರುಷರೂಪಿಂದೆ ಪೋಗುತಿದೆ... ಪರಿಜನದ ಭಾಗ್ಯ ಅಡವಿಗೆ ನಡೆಯುತಿದೆ... ಸಪ್ತ ಶರಧಿ ಪರಿವೃತ ಧರೆಯ ಸಿರಿಯ ಸೊಬಗು ಅಜ್ಞಾತವಾಸಕ್ಕೆ ಪೋಗುತಿದೆಕೋ... ಎರೆವ ದೀನ ಅನಾಥರ ಆನಂದ ಅಡಗುತಿದೆ... ನಿರುತವು ವರಮುನೀಂದ್ರರ ಯಾಗರಕ್ಷೆ ಬಲವು ಅಳಿಯುತಿದೆ.

(ಎಂದು ಒಂದಾಗಿ ಬಂದು ಸಂದಿಸಿ ನಿಂದ ಮಂದಿ ನೆರೆ ಮೊರೆಯಿಟ್ಟುದು. ವಸುಧೆ ಬಾಯ್ಬಿಡೆ... ದೆಸೆಗಳ್ ಅಸವಳಿದು ಮರುಗೆ... ನಿಟ್ಟಿಸಲಾರದೆ ಅಂಬರಮ್ ಕಂಬನಿಯನ್ ಉಗುಳೆ... ಶೋಕಿಸುವ ಪರಿಜನದ ಅಳಲನ್ ಆರಿಸುತ... ಸರದೋರಿ ಸಂತವಿಡುತ... ಮಸಗಿ ಪುರಮಮ್ ಮೀರಿ ಹೋಗುತ್ತ... ಹಿಂದೆ ಸಂದಿಸಿ ಬಪ್ಪ ಕೌಶಿಕನ ಕಂಡು ನಿಂದು, ಅವನೀಶನ್ ಒಸೆದು ನಿಲಿಸುವ ಭರದೊಳ್ ಒಂದೆರಡು ಮಾತನಾಡಿದನ್. ಅದ ಏನ್ ಬಣ್ಣಿಸುವೆನು.)

ಹರಿಶ್ಚಂದ್ರ : ಹಿಂದೆ ರಾಜ್ಯಮ್ ಗೆಯ್ವ ಗರ್ವದಿಮ್ ಹೊಲತಿಯರ ತಂದು ಕುಲವಮ್ ಕೆಡಿಸಲಾರದ ಅಳಲಿಮ್, ನಿಮ್ಮನ್ ಒಂದೊಂದು ವಿಧದಿ ದಟ್ಟಿಸಿ ಜರಿದು ಮಾರುತ್ತರಮ್ ಕೊಟ್ಟು, ಕೆಟ್ಟು ನುಡಿದು, ನಿಂದೆಗೆಯ್ದ ಅನ್ಯಾಯ ಪಾಪಿ ಚಂಡಾಲನ್... ಎನ್ನಿಂದ ಅಧಮರ್ ಆರಯ್ಯ... ಸರ್ವ ಅಪರಾಧಿ ಆನ್. ತಂದೆ, ಕರುಣಮ್ ಕೆಡದಿರು.

(ಎಂದು ಮುನಿಯನ್ ಹರಿಶ್ಚಂದ್ರನು ಬೇಡಿಕೊಂಡನು.)

ಹರಿಶ್ಚಂದ್ರ : (ಪುರಜನರನ್ನು ಕುರಿತು)

ಮನದೊಳಗೆ ಮರುಗದಿರಿ... ಚಿಂತಿಸದಿರಿ... ಅಳಲದಿರಿ... ಮುನಿಯದಿರಿ... ನೋಯದಿರಿ... ಧೃತಿಗೆಡದಿರಿ. ಈಗಳ್ ಎರಡನೆಯ ಶಿವನ್ ಎನಿಪ ಕೌಶಿಕನ್ ಒಡೆಯನಾದನ್. ಆತನ ಪಾದಪಂಕಜಕ್ಕೆ ಎನಗೆ ಬೆಸಕೈವಂತೆ ಬೆಸಕೈವುದು. ಅಂಜುವುದು. ವಿನಯಮನ್ ನುಡಿವುದು. ಓಲೈಸುತಿಹುದು.

(ಎಂದು ಪರಿಜನಕೆ ಕೈಮುಗಿದು ಧೈರ್ಯನಿಧಿ ಹರಿಶ್ಚಂದ್ರನೃಪನು ಎಯ್ದೆ ಬೇಡಿಕೊಂಡನ್.)

ಹರಿಶ್ಚಂದ್ರ : ಧರೆಗೆ ಅಧಿಕವೆನಿಪ ರವಿವಂಶದ ಇಕ್ವಾಕು ಭೂವರನು ಮೊದಲ್ ಅನ್ವಯಾಗತವಾಗಿ ಬಂದುದು ಈ ಪರಿವಾರ... ಈ ದೇಶ... ಈ ನಗರ. ಇಂದು ತನಕ ಆವ ಎಡರು ಬಡತನವನು ನೆರೆದು ಅರಿಯದಯ್ಯ. ನೀವಿನ್ನು ಇದಮ್ ರಕ್ಷಿಪುದು ಹೊರೆವುದು. ಇನಿತಮ್ ನಾ ನಿಮ್ಮಲ್ಲಿ ಬೇಡಿ ಪಡೆದೆ. ಎನಗೆ ಕರುಣಿಸು.

(ಎಂದು ಕೈಮುಗಿದು ಮುನಿಗೆ ಹರಿಶ್ಚಂದ್ರನು ಅಪ್ಪಯಿಸಿ ಕೊಟ್ಟನು.)

ಹರಿಶ್ಚಂದ್ರ : ಒಸೆದೀವ ತೆರಕಾರನ್ ಆರ್. ಆತನನ್ ನಿಯಾಮಿಸು ತಂದೆ.

(ಎನೆ ತನ್ನ ಶಿಷ್ಯಾಳಿಯೊಳು ನೋಡಿ... ಹುಸಿ ಅಸೂಯಾ ನೀಚವೃತ್ತಿ ನಿರ್ದಾಕ್ಷಿಣ್ಯ ನಿಷ್ಕರುಣ ಅನೀತಿಗಳಲಿ ಹೆಸರುಳ್ಳ ಹಿರಿಯ ನಕ್ಷತ್ರಕನ್ ಎನಿಪ್ಪ ಮಾನಿಸನ ಎಕ್ಕಟಿ ಕರೆದು... ಕೈವಿಡಿದು... ಕಿವಿಯೊಡ್ಡಿ, ವಸುಧಾಧಿಪತಿಯ ಬಳಿವಿಡಿದು ಕಳುಹಲು ಬುದ್ಧಿ ಕಲಿಸಿದನ್. ಅದ ಏನ್ ಪೊಗಳ್ವೆನು.)

ವಿಶ್ವಾಮಿತ್ರ : ಕೊಡುವ ಒಡವೆ ಬರಲಿ... ಬಾರದೆ ಕೆಡಲಿ; ಕಾನನದ ನಡುವೆ ತಗಹಿನಲಿ ಇರಿಸಿ, ಕೆಲವು ದಿನ ಉಪವಾಸ ಪಡಿಸಿರ್ದು... ಕೆಲವು ದಿನ ದೇಹವನ್ ಒಲ್ಲೆಂದು ನೆವವೊಡ್ಡಿ... ಕೆಲವು ದಿವಸ ನಡೆವಾಗ ದಾರಿ ತಪ್ಪಿಸಿ ತಿರಿಪಿ... ಕೆಲವು ದಿನ ಪಡಿಯ ಬೀಯಕ್ಕೆ ಆಣೆಯಿಟ್ಟು... ಇಂತು ಕೆಲವು ದಿನ ಕೆಡಿಸಿ ನುಡಿದು... ಅವಧಿಯು ಆಯ್ತೆಂದು ಧರೆ ಅರಿಯೆ ನೃಪನನ್ ಹುಸಿಕನ್ ಎನಿಸು. ಕರುಣಿಸದಿರ್ ಅನುಗೊಡದಿರ್ ಅಗಲದಿರು ಅನುಸರಿಸದಿರು ಬಟ್ಟೆಯೊರಲ್ ಎಡೆಗೆಯ್ಯದಿರು. ಕಡೆಗೆ ಆವ ಪರಿಯೊಳ್... ಆವಾವ ನಿಗ್ರಹ ನಿರೋಧ ಆಯಾಸ ಪಡಸುವ ಅಂದದಿ

ಮಾಳ್ಪುದು. ಗುರುಭಕ್ತನಾದಡೆ ಅತಿಬುದ್ಧಿಯುಳ್ಳವನಾದಡೆ ಅರಸನನ್ ಕೆಡಿಸಿ ಹುಸಿತೋರು...

(ಎಂದಡೆ)

ನಕ್ಷತ್ರಕ : ದೇವ, ಎನಗೆ ಅವನ್ ಕರಗುವನೆ.

ವಿಶ್ವಾಮಿತ್ರ : ನೇಮಕ್ಕೆ ನೀನಿರ್. ಆನ್ ಬಂದು ಕಾಡುವೆನ್. ಬಿಸಿಲಾಗಿ... ಬಿರುಗಾಳಿಯಾಗಿ... ಕಲುನೆಲವಾಗಿ... ವಿಷಮಾಗ್ನಿಯಾಗಿ... ನಾನಾ ಕ್ರೂರಮೃಗವಾಗಿ ಮಸಗಿ... ಘೋರಾರಣ್ಯವಾಗಿ ಗರ್ಜಿಸಿ... ಕವಿವ ಭೂತ ಬೇತಾಳರಾಗಿ... ಹಸಿವು ನೀರಡಿಕೆ ನಿದ್ರಾಲಸ್ಯವಾಗಿ ಸಂದಿಸಿ ಹೋಗಿ... ಹೊಕ್ಕಲ್ಲಿ ಹೊಕ್ಕು... ಧಾವತಿಗೊಳಿಸಿ ಭೂಭುಜನನ್ ಹುಸಿಗೆ ಹೂಂಕೊಳಿಸುವೆನ್. ಎನ್ನಿಂದ ಬಲ್ಲಿದರ್ ಅದಾರ್.

(ಎಂದನು. ನಕ್ಷತ್ರಕನಿಗೆ ಸೂಚನೆಯನ್ನು ಕೊಟ್ಟ ನಂತರ, ಹರಿಶ್ಚಂದ್ರನ ಬಳಿಗೆ ಅವನನ್ನು ಕರೆದುಕೊಂಡು ಬಂದು, ಹರಿಶ್ಚಂದ್ರನನ್ನು ಕುರಿತು...)

ವಿಶ್ವಾಮಿತ್ರ : ಈತನ್ ಈ ಬಂದನ್. ಬೇರೊಬ್ಬನಲ್ಲ. ಆಯಾಸಕಾರನ್ ಅತಿಗರುವನ್ ಅತಿಸುಖಿ. ಈತನ್ ಎಂದುದಮ್ ಮೀರದಿರು. ಧನವ ಕೊಡು. ನಡೆ ಅರಸ ಹೋಗು.

(ಎನಲು, ಮುನಿವರನ ಚರಣಕೆ ಎರಗಿ ನೀರೆ ಸತಿ, ಸುತ ಮಂತ್ರಿವೆರಸಿ ರಿಪುಬಲ ಸೂರೆಕಾರನ್ ಒಲವಿಮ್ ತಿರುಗಿ ನಡೆವಾಗ, ಮಂದಿ ಬಾಯಾರುತ್ತ... ಚೀರುತ್ತ... ಗೋಳಿಡುತ್ತ... ಅಳುತ ಎದ್ದು ನಡೆದುದು. ಏನ್ ಬಣ್ಣಿಸುವೆನು.

ಜನಪತಿ ಹರಿಶ್ಚಂದ್ರನ್ ಎಲ್ಲವಮ್ ಮುನಿಗಿತ್ತು ಅರಣ್ಯಕ್ಕೆ ನಡೆವಾಗಲು... ಆ ಪುರಜನಮ್ ಪರಿಜನಮ್ ಜನನಿ ಹಿಂಗಿದ ಶಿಶುಗೆ... ಸಸಿ ಬಿಟ್ಟ ಕುಮುದಕ್ಕೆ... ದಿನನಾಥನ್ ಉಳಿದ ಕಮಲಕ್ಕೆ... ನೆರೆ ಸಿರಿ ಸಮೆದ ಮನೆಗೆ... ಜೀವಮ್ ತೊಲಗಿದ ಒಡಲಿಂಗೆ... ತೈಲವಿಂಗಿದ ದೀಪ್ತಿಗೆ... ಉದಕ ಅರತ ಘನ ತಟಾಕಕ್ಕೆ... ಫಲ ಇಳುಹಿದ ಮರಕ್ಕೆ... ನೆಟ್ಟನೆ ಜೋಡಿಯಾದುದು.)

❖

ಪ್ರಸಂಗ–೧೪

ಕಾಳ್ಗಿಚ್ಚಿನ ಸುಳಿಯಲ್ಲಿ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಪತ್ನೀ ಪುತ್ರ ವಿಕ್ರಯ, ಆತ್ಮ ವಿಕ್ರಯ' ಎಂಬ ಏಳನೆಯ ಅಧ್ಯಾಯದ ೧ ರಿಂದ ೧೧ನೇ ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಲಾಳ ದೇಶದ ರಾಜನಾಗಿದ್ದವನು. ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜಸಂಪತ್ತನ್ನು ನೀಡಿ, ಈಗ ಯಾವುದೇ ರಾಜ್ಯವಾಗಲಿ ಇಲ್ಲವೇ ಸಂಪತ್ತಾಗಲಿ ಇಲ್ಲದ ವ್ಯಕ್ತಿ.

ಚಂದ್ರಮತಿ : ಹರಿಶ್ಚಂದ್ರನ ಹೆಂಡತಿ.

ಕಾಳ್ಗಿಚ್ಚಿನ ಸುಳಿಯಲ್ಲಿ

ಮಂತ್ರಿ ಎಡೆವಿಡದೆ ದಾರಿ ಅರುಪಲು... ಮುಂದೆ ಸುತನ್... ಎಡದ ದೆಸೆಯಲಿ ಹಿಂದೆ ನಿಜಾಂಗನೆ ಬರೆ... ಭೂಮಿಯೊಡೆಯನ್ ಒಡವೆಗಳ ಒಡೆತನಂಗಳನ್ ಒಡಂಬಟ್ಟು ಮುನಿಗಿತ್ತ ಚಿಂತೆ ತನ್ನ ಬಿಡೆ... ದಕ್ಷಿಣವ ಬಿಟ್ಟು 'ದಕ್ಷಿಣಾರ್ಥಂಗಳಮ್ ಕೊಡುವೆನ್' ಎಂಬ ಉತ್ತರವನ್ ಉತ್ತರಿಸಲ್... ಆರುವಮ್ ನೆರವನ್ ಹಾರದ ಧೀರ ಉತ್ತರಮ್ ಪಿಡಿದು ಆ ಕಾಂತಾರದೊಳಗೆ ನಡೆದನ್.

ನಡೆಗೆಡುವ ಸುತನನ್ ಅಡಿಗೆ ಎತ್ತಿಕೊಂಬ... ನಿಜ ಸತಿಯನ್ ಅಡಿಗಡಿಗೆ ಬೋಳೈಪ... ಬಳಲುವ ಚಮೂಪತಿಯನ್ ಅಡಿಗಡಿಗೆ ಬಿಡದೆ ಉಪಚರಿಪ... ಅತಿ ಬಿಸಿಲು ಗಾಳಿ ಕಲು ಮುಳು ಕ್ಷುತ್ ಪಿಪಾಸೆ ಜಾಡ್ಯತೆಗಳ್ ಎಂಬ ಇಂತಿವರ ಕಾಟದಿಮ್ ಮೊಳೆವ ಚಿತ್ತದ ಆವೇಶದ ಅಗ್ರದ ಭರದಲಿ... ಧಾವತಿಯನ್ ಅರಿಯದೆ ಭೂಮಿಪನ್ ಅಕಟಕಟ ಕಾಲಕ್ಕೆ ಕೈಮುಗಿಯುತ ನಡೆದನ್.

ಮಂದೈಪ ಬಿಸಿಲ ಬಿಸಿಯಿಮ್ ನೆತ್ತಿ; ನೆಲದ ಬಿಸಿಯಿಂದ ಕಾಲ್; ಕಡೆಗಣಿಸಿ ಕವಿವ ಕಾದ ಎಲರ ಬಿಸಿಯಿಂದ ದೇಹಮ್; ಕ್ಷುಧಾ ಅನಲನ ಬಿಸಿಯಿಂದ ಒಳಗು; ತೃಷೆಯ ಬಿಸಿಯಿಂದ ಬಾಯಿ ಬೆಂದು ಬಿರಿದು; ಅರಳುತ್ತ ಸಾಯುತ್ತ ನೋಯುತ್ತ ನಿಂದು ನಡೆದು... ಅಳುಕುತ್ತ ಬಳುಕುತ್ತ ಬರಬರಲು ಮುಂದೆ ಬಳಿಕ ಏನ್ ಪೊಗಳ್ವೆನ್... ಅಕಟ... ನಿಷ್ಕರುಣ ಮುನಿ ನೆನೆದ ಕುಟಿಲದ ಕುಂದನು.

ದಾವಾನಲನ್ ಕುತ್ತುರಾಗಿರ್ದ ಹೆಮ್ಮೆಳೆಗಳಮ್ ಸುಡುತ; ಬೆಳೆವೆತ್ತ ಬೆಟ್ಟವ

ಸೀಳ್ದು ಸೆಕ್ಕೆಗಳೆಯುತ್ತ; ಹುಲುವೆತ್ತ ದರಿಗಳ ಕರಿಕುವರಿಸುತ್ತ; ಬೆಳೆದ ಮರದ ಇಡುಕುರೊಳು ನಿಂದು ಉರುಹುತ; ಹೊತ್ತುತ್ತ ಹೊಗೆಯುತ್ತ ಹಬ್ಬುತ್ತ ಹರಿದು ನೆಗೆಯುತ್ತ, ಗಗನವನು ತುಡುಕುತ್ತ, ಮತ್ತೆ ಅಂತು ಅಸತ್ಯಕಾಂತಾರ ದಾವಾನಲನನು ಅಡಸಿ ಸುತ್ತ ಮುತ್ತಿತ್ತು.

ಹರಿಶ್ಚಂದ್ರ : ಮುಟ್ಟಿ ಕಾಶಿಯನು ಹೊಕ್ಕವನಲ್ಲ; ಮುನಿ ರಿಣವ ಕೊಟ್ಟಾತನಲ್ಲ; ದಾನದ ಭೂಮಿಯಿಂದ ಪೊರಮಟ್ಟಾತನಲ್ಲ; ಆಯು ತುಂಬಿ ಮಡಿದವನಲ್ಲ; ಹೋಹಡೆ ಆನ್ ಒಬ್ಬನ್ ಅಸುವ ಬಿಟ್ಟಾತನಲ್ಲ; ನಿಜ... ಸತಿಸುತರ್ ಮಂತ್ರಿ ಸಹ ನಟ್ಟಡವಿಯೊಳಗೆ ದಳ್ಳುರಿ ಹೊಯ್ದು ದುರ್ಮರಣವಟ್ಟು ಹೋಹಂತೆ ಆದುದೇ...

(ಎಂದು ನೃಪತಿ ಮರುಗುತ್ತ ಮತ್ತೆ ಇಂತು ಎಂದನು.)

ಕಡಗಿ ಕರ್ಬೊಗೆ ಸುತ್ತಿ, ದಳ್ಳುರಿಗಳ್ ಅಲೆದು, ಕೆಂಗಿಡಿ ಕೆದರಿ, ಕೆಂಡಂಗಳ್ ಅಡಸಿ ಸುಡೆ, ಮಿಡುಮಿಡುನೆ ಮಿಡುಕಿ, ಬಾಯ್ಬಿಟ್ಟು ಒರಲಿ ಕೆಡೆದು, ಒಡಲು ಮಡಿದು, ಕೈಕಾಲ್ ಬೆಂದು, ಸುಕ್ಕಿ ಸುಗಿದು ಮಡದಿ ಸುತರ್ ಅಳಿವುದನು ಕಣ್ಣಾರೆ ಕಂಡು, ನಾನ್ ಕಡೆಯಲಿ ಅಳಿವುದರಿಂದ ಮುನ್ನ ಈ ಬೇಗೆಯೊಳಗೆ ಅಡಗುವೆನ್... ಹಿಡಿಯಬೇಡ... ಉಮ್ಮಳಿಸಬೇಡ.

(ಎಂದು ನೃಪ ಬೀಳಲು ಅನುವಾದನು. ಆಗ ಚಂದ್ರಮತಿಯು ಹರಿಶ್ಚಂದ್ರನನ್ನು ಕುರಿತು...)

ಚಂದ್ರಮತಿ : ಭೂಭುಜ, ಮುಳಿದು ಮೊಗೆದು ಎಲ್ಲರಮ್ ಕೊಲ್ಲದೆ, ಇಂದು ಎನ್ನನ್ ಒಬ್ಬಳನ ಕೊಂದಪುದೆ. ನಿಮ್ಮ ಕೂಡ ಸರಿಯೊಳು ಜೀವವಮ್ ಬಿಡುವುದು ಉಚಿತವಲ್ಲಮ್... ಬಳಿಕ ಬಿಡುವುದು ಅತ್ಯಧಮತನವು... ಎಳಸಿ ಮುತ್ತೈದೆತನದಲಿ ಮುಂದೆ ಹೋದಪೆನ್ ಕಳುಹಿಕೊಡಬೇಕು.

(ಎಂದು ಗಂಡನನ್ ಪತಿವ್ರತೆಯರ ಆನಂದನಿಧಿ ಚಂದ್ರಮತಿ ಲಲ್ಲೆಗರೆದು ಮೆಯ್ಯಿಕ್ಕಿ ಬೇಡಿಕೊಂಡಳು. ದೆಸೆಗಳಿಗೆ ನಮಿಸಿ, ದೈವಕ್ಕೆ ಎರಗಿ, ರವಿಗೆ ವಂದಿಸಿ...)

ಚಂದ್ರಮತಿ : ಕೋಟಿ ಭವಭವದೊಳ್ ಎನಗೆ ಈ ಹರಿಶ್ಚಂದ್ರ ವಸುಧೇಶನೇ ಗಂಡನಾಗಲಿ... ದಿಟಮ್ ಲೋಹಿತಾಶ್ವನೇ ಮಗನಾಗಲಿ...

ವಸುಸತ್ಯಕೀರ್ತಿಯೇ ಮಂತ್ರಿಯಾಗಲಿ... ತರುಣ ಶಶಿಮೌಳಿಯೇ ದೈವವಾಗಲಿ... ಎಮ್ಮ ಇಳೆಯ ಪಾಲಿಸುವ ವಿಶ್ವಾಮಿತ್ರ ನಿತ್ಯನಾಗಲಿ...

(ಎನುತ ಬೇಡಿಕೊಂಡು ಇಂತು ಎಂದಳು.)

ಚಂದ್ರಮತಿ : ಪೊಡವೀಶ ಕೇಳ್, ಉಭಯ ಕುಲ ಶುದ್ಧೆಯಲ್ಲದಿರ್ದಡೆ... ನಿನ್ನನಲ್ಲದೆ ಅನ್ಯರನು ಲೆಕ್ಕಿಸಿದೆನಾದಡೆ... ಹಿಂದೆ ನಿನಗೆ ಒಂದನ್ ಇಕ್ಕಿ ನಾನೊಂದನ್ ಉಂಡಡೆ... ಮೂರು ಕರಣವರಿಯೆ ಮೃಡನಲ್ಲದೆ ಅನ್ಯದೈವಕ್ಕೆ ನಮಿಸಿದಡೆ... ದಾವಾಗ್ನಿ ಎನ್ನ ಹೊಡೆದು ಮುಕ್ಕುವುದು... ಮೇಣ್ ಅಲ್ಲದಿರ್ದಡೆ ಬಟ್ಟೆಗೊಟ್ಟಪುದು ಕೇಳ್.

(ಎಂದು ಬೊಬ್ಬೆಗೊಡುವ ಆ ಪೊತ್ತನ್ ಏನ್ ಪೊಗಳ್ವೆನು. ತರುಣಿಯ ಮನಮ್ ಬೆದರಬೇಕೆಂದು ದಳ್ಳುರಿ ನೆಗೆದು ಗಗನಮಮ್ ತೀವಿ ಸುತ್ತಿ ಮುತ್ತಿರೆ... ಕಂಡು ಹರಿದು ಹೊಕ್ಕಳು ಹೊಕ್ಕಳ್... ಎಲೆಲೆ ಶಿವಶಿವ ಮಹಾದೇವ ಬಗೆಯದೆ ಹೊಕ್ಕಡೆ, ತರುಣ ಸೂರ್ಯನ್ ಕತ್ತಲೆಯನೆ ಹೊಕ್ಕಂತಾಯ್ತು. ನೆರೆದ ಕೌಶಿಕನ ಕೃತಕಾಗ್ನಿ ಹರೆದೋಡಿ ಭಾಪುರೆ ಬಟ್ಟೆಗೊಟ್ಟುದು ಎಂಬಾಗಳ್ ಉತ್ತಮರ ಮುಂದೆ ಆವ ಠಕ್ಕು ಇರಲಾಪುದು. ಸುರರ ಹೂಮಳೆಯ ತಂಪಿಮ್ ನೆಲನ ಬಿಸಿಯಾರಿತು. ಉರಿಯ ನೆವದಿಮ್ ಸತಿಯ ಶುಚಿತನವನ್ ಅರಿದು ಸಂತಸದಲಿ ಭೂವರನ್ ಅಪ್ಪಿದನ್. ಮಂತ್ರಿ ಎರಗಿದನ್. ಸುತನು ನಲಿದಾಡಿದನ್.)

ಹರಿಶ್ಚಂದ್ರ : ಹರಕೃಪೆಯೊಳ್ ಅಗ್ನಿಭಯ ಎಂತಕ್ಕಿದು ಒಮ್ಮಿಂಗೆ ಪರಿಹರಿಸಿತು. ಉಗ್ರಮುನಿಗೆ ಇತ್ತ ಅವಧಿ ಸನಿಹವಾಯ್ತು. ಇರಬಾರದು. ಉರವಣಿಸಿ ನಡೆ ನಡೆ.

(ಎನುತ್ತ ಹರಿತಂದು ವಿಂಧ್ಯವ ಕಳಿದರು.)

❖

ಪ್ರಸಂಗ–೧೫

ಕಾಶಿ ನಗರದಲ್ಲಿ ಹರಿಶ್ಚಂದ್ರ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಪತ್ನೀ ಪುತ್ರ ವಿಕ್ರಯ–ಆತ್ಮ ವಿಕ್ರಯ' ಎಂಬ ಏಳನೆಯ ಅಧ್ಯಾಯದ ೧೨ ರಿಂದ ೨೧ ಪದ್ಯದ ವರೆಗಿನ ಹತ್ತು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ನಕ್ಷತ್ರಕ : ವಿಶ್ವಾಮಿತ್ರ ಮುನಿಯ ಆಪ್ತ ಶಿಷ್ಯ. ಹರಿಶ್ಚಂದ್ರನಿಂದ ಬರಬೇಕಾದ ಸಂಪತ್ತನ್ನು ವಸೂಲು ಮಾಡಲೆಂದು ನೇಮಕಗೊಂಡಿರುವ ತೆರಕಾರ.

ಹರಿಶ್ಚಂದ್ರ : ಅಯೋಧ್ಯಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಲಾಳ ದೇಶದ ರಾಜನಾಗಿದ್ದವನು. ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜ ಸಂಪತ್ತನ್ನು ನೀಡಿ, ಯಾವುದೇ ರಾಜ್ಯವಾಗಲಿ ಇಲ್ಲವೇ ಸಂಪತ್ತಾಗಲಿ ಇಲ್ಲದ ವ್ಯಕ್ತಿ.

ಚಂದ್ರಮತಿ : ಹರಿಶ್ಚಂದ್ರನ ಹೆಂಡತಿ.

ಕಾಶಿ ನಗರದಲ್ಲಿ ಹರಿಶ್ಚಂದ್ರ

ಹಲವು ನಗರಂಗಳಮ್... ಹಲವು ಅರಣ್ಯಂಗಳಮ್... ಹಲವು ಗಿರಿಗಳ ಕಳಿದು ನಡೆತರಲು... ಮುಂದೆ ಘುಳುಘುಳು ಧ್ವಾನದಿಂದೆ ಎಸೆವ ಗಂಗಾನದಿ 'ನುತ ಕಲಿಮಲಕುಲಾಪಕರ್ಷಣೆ ಆನು... ವಿಪುಳ ಪಾತಕ ಕೋಟಿ ಕೋಟಿಯೆಂಬ ಜಲಜವನ ಚಂದ್ರಕಳೆ ಆನು... ಭವಭಯ ಕುಧರ ಕುಲಿಶಾಭಿಧಾನೆಯು ಆನ್' ಎಂದು ಧರೆಗೆ ಅರುಪಲೆಂದು ಉಲಿವಂತೆ ವಿರಾಜಿಸಿದಳು.

"ಆರಾದಡು ಬಿಡೆ ಕೇಳ್ದಡೆ ಅಘಹರಮ್... ನೆನೆಯೆ ಪುಣ್ಯೌಘ... ನುಡಿದಡೆ ಸರ್ವಸಿದ್ಧಿ... ಕಂಡಡೆ ಜನ್ಮ ನಾಶ... ಪೊಗಳ್ದಡೆ ಸುರೇಂದ್ರತ್ವ... ಸೋಂಕಿದಡೆ ಕಮಲಜ ಪದವಿ... ಮರೆದು ಒಮ್ಮೆ ಕುಡಿತೆಗೊಂಡು ಕುಡಿದನಾದಡೆ ಮುಕ್ತಿ... ಅವಗಾಹ ಇರ್ದನಾದಡೆ ಗಣೇಶತ್ವ... ಸಾರ್ದಡೆ ಈ ಗಂಗೆಯಿಂದೆ ಮಹಾರುದ್ರತ್ವ ಪಡೆವರ್ ಎಂಬ ಮಹಿಮೆಗೆ ವೇದಮತವು ಸಾಕ್ಷಿ. ಅವಗಾಹ ಇರ್ದುಮ್ ಭವ ಭಯಾಂಬುಧಿಯಮ್ ಉತ್ತರಿಸುವಂತೆ ಉತ್ತರಿಸಿ, ಈ ಗಂಗೆಯಿಂದೆ ಕೃತಾರ್ಥತೆಯನ್ ಎಯ್ದುತಿಪ್ಪವರನ್ ಈಕ್ಷಿಸಿ, ಇಂದು ನರಕಿಗಳು ತನ್ನೊಳಗೆ ತೊಳೆದ ದೋಷ ತವಿಲಾದುದು. ಪತಿಹಿತವೆಯಹ ಸುದತಿ, ಅನೃತವನ್ ಅರಿಯದ ಅವನೀಶನ್, ಉಭಯ ಕುಲ ಶುದ್ಧನಹ ಕುವರನ್, ಈ ಸ್ವಾಮಿ ಹಿತವನಹ ಮಂತ್ರಿಯ ಸೋಂಕು ತನಗೆ ಕೈಸಾರ್ದುದು" ಎಂದು ಗಂಗೆ ಹೆಚ್ಚಿದಳು.

ನಡೆಯೊಡೆ ಮದ್ದು ವಿಷವೊಡಲಿಂಗೆ ಹಿತವೆಂಬ ನುಡಿಯಂತೆ, ಸುಖವಿಲ್ಲ ಪುಣ್ಯವುಂಟು ಉಳಿದ ಹಲವೆಡೆಯ ಸುಕ್ಷೇತ್ರಂಗಳೊಳಗೆ ಅವರ ಪರಿಯಲ್ಲ.

ಸುಖವುಂಟು ಪುಣ್ಯವುಂಟು ಕುಡಿವ ಪಾದೋದಕಮ್ ಪನ್ನೀರ ಪಾನವಾದಡೆ ಧರಿಸುವ ಪ್ರಸಾದಮ್ ಸುಧಾಪಿಂಡವಾದಡೆ ಬಿಡುವರ್ ಆರ್ ಎನಿಪ್ಪಂತೆ ಜನದ ಇಹಪರಕೆ ಕಾಶೀಕ್ಷೇತ್ರವು ಸೊಗಸು. ಮುಗಿಲ ಬಸುರಮ್ ಬಗಿದು ನೆಗೆದೊಗೆದು ಮೀರಿ ಮೆರೆವ ಅಗಣಿತ ವೃಷಧ್ವಜಂಗಳ; ಸೂರ್ಯಕೋಟಿಯಮ್ ತೆಗೆದವು ಎಂಬಂತೆ ಮಾರ್ಪೊಳೆವ ಹೊಂಗಳಸಂಗಳ;

ಎಸೆವ ಶಿವನಿಳಯಂಗಳ ಸೊಗಸಿಗೆ ಎಡೆಯಾಡಿ ಆಡುತ ಪಾಡುತ ಎಯ್ತಪ್ಪ; ಪೊಗಳಿ ಪೊಡಮಡುವ; ಬಲಗೊಂಬ; ನೋಡುವ ನಲಿವ ನಗುವ ನಾನಾ ಜನವನ್ ಒತ್ತರಿಸಿ ನಡೆತಂದು ವಿಶ್ವಪತಿಯನ್ ಕಂಡನು. ನೋಡಿ ಪರಮಾನಂದ ಮೂಡಿ; ಸುಖರಸದೊಳ್ ಓಲಾಡಿ; ಕೀರ್ತಿಸಿ ಹರಸಿ ಹಾಡಿ ಸದ್ಭಕ್ತಿಯಮ್ ಬೇಡಿ; ಮನದೊಳಗೆ ಮಾತಾಡಿ; ನೆರೆ ಬಿನ್ನಹಮ್ ಮಾಡಿ; ಪ್ರಸಾದ ಫಲವ ಸೂಡಿ; ಪರಿಣಾಮವಮ್ ಮಾಡಿ; ದುಃಸ್ಥಿತಿಯ ನೀಗಾಡಿ; ಭವಜಲವನ್ ಈಸಾಡಿ; ಬಲ್ಪಿಮ್ ಮನಮ್ ಮೂಡಿ ಬೀಳ್ಕೊಂಡು, ಸಂತಸದಿ ಉಳಿದ ಲಿಂಗಂಗಳಮ್ ನೋಡುತ ಮರಳಿದನ್. ಗಡಿಗೆಟ್ಟ ಲಿಂಗಂಗಳ ಒಪ್ಪಕ್ಕೆ; ಭೋಗಂಗಳ ಅಡಕಕ್ಕೆ; ಮಂಗಳದ ಮಸಕಕ್ಕೆ; ರಚನೆಗಳ ಸಡಗರಕೆ ಬೆರಗಾಗುತ ಎಲ್ಲಾ ನಿರೋಧಮಮ್ ಮರೆದು ನೋಡುತ್ತ ಅರಸನು ನಡೆಯುತಿರಲ್ ಇದಿರೆದ್ದು ಮಾರಿಯಂದದಿ ಬಂದು

ನಕ್ಷತ್ರಕ : ಹೊನ್ನನ್ ಕೊಡು. ಇನ್ನು ತಳುವಿದಡೆ ಎನ್ನ ಪತಿ ಎನಗೆ ಕಡುಮುಳಿವನ್.

(ಎಂದು ಜರೆಯುತ್ತ ನಕ್ಷತ್ರಕನ್ ಸೆರಗಮ್ ತುಡುಕಿ ಹಿಡಿದನು. ಕೊಟ್ಟ ಅವಧಿಯಮ್ ನೆನೆದು ನೋಡಿ ಹವ್ವನೆ ಹಾರಿ...)

ಹರಿಶ್ಚಂದ್ರ : ಮುಟ್ಟಿ ಬಂದುದು ದಿನಮ್. ಕೈಕೊಂಡ ತೆರದವನ್ ಕಟ್ಟುಗ್ರನ್. ಅಭ್ಯಾಸದವರಿಲ್ಲ. ಚಾಚಲ್ ಅಡಪಿಲ್ಲ. ನಾನ್ ಕುಲಧರ್ಮವ ಬಿಟ್ಟು ತಿರಿವವನಲ್ಲ. ಓಲೈಸಿ ನೆರೆ ಲಜ್ಜೆಗೆಟ್ಟು ಬೇಡುವಡೆ ಇಲ್ಲಿ ದೊರೆಯಿಲ್ಲ. ಕೃಷಿಯಿಂದ ಹುಟ್ಟಿಸುವೆನ್ ಎಂಬಡೆ ಎಡೆಯಿಲ್ಲ. ಇನ್ನು ಏನ್ ಗೆಯ್ವೆನ್.

(ಎಂದು ಅರಸನು ಮರುಗಿದನ್. ಹರಿಶ್ಚಂದ್ರನ ಸಂಕಟವನ್ನು ಕಂಡ ಚಂದ್ರಮತಿಯು...)

ಚಂದ್ರಮತಿ : (ತನ್ನ ಮನದಲ್ಲಿ)

ಏನ್ ಗೆಯ್ವೆ. ಚಿಂತಾಗ್ನಿ ಉರಿಯ ಹೊಯ್ಲಿಮ್ ಕರಗಿ ಹೋಗದಿರನ್. ಎಚ್ಚರಿಸಬೇಕು.

(ಎಂದುಕೊಂಡು, ಹರಿಶ್ಚಂದ್ರನಿಗೆ ಒಂದು ಸಲಹೆಯನ್ನು ನೀಡುತ್ತಾಳೆ.)

ಅವಧಿ ಮೇಗೆ ಎರಡು ಜಾವ. ಇದರೊಳಗೆ ತಿದ್ದುವ ಬುದ್ಧಿಯಮ್ ಕಾಣಬೇಕಲ್ಲದೆ ಮೂಗುವಟ್ಟಿರ್ದಡೆ ಏನ್ ಅಹುದು.

ಹರಿಶ್ಚಂದ್ರ : ಇರದೆ ಬಳಿಕ ಏನ್ ಗೆಯ್ವೆ ಹೇಳ್.

ಚಂದ್ರಮತಿ : ಸಾಲದಲಿ ಪೋದನಿತು ಪೋಗಲಿ. ಎಮ್ಮಿಬ್ಬರಮ್ ಮಾರಿ, ಬಳಿಕ ಉಳಿದುದಮ್ ಕಾಣು. ನಡೆ ನಡೆ.

(ಎಂದಳು. ಆಗ ಹರಿಶ್ಚಂದ್ರನು ಅವಳ ಸಲಹೆಯನ್ನು ನಿರಾಕರಿಸುತ್ತ...)

ಹರಿಶ್ಚಂದ್ರ : ಕಡುನಿರೋಧಂಗೊಳಿಸಿ ದೇಶದಿಮ್ ಪರದೇಶಕೆ ಒಡವರಿಸಿತಲ್ಲದೆ, ಆನ್ ಇರ್ದು ನಿಮ್ಮನ್ ಮಾರುಗೊಡಲಾಪನೇ.

ಚಂದ್ರಮತಿ : ಎಲೆ ಮರುಳೆ, ಸರ್ವಕ್ಕೆ ಮೊದಲು ಸತಿಸುತರು... ತನ್ನ ಒಡಲು ಕಡೆ. ಸತ್ಯಕ್ಕೆ ನೇಮಕ್ಕೆ ಬಂಧನಕ್ಕೆ ಎಡೆಯಲ್ ಅಳುಪಲು ಶಿವ ಮನಮ್ ನೋಳ್ಪನೈ. ಲಜ್ಜೆಗೆಡದೆ ಎಮ್ಮ ಮಾರು ಮತ್ತೆ ಆದುದಾಗಲಿ.

(ಎಂದಡೆ ಅವನಿಪನ್ ಒಡಂಬಟ್ಟನು.)

❖

ಪ್ರಸಂಗ–೧೬

ಪತ್ನೀ ಪುತ್ರ ವಿಕ್ರಯ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಪತ್ನೀ ಪುತ್ರ ವಿಕ್ರಯ–ಆತ್ಮ ವಿಕ್ರಯ' ಎಂಬ ಏಳನೆಯ ಅಧ್ಯಾಯದ ೨೨ ರಿಂದ ೨೮ ಪದ್ಯದ ವರೆಗಿನ ಏಳು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.)

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಲಾಳ ದೇಶದ ರಾಜನಾಗಿದ್ದವನು. ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜ್ಯ ಸಂಪತ್ತನ್ನು ನೀಡಿ, ಈಗ ಯಾವುದೇ ರಾಜ್ಯವಾಗಲಿ ಇಲ್ಲವೇ ಸಂಪತ್ತಾಗಲಿ ಇಲ್ಲದ ವ್ಯಕ್ತಿ.

ವಿಪ್ರ : ಅಗ್ನಿದೇವ. ವಿಶ್ವಾಮಿತ್ರನ ಆದೇಶದಂತೆ ದೇವಲೋಕದ ಅಗ್ನಿದೇವನು ಬ್ರಾಹ್ಮಣನ ವೇಷವನ್ನು ತೊಟ್ಟು ಕಾಶಿ ನಗರಕ್ಕೆ ಬಂದಿದ್ದಾನೆ.

ನಕ್ಷತ್ರಕ : ವಿಶ್ವಾಮಿತ್ರ ಮುನಿಯ ಆಪ್ತ ಶಿಷ್ಯ. ಹರಿಶ್ಚಂದ್ರನಿಂದ ಬರಬೇಕಾದ ಸಂಪತ್ತನ್ನು ವಸೂಲು ಮಾಡಲೆಂದು ನೇಮಕಗೊಂಡಿರುವ ತೆರಕಾರ.

ಲೋಹಿತಾಶ್ವ : ಚಂದ್ರಮತಿ ಮತ್ತು ಹರಿಶ್ಚಂದ್ರ ದಂಪತಿಯ ಮಗ.

ಪತ್ನೀ ಪುತ್ರ ವಿಕ್ರಯ

ಪೊಡವಿಪನ್ ಸತಿಸುತರ ತಲೆಗಳಲಿ ಹುಲುಗಟ್ಟಿ, ನಾಚಿಕೆಯನ್ ಉಳಿದು ಕೈವಿಡಿದು ಮುಂದೊಡ್ಡಿ ತೋರುತಮ್, ಗಡಿಗಳೊಳು ಬೀದಿಯೊಳು ಸಂದಿಯೊಳು... ಪುರದೊಳ್ ಓರಂತೆ ನಡೆನಡೆದು...

ಹರಿಶ್ಚಂದ್ರ : ಪೊಡವಿಪ ಹರಿಶ್ಚಂದ್ರ ಭೂವರನ ತನಯನನ್ ಮಡದಿಯನ್ ಮಾರುಗೊಂಬ ಅಧಿಕರಿಲ್ಲಾ.

(ಎಂದು ಸತ್ಯನಿಧಿ ಭೂಪಾಲನು ನಿಡುಸರದೊಳ್ ಒರಲಿ, ಜನಕೆ ಅರುಪುತ್ತ ತೊಳಲಿದನ್. ಅನಿಮಿತ್ತ ಮುನಿವ ಮುನಿಪನ ಬೆಸದೊಳ್ ಅಗ್ನಿ ವಿಪ್ರನ ವೇಷದಿಂದ ಬಂದು...)

ವಿಪ್ರ : ಆವಾವ ಸತಿಪುತ್ರರ್ ಎನಿಪರ್ ಅವರ್.

ಹರಿಶ್ಚಂದ್ರ : ಇವರ್ ಇಬ್ಬರ್.

ವಿಪ್ರ : ಇವನ್ ಅಬಲನ್... ಈ ವನಿತೆ ಮುಪ್ಪಿನವಳು... ಮನೆಯೊಳ್ ಇನ್ನು ಒಳ್ಳಿತಹರ್ ಆರುಂಟು ತಾ.

ಹರಿಶ್ಚಂದ್ರ : ಎನಗೆ ಉಳ್ಳರ್ ಇವರಯ್ಯ. ಕೊಂಡು ಎನ್ನ ಸಾಕಿಕೊಳ್ಳು.

ವಿಪ್ರ : ಬೆಲೆಯ ಹೇಳ್... ಎನಗೆ ಲಾಗಾಗೆ ಏಳೆಂಟು ದಿನಕೆ ಹೊನ್ ಕೊಡುವೆನ್.

ಹರಿಶ್ಚಂದ್ರ : ಇಂದು ಬೈಗಿಂದೊಳಗೆ ರಾಸಿ ಹೊನ್ನಮ್ ಕೊಡುವೆನ್ ಎಂದು ಭಾಷೆಯನ್ ಇತ್ತೆನ್. ಈಯದಿರ್ದಡೆ ಹಾನಿ ಬಂದಪುದು.

ಲಾಗನರಸದೆ ನಿನ್ನ ಮನಕೆ ಬಂದನಿತು ಅರ್ಥಮಮ್ ಕರುಣಿಸು ತಂದೆ.

ವಿಪ್ರ : ವನಿತೆಗೆ ಇಪ್ಪತ್ತು ಸಾಸಿರವನ್... ಈ ನಂದನಂಗೆ ಇಪ್ಪತ್ತು ಸಾಸಿರವನ್ ಈವೆನ್.

ಹರಿಶ್ಚಂದ್ರ : ಎಮ್ಮ ತೆರಕಾರಗೆ ಬಂದುದು ಎನಿಸುವುದು.

ನಕ್ಷತ್ರಿಕ : ಬಂದುದು.

ಹರಿಶ್ಚಂದ್ರ : ಬಂದುದೇ ನಕ್ಷತ್ರ ನಾಮ ಮುನಿ.

ನಕ್ಷತ್ರಿಕ : ಏನು ಬಂದುದು. ಆನ್ ಬಂದ ದಿನ ಮೊದಲ್ ಇಂದು ತನಕ ಎನ್ನ ಹಿಂದುಳಿದ ಬತ್ತಾಯ ಬಂದುದು. ಎನ್ನ ಒಡೆಯಂಗೆ ಕೊಡುವ ಹೊಸ ರಾಸಿ ಹೊನ್ನ ತಂದೀಗ ಕೊಡು. ಕೊಡದಡೆ... ಇಲ್ಲ ಎನ್ನು... ಹೋಗಬೇಕು.

ಹರಿಶ್ಚಂದ್ರ : ಈ ಹೊನ್ನ ಬತ್ತಾಯಕ್ಕೆ ತೆರುವನಲ್ಲ.

ನಕ್ಷತ್ರಿಕ : ಈ ಮಧ್ಯಸ್ಥ ವಿಪ್ರ ಮೆಚ್ಚಲು ಕೊಂಬೆನ್. ಅವನೀಶ ಕೇಳ್.

ಹರಿಶ್ಚಂದ್ರ : ತಾತ, ಈತನ್ ಇನಿತು ಅರ್ಥವಮ್ ಕೊಂಬುದು ಉಚಿತವೆ ಪಕ್ಷೀಕರಿಸದೆ ಹೇಳು.

ವಿಪ್ರ : ನಾಲ್ಕೆರಡು ಮಾತಂಗದ ಉದ್ದದ ಅರ್ಥದ ಸಾಲವಮ್ ಬೇಡ ಬಂದವಂಗೆ ಇನಿತು ಘನವೇ. ಭೂತಳಾಧಿಪ, ಮುನಿದು ಪೇಳೆನ್. ಇರ್ದುದನ್ ಎಂಬೆನ್. ಈತಗೆ ಇದು ಮರಿಯಾದೆ.

ಹರಿಶ್ಚಂದ್ರ : ಜಲವನುಳಿದ ಅಬುಜಕೆ ಆ ತರಣಿ ಮುನಿವನ್ ಎನೆ ನೆಲೆಗೆಟ್ಟು ಬಂದವರ್ಗೆ ಮುನಿಯದವರ್ ಆರ್.

ವಿಪ್ರ : ಜನಪ, ವಿನಯದಿಮ್ ಕಂಡುದಮ್ ನುಡಿದಡೆ ಎನ್ನನ್ ನಿನಗೆ ಮುನಿದನ್ ಎಂದೆಂಬೆ. ನೀನ್ ಮುನಿದು ಮಾಡುವುದೇನು. ಎಮ್ಮ ಒಡವೆಯಮ್ ಕೊಂಡೀಗ ಹೋಹೆವು...

(ಎಂದು ನುಡಿದು, ಚಂದ್ರಮತಿಯನ್ನು ಕುರಿತು)

ಏಳ್, ಎಲಗೆ... ಸವುಡಿದೊತ್ತೆ... ಮನೆಯ ಕೆಲಸಕ್ಕೆ ನಡೆ. ಏಳ್, ಎಲವೊ ಚೆಣ್ಣ, ಹುಲು ಹುಳ್ಳಿ ತರಲು ಕಾನನಕೆ ಹೋಗು.

(ಎಂದು ಅಕಟ ಆ ಕಪಟವಟು ವೇಷಮಯದ ಅನಿಲಸಖನು ಮಾನಿನಿಯನ್ ಕುಮಾರನನ್ ಜರೆದನ್.)

ಲೋಹಿತಾಶ್ವ : ಹೋಹೆನೇ ತಂದೆ... ಬೊಪ್ಪಯ್ಯ...

(ಎಂದೆಂದು ಕಡುನೇಹದಿಂದ ಅಪ್ಪಿ, ಕರುಣಮ್ ತೋರಿ ಕಂಬನಿಯ ಕಾಹೊನಲೊಳ್ ಅದ್ದುವ ಕುಮಾರನನ್, ಕಾಲ್ಗೆರಗಿ ತಲೆವಾಗಿನಿಂದ ಸತಿಯ...)

ವಿಪ್ರ : ಬೇಹೊಡೆಯ ನಾನಿರಲು... ಮಾರಿದವನನ್ ಕೇಳ್ವ ಸಾಹಸವ ನೋಡ.

(ಎಂದು ಕೆಡೆಹೊಯ್ದು ನೂಕಿ, ಅವನಿಪನ ಮನ ಮರುಗ ಬೇಹುದೆಂದು ಜರೆಯುತ್ತ ನಿಜಗೇಹಕ್ಕೆ ಕೊಂಡೊಯ್ದನ್.)

❖

ಪ್ರಸಂಗ–೧೭

ಹರಿಶ್ಚಂದ್ರನ ಮಾರಾಟ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಪತ್ನೀ ಪುತ್ರ ವಿಕ್ರಯ–ಆತ್ಮ ವಿಕ್ರಯ' ಎಂಬ ಏಳನೆಯ ಅಧ್ಯಾಯದ ೨೯ ರಿಂದ ೪೧ ಪದ್ಯದ ವರೆಗಿನ ಹದಿಮೂರು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಲಾಳ ದೇಶದ ರಾಜನಾಗಿದ್ದವನು. ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜ್ಯ ಸಂಪತ್ತನ್ನು ನೀಡಿ, ಈಗ ಯಾವುದೇ ರಾಜ್ಯವಾಗಲಿ ಇಲ್ಲವೇ ಸಂಪತ್ತಾಗಲಿ ಇಲ್ಲದ ವ್ಯಕ್ತಿ.

ವಿಶ್ವಾಮಿತ್ರ : ಒಬ್ಬ ಮುನಿ.

ವೀರಬಾಹುಕ : ಕಾಶಿನಗರದ ಮಸಣದ ಒಡೆಯ.

ಹಡಪಿಗ : ವೀರಬಾಹುಕನ ದಾಸ.

ನಕ್ಷತ್ರಕ : ವಿಶ್ವಾಮಿತ್ರ ಮುನಿಯ ಆಪ್ತ ಶಿಷ್ಯ. ಹರಿಶ್ಚಂದ್ರನಿಂದ ಬರಬೇಕಾದ ಸಂಪತ್ತನ್ನು ವಸೂಲು ಮಾಡಲೆಂದು ನೇಮಕಗೊಂಡಿರುವ ತೆರಕಾರ.

ಹರಿಶ್ಚಂದ್ರನ ಮಾರಾಟ

ಹರಿಶ್ಚಂದ್ರ : ಖಗವಂಶದ ಇಕ್ಷ್ವಾಕು ಭೂವರನ ಪೀಳಿಗೆಯೊಳ್ ಒಗೆದ ತ್ರಿಶಂಕು ವಸುಧಾಧಿ ನಾಯಕನ ಹೆಮ್ಮಗ ಹರಿಶ್ಚಂದ್ರನನ್ ಮಾರುಗೊಂಡು ಓಲೈಸಿಕೊಂಬರಿಲ್ಲಾ...

(ಎನುತ್ತ ಬಗೆಬಗೆದು ಪುರದ ಕೇರಿಯ ಮನೆಯೊಳ್... ಅಡ್ಡ ಬೀದಿಗಳ ಬೀದಿಯ... ನಿಂದ ನೆರವಿಗಳ ಜನಮುಮನ್ ಮಿಗೆ ಕೇಳಿಸುತ್ತ... ಮಧ್ಯಾಹ್ನ ಮೊದಲಾಗಿ ಕಡೆ ಹಗಲ ತನಕ ತೊಳಲಿದನು. ಆಗ ವಿಶ್ವಾಮಿತ್ರ ಮುನಿಯು ತನ್ನಲ್ಲಿಯೇ ಈ ರೀತಿ ಅಂದುಕೊಳ್ಳತೊಡಗುತ್ತಾನೆ.)

ವಿಶ್ವಾಮಿತ್ರ : ಮಡದಿಯರನ್ ಇರಿಸಿಕೋ ಎಂದು ನಾನ್ ಬೇಡಿಕೊಂಡಡೆ, ಮೀರಿ ಹೊಲತಿಯರನ್ ಒಲ್ಲೆನ್ ಎಂಬ ಅಣ್ಣನನ್ ಕಡೆಗೆ ಅನಾಮಿಕನ ಕಿಂಕರನಾಗಿ ಸುಡುಗಾಡ ಕಾವಂತೆ ಮಾಳ್ಪೆನ್.

(ಎಂದು ಕಡು ಮೂರ್ಖ ಕೌಶಿಕನ್ ಕಾಲನನ್ ಕರೆದು...)

ವಿಶ್ವಾಮಿತ್ರ : ನೀನ್ ಬಿಡದೆ ಅನಾಮಿಕನಾಗಿ ಧನವನಿತ್ತು ಅರಸನನ್ ಮುನ್ನೊಂದು ತಿಂಗಳ್ ತಡೆ.

(ಎಂದು ಎನೆ ಕಳುಹೆ ಬಂದು, ಆ ಹೊತ್ತ ಹಾರಿರ್ದನು. ಕಾರೊಡಲು, ಕೆಂಗಣ್ಣು, ಕುಡಿದು ಕೊಬ್ಬಿದ ಬಸುರು, ಕೆದರಿದ ತಲೆಯನ್ ಅಡಸಿ ಸುತ್ತಿದ ಮುಪ್ಪುರಿಯ ಬಾರಿ ಕಡ್ಡಣಿಗೆಯ, ಪಿಡಿದ ಸಂಬಳಿಗೋಲು, ದಡದಡಿಸಿ ತರಹರಿಸುವ ಅಡಿಯ, ಬಿಡದೆ ಥರ್ರನೆ ತೇಗಿ, ನೆರವಿಯನ್ ಬಯ್ವ ಬಿರುನುಡಿಯ ಕಲಿ ವೀರಬಾಹುಕ ಬರುತ್ತಮ್...)

ವೀರ ಬಾಹುಕ : ಮಾರುವಡೆ ನಾನ್ ಕೊಂಡು ಹೊಂಗೊಡುವೆ.

(ಎಂದು ತನ್ನ ಹಡಪಿಗನಿಂದ ಕೇಳಿಸಿದನು.)

ಹಡಪಿಗ : ಕೊಡುವಾತನ್ ಆರು?... ಬೆಲೆ ಏನು?... ಮಾರಿಸಿಕೊಂಬ ಪೊಡವೀಶನ್ ಎಂಬನ್ ಆರೋ?... ವೀರಬಾಹು ಕೇಳ್ದಡೆ ಈಗಳ್ ಕೊಂಬನ್.

(ಎಂದು ಎನೆ, ನೃಪನ್ ಬೆರಗಾಗಿ...)

ಹರಿಶ್ಚಂದ್ರ : ಸೂರ್ಯವಂಶದಲಿ ಹುಟ್ಟಿ, ಮೃಡಮೂರ್ತಿ ವಾಸಿಷ್ಠ ಮುನಿಯ ಕಾರುಣ್ಯಮನ್ ಪಡೆದ ಎನ್ನನ್... ಈ ಹೊಲೆಯ ಮಾರುಗೊಂಡಪೆನೆ ಎಂದು ನುಡಿವ ಬಲುಹಮ್ ನೋಡು ನೋಡು.

(ಎಂದು ಕಡುಮುಳಿದು ಅವನೀಶನು ಕೋಪಿಸಿದನ್.)

ಹರಿಶ್ಚಂದ್ರ : ನಡುಗದೆ, ಅಂಜದೆ, ಹೆದರದೆ, ಓಸರಿಸದೆ, ಅಕಟಕಟ... ಕಡೆಯ ಹೊಲೆಯನ್ ಮೇರೆದಪ್ಪಿ ಬಂದು, ಎನ್ನ ತನ್ನೊಡೆಯಂಗೆ ಈಗಳ್ ದಾಸನಾಗು ಎಂದೆಂಬುದು... ಇದು ಕಾಲಗುಣವೋ... ಎನ್ನನು ಎಡೆಗೊಂಡ ಕರ್ಮಫಲವೋ. ಕಡೆಗೆ ಮೆಣಸು ಹುಳಿತಡೆ ಜೋಳದಿಮ್ ಕುಂದೆ. ನೋಡು ನೋಡು...

(ಎಂದು ಅವನಿಪನ್ ಘುಡುಘುಡಿಸಿ ಕೋಪಾಟೋಪದಿಮ್ ಅನಾಮಿಕನನು ಜರೆದು ಝುಂಕಿಸಿದನ್. ಕೇಳಿ ಬಂದು; ಹರಿಶ್ಚಂದ್ರನ ಆಡಿದ ಮಾತನ್ನು ವೀರಬಾಹುಕ ಕೇಳಿ, ಹರಿಶ್ಚಂದ್ರನ ಬಳಿಗೆ ಬಂದು...)

ವೀರಬಾಹುಕ : ಆರ ಜರೆದಪೆ?

ಹರಿಶ್ಚಂದ್ರ : ನಿನ್ನ ಹಡಪಾಳಿಯನ್.

ವೀರಬಾಹುಕ : ಅದೇಕೆ?

ಹರಿಶ್ಚಂದ್ರ : ಎನ್ನನ್ ಅರಿದರಿದು... ಅನಾಮಿಕಂಗೆ ಆಳಾದಪಾ ಎಂದು ನುಡಿದನ್. ಕೀಳು ಮೇಲಮ್ ನೋಡದೆ ಇಂತು ಎನಬಹುದೆ?

ವೀರಬಾಹುಕ : ಕೀಳಾರು... ಮೇಲಾರು... ಹದುಳವಿಪ್ಪ ಆನು ಚಾಂಡಾಳನೋ... ಹುಸಿಯ ಹೊಲೆಯಮ್ ಹೊರುವ ನೀನು ಚಾಂಡಾಳನೋ... ಹೇಳ್.

ಹರಿಶ್ಚಂದ್ರ : ಆನ್ ಈಗ ಹುಸಿದುದೇನ್?

ವೀರಬಾಹುಕ : ಹೊನ್ನುಳ್ಳ ಧನಿಕರ್ ಆರಾದೊಡಮ್ ಕೊಂಬವರ್ ಬನ್ನಿ. ಎನ್ನನ್ ಮಾರುಗುಡುವೆನ್ ಎಂದೆನೆ... ದಿಟಮ್ ನನ್ನಿಯುಳ್ಳವನೆಂದು ಬಗೆದು ಬೇಡಿದೆನ್. ಉತ್ತಮ ದ್ವಿಜರು ಕೊಂಬುದೆಂದು ಮುನ್ನ ನೀನಾಡಿತುಂಟೇ. ಹೇಳು ಭೂಪಾಲ, ನಿನ್ನ ನುಡಿ ನಿನಗೆ ಹಗೆಯಾಯ್ತು. ಕಂಡುದನಲ್ಲದೆ ಎನ್ನೆ. ಹೊಲೆಹುಸಿಯ ಹೊರುವವನ್ ನೀ ಹೊಲೆಯನಲ್ಲದೆ ಬಳಿಕ್ಕ ಆರ್.

(ಎಂದನು.)

ಹರಿಶ್ಚಂದ್ರ : (ತನ್ನಲ್ಲಿಯೇ)

ವಿತ್ತವುಳ್ಳವರ್ಗಳ್ ಎನ್ನನ್ ಕೊಂಬುದೆಂದು ನುಡಿಯಿತ್ತು ದಿಟವು. ಇನ್ನು ನಾನ್ ಒಗಡಿಸಿದೆನಾದಡೆ ಅನಿಮಿತ್ತ ಹುಸಿ ಬಂದಪುದು. ಅವಧಿಗೆಟ್ಟಡೆ ಹಿಂದೆ ಮುನಿಗೆ ನಾನ್ ದಾನವಾಗಿ ಇತ್ತ ರಾಜ್ಯಮ್ ನಿರರ್ಥಮ್ ಪೋಗಿ, ಮೇಲೆ ಹುಸಿ ಹೊತ್ತಪ್ಪುದು. ಅದರಿಂದ ಮುನ್ನವೆ ಅನಾಮಿಕನ ಚಿತ್ತವಮ್ ಪಡೆವೆನ್.

(ಎಂದು ಓತು ಅವನೀಶನು ವೀರಬಾಹುಕನನ್ ಕರೆದನ್.)

ವೀರಬಾಹುಕ : ಮತ್ತೇಕೆ ಹುಸಿಯ ಹೊಲೆಹೊರೆಕಾರ ಕರೆದೆ.

ಹರಿಶ್ಚಂದ್ರ : ತೆತ್ತ ಸಾಲದ ಭರದೊಳ್ ಅರಿಯದೆ ಆಡಿದ ನುಡಿಗೆ ಹೊತ್ತ ಹುಸಿ ಅಳಿಯಬೇಕು.

ವೀರಬಾಹುಕ : ನಿನ್ನ ಕುಲವಳಿದಲ್ಲದೆ ಅಳಿಯದು.

ಹರಿಶ್ಚಂದ್ರ : ಇನ್ನು ಚಿತ್ತೈಸಿ ಕೇಳ್, ನಾಡ ಮದ್ದಮ್ ತಿಂದು ಕುತ್ತ ಕೆಡದಿರಬಹುದೆ... ಸಾಲವಳಿಯಲು ಧನವನಿತ್ತು ರಕ್ಷಿಸು ಸಾಕು. ರವಿಕುಲಕೆ ಕುಂದು ಇಂದು ಬಂದಡಮ್ ಬರಲಿ.

ವೀರಬಾಹುಕ : ಸಾಲವೇನು ನೂರಾರು ಸಾವಿರವೆ?

ಹರಿಶ್ಚಂದ್ರ : ಕರಿಯನ್ ಏರಿ... ಕವಡೆ ಮೇಲಕ್ಕೆ ಮಿಡಿದಡೆ... ಬಿಡೆ ಹಬ್ಬಿ ಹಾರಿದ ಅನಿತು ಉದ್ದಕ್ಕೆ ಹೊಸ ಹೊನ್ನ ರಾಶಿಯನ್ ಸುರಿದು ಈಯಬೇಹುದು.

ವೀರಬಾಹುಕ : ಏರಿದ ಅರ್ಥವನ್ ಈವೆ. ನೀನ್ ಮಾಳ್ಪುದೇನ್... ಆಡಿ ತೋರು.

ಹರಿಶ್ಚಂದ್ರ : ಆವ ಹೊತ್ತು... ಆವ ಕೆಲಸವನ್ ಈಯಲ್... ಆರೆನ್ ಎನ್ನದೆ ಮಾಳ್ಪೆನ್.

(ಅಂತು ಆ ಧನಿಕನು ಒಡವೆಯನ್ ಈವೆನ್ ಎಂದನ್.)

ವೀರಬಾಹುಕ : ನುಡಿದ ಒಡವೆಯಮ್ ಕೊಡುವೆನ್.

ಹರಿಶ್ಚಂದ್ರ : ನುಡಿದ ಅಂದದಿನ್ ನಡೆವೆನ್.

(ಎಂದು ಒಬ್ಬರು ಒಬ್ಬರಿಗೆ ನಂಬುಗೆಯಿತ್ತು, ವೀರಬಾಹು ಒಡೆಯನಾದನ್; ಇನಕುಲ ಹರಿಶ್ಚಂದ್ರನೃಪನು ಆಳಾದನ್. ಹಸ್ತಿಯಮ್ ಪಿಡಿದು... ಕವಡೆಯ ಮಿಡಿದು... ನಡೆ ನೋಡಿ... ತಂದು... ಹೆಡಗೆ ಹೆಡಗೆಗಳೊಳ್ ಅಡಿಗಡಿಗೆ ಅಡಕಿ... ಎಡೆವಿಡದೆ ಅರ್ಥವನು ಸುರಿದನ್. ಕೌಶಿಕಮುನಿಯ ತೆರಕಾರ ತಲೆದೂಗಲು)

ಹರಿಶ್ಚಂದ್ರ : ಮುನಿಪ ಚಿತ್ತೈಸು, ಇತ್ತ ಅವಧಿಗೆ ಇನ್ನೆರಡು ಗಳಿಗೆ ಹೊತ್ತಿದೆ. ವಸ್ತುವಿದೆ... ಸಂದುದೇ. ನುಡಿದು ಹುಸಿಯಿತ್ತಿಲ್ಲಲೇ. ತಂದೆ, ಆಯಸಮ್ ಪಡಿಸಿದೆನು. ತಡೆದೆನ್. ನಾನು ಅಳಲಿಸಿದೆ. ಅತ್ಯಂತ ಮೂಢನ್. ಎನ್ನ ಅವಗುಣವನ್ ಉಳಿದು, ತಮ್ಮ ಉತ್ತಮಿಕೆಯನ್ ಮರೆದು ಕರುಣಿಸುವುದು. ಎಮ್ಮ ಹೆತ್ತಯ್ಯ ಕೌಶಿಕಂಗೆ ಓವಿ ಬಿನ್ನೈಸು.

(ಎಂದು ಭೂಭುಜನ್ ಕೈಮುಗಿದನು.)

ನಕ್ಷತ್ರಕ : ಇನ್ನೇಕೆ ನುಡಿದು ಎನ್ನ ನಾಚಿಸುವೆ ಭೂಪಾಲ. ನಿನ್ನಂತೆ ಸತ್ಯರ್ ಉತ್ತಮರ್ ಅಧಿಕ ಧೀವಶಿಗಳ್ ಉನ್ನತ ಶಿವೈಕ್ಯರ್ ಇಳೆಯೊಳಗಿಲ್ಲ. ನಿನ್ನಿಷ್ಟ ಸಿದ್ಧಿ ಕೈಸಾರಲಿ.

(ಎಂದು ತನ್ನ ಮನವುಕ್ಕಿ ಹಾರೈಸಿ, ಹರುಷದಿ ಹರಸಿ, ಹೊನ್ನನ್ ಅಡಕಲು ಅತ್ತಲ್ ಹೋದನ್. ಅಮರರು ಮರುಗಲು, ಇತ್ತಲು ನನ್ನಿಕಾರನ್ ಪತಿಯ ಹಿಂದೆ ನಡೆದು ಹೊಲಗೇರಿಗೆ ಎಯ್ತಂದನ್.)

❖

ಪ್ರಸಂಗ–೧೮

ಸುಡುಗಾಡಿನ ಕಾವಲುಗಾರನಾಗಿ ಹರಿಶ್ಚಂದ್ರ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಪತ್ನೀ ಪುತ್ರ ವಿಕ್ರಯ–ಆತ್ಮ ವಿಕ್ರಯ' ಎಂಬ ಏಳನೆಯ ಅಧ್ಯಾಯದ ೪೨ ರಿಂದ ೪೮ ಪದ್ಯದ ವರೆಗಿನ ಏಳು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ವೀರಬಾಹುಕ : ಕಾಶಿನಗರದಲ್ಲಿರುವ ಸುಡುಗಾಡಿನ ಒಡೆಯ.

ಹರಿಶ್ಚಂದ್ರ : ಅಯೋಧ್ಯಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಲಾಳ ದೇಶದ ರಾಜನಾಗಿದ್ದವನು. ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜ ಸಂಪತ್ತನ್ನು ನೀಡಿ, ಈಗ ಯಾವುದೇ ರಾಜ್ಯವಾಗಲಿ ಇಲ್ಲವೇ ಸಂಪತ್ತಾಗಲಿ ಇಲ್ಲದ ವ್ಯಕ್ತಿ. ಈಗ ವೀರಬಾಹುಕನ ದಾಸನಾಗಿದ್ದಾನೆ.

ಸುಡುಗಾಡಿನ ಕಾವಲುಗಾರನಾಗಿ ಹರಿಶ್ಚಂದ್ರ

ಹಲವು ಎಲುವಿನ ಎಕ್ಕೆಗಳ ಬಿಗಿದು, ಬೀವಮ್ ನೆಯ್ದ ನುಲಿಯ ಮಂಚದ ಮೇಲೆ ಹಂದೊಗಲ ಹಾಸಿನೊಳು ಹೊಲೆಯನ್ ಓಲಗವಿತ್ತು... ನರಕಪಾಲದೊಳು ತೀವಿದ ಹಸಿಯ ಗೋಮಾಂಸವ ಮೆಲುತ... ಮದ್ಯವನ್ ಈಂಟುತಿರ್ಪ ಪತಿಯನ್ ಕಂಡು, ನೆಲದಲ್ಲಿ ಕುಳ್ಳಿರ್ದ ರವಿಕುಲನ ಹೆಗಲ ಮೇಲೆ ಎಲೆಲೆ ಕಾಲನ್ ನೀಡಿದನು. ಕಾಲನ್ ಒಂದೆರಡು ಕುಲಗಿರಿಯ ಭಾರವೆನಲು... ಏಳ್ ಅಬುಧಿ ಕಡೆಯಾದ ಸರ್ವರಾಜ್ಯಶ್ರೀಯ ಮೇಳದೊಳು ವೀರಸಿರಿಯಮ್ ವಿಜಯಸಿರಿಗಳಮ್ ತಾಳಲಾಪ ಅದಟುಳ್ಳ ಭುಜವು ಅನಾಮಿಕನ ಪದಭಾರಕ್ಕೆ ಬಸವಳಿವುದೇ... ಕಾಳೆಗದೊಳ್ ಅರಿನೃಪರ ಖಂಡಮಮ್ ರುಧಿರಮಮ್ ಕಾಳಿಜವನ್ ಅಡಗನ್ ಒಳ್ಗರುಳ ಹಿಣಿಲಮ್ ಹೊರುವ ಬಾಳ ಪಡೆದಿಪ್ಪನ್... ಈ ಹೇಯಕ್ಕೆ ಹೇಸುವನೆ ಎನಿಸಿ ಲೆಕ್ಕಿಸದೆ ಇರ್ದನು.

ವೀರಬಾಹುಕ : ಎಲವೊ, ನೀ ದಿಟ ರಾಯನಾದಡೆ ಅಳುಕದೆ ಬಂದು ನೆಲದಲ್ಲಿ ಕುಳ್ಳಿರ್ಪೆ... ಸತ್ಕುಲಜನಾದಡಮ್ ಹೊಲೆಯನಾದ ಎನ್ನ ಕಾಲಮ್ ಹೊರುವೆ... ಮುನಿಮತೋಚಿತ ಶಿವಾರ್ಚಕನಾದಡೆ ಹೊಲಸಿನ ಅಟ್ಟುಳಿಗೆ ಕೊಕ್ಕರಿಸದಿಹೆ... ರಾಜ್ಯಸಿರಿ ತೊಲಗಿದಡೆ ಪೂರ್ವಗುಣ ಅಳಿವುದೇ... ಮುನ್ನ ಭವಿನಿಲಯದೊಳು ತಲೆಮುಟ್ಟಿ ದುಡಿದ ಗಾವದಿಯೈಸೆ... ಭೂಪಾಲನಲ್ಲ.

ಹರಿಶ್ಚಂದ್ರ : ಹಸುವನ್ ಅಳಿ; ಹಾರುವನನ್ ಇರಿ; ಮಾತೆಪಿತರ ಬಾಧಿಸು; ಸುತನ ತಿವಿ; ಸತಿಯ ಕೊಲು; ಮಾರಿಗೆ ಒರೆಗಟ್ಟು; ವಿಷವ ಕುಡಿ; ಹಾವ ಹಿಡಿ; ಹುಲಿಗೆ ಮಲೆ; ದಳ್ಳುರಿಯೊಳ್ ಅಡಗು ಹೋಗು ಎಂದು ಒಡೆಯನು ಬೆಸಸಿದಡೆ ನಾನ್ ಆರೆನ್ ಎನಬಾರದು ಎಂಬಾಗಳ್, ಅಸವಸದೊಳ್ ಇವಕೆ ಅಲಸಿ ಸೆಡೆದೆನಾದಡೆ, ಕೊಟ್ಟ ಬೆಸನ ನಡಸುವೆನ್ ಎಂಬ ನುಡಿ ಸಡಿಲವಾಗದೇ ಹೇಳ್.

ವೀರಬಾಹುಕ : ಏನನ್ ಆನ್ ಬೆಸನ್ ಇತ್ತೊಡೆ, ನೀನ್ ಅದ ಬಿಡದೆ ನಡಸುವಾ...

ಹರಿಶ್ಚಂದ್ರ : ನಡಸದಿರ್ದಡೆ ನೀನು ಕೊಟ್ಟ ಒಡವೆ ದಾನವೇ... ಬಗೆಯೆ ಕರಿ ಹೂಳುವನಿತು ಅರ್ಥಮಮ್ ಕೊಂಡು, ಮಾಡದೆ ಮಾಣ್ದಡೆ, ಈ ನೆಲಮ್ ಹೊರುವುದೇ... ನಾನಿತ್ತ ನಂಬುಗೆಗೆ ಹಾನಿಯಾಗದೆ ಹೋಹುದೇ.

ವೀರಬಾಹುಕ : ಸುಡುಗಾಡನ್ ಆನಂದದಿಮ್ ಕಾದುಕೊಂಡಿರುತಿರು.

(ಎಂದು ಬೆಸಸಿದನು. ಮನದನುವರಿಯಲು...)

ಹರಿಶ್ಚಂದ್ರ : ಸುಡುಗಾಡ ಕಾಹವು ಎಂದೆ. ಏನ್ ಅದರ ಪಂಥಮಮ್ ನುಡಿದು ಪೇಳ್.

ವೀರಬಾಹು : ಸುಡುವ ನೆಲದೆರೆಯ ಹಾಗ, ಹೆಣದ ಉಡಿಗೆಯಮ್ ತಂದು ಎನಗೆ ಕೊಡುವುದು. ಆ ತಲೆಯಕ್ಕಿಯಮ್ ನಿನ್ನ ಸಂಬಳಕ್ಕೆ ಪಡಿಯಾಗಿ ಕೊಂಡುಂಬದು. ಅಳುಪದಿರು. ಹುಸಿಯದಿರು. ಬಿಡದಿರು.

(ಎಂದು ವನಧಿಮುದ್ರಿತ ಧರಾಪತಿಗೆ ಉಡುಗೊರೆಯ ವೀಳೆಯದ ಕೂಡೆ ತಾ ಹಿಡಿದ ಸಂಬಳಿಗೋಲ ಮುದ್ರೆಗೊಟ್ಟನ್.)

ವೀರಬಾಹು : ಪುರದೊಳಗೆ ಎಯ್ದಿ ಜನವರಿಯೆ ಹೆಸರ ಹೇಳುತ್ತ... ಸಾರುತ್ತ... ಮೈಗುರುಹ ತೋರಿಸುತ... ಹರೆಯ ಮೊಳಗಿಸುತ, ಮೆರೆಯುತ್ತ... ಹೋಗು... ಏಳ್.

(ಎಂದು ಕಳುಪೆ, ಎಲ್ಲವ ಮಾಡುತ ಪೊರಮಟ್ಟನ್.)

❖

ಪ್ರಸಂಗ–೧೯

ಸುಡುಗಾಡಿನ ಕಾಯಕದಲ್ಲಿ ಹರಿಶ್ಚಂದ್ರ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಪತ್ನೀ ಪುತ್ರ ವಿಕ್ರಯ–ಆತ್ಮ ವಿಕ್ರಯ' ಎಂಬ ಏಳನೆಯ ಅಧ್ಯಾಯದ ೪೮ ರಿಂದ ೫೩ ಪದ್ಯದವರೆಗಿನ ಆರು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಲಾಳ ದೇಶದ ರಾಜನಾಗಿದ್ದವನು. ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜ ಸಂಪತ್ತನ್ನು ನೀಡಿ, ಯಾವುದೇ ರಾಜ್ಯವಾಗಲಿ ಇಲ್ಲವೇ ಸಂಪತ್ತಾಗಲಿ ಇಲ್ಲದ ವ್ಯಕ್ತಿ. ಈಗ ವೀರಬಾಹುಕನ ದಾಸನಾಗಿದ್ದಾನೆ.

ಜನಗಳು : ಸುಡುಗಾಡಿನಲ್ಲಿ ಹೆಣಗಳನ್ನು ಒಪ್ಪಮಾಡಲೆಂದು ಬಂದಿರುವ ಜನಗಳು.

ಸುಡುಗಾಡಿನ ಕಾಯಕದಲ್ಲಿ ಹರಿಶ್ಚಂದ್ರ

ನಸುಕುಸಿದ ದೇಹ... ಕಂಕರಿಗೋಲನ್ ಇರಿದು ಕೈವಿಡದೆ ಬಾರಿಸುತ ಸತ್ಯಸಂಪನ್ನನು...

ಹರಿಶ್ಚಂದ್ರ : ಸಂಬಳಿ... ಸಂಬಳಿ...

(ಎಂದೆಂದು ಕೊಸರುತಿಹ ಬಾಯ್ವೆರಸಿ ಬೀದಿ ಬೀದಿಯೊಳು ಸುಳಿದನ್.)

ಹರಿಶ್ಚಂದ್ರ : ಚಾವಡಿ ಹೆಣನ ನೆಲದೆರೆಯ ಹಾಗ... ಶವದ ಉಡಿಗೆ... ಸುಡುಗಾಡಿನ ಅಧಿಕಾರ ಮುದ್ರೆ... ಕಟ್ಟಾಣೆ... ಹೆಣನ ತಲೆಯಕ್ಕಿ ಎನಗಾಯ್ತು. ಎನ್ನ ಮರಹಿಕ್ಕಿ ರಾತ್ರಿಯೊಳು ಸುಟ್ಟಿರಾದಡೆ ತೆರೆಯನು ಕೊಡದಿರ್ದಡೆ ಎನ್ನಾಣೆ... ಪತಿ ವೀರಬಾಹುವಿನ ಮಡದಿಯರ ಕಾಲಾಣೆ... ಮೀರಿದಡೆ ಕೆಡಹಿ ತಡೆಗಡಿವನ್.

(ಎಂದು ಊರೊಳಗೆ ಸಾರುತ್ತ ತೋರುತ್ತ ರುದ್ರಭೂಮಿಗೆ ನಡೆದನು. ಕಂಗೆ ಭಯವೆನೆ ಬೇವ ಹೆಣನ ಹಿಂಡುಗಳ; ಮೂಗಿಂಗೆ ಹಗೆಯೆನೆ ಕವಿವ ಕರ್ಬೊಗೆಯ; ಕೌರ ಕರ್ಣಂಗಳಿಗೆ ಅಮಂಗಲ ಧ್ವನಿಗಳನ್ ನೆರಪುವ ಅಬಲೆಯರ ಮಲ್ಲಾಮಲ್ಲಿ; ಹಿಂಗದೆ ಒತ್ತೊತ್ತೆಯಿಮ್ ಮೆಯ್ಯನ್ ಒತ್ತುವ ಜನದ ಜಂಗುಳಿಯ; ಕಾಲೂರಲ್ ಅರಿದು ಎನಿಸಿ ನೆರೆದ

ಹಲವಂಗದ ಅಸ್ಥಿಗಳನ್ ಆಯುತ್ತ ಅವನೀಶನು ಆ ಸುಡುಗಾಡನ್ ಹೊಕ್ಕನ್... ನಡೆದು ಹರಿಹರಿದು...)

ಹರಿಶ್ಚಂದ್ರ : ಎಲವೊ... ಸುಡದಿರು ಸುಡದಿರ್... ಸುಟ್ಟಡೆ, ನಿಮಗೆ ವೀರಬಾಹುಕನಾಣೆ.

(ಎಂದು ಭೂಪಾಲನು ಜಡಿಜಡಿದು ನೆಲದೆರೆಯ ಹಾಗವನ್, ಉಟ್ಟ ಕಪ್ಪಡಂಗಳನು, ತಲೆಯಕ್ಕಿಗಳನು ಸುಡುಗಾಡೊಳ್ ಅಲ್ಲಲ್ಲಿಗೆ ಎಯ್ದಿ, ಬೇಡುವ ಭರದೊಳ್ ಎಡಹುತ್ತ, ತಾಗುತ್ತಲ್, ಎಲುಗಳಮ್ ಮೆಟ್ಟಿ, ತನ್ನಡಿಗಳ್ ಅಳುಕಿತ್ತನ್ ಅರಿಯದೆ ಹಾಸುಹೊಕ್ಕು ಹರಿದಾಡಿದನ್.

ಮತ್ತಾಗ ವಸುಧಾಧೀಶನು ಸುಡುಗಾಡ ನಟ್ಟನಡುವಣ ದಡದ ತುತ್ತತುದಿಯೊಳು ವಿಮಾನದ ಮರಂಗಳನು, ಕಡೆ ಹೊತ್ತಿ ಉರಿಕರಿಯಾದ ಕರಿಕೊಳ್ಳಿಗಳನ್ ಅರಸಿ ತಂದು, ಸಿದ್ದಿಗೆಯ ನುಲಿಯ ಒತ್ತಿ ಬಿಗಿಬಿಗಿದು ಹಂಜರಿಸಿ, ತವಗವನ್ ಇಕ್ಕಿ, ಮತ್ತೆ ಮೇಲೊಂದು ತಲೆಗುಡಿಸಲಮ್ ಕಟ್ಟಿ, ಇರುಳು ಹಗಲೆನ್ನದೆ ಒಡೆಯನ್ ಬೆಸಸಿದಂತೆ ಕಾಯುತ್ತಿರ್ದನ್.

ವರ ವಾರಣಾಸಿ ಮಧ್ಯವೆ ಲಾಳದೇಶ; ಅಚ್ಚರಿಯ ಕಾಶೀಪುರವು ಅಯೋಧ್ಯೆ; ಶ್ಮಶಾನಧರೆಯು ಅರಮನೆ; ಪ್ರೇತಗಾಹಿನ ತವಗ ಮಣಿಪೀಠ; ಪರಿಣಾಮವೆ ಆರೋಗಣೆ; ಪರಮಧೃತಿ ಚತುರಂಗಸೇನೆ; ಸಂಬಳಿಗೋಲು ಕರವಾಳು; ಸತ್ಯ ಭಂಡಾರ; ಪತಿಯಾಜ್ಞೆ ಭಾಸುರತರ ಕ್ಷತ್ರಧರ್ಮಂಗಳೆಂದೇ ಹರಿಶ್ಚಂದ್ರನು ಕಾಣುತಿರ್ದನು.)

❖

ಪ್ರಸಂಗ–೨೦

ಲೋಹಿತಾಶ್ವನ ಮರಣ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಲೋಹಿತಾಶ್ವನ ಮರಣ, ಚಂದ್ರಮತಿಯ ದುಃಖ' ಎಂಬ ಎಂಟನೆಯ ಅಧ್ಯಾಯದ ೧ ರಿಂದ ೮ ನೆಯ ಪದ್ಯದ ವರೆಗಿನ ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಲೋಹಿತಾಶ್ವ : ಚಂದ್ರಮತಿ ಮತ್ತು ಹರಿಶ್ಚಂದ್ರ ದಂಪತಿಗಳ ಮಗ. ಈಗ ಕಾಶಿನಗರದ ವಿಪ್ರನೊಬ್ಬನ ಮನೆಯ ದಾಸ.

ಲೋಹಿತಾಶ್ವನ ಮರಣ

ಇಂತು ನೃಪನ್ ಇತ್ತ ದಿವಸಮ್ ಕಳೆಯುತಿರಲ್... ಅಂತು ಅತ್ತಲ್ ಅವರನ್ ಒತ್ತಿಟ್ಟ ಮನೆಯನ್ ಏನ್ ಪೊಗಳ್ವೆನ್. ಅದು ತಿಂತಿಣಿಯ ಸೂನೆಗಾರರ ನಿಳಯ; ರಕ್ಕಸಿಯ ಮಾಡ; ಹಾವಿನ ಹೇಳಿಗೆ; ಅಂತಕನ ನಗರ; ಮೃತ್ಯುವಿನ ಬಲುಬಾಣಸದ ಹಂತಿ; ಮಾರಿಯ ಮೂರಿಯಾಟದ ಎಡೆ ಎಂಬಾಗಳ್... ಅಕಟ... ಅವನಿಪನ ಸತಿಪುತ್ರರು ಮನೆಯವರ ದುರ್ಧರದೊಳ್ ಎಂತು ಜೀವಿಪರ್.

ಒಡೆಯನ್ ಅತಿಕೋಪಿ; ಹೆಂಡತಿ ಮಹಾಮೂರ್ಖೆ; ಮಗ ಕಡುದೂರ್ತ; ಸೊಸೆಯಾದಡೆ ಅಧಿಕ ನಿಷ್ಠುರೆ; ಮನೆಯ ನಡೆವವರು ದುರ್ಜನರು; ನೆರೆಮನೆಯವರು ಮಿಥ್ಯವಾದಿಗಳು; ಪಶುಗಳ್ ಅಗಡು; ಅಡಿಗಡಿಗೆ ಕೋಪಿಸುವ, ಸಾಯ ಸದೆಬಡಿವ, ಕಾಳ್ಗೆಡೆವ, ಕರಕರಿಪ, ಸೆಣಸುವ, ತಪ್ಪ ಸಾಧಿಸುವ, ಕೆಡೆಯೊದೆವ ಮಾರಿಗೆ ಆರದೆ ಅವನಿಪನ ಸತಿಪುತ್ರರು ಸತ್ತು ಹುಟ್ಟುತಿಹರ್.

ಎಡೆವಿಡದೆ ಹಲವು ಸೂಳ್ ಒಡೆಯನ ಅರಮನೆಗೆ ನೀರ್ ಅಡಕಿ; ಕೊಟ್ಟನಿತು ಬತ್ತವ ಮಿದಿದು; ಒಡಲಿಗೆ ಎಯ್ದು ಎಡೆಯಿಕ್ಕಿದ ಅನಿತುಮನೆ ಉಂಡು; ಇರುಳುಮ್ ಹಗಲುಮ್ ಎನ್ನದೆ ಓರಂತೆ ಕುದಿವ ಮಡದಿಯ ಕುಮಾರನ್ ಉದಯದೊಳ್ ಎದ್ದು ಹೋಗಿ, ನಿಚ್ಚ ತನ್ನ ಒಡನಾಡಿಗಳ್ ಬೆರಸಿ ಹೇರಡವಿಯಲಿ ಹುಲುಹುಳ್ಳಿಯಮ್ ಕೊಂಡು, ಬೈಗೆ ಬಂದು, ಇಂತು ಕಾಲವನು ಸವೆಯಿಸುತಿರ್ದನು. ಓರಂತೆ ತಲ್ಲಣಿಸಿ ಹೆದರಿ, ಕಣ್ಗೆಟ್ಟು ಓಡಬಾರದು

ಇರಬಾರದು... ಉರೆ ಸಾಯಬಾರದು... ಬದುಕಬಾರದು ಎಂಬಂತೆ ತನ್ನೊಡಲಿಂಗೆ ಬಪ್ಪ ದುಃಖಂಗಳಿಗೆ ಸಾಕ್ಷಿಯಾಗಿ 'ಧಾರಿಣಿಯೊಳ್ ಅವನಿಪನ ಸತ್ಯ ಸಲಬೇಹುದು' ಎಂಬ ಆರಯ್ಕೆವಿಡಿದು ನಡೆಯುತ್ತಿಪ್ಪ ನಾರಿಯ ಕುಮಾರಂಗೆ ಬಂದ ಸಂಕಟದ ಸಂವರಣೆಯನ್ ಆದಾವ ಜೀವರು ಕೇಳ್ವರು.

ಎಂದಿನಂತೆ ಉದಯಕಾಲದೊಳ್ ಎದ್ದು ಹುಲುಹುಳ್ಳಿಗೆಂದು ಅರಣ್ಯಕ್ಕೆ ನಡೆದು, ಅಲ್ಲಲ್ಲಿ ಹೋಗಿ ಹಲವು ಅಂದದ ಅಡುಗಬ್ಬನ್ ಆಯ್ದು ಒಟ್ಟಿ ಹೊರೆಗಟ್ಟಿ ಹೊತ್ತು, ಓರಗೆಯ ಮಕ್ಕಳೊಡನೆ ನಿಂದು ಮಧ್ಯಾಹ್ನದ ಉರಿ ಬಿಸಿಲೊಳ್ ಎದೆ ಬಿರಿಯೆ, ಜವಗುಂದಿ ತಲೆಕುಸಿದು ನಡೆಗೆಟ್ಟು ಬಾಯಾರಿ ಹಣೆಯಿಂದ ಬೆಮರುಗೆ, ನೆತ್ತಿ ಹೊತ್ತಿ ತೇಂಕುತ್ತ ಹರಿತಪ್ಪಾಗಳ್ ಏನ್ ಪೊಗಳ್ವೆನು.

ಕೆಲದ ಮೆಳೆಯ ಒತ್ತಿನೊಳಗಿರ್ದ ಹುತ್ತಿನೊಳು ನಳನಳಿಸಿ ಕೋಮಲತೆಯಿಮ್ ಕೊಬ್ಬಿ ಕೊನೆವಾಯ್ದು ಕಂಗೆ ಅಳವಟ್ಟು ಬೆಳೆದ ಎಳೆಯ ದರ್ಭೆಯಮ್ ಕಂಡು ಹಾರಯಿಸಿ...

ಲೋಹಿತಾಶ್ವ : ನಾನ್ ಇದನೆಲ್ಲವ ಗಳಗಳನೆ ಕೊಯ್ದುಕೊಂಡು ಎಯ್ದು ಇತ್ತಡೆ, ಎನ್ನೊಡೆಯ ಮುಳಿಯದಿಹನ್.

(ಎಂಬ ಆಸೆಯಿಮ್ ಹೊರೆಯನ್ ಇಳುಹಿ, ಮತ್ತೆ ಎಳಸಿ ಕುಡುಗೋಲ್ ಪಿಡಿದು ಅಸ್ತಾದ್ರಿಯಮ್ ಸಾರ್ದ ಮಾರ್ತಾಂಡನಂತೆ ಸಾರ್ದನ್. ಹೊದೆ ಕಡಿದು ಹುತ್ತನು ಹತ್ತಿ, ಸುತ್ತಿದ ಎಳಹುಲ್ಲ ಹೊದರ ಅಡಸಿ ಹಿಡಿದು, ಬಿಡದೆ ಅರಿದು ಸೆಳೆಯಲ್, ಕೈಯ ಹದರನ್ ಒಡೆಗಚ್ಚಿ ಜಡಿಯುತ್ತ ಭೋಂಕನೆ ಬಂದ ರೌದ್ರಸರ್ಪನನು ಕಂಡು ಹೆದರಿ... ಹವ್ವನೆ ಹಾರಿ... ಹಾ ಎಂದು... ಕೈಕಾಲ ಕೆದರಿ... ಅಕಟಕಟ... ಮದಮ್ ಉದಿತ ರಾಹುಗ್ರಸ್ತವಾದ ತರುಣೇಂದು ಬಿಂಬಮ್ ನೆಲಕ್ಕೆ ಬೀಳ್ವಂದದೆ ತಲೆಕೆಳಗಾಗಿ ಕೆಡೆದನ್. ಹುತ್ತಿನಿಮ್ ಫಣಿವೆರಸಿ ಕೆಡೆಯೆ, ಕಂಡು ಒಡನಿರ್ದ ಜತ್ತಕಂಗಳು ಹೆದರಿ ಬಿಟ್ಟೋಡಿ ಊರತ್ತಲ್ ಹೋದರ್. ಇತ್ತಮ್ ತಾಯ್ಗೆ ಹಲುಬಿ... ತಂದೆಯ ಕರೆದು... ದೆಸೆದೆಸೆಗೆ ಬಾಯ ಬಿಟ್ಟು... ನೆತ್ತಿಗೇರಿದ ವಿಷದ ಕೈಯಿಂದ ಮಡಿದನ್. 'ಈ ಹೊತ್ತು ಎನ್ನ ಕುಲದ ಕುಡಿ ಮುರುಟಿತು' ಎಂದು ಉಮ್ಮಳಮ್ ಪೆತ್ತು, 'ಬೀಳದೆ ಮಾಣನ್' ಎಂಬಂತೆ ಅಂದು ಪಡುವಣ ಕಡಲೊಳು ರವಿ ಬಿದ್ದನ್.)

❖

ಪ್ರಸಂಗ–೨೧

ಲೋಹಿತಾಶ್ವನ ಮರಣದ ಸುದ್ದಿಯಿಂದ ಕಂಗಾಲಾದ ಚಂದ್ರಮತಿ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಲೋಹಿತಾಶ್ವನ ಮರಣ, ಚಂದ್ರಮತಿಯ ದುಃಖ' ಎಂಬ ಎಂಟನೆಯ ಅಧ್ಯಾಯದ ೯ ರಿಂದ ೧೫ನೆಯ ಪದ್ಯದ ವರೆಗಿನ ಏಳು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.)

ಪಾತ್ರಗಳು

ಚಂದ್ರಮತಿ : ಹರಿಶ್ಚಂದ್ರನ ಹೆಂಡತಿ. ಲೋಹಿತಾಶ್ವನ ತಾಯಿ.

ಹುಡುಗ : ಲೋಹಿತಾಶ್ವನ ಜತೆಗಾರ.

ವಿಪ್ರ : ಚಂದ್ರಮತಿ ಮತ್ತು ಲೋಹಿತಾಶ್ವನನ್ನು ಕೊಂಡುಕೊಂಡು ತನ್ನ ಮನೆಯ ಸೇವಕರನ್ನಾಗಿ ಮಾಡಿಕೊಂಡಿರುವ ಬ್ರಾಹ್ಮಣ. ಅಗ್ನಿದೇವನು ವಿಶ್ವಾಮಿತ್ರನ ಕೋರಿಕೆಯಂತೆ ಬ್ರಾಹ್ಮಣ ವೇಷದಲ್ಲಿ ಕಾಶಿನಗರದಲ್ಲಿ ನೆಲೆಸಿದ್ದಾನೆ;

ಲೋಹಿತಾಶ್ವನ ಮರಣದ ಸುದ್ದಿಯಿಂದ ಕಂಗಾಲಾದ ಚಂದ್ರಮತಿ

ತನಯನ್ ಎಂದುಮ್ ಬಪ್ಪ ಹೊತ್ತಿಂಗೆ ಬಾರದಿರೆ, ಮನನೊಂದು

ಚಂದ್ರಮತಿ : ಎನ್ನ ಕಂದನ್ ಇದೇಕೆ ತಳುವಿದನ್.

(ಎಂದೆನುತ, ಸುಯ್ಯುತ್ತ, ಮರುಗುತ್ತ, ಬಸುರಮ್ ಹೊಸೆದು, ಕೊನೆವೆರಳ ಮುರಿದುಕೊಳುತ, ತನುವ ಮರೆದು ಅಡಿಗಡಿಗೆ ಹೊರಗನ್ ಆಲಿಸಿ, ಮತ್ತೆ ಮನೆಯೊಡತಿಗೆ ಅಂಜಿ, ಕೆಲಸವನು ಮಾಡುತಿಪ್ಪ ವನಿತೆಗಾದ ಆಪತ್ತನ್ ಆಲಿಸದೆ ಕೆಟ್ಟು ದಟ್ಟಿಸುವರ್. ಅದನ್ ಏನೆಂಬೆನು. ಒಳಗೆ ಉಡಿದ ನಾರಾಚದ ಏರಿನಂದದಿ; ಹೊರಗ ಬಳಸದೆ ಒಳಗೊಳಗೆ ಏಗುವ ಆವಗೆಯ ಶಿಖಿಯಂತೆ; ಕೆಳೆಗೊಂಡ ಹಗೆಗಳ ಒಳಗಣ ಮುಳಿಸಿನ ಅಂದದಿಮ್ ಮನೆಯವರ ಮಾರಿಗಂಜಿ ಬಳಸಿ ಬಿರಿವ ಎದೆ... ಬಿಕ್ಕುವ ಅಳ್ಳೆ... ಕಣ್ಗಳೊಳ್ ಒರೆವ ಜಲಸೆರೆಗಳ್ ಒಡೆದು ಉಬ್ಬಿ ಬಿಗಿದು ಗಂಟಲಿನ ಮುಕ್ಕುಳಿಸಿದ ಅಕ್ಕೆಗಳ್ ಎಸೆವ ಸತಿಯ ಅಳಲು ಸೀಗೆಯೊಳಗಣ ಬಾಳೆಗೆ ಎಣೆಯಾದುದು.)

ಚಂದ್ರಮತಿ : ಅಡವಿಯೊಳು ಹೊಲಬುಗೆಟ್ಟನೋ... ಗಿಡುವಿನೊಳಗೆ ಹುಲಿ ಹಿಡಿದುದೋ... ಕಳ್ಳರ್ ಒಯ್ದರೊ... ಭೂತ ಸಂಕುಲಮ್

ಹೊಡೆದುವೋ... ನೀರೊಳ್ ಅದ್ದನೋ... ಮರದ ಕೊಂಬೆ ಏರಿ ಬಿದ್ದನೋ... ಫಣಿ ತಿಂದುದೋ... ಕಡುಹಸಿದು ನಡೆಗೆಟ್ಟು ನಿಂದನೋ...

(ಎಂದು ಇಂತು ಮಡದಿ ಹಲವಮ್ ಹಲಬುತ ಅಂಗಣ ದೊಳಿರೆ, ಹೊತ್ತಿ ಹೊಡಕರಿಸಿದ ಅಳಲ ಕರ್ಬೊಗೆಯಂತೆ ಕವಿವ ಕತ್ತಲೆಯೊಳಗೆ ನಿಂದಿರ್ದಳು. ಬಂದರಮ್ 'ಲೋಹಿತಾಶ್ವಾ' ಎಂದು... ಬಟ್ಟೆಯೊಳು ನಿಂದರಮ್ 'ಲೋಹಿತಾಶ್ವಾ' ಎಂದು... ಗಾಳಿ ಗಿರಿಕ್ ಎಂದಡಮ್ 'ಲೋಹಿತಾಶ್ವಾ' ಎಂದು ಕರೆಕರೆದು ಬಿಡೆ ಬೀದಿ ಕರುವಿನಂತೆ ಮಂದಮತಿಯಾಗಿರ್ದ ಚಂದ್ರಮತಿಗೆ ಒಬ್ಬನ್ ಎಯ್ತಂದು...)

ಒಬ್ಬ ಹುಡುಗ : ಇಂದು ಕೂಡೆ ಹೋಗಿರ್ದು ಕಂಡೆನ್... ನಿನ್ನ ಕಂದನ ಒಂದು ಉಗ್ರಫಣಿ ತಿಂದು ಜೀವಮ್ ಕಳೆದನ್.

(ಎಂದು ಹೇಳಿದನ್. ಆಗಳು...)

ಚಂದ್ರಮತಿ : ಅಕ್ಕಟಾ, ಏಕೆ ಕಚ್ಚಿತ್ತು... ಆವ ಕಡೆ... ಆವ ಹೊಲನ್... ಕುಮಾರನ್ ಮಡಿದ ಠಾವು ಎನಿತು ದೂರ.

ಹುಡುಗ : ಈ ಕಡೆಯೊಳ್... ಈ ಹೊಲದೊಳ್... ಈ ಮರದ ಕೆಲದ ಹುತ್ತಿನ ಹುಲ್ಲ ಕೊಯ್ಯೆ ಕೈಯ ನೂಕಿ, ಫಣಿ ಅಗಿಯೆ ಕೆಡೆದನ್. ದೂರವಲ್ಲಲ್ಲ... ಬೇಕಾದಡೆ ಈಗ ಹೋಗು. ಕೇಳ್, ಅಲ್ಲದಿರ್ದಡೆ ಬಳಿಕ ಅನೇಕ ಭಲ್ಲುಕ, ಜಂಬುಕಮ್, ಘೂಕ, ವೃಕಗಳ್ ಎಳೆಯದೆ ಬಿಡವು.

(ಎಂದನು. ನುಡಿಯಲ್ ಅರಿದು ಎನಿಸಿ, ಮೇರೆಯ ಮೀರುವ ಅಳಲನ್ ಅಳವಡಿಸಿ ಬಂದು ಒಡೆಯನ ಅಡಿಗಳ ಮೇಲೆ ಕೆಡೆದು ಬಾಯ್ವಿಡುತ...)

ಚಂದ್ರಮತಿ : ಅರಣ್ಯದೊಳ್ ಎನ್ನ ಮಗನ್ ಉಗ್ರ ಕಾಳೋರಗಮ್ ಕಚ್ಚಿ ಮಡಿದನ್.

(ಎಂದು ನುಡಿಯೆ)

ವಿಪ್ರ : ಲೇಸಾಯ್ತು. ಮಡಿದರೆ ಮಡಿದನ್.

(ಎಂದು ಕೆಡೆ ನುಡಿಯೆ)

ಚಂದ್ರಮತಿ	:	ಬಂಟರನು ಕೊಟ್ಟು, ಅರಿಸಿಸೈ ತಂದೆ.
ವಿಪ್ರ	:	ನಡುವಿರುಳು ಬಂಟರುಂಟೇ... ನಿದ್ದೆಗೆಯ್ಯಬೇಕು... ಏಳು... ಕಾಡದಿರ್.
ಚಂದ್ರಮತಿ	:	ನರಿಗಳ್ ಎಳೆಯದ ಮುನ್ನ ದಹಿಸಬೇಡವೆ ತಂದೆ, ಕರುಣಿಸು.
ವಿಪ್ರ	:	ದುರ್ಮರಣ ಪಟ್ಟ ಶೂದ್ರನನು ಸಂಸ್ಕರಿಸುವವರ್ ಆವಲ್ಲ. (ಎಂದು ಎನಲ್ಕೆ...)
ಚಂದ್ರಮತಿ	:	ಆನಾದಡಮ್ ಹೋಗಿ ಕಂಡು ಮಗನ ಉರಿಗಿತ್ತು ಬಪ್ಪೆನೇ.
ವಿಪ್ರ	:	ಕೆಲಸಮನ್ ಬಿಟ್ಟು ಹರಿಯದೆ, ಇರ್ದುದನ್ ಎಯ್ದೆ ಗೆಯ್ದು ಹೋಗು. (ಎನಲು, ಚಚ್ಚರಿದಿ ಮಾಡುವ ಕಜ್ಜವೆಲ್ಲವಮ್ ಮಾಡಿ, ಒಯ್ಯನೆ ಮನೆಯನು ಹೊರವಂಟಳ್.)

❖

ಪ್ರಸಂಗ–೨೨

ಚಂದ್ರಮತಿಯ ಸಂಕಟ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಲೋಹಿತಾಶ್ವನ ಮರಣ, ಚಂದ್ರಮತಿಯ ದುಃಖ' ಎಂಬ ಎಂಟನೆಯ ಅಧ್ಯಾಯದ ೧೬ ರಿಂದ ೨೪ ನೆಯ ಪದ್ಯದ ವರೆಗಿನ ಒಂಬತ್ತು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರ

ಚಂದ್ರಮತಿ : ಹರಿಶ್ಚಂದ್ರನ ಹೆಂಡತಿ. ಲೋಹಿತಾಶ್ವನ ತಾಯಿ.

ಚಂದ್ರಮತಿಯ ಸಂಕಟ

ದಟ್ಟೈಸಿ ಮಡಲಿರಿವ ಕಾಳದೊಳು ನಡುವಿರುಳು ನಟ್ಟ ಮುಳ್ಳುಗಳನ್; ಎಡಹಿದ ಕಲ್ಲ; ಹಾಯ್ದ ಮರಮುಟ್ಟನ್; ಏರಿದ ದಡನನ್; ಇಳಿದ ಕುಳಿಯಮ್; ಬಿದ್ದ ದರಿಗಳಮ್; ಹಿಡಿದ ಗಿಡುವ; ಬಿಟ್ಟ ತಲೆಯಮ್; ಬಿಚ್ಚಿದ ಉಡಿಗೆಯಮ್ ಮರೆದು, ಗೋಳಿಟ್ಟು ಬಾಯ್ವಿಟ್ಟು ಮೊರೆಯಿಡುತ ನಡೆತಂದು, ಹುಲುವಟ್ಟೆಯೊಳು ಬೆಳೆದ ಹೆಮ್ಮರನ ಮಲಗಿಸಿ ನಿಂದ ಹುಳ್ಳಿಹೊರೆಯಮ್ ಕಂಡಳು.

ಚಂದ್ರಮತಿ : ಈ ಎಡೆಯೊಳ್ ಇನ್ನಿರದೆ ಮಾಣನ್.

(ಎನುತಮ್ ಬಂದು ತಾಯಿ ಕರೆದಳು.)

ಚಂದ್ರಮತಿ : ಮಗನೆ ಮಗನೇ… ಹರಿಶ್ಚಂದ್ರ ರಾಯನ ಕುಮಾರ… ಪೇಳ್, ಆವ ತಾವು ಒಳಕೊಂಡುದಯ್ಯ. ನೀನ್ ಎಲ್ಲಿರ್ದಪೆ ಕಂದಾ… ಓ ಎಂಬುದೇನು… ಬಾಯ ಬಿಡದೆ ಇತ್ತ ಬಾ ಎಂಬುದೇನು… ತಂದೇ, ಎನ್ನನ್ ಒಲ್ಲದಡೆ ಸಾಯೆಂಬುದೇನು… ಉಸುರದಿರಲೇಕೆ ತರುಣ.

(ಎಂದು ಹಂಬಲಿಸುತ ಒರಲಿದಳು. ವಿಷದ ಹೊಗೆಯೊಯ್ದು ಹಸುರಾದ ಮೈ; ಮೀರಿ ನೊರೆ ಒಸರ್ವ ಗಲ್ಲಮ್; ಕಂದಿದ ಉಗುರ್ಗಳ್; ಅರೆ ತೆರೆದು ಅಗುರ್ವಿಸುವ ಕಣ್; ಹರಿದು ಹುಲುಹಿಡಿದ ಹರಹಿದ ಕೈಗಳ್; ಉಂಬ ಹೊತ್ತು ಉಣ ಹಡೆಯದೆ ಹಸಿದು ಬೆನ್ಗೆ ಅಡರ್ದ ಬಸುರ್; ಅಕಟಕಟ… ಮಡಿದ ಗೋಣ್; ಹುತ್ತಿನ ಮೊದಲೊಳು ದೆಸೆಗೆ ಉರುಳಿ

ಹುಡಿಹೊಕ್ಕು ಬರತ ಬಾಯ್ ಬೆರಸಂದು ಬಸವಳಿದ ನಿಜಸುತನ ಹರಿಶ್ಚಂದ್ರನ ಅರಸಿ ಕಂಡಳು.

ಕಂಡ ಕಾಣ್ಕೆಯೊಳು ಶಿವಶಿವ ನಿಂದ ನಿಲವಿನಲಿ ದಿಂಡುಗೆಡೆದಳು... ಮೇಲೆ ಹೊರಳಿದಳು... ಬಿಗಿಯಪ್ಪಿಕೊಂಡು ಹೊಟ್ಟೆಯನು ಹೊಸೆಹೊಸೆದು... ಮೋರೆಯ ಮೇಲೆ ಮೋರೆಯಿಟ್ಟು... ಓವದೆ ಒರಲಿ... ಮುಂಡಾಡಿ ಮುದ್ದುಗೆಯ್ದು... ಓರಂತೆ ಕರೆಕರೆದು ಅಂಡಲೆದು... ಲಲ್ಲೆಗರೆದು... ಅತ್ತತ್ತು ಬಲವಳಿದು ಬೆಂಡಾಗಿ... ಜೀವವು ಇಕ್ಕೆ ಎಂಬ ಆಸೆಯಿಮ್ ಲಲನೆ ತೇಂಕು ತಾಣಂಗಳಮ್ ಬಗೆದಳು...

ಮೂಗಿನೊಳ್ ಉಸುರನ್... ಅಳ್ಳೆಯೊಳು ಹೊಯ್ಲನ್... ಉಗುರೊಳು ರಜವನ್... ಎದೆಯೊಳ್ ಅಲ್ಲಾಟಮಮ್... ಕೈಯ ಮೊದಲೊಳು ಮಿಡುಕನ್... ಅಂಗದೊಳು ನೋವನ್... ಅಕ್ಷಿಯೊಳು ಬೆಳ್ಪಮ್... ಭಾಳದೊಳು ಬೆಮರನು... ಲಲಿತ ಕಂಠದೊಳ್ ಉಲುಕನ್... ಅಂಘ್ರಿಯೊಳು ಬಿಸಿಯನ್... ಅಂಗುಳಿಗಳೊಳು ಚಿಟುಕನ್... ಉಂಗುಟದೊಳ್ ಅರುಣಾಂಬುವಮ್... ನಾಲಗೆಯೊಳ್ ಇಂಪ... ರೋಮದಲಿ ಬಲ್ಪನ್... ಸಲೆ ಆರಯ್ದು ಕಾಣದೆ ನೊಂದಳು.)

ಚಂದ್ರಮತಿ : ಹಡೆದ ಒಡಲು ಹುಡಿಯಾಯ್ತು ಮಗನೆ... ಮಗನು ಉಂಟೆಂದು ಕಡಗಿ ಹೆಚ್ಚುವ ಮನಮ್ ಹೊತ್ತಿ ಹೊಗೆಯಿತ್ತು... ಬಿಡದೆ ಅಡರಿ ನಿಟ್ಟಿಸಿ ನಲಿವ ದಿಟ್ಟಿ ಕೆಟ್ಟುವು... ಸೋಂಕಿ ಪುಳಕಿಸುವ ಕರಣಂಗಳು ಕಡಿವಡೆದುವು... ಒಸೆದು ಹೆಸರ್ಗೊಳುತಿಪ್ಪ ನಾಲಗೆಯ ಕುಡಿ ಮುರುಟಿತು ಎಲೆ ಕಂದ, ಒಮ್ಮೊಮ್ಮೆ ನುಡಿಯನ್ ಆಲಿಪ ಕಿವಿಯ ಹಡಿಗೆತ್ತುದು.

(ಎಂದೆನುತ್ತ ಇಂದುಮುಖಿ ಮರುಗಿ ಬಾಯ್ವಿಟ್ಟಳಂದು.)

ಚಂದ್ರಮತಿ : ಸಿರಿ ಹೋದ ಮರುಕವನು... ನೆಲೆಗೆಟ್ಟ ಚಿಂತೆಯನು... ಪರದೇಶಮಮ್ ಹೊಕ್ಕ ನಾಚಿಕೆಯನ್... ಅರಿಯದ ಅನ್ಯರ ಮನೆಯ ತೊತ್ತಾದ ಭಂಗವನು... ನಿಮ್ಮಯ್ಯಗೆ ಅಜ್ಞಾತವಾದ ಅಳಲನು... ನೆರೆದು ಮನೆಯವರ್ ಎಯ್ದೆ ಕರಕರಿಪ

ದುಃಖವನು... ತರಳ, ನಿನ್ನನ್ ನೋಡಿ ಮರೆದು, ಪರಿಣಾಮವಮ್ ಧರಿಸುತಿಪ್ಪ ಎನ್ನ ಗೋಣಮ್ ಕೊಯ್ದೆ... ಇನ್ನಾರ ನೋಡಿ ಮರೆದಪೆನ್.

ಹರಿಶ್ಚಂದ್ರ ಭೂಪತಿ ಅತಿಲಜ್ಜೆಗೆಟ್ಟು ಅನ್ಯರ ಆಳಾಗಿ ಹಸಿವು ನಿದ್ದೆಯಮ್ ತೊರೆದು ಧಾವತಿಗೊಂಡು ದುಡಿದು, ಧನವನ್ ಆರ್ಜಿಸಿ... ನಮ್ಮ ಬಿಡಿಸುವ ಆರ್ತದ ಮೋಹದಿಮ್ ಬಂದು ಸುತನ ಕರೆಯೆಂದಡೆ... ಏನೆಂಬೆನ್. ಆವುದ ತೋರಿ ಪತಿಯ ಮರುಕವನು ಮರೆಯಿಸುವೆನ್. ಎನ್ನ ಕಂದ ಉಗ್ರ ಅಹಿಗೆ ಆಹುತಿಯಾದನ್ ಎಂದು ಪೇಳ್ವೆನೆ.

(ಎಂದು ಇಂದುಮುಖಿ ಬಾಯ್ಬಿಟ್ಟಳು.)

ಚಂದ್ರಮತಿ : ಏವೆನ್ ಏವೆನ್ ಎಲೆ ಮಗನೇ ಮಗನೇ... ಸಾವೇಕಾಯಿತ್ತು ಎಲೆ ಚೆನ್ನಿಗನೇ... ಇರಿದೆಯಲಾ ಎನ್ನನು ಸುಕುಮಾರಾ... ಕೊರೆದೆಯಲಾ ಕೊರಳನು ಜಿತಮಾರಾ... ಎತ್ತಣ ಬರಸಿಡಿಲ್ ಎರಗಿತೊ ನಿನ್ನ... ಹುತ್ತಿನ ಹತ್ತಿರೆ ಒರಗಿದೆ ಚೆನ್ನ... ಹಾವು ಹಿಡಿಯೆ ಹಾ ಎಂದು ಒರಲಿದೆಯಾ... ಸಾವಾಗ ಅವ್ವಾ ಎಂದು ಅಳಲಿದೆಯಾ... ರನ್ನದ ಕನ್ನಡಿ ಸಿಡಿದುದೊ ದೇವಾ... ಹೊನ್ನ ಕಳಸ ಕಡೆದು ಒಡೆದುದೊ ದೇವಾ... ಎನ್ನ ಕಡವರಮ್ ಸೂರೆಹೋಯಿತೋ... ಹೊನ್ನ ಪ್ರತಿಮೆಯ ಅಸು ಹಾರಿ ಹೋಯಿತೋ... ಇನವಂಶದ ಲತೆ ಕುಡಿ ಮುರುಟಿತ್ತೋ... ಜನಪನಿಟ್ಟ ಸುರತರು ಮುರಿಯಿತ್ತೋ... ಕಾಲ, ಕರುಣವಿಲ್ಲದೆ ನೀನ್ ಒಯ್ದೆ... ಬಾಲನನ್ ಅಗಲಿಸಿ ಕೊರಳಮ್ ಕೊಯ್ದೆ;

ಆರ ಸಿರಿಯನ್ ಎಳೆತಂದನೊ ಮುನ್ನ... ಆರ್ ಅಳಲಲು ಸೆಳೆಕೊಂಡೆನೊ ಹೊನ್ನ... ಅಲ್ಲದಡೆ ಈ ಅಳಲಪ್ಪುದೆ ನನಗೆ... ಇಲ್ಲಿ ವೃಥಾ ಸಾವಪ್ಪುದೆ ನಿನಗೆ... ಹೆತ್ತ ಹೊಟ್ಟೆ ಉರಿಯುತ್ತಿದೆ ಮಗನೆ... ಎತ್ತಿದ ತೋಳನು ಕೆತ್ತಿದೆ ಮಗನೆ... ಹಾಡುವ ಬಾಯಲಿ ಮಣ್ಣನು ಹೊಯ್ದೆ... ನೋಡುವ ಕಣ್ಣಲಿ ಸುಣ್ಣವ ಹೊಯ್ದೆ ಪಾಪಿಯೆನ್ನ ನೀನೊಮ್ಮೆಗೆ ನೋಡಾ... ಕೋಪವನ್ ಉಳಿದು ಒಯ್ಯನೆ ಮಾತಾಡಾ... ನುಡಿದಡೆ ಪಾಪವೆ ಹೆತ್ತವ ರೊಡನೆ... ಕಡುಮುಳಿಸೇ ಮಗನೇ... ಎನ್ನೊಡನೆ ಬಾರೈ

ಬಹಳ ಸಿರಿಯ ಸಿಂಗಾರ... ಬಾರೈ ಸುಜನಜನಕ್ಕೆ ಆಧಾರ...

ಏಳ್, ಎನ್ನ ಆನಂದಾಮೃತ ಶರಧಿ... ಏಳ್, ಅಖಿಳ ಗುಣಾರ್ಣವ ಕಳಾನಿಧಿ... ಹಲ್ಲಣಿಸಿದ ವಾರುವವಿದೆ ಮಗನೆ... ಮಲ್ಲಾಮಲ್ಲಿಯ ರಥವಿದೆ ಮಗನೆ...ಗಜ ಘಟೆಗಳು ಹಲ್ಲಣಿಸಿವೆ ಮಗನೆ... ನಿಜ ಪರಿವಾರಕೆ ಬೆಸಗೊಡು ಮಗನೆ... ನೆತ್ತರ ಕಡಲೊಳಗೆ ಇಭಕುಲ ಬೀಳೆ... ಮೊತ್ತದ ತುರಂಗಗಳು ಬೆಂಡೇಳೆ... ಮಣಿಮಕುಟದ ಭಟರ ಅಟ್ಟೆಗಳಾಡೆ... ಮಣಿದು ಭೂತ ಸಂಕುಳ ಕುಣಿದಾಡೆ... ಮಾರಿ ಮೃತ್ಯುಗಳಿಗೆ ಓಕರೆ ಹುಟ್ಟೆ... ಕ್ರೂರ ಜವಂಗೆ ಅತಿಭೀಕರ ಹುಟ್ಟೆ...ರಿಪುಬಲವಮ್ ಕೊಂದು ಅಳಿದಡೆ ತಪ್ಪೆ...

ತಪನ ಕುಲದ ವಿಜಯಶ್ರೀ ಒಪ್ಪೆ... ಧರೆಯನಾಳ್ವ ಸಿರಿಯಮ್ ಕಳೆದು, ಇಂದು ಉರಗನ ವಿಷದ ಅಗ್ನಿಯೊಳ್ ಉರೆ ಬೆಂದು, ಅಡವಿಯೊಳ್ ಈ ಪರಿ ಕೆಡೆವರೆ ವೀರ... ಪೊಡವಿಯ ಒಡೆಯನ ಅಗ್ಗದ ಸುಕುಮಾರ... ಏನ ಮಾಳ್ಪೆ... ನಾ ಮಾಡಿರ್ದುದನು ತಾನ್ ಉಂಬುದು ವಿಧಿ ಮಾಡಿದ ಹದನು... ಕರುಣಿಸಿ ಕಾಯ್ವೈ ಗೌರೀರಮಣ... ನರಕಿಯ ನೋಡು ಎಲೆ ಅಗಜಾರಮಣ... ಕರುಣಿಸು ಪಾಪಿಯ ಪಂಪಾಪತಿಯೆ... ಕರುಣಿಸು ಅನಾಥೆಗೆ ಕಾಶೀಪತಿಯೆ... ಇನ್ನು ಇನಿತರಿಂದ ಮೇಲೆ ಎಮ್ಮ ಒಡೆಯನ್ ಅರಸಿ ಬಂದು ಎನ್ನನ್ ಒಯ್ದಡೆ ಬಳಿಕ ಸುಡಹಡೆಯೆನ್.

(ಎಂಬುದನು ತನ್ನಲ್ಲಿ ತಾನೆ ತಿಳಿದು ಎದ್ದು, ಪುತ್ರನ ಶವವ ಹೊತ್ತು ದೆಸೆದೆಸೆಗೆ ತಿರುಗಿ, ಮುನ್ನ ಎಲ್ಲರನ್ ಸುಡುವ ಠಾವು ಆವುದೆಂದು ನೋಳ್ಪನ್ನೆಗಮ್... ಹಲವು ಕೆಲವು ಉರಿಯ ಬೆಳಗಮ್ ಕಂಡು, ನನ್ನಿಕಾರನ್ ಕಾವ ಕಾಡತ್ತ ನಡೆವಾಗ ಬಟ್ಟೆಯೊಳ್ ಅದ ಏನ್ ಪೊಗಳ್ವೆನು.) ❖

ಪ್ರಸಂಗ–೨೩

ಸುಡುಗಾಡಿನಲ್ಲಿ ಹರಿಶ್ಚಂದ್ರ ಮತ್ತು ಚಂದ್ರಮತಿ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಲೋಹಿತಾಶ್ವನ ಮರಣ, ಚಂದ್ರಮತಿಯ ದುಃಖ' ಎಂಬ ಎಂಟನೆಯ ಅಧ್ಯಾಯದ ೨೫ ರಿಂದ ೪೫ ನೆಯ ಪದ್ಯದ ವರೆಗಿನ ಇಪ್ಪತ್ತೊಂದು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು:

ಚಂದ್ರಮತಿ : ಹರಿಶ್ಚಂದ್ರನ ಹೆಂಡತಿ. ಲೋಹಿತಾಶ್ವನ ತಾಯಿ.

ಹರಿಶ್ಚಂದ್ರ : ಅಯೋಧ್ಯಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಲಾಳ ದೇಶದ ರಾಜನಾಗಿದ್ದವನು. ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜ್ಯ ಸಂಪತ್ತನ್ನು ನೀಡಿ, ಯಾವುದೇ ರಾಜ್ಯವಾಗಲಿ ಇಲ್ಲವೇ ಸಂಪತ್ತಾಗಲಿ ಇಲ್ಲದ ವ್ಯಕ್ತಿ. ಈಗ ವೀರಬಾಹುಕನ ದಾಸನಾಗಿ ಕಾಶಿ ನಗರದಲ್ಲಿರುವ ಸುಡುಗಾಡಿನ ಕಾವಲುಗಾರನಾಗಿದ್ದಾನೆ.

ಸುಡುಗಾಡಿನಲ್ಲಿ ಹರಿಶ್ಚಂದ್ರ ಮತ್ತು ಚಂದ್ರಮತಿ

ಕೆಡೆದ ಮುಂಡದ; ಬಿದ್ದ ತಲೆಯ; ಚಲ್ಲಿದ ಕರುಳ; ಪಡಲಿಟ್ಟ ಕಾಳಿಜದ; ಕೋಳ್ಗೆಸರ ಮಿದುಳ; ಹೊನಲಿಡುವ ರಕುತದ ಕಡಲೊಳ್ ಅಡಿಯಿಡಲು ಬಾರದು ಎಂಬಂತೆ ವಿಶ್ವಾಮಿತ್ರನು ಅಡವಿಯೊಳಗೆ ಎಯ್ದೆ ನಾನಾ ಭಯಂಕರವ ಸಾಲಿಡಲ್... ಅದನು ಪುತ್ರಶೋಕಗ್ರಹಾವಿಷ್ಟತೆಯ ಕಡುಪಿನಿಮ್ ಲೆಕ್ಕಿಸದೆ ಬಂದು, ಸುಡುಗಾಡೊಳ್ ತನಯನ ಶವವನು ಇಳುಹಿದಳು; ಗಳಗಳನೆ ಮುನ್ನ ಬೆಂದು ಉಳಿದಿರ್ದ ಕರಿಕೊಳ್ಳಿಗಳನ್ ಎಲ್ಲವಮ್ ಸಿದಿಗೆ ತಂದೊಟ್ಟಿ, ಮೇಲೆ ಮಂಗಳಮಯ ಕುಮಾರನನ್ ಪಟ್ಟಿರಿಸಿ, ಕೆಲದೊಳ್ ಉರಿವ ಅಗ್ನಿಯಮ್ ಪಿಡಿದು ನಿಂದು...)

ಚಂದ್ರಮತಿ : ಹುಟ್ಟಿದಲ್ಲಿ ಹುಟ್ಟು... ಬೆಳೆದಲ್ಲಿ ಬೆಳೆ.

(ಎಂದು ನುಡಿದು... ಇಳುಹಲ್ ಅನುಗೆಯ್ದ್ ಇಳುಹಲಾರದೆ ಅಳವಳಿದು ಬಾಯಳಿದು ಮೊರೆಯಿಟ್ಟಡೆ... ಭೂಪನು ಆ ದನಿ ಕೇಳ್ದು... ನಿದ್ರೆ ತಿಳಿದೆದ್ದು ಬಂದನು.)

ಹರಿಶ್ಚಂದ್ರ : ನಟ್ಟಿರುಳು ಸುಡುಗಾಡೊಳ್ ಒಬ್ಬಳ್ ಓರಂತೆ ಬಾಯ್ವಿಟ್ಟು ಹಲುಬುವ ವೀರನಾರಿ ಆವಳೊ... ಮೀರಿ ಸುಟ್ಟೆಯಾದಡೆ ನಿನಗೆ ವೀರಬಾಹುಕನಾಣೆ... ಕದ್ದು ಸುಡಬಂದೆ... ನಿನ್ನ ನಿಟ್ಟೆಲುವ ಮುರಿವೆನ್.

(ಎಂದು ಭೂಪನು ಉರವಣಿಸಿ ಜರೆಯುತ್ತ ದಟ್ಟಿಸುತ ಬಂದು, ಹಿಡಿದಿರ್ದ ಕಿಚ್ಚಮ್ ಕೆದರಿ, ಮುಟ್ಟಿಗೆಯ ಮೇಲಿರ್ದ ಸುತನ ಹಿಂಗಾಲ್ ಪಿಡಿದು, ಸೆಳೆದು ಬಿಸುಟನ್.)

ಚಂದ್ರಮತಿ : ಬಿಸುಡದಿರು ಬಿಸುಡದಿರು... ಬೇಡ ಬೇಡ... ಅಕಟಕಟ... ಹಸುಳೆ ನೊಂದಹನ್.

(ಎಂದು ಬೀಳ್ವನನ್ ಎತ್ತಿ ತಕ್ಕಿಸಿಕೊಂಡು...)

ಚಂದ್ರಮತಿ : ಕುಲವ ನೋಡದೆ ಬೇಡಿಕೊಂಬೆನ್. ಇವನ್ ಎನ್ನ ಮಗನಲ್ಲ. ನಿನ್ನ ಸಿಸುವಿನೋಪಾದಿ. ಸುಡಲ್ ಅನುಮತವನಿತ್ತು ರಕ್ಷಿಸು... ಕರುಣಿ.

ಹರಿಶ್ಚಂದ್ರ : ಎಲೆ ಮರುಳೆ, ಹೆಣನ್ ಉಟ್ಟುದಮ್... ಮಸಣವಾಡಗೆಯ ಹಾಗವನು ಕೊಟ್ಟಲ್ಲದೇ... ಏನ್ ಎಂದಡಮ್ ಬಿಡೆನ್.

ಚಂದ್ರಮತಿ : ಇಂದು ಎನಗೆ ಕೊಡಲ್ ಏನು ಇಲ್ಲ. ಲೋಗರ ಮನೆಯ ಬಡದಾಸಿ ಕರುಣಿಸು.

ಹರಿಶ್ಚಂದ್ರ : ನಿನ್ನ ಕೊರಳಿನೊಳ್ ಇರ್ದ ಕಡು ಚೆಲುವ ತಾಳಿಯನ್ ಅದನ್ ಅಡವನಿರಿಸಿ ಬಳಿಕ ನೀ ಬಿಡಿಸಿಕೋ.

(ಎನಲು ಮಡದಿ ಕರನೊಂದು...)

ಚಂದ್ರಮತಿ : (ತನ್ನಲ್ಲಿಯೇ ಹೇಳಿಕೊಂಡಳು.)

ಅಕಟ... ಪೊಡವಿಪತಿ ಮಡಿದ ಕೇಡು ಅಡಸಿತು. ಅಲ್ಲದಡೆ ಎನ್ನ ಗುಪ್ತ ಮಂಗಳಸೂತ್ರದ ಎಡೆಯ ಹೊಳೆಹೊಳೆವ ಐದೆದಾಳಿಯನ್ ಇದನ್ ಶ್ವಪಚನ್ ಎಂತು ಕಂಡಪನ್.

ಚಂದ್ರಮತಿ : (ಲೋಹಿತಾಶ್ವನ ಹೆಣದ ಮುಂದೆ ದೊಡ್ಡ ದನಿಯಲ್ಲಿ ಅಳುತ್ತ)

ವಿಗತ ಸಪ್ತದ್ವೀಪಪತಿಯ ಬಸುರಲಿ ಬಂದು... ಮಗನೆ, ನಿನಗೆ ಒಮ್ಮೆಟ್ಟು ಸುಡುಗಾಡು ಹಗೆಯಾಯ್ತೆ... ಮಿಗೆ ಸಕಲ ಲೋಕದೊಳು ತನ್ನ ಆಣೆ ಸಲುವನ ಕುಮಾರನ್ ಎನಿಸುವ ನಿನ್ನನು ಬಗೆಯದೆ... ಈ ಚಂಡಾಲನ್ ಆಣೆಯಿಡು ವಂತಾಯ್ತೆ... ಜಗದ ನವನಿಧಿಗೆ ಒಡೆಯನ್ ಆತ್ಮಭವನ್ ಎನಿಸಿ ಮುಟ್ಟಿಗೆಯ ಸುಂಕದ ಹಾಗವಿಲ್ಲಾಯ್ತೆ... ಮಗನೆ...

(ಎಂದು ಹಂಬಲಿಸುತ ಅಳಲಿದಳು. ವನಿತೆಯ ಅಳಲಮ್ ಕೇಳ್ದು ನಡುಗಿ...)

ಹರಿಶ್ಚಂದ್ರ : (ತನ್ನ ಮನದಲ್ಲಿ)

ವಿಶ್ವಾಮಿತ್ರ ಮುನಿ ಎನಗೆ ಮತ್ತೆ ಮಾಡಿದ ತೊಡಕು ಇದಾಗದಿರದು...

(ಎನುತ ಮನದೊಳು ಮರುಗುತ..)

ಹರಿಶ್ಚಂದ್ರ : ಎಲೆ ತರುಣಿ, ಆವ ಲೋಕದೊಳ್ ಆಣೆ ಸಲುವುದು ಎನಿಸುವ ಭೂಪನ ತನಯನ್ ಈ ತರಳನ್. ನೆಲದೆರೆಯನ್ ಇಕ್ಕು ಎನಲು, ಕೊಡಲಿಲ್ಲದೆ ಅಧಿಕರ ಪೆಸರ್ಗೊಳಲು ಬಿಡುವೆನೆ. ಶೋಕಿಸುವ ಹೊತ್ತು, ಹುಸಿದು ಶೋಕಿಸುವೊಡೆ ಏನಹುದು.

(ಎಂದನು ಅವನೀಶನು.)

ಚಂದ್ರಮತಿ : ಹಿಂದುಳಿದ ಸಂಪದವನ್ ಎಣಿಸುವುದು ಹುಸಿಯಲ್ಲ. ಇಂದು ಈಗ ತೋರಬಪ್ಪುದೆ. ಹುಸಿಯದುಂಟೆ ತಪ್ಪೆ?

ಹರಿಶ್ಚಂದ್ರ : ಅದಕೇನ್... ಆತನ್ ಆರ ಮಗನ್... ಆವ ಪೆಸರ್... ಆವ ನಾಡ ಅರಸನ್?

ಚಂದ್ರಮತಿ : ಸಂದ ರವಿಕುಲತಿಲಕನ್ ಎನಿಪ ಆ ತ್ರಿಶಂಕುವಿನ ನಂದನನ್ ಅಯೋಧ್ಯಾಪತಿ ಹರಿಶ್ಚಂದ್ರನ್.

(ಎನೆ ನೊಂದು)

ಹರಿಶ್ಚಂದ್ರ : ಆತನ ಅಂಗನೆ... ಕುಮಾರರ್ ಏನಾದರ್... ಎಲ್ಲಿ ಇರ್ದಪರು... ಹೇಳ್.

ಚಂದ್ರಮತಿ : ಪೊಡವೀಶ್ವರನ್ ಹಿಂದೆ ಹರಸಿ ಹಾಳಮ್ ಬಿಟ್ಟು ಹಡೆದ ಸುತನ್ ಈತನ್... ಆತನ ವನಿತೆ ನಾನ್.

ಹರಿಶ್ಚಂದ್ರ : ಈ ತನಯನ್ ಮಡಿದ ಕಾರಣ ಆವುದು.

ಚಂದ್ರಮತಿ : ಎಮ್ಮಿಬ್ಬರಮ್ ಮಾರುಗೊಂಡ ಒಡೆಯನ ಅರಮನೆಗೆ ಹುಲುಹುಳ್ಳಿಯಮ್ ತಪ್ಪೆನ್ ಎಂದು ಅಡವಿಗೆ ಎಯ್ದಿದಡೆ, ಅಲ್ಲಿ ಕಾಳೋರಗಮ್ ಕಚ್ಚಿ ಈ ಕಂದನ್ ಮಡಿದನ್. ಈ ವಿಧಿಗೆ ಸೇರಿತು. ಹರಿಶ್ಚಂದ್ರನ ಇರವೇನ್.

ಹರಿಶ್ಚಂದ್ರ : ನುಡಿಯಲ್ ಅರಿಯದೆ ಸಕಲ ರಾಜ್ಯಮಮ್ ಹೋಗಾಡಿ, ಕಡೆಗೆ ಅಧಿಕ ಋಣಿಯಾಗಿ ನೆಲೆಗೆಟ್ಟು, ಮಂತ್ರಿ ಬೆರಸು ಅಡವಿಗುರಿಯಾಗಿ, ಕೈವಿಡಿದ ಸತಿಪುತ್ರರಮ್ ಸುಕ್ಷೇತ್ರದೊಳಗೆ ಮಾರಿ, ಕಡೆಗೆ ಚಂಡಾಲ ಕಿಂಕರನಾಗಿ ದೋಷಕ್ಕೆ ನಡುಗದೆ, ಕುಲಾಚಾರಮಮ್ ಬಿಟ್ಟು, ಜನಕೆ ನಗೆಗೆಡೆಯಾದ ಪಾತಕ ಹರಿಶ್ಚಂದ್ರನ್ ಅವನನ್ ಏನೆಂದು ನೆನೆದಪೆ.

ಚಂದ್ರಮತಿ : ಜಡೆವೊತ್ತಡಮ್, ಹಸಿಯ ತೊವಲ್ ಉಟ್ಟಡಮ್, ನಾಡ ಸುಡುಗಾಡಿನೊಳಗೆ ಇರ್ದಡಮ್, ನರಕಪಾಲಮಮ್ ಪಿಡಿದು ತಿರಿದು ಇರ್ದಡಮ್, ವಿಷ ಉಂಡಡಮ್, ಶವಶಿರೋಮಾಲೆ ಕಟ್ಟಿರ್ದಡಮ್, ಕಡು ಮರುಳ್ ಪಡೆಯ ಸಂಗಡ ಬತ್ತಲಿರ್ದಡಮ್, ಮೃಡನಲ್ಲದೆ ಅಖಿಲ ಲೋಕಕ್ಕೆ ಒಡೆಯನಿಲ್ಲ ಎಂಬ ನುಡಿಯಂತಿರೆ ಎನಗೆ ಆ ಹರಿಶ್ಚಂದ್ರನಲ್ಲದೆ ಇನ್ನಾರು ಗತಿ ಮತಿ.

(ಎಂದಳು. ಉರುವ ಅಬಲೆಯ ಉಚಿತವಚನಮ್ ಕರ್ಣಪಥದಿನ್ ಒಳಗೆ ಎರಗಿ, ಚಿತ್ತವನು ತೊತ್ತಳದುಳಿದು ಧೈರ್ಯಮಮ್ ಬರಿಕೈದು, ಕರಣಂಗಳಮ್ ಕದಡಿ, ಹೆಮ್ಮೆಯಮ್ ಹರಿದು, ಅಳಲನ್ ಒದೆದು ಎಬ್ಬಿಸಿ, ಮರುಕಮಮ್ ಮಸೆದು, ಕಂಬನಿ ಪೊನಲ ಕೋಡಿಯಮ್ ಕೊರೆದು, ಮತಿಗತಿ ಮಾಯೆಯಮ್ ತೋರಿ ಮೀರಿ, ನೇಸರ ಕುಲಜನ್ ಓರಂತೆ ಸಿಗ್ಗಾಗಿ, ತಾ ಮಾಡಿದ ಅಪರಾಧಮಮ್ ನೆನೆದನ್.)

ಹರಿಶ್ಚಂದ್ರ : ಈ ಸತಿಯನ್... ಈ ಶುಚಿಯನ್... ಈ ಪತಿವ್ರತೆಯ ನಾನ್ ಈಸು ಧಾವತಿಗೆ ಒಳಗುಮಾಡಿದೆನು. ನೀಚ ದ್ವಿಜೇಶಂಗೆ ಮಾರಿ ಮರೆದು ಈ ಸುತನನ್... ಈ ಸುಖಿಯನ್ ಈ ಸೊಬಗ ಸುಕುಮಾರನ ಓಸರಿಸದೆ ಉರಗ ಕೊಲುವಂತೆ ಮಾಡಿದೆನ್...

(ಎಂಬ ಹೇಸಿಕೆಯ ವಾರಾಶಿ ತುಂಬಿ ತುಳುಕಾಡಿ ಹೊರಸೂಸುವ ಅಳಲಮ್ ನಿಲಿಸಿ ನಿಲಿಸಲಾರದೆ ಮಗನ ಮೇಲೆ ದೊಪ್ಪನೆ ಕೆಡೆದನು.)

ಚಂದ್ರಮತಿ : ತನಗೆ ಹೊಯ್ ಕೈಯಪ್ಪ ಭೂಭುಜರನ್ ಓಲೈಸಿ ಧನವನ್ ಆರ್ಜಿಸಿ ತಂದು, ಸೆರೆಯ ಬಿಡಿಸುವನ್ ಎಮ್ಮ ಜನಪನ್ ಎಂದು ಆನ್ ಇರಲು, ಮಾದಿಗಂಗೆ ಆಳಾಗಿ ಸುಡುಗಾಡ ಕಾವ ಭಾಗ್ಯ ನಿನಗಾಯ್ತೆ ಭೂಪಾಲ.

(ಎಂದು ದುಃಖಕ್ಕೆ ಪುತ್ರನ ಶೋಕದ ಉರಿಗೆ ತನು ಹೇವರಿಸಿ, ವನಿತೆ ತಾ ಮನನೊಂದು ಬೆಂದು ಬೆರಗಾಗಿ ಚಿಂತಿಸುತ ತೂಕದ ಕೋಲ ತೊಲೆಯಾದಳು.)

ಹರಿಶ್ಚಂದ್ರ : ಪ್ರಕಟ ರಾಜ್ಯಭ್ರಷ್ಟನಾಗಿ ಚಂಡಾಲ ಸೇವಕನಾದ ಪಾಪಿಯನ್ ನೀಚನನ್ ಅನೂನಪಾತಕನನ್ ಎನ್ನನ್ ಪೋಲ್ತು ಕೆಡದೆ, ನಿಮ್ಮಜ್ಜ ತ್ರಿಶಂಕು ಭೂವರನ ಅಂದದಿ ಈ ಕುಮಾರಕನ್ ಸಕಲ ರಾಜ್ಯಕ್ಕೆ ಒಡೆಯನಾಗದಿರನ್ ಎಂಬ ನಂಬುಗೆಯಲ್ ಆನ್ ಇರಲು ಕಂದ, ನೀನ್ ಅಕಟ ನಿಷ್ಕಾರಣಮ್ ಮಡಿವರೇ ತಂದೆ.

(ಎಂದು ಅರಸನು ಅಳಲ್ ತೊಡಗಿದನ್.)

ಹರಿಶ್ಚಂದ್ರ : ಮುಂದೆ ನೀನ್ ಆಳಲಿಹ ಧರೆಯನ್ ಅನ್ಯರಿಗೆ ಇತ್ತನ್ ಎಂದು ನುಡಿಸೆಯೊ... ಮತ್ತೆ ಅದಲ್ಲದೆ ಎಮ್ಮಿಬ್ಬರಮ್ ತಂದು ಲೋಗರಿಗೆ ಮಾರಿದನ್ ಎಂದು ನುಡಿಸೆಯೋ... ಚಾಂಡಾಲ ಸೇವೆ ಮಾಡಿ ನಿಂದೆಯಿಲ್ಲದ ಸೂರ್ಯಕುಲಕೆ ಕುಂದಮ್ ತಂದನ್ ಎಂದು ನುಡಿಸೆಯೊ... ನುಡಿಯದಿಹ ಹದನನ್ ಅರುಪಬೇಕು.

(ಎಂದು ಒರಲಿ ಬಾಯ್ಬಿಟ್ಟು ಕರೆದು ಸುತನಲ್ಲಿ ಮಾರುತ್ತರವನು ಹಾರಿದನು.)

ಹರಿಶ್ಚಂದ್ರ : ಅರಿರಾಯರೊಳು ಕಾದಿ ಮಡಿದಾತನಲ್ಲ; ಮುನಿವರರ ಯಾಗವ ಕಾದು ಮಡಿದಾತನಲ್ಲ; ದೇವರಿಗೆ ಹಿತವಾಗಿ ಮಡಿದವನಲ್ಲ; ಮಾಂಸದಾನವ ಬೇಡಿದರ್ಗೆ ಒಡಲನು ಅರಿದರಿದು ಕೊಟ್ಟು ಮಡಿದವನಲ್ಲ; ಹುಳ್ಳಿಯಮ್ ತರಹೋಗಿ ಕಾಡೊಳಗೆ ಬಡಹಾವು ಕಚ್ಚಿ, ಮುನಿವರಿಗೆ ನಗೆಗೆಡೆಯಾಗಿ ನಿಷ್ಕಾರಣಮ್ ಮಡಿವರೇ ಕಂದ ಹೇಳ್.

"ಮೇಗೆ ಮಗನ್ ಅರಸಾಗಬೇಕೆಂಬ ಮರುಕದಿಮ್ ಯಾಗಕ್ಕೆ ಸುತನನ್ ಅರಿದು ಇಕ್ಕಲಾರದೆ ಲೋಭಿಯಾಗಿ ಮುನಿಪುತ್ರನನ್ ಮಾರುಗೊಂಡು ಇತ್ತನ್" ಎಂಬ ಅಪಕೀರ್ತಿಯೇ ಉಳಿದುದು. "ಲೋಗರ ಮಗನನ್ ಇಕ್ಕೆ ನೆಲೆಯ ನೋಡಿದನ್. ಅಕಟ... ಸಾಗುದುರೆಗೆ ಹುಲ್ಲನ್ ಅಡಕಿದನು... ಒಣಗಿದ ಹಣ್ಣ ಕಾಗೆ ಕದುಕಿತ್ತು" ಎಂದು ಸಂದ ಜನ ನಿಂದೆಗೆಯ್ವ ಅಂದವಾಯ್ತು ಎನಗೆ.

ಚಂದ್ರಮತಿ : ಸುತನ ರೂಪಿನ ಸೊಬಗನ್; ಅಂಗಸುಕುಮಾರದ ಉನ್ನತಿಯ; ಬಾಲ್ಯದ ಚೆಲುವನ್; ಎಲ್ಲಾ ಕಳಾಪ್ರವೀಣತೆಯ;

ಗರುವಿಕೆಯ; ಗಾಡಿಯ; ಧೃತಿಯನ್; ಒಟ್ಟಜೆಯನ್; ಅಳವಟ್ಟ ನುಡಿಯ ಚದುರ; ನುತಲಕ್ಷಣಾವಳಿಯನ್; ಅಧಿಕ ಗುಣಗಣವನ್; ಆಯತಿಗೆಟ್ಟು ನೆನೆದು ಶೋಕಿಪೆನ್ ಎಂದಡೆ, ಆ ಕಲ್ಪಶತ ಎಯ್ದದು.

ಅರಸ, ದುಃಖವನು ಸಂತೈಸಿಕೊಂಡು ಎನ್ನನ್ ಅವಧರಿಸು. ಮುದಿದ ಇರುಳು ಕಡೆಗಾಣ್ಬ ಕುರುಹು ಆಗುತಿದೆ. ಸೂರ್ಯನ್ ಉದಯಿಸಿದನಾದಡೆ ಎನ್ನವರ್ ಎನ್ನನ್ ಅರಸಿ ತಳುವಿದಳ್ ಎಂದು ಕೊಲ್ಲದೆ ಇರರ್. ಅರಸ, ಈ ಕುಮಾರನನ್ ಈಗ ದಹಿಸಬೇಕು.

(ಎಂದು ಸುದತಿ ನುಡಿಯಲು, ಅವನೀಶ ನುಡಿದನ್.)

ಹರಿಶ್ಚಂದ್ರ : ತೆರೆಯನಿಕ್ಕದೆ ಸುಡಲ್ ಬಾರದು. ಉಳ್ಳಡೆ ಕೊಡು. ಇಲ್ಲದಡೆ ಬೇಗದಿ ಹೋಗಿ ನಿನ್ನ ಒಡೆಯನನ್ ಬೇಡಿ ತಾ. ತಾರದಿರೆ ಸುಡಲ್ ಬೇಡ.

ಚಂದ್ರಮತಿ : ಒಡೆಯರ್ ಈವವರಲ್ಲ.

ಹರಿಶ್ಚಂದ್ರ : ಬೇಡಿ ನೋಡಿ ಕೊಡದಡೆ, ಋಣಂಬಡು. ಹುಟ್ಟದಿರ್ದಡೆ ಸುಡುವ ಗೊಡವೆ ಬೇಡ. ಅನ್ನೆಗಮ್ ಬಂದನಿತು ಬಕ್ಕೆ.

(ಎಂದು ತರುಣನ್ ಉಟ್ಟುದನು ಪೊಡವೀಶ್ವರನ್ ಕೊಂಡು, ಅತ್ತಲ್ ತಿರುಗಿ ತನ್ನ ಕಾಪಿನ ಗುಡಿಗೆ ನಡೆಗೊಂಡನ್. ಇತ್ತಲ್ ಮುರಕೆ ಬರುತಿಪ್ಪ ಮಡದಿಗೆ ಎಡೆವಟ್ಟೆಯೊಳು ಬಂದ ಸಂಕಟವನ್ ಆವ ಜೀವರು ಕೇಳ್ವರು.)

❖

ಪ್ರಸಂಗ–೨೪

ಚಂದ್ರಮತಿಯ ಮೇಲೆ ಕೊಲೆಯ ಆರೋಪ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ಲೋಹಿತಾಶ್ವನ ಮರಣ, ಚಂದ್ರಮತಿಯ ದುಃಖ' ಎಂಬ ಎಂಟನೆಯ ಅಧ್ಯಾಯದ ೪೫ ರಿಂದ ೫೬ನೆಯ ಪದ್ಯದವರೆಗಿನ ಹನ್ನೆರಡು ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು:

ವಿಶ್ವಾಮಿತ್ರ : ಒಬ್ಬ ಮುನಿ

ವೀರಬಾಹುಕ : ಕಾಶಿ ನಗರದ ಸುಡುಗಾಡಿನ ಒಡೆಯ.

ಚಂದ್ರಮತಿ : ಹರಿಶ್ಚಂದ್ರನ ಹೆಂಡತಿ. ಲೋಹಿತಾಶ್ವನ ತಾಯಿ.

ಹರಿಶ್ಚಂದ್ರ : ಅಯೋಧ್ಯಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಲಾಳ ದೇಶದ ರಾಜನಾಗಿದ್ದವನು. ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜ್ಯ ಸಂಪತ್ತನ್ನು ನೀಡಿ, ಯಾವುದೇ ರಾಜ್ಯವಾಗಲಿ ಇಲ್ಲವೇ ಸಂಪತ್ತಾಗಲಿ ಇಲ್ಲದ ವ್ಯಕ್ತಿ. ಈಗ ವೀರಬಾಹುಕನ ದಾಸನಾಗಿ ಕಾಶಿ ನಗರದ ಸುಡುಗಾಡಿನ ಕಾವಲುಗಾರನಾಗಿದ್ದಾನೆ.

ರಾಜಭಟರು–ಕಾಶೀರಾಜ–ಕಾಶಿಯ ಪ್ರಜೆಗಳು

ಚಂದ್ರಮತಿಯ ಮೇಲೆ ಕೊಲೆಯ ಆರೋಪ

ಇತ್ತಲ್ ಪುರಕೆ ಬರುತಿಪ್ಪ ಮಡದಿಗೆ ಎಡೆವಟ್ಟೆಯೊಳು ಬಂದ ಸಂಕಟವನ್ ಇನ್ನಾವ ಜೀವರು ಕೇಳ್ವರು. ಮುಂದೆ ಭೂಪನ ಸತಿಗೆ ಉಪದ್ರವಮ್ ಮಾಡಬೇಕೆಂದು ಕೌಶಿಕ ಮುನೀಂದ್ರನ್ ನೆನೆದು ಚಿಂತಿಸುತ್ತ... ಒಂದು ಉಪಾಯಮ್ ಕಂಡು... ಚೋರರಮ್ ಕೆಲಬರಮ್ ನಿರ್ಮಿಸುತ ಅವರ್ಗೆ ಎಂದನು.

ವಿಶ್ವಾಮಿತ್ರ : ಇಂದು ನೀವ್ ಈ ಪುರವನ್ ಆಳ್ವ ಅರಸನ ಅಣುಗನನ್ ಕೊಂದು, ಆಕೆ ಬಪ್ಪ ಬಟ್ಟೆಯೊಳಿರಿಸಿ ಬನ್ನಿಹೋಗಿ.

(ಎಂದು ಬೆಸಸಲು, ಯತಿಪನ ಆಜ್ಞೆಯಿಂದ ಅವದಿರ್ ಎಯ್ತಂದು ಪೊಳಲಮ್ ಸಾರ್ದರು. ಚೋರರ್ ಒಳಪೊಕ್ಕು ಮಿಕ್ಕು ಆ ಪುರದ ಭೂಪನ ಕುಮಾರನನ್ ಕಂಡು ಓಡಿಬಂದು, ಗೊಂದಿಯೊಳ್ ಅಲಂಕಾರಮಮ್ ಕೊಂಬ ಭರದಿನ್ ಕೊರಳನ್ ಅರಿಯಲ್... ಆ ಶಿಶು ಒರಲಲ್ ಆ ದನಿಯನು ದೂರದಿಮ್ ಕೇಳ್ದು)

ಚಂದ್ರಮತಿ : ಎನ್ನ ಮಗನಾಗದಿರನ್... ಆರೋ ನಿರೋಧಿಸುವರ್.

(ಎಂದು ಓಜೆ ಹುಟ್ಟದ ಅವಿಚಾರದಿಮ್ ಹರಿದಳ್ ಎಂಬಾಗಳ್, ಜಗವರಿಯಲು ಅತಿದುಃಖಿಗೆ ಉಂಟೇ ಬುದ್ಧಿ. ಸಾರೆ ಬರೆ, ಬಿಟ್ಟೋಡಿ ಹೋದ ಚೋರರ ಖಡ್ಗ ಧಾರೆಯಿಮ್ ಬಸವಳಿದ ಹಸುಳೆಯನ್ ತನ್ನಯ ಕುಮಾರನೆಂದೇ ಬಗೆದು,

ಕರೆಕರೆದು ತಲೆದಡವಿ ತಡವರಿಸಿ ಮೆಯ್ ಕುರುಹನು ಹಾರುತಿರೆ, ಬಾರಿಸುವ ಬೊಂಬುಳಿಯ ಕೊಂಬುಗಳ ಭೇರಿಗಳ ಬೊಬ್ಬೆಗಳ ಕಳಕಳದೊಳ್ ಅರಸಿ ಬಂದು, ಆರುತ್ತ ಹರಿತಂದ ಹಿರಿಯ ಹುಯ್ಯಲ ಭಟರು ಸತಿಯನು ಕಂಡು ಪಿಡಿದರು.)

ರಾಜಭಟರು : ಎಲೆಲೆ... ಇವಳು ರಕ್ಕಸಿಯಾಗದಿರಳ್. ನಾವ್ ಇಲ್ಲಿ ಕೊಲ ಬೇಡವು. ಈ ಅಂಗವೆರಸಿ ಕೊಂಡೊಯ್ದು ಭೂತಲಪತಿಗೆ ಕೊಡುವೆವು.

(ಎಂದು ಅಸುವಳಿದ ಹಸುಳೆಯಮ್ ಹೊರಿಸಲಾಗ, ತಲೆಯಿಂದ ಒಸರ್ವ ರಕುತ ಸುರಿದು, ಉಟ್ಟ ಸೀರೆ ತೊಪ್ಪನೆ ತೋಯೆ, ಲಲನೆಯನ್ ಹೆಡಗೈಯ ಬಲಿದ ನೇಣಮ್ ಪಿಡಿದು ರಾಜಬೀದಿಯೊಳಗೆ ಕಿತ್ತ ಅಲಗುಗಳ ನಡುವೆ ಜಡಿಜಡಿದು ನಡಸಿ ತಂದರು.)

ಚಂದ್ರಮತಿ : ಎನ್ನನ್ ಇವರ್ ಆಡಿಸದಡೆ ಏನನ್ ಆಡುವೆನ್.

(ಎಂದು ತನ್ನ ಮನದೊಳು ತಾನೆ ತಿಳಿದು ನಿಶ್ಚಯಿಸಿದಳು.)

ಮುನ್ನ ಏಗಳ್ ಆವಾವ ದುಃಖವುಂಟು ಅವನ್ ಎಯ್ದೆ ಕಂಡೆನ್... ಉಂಡೆನು... ತಣಿದೆನು. ಇನ್ನೇನ ಕಾಣಲಿರ್ದಪೆನ್. ಅರಸ ಕೇಳಿದಡೆ, ನಿನ್ನ ಮಗನನ್ ಕೊಂದ ಪಾಪಿ ಆನ್ ಎಂದಾಡಿ ಅನ್ಯಾಯದಿಮ್ ಸಾವೆನ್.

(ಎನುತ ಬರಲ್, ಓಲಗದ ಗಜಬಜವನ್ ಏನ್ ಪೊಗಳ್ವೆನು.)

ರಾಜಭಟರು : ಅಲ್ಲಿ ನೋಡು... ಇಲ್ಲಿ ನೋಡು... ಅತ್ತ ಹರಿ... ಇತ್ತ ಹರಿ ತುರಗಮಮ್ ಹಲ್ಲಣಿಸು... ಕೈದುಗೊಳ್ಳು... ಊರಮನೆ ಎಲ್ಲವಮ್ ಸೋದಿಸುವುದು... ಊರ ದಾರಿಗಳಲ್ಲಿ ಕಂಡಿರಾದಡೆ ಕಳ್ಳರ ಕೊಲ್ಲು... ತಿದಿಯನ್ ಉಗಿ.

(ಎಂಬ ಕಳಕಳರವದ ಘಲ್ಲಣೆಯ ಭಟರ ತಿಂತಿಣಿಯೊಳ್ ಓಲಗಮ್ ಕೊಟ್ಟು, ಉಪ್ಪರಿಗೆ ಜಡಿದು ಅಲ್ಲಾಡುವಂತೆ ಕೋಪಾಗ್ನಿ ರೂಪಾದ ಭೂಪನಿರಲು...)

ರಾಜಭಟರು : ಅವಧರಿಸು, ಹಸುಳೆಯನ್ ಕದ್ದು ಕೊಂಡೊಯ್ದು ನೋಯಿಸಿದ ರಕ್ಕಸಿಯ ಹಿಡಿತಂದೆವು.

(ಎನಲು ಕಂಡು ಶಂಕಿಸುತ...)

ಕಾಶಿ ರಾಜ : ನೀನಾರ್... ಎತ್ತಣವಳ್... ಸುಕುಮಾರಕನನ್ ಏಕೆ ಕೊಂದೆ.

(ಎಂದು ಅರಸನ್ ಬೆಸಗೊಳಲು)

ಚಂದ್ರಮತಿ : ಆನ್ ದನುಜೆಯಲ್ಲ. ಆನ್ ಮನುಜೆ. ಅರ್ಥ ವಿಷಯದ ಅಪೇಕ್ಷೆಯಿಮ್ ಈ ಸಿಸುವ ಕೊಂಡೊಯ್ದು ಕೊಂದೆನ್. ಎನ್ನನ್ ನೀನ್ ಒಲಿದಂತೆ ಮಾಡು.

(ಎಂದಳ್ ಆ ರಾಣಿ ವಸುಧಾಧಿಪತಿಗೆ)

ಕಾಶಿ ರಾಜ : ಹೆದರದಿರು... ತೆಕ್ಕದಿರು... ಅಂಜದಿರು. ಹೇಳು, ಲೋಗರ್ ಇಟ್ಟುದೊ... ನಿನ್ನ ಕೃತಕವೋ. ಧರ್ಮಾಧಿಕರಣದವರಮ್ ಕರಸುವೆನ್... ನುಡಿಸುವೆನ್... ಕಾವೆನ್.

(ಎಂದು ಅವನಿಪನ್ ಬೆಸಗೊಂಡಡೆ)

ಚಂದ್ರಮತಿ : ಇದಕೆ ಇನ್ನು ಧರ್ಮಾಧಿಕರಣ ಏಗುವುದು. ಕೊಂದುದು ದಿಟಮ್... ಸತ್ತ ಶಿಶು ಕೈಯಲಿದೆ. ಇದಕೆ ತಕ್ಕುದನ್ ಈಗ ಕಾಂಬುದು.

(ಎಂದು ಜೀವದಾಸೆಯನ್ ಏನುವಮ್ ಹಾರದೆ ಆಡಿದಳು.)

ಪ್ರಜೆ–೧ : ಕೊಂದೆ... ಕೊಂದೆನ್... ಕೊಂದೆನ್ ಎಂದು ತನ್ನಿಂದ ತಾನೆ ಎಂದಡೆ... ಇನ್ನೇಕೆ... ಲೋಕದ ಮಾತು.

ಪ್ರಜೆ–೨ : ಕೊಂದರಮ್ ಕೊಂದು ಕಳೆವುದೆ ಧರ್ಮ.

ಪ್ರಜೆ–೩ : ಜಗವರ್ತಿಯಮ್ ಹೊತ್ತಿಸು.

ಪ್ರಜೆ–೪ : ಎಳೆಹೂಟೆಯಮ್ ಹೂಡಿಸು.

ಪ್ರಜೆ–೫ : ಸಂದುಸಂದಮ್ ಕಡಿಸು.

ಪ್ರಜೆ–೬ : ಕಿವಿಮೂಗನ್ ಅರಿ.

ಪ್ರಜೆ–೭ : ಬಹಳದಿಂದ ತಿವಿ.

(ಎಂದು ಒಬ್ಬರ್ ಒಂದೊಂದನ್ ಎಂದುದು... ಆ ಮಂದಿ ತನತನಗೆ ನುಡಿಯುತ್ತಿರಲ್ ಅರಸನು ವೀರಬಾಹುಕನ ಕರಸಿದನ್.)

ಕಾಶಿರಾಜ : ಭೂನುತ ಕುಮಾರನನ್ ದಹಿಸಿ, ದೂವೆಯ ಕೆಲದೊಳ್ ಈ ನರಕಿ ವನಿತೆಯನ್ ಅನಾಮಿಕನ ಕಯ್ಯೊಳ್ ಅನುಮಾನ ವಿಲ್ಲದೆ ಕೊಲಿಸು... ಹೋಗು.

(ಎಂದು ವೀರಬಾಹುಕನ ಕೈಯಲಿ ಕಳುಹಲು, ವೀರಬಾಹುಕನು ರಾಜನ ಆಜ್ಞೆಯನ್ನು ಪಾಲಿಸಲು ಚಂದ್ರಮತಿಯನ್ನು ಕರೆದೊಯ್ಯುತ್ತಾ..)

ವೀರಬಾಹುಕ : ಏನ್ ಎಂದುದದಮ್ ಮಾಳ್ಪೆನ್ ಎಂದು ಸುಡುಗಾಡನ್ ಅತ್ಯಾನಂದದಿಮ್ ಕಾವ ಚಂದುಗನ ಕೈಯೊಳ್ ಈ ಹೀನವನಿತೆಯ ಕೊಲಿಸುವೆನ್... ಬೇಗ... ಕರೆ.

(ಎನಲ್ಕೆ ಅರರೆ ಭೂಪನ್ ಬಂದನು.)

ವೀರಬಾಹುಕ : ವಸುಧಾಧಿಪತಿಯ ನೇಹದ ಮಗನ ಕೊಂದ ರಕ್ಕಸಿ ಇವಳನ್ ಆ ರುದ್ರಭೂಮಿಯೊಳಗೆ ಎಯ್ದೆ ತಪ್ಪಿಸದೆ ಕೊರಳಮ್ ಕೊರೆದು ಬಿಸುಡು.

(ಎಂದು ಬೆಸನ ಕೊಡಲ್, ಮುಂದಲೆಯ ಅಡಸಿ ಪಿಡಿದು... ಕುಸುಕಿ ಕೆಡೆಮೆಟ್ಟಿ ಕೈಗಳ ಸೇದಿ ಬೆಂಗೆ ಬಾಗಿಸಿ... ಬಿಗಿದು ಹೆಡಗಯ್ಯ... ನೇಣಿಂದ ಹೊಡೆದು ದಟ್ಟಿಸಿ...)

ಹರಿಶ್ಚಂದ್ರ : ಪಾಪಿ ಹೊಲತಿ ನಡೆನಡೆ....

(ಎಂದು ತನ್ನ ತವಗದ ಎಡೆಗೆ ನಡಸಿ ತಂದನ್.)

❖

ಪ್ರಸಂಗ–೨೫

ವಿಶ್ವೇಶ್ವರ ಸಾಕ್ಷಾತ್ಕಾರ

ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ

(ಸಂಪಾದಕರು)

ಹರಿಶ್ಚಂದ್ರ ಕಾವ್ಯ ಸಂಗ್ರಹ

ಈ ಹೊತ್ತಗೆಯ 'ವಿಶ್ವೇಶ್ವರ ಸಾಕ್ಷಾತ್ಕಾರ' ಎಂಬ ಒಂಬತ್ತನೆಯ ಅಧ್ಯಾಯದ ೧ ರಿಂದ ೨೩ನೆಯ ಪದ್ಯದವರೆಗಿನ ಪದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ.

ಪಾತ್ರಗಳು

ಹರಿಶ್ಚಂದ್ರ : ಅಯೋಧ್ಯಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಲಾಳ ದೇಶದ ರಾಜನಾಗಿದ್ದವನು. ವಿಶ್ವಾಮಿತ್ರ ಮುನಿಗೆ ತನ್ನ ಸಕಲ ರಾಜಸಂಪತ್ತನ್ನು ನೀಡಿ, ಯಾವುದೇ ರಾಜ್ಯವಾಗಲಿ ಇಲ್ಲವೇ ಸಂಪತ್ತಾಗಲಿ ಇಲ್ಲದ ವ್ಯಕ್ತಿ. ಈಗ ವೀರಬಾಹುಕನ ದಾಸನಾಗಿ ಕಾಶಿ ನಗರದ ಸುಡುಗಾಡಿನ ಕಾವಲುಗಾರನಾಗಿದ್ದಾನೆ.

ದೇವತೆಗಳು : ದೇವಲೋಕದಲ್ಲಿ ನೆಲೆಸಿರುವವರು.

ಚಂದ್ರಮತಿ : ಹರಿಶ್ಚಂದ್ರನ ಹೆಂಡತಿ. ಲೋಹಿತಾಶ್ವನ ತಾಯಿ.

ವಿಶ್ವಾಮಿತ್ರ : ಒಬ್ಬ ಮುನಿ.

ಕಾಶಿ ವಿಶ್ವನಾಥ : ಕಾಶಿ ನಗರದ ದೇವರು.

ವಸಿಷ್ಠ : ಒಬ್ಬ ಮುನಿ.

ವಿಶ್ವೇಶ್ವರ ಸಾಕ್ಷಾತ್ಕಾರ

"ಇಂದು ಎನ್ನ ಕುಲಜನ್ ಎನಿಸುವ ಹರಿಶ್ಚಂದ್ರನನ್ ಹೆಂದದ ಚತುರ್ದಶ ಜಗಂಗಳ್ ಅರಿವಂತು ಮೆರೆವ ಸಂಭ್ರಮದ ಸಡಗರವ ನೋಳ್ಪೆನ್" ಎಂದು ತರುಣೇಂದುಧರನಹ ವಿಶ್ವಪತಿ ಅಪವಿತ್ರ ತಿಮಿರಪಟಲ ಅಮಿತ್ರನೆಂದು ಎನಿಪನ್ ಅಂಬುಜಮಿತ್ರನ್ ಕುಂದದ ಉದ್ದವನ್ ಏರಿ ನಿಂದಿರ್ದನೋ ಎನಿಪ್ಪ ಅಂದದಿಂದ ಉದಯಗಿರಿ ಶಿಖರಕ್ಕೆ ರಾಗದಿಮ್ ಬಂದನ್;

ಹೆಡಗಯ್ಯ ಬಿಗಿದ ನೇಣಮ್ ಕೊಯ್ದು ಬಿಸುಟು... ನಿಡುದಡದಲ್ಲಿ ಮೂಡ ಮುಂತಾಗಿ ಕುಳ್ಳಿರಿಸಿ... ಹಿಂದಡದಲ್ಲಿ ಕುಸಿದು ನೀಡಡಿಯಿಟ್ಟು ನಿಂದು... ಖಡ್ಗವ ಸೆಳೆದು ಜಡಿದು ನೋಡಿ... ಹೆಡತಲೆಗೆ ಮೋಹಿ ಕೈಯೆತ್ತಿ

ಹರಿಶ್ಚಂದ್ರ : ಕಂಧರ ಹರಿಯೆ ಹೊಡೆಯಲ್ ಅನುವಾದೆನ್... ಅನುವಾದೆನ್... ಅನುವಾಗು... ಆಗು. ಮಡದಿ, ನೆನೆ ನಿನ್ನ ದೈವವನು ಬಿಡದೆ, ಎನ್ನೊಡೆಯನನ್ ಹರಸು... ಹರಸು.

ದೇವತೆಗಳು : ಆ ಹೊಯ್ದನ್... ಆ ಹೊಯ್ದನ್... ಎಲೆಲೆ... ಶಿವಶಿವ... ಅಷ್ಟದೇಹಿ... ನೀನೇ ಶರಣು... ಅಬಲೆಯನು ರಕ್ಷಿಸು... ದುರ್ಮೋಹಿ ಪಾಪಿ ವಿಶ್ವಾಮಿತ್ರ ಇನ್ನಾದಡಮ್ ಸತಿಯ ಕೊಲೆಯಮ್ ನಿಲಿಸಲು ಹೋಹುದೇನ್.

(ಎಂದು ಓವಿ ಬೇಡಿಕೊಳುತಮ್ ಸುರವ್ಯೂಹಮ್ ಅಂಬರದಲ್ಲಿ ಹೂಮಳೆಗಳಮ್ ಪಿಡಿದು ಮೋಹರಮ್ ಪೆತ್ತು ನೋಡುತ್ತಿರಲು...)

ಚಂದ್ರಮತಿ : ಹರಕೆಗಳನ್ ಅವಧರಿಸು.

(ಎಂದಳು. ಬಲಿದ ಪದ್ಮಾಸನಮ್...ಮುಗಿದ ಅಕ್ಷಿ... ಮುಚ್ಚಿದ ಅಂಜಲಿ ಬೆರಸಿ ಗುರುವಸಿಷ್ಠಂಗೆ ಎರಗಿ... ಶಿವನ ನಿರ್ಮಲರೂಪ ನೆನೆದು... ಮೇಲಮ್ ತಿರುಗಿ ನೋಡಿ)

ಚಂದ್ರಮತಿ : ಭೂ...ಚಂದ್ರ... ಅರ್ಕ... ತಾರ... ಅಂಬರಮ್ ಕಲಿ ಹರಿಶ್ಚಂದ್ರ ರಾಯನ್ ಸತ್ಯವೆರಸಿ ಬಾಳಲಿ... ಮಗನ್ ಮುಕ್ತನಾಗಲಿ... ಮಂತ್ರಿ ನೆನದುದಾಗಲಿ... ರಾಜ್ಯದ ಒಡೆಯ ವಿಶ್ವಾಮಿತ್ರ ನಿತ್ಯನಾಗಲಿ... ಹರಕೆಹೊಡೆ....

(ಎಂದಳು. ಹರಕೆಯಮ್ ಕೇಳಿ... ಹವ್ವನೆ ಹಾರಿ... ಬೆರಗಾಗಿ... ಮರವಟ್ಟು ನಿಂದು.)

ಹರಿಶ್ಚಂದ್ರ : ಭಾಪುರೆ... ವಿಧಿಯ ಮುಳಿಸೆ. ಹೋದ ಇರುಳ್ ಎನ್ನ ಸುತನ ದುರ್ಮರಣಮಮ್ ತೋರಿ, ಕೈಯೊಡನೆ ಮತ್ತೆ ಈಗಳ್ ಎನ್ನ ವರಸತಿಯ ತಲೆಯನ್ ಆನ್ ಎನ್ನ ಕೈಯಾರೆ ಪಿಡಿದು ಅರಿವಂತೆ ಮಾಡಿದೆ. ಇದಕ್ಕೆ ನಾನ್ ಇನಿತು ಹೇವರಿಸುವವನಲ್ಲ. ಪತಿಯಾಜ್ಞೆ ಉಳಿದಡೆ ಸಾಕು.

(ಎನುತ್ತ ಕೊಲಲ್ ಅನುವಾದನು. ಮನದ ಶಂಕೆಯನ್ ಅಳಿದು ಹೊಡೆಯಲ್ ಅನುವಾದ ಭೂಪನ ಭಾವಮನ್ ವಿಶ್ವಾಮಿತ್ರನು ಕಂಡು ಅಂಬರದೊಳಿದ್ದು...)

ವಿಶ್ವಾಮಿತ್ರ : ಕೇಳ್, ಹೊಡೆಯಬೇಡ... ಎನ್ನ ನಂದನೆಯರನ್ ಮದುವೆಯಾದಡೆ ಸತ್ತ ಮಗನನ್ ಎತ್ತುವೆನ್... ಇವಳ ತಲೆ ಕಾವೆನು... ಕೊಂಡ ಧನಮಮ್ ವಿನಯದಿಮ್ ಕೊಟ್ಟು, ನಿನ್ನ ಬಂಧನ ಮೋಕ್ಷಮಮ್ ಮಾಡಿ... ರಾಜ್ಯಮಮ್ ಪೊಗಿಸಿ... ಮುನ್ನಿನ ಪರಿಯಲಿ ಇರಿಸುವೆನ್.

(ಎಂದನ್. ತಿರುಗಿ ಮೇಲಮ್ ನೋಡಿ ಕಂಡು...)

ಹರಿಶ್ಚಂದ್ರ : ಇದೇನ್ ಮುನಿ... ನಿಮ್ಮ ಹಿರಿಯತನಕೆ ಈ ಮಾತು ಯೋಗ್ಯವೇ... ಕೇಳ್, ಎನ್ನ ಸಿರಿಪೋದಡೇನು... ರಾಜ್ಯಮ್ ಪೋದಡೇನು... ನಾನ್ ಆರ ಸಾರಿ ಇರ್ದಡೇನು... ವರಪುತ್ರನ ಅಸುವಳಿದು ಪೋದಡೇನ್... ನಾನ್ ಎನ್ನ ತರುಣಿಯನ್ ಕೊಂದಡೇನ್... ಕುಂದೆ... ಸತ್ಯವನು ಬಿಟ್ಟಿರನ್ ಎನಿಸಿದಡೆ... ಸಾಕು.

(ಎಂದು ಎತ್ತಿ ಹಿಡಿದ ಖಡ್ಗವ ಜಡಿಯುತ ಇಂತು ಎಂದನು.)

ಹರಿಶ್ಚಂದ್ರ : ಇನ್ನೆಗಮ್ ಆನ್ ಇಂದು ತನಕಮ್ ಎನ್ನ ದುಷ್ಕರ್ಮ ವಶದಿಂದಾದ ಕರ್ಮವೆಂದು ಬಗೆದೆನ್... ಕಡೆಗೆ ನಿನ್ನ ಗೊಡ್ಡಾಟವೇ... ಹೊಲೆಯ ನಾದವನ್, ಇನ್ನು ಸತಿಗಿತಿಯ ಕೊಲೆಗೆ ಹೇಸಿ ಬೆನ್ನೀವೆನೇ... ಇದಮ್ ತೋರಿ ಸಿಕ್ಕಿಸಬಂದ ಗನ್ನಗತಕಕ್ಕೆ ಸೆಡೆವೆನೆ. ಸಡಿಫಡ.

(ಎನುತ ಆರ್ದು ನನ್ನಿಕಾರನ್ ಎಲೆಲೆ... ಶಿವಶಿವ... ಮಹಾದೇವ... ವಧುವನ್ ಹೊಡೆದನ್ ಹೊಡೆದನು. ಹೊಡೆದ ಕಡುಗದ ಬಾಯಕಡೆಯ ಹೊಡೆಗಳನ್ ಆಂತು, ಮಡದಿಯ ಎಡೆಗೊರಳ ನಡುವೆ ಅಡಸಿ ಕೆಂಜಡೆಯ... ಶಶಿಕಳೆಯ ಸುರ ನದಿಯ... ಬಿಸಿಗಣ್ಣ... ಫಣಿಕುಂಡಲದ... ಪಂಚಮುಖದ... ಎಡದ ಗಿರಿಜೆಯ... ತಳಿತ ದಶಭುಜದ... ಪುಲಿ ತೊಗಲಿನ ಉಡಿಗೆಯ... ಮಹಾವಿಷ್ಣು ನಯನವೇರಿಸಿದ ಮೆಲ್ಲಡಿಯ... ಕಾಶೀರಮಣ ವಿಶ್ವನಾಥನ್ ಮೂಡಿದನು.

ಸುರರ ನೆರವಿ ಜಯಜಯ ಎನುತಿರೆ... ಅಪ್ರತಿಮ ದೇವಾಧಿದೇವ ಪಂಪಾ ವಿರೂಪಾಕ್ಷನೆಡೆಗೆ ಮುರಹರನ್ ಬಂದನ್; ಅಬ್ಜಾಸನನ್ ಬಂದನ್; ಅಮರರ ವರನ್ ಬಂದನ್; ಅಗಜಾಪಿತನ್ ಬಂದನ್; ಈಶ್ವರಸುತನ್ ಬಂದನ್; ಈರಾರು ರವಿಗಳು ಬಂದರ್; ಇಕ್ಷು ಕೋದಂಡ ಬಂದ; ಸುರುಚಿರ ನವಗ್ರಹಂಗಳು ಬಂದರ್; ಎಯ್ದುವ ಅವಸರದೊಳ್ ಅವರ್ ಇವರ್ ಎನ್ನಲೇಕೆ... ಇನ್ನು ಸರ್ವದೇವರು ಬಂದರ್;

ಕುಡಿದ ಔಷಧಮ್ ಬಾಯ್ಗೆ ನಿಗ್ರಹಮ್ ಮಾಡಿ, ತಾಳ್ದ ಒಡಲಿಂಗೆ ಸುಖವನ್ ಈವಂತೆ... ಲೋಕದ ಕಣ್ಗೆ ಕಡುಮುಳಿದರಂತೆ ತೋರಿಸಿ ಸತ್ಯಶುದ್ಧವಪ್ಪನ್ನೆಗಮ್ ಕಾಡಿ... ನೋಡಿ ಕಡೆಯೊಳು ಹರಿಶ್ಚಂದ್ರ ರಾಯಂಗೆ ಗಣವೆರಸಿ ಮೃಡನನ್ ಎಳತಂದಿತ್ತು. ಮೂಜಗದ ಕಡೆಗೆ ಕೀರ್ತಿಯಮ್ ಹರಹಿದ ಮುನಿವರೇಣ್ಯ ವಿಶ್ವಾಮಿತ್ರ ವಸಿಷ್ಠ ಸಹಿತ ಬಂದನು. ಆಗ ಹರಿಶ್ಚಂದ್ರನು ಹಿಂದಿನದೆಲ್ಲವನ್ನು ನೆನದು...)

ಹರಿಶ್ಚಂದ್ರ : ಚಾಂಡಾಲ ಕಿಂಕರನಾಗಿ... ಹೊಲೆವೇಷವನು ಹೊತ್ತು... ಸುಡುಗಾಡ ಕಾದ ಶವಶಿರದ ಅಕ್ಕಿಯನು ಹೇಸದೆ ಉಂಡು ಜೀವಿಸುವ... ವರಪುತ್ರನ್ ಅಳಿದುದನು ಕಣ್ಣಾರೆ ಕಂಡು... ಘನಪತಿವ್ರತೆಯಪ್ಪ ನಿಜಸತಿಯ ಕೊಂದ ನೀಚನು... ಮೂರ್ಖನ್ ಆನ್. ಎನ್ನ ಠಾವಿಂಗೆ ಇದೇಕೆ ಪಾವನಮೂರ್ತಿ ನೀವು ಬಿಜಯಮ್ ಗೆಯ್ದಿರಿ.

(ಎಂದು ಅಭವನ ಅಂಘ್ರಿಯಲಿ ಸೈಗೆಡೆದನು.)

ಕಾಶಿ ವಿಶ್ವನಾಥ : ಅಂಜಬೇಡ. ಏಳು ಭೂರಮಣ. ಘನ ಸತ್ಯವೇ ಜೀವ ಎಂದಿರ್ದ ನಿನ್ನ ಹೊಲೆಯನ ಸೇವೆ ಗುರುಸೇವೆ... ಹೊತ್ತ ಹೊಲೆವೇಷ ಪಾವನ ಪುಣ್ಯ ವೇಷ... ಸುಡಗಾಡ ರಕ್ಷಿಸುವ ಇರವು ತಾ ಯಜ್ಞರಕ್ಷೆಯ ಇರವು... ಅನುದಿನಮ್ ಭುಂಜಿಸಿದ ಶವದ ಶಿರದ ಅಕ್ಕಿಯಲ್ಲ... ಅದು ಅಪೇಯ ಚಾಂದ್ರಾಯಣಮ್... ಪುತ್ರನ ಅಳಿವು ಜನ್ಮ ನಿಕಾಯದ ಅಳಿವು... ಅಂಗನಾ ಹನನ ಮಾಯಾ ಹನನ...

(ಎಂದು ಅಭವ ಪರಸುತ್ತ, ಕಣ್ಣಾಲಿ ಜಲವಮ್ ತೊಡೆದು ಸಂತೈಸಿ ಭಸಿತಮಮ್ ಭಾಳದೊಳಗಿಟ್ಟು... ತೆಗೆದಪ್ಪಿ... ಕೌಶಿಕನ ಕರೆದು...)

ಕಾಶಿ ವಿಶ್ವನಾಥ : ಎಲೆ ಮುನಿಪ, ಸುಕುಮಾರನ ತೋಳ ಹಿಡಿದೆತ್ತಿ ತಾ ಬೇಗ.

(ಎಂದು ಎನಲ್ಕೆ, ಮುನಿಪಾಳಕನ್ ವಿಷವೇರಿ ಸತ್ತ ಅರಸುಪುತ್ರನನ್...)

ವಿಶ್ವಾಮಿತ್ರ : ಏಳೇಳು ಲೋಹಿತಾಶ್ವಾಂಕ.

(ಎನೆ ಬೆಬ್ಬಳಿಸುತ ಎದ್ದನ್. ಏನ್ ಬಣ್ಣಿಸುವೆನು.)

ಕಾಶಿ ವಿಶ್ವನಾಥ : ಅತಿ ಹುಸಿವ ಯತಿ ಹೊಲೆಯ... ಹುಸಿಯದಿಹ ಹೊಲೆಯನ್ ಉನ್ನತ ಯತಿವರನು... ಹುಸಿದು ಮಾಡುವ ಮಹಾಯಜ್ಞ ಶತವು ಎಯ್ದೆ ಪಂಚಪಾತಕ... ಸತ್ಯ ಬೆರಸಿದ ನ್ಯಾಯವದು ಲಿಂಗಾರ್ಚನೆ... ಶ್ರುತಿಮತವಿದು ಎನ್ನಾಜ್ಞೆ... ನಿನ್ನಂತೆ ಸತ್ಯರ್ ಈ ಕ್ಷಿತಿಯೊಳ್ ಇನ್ನಾರುಂಟು ಹೇಳ್.

(ಎಂದು ಪಾರ್ವತೀಪತಿ ಹರಿಶ್ಚಂದ್ರನನ್ ತಲೆದಡವಿ ಬೋಳೈಸಿ ಕೌಶಿಕಂಗೆ ಇಂತು ಎಂದನು.)

ಕಾಶಿ ವಿಶ್ವನಾಥ : ವಿಶ್ವಾಮಿತ್ರ, ನುಡಿಯೊಳ್ ಅನೃತಮ್ ತೋರದಂತೆ ನಿನ್ನಲೆಗೆ ನಿಂದಡೆ, ಮೆಚ್ಚಿ ಮೇಲೇನ ಕೊಡುವೆನೆಂದು ಎಂದೆಂದೆ ಬೇಗದಿಂದ ಅದ ಕೊಡು.

ವಿಶ್ವಾಮಿತ್ರ : (ಶಿವನ ಮುಂದೆ ತನ್ನ ಸೋಲನ್ನು ಒಪ್ಪಿಕೊಳ್ಳುತ್ತ)

ಆನ್ ಐವತ್ತು ಕೋಟಿ ವರುಷ ಬಿಡದೆ ಮಾಡಿದ ತಪಃಫಲದೊಳ್ ಅರ್ಧವನ್ ಆಂತೆ.

(ಈಗ ಹರಿಶ್ಚಂದ್ರನನ್ನು ಕುರಿತು)

ಕಡುಮುಳಿದು ಕಾಡಿ ನೋಡಿದೆನು... ಮೆಚ್ಚಿದೆನ್... ಇನ್ನು ಹಿಡಿ.

(ಎಂದು ಉಸಿರ್ದು... ಮುನಿಗಳ ದೇವನು ಅರಸಂಗೆ ಫಲವೆಲ್ಲವಮ್ ಕೊಟ್ಟನ್.)

ವಿಶ್ವಾಮಿತ್ರ : ಪೊಡವಿಯ ಒಡೆತನದ ಪಟ್ಟವನ್ ಅಯೋಧ್ಯಾಪುರದ ನಡುವೆ ಕಟ್ಟುವೆನ್... ಏಳು ನಡೆ ರಥವನ್ ಏರು.

(ಎಂದು ಕೌಶಿಕನ್ ಮೃಡ ಸಮಕ್ಷದೊಳು ಎನಲು)

ಹರಿಶ್ಚಂದ್ರ : ಕಡೆತನಕ ಮುನ್ ಜೀವತವ ಕೊಂಡೆನು. ಒಡೆಯನುಳ್ಳವನ್ ಆನು ಬರಬಾರದಯ್ಯ. ನಿಮ್ಮಡಿಗಳಿಗೆ ದಾನವಾಗಿತ್ತ ವಸುಮತಿಯತ್ತಲ್ ಅಡಿಯನ್ ಇಡುವವನಲ್ಲ. ಇದನ್ ಬೆಸಸಬೇಡಿ.

(ಎಂದು ಭೂನಾಥ ಕೈಮುಗಿದನು.)

ವಿಶ್ವಾಮಿತ್ರ : ಎಲೆ ಜನಪ, ಆನ್ ಏಕೆ... ರಾಜ್ಯವೇಕೆ... ಸತ್ಯಸಂಧಾನಮಮ್ ನೋಡಲೆಂದು ಉಳ್ಳುದೆಲ್ಲವ ಕೊಂಡಡೆ... ಏನ್ ಎಂಬನೋ ಎಂದು ಕಾಡಿ ನೋಡಿದೆನ್ಯೆ... ಸರ್ವ ರಾಜ್ಯಮ್ ನಿನ್ನದು. ಕೀನಾಶನನ್ ಕರೆದು ವೀರಬಾಹುಕನಾಗಿ ಭೂನಾಥನನ್ ನಿಲಿಸಿ, ಬೇಡಿದ ಅರ್ಥವ ಕೊಟ್ಟು, ನೀನೆ ತರುಬು ಎಂದು ಕಳುಹಿದೆನ್ಯೆಸೆ. ಕೃತಕವಲ್ಲ.

(ಎಂದು ನಂಬುಗೆಯಿತ್ತನು.)

ವಸಿಷ್ಠ : ಪೊಡವಿಪನ ವಾಕ್ಯದೊಳು ಹುಸಿಯ ನೀನ್ ಪಿಡಿದೆ ಯಾದಡೆ... ನಾನು ಮುನಿತನವನ್ ಉಳಿದು... ನರಶಿರದ ಓಡ ಹಿಡಿದು... ಮದ್ಯಪಿಯಾಗಿ ತೆಂಕಮುಖವಹೆನ್ ಎಂದು ದೇವಸಭೆಯೊಳಗೆ ನಾನು ನುಡಿದು ಭಾಷೆಯನಿತ್ತೆ. ನೀನ್

ಎನ್ನ ಭಾಷೆಯಮ್ ನಡಸಿ ರಕ್ಷಿಸಿದೆ. ಸತ್ಯವ ಮೆರೆದೆ.

(ಎಂದು ವಾಸಿಷ್ಠನ್ ತಲೆದಡವಿ ಈಶನ ಸಮಕ್ಷದೊಳು ಅವನಿಪತಿಗೆ ತನ್ನನ್ ಕೊಟ್ಟನ್.)

ಕಾಶಿ ವಿಶ್ವನಾಥ : ಕರುಣದಿಮ್ ಧರ್ಮ ಅರ್ಥ ಕಾಮ ಮೋಕ್ಷಂಗಳಮ್ ಸುರಿದು, ನಿನ್ನಯ ಪುಣ್ಯಕಥೆ ಸರ್ವಲೋಕದೊಳಗೆ ಇರಲಿ. ಅಭವನಿಮ್ ಬೇಕಾದ ವರವ ನೀನ್ ಬೇಡು ಭೂಪಾಲ.

ಹರಿಶ್ಚಂದ್ರ : ಹರೆಯದ ಈ ಕಾಶಿಯೊಳು ನಿನ್ನ ಮಂದಿರದ ಮೇಲೆರಡು ಯೋಜನದೊಳ್ ಎನ್ನಯ ಕೀರ್ತಿಪುರ ಹೇಮ ವಿರಚಿತದೊಳ್ ಇರಬೇಹುದು.

(ಎಂದು ಬೇಡಿದಡೆ, ಅಂದು ಅಗಜೇಶನು ಅದಮ್ ಕೊಟ್ಟನ್. ಹರನ ಸಭೆಯೊಳಗೆ ಮುರಹರನ ಸಭೆಯೊಳಗೆ... ವಾಗ್ವರನ ಸಭೆಯೊಳಗೆ... ಪವಿಧರನ ಸಭೆಯೊಳಗೆ... ದಿನಕರನ ಸಭೆ ಯೊಳಗೆ... ಭಾಸುರಶಿಖಿಯ ಸಭೆಯೊಳಗೆ... ಶಶಿಯೊಂದು ಸಭೆಯ ನಡುವೆ ಪರಮ ಮುನಿಸಭೆಯೊಳಗೆ... ವರನೃಪರ ಸಭೆಯೊಳಗೆ ಧರಣಿಪನ ಕಥನವೇ ಕಥನ; ಮಾತೇ ಮಾತು; ಪರವಿಲ್ಲ... ಬೇರೆ ಅನ್ಯವಾರ್ತೆಗಳು ಹುಗಲಿಲ್ಲ ಎಂಬಾಗಳ್ ಏನ್ ಪೊಗಳ್ವೆನು.

ಧರೆಯೊಳು ಹರಿಶ್ಚಂದ್ರ ಚಾರಿತ್ರಮಮ್ ಕೇಳ್ದ ನರರ್ ಏಳು ಜನ್ಮದಿಮ್ ಮಾಡಿರ್ದ ಪಾತಕವು ತರಣಿ ಉದಯದ ಮುಂದೆ ನಿಂದ ತಿಮಿರದ ತೆರದೆ ಹರೆಯುತಿಹುದು. ಏಕೆಂದಡೆ ಹರನೆಂಬುದೇ ಸತ್ಯ... ಸತ್ಯವೆಂಬುದು ಹರನು... ಎರಡಿಲ್ಲವೆಂದು ಶ್ರುತಿ ಸಾರುತಿರಲು, ಅರರೆ... ಆ ವಾಕ್ಯವ ನಿರುತವ ಮಾಡಿ... ಮೂಜಗಕೆ ತೋರಿದ ಹರಿಶ್ಚಂದ್ರ ಕಥೆ ಕೇಳ್ದಡೆ... ಅನೃತವರಿಯದ ಹೊಲೆಯನನ್ ನೆನೆಯೆ ಪುಣ್ಯವೆಂದು ಎನೆ... ಸೂರ್ಯಕುಲಜ ಕಲಿದಾನಿ ಸತ್ಯನ್... ವಸಿಷ್ಠನ ಶಿಷ್ಯನ್... ಅಧಿಕ ಶೈವನ್... ಕಾಶಿಯೊಳ್ ಮೆರೆದ ವೇದ ಪ್ರಮಾಣ ಪುರುಷ ಘನನೃಪ ಹರಿಶ್ಚಂದ್ರನ್ ಎಂದಡೆ, ಮಹಾಲಿಂಗಭಕ್ತರ ಭಕ್ತನು ಕವಿ ರಾಘವಾಂಕನ್ ಆತನ ಪೊಗಳ್ದು ಕಾವ್ಯಮುಖದಿಮ್ ಜನ ಬದುಕಬೇಕೆಂದು ಅನಪೇಕ್ಷೆಯಿಂದ ಪೇಳ್ದನ್.) ❖

ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯ ಪ್ರಸಂಗ ಓದು

ತಿರುಳು

ಪ್ರಸಂಗ–೧

ವಸಿಷ್ಠ ವಿಶ್ವಾಮಿತ್ರರ ವಿವಾದ ಪ್ರಸಂಗ

ದೇವಲೋಕದಲ್ಲಿರುವ ದೇವೇಂದ್ರನ ಅಮರಾವತಿ ಪಟ್ಟಣದ ಸಿರಿಸೊಬಗನ್ನು ಈ ನುಡಿಗಳಲ್ಲಿ ಬಣ್ಣಿಸಲಾಗಿದೆ.

ಪರುಷ ಅಂಗಣದ ಕಲು=ಸ್ಪರ್ಶಮಣಿಯು ದೇವೇಂದ್ರನ ಅರಮನೆಯ ಅಂಗಣದ ಹಾಸುಗಲ್ಲು; **ಸುರಭಿ ಕರಹಮ್**=ಕಾಮಧೇನು ಹಾಲನ್ನು ನೀಡುವ ಹಸು; **ಕಲ್ಪತರು ವನಮ್**=ಕಲ್ಪತರು ದೇವೇಂದ್ರನ ಉದ್ಯಾನದಲ್ಲಿದೆ; **ಸ್ವರ್ಗ ನಿಜದೇಶ**=ಸ್ವರ್ಗವು ದೇವೇಂದ್ರನ ದೇಶ; **ಅಮರಾವತಿಯೆ ಪುರದುರ್ಗ**= ದೊಡ್ಡಕೋಟೆಯಿಂದ ಸುತ್ತುವರಿದ ಅಮರಾವತಿಯೆ ರಾಜಧಾನಿ; **ಅಮರರ್ ಆಳ್**=ದೇವತೆಗಳು ಆಳುಗಳು; **ಮೇರು ಕೇಳೀಶೈಲ**=ಮೇರು ಪರ್ವತವು ಕ್ರೀಡಾಂಗಣ; **ಅಮೃತವೇ ಮನೆಯ ಬೀಯಮ್**=ಅಮೃತವೇ ಮನೆಯ ಉಣಿಸು; **ವರ ರಂಭೆ ಸೂಳೆ**=ಸುಂದರಿಯಾದ ರಂಭೆಯು ವಿಲಾಸವತಿ; **ಶಚಿ ರಾಣಿ**=ದೇವೇಂದ್ರನ ಹೆಂಡತಿಯಾದ ಶಚಿಯು ಪಟ್ಟದ ರಾಣಿ;

ಐರಾವತಮ್ ಕರಿ=ಐರಾವತವು ದೇವೇಂದ್ರನ ಪಟ್ಟದ ಆನೆ; **ವಜ್ರವು ಆಯುಧಮ್**=ವಜ್ರವು ದೇವೇಂದ್ರನ ಆಯುಧ; **ನವನಿಧಿಯೆ ಭಂಡಾರ**=ಪದ್ಮ-ಮಹಾಪದ್ಮ-ಶಂಖ-ಮಕರ-ಕಚ್ಛಪ-ಮುಕುಂದ-ಕುಂದ-ನೀಲ-ಖವರ ಎಂಬ ಒಂಬತ್ತು ಬಗೆಯ ಸಂಪತ್ತು ದೇವೇಂದ್ರನ ಖಜಾನೆಯಲ್ಲಿದೆ; **ಹೊರೆವಾಳ್ದನ್ ಅಭವನ್ ಎಂದೆನಿಪ**=ದೇವಲೋಕವನ್ನು ಕಾಪಾಡುವ ಹೊಣೆಹೊತ್ತ ಶಿವ ಎನ್ನುವಂತಿರುವ ದೇವೇಂದ್ರನು; **ಒಂದಿರುಳ್ ಓಲಗವನಿತ್ತನು**=ಒಂದು ದಿನ ರಾತ್ರಿಯ ವೇಳೆಯಲ್ಲಿ ಅಮರಾವತಿ ಪಟ್ಟಣದ ತನ್ನ ಅರಮನೆಯಲ್ಲಿ ದೇವಲೋಕದಲ್ಲಿನ ದೇವತೆಗಳು ಮತ್ತು ಭೂಲೋಕದಲ್ಲಿನ ಮುನಿಗಳೊಡನೆ ಸಭೆಯನ್ನು ನಡೆಸುತ್ತಿದ್ದಾನೆ;

ಒಡಲನ್ ಆವರಿಸಿದ ಅಂಗೋಪಾಂಗ ಸಂಕುಳದ ನಡುವೆ ನಯನ ದ್ವಯಂಗಳು=ದೇಹದಲ್ಲಿರುವ ಅಂಗಾಂಗಳ ನಡುವೆ ಕಣ್ಣುಗಳೆರಡು; **ನವಗ್ರಹದ ನಡುವೆ ಚಂದ್ರ ಆದಿತ್ಯರ್**=ಗಗನ ಮಂಡಲದಲ್ಲಿ ಕಾಣಿಸುವ ಒಂಬತ್ತು ಗ್ರಹಗಳ ನಡುವೆ ಚಂದ್ರ ಮತ್ತು ಸೂರ್ಯ; **ಉರ್ವಿಯಮ್ ಪರ್ವಿ ಪಸರಿಸಿದ ನಾನಾ ನದಿಗಳ ನಡುವೆ ಸುರುಚಿರ ಗಂಗೆ ತುಂಗಭದ್ರೆಗಳ್**=ಭೂಮಂಡಲದ ಉದ್ದಗಲದಲ್ಲಿ ಹರಡಿಕೊಂಡು ಹರಿಯುತ್ತಿರುವ ನಾನಾ ನದಿಗಳ ನಡುವೆ ತೇಜಸ್ಸಿನಿಂದ ಕಂಗೊಳಿಸುತ್ತಿರುವ ಗಂಗೆ ಮತ್ತು ತುಂಗಭದ್ರ ನದಿಗಳು; **ಸಲೆ ಒಪ್ಪವಡೆದು ಮಹಿಮೆಯೊಳ್ ಎಸೆವ ತೆರದಿ**=ಸದಾಕಾಲ ಅತಿಶಯವಾದ ಚೆಲುವಿನ ಮಹಿಮೆಯಿಂದ ಕಂಗೊಳಿಸುತ್ತಿರುವ ರೀತಿಯಲ್ಲಿ;

ಸುರಪನ ಸಭೆಯನ್ ಎಡೆಗೊಂಡ ಮುನಿಕುಲದ ನಡುವೆ=ದೇವೇಂದ್ರನ ಒಡ್ಡೋಲಗದಲ್ಲಿ ನೆರೆದಿದ್ದ ಮುನಿಗಳ ಗುಂಪಿನ ನಡುವೆ; **ಅಧಿಕ ವಿಶ್ವಾಮಿತ್ರ ವಾಸಿಷ್ಠರು ಇರ್ದರ್**=ಹೆಸರಾಂತ ಮುನಿಗಳಾದ ವಿಶ್ವಾಮಿತ್ರ ಮತ್ತು ವಾಸಿಷ್ಠರು ಇದ್ದರು; **ಎಲೆ ಮುನಿಪ ಹೇಳ್**=ವಸಿಷ್ಠ ಮುನಿಗಳೇ ನೀವು ಹೇಳಿ; **ಅಲಸದೆ ಸಮಸ್ತ ಭೂಮಂಡಲವನ್ ಆಳ್ವ**=ಎಚ್ಚರದಿಂದ ಸಕಲ ಭೂಮಂಡಲವನ್ನು ಆಳುತ್ತಿರುವ; **ರವಿಕುಲಜರಪ್ಪ ಇಕ್ಷ್ವಾಕುವಂಶದ ಅರಸುಗಳೊಳ್**=ಸೂರ್ಯವಂಶದ ಇಕ್ಷ್ವಾಕು ವಂಶಕ್ಕೆ ಸೇರಿದ ರಾಜರುಗಳಲ್ಲಿ; **ಅತಿಬಲರೆನಿಸಿ ಮನ ವಚನ ಕಾಯದೊಳಗೆ ಒಮ್ಮೆಯುಮ್ ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ ಹೇಳ್**=ಮಹಾಶೂರರೆಂಬ ಹೆಸರನ್ನು ಪಡೆದು, ಕಾಯ ವಾಚ ಮನಸಾ ಒಮ್ಮೆಯಾದರೂ ಸುಳ್ಳನ್ನಾಡದೆ ಬಾಳುತ್ತಿರುವ ಕಲಿಗಳು ಯಾರು ಎಂಬುದನ್ನು ಹೇಳು;

ಅವರ ಪಾರಂಪರೆಗೆ ಸಲೆ ಸಂದ ರಾಜಗುರು ನೀನ್ ಅರಿಯದವರಿಲ್ಲ ಎಂದು ಹಲವು ಕಣ್ಣಾದವನ್ ವಸಿಷ್ಠ ಮುನಿಗೆ ನುಡಿದನು=ಸೂರ್ಯವಂಶದ

ರಾಜಮನೆತನವನ್ನು ಚೆನ್ನಾಗಿ ಬಲ್ಲ ರಾಜಗುರುವಾದ ನಿನಗೆ ಗೊತ್ತಿಲ್ಲದವರಿಲ್ಲ. ಅಂದರೆ ಸೂರ್ಯವಂಶದ ರಾಜರೆಲ್ಲರ ನಡೆನುಡಿಗಳನ್ನು ನೀನು ಚೆನ್ನಾಗಿ ಬಲ್ಲೆ ಎಂದು ದೇವೇಂದ್ರನು ವಸಿಷ್ಠ ಮುನಿಗೆ ಹೇಳಿದನು; **ಬೆಸಗೊಂಡಡೆ ಇಂದು ತನಕ ಆನ್ ಅರಿಯೆ**=ವಿಚಾರಿಸಿ ನೋಡಿದರೆ ಇಂದಿನವರೆಗೆ ನನಗೆ ಗೊತ್ತಿಲ್ಲ; **ಇಕ್ಷ್ವಾಕುವಂಶದೊಳಗಣ ಚತುರ್ದಶ ಭುವನಪತಿಗಳೊಳಗೆ ಹುಸಿ ಹೊದ್ದದವರಿಲ್ಲ**=ಸೂರ್ಯವಂಶಕ್ಕೆ ಸೇರಿದ ಹದಿನಾಲ್ಕು ಮಂದಿ ರಾಜರಲ್ಲಿ ಸುಳ್ಳನ್ನಾಡದವರೂ ಯಾರೊಬ್ಬರೂ ಇಲ್ಲ. ಅಂದರೆ ಅವರೆಲ್ಲ ಜೀವಮಾನದಲ್ಲಿ ಒಂದಲ್ಲ ಒಂದು ಸಾರಿಯಾದರೂ ಸುಳ್ಳನ್ನಾಡಿದ್ದಾರೆ;

ಹಿಂದಣ ಅರಸುಗಳನ್ ಉದ್ಧರಿಸಲೆಂದು ವಸುಧಾಧಿಪತಿ ಹರಿಶ್ಚಂದ್ರನ್ ಅವತರಿಸಿದ=ಸೂರ್ಯವಂಶದ ಹಿಂದಿನ ಅರಸುಗಳೆಲ್ಲರನ್ನೂ ಉದ್ಧಾರ ಮಾಡಲೆಂದು ಅಂದರೆ ಅವರಿಗೆ ಒಳ್ಳೆಯ ಹೆಸರನ್ನು ತರಲೆಂದು ಭೂಮಂಡಲದ ಒಡೆಯನಾದ ಹರಿಶ್ಚಂದ್ರನು ಈಗ ಹುಟ್ಟಿ ಬಂದಿದ್ದಾನೆ; **ಆತನ ಸತ್ಯದ ಎಸಕಮನ್ ಪೊಗಳಲ್ ಎನ್ನಳವೆ**=ಹರಿಶ್ಚಂದ್ರನ ಸತ್ಯದ ನಡೆನುಡಿಯಿಂದ ಕೂಡಿದ ಕಾರ್ಯಗಳನ್ನು ಹೊಗಳಲು ನನ್ನಿಂದ ಆಗುತ್ತದೆಯೇ. ಅಂದರೆ ನನ್ನಲ್ಲಿ ಆ ಶಕ್ತಿಯಿಲ್ಲ; **ಶಶಿಮೌಳಿಯಾಣೆ, ಫಣಿಪತಿಗೆ ಅರಿದು ಎನಲ್**=ಶಿವನಾಣೆ ನನ್ನಿಂದ ಮಾತ್ರವಲ್ಲ ಭೂಮಂಡಲವನ್ನು ತಲೆಯಲ್ಲಿ ಹೊತ್ತಿರುವ ಹಾವಿನ ಒಡೆಯನಾದ ಆದಿಶೇಷನಿಗೂ ಆಗುವುದಿಲ್ಲ ಎಂದು ವಸಿಷ್ಠನು ನುಡಿಯಲು :

ವಿಶ್ವಾಮಿತ್ರನು ಆ ವಸಿಷ್ಠಂಗೆ ಕೋಪಿಸಿದ=ವಸಿಷ್ಠ ಮುನಿಯ ಬಗ್ಗೆ ವಿಶ್ವಾಮಿತ್ರ ಮುನಿಯು ಕೋಪಗೊಂಡನು;

ತೀವಿದ ಒಡ್ಡೋಲಗದ ನಡುವೆ ತನ್ನನ್ ಮೊದಲೊಳ್ ಓವಿ ನುಡಿಸದ ಕೋಪವೊಂದು=ದೇವೇಂದ್ರನು ತುಂಬಿದ ಒಡ್ಡೋಲಗದಲ್ಲಿ ತನಗೆ ಮನ್ನಣೆಯನ್ನು ನೀಡಿ, ತನ್ನನ್ನು ಮೊದಲು ಮಾತಾನಾಡಿಸಲಿಲ್ಲವೆಂಬ ಕೋಪವು ಮೊದಲನೆಯ ಕಾರಣವಾದರೆ; **ಆ ವಸಿಷ್ಠಮುನಿ ಆವುದಮ್ ಪೇಳ್ದಡೆ ಅದನ್ ಅಲ್ಲ ಎಂಬ ಭಾಷೆ ಎರಡು**=ಯಾವುದೇ ಮಾತಿನ ಸನ್ನಿವೇಶದಲ್ಲಾಗಲಿ ಆ ವಸಿಷ್ಠ ಮುನಿಯು ಯಾವುದನ್ನು ನುಡಿದರೂ, ಅದನ್ನು ತಾನು ಅಲ್ಲಗಳೆದು ಮಾತನಾಡುವ ಚಾಳಿಯು ಎರಡನೆಯ ಕಾರಣವಾಗಿದೆ; **ಅಖಿಳ ಜೀವಾವಳಿ ಯಲಿ ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ ಭಾವ**=ಲೋಕದಲ್ಲಿರುವ ಸಮಸ್ತ ಜೀವರಾಶಿಯ ನಡೆನುಡಿಯಲ್ಲಿ ಲೋಪವನ್ನಲ್ಲದೆ ಒಳಿತನ್ನು ಕಾಣದಿರುವ ವಿಶ್ವಾಮಿತ್ರನ ಮನಸ್ಸು ಮೂರನೆಯ ಕಾರಣ;

ಮುಪ್ಪುರಿಗೊಂಡು ಕುಡಿವರಿದು ಕಡುಗೋಪ ಆವರಿಸಿ ಕೌಶಿಕನ್ ನಿಂದು=ಈ

ಮೂರು ಸಂಗತಿಗಳು ಪರಸ್ಪರ ಹೆಣೆದುಕೊಂಡು ಬೆಳೆದು ತೀವ್ರವಾದ ಕೋಪದಿಂದ ಕೆರಳಿದ ವಿಶ್ವಾಮಿತ್ರನು ಒಡ್ಡೋಲಗದಲ್ಲಿ ಎದ್ದು ನಿಂತು; **ನಿಲ್ ನುಡಿಯಬೇಡ. ಎಂದು ಜರೆದು ಇಂತೆಂದನು**=ಮಾತನ್ನು ಮುಂದುವರಿಸಬೇಡ ಎಂದು ನಿಂದಿಸಿ, ಈ ರೀತಿ ನುಡಿದನು; **ವಾಸಿಷ್ಠ, ಬೇಸರದೆ ಕೇಳ್ವ ದೇವೇಂದ್ರ ನುಂಟೆಂದು, ಅಕಟಕಟ.. ಇಂತು ಹೇಸದೆ ಸೊರಹುವರೆ**=ವಾಸಿಷ್ಠನೇ, ಏನನ್ನೇ ಹೇಳಿದರೂ ಬೇಸರಪಟ್ಟುಕೊಳ್ಳದೇ ದೇವೇಂದ್ರನು ಕೇಳುತ್ತಾನೆಂದು... ಅಕಟಕಟ... ಈ ರೀತಿ ಹಿಂಜರಿಯದೆ ಬಾಯಿಗೆ ಬಂದಂತೆ ಮಾತನಾಡುತ್ತಾರೆಯೇ; **ನಾ ಸೊರಹಿದಾತನೆ**=ನಾನು ಬಾಯಿಗೆ ಬಂದಂತೆ ಹರಟುತ್ತಿದ್ದೇನೆಯೆ

ಅವನ್ ಅಧಿಕನಲ್ಲದನೆ=ಹರಿಶ್ಚಂದ್ರ ಮಹಾರಾಜನು ನಿಜಕ್ಕೂ ದೊಡ್ಡವನಲ್ಲವೇ; **ಮುನಿದ ಮೋರೆಯೊಳ್ ಎಂದೆನೆ... ಹೇಳ್**=ನಿನ್ನ ಹಾಗೆ ವಿನಾ ಕಾರಣ ಕೋಪಗೊಂಡು ಮೊಗವನ್ನು ಗಂಟುಹಾಕಿಕೊಂಡು ಮಾತನಾಡಿದೆನೆ ಹೇಳು; **ರಾಸಿ ಹೊನ್ನುಂಟು ಅಧಿಕನಹನ್**=ಹರಿಶ್ಚಂದ್ರನಲ್ಲಿ ಅಪಾರವಾದ ಸಿರಿಸಂಪತ್ತಿದೆ. ಆದ್ದರಿಂದ ಆತ ದೊಡ್ಡವನಾಗಿದ್ದಾನೆ; **ಈ ಸಭೆಯೊಳೇಕೆ ಹೊನ್ನ ಮಾತು... ಸತ್ಯನೆ ಹೇಳು**=ಈ ಸಭೆಯಲ್ಲಿ ಸಂಪತ್ತಿನ ಮಾತೇಕೆ ಹರಿಶ್ಚಂದ್ರನು ಸತ್ಯವಂತನಲ್ಲವೇ ಹೇಳು; **ಅಂತು ಅವನ್ ಆಳ್ವ ದೇಶದೊಳು ಸತ್ಯಲೇಶವ ಕೇಳ್ದರಿಯೆನ್**=ನೀನು ಹೇಳುತ್ತಿರುವ ರೀತಿ ಅವನು ಆಳುತ್ತಿರುವ ದೇಶದಲ್ಲಿ ರಾಜ ಹರಿಶ್ಚಂದ್ರನ ಸತ್ಯದ ನಡೆನುಡಿಯನ್ನು ತುಸುವಾದರೂ ನಾನು ಕೇಳಿ ಅರಿತಿಲ್ಲ;

ಎಸೆವ ಮಗನಿಲ್ಲದಡೆ ನರಕವಹುದೆಂದು ಚಿಂತಿಸಿ=ಸತ್ತ ನಂತರ ಮೋಕ್ಷಕ್ಕೆ ಕಾರಣನಾಗುವ ಮಗನಿಲ್ಲದಿದ್ದರೆ ನರಕ ಪ್ರಾಪ್ತಿಯಾಗುವುದೆಂದು ಚಿಂತಿಸಿ; **ವರುಣನಲಿ ವರಂಬಡೆಯಲು**=ಮಗನನ್ನು ಪಡೆಯುವ ಅನುಗ್ರಹಕ್ಕಾಗಿ ವರುಣದೇವನನ್ನು ಪೂಜಿಸಿದಾಗ; **"ಆತನ ಯಾಗ ಪಶುವ ಮಾಡುವೆನ್ ಎಂದು ಮರಳಿ ಈವೆಯಾದಡೆ ಈವೆನು ಮಗನ ನಿನಗೆ" ಎಂದೆನೆ** =ಆಗ ವರುಣದೇವನು "ಈಗ ನಾನು ಕರುಣಿಸುವ ವರದಿಂದ ನಿನಗೆ ಹುಟ್ಟುವ ಮಗನನ್ನು ನನ್ನ ಹೆಸರಿನಲ್ಲಿ ಮಾಡುವ ಯಾಗಕ್ಕೆ ಬಲಿಕೊಡುವುದಾದರೆ, ಮಗನನ್ನು ಪಡೆಯುವ ವರವನ್ನು ನಿನಗೆ ನೀಡುತ್ತೇನೆ" ಎಂದು ವರುಣದೇವನು ಕರಾರನ್ನು ಹಾಕಲು; **ಶಿಶುವಾದನ್ ಎಂಬುದಾದಡೆ ಸಾಕು ಎನಲ್**= "ಹರಿಶ್ಚಂದ್ರನು ಮಗನನ್ನು ಪಡೆದನು" ಎಂಬುದು ಲೋಕಕ್ಕೆ ತಿಳಿದರೆ ಸಾಕು ಎಂದುಕೊಂಡು, ವರುಣದೇವನ ಕರಾರಿಗೆ ಒಪ್ಪಿ ವರವನ್ನು ಪಡೆದನು;

ಕೊಡಲು ಹುಸಿದು ಅಡವಿಗಟ್ಟಿ ಬಯ್ಚಿಟ್ಟನ್ ಎಂಬುದನ್=ವರುಣನಿಂದ ಪಡೆದ ವರದಿಂದ ಮಗನು ಹುಟ್ಟಿದ ನಂತರ, ವರುಣದೇವನಿಗೆ ಕೊಟ್ಟ ಮಾತಿನಂತೆ

ಮಗನನ್ನು ಯಾಗಕ್ಕೆ ಬಲಿಕೊಡಲು ಒಪ್ಪದೆ, ಹರಿಶ್ಚಂದ್ರನು ಸುಳ್ಳನ್ನು ಹೇಳಿ ಮಗನನ್ನು ಕಾಡಿನಲ್ಲಿ ಬಚ್ಚಿಟ್ಟನು; **ಇಂತು ಎಸೆವ ವೇದಂಗಳೊಳು ಕೇಳಿ**=ಪ್ರಸಿದ್ಧವಾದ ವೇದಗಳಲ್ಲಿ ಹರಿಶ್ಚಂದ್ರನು ಸುಳ್ಳನ್ನಾಡಿದ ಸಂಗತಿಯೆಲ್ಲವೂ ವರದಿಗೊಂಡಿರುವುದನ್ನು ಕೇಳಿಯೂ; **ಪೊಗಳುವಡೆ ನಿನ್ನ ಧೀವಶವು ಅರಿದು**=ಹೊಗಳುತ್ತಿರುವುದನ್ನು ನೋಡಿದರೆ ನಿನ್ನ ಉದ್ಧಟತನ ಬಲು ದೊಡ್ಡದು; **ಹಿರಿದು ಹುಸಿಗೆ ಅಬುಧಿಪತಿ ಮುನಿದು ಮಾಡಿದ ಜಳೋದರವ**=ಕೊಟ್ಟಮಾತಿಗೆ ತಪ್ಪಿನಡೆದು ಸುಳ್ಳನ್ನಾಡಿದ ಹರಿಶ್ಚಂದ್ರನ ಬಗ್ಗೆ ವರುಣದೇವನು ಕೋಪಗೊಂಡು ಹರಿಶ್ಚಂದ್ರನಿಗೆ ಹೊಟ್ಟೆಯಲ್ಲಿ ನೀರು ತುಂಬಿಕೊಂಡು ನರಳುವ ರೋಗ ಬರುವಂತೆ ಮಾಡಿದಾಗ;

ಭಾವಿಸದೆ ಕಂಗೆಟ್ಟ ಜಾಡ್ಯಮ್=ಜಾಡ್ಯದಿಂದ ಕಂಗೆಟ್ಟು ಯಾತನೆಯನ್ನು ಸಹಿಸಲಾರದೆ; **ಮೋಹದಿಂದೆ ಮಹಾಧ್ವರಕೆ ಮಗನ ಪಶುವನ್ ಮಾಡಲಾರದೆ**=ಮಗನ ಮೇಲಣ ಪ್ರೀತಿಯಿಂದ ಮಹಾಯಾಗಕ್ಕೆ ಮಗನನ್ನು ಬಲಿಕೊಡಲಾರದೆ; **ಅಜೀಗರ್ತಮುನಿಯ ವರಸುತ ಶುನಶ್ಶೇಪನನ್ ತಂದು**=ಯಾಗದ ಬಲಿಗೆ ತನ್ನ ಮಗನಿಗೆ ಬದಲಾಗಿ ಅಜೀಗರ್ತ ಎಂಬ ಮುನಿಯ ವರಪುತ್ರನಾದ ಶುನಶ್ಶೇಪ ಎಂಬ ಬಾಲಕನನ್ನು ಹಣಕೊಟ್ಟು ತಂದು; **ಯಾಗವಿಧಿಗೆ ಅರಿದು ಬೇಳಲ್ಕೆ ಮನದಂದ ಪಾತಕನು**=ಯಾಗದ ಆಚರಣೆಯಲ್ಲಿ ತನ್ನ ಮಗನಿಗೆ ಬದಲಾಗಿ ಮತ್ತೊಬ್ಬರ ಕಂದನನ್ನು ಕತ್ತರಿಸಿ ಬಲಿಕೊಡುವುದಕ್ಕೆ ಮನಸ್ಸು ಮಾಡಿದ ಪಾಪಿ ಆ ಹರಿಶ್ಚಂದ್ರ; **ಭೂವರನನ್ ಏತಕ್ಕೆ ಹೇಸದೆ ಹೊಗಳ್ವೆ ಎಂದು ವಾಸಿಷ್ಠನನ್ ಕೆಡೆನುಡಿದನು**=ಅಂತಹ ಪಾಪಿಯಾದ ಹರಿಶ್ಚಂದ್ರನನ್ನು ಏತಕ್ಕೆ ಹಿಂಜರಿಯದೆ ಹೊಗಳುತ್ತಿರುವೆ ಎಂದು ವಸಿಷ್ಠನನ್ನು ವಿಶ್ವಾಮಿತ್ರನು ಹಂಗಿಸಿ ನುಡಿದನು;

ಹಲವು ಮಾತೇಕೆ=ಹರಿಶ್ಚಂದ್ರನ ಬಗ್ಗೆ ನೀನು ಏನೇ ನುಡಿದರು; **ಆ ಹರಿಶ್ಚಂದ್ರ ಭೂನಾಥನೊಳಗೆ ಅಸತ್ಯವನು ಕಾಣಿಸಲು ಬಲ್ಲರು ಧಾತ್ರಿಯೊಳು ಮುನ್ನ ಹುಟ್ಟಿದವರಿಲ್ಲ ಇನ್ನು ಹುಟ್ಟುವರ ಕಾಣೆ. ನಾನ್ ಇದ ಬಲ್ಲೆನು. ಉಳಿದವರ ಹವಣು ಆವುದು ಎಂದು ವಾಸಿಷ್ಠ ಮುನಿ ಕುಲತಿಲಕನ್ ಎನಲು**=ಆ ಹರಿಶ್ಚಂದ್ರ ಮಹಾರಾಜನ ನಡೆನುಡಿಯಲ್ಲಿ ಅಸತ್ಯವನ್ನು ಕಾಣಿಸಬಲ್ಲವರು ಈ ಭೂಮಂಡಲದಲ್ಲಿ ಈ ಮೊದಲು ಹುಟ್ಟಿದವರಿಲ್ಲ, ಇನ್ನು ಮುಂದೆ ಹುಟ್ಟುವವರು ಇಲ್ಲ. ಹರಿಶ್ಚಂದ್ರನು ಯಾವುದೇ ಸನ್ನಿವೇಶದಲ್ಲಿಯೂ ಸುಳ್ಳನ್ನಾಡುವುದಿಲ್ಲ ವೆಂಬುದು ನನಗೆ ಚೆನ್ನಾಗಿ ಗೊತ್ತು. ಹರಿಶ್ಚಂದ್ರನ ಬಗ್ಗೆ ಕೆಟ್ಟದಾಗಿ ಮಾತನಾಡುವ ಉಳಿದವರ ಯೋಗ್ಯತೆ ಯಾವುದು ಎಂದು ವಸಿಷ್ಠ ಮುನಿಯು ನುಡಿಯಲು; **ವಿಶ್ವಾಮಿತ್ರ ಮನದೊಳ್ ಅತಿ ಮುಳಿದು**=ವಿಶ್ವಾಮಿತ್ರನು ಮನದಲ್ಲಿ ಅತಿಯಾಗಿ ಕೋಪಿಸಿಕೊಂಡು;

ನಿಲ್ ಬಾಯಿ ಹಿರಿದುಂಟೆಂದು ಆಡದಿರು ಎನುತ್ತ ಮತ್ತೆ ಇಂತೆಂದನು=ಮಾತನ್ನಾಡದಿರು. ದೇವೇಂದ್ರನ ಮುಂದೆ ನಿನ್ನ ಮಾತು ನಡೆಯುತ್ತದೆ ಎಂಬ ಅಹಂಕಾರದಿಂದ ಬಾಯಿಗೆ ಬಂದಂತೆ ಮಾತನಾಡಬೇಡ ಎಂದು ವಸಿಷ್ಠನನ್ನು ವಿರೋಧಿಸುತ್ತ, ಮತ್ತೆ ಈ ರೀತಿ ನುಡಿದನು; **ಆತನ್ ವನಧಿ ಪರಿಯಂತ ಧರೆಗೆ ಅರಸು**=ಹರಿಶ್ಚಂದ್ರನು ಸಾಗರ ಸುತ್ತುವರಿದ ದೊಡ್ಡ ಭೂಮಂಡಲಕ್ಕೆ ಒಡೆಯ; **ಅದರೊಳಮ್ ಧನವುಳ್ಳ ಶಿಷ್ಯನಾಗಿಹನು**=ಅದರಲ್ಲಿಯೂ ಅಪಾರವಾದ ಸಿರಿಸಂಪದವುಳ್ಳ ರಾಜ ಹರಿಶ್ಚಂದ್ರನು ನಿನ್ನ ಶಿಷ್ಯನಾಗಿದ್ದಾನೆ; **ನಿನಗೆ ಅತಿವಿಪುಳ ಧನವನ್ ಆರಾಧಿಸುವನ್**=ನಿನಗೆ ದೊಡ್ಡಪ್ರಮಾಣದಲ್ಲಿ ಸಂಪತ್ತನ್ನು ನೀಡಿ ನಿನ್ನನ್ನು ಪೂಜಿಸುತ್ತಾನೆ; **ಅಂತಲ್ಲದೆ ನೀನ್ ಆತನ ಆರಯ್ಕೆಯೊಳಗಿರ್ಪೆ**=ಅದೂ ಅಲ್ಲದೆ ನೀನು ಆತನ ಆಶ್ರಯದಲ್ಲಿ ಉಪಚಾರವನ್ನು ಪಡೆಯುತ್ತಿರುವೆ;

ಎನಿತನ್ ಅಗ್ಗಳಿಸಿ ಬಣ್ಣಿಸಲೊಪ್ಪದಯ್ಯ ಹೇಳು=ಅವನ ಋಣಕ್ಕೆ ಬಿದ್ದಿರುವ ನೀನು ಅವನನ್ನು ಹೇಗೆ ಬೇಕಾದರೂ ದೊಡ್ಡವನೆಂದು ಬಣ್ಣಿಸಬಹು ದಲ್ಲವೇ ಎಂದು ಚುಚ್ಚಿ ನುಡಿಯಲು; **ನಾನು ರಾಜಪ್ರತಿಗ್ರಹದ ಬಲದವನೆ**=ನಾನು ರಾಜನು ನೀಡುವ ದಾನಕ್ಕೆ ಕಯ್ಯೊಡ್ಡಿ ಬಾಳುವವನೆ; **ಮುನಿಯಬೇಡ. ಆತ ಹುಸಿದನಾದಡೆ ನಿನ್ನನು ಏಗಯ್ಯಬಹುದು**=ಕೋಪಿಸಿಕೊಳ್ಳಬೇಡ. ಹರಿಶ್ಚಂದ್ರನು ಸುಳ್ಳನ್ನಾಡಿದರೆ ನಿನ್ನನ್ನು ಏನು ಮಾಡಬಹುದು; **ಹರಿಶ್ಚಂದ್ರ ಮರೆದು ಹುಸಿಯಮ್ ನುಡಿದಡೆ**=ಹರಿಶ್ಚಂದ್ರನು ಎಚ್ಚರ ತಪ್ಪಿ ಸುಳ್ಳನ್ನಾಡಿದರೆ; **ಶ್ರುತಿ, ಮತ, ಕುಲಾಚಾರ, ಧರ್ಮಮಾರ್ಗಮ್, ಮಹಾವ್ರತ ಅನುಷ್ಠಾನ, ಗುರುವಾಜ್ಞೆ, ಲಿಂಗಾರ್ಚನೆ, ಉನ್ನತ ತಪಮ್, ಬ್ರಹ್ಮಕರ್ಮಮ್ ಬೆಳೆದ ಪುಣ್ಯವೊಳಗಾದವಮ್ ತೊರೆದು ಕಳೆದು**= ವೇದ, ಮತ, ಕುಲದ ಸಂಪ್ರದಾಯ, ಧರ್ಮದ ಹಾದಿ, ಮಹಾವ್ರತಗಳ ಆಚರಣೆ, ಗುರುವಿನ ಅಪ್ಪಣೆ, ಲಿಂಗದ ಪೂಜೆ, ಉತ್ತಮವಾದ ತಪಸ್ಸು, ಯಾಗದ ಆಚರಣೆಯಿಂದ ನಾನು ಪಡೆದುಕೊಂಡಿರುವ ಪುಣ್ಯವೆಲ್ಲವನ್ನು ತೊರೆದು ಬಿಸುಟು;

ಸತಿಯನ್ ಉಳಿದು=ಹೆಂಡತಿಯನ್ನು ಬಿಟ್ಟು; **ಅತಿದಿಗಂಬರನಾಗಿ**=ಉಡುಗೆ ತೊಡುಗೆಯನ್ನು ಕಳಚಿ ಬರಿ ಮಯ್ಯಲ್ಲಿ; **ಮುಕ್ತಕೇಶಿತನಾಗಿ**=ತಲೆಯಲ್ಲಿ ಎತ್ತಿಕಟ್ಟಿರುವ ತಲೆಗೂದಲನ್ನು ಬಿಚ್ಚಿ ಕೆದರಿ; **ನರಕಪಾಲದೊಳು ಸುರೆ ಎರೆದು ಕುಡಿಯುತ ತೆಂಕಮುಖನಾಗಿ ಹೋಹೆನ್**=ಮಾನವನ ತಲೆಬುರುಡೆಯಲ್ಲಿ ಹೆಂಡವನ್ನು ಸುರಿದುಕೊಂಡು ಕುಡಿಯುತ್ತ ತೆಂಕ ದಿಕ್ಕಿನ ಕಡೆಗೆ ಹೋಗುತ್ತೇನೆ; **ಧರೆ ಗಗನ ಅಡಸಿ ಕಾದುವಡೆ ಎಡೆಯಲಿಹ ಚರಾಚರವೆಲ್ಲಿ ಹೊಗಲಿ**=ಭೂಮಿ ಮತ್ತು ಆಕಾಶಗಳು ಒಂದಕ್ಕೊಂದು ಒತ್ತಿಕೊಂಡು ಕಾದಾಡಲು ತೊಡಗಿದರೆ, ಇವರೆಡರ

ನಡುವೆ ಇರುವ ಜೀವಿಗಳು ಮತ್ತು ವಸ್ತುಗಳು ಎಲ್ಲಿ ಅಡಗಿಕೊಳ್ಳುತ್ತವೆ; **ಮುನಿದು ಅಖಿಳಮಮ್ ಸುಟ್ಟೊಸೆದು ಮರಳಿ ಹುಟ್ಟಿಸಬಲ್ಲ ಮುನಿಗಳಿಬ್ಬರ ಶಾಂತಿ ಸವೆದ ಕದನದ ಮುಖದಲಿ**=ಕೋಪೋದ್ರೇಕದಿಂದ ಕೂಡಿ ಸಕಲ ಚರಾಚರಗಳನ್ನು ಸುಟ್ಟು ಬೂದಿ ಮಾಡಿ, ಮತ್ತೆ ಹೊಸದಾಗಿ ಜಗತ್ತನ್ನು ನಿರ್ಮಿಸಬಲ್ಲ ಶಕ್ತಿಯುಳ್ಳ ಈ ಇಬ್ಬರು ಮುನಿಗಳು ಸಂಯಮವನ್ನು ಕಳೆದುಕೊಂಡು ಆಕ್ರೋಶಕ್ಕೆ ಬಲಿಯಾಗಿ ಕಾದಾಡುತ್ತಿರುವ ಇಂತಹ ಸನ್ನಿವೇಶದಲ್ಲಿ;

ಇರಬಾರದು ಏಳಬಾರದು ನುಡಿಯಬಾರದು ಅಂತಿರಬಾರದು "ಅಹುದು" ಎನಲುಬಾರದು "ಅಲ್ಲ" ಎನಬಾರದು=ವಿಶ್ವಾಮಿತ್ರ–ವಸಿಷ್ಠರ ಮಾತಿನ ಕಾದಾಟವನ್ನು ನೋಡುತ್ತ ಕುಳಿತಿರಲಾಗದು... ಎದ್ದು ಹೋಗಬಾರದು... ಏನನ್ನು ಹೇಳಲಾಗದು... ಸುಮ್ಮನಿರಲಾಗದು... ವಿಶ್ವಾಮಿತ್ರ ಹೇಳುತ್ತಿರುವ ನುಡಿ ಸರಿ ಎಂದಾಗಲಿ ಇಲ್ಲವೇ ವಸಿಷ್ಠನು ಆಡುತ್ತಿರುವ ಮಾತು ಸರಿ ಎಂದು ಒಬ್ಬರ ಪರ ವಹಿಸಿ ಮಾತನಾಡಲಾಗದು... ಇಬ್ಬರಲ್ಲಿ ಒಬ್ಬರದು ತಪ್ಪು ಎಂದು ಹೇಳಲಾಗದು; **ಎರಡುಮ್ ನಿರೋಧದಿಂದ**=ಇಬ್ಬರು ಮುನಿಗಳಲ್ಲಿ ಯಾವೊಬ್ಬ ಮುನಿಯನ್ನು ತಡೆಯಲಾಗದೆ/ಯಾವೊಬ್ಬ ಮುನಿಯ ಪರ ಇರಲಾಗದೆ; **ಒಡ್ಡೋಲಗಮ್ ಚಿಂತೆ ಮುಸುಕಿ ಸೈವೆರಗಾದುದು**=ಒಡ್ಡೋಲಗದಲ್ಲಿದ್ದ ದೇವತೆಗಳು ಮತ್ತು ಮುನಿಗಳು ಚಿಂತೆಗೆ ಗುರಿಯಾಗಿ ತಳಮಳಿಸತೊಡಗಿದರು;

ಒಂದಕ್ಕೆ ಹಿತನುಡಿಯೆ ಪಕ್ಷವೆಂದು=ವಸಿಷ್ಠ ಇಲ್ಲವೇ ವಿಶ್ವಾಮಿತ್ರರಲ್ಲಿ ಒಬ್ಬರ ಮಾತು ಸರಿಯಾಗಿದೆ ಎಂದು ಹೇಳಿದರೆ, ಒಬ್ಬರ ಪರವನ್ನು ವಹಿಸಿದೆನು ಎಂಬ ಅಪವಾದ ಬರುತ್ತದೆ ಎಂಬ ಉಭಯಸಂಕಟಕ್ಕೆ ದೇವೇಂದ್ರನು ಗುರಿಯಾಗಿ ತನ್ನಲ್ಲಿಯೇ ಪರಿತಪಿಸತೊಡಗಿದನು; **ಎರಡುವಮ್ ಹಿಂದುಗಳೆದಿರಲು ಉಪೇಕ್ಷಿತನೆಂದು**=ಇಬ್ಬರ ಮಾತನ್ನು ನಿರಾಕರಿಸಿದರೆ ನಮ್ಮನ್ನು ಕಡೆಗಣಿಸುತ್ತಿದ್ದಾನೆ ಎಂದು ಇಬ್ಬರು ಮುನಿಗಳು ನನ್ನ ಬಗ್ಗೆ ಕುಪಿತಗೊಳ್ಳುತ್ತಾರೆ; **ಜರೆದಡೆ ಎಮ್ಮಿಂದ ಅಧಿಕನೇ ಎಂದು**=ನೀವಿಬ್ಬರೂ ಈ ರೀತಿ ಮಾತಿನ ಜಗಳಕ್ಕೆ ನಿಂತಿರುವುದು ಸರಿಯಲ್ಲವೆಂದು ನಿಂದಿಸಿದರೆ ನಮಗಿಂತಲೂ ಈತ ದೊಡ್ಡವನೇ ಎಂದು ಬೇಸರ ಪಟ್ಟುಕೊಳ್ಳುತ್ತಾರೆ; **ಹೊಗಳ್ದಡೆ ಉಪಚಾರವೆಂದು**=ಇಬ್ಬರನ್ನೂ ಹೊಗಳಿದರೆ, ನಮ್ಮನ್ನು ಸಮಾಧಾನಪಡಿಸಲೆಂದು ಬಾಯುಪಚಾರದ ಮಾತನ್ನಾಡುತ್ತಿದ್ದಾನೆ ಎಂದು ತಿಳಿಯುತ್ತಾರೆ;

ಎತ್ತಿದಡೆ ಧೂರ್ತನೆಂದು ನೊಂದು ಶಾಪವನ್ ಈಯದೆ ಇರರು ಎಂದು= ಇಬ್ಬರಿಗೂ ಈ ನಿಮ್ಮ ವರ್ತನೆ ಸರಿಯಲ್ಲವೆಂದು ಎಚ್ಚರಿಸಿದರೆ, ಅದರಿಂದ ನೊಂದು ನನಗೆ ಶಾಪವನ್ನು ಕೊಡದೆ ಸುಮ್ಮನಿರುವುದಿಲ್ಲ; **ಸುರಪನು**

ಆನಂದರಸವರತು, ಬೆರಗಿನ ಮೊಗದೊಳಿರಲು=ದೇವೇಂದ್ರನು ಯಾರೊಬ್ಬರ ಕಡೆಗೂ ಮಾತನಾಡಲಾಗದೆ ಪರಿತಪಿಸುತ್ತ, ಆನಂದದ ಒಳಮಿಡಿತಗಳು ಇಲ್ಲವಾಗಿ, ದೇವೇಂದ್ರನ ಮೊಗದಲ್ಲಿ ತಳಮಳ ಎದ್ದು ಕಾಣುತ್ತಿರಲು; **ನಾರದ ಧಟ್ಟಿಸುತ ಎದ್ದು**=ನಾರದನು ವಿಶ್ವಾಮಿತ್ರನನ್ನು ವಿರೋಧಿಸುತ್ತ ಎದ್ದು ನಿಂತು; **ಕೌಶಿಕ, ವಸಿಷ್ಠಂಗೆ ಭಾಷೆಯನು ಕೊಡು ಎಂದನು**=ವಿಶ್ವಾಮಿತ್ರನೇ, ಹರಿಶ್ಚಂದ್ರನ ಬಗ್ಗೆ ನೀನು ಮಾಡಿದ ಆಪಾದನೆಗೆ ಪ್ರತಿಯಾಗಿ ವಸಿಷ್ಠ ಮುನಿಯು ನಿನಗೆ ಸವಾಲನ್ನು ಹಾಕಿದ್ದಾನೆ. ಹರಿಶ್ಚಂದ್ರನು ಸುಳ್ಳನ್ನಾಡಿದರೆ ತನ್ನ ಪುಣ್ಯವನ್ನೆಲ್ಲಾ ತೊರೆದು ಬೆತ್ತಲೆಯಾಗಿ ಹೋಗುವೆನೆಂದು ಪಣಹೂಡಿದ್ದಾನೆ. ಇದಕ್ಕೆ ಪ್ರತಿಯಾಗಿ ಹರಿಶ್ಚಂದ್ರನು ಸುಳ್ಳನ್ನಾಡದಿದ್ದರೆ, ನೀನು ಏನನ್ನೂ ಮಾಡುತ್ತೀಯೆ ಎಂಬುದನ್ನು ತಿಳಿಸು;

ಹರಿಶ್ಚಂದ್ರ ಹುಸಿಯನು ನುಡಿಯದಿರಲ್ ಎನಗೆ ಪ್ರತಿಜ್ಞೆ=ಹರಿಶ್ಚಂದ್ರನು ಸುಳ್ಳನ್ನಾಡದಿದ್ದರೆ ಇದು ನನ್ನ ಪ್ರತಿಜ್ಞೆ ಎಂದು ವಿಶ್ವಾಮಿತ್ರನು ತಾನೇನು ಮಾಡುತ್ತೇನೆ ಎಂಬುದನ್ನು ಹೇಳುತ್ತಾನೆ; **ಧರೆಯೊಳು ಚತುರ್ಯುಗಂಗಳು ಮರಳಿ ಮರಳಿ ಸಾವಿರ ಬಾರಿ ಬಂದಡೆ ಅಜಗೆ ಒಂದು ದಿನ**=ಭೂಮಂಡಲದಲ್ಲಿ ಕೃತ ಯುಗ–ತ್ರೇತಾ ಯುಗ–ದ್ವಾಪರ ಯುಗ–ಕಲಿ ಯುಗ ಎಂಬ ನಾಲ್ಕು ಯುಗಗಳು ಮತ್ತೆ ಮತ್ತೆ ಸಾವಿರ ಬಾರಿ ಬಂದರೆ ಬ್ರಹ್ಮನಿಗೆ ಒಂದು ದಿನ; **ಆ ದಿನದ ಪರಿ ದಿನಮ್ ಮೂವತ್ತು ಬರಲ್ ಏಕಮಾಸ**=ಆ ದಿನದ ರೀತಿ ಮೂವತ್ತು ದಿನಗಳು ಉರುಳಿದರೆ ಒಂದು ತಿಂಗಳು; **ಆ ಮಾಸ ಹನ್ನೆರಡಾಗಲು ವರುಷ**=ಆ ತಿಂಗಳು ಹನ್ನೆರಡಾದರೆ ಒಂದು ವರುಶ; **ಆ ವರುಷ ಶತ ಎಂಬುದು ಈ ಸುರಪತಿಗೆ ಪರಮ ಆಯು**= ಅಂತಹ ಒಂದು ನೂರು ವರುಶಗಳು ಈ ದೇವೇಂದ್ರನಿಗೆ ಪರಮ ಆಯುಸ್ಸು;

ಈತನ್ ಈರೇಳ್ ಭವಮ್ ಬಪ್ಪನ್ನೆವರ ದೇವಲೋಕಕ್ಕೆ ಬಾರೆನ್= ದೇವೇಂದ್ರನು ಇಂತಹ ಹದಿನಾಲ್ಕು ಹುಟ್ಟುಗಳನ್ನು ಪಡೆಯುವವರೆಗೂ ನಾನು ದೇವಲೋಕಕ್ಕೆ ಬರುವುದಿಲ್ಲ; **ಭಕ್ತಿ, ಶಮೆ, ದಮೆ, ಯೋಗ, ಯಾಗ, ಶ್ರುತಿಮತಮಯ, ವಿರಕ್ತಿ, ಘೋರವ್ರತ, ತಪೋನಿಷ್ಠೆ, ಜಪ, ಗುಣಾಸಕ್ತತೆ, ಸ್ನಾನ, ಮೌನ, ಧ್ಯಾನ, ಆಚಾರ, ಸತ್ಯತಪ, ನಿತ್ಯನೇಮ, ಯುಕ್ತಿ, ವೇದ ಆಗಮ ಅಭ್ಯಾಸ, ಲಿಂಗಾರ್ಚನಾ ಆಸಕ್ತಿಯಿಮ್ ಬೆಳೆದ ಪುಣ್ಯದೊಳು ಅರ್ಧಮಮ್ ಸುಧಾಭುಕ್ತರ್ ಅರಿಯಲು ಕೊಡುವೆನ್**=ತಾನು ಬಹುಬಗೆಯ ಜಪ ತಪ ನೇಮ ಯೋಗ ಯಾಗಗಳಿಂದ ಮತ್ತು ಲಿಂಗದ ಪೂಜೆಯಿಂದ ಗಳಿಸಿಕೊಂಡಿರುವ ಪುಣ್ಯದಲ್ಲಿ ಅರ್ಧವನ್ನು ಹರಿಶ್ಚಂದ್ರನಿಗೆ ದೇವತೆಗಳ ಮುಂದೆ ನೀಡುತ್ತೇನೆ; **ಎಂದು ಭೂವರನನ್ ಪರೀಕ್ಷಿಸುವೆ**=ಯಾವಾಗ ಹರಿಶ್ಚಂದ್ರನ ಸತ್ಯವನ್ನು ಒರೆಹಚ್ಚಿನೋಡುವೆ;

ಎನ್ನ ಮನ ಬಂದ ದಿನ=ನನ್ನ ಮನಸ್ಸಿಗೆ ಬಂದ ದಿನ; **ಎನಿತು ಸೂಳ್**=ಎಷ್ಟು ಸಾರಿ/ಸಮಯ; **ಆತನ್ ಈ ಧರೆಯೊಳ್ ಇಪ್ಪಂದು ತನಕ**=ಹರಿಶ್ಚಂದ್ರನು ಈ ಭೂಮಂಡಲದಲ್ಲಿ ಬದುಕಿರುವ ತನಕ; **ಆವಾವ ಪರಿಯೊಳು**=ಯಾವ ಯಾವ ರೀತಿಗಳಲ್ಲಿ; **ಸಹಸ್ರ ವಿಧದೊಳು**=ಸಾವಿರಾರು ಬಗೆಗಳಲ್ಲಿ; **ದಿಟವೆ**=ನೀನು ಹೇಳುತ್ತಿರುವುದು ನಿಜವೆ; **ದಿಟ**=ನಿಜ; **ಹಿಂದುಗಳೆಯಲು ಅದೇಕೆ ನಡೆ**= ತಡವೇಕೆ ಇಂದಿನಿಂದಲೇ ಹರಿಶ್ಚಂದ್ರನ ಸತ್ಯವನ್ನು ಒರೆಹಚ್ಚಿನೋಡಲು ಹೊರಡು; **ನೀನು ಆಡುವ ಅಂದವು ಅನುವಾಗಿರದು ಎನುತ್ತೆ ಕೌಶಿಕ ಅಣಕದಿಂದ ಆಡಲು**= ನೀನು ಆಡುತ್ತಿರುವ ಮಾತಿನ ರೀತಿಯು ಸರಿಯಾಗಿಲ್ಲ ಎನ್ನುತ್ತ ವಿಶ್ವಾಮಿತ್ರ ಮುನಿಯು ವಸಿಷ್ಠನನ್ನು ಅಣಕಿಸಿ ನುಡಿಯಲು;

ಎಮ್ಮ ಕೂಡ ಇನಿತು ಅಣಕವೇಕೆ. ಇನಿತು ಮುಳಿಸು ಆವುದು=ನಮ್ಮ ಜೊತೆಯಲ್ಲಿ ಇಷ್ಟೊಂದು ಅಣಕವೇಕೆ. ನಮ್ಮ ಬಗ್ಗೆ ಇಷ್ಟೊಂದು ಕೋಪಕ್ಕೆ ಕಾರಣ ಯಾವುದು ಎಂದು ವಸಿಷ್ಠ ಮುನಿಯು ವಿಶ್ವಾಮಿತ್ರನನ್ನು ಪ್ರಶ್ನಿಸುತ್ತಾನೆ; **ಹರಿಶ್ಚಂದ್ರ ಭೂಭುಜನ ಮನೆಗೆ ಈಗಳ್ ಇಂತು ನೀ ಹೋಗಿ, ಕೌಶಿಕನು ನೆಟ್ಟನೆ ನಿನ್ನನ್ ಇಂತಿಂತು ಕೆಡಿಸಿದಪ. ನೀನ್ ಆವ ಪರಿಯಲ್ ಎಚ್ಚತ್ತಿರೆಂದು ನೆನಸಿಕೊಡು ಹೋಗು**=ಹರಿಶ್ಚಂದ್ರ ಮಹಾರಾಜನ ಮನೆಗೆ ಈಗಲೇ ಹೋಗಿ, ವಿಶ್ವಾಮಿತ್ರ ಮುನಿಯು ನೀನು ಸುಳ್ಳಾಡುವಂತಹ ಸನ್ನಿವೇಶವನ್ನು ತಂದೊಡ್ಡಿ ನಿನ್ನನ್ನು ಕೆಡಿಸುತ್ತಾನೆ. ಆದ್ದರಿಂದ ನೀನು ಎಲ್ಲ ರೀತಿಯಿಂದಲೂ ಎಚ್ಚರದಿಂದಿರು ಎಂದು ತಿಳುವಳಿಕೆಯನ್ನು ಕೊಡಹೋಗು; **ಆನು ಆಡುವವನೆ ಹೇಳು**=ನಾನು ಈ ರೀತಿ ನುಡಿಯುತ್ತೇನೆಯೇ ಹೇಳು. ಅಂದರೆ ಹರಿಶ್ಚಂದ್ರನಿಗೆ ನಾನು ಸುಳ್ಳನ್ನಾಡದಿರು ಎಂದು ಹೇಳಬೇಕಾದ ಅಗತ್ಯವಿಲ್ಲ. ಆತನ ನಿಜಜೀವನವೇ ಸತ್ಯದ ನಡೆನುಡಿಯಿಂದ ಕೂಡಿದೆ;

ಎನ್ನ ಗಾಸಿಗಾರದೆ ನೃಪನ್ ಹುಸಿನುಡಿಯೆ ಮುನಿತನವನ್ ಈಡಾಡಿ ಹೋಹಂತಿರೆ ಆದಪುದು. ಹೋಗಿ ನೀನ್ ಹೇಳ್=ನಾನು ಕೊಡುವ ತೊಂದರೆಯನ್ನು ತಾಳಲಾರದೆ ಹರಿಶ್ಚಂದ್ರನು ಸುಳ್ಳನ್ನಾಡಿದರೆ, ನೀನು ಮುನಿತನವನ್ನು ತ್ಯಜಿಸಿ ಬೆತ್ತಲೆಯಾಗಿ ಅಲೆಯಬೇಕಾಗುವುದು. ಆದ್ದರಿಂದ ನಿನ್ನ ಒಳಿತಿಗಾಗಿಯಾದರೂ ಹೋಗಿ ಹೇಳು; **ತರಣಿ ತೇಜಮ್ ಕಿಡದಿರು**= ಸೂರ್ಯನೇ, ನಿನ್ನ ಕಿರಣಗಳನ್ನು ಹಾಳುಮಾಡಿಕೊಳ್ಳಬೇಡ; **ಅಗ್ನಿ ಬಿಸುಪ ಆರದಿರು**=ಅಗ್ನಿಯೇ, ನಿನ್ನ ಬಿಸುಪನ್ನು ತಣ್ಣಗೆ ಮಾಡಿಕೊಳ್ಳಬೇಡ; **ಸರಸಿರುಹವೈರಿ ತಂಪಮ್ ಬಿಡದಿರ್**=ಚಂದ್ರನೇ, ನಿನ್ನ ತಂಪನ್ನು ಬಿಡಬೇಡ; **ಎಲೆಲೆ, ಮಂದರವೆ ಚಲಿಸದಿರ್ ಎಂದು ಬೋಧಿಸಲದೇಕೆ**=ಎಲೆಲೆ, ಮಂದರ ಪರ್ವತವೇ, ಇದ್ದ

ಎಡೆಯನ್ನು ಬಿಟ್ಟು ಮುಂದಕ್ಕೆ ಚಲಿಸಬೇಡ ಎಂದು ತಿಳಿಯಹೇಳುವ ಅಗತ್ಯವಿದೆಯೇ; **ಸುಮ್ಮನಿರಲು ನಿಜವ ಅಳಿವವೇ**=ಏನನ್ನು ಹೇಳದೆ ನಾವು ಸುಮ್ಮನಿದ್ದರೆ, ಅವು ತಮ್ಮ ನಿಜಗುಣವನ್ನು ಬಿಟ್ಟು ಹಾಳಾಗುತ್ತವೆಯೇ. ಅಂದರೆ ಉರಿಯುವ ಸೂರ್ಯನ ಕಿರಣಗಳ ಕಾಂತಿ–ಬೆಂಕಿಯ ಸುಡುವಿಕೆ–ಬೆಳಗುವ ಚಂದ್ರನ ಬೆಳಕು–ಮಂದರ ಪರ್ವತದ ಅಚಲತೆಯು ಹೇಗೆ ಅವುಗಳ ಸಹಜಗುಣವೋ ಅಂತೆಯೇ ಹರಿಶ್ಚಂದ್ರನ ನಡೆನುಡಿಯಲ್ಲಿ ಸತ್ಯವೆಂಬುದು ಸಹಜವಾಗಿದೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ;

ವರಹರಿಶ್ಚಂದ್ರ ಸತ್ಯಮ್ ಕೆಡದಿರ್ ಎಂದು ಬೋಸರಿಸುವಂತಾಗಿ ಹುಸಿಯುಂಟೆ=ಉತ್ತಮ ವ್ಯಕ್ತಿಯಾದ ಹರಿಶ್ಚಂದ್ರನಿಗೆ ನೀನು ಸತ್ಯದ ನಡೆನುಡಿಯನ್ನು ಬಿಡಬೇಡ ಎಂದು ಎಚ್ಚರಿಕೆಯನ್ನು ನೀಡುವಷ್ಟು ಅವನಲ್ಲಿ ಸುಳ್ಳಿದೆಯೆ; **ಕೊಂಡೆಯವೆ ಎನಗೆ**=ನನಗೆ ಚಾಡಿ ಹೇಳುವ ಗುಣವಿದೆಯೆ. ಅಂದರೆ ನಿನ್ನ ಮೇಲೆ ದೂರನ್ನು ಹೇಳುವಂತಹ ಕೀಳು ಕೆಲಸವನ್ನು ನಾನು ಮಾಡುವುದಿಲ್ಲ; **ಹಿರಿಯತನ ಕೆಟ್ಟಿಂತು ನುಡಿಯಲಹುದೇ ಎಂದು ವಾಸಿಷ್ಠಮುನಿ ನುಡಿದನು**=ನೀನು ನಿನ್ನ ಹಿರಿಯತನಕ್ಕೆ ತಕ್ಕುದಲ್ಲದ ಮಾತುಗಳನ್ನು ಈ ರೀತಿ ನುಡಿಯಬಹುದೇ ಎಂದು ವಸಿಷ್ಠನು ವಿಶ್ವಾಮಿತ್ರನನ್ನು ಹಂಗಿಸಿದನು; **ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ**=ಸಿಡಿಲು ಬಡಿದಾಗ ಹಿಡಿದ ಕೊಡೆಯು ಕಾಪಾಡುವುದೇ;

ಮುನಿದು ಪೊಡವಿ ನುಂಗುವಡೆ ಮನೆ ತಾಂಗುವುದೆ=ಭೂಮಿಯು ಕಂಪಿಸಿತೊಡಗಿದಾಗ ಮನೆಯು ಬೀಳದೆ ಉಳಿಯುವುದೆ; **ಕವಿದು ಹೆಗ್ಗಡಲುಕ್ಕಿ ಜಗವ ಮೊಗೆವಡೆ ಮಳೆಗಳು ಅಡ್ಡಬಹವೇ**=ಹೆಗ್ಗಡಲು ದೊಡ್ಡ ದೊಡ್ಡ ಅಲೆಗಳ ಉಬ್ಬರವಿಳಿತದಿಂದ ತೀರವನ್ನು ಅಪ್ಪಳಿಸುತ್ತ ಮುನ್ನುಗ್ಗಿ ಜಗತ್ತನ್ನು ಆಕ್ರಮಿಸಿ ಕೊಳ್ಳುವಾಗ ಮಳೆಗಳು ಅಡ್ಡಬಂದು, ಕಡಲಿನ ಜಲರಾಶಿಯನ್ನು ಹಿಮ್ಮೆಟ್ಟಿಸಿ ಜಗತ್ತನ್ನು ಕಾಪಾಡಲು ಆಗುತ್ತದೆಯೇ;

ಹೇಳು, ಮುನಿಪ ನಿನ್ನ ಬಡ ಬೋಧೆಗೀಧೆಗಳು ರಕ್ಷಿಸುವುವಲ್ಲ=ಹೇಳು ವಸಿಷ್ಠನೇ, ನಿನ್ನ ತಿಳುವಳಿಕೆಯ ಮಾತುಗಳು ಹರಿಶ್ಚಂದ್ರನನ್ನು ಕಾಪಾಡುವುದಿಲ್ಲ; **ನಾನ್ ಕಡುಮುಳಿದ ಬಳಿಕಲು ಏಗುವುವು**=ನಾನು ತೀವ್ರವಾಗಿ ಕೋಪಿಸಿಕೊಂಡಿರುವುದರಿಂದ ಯಾರೂ ಏನನ್ನು ಮಾಡಲಾಗುವುದಿಲ್ಲ. ಅಂದರೆ ಹರಿಶ್ಚಂದ್ರನು ಸುಳ್ಳನ್ನಾಡದೆ ಸತ್ಯವಂತನಾಗಿ ಉಳಿಯಲು ಆಗುವುದಿಲ್ಲ; **ನೀ ಹೇಳದಿರ್ದಡೆ ಮದನಹರನಾಣೆ ಹೋಗು ಎಂದು ಕೌಶಿಕನ್ ವಸಿಷ್ಠ ಮುನಿಯ ಜರೆದನು**=ನೀನು ಹರಿಶ್ಚಂದ್ರನಿಗೆ ಹೇಳದಿದ್ದರೆ ಶಿವನಾಣೆ. ಹೋಗು ಈ ಕೂಡಲೇ ಅವನಿಗೆ ಎಚ್ಚರಿಕೆಯನ್ನು ನೀಡು ಎಂದು ವಸಿಷ್ಠ ಮುನಿಯನ್ನು ವಿಶ್ವಾಮಿತ್ರನು

ಹಂಗಿಸಿದನು;

ಕುಲವ ನಾಲಗೆ ಅರುಹಿತು ಎಂಬ ನಾಣ್ಣುಡಿಗೆ ಇಂದು ನೆಲೆಯಾಯ್ತಲಾ= 'ಕುಲವನ್ನು ನಾಲಗೆ ಹೇಳಿತು' ಎಂಬ ಗಾದೆಯಂತೆ ಇಂದು ನಿನ್ನ ಗುಣಕ್ಕೆ ನೀನಾಡುವ ಮಾತುಗಳೇ ಸಾಕ್ಷಿಯಾಗಿವೆ ಎಂದು ವಸಿಷ್ಠನು ವಿಶ್ವಾಮಿತ್ರನನ್ನು ಹೀಯಾಳಿಸುತ್ತಾನೆ. ವ್ಯಕ್ತಿಯು ಆಡುವ ಮಾತುಗಳು ಆತನ ಜಾತಿ/ಮತವನ್ನು ಸೂಚಿಸುತ್ತದೆ. ಅಂದರೆ ಸಾಮಾಜಿಕ ಅಂತಸ್ತಿನಲ್ಲಿ ವ್ಯಕ್ತಿಯು ಮೇಲು ಇಲ್ಲವೇ ಕೀಳು ಎಂಬುದನ್ನು ಸೂಚಿಸುತ್ತದೆ ಎಂಬ ತಿರುಳನ್ನು ಈ ಗಾದೆ ಮಾತು ಒಳಗೊಂಡಿದೆ;

ಬ್ರಹ್ಮ ಋಷಿಯಾದಡೆ ಒಳಗು ನಿರ್ಮಳವಪ್ಪುದಯ್ಯ. ನೀನ್ ರಾಜರ್ಷಿ ಕೋಪಿಸದೆ ಧಟ್ಟಿಸದೆ ಕೆಡೆನುಡಿಯದೆ ನಿಲಲ್ ಎಂತು ಬಲ್ಲೆ=ನೀನು ಬ್ರಹ್ಮ ರಿಸಿಯಾಗಿದ್ದರೆ ನಿನ್ನ ಮನಸ್ಸು ನಿರ್ಮಲವಾಗಿರುತ್ತಿತ್ತು. ಅಂದರೆ ನಿನ್ನ ಹತೋಟಿಯಲ್ಲಿರುತ್ತಿತ್ತು. ಆದರೆ ನೀನು ರಾಜರಿಸಿಯಾಗಿರುವೆ. ಆದ್ದರಿಂದಲೇ ಕೋಪಿಸಿಕೊಳ್ಳದೆ, ನಿಂದಿಸದೆ, ಕೆಟ್ಟನುಡಿಯನ್ನಾಡದೆ ಇರಲು ನಿನ್ನಿಂದ ಆಗುತ್ತಿಲ್ಲ;

ಬ್ರಹ್ಮ ಋಷಿ=ಜಾತಿಯಲ್ಲಿ ಬ್ರಾಹ್ಮಣನಾಗಿ ಹುಟ್ಟಿ ಬೆಳೆದು ಜಪ ತಪ ವಿದ್ಯೆ ಯೋಗ ಯಾಗಗಳಿಂದ ಅರಿವನ್ನು ಪಡೆದು ರಿಸಿಯಾದವನು; **ರಾಜರ್ಷಿ**= ಬ್ರಾಹ್ಮಣ ಜಾತಿಯಲ್ಲದೆ ಬೇರೊಂದು ಜಾತಿಯಲ್ಲಿ ಹುಟ್ಟಿ ಬೆಳೆದು ರಾಜನಾಗಿ ಆಳಿ, ಅನಂತರ ಜಪ ತಪ ವಿದ್ಯೆ ಯೋಗ ಯಾಗಗಳಿಂದ ಅರಿವನ್ನು ಪಡೆದು ರಿಸಿಯಾದವನು; **ಎನ್ನ ನೀನೀಗ ಹೆಪ್ಪಳಿಸದೆ ಆಡಿದೆ**=ನೀನು ಈಗ ನನ್ನ ಬಗ್ಗೆ ಯಾವ ಹೆದರಿಕೆಯೂ ಇಲ್ಲದೆ ನನ್ನ ಕುಲದ ಪ್ರಸ್ತಾಪವನ್ನು ಮಾಡಿ ತುಂಬಾ ಕಡೆಗಣಿಸಿ ಮಾತನಾಡಿದೆ; **ಅಹುದಹುದು ನಿನ್ನಲಿಹ ನೆಲೆಯಾಡಿತು ಎನೆ**=ನಿಜ ನಿನ್ನ ವ್ಯಕ್ತಿತ್ವದಲ್ಲಿನ ಕೆಟ್ಟತನವೇ ಅಂತಹ ಮಾತುಗಳನ್ನು ನಾನು ಆಡಲು ಕಾರಣ ವಾಯಿತು ಎಂದು ವಸಿಷ್ಠನು ನುಡಿಯಲು; **ಕೌಶಿಕನ್ ಕುಪಿತನಾದನ್**= ವಿಶ್ವಾಮಿತ್ರನು ಕೋಪದಿಂದ ಕೆರಳಿದನು;

ಅದನ್ ಆವ ಕವಿ ಬಣ್ಣಿಸುವನು=ವಿಶ್ವಾಮಿತ್ರನ ಕೋಪದ ತೀವ್ರತೆಯನ್ನು ಯಾವ ಕವಿ ತಾನೆ ಬಣ್ಣಿಸಬಲ್ಲ; **ನೋಡು ನೋಡು. ಇಂದು ಎನ್ನ ರಾಜ ಋಷಿಯೆಂದು ಕೆಟ್ಟಾಡಿತಕ್ಕೆ**=ನೋಡು ನೋಡು ವಸಿಷ್ಠ ಇಂದು ನನ್ನನ್ನು ರಾಜ ರಿಸಿಯೆಂದು ಕರೆದು ಕಡೆಗಣಿಸಿ ನೀನು ನುಡಿದೆಯಾದ ಕಾರಣದಿಂದ; **ಆ ಹರಿಶ್ಚಂದ್ರನನ್ ಅಸತ್ಯನನ್ ಮಾಡಿಸುವೆನ್**=ನಿನ್ನ ಶಿಷ್ಯನಾದ ಹರಿಶ್ಚಂದ್ರನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇನೆ;

ಅಧಿಕ ಪ್ರತಿಜ್ಞೆಗಳನ್ ಆಂತ ನಿನ್ನನ್ ವ್ರತಭ್ರಷ್ಟನ್ ಎನಿಸಿ=ದೊಡ್ಡ ದೊಡ್ಡ ಪ್ರತಿಜ್ಞೆಗಳನ್ನು ತೊಟ್ಟಿರುವ ನಿನ್ನನ್ನು ವ್ರತ ತಪ್ಪಿದವನನ್ನಾಗಿ ಮಾಡಿ; **ರೋಡಾಡಿ ಕಾಡುವೆನು ಎನುತ್ತ ವಿಶ್ವಾಮಿತ್ರನ್ ಎದ್ದು**=ಅಪಮಾನಗೊಳಿಸಿ ಕಾಡುತ್ತೇನೆ ಎನ್ನುತ್ತ ಮೇಲೆದ್ದು; **ಸಿಡಿಲು ಗಜರಿ ಗರ್ಜಿಸಿ ಮೇಘದಿಂದ ಪೊರಮಡುವ ಅಂದದಿ ಸಾವನ್ ಈಡಾಡಿದವರೊಡೆಯನ ಆಡಂಬರದ ಓಲಗದಿಂದ ಹೊರವಂಟನ್**= ಮೋಡಗಳ ತಿಕ್ಕಾಟದಿಂದ ಮೊಳಗುತ್ತ ಹೊರಹೊಮ್ಮುವ ಸಿಡಿಲಿನಂತೆ ವಿಶ್ವಾಮಿತ್ರನು ಅಬ್ಬರಿಸುತ್ತ ದೇವೇಂದ್ರನ ಸಿರಿಸಂಪತ್ತಿನಿಂದ ಮೆರೆಯುತ್ತಿರುವ ಒಡ್ಡೋಲಗದಿಂದ ಹೊರನಡೆದನು;

❖

ಪ್ರಸಂಗ–೨

ಬಹು ಸುವರ್ಣಯಾಗ

“ಕೋಣನೆರಡುಮ್ ಹೋರೆ ಗಿಡುವಿಂಗೆ ಮಿತ್ತು” ಎಂಬ ಕ್ಷೋಣಿಯಾಡುವ ಗಾದೆಯಮ್ ದಿಟಮ್ ಮಾಳ್ಪಂತೆ=ಎರಡು ಕೋಣಗಳು ಒಂದಕ್ಕೆ ಮತ್ತೊಂದು ಡಿಕ್ಕಿಹೊಡೆಯುತ್ತ ಹೋರಾಡುವಾಗ ನಡುವೆ ಇರುವ ಸಣ್ಣಪುಟ್ಟ ಗಿಡಗಂಟೆ ಗಳೆಲ್ಲವೂ ನಾಶವಾಗುತ್ತವೆ ಎಂದು ಲೋಕದ ಜನರು ಆಡುವ ಗಾದೆಯನ್ನು ನಿಜವನ್ನಾಗಿ ಮಾಡುವಂತೆ; ತೋಳ್ಬಲ/ಜಾತಿಬಲ/ಸೇನಾಬಲ/ಹಣಬಲವುಳ್ಳ ಇಬ್ಬರು ವ್ಯಕ್ತಿಗಳ ನಡುವೆ ಪರಸ್ಪರ ಹೋರಾಟ ನಡೆಯುವಾಗ, ಇವರ ನಡುವೆ ಸಿಲುಕಿದ ಈ ಬಲಗಳಿಲ್ಲದ ವ್ಯಕ್ತಿಗಳು ಸಾವು ನೋವಿಗೆ ಗುರಿಯಾಗಿ ನರಳುತ್ತಾರೆ. ಬಲಶಾಲಿಗಳ ಹೋರಾಟದಲ್ಲಿ ಬಲಹೀನರು ಅಳಿಯುತ್ತಾರೆ ಎಂಬ ಲೋಕ ಜೀವನದ ವಾಸ್ತವವನ್ನು ಈ ಗಾದೆಯು ಸೂಚಿಸುತ್ತಿದೆ;

ಕೌಶಿಕನ್ ವಸಿಷ್ಠಂಗೆ ಹೂಣಿಸಿ=ವಿಶ್ವಾಮಿತ್ರನು ವಸಿಷ್ಠನಿಗೆ ಎದುರುಬಿದ್ದು; ದೇವೇಂದ್ರನ ಓಲಗದಲ್ಲಿ ವಸಿಷ್ಠನು “ಹರಿಶ್ಚಂದ್ರನು ಸತ್ಯವಂತ” ಎಂದು ಹೇಳಿದ ಮಾತನ್ನು ಸುಳ್ಳನ್ನಾಗಿಸಲೇಬೇಕೆಂಬ ಪಣತೊಟ್ಟು; ಕುಶಿಕನೆಂಬ ರಾಜನ ಮಗನಾದ ವಿಶ್ವಾಮಿತ್ರನಿಗೆ ಕೌಶಿಕ ಎಂಬ ಮತ್ತೊಂದು ಹೆಸರಿತ್ತು. **ನುಡಿದ ಪ್ರತಿಜ್ಞೆಯಮ್ ಗೆಲುವಡೆ**=ದೇವೇಂದ್ರನ ಓಲಗದಲ್ಲಿ ನಾನು ಮಾಡಿರುವ ಪ್ರತಿಜ್ಞೆಯನ್ನು ಗೆಲ್ಲಬೇಕಾದರೆ; **ಇನ್ನು ಜಾಣಿಮ್ ಹರಿಶ್ಚಂದ್ರರಾಯನ**

ಉನ್ನತಿಯಳಿವ ಕಾಣಬೇಕು ಎಂದು=ಇನ್ನು ಮುಂದೆ ತುಂಬಾ ಜಾಣತನದಿಂದ ಹರಿಶ್ಚಂದ್ರರಾಯನ ಸತ್ಯದ ಹಿರಿಮೆಯನ್ನು ನಾಶಪಡಿಸುವ ಸಂಚನ್ನು ರೂಪಿಸಬೇಕು ಎಂದುಕೊಂಡು;

ಅಖಿಳ ಸಾಮಾರ್ಥದ ಕಲಾಪ್ರವೀಣನ್=ಸಾಮ–ದಾನ–ಭೇದ–ದಂಡಗಳೆಂಬ ರಹಸ್ಯದ ಕಾರ್ಯಾಚರಣೆಗಳ ತಂತ್ರ ಕುತಂತ್ರಗಳಲ್ಲಿ ಪರಿಣತನಾದ ವಿಶ್ವಾಮಿತ್ರನು; **ಅಂತಸ್ಥದ ಏಕಾಂತದೊಳ್ ಚಿಂತೆಯಿಮ್ ಭ್ರಾಂತಿಯೋಗದೊಳ್ ಇರ್ದನು**= ಆಶ್ರಮದಲ್ಲಿ ತಾನೊಬ್ಬನೇ ಕುಳಿತುಕೊಂಡು ಯಾವ ಯಾವ ಬಗೆಯ ಸಂಚು ಗಳನ್ನು ಹೂಡಬಹುದು ಎಂದು ತನ್ನ ಮನದಲ್ಲಿ ಚಿಂತಿಸುತ್ತ, ಕೇಡನ್ನು ಬಗೆಯುವ ಕಲ್ಪನೆಗಳಲ್ಲಿ ಮುಳುಗಿದ್ದನು; **ಧರೆಯೊಳು ಹರಶ್ಚಂದ್ರನನ್ ಹುಸಿಕನ್ ಎಂದೆನಿಪ ಪರಿಯು ಆವುದು ಎಂದು ಚಿಂತಿಸಲ್**=ಭೂಮಂಡಲದಲ್ಲಿ ಹರಿಶ್ಚಂದ್ರನನ್ನು ಸುಳ್ಳುಗಾರ ಎಂದು ಎಲ್ಲರೂ ಕರೆಯುವಂತೆ ಮಾಡುವ ಬಗೆ ಯಾವುದೆಂದು ಚಿಂತಿಸುತ್ತಿರುವಾಗ;

ಒಂದು ಉಪಾಯವು ಅಂಕುರಿಸೆ ಕಂಡು ಉಬ್ಬಿ, ಭುಜವೊಯ್ದು=ಮನಸ್ಸಿನಲ್ಲಿ ಒಂದು ಉಪಾಯವು ಹೊಳೆದುದನ್ನು ಕಂಡು ಆನಂದದಿಂದ ಹಿಗ್ಗಿ, ತನ್ನ ಭುಜವನ್ನು ತಾನೇ ತಟ್ಟಿಕೊಂಡು ಅಂದರೆ ಇಂತಹ ಉಪಾಯವನ್ನು ಕಂಡು ಹಿಡಿದೆನಲ್ಲಾ ಎಂಬ ಹೆಮ್ಮೆಯಿಂದ; **ನಿಜವೈರದ ಅಂತಸ್ಥ ಅರಿಯದ ಮುನಿಗಳ ಕರೆದು**=ಹರಿಶ್ಚಂದ್ರನ ಬಗ್ಗೆ ತನ್ನ ಮನದಲ್ಲಿರುವ ಹಗೆತನದ ಸಂಗತಿಯನ್ನು ತಿಳಿಯದ ಮುನಿಗಳನ್ನು ಕರೆದು; **ನೀವ್ ಇಂತೀಗ ಹೋಗಿ ಭೂವರನನ್ ಉಪಚರಿಸಿ ಬೋಧಿಸಿ**=ನೀವು ಈ ಕೂಡಲೇ ಅಯೋಧ್ಯೆಯ ರಾಜನಾದ ಹರಿಶ್ಚಂದ್ರನ ಬಳಿಗೆ ಹೋಗಿ, ರಾಜನಿಗೆ ಮಂಗಳವನ್ನು ಕೋರಿ ಆಶೀರ್ವದಿಸಿ, ಧರ್ಮದ ಸಂಗತಿಗಳನ್ನು ತಿಳಿಸಿ;

ಆವ ಪರಿಯೊಳಮ್=ಯಾವು ರೀತಿಯ ನಡೆನುಡಿಯಿಂದಲಾದರೂ ಹರಿಶ್ಚಂದ್ರನು ನಿಮ್ಮನ್ನು ಮೆಚ್ಚುವಂತೆ ಮಾಡಿ; ಅಂದರೆ ನಿಮ್ಮ ಮಾತಿಗೆ ಮನ್ನಣೆಯನ್ನು ನೀಡುವಂತೆ ಒಲಿಸಿಕೊಂಡು; **ಬಹುಸುವರ್ಣಯಾಗವನ್ ಮಾಳ್ಪ ಅನುವನ್**=ಬಹುಸುವರ್ಣಯಾಗವನ್ನು ಮಾಡುವ ಸಿದ್ಧತೆಯನ್ನು; ಬಹುಸುವರ್ಣಯಾಗ ಎಂದರೆ ಯಾಗದ ಪೂಜೆಯ ಆಚರಣೆಗಳನ್ನು ಮುಗಿಸಿನಂತರ, 'ಬಹು' ಎಂದರೆ ದೊಡ್ಡ ಪ್ರಮಾಣದಲ್ಲಿ, 'ಸುವರ್ಣ' ಎಂದರೆ ಚಿನ್ನವನ್ನು ಮುನಿಗಳಿಗೆ ಮತ್ತು ಗುರುಹಿರಿಯರಿಗೆ ದಾನಮಾಡುವುದು; **ಉರೆ ಮಾಳ್ಪುದು ಎಂದು ವಿಶ್ವಾಮಿತ್ರನು ಕಳುಹಿದನು**=ಅತಿಶಯವಾಗಿ ಮಾಡುವುದು ಎಂದು ಹೇಳಿ ವಿಶ್ವಾಮಿತ್ರನು ತನ್ನ ಆಶ್ರಮದಲ್ಲಿದ್ದ ಮುನಿಗಳನ್ನು ಹರಿಶ್ಚಂದ್ರನಲ್ಲಿಗೆ ಕಳುಹಿಸಿದನು;

ಮುನಿಗಳ್ ಕೌಶಿಕನ ಕುಟಿಲವ ಅರಿಯದೆ ಹೋಗಿ=ಮುನಿಗಳು ವಿಶ್ವಾಮಿತ್ರನ ಕಪಟತನದ ಉದ್ದೇಶವನ್ನು ತಿಳಿಯದೆ ಅಯೋಧ್ಯೆಗೆ ಬಂದು; **ಅವನೀಶಂಗೆ ಮಂಗಳ ಆಶೀರ್ವಾದ ಶೇಷೆಯಮ್ ಸೂಸಲ್**=ರಾಜನಿಗೆ ಮಂಗಳ ಪೂರ್ವಕವಾಗಿ ಆಶೀರ್ವಾದವನ್ನು ಮಾಡಿ ತಲೆಯ ಮೇಲೆ ಅಕ್ಷತೆಯ ಕಾಳುಗಳನ್ನು ಹಾಕಲು; **ಏನು ಕಾರ್ಯ ಬಿಜಯಂಗೆಯ್ದಿರಿ**=ಯಾವ ಉದ್ದೇಶಕ್ಕಾಗಿ ದಯಮಾಡಿಸಿದ್ದೀರಿ;

ಸಕಲ ವೇದ ಪೌರಾಣ ಆಗಮ ರಾಶಿಗಳೊಳ್ ಅಧಿಕ ಧರ್ಮಮಮ್ ಕಂಡು ಅರಿಪಲೋಸುಗಮ್ ಬಂದೆವು=ಎಲ್ಲ ಬಗೆಯ ವೇದ ಪುರಾಣ ಆಗಮ ಮುಂತಾದ ನೂರಾರು ಹೊತ್ತಗೆಗಳಲ್ಲಿ ಅತಿ ಹೆಚ್ಚಿನ ಧರ್ಮದ ಆಚರಣೆಯನ್ನು ತಿಳಿದುನೋಡಿ, ಅದನ್ನು ನಿನಗೆ ತಿಳಿಸೋಣವೆಂದು ಬಂದಿದ್ದೇವೆ; **ಆವುದು**= ಧರ್ಮದ ಆಚರಣೆ ಯಾವುದು ಎಂದು ಹರಿಶ್ಚಂದ್ರನು ಮುನಿಗಳನ್ನು ಕೇಳುತ್ತಾನೆ; **ಮಾಳ್ಪ ವಿಶ್ವಾಸಮಮ್ ನುಡಿಯೆ ಪೇಳ್ದಪೆವು. ಮಾಡದಡೆ ಅದಮ್ ನುಡಿದು ಫಲವೇನ್ ಎಂದರು**=ಮಾಡುತ್ತೇನೆಂದು ನೀನು ಭರವಸೆಯ ನುಡಿಯನ್ನಾಡಿದರೆ ಮಾತ್ರ ನಾವು ಹೇಳುತ್ತೇವೆ. ನಾವು ಹೇಳಿದ ನಂತರ ನೀನು ಅದನ್ನು ಮಾಡದಿದ್ದರೆ, ನಾವು ಹೇಳುವುದರಿಂದ ಏನು ತಾನೆ ಪ್ರಯೋಜನ ಎಂದರು;

ಮನವೊಸೆದು ಮಾಡುವಂತಾಗಿ=ಮನಮೆಚ್ಚಿ ಮಾಡುವಂತಾಗಿ ಅಂದರೆ ಹರಿಶ್ಚಂದ್ರನ ಮನದಲ್ಲಿ ಮುನಿಗಳ ಮಾತು ಪರಿಣಾಮವನ್ನು ಬೀರಿ, ಅವರು ಹೇಳುವ ಧರ್ಮದ ಆಚರಣೆಯನ್ನು ಮಾಡಲು ನಿಶ್ಚಯಿಸಿಕೊಂಡು; **ಗುರು ವಾಸಿಷ್ಠಮುನಿಯ ಪದಪಂಕೇಜದಾಣೆ ನೆಟ್ಟನೆ ಪೇಳ್ವುದು**=ಗುರು ವಸಿಷ್ಠ ಮುನಿಯ ಪಾದಕಮಲದ ಮೇಲೆ ಆಣೆಯಿಡುತ್ತಿದ್ದೇನೆ. ನೀವು ಹೇಳಿದ ಧರ್ಮದ ಆಚರಣೆಯನ್ನು ನೆರವೇರಿಸುತ್ತೇನೆ. ಅದೇನೆಂಬುದನ್ನು ಯಾವ ಹಿಂಜರಿಕೆಯಿಲ್ಲದೆ ನೇರವಾಗಿ ಹೇಳಿರಿ;

ಬಹುಸುವರ್ಣಯಾಗಮ್ ಯಾಗ ಕೋಟಾನುಕೋಟಿಗಳೊಳ್ ಅಧಿಕಫಲವು ನಿನಗಲ್ಲದೆ ಉಳಿದ ಭೂಪರ್ಗೆ ಆಗದು=ಲೆಕ್ಕವಿಲ್ಲದಷ್ಟು ಸಂಕೆಯಲ್ಲಿರುವ ಕೋಟಿ ಗಟ್ಟಲೆ ಯಾಗಗಳಲ್ಲಿ ಬಹುಸುವರ್ಣಯಾಗವೆಂಬುದನ್ನು ಮಾಡಿದರೆ ಅತಿಹೆಚ್ಚಿನ ಫಲವು ದೊರಕುತ್ತದೆ. ಈ ಯಾಗವನ್ನು ನೀನಲ್ಲದೆ ಉಳಿದ ರಾಜರಿಂದ ಮಾಡಲಾಗುವುದಿಲ್ಲ; **ಅದರ ಅನುವು ಆವುದು**=ಬಹು ಸುವರ್ಣಯಾಗದ ವಿಧಿವಿಧಾನಗಳು ಯಾವ ಬಗೆಯಲ್ಲಿವೆ; **ದೋಷ ನೆಟ್ಟನೆ ನಿನಗೆ ಬಾರದ ಅಂದದಿ ನೆರೆದ ಮುನಿಗಳಿಗೆ ಬೇಡಿದನಿತು ವಸ್ತುವನ್ ಈಯಬೇಕು ಎಂದರು**=ನಿನ್ನ ದಾನಶೀಲತೆಗೆ ಕಳಂಕ ತಟ್ಟದ ರೀತಿಯಲ್ಲಿ ಯಾಗಕ್ಕೆ ಬಂದಿರುವ ಮುನಿಗಳು ಬಯಸಿದಷ್ಟು ವಸ್ತುವನ್ನು ಕೊಡಬೇಕು ಎಂದರು;

ಆ ವಿಮಳ ಮುನಿಗಳ ಹಿತೋಪದೇಶವನ್ ಆಂತು=ಆ ಹೆಸರಾಂತ ಮುನಿಗಳ ಹಿತನುಡಿಗಳನ್ನು ಒಪ್ಪಿಕೊಂಡು ಅದರಂತೆಯೇ ಬಹು ಸುವರ್ಣಯಾಗವನ್ನು ಮಾಡಲು ಸಿದ್ಧನಾಗಿ; **ಭೂವರನ್ ಸರ್ವಮುನಿವರ್ಗಮಮ್ ಬರಿಸಿ**=ರಾಜ ಹರಿಶ್ಚಂದ್ರನು ತನ್ನ ರಾಜ್ಯದಲ್ಲಿದ್ದ ಮುನಿಗಳೆಲ್ಲರನ್ನೂ ಯಾಗಕ್ಕೆ ಕರೆಸಿಕೊಂಡು; **ನಾನಾ ವೇದವಿಹಿತ ಧರ್ಮ ಆಗಮ ಅರ್ಥದಿಮ್ ಯಾಗಮಮ್ ಮಾಡಿ**=ನಾಲ್ಕು ವೇದಗಳಲ್ಲಿ ಹೇಳಿರುವ ಧರ್ಮದ ಆಚರಣೆಗಳನ್ನು ಮತ್ತು ಆಗಮದ ಹೊತ್ತಗೆಗಳಲ್ಲಿ ಹೇಳಿರುವ ಶಾಸ್ತ್ರದ ವಿಧಿವಿಧಾನಗಳನ್ನು ಅನುಸರಿಸಿ ಯಾಗವನ್ನು ಮಾಡಿ;

ಬಳಿಕ ಆವಾವ ಮುನಿಗಳು ಆವಾವ ಧನವಮ್ ಬೇಡಲ್=ಯಾಗದ ಕೊನೆಯಲ್ಲಿ ಯಾವ ಯಾವ ಮುನಿಗಳು ಯಾವ ಯಾವ ಬಗೆಯ ಸಿರಿಸಂಪತ್ತನ್ನು ಬೇಡುತ್ತಾರೆಯೋ; **ಓವಿ ಕೊಟ್ಟು ಉಪಚರಿಸುತಿರೆ**=ಪ್ರೀತಿಯಿಂದ ಕೊಟ್ಟು ಮುನಿಗಳನ್ನು ಉಪಚರಿಸುತ್ತಿರಲು; ಸುಜನ=ಒಳ್ಳೆಯ ವ್ಯಕ್ತಿಗಳು; ಮೃಗ=ಪ್ರಾಣಿಪಕ್ಷಿಗಳು; ಧೀವರ=ಬೇಡ/ಬೇಟೆಗಾರ; **ಸುಜನಮೃಗಧೀವರ**=ಒಳ್ಳೆಯ ವ್ಯಕ್ತಿಗಳಿಗೆ ಸಾವುನೋವನ್ನುಂಟುಮಾಡುವವನು; **ಸುಜನಮೃಗಧೀವರನ್ ಕಪಟವಟು ಕೌಶಕನ್ ವಾಸಿಷ್ಠ ಮುನಿ ಹೋದ ಹೊತ್ತನ್ ಅರಿದು ಬಂದ**=ಒಳ್ಳೆಯ ವ್ಯಕ್ತಿಗಳನ್ನೇ ಬೇಟೆಯಾಡುವ ಕಪಟತನದ ನಡೆನುಡಿಯ ವಿಶ್ವಾಮಿತ್ರನು ವಸಿಷ್ಠ ಮುನಿಯು ಯಾಗವನ್ನು ಮುಗಿಸಿಕೊಂಡು ಹೋದ ಸಮಯವನ್ನು ತಿಳಿದುಕೊಂಡು, ಈಗ ಯಾಗದ ವೇದಿಕೆಗೆ ಬಂದನು;

ಹರಿದು ವಿಶ್ವಾಮಿತ್ರಮುನಿಗೆ ಎರಗಿ ಚರಣಸರಸಿರುಹಮಮ್ ತೊಳೆದು=ಯಾಗದ ವೇದಿಕೆಗೆ ಬಂದ ವಿಶ್ವಾಮಿತ್ರಮುನಿಯ ಬಳಿಗೆ ಹರಿಶ್ಚಂದ್ರನು ಬಂದು, ಮುನಿಯ ಪಾದಕ್ಕೆ ನಮಿಸಿ, ಅವನ ಪಾದಕಮಲವನ್ನು ತೊಳೆದು ಉಪಚರಿಸಿ; **ನೆನೆದ ಅರ್ಥಮಮ್ ಬೆಸಸಿಮ್**=ನೀವು ಬಯಸುತ್ತಿರುವ ಸಿರಿಸಂಪತ್ತಿನ ಪ್ರಮಾಣ ಎಷ್ಟು ಎಂಬುದನ್ನು ಅಪ್ಪಣೆಮಾಡಿ; **ಅರಸ, ಪಿರಿಯ ಕರಿಯಮ್ ಮೆಟ್ಟಿ, ಕವಡೆಯಮ್ ಮಿಡಿದಡೆ ಎನಿತು ಉದ್ದಕ್ಕೆ ಹೋದುದು, ಅದರ ಸರಿಯೆನಿಸಿ ಸುರಿದ ಹೊಸ ಹೊನ್ನ ರಾಸಿಯನ್ ಈವುದು**=ರಾಜನೇ, ದೊಡ್ಡ ಆನೆಯ ಮೇಲೆ ಒಬ್ಬ ವ್ಯಕ್ತಿಯು ನಿಂತುಕೊಂಡು, ಕವಡೆಯನ್ನು ಮೇಲಕ್ಕೆ ಚಿಮ್ಮಿದರೆ, ಕವಡೆಯು ಎಷ್ಟು ಎತ್ತರಕ್ಕೆ ಹೋಗುವುದೋ, ಆ ಎತ್ತರಕ್ಕೆ ಸರಿಸಮನಾಗಿ ಸುರಿದ ಹೊಸ ಹೊನ್ನಿನ ರಾಸಿಯನ್ನು ಕೊಡುವುದು;

ಹಸಾದಮ್ ಕೊಟ್ಟೆನ್=ತಮ್ಮ ಮಾತಿನಂತೆ ನೀವು ಕೇಳಿದಷ್ಟು ಹೊನ್ನನ್ನು ಕೊಟ್ಟೆನು ಎಂದು ಹೇಳಿ ಹೊನ್ನಿನ ರಾಶಿಯನ್ನು ವಿಶ್ವಾಮಿತ್ರಮುನಿಗೆ ತೋರಿಸುತ್ತ; **ಅದಮ್ ಈಗಲೆ ಇರದೆ ಒಯ್ವುದು**=ನಿಮ್ಮ ಹೊನ್ನನ್ನು ಈಗಲೆ ಇಲ್ಲಿ ಬಿಡದೆ ನೀವು

ತೆಗೆದುಕೊಂಡು ಹೋಗಿ; **ನಿನ್ನ ಮೇಲಿರಲಿ. ಬೇಹಾಗ ತರಿಸಿಕೊಂಡಪೆನ್ ಎಂದನು**=ನಿನ್ನ ಬಳಿಯಲ್ಲಿಯೇ ಇರಲಿ. ನನಗೆ ಬೇಕಾದಾಗ ತರಿಸಿಕೊಳ್ಳುವೆನು ಎಂದನು; **ಕೊಂಡ ಹೊಸ ಹೊನ್ನ ರಾಸಿಯಮ್ ಅವನಿಪಾಲಕನ ಭಂಡಾರದೊಳಗೆ ಇರಿಸಿ ತನ್ನಾಶ್ರಮಕೆ ಮರಳಿ**=ಬಹು ಸುವರ್ಣಯಾಗದಲ್ಲಿ ದಾನವಾಗಿ ಪಡೆದ ಹೊಸ ಹೊನ್ನ ರಾಸಿಯನ್ನು ವಿಶ್ವಾಮಿತ್ರ ಮುನಿಯು ರಾಜ ಹರಿಶ್ಚಂದ್ರನ ಬೊಕ್ಕಸದೊಳಗೆ ಇರಿಸಿ, ತನ್ನ ಆಶ್ರಮಕ್ಕೆ ಹಿಂತಿರುಗಿದನು;

❖

ಪ್ರಸಂಗ–೩

ವಿಶ್ವಾಮಿತ್ರನ ಒಳಸಂಚು

ಕೊಂಡ ಹೊಸ ಹೊನ್ನ ರಾಸಿಯನ್ ಅವನಿಪಾಲಕನ ಭಂಡಾರದೊಳಗೆ ಇರಿಸಿ ತನ್ನಾಶ್ರಮಕೆ ಮರಳಿ=ಬಹು ಸುವರ್ಣಯಾಗದಲ್ಲಿ ದಾನವಾಗಿ ಪಡೆದ ಹೊಸ ಹೊನ್ನ ರಾಸಿಯನ್ನು ರಾಜನ ಬೊಕ್ಕಸದಲ್ಲಿಯೇ ಇರಿಸಿ, ವಿಶ್ವಾಮಿತ್ರನು ತನ್ನ ಆಶ್ರಮಕ್ಕೆ ಹಿಂತಿರುಗಿ ಬಂದು; **ಚಂಡಕರನ ಅರುಣ ಕಿರಣಮ್ ಹೊಗುವ ಠಾವೆಲ್ಲಮಮ್ ಅವನ ಸತ್ಯ ತೀವಿತು**=ಸೂರ್ಯನ ಕೆಂಪನೆಯ ಕಿರಣಗಳು ಪ್ರವೇಶಿಸುವ ಎಲ್ಲೆಡೆಯಲ್ಲಿಯೂ ಹರಿಶ್ಚಂದ್ರನ ಸತ್ಯದ ನಡೆನುಡಿಯು ಆವರಿಸಿ ಕೊಂಡಿದೆ. ಅಂದರೆ ಇಡೀ ರಾಜ್ಯದಲ್ಲಿ ರಾಜ ಹರಿಶ್ಚಂದ್ರನು ಸತ್ಯವಂತನೆಂಬ ಹೆಸರನ್ನು ಪಡೆದಿದ್ದಾನೆ; **ಭೂಪತಿಯಲಿ ಅನೃತವನು ಇಲ್ಲಿ ಕಂಡೆನಾದಡೆ**= ಆಡಳಿತವನ್ನು ನಡೆಸುತ್ತಿರುವ ರಾಜನಲ್ಲಿ ಸುಳ್ಳನ್ನು ನಾನು ಕಂಡೆನಾದರೆ;

ದೇವೇಂದ್ರನಿದಿರಲಿ ಪಂಡಿತರ ಮುಂದೆ ಮುನಿಯ ಭಂಡನನ್ ಮಾಳ್ಪೆ= ದೇವೇಂದ್ರನ ಎದುರಿನಲ್ಲಿ ಮತ್ತು ಪಂಡಿತರ ಮುಂದೆ ವಸಿಷ್ಠ ಮುನಿಯನ್ನು ಲಜ್ಜೆಗೇಡಿಯನ್ನಾಗಿ ಮಾಡುತ್ತೇನೆ; **ಕಾಣ್ಬ ತೆರನ್ ಆವುದು ಎಂದು ವಿಶ್ವಾಮಿತ್ರನು ಚಿಂತಿಸಿದ**= "ಹರಿಶ್ಚಂದ್ರನ ನಡೆನುಡಿಯಲ್ಲಿ ಸುಳ್ಳನ್ನು ಕಾಣುವ ಬಗೆ ಯಾವುದು" ಎಂದು ವಿಶ್ವಾಮಿತ್ರನು ಚಿಂತಿಸತೊಡಗಿದ; **ಮೃಗಸಂಕುಳಂಗಳನು ಹುಟ್ಟಿಸಿ**=ಪ್ರಾಣಿ ಪಕ್ಷಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಗುಂಪುಗುಂಪಾಗಿ ಹುಟ್ಟಿಸಿ; **ನಾಡ ಬೆಳೆಗಳಮ್ ಕೆಡಿಸಿ**=ನಾಡಿನಲ್ಲಿ ಜನರು ಒಡ್ಡಿರುವ ಬೆಳೆಗಳನ್ನು ಪ್ರಾಣಿ ಪಕ್ಷಿಗಳಿಂದ ಹಾಳು

ಮಾಡಿಸಿ; **ಕೇಡಿಂಗೆ ಬೆಂಡಾಗಿ ಜನವು ಅಳವಳಿದು ಬಾಯ್ವಿಟ್ಟು ದೂರಿದಡೆ**= ಬೆಳೆಗಳ ನಾಶದ ಕೇಡಿನಿಂದ ತತ್ತರಿಸುವ ಜನರು ಬಲಹೀನರಾಗಿ ಗೋಳಾಡುತ್ತ ರಾಜನ ಬಳಿಬಂದು ತಮ್ಮನ್ನು ಕಾಪಾಡುವಂತೆ ಮೊರೆಯಿಟ್ಟರೆ;

ಕೇಳ್ದು, ಸೈರಿಸಲಾರದೆ=ಜನರಿಗೆ ಬಂದ ಸಂಕಟವನ್ನು ಕೇಳಿ, ರಾಜನಾದ ಹರಿಶ್ಚಂದ್ರನು ಸುಮ್ಮನಿರಲಾಗದೆ; **ಆ ಹುಯ್ಯಲ ಬಳಿವಿಡಿದು ಬೇಂಟೆಗೆ ಎಯ್ತಂದ ಭೂಪಾಲಕನನ್**=ಸಂಕಟದಿಂದ ಪರಿತಪಿಸುತ್ತಿರುವ ಜನರ ಮೊರೆಯನ್ನು ಕೇಳಿ, ಜನತೆಯ ಗೋಳಿಗೆ ಕಾರಣವಾಗುವ ಪ್ರಾಣಿಪಕ್ಷಿಗಳನ್ನು ಬೇಟೆಯಾಡಿ ಕೊಲ್ಲಲೆಂದು ಕಾಡಿನತ್ತ ಬರುವ ರಾಜನನ್ನು; **ಎಳತಟಮ್ ಮಾಡಿ ತೆಗೆದು**= ಒಂದಲ್ಲ ಒಂದು ಬಗೆಯ ತೊಂದರೆಯನ್ನು ನೀಡಿ ಎಳೆದಾಡಿ; **ಎನ್ನ ಆಶ್ರಮಕ್ಕೆ ಒಯ್ದು**=ನನ್ನ ಆಶ್ರಮದೊಳಕ್ಕೆ ಬರುವಂತೆ ಮಾಡಿ; **ಬಳಿಕ ಅವನ ಸತ್ಯಗಿತ್ಯದ ಬಲುಹನ್ ನೋಡುವೆನ್ ಎಂದ ವಿಶ್ವಾಮಿತ್ರನು**=ಅನಂತರ ಅವನ ಸತ್ಯದ ನಡೆನುಡಿಯ ಬಲವನ್ನು ಒರೆಹಚ್ಚಿ ನೋಡುತ್ತೇನೆ ಎಂದು ತನ್ನಲ್ಲಿಯೇ ಹೇಳಿಕೊಂಡ ವಿಶ್ವಾಮಿತ್ರನು;

ಅನುವುಳ್ಳ ಬುದ್ಧಿಯಮ್ ಕಂಡೆನ್ ಎಂದು ಅತಿ ಮೆಚ್ಚಿ ತನಗೆ ತಾ ತೂಪಿರಿದುಕೊಂಡು=ಅಂದುಕೊಂಡಿರುವ ಕೆಲಸವನ್ನು ಮಾಡಲು ಒಳ್ಳೆಯ ದಾರಿಯನ್ನು ಕಂಡುಕೊಂಡೆನು ಎಂದು ಅತಿ ಮೆಚ್ಚುಗೆಯಿಂದ ತನ್ನ ಬೆನ್ನನ್ನು ತಾನೇ ತಟ್ಟಿಕೊಂಡು ಅಂದರೆ ಹೆಮ್ಮೆಪಟ್ಟುಕೊಂಡು; **ಕಣ್ಮುಚ್ಚುತಮ್ ಮನದೊಳ್ ಉತ್ಪತ್ತಿಮಂತ್ರವ ಮಂತ್ರಿಸಿದ ಜಲವನ್ ಒಸೆದು ದೆಸೆದೆಸೆಗೆ ತಳಿದು ವಿನಯದಿಮ್ ನೋಡನೋಡಲು**=ಕಣ್ಣುಗಳನ್ನು ಮುಚ್ಚಿಕೊಂಡು ಮನದಲ್ಲಿ ಪ್ರಾಣಿಪಕ್ಷಿಗಳನ್ನು ಹುಟ್ಟಿಸುವ ಮಂತ್ರವನ್ನು ಜಪಿಸುತ್ತ, ನೀರಿಗೆ ಮಂತ್ರದ ಬಲವನ್ನು ತುಂಬಿ ದಿಕ್ಕು ದಿಕ್ಕಿಗೆ ಮಂತ್ರಿಸಿದ ನೀರನ್ನು ಚಿಮುಕಿಸಿ ಪ್ರಾಣಿಪಕ್ಷಿಗಳು ರೂಪುಗೊಳ್ಳುತ್ತಿರುವುದನ್ನು ಗಮನವಿಟ್ಟು ನೋಡುತ್ತಿರಲು;

ತೆಕ್ಕನೆ ದಿಕ್ಕು ಧರಣಿ ತೀವಿ ನಿಂದ ನಾನಾ ಪಕ್ಷಿಮೃಗ ಕುಲಕೆ=ಮಂತ್ರಬಲದಿಂದ ಮರುಗಳಿಗೆಯಲ್ಲಿಯೇ ಭೂಮಂಡಲದ ಎಲ್ಲ ದಿಕ್ಕುಗಳಲ್ಲಿಯೂ ಕಿಕ್ಕಿರಿದು ನೆರೆದಿರುವ ನಾನಾ ಬಗೆಯ ಪ್ರಾಣಿಪಕ್ಷಿಗಳ ಗುಂಪಿಗೆ; **ಕೊನೆವೆರಳನ್ ಅಲುಗಿ ತಲೆದೂಗಿ**=ತನ್ನ ಕಿರುಬೆರಳನ್ನು ವಿಜಯದ ಸಂಕೇತವಾಗಿ ಅತ್ತಿತ್ತ ಆಡಿಸುತ್ತ, ತನ್ನ ಜಾಣತನದ ತಂತ್ರಕ್ಕೆ ತಾನೇ ಮೆಚ್ಚುಗೆಯಿಂದ ತಲೆತೂಗುತ್ತ; **ದೇಶಮಮ್ ಗೋಳಿಡಿಸಲು ಕೈವೀಸಿದನ್**="ಹರಿಶ್ಚಂದ್ರನ ರಾಜ್ಯದಲ್ಲಿರುವ ಜನರನ್ನು ಬಹುಬಗೆಯ ಸಂಕಟಕ್ಕೆ ಗುರಿಮಾಡಿ ಗೋಳಿಡುವಂತೆ ಮಾಡಿರಿ" ಎಂದು ಪ್ರಾಣಿಪಕ್ಷಿಗಳ ಗುಂಪಿಗೆ ಆದೇಶವನ್ನು ನೀಡುವಂತೆ ಕಯ್ಗಳನ್ನು ಬೀಸಿದನು;

ಮೊಳೆವ ಬೀಜವನು ಕ್ರಿಮಿಕೀಟಕಂಗಳು=ಹೊಲಗದ್ದೆಗಳಲ್ಲಿ ಮೊಳೆಯುತ್ತಿರುವ ಬೀಜವನ್ನು ಹುಳುಗಳು; **ಸಸಿಯನ್ ಎಳಹುಲ್ಲೆಗಳು**=ಕುಡಿಯೊಡೆದು ಬೆಳೆಯುತ್ತಿರುವ ಸಸಿಗಳನ್ನು ಮರಿಜಿಂಕೆಗಳು; **ಹೊಡೆಯನ್ ಎರಳೆಗಳು**= ತೆನೆಕಚ್ಚಿರುವ ದೊಡ್ಡ ಪಯಿರುಗಳನ್ನು ಜಿಂಕೆಗಳು; **ಸವಿದಂಟುಗಳನ್ ಆವುಗಳು**= ರುಚಿಕರವಾದ ಸೊಪ್ಪಿನಿಂದ ಕೂಡಿದ ಕಾಂಡಗಳನ್ನು ಹಸುಗಳು; **ತೆನೆಗಳಮ್ ಗಿಳಿ ನವಿಲು ಕೊಂಚೆ ಮೊದಲಾದ ಖಗ ತತಿಗಳು**=ಕಾಳುಗಳಿಂದ ತುಂಬಿರುವ ತೆನೆಗಳನ್ನು ಗಿಳಿ ನವಿಲು ಕೊಂಚೆ ಮೊದಲಾದ ಹಕ್ಕಿಗಳ ಗುಂಪುಗಳು;

ಉಳಿದ ಬೆಳೆಯಮ್ ನಕುಲ ಹೆಗ್ಗಣಂಗಳು=ಇಷ್ಟೆಲ್ಲ ಪ್ರಾಣಿಪಕ್ಷಿಗಳು ತಿಂದು, ಉಳಿದ ಬೆಳೆಯನ್ನು ಮುಂಗುಸಿ ಮತ್ತು ಹೆಗ್ಗಣಗಳು; **ಕಾವ ಬಳವಂತರೆಲ್ಲರಮ್ ಸರ್ಪಸಂತತಿ ತಿಂದು ತಳಪಟಮ್ ಮಾಡಿ**=ಹೊಲಗದ್ದೆತೋಟಗಳಲ್ಲಿ ಒಡ್ಡಿದ ಬೆಳೆಯನ್ನು ಕಾಪಾಡಿಕೊಳ್ಳಲೆಂದು ಹಗಲಿರುಳು ಕಾಯುತ್ತಿದ್ದ ಬೇಸಾಯಗಾರರನ್ನು ಹಾವುಗಳು ಕಚ್ಚಿ ಕೊಂದು, ಬೆಳೆದಿದ್ದ ಬೆಳೆಯೆಲ್ಲವನ್ನು ಸಂಪೂರ್ಣವಾಗಿ ಹಾಳುಮಾಡಿ; **ನಾಡೆಲ್ಲಮನ್ ಗೋಳಿಡಿಸುತಿರ್ದುವು ಏನ್ ಬಣ್ಣಿಸುವೆನು**=ನಾಡೆಲ್ಲವನ್ನೂ ದುರಂತಕ್ಕೆ ದೂಡಿ, ಪ್ರಜೆಗಳೆಲ್ಲರನ್ನು ಗೋಳಾಡುವಂತೆ ಮಾಡುತ್ತಿದ್ದವು. ವಿಶ್ವಾಮಿತ್ರನು ಕೆಟ್ಟ ಉದ್ದೇಶದಿಂದ ಮಾಡುತ್ತಿರುವ ಈ ದುರಂತವನ್ನು ಏನೆಂದು ಬಣ್ಣಿಸಲಿ;

ಬೆಳೆಯ ದೆಸೆಯಿಂತಾಯ್ತು=ಬೇಸಾಯಗಾರರು ಒಡ್ಡಿದ ಬೆಳೆಯೆಲ್ಲವೂ ಈ ರೀತಿ ನೆಲಕಚ್ಚಿದವು; **ಉಳಿದ ತೋಟದ ಗೆಡ್ಡೆ ಗೆಳಸು ಹಂದಿಗೆ ಹವಣು**= ತೋಟದಲ್ಲಿ ಬೆಳೆದಿದ್ದ ಭೂಮಿಯೊಳಗಿನ ಗೆಡ್ಡೆಗೆಣಸುಗಳೆಲ್ಲವೂ ಹಂದಿಗಳ ಪಾಲಾದವು; **ಹಣ್ಣು ಕಾಯ್ ಕಬ್ಬುಗಳನ್ ಅಳಿಲು ನಿಲಲೀಯವು**=ಹಣ್ಣು ಕಾಯಿ ಕಬ್ಬಿನ ಪಯಿರುಗಳನ್ನು ಬೆಳೆಯಲು ಬಿಡದೆ ಅಳಿಲುಗಳು ತಿಂದುಹಾಕಿದವು; **ಉದಕದೊಳ್ ಆವೆ ಮೀನ್ ಮೊಸಳೆಗಳ ಭಯಮ್ ಘನವಾದುದು**=ನೀರಿನ ತಾಣಗಳಾದ ನದಿಗಳಲ್ಲಿ ಆಮೆ ಮೀನು ಮೊಸಳೆಗಳ ಕಾಟ ಹೆಚ್ಚಾಯಿತು;

ಎಳಗರುಗಳಮ್ ತೋಳನ್=ಕೊಟ್ಟಿಗೆಗಳಲ್ಲಿದ್ದ ಎಳೆಯ ಕರುಗಳನ್ನು ತೋಳಗಳು; **ಆಕಳಮ್ ಹುಲಿ**=ಹಸುಗಳನ್ನು ಹುಲಿಗಳು; **ಮೀರಿ ಸುಳಿವವರಮ್**= ಪ್ರಾಣಿಪಕ್ಷಿಗಳ ಕಣ್ಣಿಗೆ ಬೀಳದಂತೆ ತಪ್ಪಿಸಿಕೊಂಡು ತಿರುಗುವವರನ್ನು; **ಅಮ್ಮಾವು ಕರಡಿ ಕಾಳ್ಕೋಣಂಗಳ್ ಉಳಿಯಲೀಯದಿರೆ**=ಕಾಡು ದನ, ಕರಡಿ, ಕಾಡಿನ ಕೋಣಗಳು ಜೀವಂತವಾಗಿ ಉಳಿಯಲು ಬಿಡದೆ ಹಿಂಸಿಸುತ್ತಿರಲು; **ನಾಡೆಯ್ದೆ ಬಾಯ್ಬಿಟ್ಟು ದೂರಲು ಅವನಿಪತಿಗೆ ಹರಿದರು**=ನಾಡಿನ ಪ್ರಜೆಗಳೆಲ್ಲರೂ ಗೋಳಾಡುತ್ತ, ಕಾಡು ಪ್ರಾಣಿಪಕ್ಷಿಗಳ ಕಾಟದಿಂದ ತಮ್ಮನ್ನು ಕಾಪಾಡುವಂತೆ ಮೊರೆಯಿಡಲು ಹರಿಶ್ಚಂದ್ರನ ಬಳಿಗೆ ಬಂದರು;

❖

ಪ್ರಸಂಗ–೪

ಪ್ರಜೆಗಳ ಮೊರೆ

ಆಗ ಭೂಸುರರು ಮಂತ್ರಾಕ್ಷತೆಯನಿತ್ತು=ಅಯೋಧ್ಯೆಯ ರಾಜನಾದ ಹರಿಶ್ಚಂದ್ರನ ಬಳಿಗೆ ತಮ್ಮನ್ನು ಪ್ರಾಣಿಪಕ್ಷಿಗಳ ಕಾಟದಿಂದ ಪಾರುಮಾಡುವಂತೆ ಮೊರೆಯಿಡಲು ಬಂದ ಪ್ರಜೆಗಳ ಗುಂಪಿನ ಮುಂದೆ ಇದ್ದ ಬ್ರಾಹ್ಮಣರು, ಆಗ ರಾಜನಿಗೆ ಅರಿಸಿನ ಸವರಿದ ಅಕ್ಕಿಯ ಕಾಳುಗಳನ್ನು ನೀಡಿ ಆಶೀರ್ವದಿಸಿದರು; **ಶಿವಭಕ್ತರು ಆಸುರದಿ ಭಸಿತಮಮ್ ಕೊಟ್ಟು**=ಪ್ರಜೆಗಳ ಗುಂಪಿನಲ್ಲಿದ್ದ ಶಿವಶರಣರು ರಾಜ ಹರಿಶ್ಚಂದ್ರನಿಗೆ ವಿಭೂತಿಯನ್ನು ಅತಿಶಯವಾದ ಪ್ರೀತಿಯಿಂದ ಕೊಟ್ಟು; **ಉಳಿದ ಜನವೆಲ್ಲ ಲೇಸೆನಿಪ ವಸ್ತುವಮ್ ಕಾಣಿಕೆಯನಿತ್ತು**=ಗುಂಪಿನಲ್ಲಿದ್ದ ಉಳಿದ ಜನರೆಲ್ಲರೂ ರಾಜನಿಗೆ ಒಳ್ಳೆಯ ವಸ್ತುಗಳನ್ನು ಕಾಣಿಕೆ ನೀಡಿ;

ಭೂಪ ಚಿತ್ತೈಸು ಎಂದು=ರಾಜನೇ, ನಮ್ಮ ಅಳಲನ್ನು ಮನವಿಟ್ಟು ಕೇಳು ಎಂದು ಮೊರೆಯಿಡುತ್ತ; **ದೇಶದೊಳಗಾದ ಖಗಮೃಗದ ಬಾಧೆಯನು**=ನಾಡಿನಲ್ಲಿ ಪಕ್ಷಿಗಳಿಂದ ಮತ್ತು ಪ್ರಾಣಿಗಳಿಂದ ಉಂಟಾದ ಸಂಕಟವನ್ನು ಮತ್ತು ಹಾನಿಯನ್ನು; **ಧರಣೀಶನ್ ಎನಿಸುವ ಹರಿಶ್ಚಂದ್ರರಾಯಂಗೆ**=ಭೂಮಂಡಲದಲ್ಲಿ ಹೆಸರಾಂತ ರಾಜನಾಗಿರುವ ಹರಿಶ್ಚಂದ್ರರಾಯನಿಗೆ; **ತಮ್ಮ ಆಸರಳಿವಂತೆ ಬಿನ್ನೈಸುತ್ತ ಕೈಮುಗಿಯುತಿರ್ದರು**=ಪ್ರಜೆಗಳೆಲ್ಲರೂ ತಮ್ಮ ಒಡಲ ಸಂಕಟವನ್ನು ಪರಿಹರಿಸುವಂತೆ ಮೊರೆಯಿಡುತ್ತ ರಾಜನಿಗೆ ಕಯ್ ಮುಗಿಯುತ್ತಿದ್ದರು; **ಏನ್**

ಬಣ್ಣಿಸುವೆನು=ರಾಜನ ಮುಂದೆ ಪ್ರಜೆಗಳು ತಮ್ಮ ಒಡಲ ಸಂಕಟವನ್ನು ತೋಡಿಕೊಳ್ಳುತ್ತಿರುವ ನೋಟವನ್ನು ಏನೆಂದು ವಿವರಿಸಲಿ. ಇದು ಕವಿಯ ಉದ್ಗಾರದ ಮಾತು;

ಬಲ್ಲಹ ಚಿತ್ತೈಸು=ಬಲಶಾಲಿಯಾದ ರಾಜನೇ, ಈ ನಮ್ಮ ಮೊರೆಯನ್ನು ಮನವಿಟ್ಟು ಕೇಳು; **ಅರಸು ಬಾಧೆಗಳಿಲ್ಲ**=ಅಯೋಧ್ಯೆಯ ನೆರೆಹೊರೆಯಲ್ಲಿರುವ ರಾಜರಿಂದ ನಮಗೆ ಯಾವುದೇ ಬಗೆಯ ತೊಂದರೆಗಳಿಲ್ಲ; **ಬಿಟ್ಟಿಯೂಳಿಗವಿಲ್ಲ**= ಯಾವುದೇ ರಾಜನ ಇಲ್ಲವೇ ಸಿರಿವಂತರ ದಬ್ಬಾಳಿಕೆ ಮತ್ತು ಬಲಾತ್ಕಾರಕ್ಕೆ ಮಣಿದು ಅವರ ಹೇಳಿದ ಕೆಲಸವನ್ನು ಬಿಟ್ಟಿಯಾಗಿ ಮಾಡಿಕೊಡುವಂತಹ ಇಕ್ಕಟ್ಟಿನ ಸಂಕಟವಿಲ್ಲ; ಬಿಟ್ಟಿ+ಊಳಿಗ; ಊಳಿಗ=ಸೇವೆ/ಕೆಲಸ; **ಬಿಟ್ಟಿಯೂಳಿಗ**=ಪ್ರಾಚೀನ ಕಾಲದಲ್ಲಿ ಇದ್ದಂತಹ ಒಂದು ಆಚರಣೆ; ರಾಜರ/ಸಿರಿವಂತರ/ಬಲಶಾಲಿಗಳ ಬಲಾತ್ಕಾರಕ್ಕೆ ತಲೆಬಾಗಿ, ಅವರು ಹೇಳಿದ ಕೆಲಸವನ್ನು ಬಿಟ್ಟಿಯಾಗಿ ಮಾಡಿಕೊಟ್ಟು, ಅವರಿಂದ ದವಸವನ್ನಾಗಲಿ ಇಲ್ಲವೇ ಹಣವನ್ನಾಗಲಿ ಪಡೆಯದಿರುವುದು;

ಪರನೃಪರ ಭಯವಿಲ್ಲ=ಶತ್ರುರಾಜರ ಹೆದರಿಕೆಯಿಲ್ಲ; **ಸಾಲದ ಅಂಡಲೆಯಿಲ್ಲ**= ಸಾಲದ ಬಾಧೆಯಿಲ್ಲ. ಅಂದರೆ ಸಾಲಗಾರರ ಕಾಟವಿಲ್ಲ; **ನೆರೆಯೂರ ಕದನವಿಲ್ಲ**= ಪಕ್ಕದ ಊರಿನವರೊಡನೆ ನೀರು/ನೆಲ/ಗಡಿಯ ಕಾರಣಕ್ಕಾಗಿ ಯಾವುದೇ ಹೊಡೆದಾಟವಿಲ್ಲ; **ಅದ್ಭುತವ ಏನ್ ಎಂಬೆವು**=ಅಚ್ಚರಿಯನ್ನುಂಟುಮಾಡುವಂತೆ ಈಗ ನಡೆಯುತ್ತಿರುವ ಪಿಡುಗನ್ನು ಏನೆಂದು ತಾನೆ ಹೇಳಬಲ್ಲೆವು; **ಖಗಮೃಗದ ಕಾಟದಿಂದ**=ಪಕ್ಷಿ ಪ್ರಾಣಿಗಳ ಕಾಟದಿಂದ; **ಧರೆಯೊಳಗೆ ಬಿತ್ತಿಲ್ಲ ಬೆಳೆಯಿಲ್ಲ ನೀರಿಲ್ಲ**=ಭೂಮಿಯಲ್ಲಿ ಬಿತ್ತಿದ ಬೀಜ ಮೊಳಕೆಯೊಡೆಯಲಿಲ್ಲ, ಬೆಳೆಯಿಲ್ಲ, ನೀರಿಲ್ಲ;

ತರಹರಿಸಿ ಹದುಳವಿರಲಿಲ್ಲ=ಕಾಡಿನ ಪ್ರಾಣಿಪಕ್ಷಿಗಳ ಕಾಟದಿಂದಾಗಿ ತತ್ತರಿಸಿ ನಡುಗುತ್ತಿರುವ ನಾವು ನೆಮ್ಮದಿಯನ್ನು ಕಳೆದುಕೊಂಡು ಒದ್ದಾಡುತ್ತಿದ್ದೇವೆ; **ದುಃಖಮಮ್ ಪರಿಹರಿಸಬೇಕು ಎಂದು ಭೂಜನಮ್ ಮೊರೆಯಿಟ್ಟುದು**=ನಮಗೆ ಬಂದು ಒದಗಿರುವ ಈ ಸಂಕಟವನ್ನು ನಿವಾರಿಸಬೇಕು ಎಂದು ರಾಜನಲ್ಲಿ ಪ್ರಜೆಗಳು ಮೊರೆಯಿಟ್ಟರು. **ಜಯಲೋಲ ಭೂಪಾಲಕನ್ ಲೀಲೆಯಿಂದ ಓಲಗಮ್ ಕೊಟ್ಟು**=ಸದಾಕಾಲ ಜಯಶೀಲನಾಗಿರುವ ರಾಜನು ಅಪಾರವಾದ ಕಾಳಜಿಯಿಂದ ತನ್ನ ಒಡ್ಡೋಲಗಕ್ಕೆ ಮಂತ್ರಿ ಸೇನಾಧಿಪತಿ ಮತ್ತು ಇತರರ ರಾಜಪ್ರಮುಖರನ್ನು ಕರೆಸಿಕೊಂಡು; **ಸಮಸ್ತ ಬೇಂಟೆಯ ಶಬರ ಜಾಲಮಮ್ ಕರೆ ಕರೆ**= ಬೇಟೆಯಾಡುವ ಎಲ್ಲಾ ಬೇಡರ ಸಮುದಾಯವನ್ನು ಈ ಕೂಡಲೇ ಬೇಟೆಗೆ ಸಿದ್ಧರಾಗಿ ಬರುವಂತೆ ಆದೇಶ ನೀಡಿರಿ;

ಖಗಹೃದಯದ ಶೂಲಮಮ್=ಹಕ್ಕಿಗಳ ಎದೆಗೆ ಶೂಲವಾಗಿರುವ ಬೇಡರನ್ನು; **ಮೃಗದ ಕಡೆಗಾಲಮಮ್ ಬೇಗ ಎಂದು ಮೇಲೆಮೇಲಾಕ್ರಮಿಸಿ ಕರಸೆ**=ಪ್ರಜೆಗಳ ಸಂಕಟಕ್ಕೆ ಕಾರಣವಾಗಿರುವ ಪ್ರಾಣಿಗಳನ್ನು ಕೊಂದು ಕೊನೆಗಾಣಿಸುವ ಯಮರೂಪಿಗಳಾದ ಬೇಡರನ್ನು ಬೇಗ ಬರುವಂತೆ ಮತ್ತೆ ಮತ್ತೆ ರಾಜಾಜ್ಞೆಯನ್ನು ನೀಡಿ ಬೇಡರನ್ನು ಓಲಗಕ್ಕೆ ಕರೆಸಿಕೊಳ್ಳಲು; **ಅಮಮ**=ಅಬ್ಬಬ್ಬಾ!; **ನಿಟ್ಟಿಸುವ ಕಣ್ಣಾಲಿ ಕತ್ತಲಿಸೆ**=ರಾಜನ ಓಲಗಕ್ಕೆ ಬರುತ್ತಿರುವ ಬೇಡರನ್ನು ನೋಡುತ್ತಿರುವ ಪ್ರಜೆಗಳ ಕಣ್ಣುಗುಡ್ಡೆಗಳಿಗೆ ಕತ್ತಲು ಕವಿಯುತ್ತಿರಲು; **ಕತ್ತಲೆಯ ತತ್ತಿಗಳಂತೆ**=ಕತ್ತಲೆಯ ಮೊಟ್ಟೆಗಳಂತೆ; **ಹೋಲಿಕೆಗೆ ಹೊರಗಾಗೆ**=ಜಗತ್ತಿನಲ್ಲಿ ಕಪ್ಪಗಿರುವ ಯಾವೊಂದು ವಸ್ತುವಿಗೂ ಕಪ್ಪನೆಯ ಮಯ್ ಬಣ್ಣವುಳ್ಳ ಈ ಬೇಡರನ್ನು ಹೋಲಿಸಲಾಗದು. ಅಂದರೆ ಕಡುಕಪ್ಪು ಬಣ್ಣವುಳ್ಳ ಬೇಡರು;

ಕರ್ಕಶ ಬೇಡ ಪಡೆ ಒಡೆಯರು ಬರುತಿರ್ದರು=ಕಟ್ಟುಮಸ್ತಾದ ದೇಹದ ಬೇಡ ಪಡೆಯ ನೇತಾರರು ರಾಜ ಹರಿಶ್ಚಂದ್ರನ ಒಡ್ಡೋಲಗದಲ್ಲಿ ನೆರೆಯ ತೊಡಗಿದರು; ಕಾಡಿನಲ್ಲಿ ಬೇಟೆಯಾಡುವಾಗ ಪ್ರಾಣಿ ಪಕ್ಷಿಗಳ ಕೊಕ್ಕು/ಪಂಜ/ದಂತದ ಪೆಟ್ಟಿಗೆ ಸಿಲುಕಿ ಗಾಯಗೊಂಡಿದ್ದ ಬೇಡರ ಮಯ್ ಮೇಲಿನ ಗಾಯಗಳನ್ನು ಮತ್ತು ಮಚ್ಚೆಗಳನ್ನು ಈ ಮುಂದಿನ ವರ್ಣನೆಯಲ್ಲಿ ನೀಡಲಾಗಿದೆ. **ಮದಹಸ್ತಿ ಇರಿದ ಘಾಯಂಗಳ**=ಮದಿಸಿದ ಆನೆಯ ದಂತಗಳಿಂದ ಇರಿದ ಗಾಯಗಳ; **ವರಾಹನ್ ಎತ್ತಿದ ಡೋರುಗಳ**=ಹಂದಿಯು ಕೋರೆಹಲ್ಲುಗಳಿಂದ ಸಿಗಿದಾಗ ಆದ ಸೀಳುಗಳ;

ಮೃಗಾಧಿಪನ್ ಉಗಿದು ಬಗಿದು ತೋಡಿದ ಬಾದಣದ=ಸಿಂಹವು ಪಂಜಗಳಿಂದ ಸೀಳಿ ಕತ್ತರಿಸಿ ಮಾಂಸದ ತುಂಡುಗಳನ್ನು ಹೊರತೆಗೆದಾಗ ಬಿದ್ದ ತೂತುಗಳ; **ಕರಡಿ ಕಾರಿ ಬತ್ತಿದ ತೋಳ**=ಕರಡಿಯ ಉಗುರುಗಳ ಗೋರುವಿಕೆಯಿಂದ ಮಾಂಸ ಖಂಡವಿಲ್ಲದ ತೋಳಿನ; **ಹುಲಿ ಹೊಯ್ದು ಜರಿದ ಹೆಗಲ**=ಹುಲಿಯ ಪಂಜಗಳ ಹೊಡೆತಕ್ಕೆ ಸಿಲುಕಿ ಇಳಿಬಿದ್ದಿರುವ ಹೆಗಲಿನ; **ಕೋಣಮ್ ಪದದಿ ಹೊಯಿದ ಹೋರ**=ಕೋಣನ ಕಾಲ್ತುಳಿತದಿಂದಾದ ತೂತಿನ; **ಭೇರುಂಡನ್ ಎರಗಿದ ಗಂಟುಗಳ**=ಎರಡು ಕತ್ತುಗಳನ್ನುಳ್ಳ ಭೇರುಂಡ ಹಕ್ಕಿಯು ಮೇಲೆರಗಿ ಕುಕ್ಕಿದಾಗ ಉಂಟಾದ ಗಂಟುಗಳ;

ಕಡವೆ ತುಳಿದ ಹಜ್ಜೆಗಳ ಚಿಹ್ನದ ಬೇಡನಾಯಕರು=ಜಿಂಕೆಗಳ ಕಾಲ್ತುಳಿತದ ಹಜ್ಜೆ ಗುರುತಿನಿಂದಾಗಿರುವ ಮಚ್ಚೆಗಳನ್ನುಳ್ಳ ಬೇಡನಾಯಕರು; **ಹರಿಶ್ಚಂದ್ರ ಭೂನಾಥನ ಓಲಗದೊಳು ನೆರೆದರು**=ರಾಜ ಹರಿಶ್ಚಂದ್ರನ ಓಲಗದಲ್ಲಿ ಸೇರಿದರು; **ಕಡವೆಗೆ ಅತ್ಯಾಸ್ವಾದಿಯೆಂಬ**=ಜಿಂಕೆಯನ್ನು ಬೇಟೆಯಾಡುವುದರಲ್ಲಿ ಪರಿಣತಿಯನ್ನು ಹೊಂದಿದ್ದ ‘ಅತ್ಯಾಸ್ವಾದಿ’ ಎನ್ನುವ ಬೇಟೆನಾಯಿ; **ಉಡು ಮೊಲಗಳಿಗೆ**

ದಡಿವೊಯ್ಲನೆಂಬ=ಉಡು ಮತ್ತು ಮೊಲಗಳನ್ನು ಬೇಟೆಯಾಡುವದರಲ್ಲಿ ಪರಿಣತಿಯನ್ನು ಪಡೆದಿದ್ದ **'ದಡಿವೊಯ್ಲು'** ಎನ್ನುವ ಬೇಟೆನಾಯಿ; **ಕರಡಿಯ ಗಂಡನೆಂಬ ಬೇಟೆ ನಾಯಿ; ಬಿಟ್ಟಡೆ ತೋಳಜಜ್ಝಾರನೆಂಬ**=ಬಿಟ್ಟರೆ ಸಾಕು ಮುನ್ನುಗ್ಗಿ ತೋಳನನ್ನು ಬೇಟೆಯಾಡುವದರಲ್ಲಿ ಪರಿಣತಿಯನ್ನು ಪಡೆದಿದ್ದ **'ತೋಳಜಜ್ಝಾರ'** ಎನ್ನುವ ಬೇಟೆನಾಯಿ;

ನರಿದಿನಿಹಿಯಿಂದೆಂಬ=ನರಿಯನ್ನು ಬೇಟೆಯಾಡುವುದರಲ್ಲಿ ಪರಿಣತಿಯನ್ನು ಪಡೆದಿದ್ದ 'ನರಿದಿನಿಹಿ' ಎಂಬ ಹೆಸರನ್ನುಳ್ಳ ಬೇಟೆನಾಯಿ; **ಕುನ್ನಿಗಳನ್ ಆಯ್ದು**= ಬೇಟೆನಾಯಿಗಳನ್ನು ಆಯ್ದುಕೊಂಡು; **ಬೇಡ ಪಡೆ ಒಡೆಯರೆಲ್ಲರು ಗಡಣದಿಮ್ ನೆರೆದು**=ಬೇಡ ಪಡೆಯ ನೇತಾರರೆಲ್ಲರೂ ಗುಂಪುಗೂಡಿ;

ಪೊಡವಿಪತಿಯಾ ಹರಿಶ್ಚಂದ್ರರಾಯನ ಮುಂದೆ=ಭೂಮಂಡಲದ ಒಡೆಯನಾದ ಹರಿಶ್ಚಂದ್ರರಾಯನ ಮುಂದೆ ನಿಂತುಕೊಂಡು: **'ಕಣ್ಣಿಗೆ ಹಬ್ಬವ ಮಾಡುವ ಎಡೆ'** ಎಂದರೆ ಬೇಟೆಯಾಡುವುದಕ್ಕೆ ಅತಿಹೆಚ್ಚಿನ ಪ್ರಾಣಿಪಕ್ಷಿಗಳು ಸಿಗುವ ಕಾಡಿನ ಪ್ರದೇಶ.

ನಡೆ ಜೀಯ, ತಡವೇಕೆ ಕಣ್ಗೆ ಹಬ್ಬವ ಮಾಡುವ ಎಡೆಯ ತೋರುವೆವು ಎಂದರು=ಬೇಡ ಪಡೆಯ ನೇತಾರರು ರಾಜ ಹರಿಶ್ಚಂದ್ರನಿಗೆ 'ನಡೆಯಿರಿ ಸ್ವಾಮಿ, ತಡವೇಕೆ ನಿಮ್ಮ ಕಣ್ಣಿಗೆ ಹಬ್ಬವನ್ನುಂಟುಮಾಡುವ ಜಾಗವನ್ನು ತೋರಿಸುತ್ತೇವೆ' ಎಂದರು.

❖

ಪ್ರಸಂಗ–೫

ಕಾಡಿನಲ್ಲಿ ಬೇಡರ ಪಡೆಯೊಡನೆ ಹರಿಶ್ಚಂದ್ರ

ಸೇನೆ ನೆರೆಯಿತ್ತು=ರಾಜ ಹರಿಶ್ಚಂದ್ರನ ಅಯೋಧ್ಯೆಯ ಅರಮನೆಯ ಮುಂದೆ ಕಾಡಿನ ಬೇಡರ ಪಡೆ ಒಗ್ಗೂಡಿದೆ.

ವಂದಿಮಾಗಧರು ರಾಜ ಹರಿಶ್ಚಂದ್ರನ ಬಿರುದುಗಳನ್ನು ಎತ್ತರದ ದನಿಯಲ್ಲಿ ಉಚ್ಚರಿಸುತ್ತ ರಾಜನ ಗುಣಗಾನ ಮಾಡುತ್ತಿದ್ದಾರೆ. ಬಿರುದುಗಳು ರೂಪಕದ ತಿರುಳಿನಲ್ಲಿ 'ರಾಜನ ಹರಿಶ್ಚಂದ್ರನ ತೋಳ್ಬಲವನ್ನು ಮತ್ತು ಪರಾಕ್ರಮವನ್ನು' ಸಂಕೇತಿಸುತ್ತವೆ; **ರಿಪುಕುಮುದ ಮಾರ್ತಾಂಡ**=ಮುಂಜಾನೆ ಮೂಡುವ ಸೂರ್ಯನ ಕಿರಣಗಳ ಬಿಸಿಯು ತಟ್ಟುತ್ತಿದ್ದಂತೆಯೇ ರಾತ್ರಿಯ ಕಾಲದಲ್ಲಿ ಅರಳಿದ್ದ ನೀಲಿ ತಾವರೆಯು ಮುದುಡಿಕೊಳ್ಳುತ್ತದೆ. ಅಂತೆಯೇ ಶತ್ರುಗಳನ್ನು ಮುದುಡಿ ಕೊಳ್ಳುವಂತೆ ಮಾಡುವ ಸೂರ್ಯನೇ ಹರಿಶ್ಚಂದ್ರ;

ಪುಣ್ಯಾನೂನ ತುಂಡ=ಮಂಗಳಕರವಾದ ತೇಜಸ್ಸಿನಿಂದ ಕಂಗೊಳಿಸುತ್ತಿರುವ ಮೊಗವನ್ನುಳ್ಳವನು; **ಬಲಭರಿತ ದೋರ್ದಂಡ**=ಕಸುವಿನಿಂದ ಕೂಡಿದ ತೋಳುಗಳನ್ನು ಉಳ್ಳವನು; **ಭೂಮಾನಿನಿಯ ಗಂಡ**=ಭೂಮಿಯೆಂಬ ಹೆಣ್ಣಿಗೆ ಗಂಡನಾದವನು; **ವಿಜಯಾಂಗನೆಯ ಮಿಂಡ**=ವಿಜಯವೆಂಬ ಹೆಣ್ಣನ್ನು ವಶಪಡಿಸಿಕೊಂಡಿರುವ ಪರಾಕ್ರಮಿ; **ರಣರಂಗಮುಖ ಕಾಲದಂಡ**=ರಣರಂಗದ ಮುಂಚೂಣಿಯಲ್ಲಿ ಹಗೆಗಳ ಪಾಲಿಗೆ ಸಾವಿನ ದೇವತೆಯಾದ ಯಮನ

ಕಯ್ಯಲ್ಲಿರುವ ಆಯುಧ; **ದಾನಿ ಚಿತ್ತೈಸು ಎಂಬ ಮಾತಿನೊಳಗೆ ಭಾನುಕುಲ ತಿಲಕನ್ ಹರಿಶ್ಚಂದ್ರರಾಯನ್ ಎದ್ದು**=ದಾನಶೀಲನಾದ ರಾಜನೇ ಮನವಿಟ್ಟು ಆಲಿಸು ಎಂಬ ಹೊಗಳುಭಟ್ಟರ ಮಾತುಗಳನ್ನು ಕೇಳಿ, ಸೂರ್ಯವಂಶದ ಹೆಸರಾಂತ ರಾಜನಾದ ಹರಿಶ್ಚಂದ್ರನು ಎಚ್ಚರಗೊಂಡು;

ಸತಿ ಪುತ್ರ ಮಂತ್ರಿಸಹಿತ ಸುಮ್ಮಾನದಿಮ್ ಮಣಿಮಯ ರಥವನು ಅಡಿಯಿಟ್ಟು ಏರಿದನು=ಹೆಂಡತಿ ಮಗ ಮಂತ್ರಿಯ ಜತೆಗೂಡಿ ಹಿಗ್ಗಿನಿಂದ ಮುತ್ತುರತ್ನದ ಮಣಿಗಳಿಂದ ಕಂಗೊಳಿಸುತ್ತಿದ್ದ ತೇರನ್ನೇರಿ, ಕಾಡಿನತ್ತ ಬೇಟೆಯಾಡಲು ತೆರಳಿದನು; ಹರಿಶ್ಚಂದ್ರನ ಜತೆಗೂಡಿ ಬೇಡ ಪಡೆಯು ಕಾಡಿನತ್ತ ಹೊರಟಾಗ ಏನಾಯಿತೆಂಬುದನ್ನು ಅತಿಶಯವಾದ ನುಡಿಗಳಿಂದ ಬಣ್ಣಿಸಲಾಗಿದೆ. ಈ ನುಡಿಗಳೆಲ್ಲವೂ ಹರಿಶ್ಚಂದ್ರನ ಬೇಡ ಪಡೆಯು ಕಸುವನ್ನು ಸಂಕೇತಿಸುತ್ತವೆ; **ಪೊಡವಿ ಜಡಿಯಲು**=ಭೂಮಿ ನಡುಗಲು; **ದೆಸೆಗಳ್ ಉಬ್ಬಸಮ್ ಪಡೆ**=ಹತ್ತು ದಿಕ್ಕುಗಳು ಉಸಿರಾಡಲಾರದೆ ಮೇಲುಸಿರು ಬಿಡುತ್ತಿರಲು; **ಫಣಿಯ ಹೆಡೆ ಕೊರಳೊಳ್ ಆಳೆ**=ಭೂಮಂಡಲವನ್ನು ಹೊತ್ತಿರುವ ಆದಿಶೇಷನೆಂಬ ಹಾವಿನ ಹೆಡೆಯು ಕೊರಳೊಳಕ್ಕೆ ಮುದುಡಿಕೊಳ್ಳಲು;

ಕೂರ್ಮನ ಬೆನ್ನು ತಗ್ಗಿ ಬಸುರೆಡೆಯ ಹೊಗೆ=ಭೂಮಂಡಲವನ್ನು ಹೊತ್ತಿರುವ ಆಮೆಯ ಬೆನ್ನು ತಗ್ಗಿಹೋಗಿ, ಅದರ ಹೊಟ್ಟೆಯೊಳಗೆ ಸೇರಿಕೊಳ್ಳಲು; **ಬಲು ಬೇಡ ಪಡೆ ಬೊಬ್ಬೆ ಕೊಟ್ಟು ಅಬ್ಬರಿಸಿ ನಗರಿಯಿಮ್ ಹೊರಗೆ ಹೊರಬೀಡ ಬಿಟ್ಟು**=ದೊಡ್ಡ ಸಂಕೆಯಲ್ಲಿದ್ದ ಬೇಡರ ಪಡೆಯು ಅತಿ ಹೆಚ್ಚಾದ ಆನಂದ ಮತ್ತು ಉತ್ಸಾಹದ ದನಿಯಿಂದ ಅಬ್ಬರಿಸಿ ಕೂಗುತ್ತ ಅಯೋಧ್ಯಾ ನಗರದ ಹೊರ ಬಯಲಿನಲ್ಲಿ ಸ್ವಲ್ಪ ಸಮಯ ತಂಗಿದ್ದು; **ಘುಡುಘುಡಿಸಿ ರಥವನ್ ಒಲವಿಮ್ ನೂಂಕಿ ಕಡಗಿ ಹರಕರಿಸಿ ನಡೆಯೆ**=ಮತ್ತೆ ಜೋರಾಗಿ ಅಬ್ಬರಿಸುತ್ತ ಒಲವಿನಿಂದ ರಾಜನ ತೇರನ್ನು ತಾವೇ ಉತ್ಸಾಹದಿಂದ ಎಳೆದುಕೊಂಡು ಅತಿಶಯವಾದ ಆನಂದದಿಂದ ಕಾಡಿನತ್ತ ಸಾಗುತ್ತಿರಲು;

ಹೇರಡವಿ ಕೈಮಿಕ್ಕು ಗೋಳಿಡಲು=ದೊಡ್ಡದಾದ ಕಾಡು ಬಹುದೊಡ್ಡ ಸಂಕೆಯಲ್ಲಿ ತನ್ನತ್ತ ಬರುತ್ತಿರುವ ಬೇಡ ಪಡೆಯನ್ನು ಕಂಡು ಸಂಕಟಪಡುತ್ತಿರಲು; ಇದೊಂದು ರೂಪಕದ ನುಡಿ. ಕಾಡಿಗೆ ಬೇಡಪಡೆ ನುಗ್ಗುತ್ತಿರುವುದರಿಂದ ಕಾಡಿನಲ್ಲಿರುವ ಪ್ರಾಣಿಪಕ್ಷಿಗಳಿಗೆ ಮತ್ತು ಮರಗಿಡಬಳ್ಳಿಗಳಿಗೆ ಅಪಾಯ ಉಂಟಾಗಲಿದೆ ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ; **ನಿಜದೇಶ ಜನವನಧಿ ಕುಮುದಸಖನು ದಾಳಿಕ್ಕಿದನ್**=ತನ್ನ ದೇಶದ ಜನಸಮುದಾಯವೆಂಬ ಕಡಲಿಗೆ ಚಂದ್ರನಂತಿರುವ ರಾಜ ಹರಿಶ್ಚಂದ್ರನು ಕಾಡಿನ ಮೇಲೆ ದಾಳಿಯಿಟ್ಟನು; ಬೇಡರ

ಪಡೆಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಕೂಗುತ್ತ ಬೇಟೆಯಾಡಲು ಮುನ್ನುಗ್ಗುತ್ತಿದ್ದಾರೆ. **ಹಿಡಿ ನವಿಲನ್**=ನವಿಲನ್ನು ಹಿಡಿ; **ಇರಿ ಹುಲಿಯನ್**=ಹುಲಿಯನ್ನು ತಿವಿ; **ಅಟ್ಟು ಮರೆವಿಂಡ**=ಜಿಂಕೆಗಳ ಹಿಂಡನ್ನು ಬೆನ್ನತ್ತು; **ದರಿಗೆಡಹು ಕರಿಯಮ್**=ಆನೆಯನ್ನು ಹಳ್ಳದಲ್ಲಿ ಬೀಳಿಸು;

ರೊಪ್ಪವಿಡಿದ ಹಂದಿಗೆ ತಡವಿ ಬಿಡು ನಾಯನ್=ತನ್ನ ಹಕ್ಕೆಯಲ್ಲಿ ಅಡಗಿ ಕುಳಿತಿರುವ ಹಂದಿಯನ್ನು ಹುಡುಕಿ ಹಿಡಿಯಲು ನಾಯಿಯನ್ನು ಹುರುದುಂಬಿಸಿ ಬಿಡು; **ಎಚ್ಚು ಎರಳೆಯಮ್**=ಜಿಂಕೆ ಮೇಲೆ ಬಾಣವನ್ನು ಬಿಡು; ಕಾಡಿನಲ್ಲಿರುವ ಅನೇಕ ಬಗೆಯ ಜಿಂಕೆಗಳನ್ನು 'ಚಿಗರೆ/ಹರಿಣ/ಎರಳೆ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ; **ಕಲ್ಲಲಿ ಇಕ್ಕು ಕೋಣನನು**=ಕೋಣನನ್ನು ಕಲ್ಲಿನಲ್ಲಿ ಹೊಡೆ; **ಹೊರಹೋಗಲೀಯದೆ ಹೊಡೆ ಉಡುವ**=ನೆಲದೊಳಗಿರುವ ಬಿಲದಿಂದ ಹೊರಕ್ಕೆ ಬರಲು ಬಿಡದೆ ಉಡವನ್ನು ಹೊಡೆ; **ಮರೆವಿಡಿದು ಕುತ್ತು ಕೋಣನನ್**=ಅಡಗಿ ಕುಳಿತುಕೊಂಡು ಕಾಯುತ್ತಿದ್ದು ಕಣ್ಣಿಗೆ ಕಂಡ ಕೂಡಲೇ ಕೋಣನನ್ನು ಚೂಪಾದ ಮೊನೆಯುಳ್ಳ ಈಟಿಯಿಂದ ಚುಚ್ಚು;

ಒಯ್ಯನಿಡು ಮೊಲನ=ತಪ್ಪಿಸಿಕೊಂಡು ಹೋಗಲು ಬಿಡದೆ ಮೊಲವನ್ನು ಹೊಡೆ; **ಮರಚು ಸಿಂಹವ**=ಸಿಂಹವನ್ನು ಹಿಂದಕ್ಕೆ ಅಟ್ಟು; **ಹಲವು ಬಲೆ ಕೆದರಿ ನಡೆಗೆಡಿಸು ಹಕ್ಕಿಗಳನ್**=ಹಕ್ಕಿಗಳು ಹಾರಿಹೋಗದಂತೆ ಹಲವು ಬಗೆಯ ಬಲೆಗಳನ್ನು ಒಡ್ಡಿ ಬಲೆಯೊಳಕ್ಕೆ ಬೀಳಿಸು; **ಎಂಬ ಬೇಡರ ಬೊಬ್ಬೆಯಿಂದ ಅಡವಿ ಘೀಳಿಟ್ಟುದು**=ಎಂದು ಹತ್ತಾರು ಬಗೆಯಲ್ಲಿ ಅಬ್ಬರಿಸುತ್ತಿರುವ ಬೇಡರ ಕೂಗಿನಿಂದ ಕಾಡು ಗೋಳಾಡತೊಡಗಿತು. ಇದೊಂದು ರೂಪಕದ ನುಡಿ. ಕಾಡಿಗೆ ಆಪತ್ತು ಬಂದಿತು; **ಇಲ್ಲಿ ಎರಳೆ ಸರಳಿಸಿ ಹೋದುದು**=ಇಲ್ಲಿ ಜಿಂಕೆ ಹಾರಿಹೋಗಿದೆ; **ಹಿಂಗಾಲೊದೆದು ತೆರಳ್ದ ಮಣ್ಣಿದೆ**=ಅದರ ಗುರುತಾಗಿ ಜಿಂಕೆಯ ಹಿಂಗಾಲು ಒದೆದು ಮೇಲಕ್ಕೆದ್ದ ಮಣ್ಣಿದೆ;

ಸೊಕ್ಕಿದ ಎಕ್ಕಲಂಗಳು ಹೋದವು=ಅಲ್ಲಿ ಕೊಬ್ಬಿದ ಹಂದಿಗಳು ಅಲ್ಲಿ ಹೋಗಿವೆ. **ಎರಡು ಕಟವಾಯಿಕಡೆ ಸುರಿದ ನೊರೆಯಿದೆ**=ಅದರ ಗುರುತಾಗಿ ಹಂದಿಗಳ ಬಾಯಿನ ಎರಡು ಕಡೆಯ ಅಂಚಿನಿಂದ ಸುರಿದ ನೊರೆ ಅಲ್ಲಿ ಬಿದ್ದಿದೆ; **ಇಲ್ಲಿ ಕರಡಿ ತಣಿದಾಡಿ ಹೋದುದು**=ಇಲ್ಲಿ ಕರಡಿ ತನಗೆ ಇಚ್ಛೆ ಬಂದಷ್ಟು ಹೊತ್ತು ಇದ್ದು ಹೋಗಿದೆ. ಕರಡಿ ಇದ್ದ ಜಾಗದ ಸಣ್ಣಪುಟ್ಟ ಗಿಡಬಳಿಗಳೆಲ್ಲವೂ ಮುರಿದು ನೆಲಕಚ್ಚಿವೆ ಎಂಬುದನ್ನು ಸೂಚಿಸುತ್ತಿದೆ; **ನೆರೆದ ಇರುಹೆಗಳ ಹೊರೆಯೊಳೆಡೆದ ಹುತ್ತಿದೆ**=ಸಾಲುಸಾಲಾಗಿ ಗುಂಪುಗುಂಪಾಗಿ ಹರಿದಾಡುತ್ತಿರುವ ಇರುವೆಗಳ ಸಮೀಪದ ಜಾಗದಲ್ಲಿ ಬೆಳೆದ ಹುತ್ತವಿದೆ; **ಹುಲಿಯು ಮರೆಯನ್ ಎಳೆಯಿತ್ತಿಲ್ಲಿ**

ಬಿಸುನೆತ್ತರಿದ್ದುದು=ಇಲ್ಲಿ ಹುಲಿಯು ಜಿಂಕೆಯನ್ನು ಬೇಟೆಯಾಡಿ ದೇಹವನ್ನು ಎಳೆದಾಡಿಕೊಂಡು ತಿಂದಿದೆ. ಆದ್ದರಿಂದಲೇ ಬಿಸಿರಕ್ತ ಇಲ್ಲಿ ಹರಿದಿದೆ;

ಎಂದಿರದೆ ಎರಗಿ ಹಜ್ಜೆಯಮ್ ನೋಡಿ ಬೆಂಬಳಿವಿಡಿದು ಹರಿವ ಲುಬ್ಧಕರ್ ಎಸೆದರು=ಎಂದು ತಮ್ಮತಮ್ಮಲ್ಲಿಯೇ ಹೇಳಿಕೊಂಡು ಸುಮ್ಮನಿರದೆ, ಮುಂದೆ ಬಂದು ಹುಲಿಯ ಹಜ್ಜೆಗಳನ್ನು ನೋಡುತ್ತ, ಹಜ್ಜೆಗಳ ಜಾಡಿನಲ್ಲಿಯೇ ಅಡಿಯಿಡುತ್ತ ಹುಲಿಯನ್ನು ಬೇಟೆಯಾಡಲು ಮುನ್ನುಗ್ಗುತ್ತಿರುವ ಬೇಡರು ಕಾಡಿನಲ್ಲಿ ಕಂಡುಬಂದರು; **ಕಂಟಣಿಸಿದ ಆ ಖಗವನ್ ಈ ಮೃಗವನ್ ಎಂತಕ್ಕೆ ಬೇಂಟೆಯಾಡಿದನ್ ಎಂದು ಪೊಗಳಲ್ ಏವುದು**=ಬೇಡ ಪಡೆಯ ಅಬ್ಬರಕ್ಕೆ ಹೆದರಿ ಕಂಗಾಲಾಗಿ ದಿಕ್ಕಾಪಾಲಾಗಿ ಓಡುತ್ತಿರುವ ಕಾಡಿನಲ್ಲಿದ್ದ ಆ ಪಕ್ಷಿಗಳನ್ನು ಮತ್ತು ಈ ಪ್ರಾಣಿಗಳನ್ನು ಯಾವ ಯಾವ ಬಗೆಗಳಲ್ಲಿ ರಾಜ ಹರಿಶ್ಚಂದ್ರನು ಬೇಟೆಯಾಡಿದನು ಎಂಬುದನ್ನು ಏನೆಂದು ಹೊಗಳಲಿ. ಅಂದರೆ ಹರಿಶ್ಚಂದ್ರನ ಬೇಟೆಯ ಕುಶಲತೆಯು ಬಹುಬಗೆಗಳಲ್ಲಿತ್ತು ಎಂದು ಕವಿಯು ಉದ್ಗರಿಸುತ್ತಿದ್ದಾನೆ; ಗೋರಿವೇಂಟೆ=ಗೋರಿ+ಬೇಂಟೆ;

ಗೋರಿವೇಂಟೆ=ಪ್ರಾಣಿಗಳನ್ನು ಮರಳುಗೊಳಿಸಿ ಅಂದರೆ ಬೇಟೆಗಾರರು ಬಹುಬಗೆಯ ತಂತ್ರಗಳಿಂದ ಪ್ರಾಣಿಗಳು ತಮ್ಮ ಕಡೆಗೆ ಬರುವಂತೆ ಮಾಡಿಕೊಂಡು ಬಲೆಗೆ ಕೆಡಹುವ ಬೇಟೆ; **ಪಳಹರವೇಂಟೆ**=ಒಂದು ಬಗೆಯ ಬೇಟೆ. ಇದು ಯಾವ ಬಗೆಯದು ಎಂಬುದು ತಿಳಿದು ಬಂದಿಲ್ಲ; **ಪಟವೇಂಟೆ**=ಬಟ್ಟೆಯನ್ನು ಬಳಸಿ ಪ್ರಾಣಿ ಪಕ್ಷಿಗಳನ್ನು ಹಿಡಿಯುವ ಬೇಟೆ; **ವಿದ್ಯಾಧರರ ಬೇಂಟೆ**=ಒಂದು ಬಗೆಯ ಬೇಟೆ. ಇದು ಯಾವ ಬಗೆಯದು ಎಂಬುದು ತಿಳಿದು ಬಂದಿಲ್ಲ; **ಚಿತ್ರವೇಂಟೆ**=ಒಂದು ಬಗೆಯ ಬೇಟೆ. ಇದು ಯಾವ ಬಗೆಯದು ಎಂಬುದು ತಿಳಿದು ಬಂದಿಲ್ಲ;

ಅಂಟುಜಲವೇಂಟೆ=ಅಂಟುವ ದ್ರವವನ್ನು ಉಪಯೋಗಿಸಿ ಹಕ್ಕಿಗಳನ್ನೂ ಸಣ್ಣ ಪ್ರಾಣಿಗಳನ್ನೂ ಹಿಡಿಯುವ ಬೇಟೆ; **ತೋಹಿನ ಬೇಂಟೆ**=ಬೇಟೆಗಾರನು ಕಾಡಿನಲ್ಲಿ ಪ್ರಾಣಿಗಳು ನಿತ್ಯವೂ ತಿರುಗಾಡುವ ಕಡೆಯಲ್ಲಾಗಲಿ ಇಲ್ಲವೇ ಮರಗಳ ಮರೆಯಲ್ಲಾಗಲಿ ಕುಳಿತು ಕಾಯುತ್ತಿದ್ದು ತನ್ನತ್ತ ಪ್ರಾಣಿಗಳು ಬಂದಾಗ ಹಿಡಿಯುವ ಇಲ್ಲವೇ ಕೊಲ್ಲುವ ಬೇಟೆ; **ಸೋಹುವೇಂಟೆ**=ಪ್ರಾಣಿಗಳನ್ನು ಅವುಗಳ ಅಡಗು ತಾಣದಿಂದ ಹೊರಬರುವಂತೆ ಮಾಡಿ, ಅಟ್ಟಿಸಿಕೊಂಡು ಹೋಗಿ ಹಿಡಿಯುವ ಇಲ್ಲವೇ ಕೊಲ್ಲುವ ಬೇಟೆ;

ಗೋರಿವೇಂಟೆ ಪಳಹರವೇಂಟೆ ಪಟವೇಂಟೆ ವಿದ್ಯಾಧರರ ಬೇಂಟೆ ಚಿತ್ರವೇಂಟೆ ಅಂಟುಜಲವೇಂಟೆ ತೋಹಿನ ಬೇಂಟೆ ಘನ ಸೋಹುವೇಂಟೆಗಳ್ ಎನಿಪ್ಪ ಹೆಸರಮ್ ಹೊತ್ತು ಮೆಚಿಯುತಿಪ್ಪ ಎಂಟು ತೆರದ ಉಚಿತವೇಂಟೆಯನ್ ಹರಿಶ್ಚಂದ್ರ

ವಸುಧಾಧೀಶನು ಆಡಿದನ್=ರಾಜ ಹರಿಶ್ಚಂದ್ರನು ಕಾಡಿನ ಎಲ್ಲೆಡೆಯಲ್ಲಿಯೂ ಬೇಡ ಪಡೆಯೊಡನೆ ತಿರುಗುತ್ತ ಬೇಟೆಯಲ್ಲಿ ಬಹುದೊಡ್ಡ ಹೆಸರನ್ನು ಹೊಂದಿರುವ ಗೋರಿ ಬೇಟೆ/ಪಳಹರ ಬೇಟೆ/ಪಟ ಬೇಟೆ/ವಿದ್ಯಾಧರರ ಬೇಟೆ/ಚಿತ್ರ ಬೇಟೆ/ಅಂಟುಜಲ ಬೇಟೆ/ತೋಹಿನ ಬೇಟೆ/ಸೋಹು ಬೇಟೆಗಳನ್ನಾಡುತ್ತ ಪ್ರಾಣಿ ಪಕ್ಷಿಗಳ ಉಪಟಳವನ್ನು ಅಡಗಿಸಿದನು;

ಹರಿಶ್ಚಂದ್ರನೃಪನು ಗಣ್ಯತರ ಗೌತಮಾರಣ್ಯದಲಿ ದಂಡಕಾರಣ್ಯದಲಿ ಕ್ರೌಂಚಕಾರಣ್ಯದಲಿ ಭಯಗುಹಾರಣ್ಯದಲಿ ನುತ ದಶಾರಣ್ಯದಲಿ ಘೋರ ಕಂಠೀರವಾರಣ್ಯದಲ್ಲಿ ಪುಣ್ಯವಿಡಿದ ಅನಿಮಿಷಾರಣ್ಯದಲಿ ಮಾನುಷಾರಣ್ಯದಲಿ ಬೇಂಟೆಯಾಡುತ್ತ ನಡೆತಂದು ಅಖಿಳ ಪುಣ್ಯವೆಂದೆನಿಪ ಕಿಷ್ಕಿಂಧಾಚಳಕ್ಕೆ ಬಂದನು= ರಾಜ ಹರಿಶ್ಚಂದ್ರನು ಕಾಡಿನ ಉದ್ದಗಲದಲ್ಲಿ ವಿಸ್ತಾರವಾಗಿ ಮತ್ತು ದಟ್ಟವಾಗಿ ಹಬ್ಬಿಹರಡಿದ್ದ ಹೆಸರಾಂತ ದಂಡಕಾರಣ್ಯ... ಕ್ರೌಂಚಕಾರಣ್ಯ... ಭಯಗುಹಾರಣ್ಯ... ದಶಾರಣ್ಯ... ಕಂಠೀರವಾರಣ್ಯ... ಅನಿಮಿಷಾರಣ್ಯ... ಮಾನುಷಾರಣ್ಯದಲಿ ಬೇಟೆಯಾಡುತ್ತ ಬಂದು ಸಮಸ್ತ ಪುಣ್ಯಕ್ಕೆ ಅಂದರೆ ಮಂಗಳಕರವಾದ ನೆಲೆಯೆಂದು ಕೀರ್ತಿಯನ್ನು ಪಡೆದಿರುವ ಕಿಷ್ಕಿಂಧಾ ಪರ್ವತ ಪ್ರಾಂತ್ಯಕ್ಕೆ ಬಂದನು;

❖

ಪ್ರಸಂಗ–೬

ವಸಿಷ್ಠ ಮುನಿಯ ಆಶ್ರಮಕ್ಕೆ ಬಂದ ಹರಿಶ್ಚಂದ್ರ

ಉರಿ ಶೈತ್ಯವಾದಂತೆ=ಬಿಸಿಯು ತಣ್ಣಗಾದಂತೆ; **ವಿಷ ಅಮೃತವಾದಂತೆ**=ಜೀವಿಗಳ ಸಾವಿಗೆ ಕಾರಣವಾಗುವ ವಿಷವೇ ಜೀವವನ್ನು ಉಳಿಸುವ ಅಮೃತವಾದಂತೆ; **ತರಣಿ ತಂಪಾದಂತೆ**=ಸೂರ್ಯನ ಬಿಸಿಕಿರಣಗಳು ತಣ್ಣನೆಯ ಕಿರಣಗಳಾದಂತೆ; **ನೃಪನ ಬೇಂಟೆಯ ಬಿನದದ ಉರವಣೆಯನ್ ಒದವಿಸುವ**=ರಾಜ ಹರಿಶ್ಚಂದ್ರನ ಬೇಟೆಯಾಟದ ವಿನೋದಕ್ಕೆ ಒತ್ತಾಸೆಯಾಗಿ ಉದ್ರೇಕ, ಉತ್ಸಾಹ ಮತ್ತು ಉಲ್ಲಾಸದ ಸಡಗರವನ್ನು ತಂದುಕೊಡುವ; **ಹರಿವೈರಿ**=ಸಿಂಹವನ್ನು ಕೊಲ್ಲುವ ಶಕ್ತಿಯುಳ್ಳ 'ಶರಭ' ಎಂಬ ಹೆಸರಿನ ಕಾಡುಪ್ರಾಣಿ. ಈ ಬಗೆಯ ಪ್ರಾಣಿಯನ್ನು ಪುರಾಣದ ಕತೆಗಳಲ್ಲಿ ಕಲ್ಪಿಸಿಕೊಳ್ಳಲಾಗಿದೆ;

ಕರಿವೈರಿ=ಆನೆಯನ್ನು ಕೊಲ್ಲುವ ಶಕ್ತಿಯುಳ್ಳ ಸಿಂಹ; **ಹರಿಣವೈರಿ**=ಜಿಂಕೆಯನ್ನು ಕೊಲ್ಲುವ ಶಕ್ತಿಯುಳ್ಳ ಹುಲಿ; **ಹರಿವೈರಿ ಕರಿವೈರಿ ಹರಿಣವೈರಿಗಳು**=ಶರಭ, ಸಿಂಹ ಮತ್ತು ಹುಲಿಗಳು; **ಮೃಗವ ಹರಿದಟ್ಟಿ ಪಿಡಿದು ಅಡಸಿ ಮೋದಿ ಮುರಿಯದೆ**=ಕಾಡಿನಲ್ಲಿರುವ ಪ್ರಾಣಿಪಕ್ಷಿಗಳತ್ತ ನುಗ್ಗಿ, ಅಟ್ಟಿಸಿಕೊಂಡು ಹೋಗಿ, ಮೇಲೆ ಎರಗಿ ಹೊಡೆದು ಕೊಲ್ಲದೆ; **ನಿಂದು ಮರವಟ್ಟ ಕಾರಣವನ್ ಅರುಪಬೇಕು**=ಅತ್ತಿತ್ತ ಚಲಿಸದೆ ಸುಮ್ಮನೆ ನಿಂತುಕೊಂಡಿರಲು ಕಾರಣವೇನು ಎಂಬುದನ್ನು ತಿಳಿಸಬೇಕು;

ಎಂದು ಅಂತು ಆ ಬೇಡರು ಎಯ್ದಿ ಸರಸಿರುಹಸಖಕುಲ ಹರಿಶ್ಚಂದ್ರ ಭೂಪಂಗೆ ಪೇಳ್ದರ್=ಎಂದು ಆ ರೀತಿಯಲ್ಲಿ ಬೇಡ ಪಡೆಯವರು ತಮಗೆ ಉಂಟಾದ ಅಚ್ಚರಿ ಮತ್ತು ಆತಂಕವನ್ನು ಸೂರ್ಯವಂಶದ ರಾಜ ಹರಿಶ್ಚಂದ್ರನ ಬಳಿಗೆ ಬಂದು ಹೇಳಿಕೊಂಡರು; ಬೇಡರು ಬೇಟೆಯಾಡುವಾಗ ಕಾಡಿನ ಮರಗಿಡ ಬಳ್ಳಿಪೊದೆಗಳಲ್ಲಿ, ನೆಲದೊಳಗಿನ ಬಿಲಗಳಲ್ಲಿ ಮತ್ತು ಬಂಡೆಯ ಗವಿಗಳಲ್ಲಿ ಅಡಗಿಕೊಂಡಿರುವ ಪ್ರಾಣಿಪಕ್ಷಿಗಳನ್ನು ಗುರುತಿಸಲು, ಅಡಗುತಾಣದಿಂದ ಅವನ್ನು ಹೊರಬರುವಂತೆ ಮಾಡಲು ಮತ್ತು ಅವನ್ನು ಬೆನ್ನಟ್ಟಿ ಹಿಡಿಯಲು ನಾಯಿಗಳನ್ನು ಪಳಗಿಸಿ ಬೇಟೆನಾಯಿಗಳನ್ನಾಗಿ ಬಳಸುತ್ತಿದ್ದರು. ಇದೇ ರೀತಿ ಕಾಡಿನಲ್ಲಿದ್ದ ಹುಲಿ, ಸಿಂಹ. ಶರಭಗಳನ್ನು ಸೆರೆಹಿಡಿದು ತಂದು, ಪಳಗಿಸಿದ ನಂತರ ಈ ಕ್ರೂರಪ್ರಾಣಿ ಗಳನ್ನೇ ಕಾಡಿನ ಪ್ರಾಣಿಗಳನ್ನು ಬೇಟೆಯಾಡಲು ಬಳಸುತ್ತಿದ್ದರು ಎಂಬ ಒಂದು ವಿವರಣೆಯಿದೆ. ಇದಕ್ಕೆ ಉದಾಹರಣೆಯಾಗಿ ಕಾಡಾನೆಗಳನ್ನು ಹಿಡಿದು ತಂದು ಪಳಗಿಸಿ, ಅನಂತರ ಪಳಗಿಸಿದ ಆನೆಗಳನ್ನು ಬಿಟ್ಟು ಕಾಡಾನೆಗಳನ್ನು ಹಿಡಿಯುವುದನ್ನು ಈಗಲೂ ನಾವು ಕಾಣುತ್ತಿದ್ದೇವೆ;

ಇಂದು ಈ ಕಾನನಮ್ ಚಿತ್ರತರವಾದುದು=ಇಂದು ಈ ಕಾಡಿನಲ್ಲಿ ನಾವು ಕಾಣುತ್ತಿರುವ ನೋಟವೆಲ್ಲವೂ ಅಚ್ಚರಿಯನ್ನುಂಟುಮಾಡುತ್ತಿದೆ. ಮುನ್ನುಗ್ಗಿ ಬೇಟೆಯಾಡುತ್ತಿದ್ದ ಬೇಡ ಪಡೆಯ ಪಳಗಿದ ಶರಭ, ಸಿಂಹ, ಹುಲಿಗಳೆಲ್ಲವೂ ಬೇಟೆಯ ಕಸುವನ್ನೇ ಕಳೆದುಕೊಂಡಂತೆ ಪ್ರಾಣಿಪಕ್ಷಿಗಳನ್ನು ಕೊಲ್ಲಬೇಕೆಂಬ ಉದ್ದೇಶವನ್ನೇ ಮರೆತಂತೆ ಸುಮ್ಮನೆ ನಿಂತುಬಿಟ್ಟಿವೆ. **ಮಹಾಕ್ಷೇತ್ರದ ಒಳಗಣದಾಗದೆ ಇರದು ಎನುತ ಭೂಪತಿ ಬರೆ**=ಹುಟ್ಟಿನಿಂದಲೇ ಪ್ರಾಣಿಗಳನ್ನು ಬೇಟೆಯಾಡಿ ಕೊಂದು ತಿನ್ನುವ ಬೇಡಪಡೆಯ ಹುಲಿ ಸಿಂಹ ಶರಭಗಳು ಕ್ರೂರತನವನ್ನು ಮರೆತು, ಇತರ ಪ್ರಾಣಿಗಳ ಬಗ್ಗೆ ಕರುಣೆಯಿಂದ ಇರಬೇಕಾದರೆ, ಕಾಡಿನ ಈ ಪ್ರದೇಶವು ಸಜ್ಜನರ ನೆಲೆಯಾಗಿರಬೇಕು. ಇಲ್ಲದಿದ್ದರೆ ಕ್ರೂರಪ್ರಾಣಿಗಳಲ್ಲಿ ಇಂತಹ ಸಾಧುತನ ಬರುತ್ತಿರಲಿಲ್ಲ ಎಂದು ರಾಜ ಹರಿಶ್ಚಂದ್ರನು ಕಾಡಿನ ಆ ನೆಲದ ಗುಣವನ್ನು ಕೊಂಡಾಡುತ್ತ ಬರುತ್ತಿರಲು; ಚಿತ್ರಕಾಯ+ಅಜಿನ; ಚಿತ್ರಕಾಯ=ಹುಲಿ; ಅಜಿನ=ಚರ್ಮ;

ಮುಂದೆ ಚಿತ್ರಕಾಯಾಜಿನದ ಸುಲಿಪಲ್ಲ ಭಸ್ಮದ ಜಟಾಭರದ ಮುನಿನಾಥನು ಮಿತ್ರರೊಡಗೂಡಿ=ಹುಲಿಯ ಚರ್ಮವನ್ನು ಉಟ್ಟಿರುವ, ಚೊಕ್ಕಟವಾದ ಹಲ್ಲುಗಳನ್ನುಳ್ಳ, ವಿಭೂತಿಯನ್ನು ಬಳಿದುಕೊಂಡಿರುವ, ಜಟೆಯನ್ನು ಎತ್ತಿಕಟ್ಟಿರುವ ಮುನಿಯೊಬ್ಬನು ತನ್ನ ಗೆಳೆಯರ ಜತೆಗೂಡಿ; ಮಿತ್ರ ಪ್ರಕಾಶನ್=ಸೂರ್ಯನಂತೆ ಬೆಳಗುತ್ತಿರುವ; ಲೋಕಮಿತ್ರನ್=ಲೋಕದ ಸಕಲ ಕ್ರಿಯೆಗಳಿಗೂ ನೆರವಾಗುವ;

ಆತ್ಮಪವಿತ್ರ ಚರಿತವಾಕ್ಯನ್=ಒಳ್ಳೆಯ ಮನಸ್ಸಿನ ಹಾಗೂ ನಡೆನುಡಿಯ; ಮರುತ ಮಿತ್ರ=ಅಗ್ನಿದೇವ. ವಾಯುದೇವನ ಗೆಳೆಯನಾದ ಅಗ್ನಿದೇವ; ಮರುತ ಮಿತ್ರ ಕಾರ್ಯ=ಯಾಗದ ಕುಂಡದಲ್ಲಿ ಬೆಂಕಿಯನ್ನು ಉರಿಸುವ ಆಚರಣೆ;

ಮಿತ್ರ ಪ್ರಕಾಶಮ್ ಲೋಕಮಿತ್ರನ್... ಆತ್ಮಪವಿತ್ರ ಚರಿತವಾಕ್ಯನ್ ಮರುತ ಮಿತ್ರ ಕಾರ್ಯದ ಪರಿಕರಂಗಳ ಸವಕಟ್ಟುತಿರಲು ಕಂಡನು=ಲೋಕವನ್ನು ಬೆಳಗುವ ಮತ್ತು ಲೋಕದ ಸಕಲ ಕ್ರಿಯೆಗೆ ಕಾರಣನಾಗಿರುವ ಸೂರ್ಯನಂತೆ ಪ್ರಕಾಶಿಸುವ ಮತ್ತು ಒಳ್ಳೆಯ ಮನಸ್ಸಿನ ನಡೆನುಡಿಯ ದೇವತೆಯಾದ ಅಗ್ನಿದೇವನನ್ನು ಪೂಜಿಸಲು ಯಾಗಕ್ಕೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹಿಸುತ್ತಿರುವ ಮುನಿಯನ್ನು ರಾಜ ಹರಿಶ್ಚಂದ್ರನು ಕಂಡನು; **ಹೆಂದದ ಆನಂದದಿಮ್ ಬಂದು ವಂದಿಸಿ ಮುಂದೆ ನಿಂದು**=ಯಾಗದ ಅಗ್ನಿಕುಂಡಕ್ಕೆ ಬೇಕಾದ ಸಾಮಗ್ರಿಗಳನ್ನು ಕಲೆಹಾಕುತ್ತಿರುವ ಮುನಿಯನ್ನು ಹರಿಶ್ಚಂದ್ರನು ಕಂಡು ಹೆಚ್ಚಿದ ಆನಂದದಿಂದ ಮುನಿಗೆ ನಮಸ್ಕರಿಸಿ, ಆತನ ಮುಂದೆ ನಿಂತುಕೊಂಡು;

ತಂದೆ, ಇಂದು ಎಮ್ಮ ಮೃಗವು ಎಂದಿನ ಅಂದದಿಂದ ಮುದದಿಂದ ಮೃಗವೃಂದೊಳಗೆ ಒಂದುವಮ್ ಕೊಂದಿಕ್ಕದೆ ಇರ್ದುದಕೆ ಕಾರಣವನು ಕುಂದದೆ ಕರುಣಿಸು ಎಂದು ವಂದಿಸಿ ಭೂಪಕಂದರ್ಪನ್ ಇನಕುಲ ಹರಿಶ್ಚಂದ್ರ ಭೂನಾಥನ್ ಎಂದಡೆ=ತಂದೆ, ಇಂದು ನಾವು ಬೇಟೆಯಾಡಲೆಂದು ಕರೆತಂದಿರುವ ಪಳಗಿದ ಹುಲಿ ಸಿಂಹ ಶರಭ ಪ್ರಾಣಿಗಳು ಎಂದಿನ ರೀತಿಯಲ್ಲಿ ಆಕ್ರಮಣಕಾರಿಯಾಗಿ ಮುನ್ನುಗ್ಗಿ, ಪ್ರಾಣಿಗಳ ಗುಂಪಿನಲ್ಲಿ ಒಂದು ಪ್ರಾಣಿಯನ್ನಾದರೂ ಕೊಲ್ಲದೆ, ಸುಮ್ಮನಿರುವುದಕ್ಕೆ ಕಾರಣವೇನೆಂಬುದನ್ನು ಮರೆಮಾಚದೆ ನಮಗೆ ತಿಳಿಸಿರಿ ಎಂದು ಕಯ್ ಮುಗಿಯುತ್ತ ಕಾಮದೇವನಂತೆ ಸುಂದರನಾಗಿರುವ ಸೂರ್ಯವಂಶದ ರಾಜನಾದ ಹರಿಶ್ಚಂದ್ರನು ಆ ಮುನಿಯನ್ನು ಕೇಳಿಕೊಂಡಾಗ;

ಅಂದು ಆ ಮುನಿನಾಥನ್ ಮಾರುತ್ತರಮ್ ಕುಡಲೆಂದು ತರಿಸಂದನು=ಆಗ ಆ ಮುನಿಯು ರಾಜನ ಕೋರಿಕೆಯನ್ನು ಮನ್ನಿಸಿ, ಅವನಿಗೆ ಉತ್ತರವನ್ನು ಕೊಡಲು ನಿಶ್ಚಯಿಸಿದನು; **ನೆರೆದ ವೇದಂಗಳ ಉಗ್ಗಡ**=ಆಶ್ರಮದಲ್ಲಿನ ವಟುಗಳು ಜತೆಗೂಡಿ ಉಚ್ಚರಿಸುತ್ತಿರುವ ವೇದ ಶ್ಲೋಕಗಳ ಎತ್ತರದ ದನಿ; **ಉಪನಿಷತ್ತುಗಳ ಗರವಟಿಗೆ**= ಉಪನಿಷತ್ತುಗಳಲ್ಲಿನ ವಿಚಾರಗಳ ದೊಡ್ಡ ಮಟ್ಟದ ಚರ್ಚೆಯ ಸದ್ದು; ಅಣಿಮ+ಆದಿಗಳ; ಅಣಿಮಾ=ಮುನಿಗಳು ತಮ್ಮ ತಪೋಸಾಧನೆಯಿಂದ ಪಡೆಯುವ ಎಂಟು ಸಿದ್ಧಿಗಳಲ್ಲಿ ಒಂದು ಬಗೆಯದು; **ಅಣಿಮಾದಿಗಳ ಬೊಬ್ಬೆ**= ಮುನಿಗಳು ತಾವು ಪಡೆದ ಸಿದ್ಧಿಗಳ ಮಹತ್ವವನ್ನು ಕುರಿತು ಗಟ್ಟಿಯಾದ ದನಿಯಲ್ಲಿ ಹೇಳಿಕೊಳ್ಳುತ್ತಿರುವುದು;

ಧರ್ಮದ ಅಬ್ಬರ=ಒಳ್ಳೆಯ ನಡೆನುಡಿಯಿಂದ ಕೂಡಿದ ಧರ್ಮದ ಸಂಗತಿಗಳನ್ನು ಕುರಿತ ದೊಡ್ಡ ಮಟ್ಟದ ಮಾತುಕತೆ; **ಘನ ಜ್ಞಾನ ಪ್ರಭಾ ದೀಪ್ತಿಗಳು**=ಒಳ್ಳೆಯ ಅರಿವನ್ನು ಬೆಳಗುವ ನಂದಾದೀಪಗಳು; **ಹರಿ ಬ್ರಹ್ಮಾದಿ ಸುರರ ಕಾಹು**=ವಿಷ್ಣು, ಬ್ರಹ್ಮ ಮೊದಲಾದ ದೇವತೆಗಳ ಕಾವಲು; **ಪುರುಷಾರ್ಥ ನಾಲ್ಕರೊಳು ಸಲುಗೆ**=ಮಾನವ ಸಮುದಾಯದ ಒಲವು ನಲಿವು ನೆಮ್ಮದಿಗೆ ಬೇಕಾದ 'ಧರ್ಮ-ಅರ್ಥ-ಕಾಮ-ಮೋಕ್ಷ'ಗಳೆಂಬ ನಾಲ್ಕು ಸಂಗತಿಗಳ ಒಡನಾಟ; **ಪುಣ್ಯದ ಮಂದೆ**=ಸಕಲರಿಗೂ ಮಂಗಳವನ್ನುಂಟುಮಾಡುವ ಪುಣ್ಯಗಳು ಒಂದೆಡೆ ಗುಂಪುಗೂಡಿರುವ ನೆಲೆ; **ಸಿರಿ ಸರಸ್ವತಿಯರ ಎಡೆಯಾಟ ಎಸೆದಿರೆ**=ಸಂಪತ್ತಿನ ದೇವತೆಯಾದ ಲಕ್ಷ್ಮಿ ಮತ್ತು ವಿದ್ಯೆಯ ದೇವತೆಯಾದ ಸರಸ್ವತಿಯರ ಸಂಚಾರದಿಂದ ಕಂಗೊಳಿಸುತ್ತಿರಲು;

ಜಗದ್ಗುರು ವಿರೂಪಾಕ್ಷನ್ ಇಲ್ಲಿಯೆ ಸುಖದೊಳಿಪ್ಪ ಪಂಪಾಕ್ಷೇತ್ರವಿದು= ಜಗತ್ತಿನ ಗುರುವಾದ ವಿರೂಪಾಕ್ಷನು ಈ ಎಡೆಯಲ್ಲಿಯೇ ಆನಂದದಿಂದ ಇರುವ ಪಂಪಾಕ್ಷೇತ್ರವಿದು; **ಬಿಡದೆ ಒಮ್ಮೆ ಕಂಡ ಜೀವರ**=ಜೀವನದಲ್ಲಿ ಒಮ್ಮೆಯಾದರೂ ಪಂಪಾಕ್ಷೇತ್ರಕ್ಕೆ ಬಂದು ವಿರೂಪಾಕ್ಷ ದೇವರನ್ನು ನೋಡಿದ ವ್ಯಕ್ತಿಗಳ; **ಭವವ್ರಜದ ಬೆಂಬಡಿಗೆ**=ಹುಟ್ಟು ಸಾವಿನ ಗುಂಪನ್ನು ಬಡಿದು ಹಾಕುವ ದೊಣ್ಣೆ. ಅಂದರೆ ಹುಟ್ಟು ಸಾವಿನ ಸರಣಿಯಿಂದ ಪಾರಾಗಿ ಜೀವಿಗಳು ಮುಕ್ತಿಯನ್ನು ಪಡೆಯುತ್ತಾರೆ; **ಪಾತಕ ಕೋಟಿಯಾ ಕತ್ತಿ**=ಜನರ ಪಾಪರಾಶಿಯನ್ನು ಕತ್ತರಿಸಿಹಾಕುವ ಕತ್ತಿ; **ದುಷ್ಕರ್ಮದ ಎಡೆಗೊರಳ ಕತ್ತರಿ**=ಕೆಟ್ಟ ಕೆಲಸದ ಕೊರಳಿನ ನಡು ಭಾಗವನ್ನು ಇಕ್ಕಳದಂತೆ ಹಿಡಿಯುವ ಕತ್ತರಿ. ಅಂದರೆ ಜನರಿಗೆ ಕೆಟ್ಟ ಕಾರ್ಯವನ್ನು ಮಾಡುವುದಕ್ಕೆ ಅವಕಾಶವನ್ನು ನೀಡುವುದಿಲ್ಲ;

ಸಮಸ್ತ ರೋಗಂಗಳ ಎಡೆಗೆ ಒಡ್ಡಿದ ಅಲಗು=ಜನರಿಗೆ ಯಾವುದೇ ಬಗೆಯ ರೋಗಗಳು ಬಾರದಂತೆ ತಡೆದು ನಿಲ್ಲಿಸುವ ಹರಿತವಾದ ಆಯುಧ; **ಅಜ್ಞಾನದ ನಡುದಲೆಯ ಗರಗಸಮ್**=ಜನಮನದಲ್ಲಿರುವ ತಿಳಿಗೇಡಿತನವನ್ನು ಇಬ್ಭಾಗವಾಗಿ ಕುಯ್ದುಹಾಕುವ ಗರಗಸ; **ಮಲೆವ ಮಾಯೆಯ ಬಸುರನ್ ಒಡೆಹೊಯ್ವ ಶೂಲ**= ಜೀವನದಲ್ಲಿ ಎದುರಾಗುವ ಎಲ್ಲ ಬಗೆಯ ಮೋಹದ ಬಸುರನ್ನು ಒಡೆದು ಹಾಕುವ ಶೂಲ; ಅಂದರೆ ಜನರನ್ನು ಯಾವುದೇ ಬಗೆಯ ದುರಾಶೆಯ ಸೆಳೆತಕ್ಕೆ ಬಲಿಯಾಗದಂತೆ ಕಾಪಾಡುವ ಶೂಲ; **ಇನ್ನುಳಿದ ದುರಿತವನ್ ಉರುಹಿ ಸುಡುವ ಕಿಚ್ಚು**=ಮಾನವರ ಜೀವನದಲ್ಲಿ ಕಾಡುವಂತಹ ಯಾವುದೇ ಬಗೆಯ ಪಾಪವನ್ನು ಸುಟ್ಟು ಬೂದಿ ಮಾಡುವ ಬೆಂಕಿ;

ಎಂದೆನಿಪ ತುಂಗಭದ್ರಾ ನದಿಯನ್ ಅವನೀಶ ನೋಡು ಎಂದನು=ಎಂದು

ಹೆಸರನ್ನು ಪಡೆದಿರುವ ತುಂಗಭದ್ರಾ ನದಿಯನ್ನು ರಾಜನೇ ನೋಡು ಎಂದು ಆ ಮುನಿಯು ಕಾಡಿನ ನಡುವೆ ಇದ್ದ ಆ ಎಡೆಯ ಮಹತ್ವವನ್ನು ವಿವರವಾಗಿ ಹೇಳಿದನು; **ನುಡಿದು ಎನ್ನ ಸಂಶಯದ ಸಾಲ ಸವರಿದೆ**=ಈ ಹೊಸ ಪ್ರಾಂತ್ಯದ ಬಗ್ಗೆ ನನಗಿದ್ದ ಕುತೂಹಲ, ಅನುಮಾನ ಮತ್ತು ಆತಂಕವನ್ನು ಪರಿಹರಿಸಿ, ನಿಜ ಸಂಗತಿಯನ್ನು ತಿಳಿಸಿದಿರಿ; **ನಿನ್ನ ಪಡೆದ ಪುಣ್ಯಾಧಿಕನ ಹೆಸರಾವುದಯ್ಯ. ನೀ ನುಡಿ ಎಂದಡೆ**=ನಿಮ್ಮ ತಂದೆಯವರ ಹೆಸರೇನು ಎಂಬುದನ್ನು ತಿಳಿಸಿರಿ ಎಂದು ರಾಜ ಹರಿಶ್ಚಂದ್ರನು ಕೇಳಿದಾಗ; ಪುರವೈರಿ+ಎನಿಪ; ಪುರವೈರಿ=ಶಿವ; ಬಿಡೆ=ನಿಜವಾಗಿ/ಸ್ಪಷ್ಟವಾಗಿ; **ಎರಡನೆಯ ಪುರವೈರಿಯೆನಿಪ ವಾಸಿಷ್ಠ ಮುನಿಪನ ಮೊಮ್ಮನು. ಬಿಡೆ ಪರಾಶರನು ನಾನ್ ಎನೆ**=ಎರಡನೆಯ ಶಿವನೆಂದು ಕೀರ್ತಿವಂತನಾಗಿರುವ ವಾಸಿಷ್ಠ ಮುನಿಯ ಮೊಮ್ಮಗನು ನಾನು. ನನ್ನ ಹೆಸರು ಪರಾಶರ ಎಂದು ನುಡಿಯಲು;

ಹೆಚ್ಚಿ ಹಿಗ್ಗಿ ನಡೆ ನಡೆ ತಂದೆ ಮದ್ಗುರುಗಳ ಅಡಿಗಳ ಎಡೆಗೆ ಎಂದು=ತನ್ನ ಮೆಚ್ಚಿನ ಗುರುಗಳಾದ ವಸಿಷ್ಠ ಮುನಿಯ ಮೊಮ್ಮಗನೇ ಈತನೆಂದು ತಿಳಿದ ನಂತರ ಹರಿಶ್ಚಂದ್ರನು ಆನಂದವು ಇಮ್ಮಡಿಗೊಂಡು, ನಡೆ ನಡೆ ತಂದೆ ನನ್ನ ಗುರುಗಳ ಪಾದದೆಡೆಗೆ ನನ್ನನ್ನು ಕರೆದುಕೊಂಡು ಎನ್ನುತ್ತ; **ಅವನಿಪವರೇಣ್ಯನು ಬಳಿವಿಡಿದು ನಡೆತಂದು ಮುಂದೆ ಮುನಿವರೇಣ್ಯನನ್ ಕಂಡನು**=ರಾಜರಲ್ಲಿಯೇ ಅತ್ಯುತ್ತಮ ನೆನಿಸಿದ ಹರಿಶ್ಚಂದ್ರನು ಪರಾಶರ ಮುನಿಯ ಜತೆಯಲ್ಲಿ ನಡೆತಂದು, ಮುಂದೆ ವಸಿಷ್ಠ ಮುನಿಯನ್ನು ಕಂಡನು; **ತಿಳಿಗೊಳನ ಬಳಸಿ ನಳನಳಸಿ ಬೆಳೆದ ಎಳಮಾವುಗಳ ತಳದ ಮಲ್ಲಿಕಾ ಮಂಟಪದ ತಣ್ಣೆಳಲ ತೆಳುಗಾಳಿಯೊಳು**=ತಿಳಿಯಾದ ನೀರಿನಿಂದ ಕೂಡಿರುವ ಕೊಳದ ಸುತ್ತಲೂ ಹಬ್ಬಿ, ಕೋಮಲವಾಗಿ ಬೆಳೆದು, ಚಿಗುರೆಲೆಗಳಿಂದ ಕಂಗೊಳಿಸುತ್ತಿರುವ ಮಾವಿನ ಮರಗಳ ಕೆಳಗೆ, ಮಲ್ಲಿಗೆಯ ಹೂಬಳ್ಳಿಯಿಂದ ಹೆಣೆದುಕೊಂಡಿರುವ ಮಂಟಪದ ತಂಪಾದ ನೆಳಲಿನ ತೆಳುಗಾಳಿಯಲ್ಲಿ; **ಪುಣ್ಯವಪ್ಪ ಪುಳಿನ ಸ್ಥಳದ ಮೇಲೆ**=ಒಳ್ಳೆಯ ಮರಳಿನ ದಂಡೆಯ ಮೇಲೆ;

ಅಶೋಕೆಯ ತರುವಿನ ತಳಿರ ತೊಂಗಲ ಗದ್ದುಗೆಯೊಳ್ ಓಲಗಮ್ ಕೊಟ್ಟು=ಅಶೋಕ ಮರದ ಚಿಗುರಿನ ಗೊಂಚಲುಗಳಿಂದ ಕೂಡಿರುವ ಗದ್ದುಗೆಯಲ್ಲಿ ಕುಳಿತು, ಆಶ್ರಮದ ಮುನಿಗಳ ಸಂಗಡ ಮಾತುಕತೆಯಾಡುತ್ತಿರುವ; **ಬಳಸಿ ಹಿಂದೆ ಎಡಬಲದೊಳಿಪ್ಪ ಮುನಿಗಳ ಕೂಸ ನಲವಿನಿಮ್ ನುಡಿವ**=ತನ್ನ ಸುತ್ತಲೂ ನೆರೆದು, ಎಡಬಲದಲ್ಲಿರುವ ಆಶ್ರಮದ ವಟುಗಳನ್ನು ಪ್ರೀತಿಯಿಂದ ಮಾತನಾಡಿಸುತ್ತ; **ಪಶುಪತಿಯಂತಿರ್ದ ಮುನಿನಾಥ ಕಣ್ಗೆ ಎಸೆದಿರ್ದನು**=ಹರಿಶ್ಚಂದ್ರನ ಕಣ್ಣುಗಳಿಗೆ ವಸಿಷ್ಠ ಮುನಿಯು ಶಿವನಂತೆ ಕಂಗೊಳಿಸಿದನು; **ನೀತಿ ಬಲಿದುದೊ**=ನೀತಿಯೇ ದೊಡ್ಡದಾಗಿ ಬೆಳೆದು ವಸಿಷ್ಠ ಮುನಿಯ ರೂಪವನ್ನು ತಳೆಯಿತೊ;

ಶಾಂತಿ ರೂಪಾಯ್ತೊ=ಶಾಂತಿಯೇ ಮಯ್ ಪಡೆದು ವಸಿಷ್ಠ ಮುನಿಯ ರೂಪವನ್ನು ತಳೆಯಿತೊ; **ಸದ್ಗುಣ ವ್ರಾತವೇ ಮುನಿಯಾಯ್ತೊ**=ಒಳ್ಳೆಯ ನಡೆನುಡಿಗಳ ಸಮೂಹವೇ ವಸಿಷ್ಠ ಮುನಿ ರೂಪವನ್ನು ತಳೆಯಿತೊ; **ಮುಕ್ತಿ ಜಡೆವೊತ್ತುದೋ**=ಹುಟ್ಟು ಸಾವಿನ ಸರಣಿಯಿಂದ ಹೊರಬಂದ ಮುಕ್ತಿಯೇ ವಸಿಷ್ಠ ಮುನಿಯ ತಲೆಯಲ್ಲಿ ಎತ್ತಿಕಟ್ಟಿರುವ ಮುಡಿಯಾಯಿತೋ; **ಭೂತ ದಯೆ ವಲ್ಕಲಾಂಚಲವಾಂತುದೋ**=ಲೋಕದ ಸಕಲ ಜೀವಿಗಳ ಬಗೆಗಿನ ಕರುಣೆಯೇ ಮುನಿಯು ಉಟ್ಟಿರುವ ನಾರುಮಡಿಯ ಸೆರಗಾಯಿತೋ; **ಪುಣ್ಯವೆಳಸಿ ಭಸಿತವನಿಟ್ಟುದೋ**=ಪುಣ್ಯವು ಬಯಸಿ ವಿಭೂತಿಯ ರೂಪದಲ್ಲಿ ವಸಿಷ್ಠ ಮುನಿಯ ಹಣೆಯಲ್ಲಿ ಕಂಗೊಳಿಸುತ್ತಿದೆಯೋ; ಶ್ರುತಿ+ಅರ್ಥ; ಶ್ರುತಿ=ವೇದ; ಶ್ರುತ್ಯರ್ಥ=ವೇದದಲ್ಲಿನ ತಿರುಳು;

ನೂತನ ಶ್ರುತ್ಯರ್ಥ ನುಡಿಗಲಿತುದೋ=ಹೊಸಬಗೆಯಲ್ಲಿ ವೇದದ ತಿರುಳನ್ನು ಒಳಗೊಂಡ ನುಡಿಯು ವಸಿಷ್ಠ ಮುನಿಯಿಂದ ಹೊರಹೊಮ್ಮುತ್ತಿದೆಯೋ; **ಘನ ಸ್ವಾತಂತ್ರ್ಯವೃತ್ತಿ ಗೋಚರಿಸಲ್ ಎಳಸಿತೊ ಎಂಬ ಚಾತುರ್ಯದಿಂದ ಇರ್ದ ಮುನಿನಾಥನನ್ ಕಂಡು**=ಯಾವ ಇಲ್ಲವೇ ಯಾರ ಅಂಕೆಶಂಕೆಗಳಿಗೆ ಒಳಗಾಗದ ಸ್ವತಂತ್ರವಾದ ನಡೆನುಡಿಗಳು ಮುನಿಯ ರೂಪದಲ್ಲಿ ಕಂಡುಬರುತ್ತಿವೆಯೋ ಎಂಬ ಹಾಗೆ ಮನೋಹರವಾದ ಸದ್ಗುಣಗಳಿಂದ ಕೂಡಿದ್ದ ಮುನಿಗಳ ಒಡೆಯನಾದ ವಸಿಷ್ಠನನ್ನು ರಾಜ ಹರಿಶ್ಚಂದ್ರನು ಅಲ್ಲಿ ಕಂಡನು; **ಹರುಷದಿಮ್ ಭೂನಾಥನು**= ವಸಿಷ್ಠ ಮುನಿಯನ್ನು ಕಂಡು ಆನಂದಗೊಂಡ ರಾಜ ಹರಿಶ್ಚಂದ್ರನು ಮುನಿಯ ಗುಣಗಾನ ಮಾಡಲು ತೊಡಗುತ್ತಾನೆ; **ಸುರ ನರೋರಗ ನಮಿತ ಚರಣ**= ದೇವಲೋಕದಲ್ಲಿ ದೇವತೆಗಳು ಭೂಲೋಕದಲ್ಲಿ ಮಾನವರು ಪಾತಾಳ ಲೋಕದಲ್ಲಿ ಸರ್ಪ ಸಂತತಿಯವರು ನಿನ್ನ ಪಾದಗಳಿಗೆ ನಮಿಸುತ್ತಿದ್ದಾರೆ;

ಜಯ ಜಯ ದಯಾಭರಣ=ಸಕಲ ಜೀವಿಗಳ ಬಗ್ಗೆ ಕರುಣಾಶೀಲನಾಗಿರುವ ಮುನಿಗೆ ಜಯವಾಗಲಿ; **ಜಯ ಜಯ ಕೃಪಾವರಣ**=ಸಕಲ ಜೀವಿಗಳಿಗೂ ಒಳಿತನ್ನು ಅನುಗ್ರಹಿಸುವ ಮುನಿಗೆ ಜಯವಾಗಲಿ; **ಜಯ ಜಯ ಶಾಂತಿಕಿರಣ**=ಸಕಲ ಜೀವಗಳ ಮನದಲ್ಲಿ ಒಲವು ನಲಿವು ನೆಮ್ಮದಿಯಿಂದ ಕೂಡಿದ ಶಾಂತಿಯ ಒಳಮಿಡಿತಗಳನ್ನು ಮೂಡಿಸುವ ಮುನಿಗೆ ಜಯವಾಗಲಿ; **ಜಯ ಜಯ ವಿಗತಮರಣ**=ಮರಣದಿಂದ ದೂರಸರಿದಿರುವ ಅಂದರೆ ಹುಟ್ಟುಸಾವುಗಳ ಸರಣಿಯಿಂದ ಬಿಡುಗಡೆಯನ್ನು ಪಡೆದಿರುವ ಮುನಿಗೆ ಜಯವಾಗಲಿ; **ಜಯಜಯ ದುರಿತ ಹರಣ**=ಸಕಲ ಜೀವಿಗಳ ಪಾಪವನ್ನು ನಿವಾರಿಸುವ ಮುನಿಗೆ ಜಯವಾಗಲಿ; **ಜಯ ಜಯತು ಜಯತು ಗುರುವೆ**=ಗುರುವಿಗೆ ಜಯವಾಗಲಿ;

ಕುಲ ಗುರುವೆ=ಸೂರ್ಯವಂಶದ ರಾಜರ ಮನೆತನಕ್ಕೆ ಗುರುವಾದವನೆ; **ಘನ ಗುರುವೆ**=ಗುರುಪರಂಪರೆಯಲ್ಲಿಯೇ ದೊಡ್ಡ ಗುರುವಾದವನೆ; **ಪರ ಗುರುವೆ**=ಪರಲೋಕದಲ್ಲಿಯೂ ಒಳಿತನ್ನು ಮಾಡುವ ಗುರುವೆ; **ಮದ್ಗುರುವೆ**=ನನ್ನ ಮೆಚ್ಚಿನ ಗುರುವೆ; **ಸದ್ಗುರುವೆ**=ಒಳ್ಳೆಯ ನಡೆನುಡಿಯುಳ್ಳ ಗುರುವೇ; **ಶರಣಾಗು ಶರಣಾಗು ಎಂದು**=ನಿನ್ನ ಆಶ್ರಯವನ್ನು ಪಡೆದು ನಿನಗೆ ತಲೆಬಾಗಿ ನಮಿಸುತ್ತಿದ್ದೇನೆ ಎಂದು ಗುಣಗಾನ ಮಾಡುತ್ತ; **ಆ ಧರಣಿಪತಿ ಮುನಿಯ ಚರಣ ಸರಸಿಜದ ಎಡೆಯೊಳು ನಿಜತನುವನ್ ಹರಹಿದನು**=ರಾಜ ಹರಿಶ್ಚಂದ್ರನು ವಸಿಷ್ಠ ಮುನಿಯ ಪಾದಕಮಲದ ಮೇಲೆ ತನ್ನ ತಲೆಯನ್ನಿಟ್ಟು, ಮಯ್ಯನ್ನು ನೆಲದ ಮೇಲೆ ಒಡ್ಡಿ. ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು;

ಬಗೆ ಮೀರಿ ಲೋಚನದೊಳ್ ಒಗೆವ ಸುಖಜಲ=ಮುನಿಯನ್ನು ಕಂಡ ಆ ಗಳಿಗೆಯಲ್ಲಿ ರಾಜ ಹರಿಶ್ಚಂದ್ರನ ಮನ ತುಂಬಿ ಬಂದು, ಹರಿಶ್ಚಂದ್ರನ ಕಣ್ಣಿನಲ್ಲಿ ಆನಂದದ ನೀರು ಹರಿಯತೊಡಗಿದೆ; **ಮೆಯ್ಯೊಳ್ ಒಗೆವ ಪುಳಕಮ್**=ಹರಿಶ್ಚಂದ್ರನ ಇಡೀ ಮಯ್ ರೋಮಾಂಚನಗೊಂಡಿದೆ; **ಕೈಯೊಳ್ ಒಗೆವ ಕಂಪನ**=ಭಕ್ತಿಭಾವದ ಹೆಚ್ಚಳದಿಂದ ಹರಿಶ್ಚಂದ್ರನ ಕಯ್ಗಳು ನಡುಗುತ್ತಿವೆ; **ನುಡಿಯೊಳ್ ಒಗೆವ ತೊದಳ್**=ಭಾವೋದ್ರೇಕಕ್ಕೆ ಒಳಗಾಗಿರುವ ಹರಿಶ್ಚಂದ್ರನು ಆಡುತ್ತಿರುವ ನುಡಿಗಳು ತೊದಲುತ್ತಿವೆ; **ಅಮಳ ಕದಪಿನೊಳ್ ಒಗೆವ ಬೆಮರು**=ಹರಿಶ್ಚಂದ್ರನ ಸುಂದರವಾದ ಕೆನ್ನೆಯಲ್ಲಿ ಬೆವರ ಹನಿಗಳು ಮೂಡಿಬರುತ್ತಿವೆ; **ಕಂಠದೊಳ್ ಒಗೆವ ಹೊಸ ಗದ್ಗದ**=ಮುನಿಯನ್ನು ಕಂಡು ಮಯ್ ಮನದಲ್ಲಿ ಉಂಟಾದ ಆನಂದದ ಒಳಮಿಡಿತಗಳಿಂದ ಹರಿಶ್ಚಂದ್ರನ ಕೊರಳಿನಲ್ಲಿ ಹೊಸಬಗೆಯ ಕಂಪನ ಉಂಟಾಗುತ್ತಿದೆ;

ಮೊಗದೊಳ್ ಮಿಗೆ ಒಗೆವ ನಸುನಗೆ=ಹರಿಶ್ಚಂದ್ರನ ಮೊಗದ ತುಂಬಾ ಮುಗುಳ್ನಗೆಯು ಹೊರಹೊಮ್ಮುತ್ತಿದೆ; **ಘನಮನೋಮತಿಯೊಳ್ ಒಗೆವ**=ದೊಡ್ಡ ಮನಸ್ಸಿನಿಂದ ಹೊರಹೊಮ್ಮುತ್ತಿರುವ; **ಪರವಶವೆರಸಿ ಮೆರೆವ ಭೂರಮಣನನ್ ಮೊಗವೆತ್ತಿ ಕುಳ್ಳಿರಿಸಿ ಮೆಯ್ದಡವಿ ಬೋಳೈಸಿ ಮುನಿನಾಥನ್ ಇಂತೆಂದನು**= ತನ್ನನ್ನು ತಾನು ಮರೆತು, ಗುರುವಾದ ತನ್ನಲ್ಲಿಯೇ ಸಂಪೂರ್ಣವಾಗಿ ಬೆರತು ಹೋದಂತೆ ತನ್ನ ಪಾದಗಳ ಮೇಲೆ ತಲೆಯೊಡ್ಡಿರುವ ಹರಿಶ್ಚಂದ್ರನ ಮೊಗವನ್ನು ಮೇಲಕ್ಕೆತ್ತಿ, ಅವನನ್ನು ತನ್ನ ಬಳಿ ಕುಳ್ಳಿರಿಸಿಕೊಂಡು, ಅವನ ಮಯ್ಯನ್ನು ಪ್ರೀತಿಯಿಂದ ನೇವರಿಸುತ್ತ, ಭಕ್ತಿಯ ಉದ್ವೇಗದಿಂದ ಕೂಡಿರುವ ಹರಿಶ್ಚಂದ್ರನ ಮಯ್ ಮನವನ್ನು ಸಾಂತ್ವನಗೊಳಿಸಿ ವಸಿಷ್ಠ ಮುನಿಯು ಈ ರೀತಿ ಹೇಳತೊಡಗಿದನು;

ನೀನ್ ಎತ್ತಲ್... ಈ ವಿಪಿನವೆತ್ತಲ್... ಈ ಬನಕೆ ನೀನೇನು ಕಾರಣ ಬಂದೆ. ಎಲೆ

ಮಗನೆ ಹೇಳ್ ಎನಲು=ದಟ್ಟವಾದ ಕಾಡಿನ ನಡುವೆ ಹರಿಶ್ಚಂದ್ರನನ್ನು ನೋಡಿ ಅಚ್ಚರಿಗೊಂಡ ವಸಿಷ್ಠ ಮುನಿಯು "ನಾಡನ್ನಾಳುವ ದೊರೆಯಾದ ನೀನೆಲ್ಲಿ... ಪ್ರಾಣಿಪಕ್ಷಿಗಳಿಂದ ತುಂಬಿರುವ ಈ ಕಾಡೆಲ್ಲಿ... ನೀನು ಇಂತಹ ದಟ್ಟವಾದ ಕಾಡಿಗೆ ಯಾವ ಕಾರಣಕ್ಕಾಗಿ ಬಂದೆ. ಎಲೆ ಮಗನೆ ಹೇಳು" ಎಂದು ಆತಂಕದಿಂದ ಕೇಳುತ್ತಾರೆ; **ಭೂನಾಥನ್ ಎಂದ**=ಆಗ ರಾಜ ಹರಿಶ್ಚಂದ್ರನು ಈ ರೀತಿ ಉತ್ತರಿಸುತ್ತಾನೆ; **ಖಗಮೃಗದ ಕಾಟಕ್ಕೆ ಸೈರಿಸಲಾರದೆ ಅವನೀಜನಮ್ ಹಾನಿವೆತ್ತು ಒರಲಿ ಮೊರೆಯಿಡೆ ಕೇಳ್ದು, ಬೇಂಟೆಯ ಸುಮಾನಕ್ಕೆ ಬಂದೆನ್ ಎಂದೆನೆ**=ಕಾಡಿನ ಪಕ್ಷಿ ಪ್ರಾಣಿಗಳ ಕಾಟವನ್ನು ತಡೆಯಲಾರದೆ ಆಪತ್ತಿಗೆ ಒಳಗಾದ ನನ್ನ ನಾಡಿನ ಪ್ರಜೆಗಳು "ಈ ಸಂಕಟದಿಂದ ತಮ್ಮ ಜೀವವನ್ನು ಉಳಿಸಬೇಕೆಂದು" ಕೂಗಿಕೊಳ್ಳುತ್ತ ನನ್ನ ಬಳಿ ಬಂದು ಮೊರೆಯಿಡಲು... ಅವರ ಮೊರೆಯನ್ನು ಆಲಿಸಿ, ಪ್ರಜೆಗಳನ್ನು ಕಾಪಾಡಿದಂತೆಯೂ ಆಗುತ್ತದೆ... ಬೇಟೆಯ ಕ್ರೀಡೆಯಿಂದ ನನ್ನ ಮಯ್ ಮನಕ್ಕೆ ಆನಂದವೂ ಉಂಟಾಗುತ್ತದೆ ಎಂಬ ಉದ್ದೇಶದಿಂದ ಈ ಕಾಡಿನತ್ತ ಬಂದೆನು ಎಂದು ಹೇಳಲು;

ತ್ರಿಕಾಲೋಚಿತ ಜ್ಞಾನಿ ಮುನಿಯು=ಜಗತ್ತಿನಲ್ಲಿ ಹಿಂದೆ ನಡೆದ–ಇಂದು ನಡೆಯುತ್ತಿರುವ – ಮುಂದಿನ ದಿನಗಳಲ್ಲಿ ನಡೆಯಲಿರುವ ಸಂಗತಿಗಳೆಲ್ಲವನ್ನೂ ಅರಿಯಬಲ್ಲ ಶಕ್ತಿಯುಳ್ಳ ವಸಿಷ್ಠ ಮುನಿಯು; **ಅರಸನ ಮೇಲೆ ಕೌಶಿಕನ ಕಾಟ ಅಡಿಯಿಟ್ಟ ಅನುವನು ಅರಿದನ್**=ರಾಜ ಹರಿಶ್ಚಂದ್ರನ ಜೀವನದಲ್ಲಿ ವಿಶ್ವಾಮಿತ್ರನ ಕಾಟ ಶುರುವಾಗಿರುವ ರೀತಿಯನ್ನು ಬೇಟೆಯ ಪ್ರಸಂಗದಲ್ಲಿ ಗುರುತಿಸಿದನು. ಮುಂದಿನ ದಿನಗಳಲ್ಲಿ ತನ್ನ ಮೆಚ್ಚಿನ ವ್ಯಕ್ತಿಯಾದ ರಾಜ ಹರಿಶ್ಚಂದ್ರನಿಗೆ ವಿಶ್ವಾಮಿತ್ರನಿಂದ ಎಂತಹ ಕೆಡುಕಾಗುವುದೋ ಎಂಬ ಆತಂಕಕ್ಕೆ ಒಳಗಾದ ವಸಿಷ್ಠ ಮುನಿಯು ತನ್ನಲ್ಲಿಯೇ ಈ ರೀತಿ ಆಲೋಚಿಸತೊಡಗುತ್ತಾರೆ;

ವಿಷಮ ವಿಶ್ವಾಮಿತ್ರಮುನಿ ಮುನಿದು ತಪ್ಪ ಸಾಧಿಸುವ=ಕೆಡುಕನೂ ಕ್ರೂರಿಯೂ ಆದ ವಿಶ್ವಾಮಿತ್ರ ಮುನಿಯು ದೇವೇಂದ್ರನ ಒಡ್ಡೋಲಗದಲ್ಲಿ ನನ್ನೊಡನೆ "ಹರಿಶ್ಚಂದ್ರನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇನೆ" ಎಂದು ಪಣಕಟ್ಟಿರುವು ದರಿಂದ, ಈಗ ನಿನ್ನ ಬಗ್ಗೆ ಕುಪಿತನಾಗಿ, ನಿನ್ನಲ್ಲಿ ಒಂದಲ್ಲ ಒಂದು ತಪ್ಪನ್ನು ಹುಡುಕಿ ತೋರಿಸಲು ಪ್ರಯತ್ನಿಸುತ್ತಾನೆ; **ನೀನ್ ಅರಿದಿರ್ ಎಂದು ಅರುಪಬೇಕು**=ಆದ್ದರಿಂದ ನೀನು ಎಚ್ಚರಿಕೆಯಿಂದಿರು ಎಂದು ಹರಿಶ್ಚಂದ್ರನಿಗೆ ಹೇಳಬೇಕು; **ಅರಿಪಿದಡೆ ಪಿಸುಣತ್ವ**=ಈಗ ನಾನು ಆ ರೀತಿ ಹೇಳಿದರೆ, ಅದು ವಿಶ್ವಾಮಿತ್ರನ ಬಗ್ಗೆ ನಾನು ಚಾಡಿ ಹೇಳಿದಂತಾಗುತ್ತದೆ;

ಅರುಪದಿರ್ದಡೆ=ಹರಿಶ್ಚಂದ್ರನಿಗೆ ಈ ಸಂಗತಿಯನ್ನು ತಿಳಿಸದೆ ಸುಮ್ಮನಿದ್ದರೆ; **ನೃಪನ ಕೇಡನ್ ಆನ್ ಓತು ಉಪೇಕ್ಷಿಸಿದಾತನು**=ರಾಜನಿಗೆ ವಿಶ್ವಾಮಿತ್ರ ಮುನಿಯಿಂದ ಉಂಟಾಗಲಿರುವ ಕೇಡನ್ನು ನಾನು ತಿಳಿದಿದ್ದರೂ, ರಾಜನಿಗೆ ಬರಲಿರುವ ದೊಡ್ಡ ಆಪತ್ತನ್ನು ಕಡೆಗಣಿಸಿದಂತಾಗುತ್ತದೆ; **ಗಸಣಿಯಾಯ್ತು ಏಗೆಯ್ವೆನ್ ಎಂದು ಮನದೊಳಗೆ ಚಿಂತಿಸಿ**=ತುಂಬಾ ಇಕ್ಕಟ್ಟಿಗೆ ಸಿಲುಕಿದೆನು. ಈಗ ನಾನೇನು ಮಾಡಲಿ ಎಂದು ವಸಿಷ್ಠ ಮುನಿಯು ಇಬ್ಬಗೆಯ ತೊಳಲಾಟಕ್ಕೆ ಒಳಗಾಗಿ ಮನದಲ್ಲಿ ಪರಿತಪಿಸುತ್ತ; **ಮತ್ತೆ ತನ್ನಲ್ಲಿಯೇ ತೀರ್ಮಾನಿಸುತ್ತಾನೆ**=ಮತ್ತೆ ತನ್ನ ಮನದಲ್ಲಿಯೇ ಒಂದು ತೀರ್ಮಾನವನ್ನು ಕಯ್ಗೊಳ್ಳುತ್ತಾನೆ;

ಮನೆಗೆ ಬಂದ ಶಿಷ್ಯನನು ಬೋಧಿಸಲು ಕುಂದು ಎಸೆಯದಿರದು=ಮನೆಗೆ ಬಂದ ಶಿಷ್ಯನಿಗೆ ತಿಳುವಳಿಕೆಯನ್ನು ಹೇಳುವುದರಲ್ಲಿ ಯಾವ ತಪ್ಪು ಕಂಡು ಬರುವುದಿಲ್ಲ. ಅದು ಸಹಜವಾಗಿ ಗುರುವಾದವನು ಶಿಷ್ಯನಿಗೆ ಹೇಳಲೇಬೇಕಾದ ತಿಳುವಳಿಕೆಯ ನುಡಿಗಳಾಗಿರುತ್ತವೆ; **ಆನ್ ಪೇಳದಂತೆ ಪೇಳ್ದಪೆನ್ ಎಂದು ಆ ಮುನಿನಾಥನು ನೆನೆದನ್**=ವಿಶ್ವಾಮಿತ್ರನ ಕೇಡಿನ ಒಳಸಂಚನ್ನು ನೇರವಾಗಿ ಹೇಳದಿದ್ದರೂ, ವಿಶ್ವಾಮಿತ್ರನ ಬಗ್ಗೆ ಎಚ್ಚರಿಕೆಯಿಂದ ನಡೆದುಕೊಳ್ಳುವಂತೆ ಹೇಳುತ್ತೇನೆ ಎಂದು ವಸಿಷ್ಠ ಮುನಿಯು ನಿಶ್ಚಯಿಸಿಕೊಂಡನು;

ಎನ್ನನ್ ಒಲುವೊಡೆ=ನನ್ನನ್ನು ಪ್ರೀತಿಸುವೆಯಾದರೆ; **ಕುಲಾಚಾರಮಮ್ ಬಿಡದಿರ್ಪಡೆ**=ಸೂರ್ಯಕುಲದ ರಾಜರ ಸಂಪ್ರದಾಯದ ಆಚಾರವಿಚಾರಗಳನ್ನು ಬಿಡದೆ, ನಿಯಮಿತವಾಗಿ ನಡೆಸಿಕೊಂಡು ಬರುತ್ತಿದ್ದರೆ; **ಉನ್ನತಿಕೆ ಬೇಹಡೆ**= ವ್ಯಕ್ತಿತ್ವದ ಹಿರಿಮೆಯನ್ನು ಬಯಸುವೆಯಾದರೆ; **ಉತ್ತಮ ಕೀರ್ತಿ ಕೆಡದಿಹಡೆ**= ಸೂರ್ಯವಂಶದ ರಾಜಮನೆತನಕ್ಕೆ ಬಂದಿರುವ ಉತ್ತಮವಾದ ಕೀರ್ತಿಯು ಕೆಡದಂತಿರಬೇಕಾದರೆ; **ನನ್ನಿ ಉಳಿವಡೆ**=ಸತ್ಯ ಉಳಿಯುವಂತಾಗಬೇಕಾದರೆ; **ಮಗನೆ, ವಿಶ್ವಾಮಿತ್ರನಾಶ್ರಮಕ್ಕೆ ಮರೆದು ಹೋಗದಿರು**=ಮಗನೆ, ವಿಶ್ವಾಮಿತ್ರ ಮುನಿಯ ಆಶ್ರಮದ ಕಡೆಗೆ ಮರೆತಾದರೂ ಹೋಗಬೇಡ; ಯಾವ ಕಾರಣದಿಂದಲೂ ಅತ್ತ ತಲೆಹಾಕಬೇಡ;

ಗನ್ನದಿಮ್ ಮರಹಿಕ್ಕಿ ಕೊಂಡೊಯ್ದು=ವಿಶ್ವಾಮಿತ್ರನು ಕಪಟತನದಿಂದ ನಿನಗೆ ಮರವು ಉಂಟಾಗುವಂತೆ ಮಾಡಿ ಇಲ್ಲವೇ ಮರುಳುಮಾಡಿ ತನ್ನ ಆಶ್ರಮದತ್ತ ಕರೆದುಕೊಂಡುಹೋಗಿ; **ಬಳಿಕ ಮುನಿ ಬನ್ನ ಬಡಿಸಿಯೆ ಕಾಡಿದಪನ್**=ಅನಂತರ ವಿಶ್ವಾಮಿತ್ರ ಮುನಿಯು ನಿನ್ನನ್ನು ಅಪಮಾನಕ್ಕೆ ಗುರಿಮಾಡಿ, ಅನೇಕ ಬಗೆಯ ಸಂಕಟವನ್ನು ತಂದೊಡ್ಡಿ ಪೀಡಿಸುತ್ತಾನೆ; **ಅರಿದಿರು ಎಂದು ಪೇಳ್ದು**=ವಿಶ್ವಾಮಿತ್ರ ಮುನಿಯಿಂದ ನಿನಗೆ ಕೇಡು ಉಂಟಾಗಲಿದೆ ಎಂಬುದನ್ನು ಅರಿತುಕೊಂಡು,

ಅಂತಹ ಕೇಡಿಗೆ ಬಲಿಯಾಗದಂತೆ ಮುನ್ನೆಚ್ಚರಿಕೆಯಿಂದ ಇರು ಎಂದು ವಸಿಷ್ಠ ಮುನಿಯು ರಾಜ ಹರಿಶ್ಚಂದ್ರನಿಗೆ ಹಿತವನ್ನು ನುಡಿದು;

ಇನ್ನೊಂದು ಚೋದ್ಯಮಮ್ ನೋಡು ಬಾ ಎಂದು ವಿರೂಪಾಕ್ಷನೆಡೆಗೆ ತಂದನು=ಇನ್ನೊಂದು ಅಚ್ಚರಿಯನ್ನು ನೋಡು ಬಾ ಎಂದು ಪಂಪಾಕ್ಷೇತ್ರದಲ್ಲಿದ್ದ ವಿರೂಪಾಕ್ಷ ದೇವಾಲಯಕ್ಕೆ ಹರಿಶ್ಚಂದ್ರನನ್ನು ಕರೆದುಕೊಂಡು ಬಂದನು; **ನೋಡಿ ಪರಮಾನಂದ ಮೂಡಿ**=ಹಂಪೆಯ ವಿರೂಪಾಕ್ಷ ದೇವರನ್ನು ನೋಡಿ ಮನದಲ್ಲಿ ಪರಮಾನಂದ ಮೂಡಿ; **ಮನದೊಳು ಸಂತಸದೊಳ್ ಓಲಾಡಿ**=ಮನದಲ್ಲಿ ಅಪಾರವಾದ ಆನಂದದಿಂದ ಓಲಾಡುತ್ತ; **ಪುಳಕ ಸ್ವೇದ ತೊದಳು ಕಂಪನ ಮರವೆಗೂಡಿ**=ಭಕ್ತಿಯ ತನ್ಮಯತೆಯಲ್ಲಿ ಹರಿಶ್ಚಂದ್ರನು ರೋಮಾಂಚಿತನಾಗಿ ಬೆವರುತ್ತ, ಮಾತಿನಲ್ಲಿ ತೊದಲು ಮತ್ತು ಮಯ್ಯಲ್ಲಿ ನಡುಕವುಂಟಾಗಲು, ಕೆಲ ಗಳಿಗೆ ಮಯ್ ಮರೆತವನಾಗಿದ್ದು;

ತನುವಿನ ಎಚ್ಚರಿಂದ ಉಬ್ಬಿ ಹಾರೈಸಿ=ಮರು ಗಳಿಗೆಯಲ್ಲಿಯೇ ಎಚ್ಚರಗೊಂಡು ಆನಂದದಿಂದ ಹಿಗ್ಗುತ್ತ, ಸಕಲರಿಗೂ ಒಳಿತನ್ನು ಬಯಸುತ್ತ; **ಹರುಷದ ಸುಖದಲಿ ಹಾಡಿ**=ಅತ್ಯಾನಂದದಿಂದ ವಿರೂಪಾಕ್ಷನ ಮಹಿಮೆಯನ್ನು ಕೊಂಡಾಡುತ್ತ; **ಸ್ನಪನ**=ದೇವರ ವಿಗ್ರಹದ ಮೇಲೆ ನೀರು, ಹಾಲು, ಜೇನುತುಪ್ಪ ಮುಂತಾದ ದ್ರವಗಳನ್ನು ಎರೆಯುವ ಆಚರಣೆ/ಅಭಿಷೇಕ; **ಯಕ್ಷಕರ್ದಮ**=ಕರ್ಪೂರ, ಕಸ್ತೂರಿ ಮುಂತಾದ ಸುವಾಸನೆಯ ವಸ್ತುಗಳನ್ನು ಅರೆದು ತಯಾರಿಸಿದ ಲೇಪನ; ಗಾಡಿ=ಚೆಲುವು/ಸೊಬಗು/ಅಂದ; **ನಾನಾ ಸ್ನಪನ ಯಕ್ಷ ಕರ್ದಮ ಪುಷ್ಪ ಗಾಡಿ ಪಡೆಯಲು**=ವಿರೂಪಾಕ್ಷ ದೇವರ ವಿಗ್ರಹಕ್ಕೆ ಬಹುಬಗೆಯಲ್ಲಿ ಮಾಡಿದ್ದ ಅಭಿಷೇಕ, ಗಂಧಾಕ್ಷತೆಯ ಲೇಪನ, ಹೂವಿನ ಅಲಂಕಾರಗಳಿಂದ ದೇವರ ವಿಗ್ರಹವು ಚೆಲುವಿನಿಂದ ಕಂಗೊಳಿಸುತ್ತಿರಲು;

ಹರಿಶ್ಚಂದ್ರ ನೃಪನು ಜೋಡಿಯಿಮ್ ಪಂಪಾಂಬಿಕಾಪತಿಯ ಮಹಾರುದ್ರಾಭಿಷೇಚನದ ಪೂಜೆಮಾಡಿದ=ಹರಿಶ್ಚಂದ್ರ ರಾಜನು ತನ್ನ ಹೆಂಡತಿ ಚಂದ್ರಮತಿಯ ಜತೆಗೂಡಿ ಪಂಪಾಂಬಿಕಾಪತಿಯಾದ ವಿರೂಪಾಕ್ಷನಿಗೆ ಮಹಾ ರುದ್ರಾಭಿಷೇಕದ ಪೂಜೆಯನ್ನು ಮಾಡಿದನು; **ಇಂದು ಆನು ಕೃತಕೃತ್ಯನಾದೆನ್**= ಇಂದು ನಾನು ಜೀವನದಲ್ಲಿ ದೊಡ್ಡ ಯಶಸ್ಸನ್ನು ಪಡೆದೆನು; **ಇಂದು ಎನ್ನಯ ಜನ್ಮ ಸಾಫಲ್ಯವಾಯ್ತು**=ಇಂದು ನಾನು ಹುಟ್ಟಿದ್ದು ಸಾರ್ಥಕವಾಯಿತು; ಪಾರದಿ=ಬೇಟೆ; **ಅಖಿಳ ಜಗದ ಅಳಲುರಿಯ ನಂದಿಸುವ ಪಾರದಿಯೆ**=ಸಮಸ್ತ ಜಗತ್ತಿನ ಸಂಕಟದ ಬೆಂಕಿಯನ್ನು ನಂದಿಸುವ ಬೇಟೆಯ ಕ್ರೀಡೆಯೇ, ಅಂದರೆ ನನ್ನ ಪ್ರಜಾ ಸಮುದಾಯಕ್ಕೆ ಕಾಡಿನ ಪ್ರಾಣಿ ಪಕ್ಷಿಗಳಿಂದ ಉಂಟಾಗಿದ್ದ ಆಪತ್ತನ್ನು

ಹೋಗಲಾಡಿಸಲೆಂದು ಬಂದ ಬೇಟೆಯೇ; ವಾರಿಧಿ=ಸಾಗರ/ಸಮುದ್ರ;

ಸಂಸಾರ ವಾರಿಧಿಯನ್ ಉತ್ತರಿಪ ಗುರುಪದವನು ತಂದು ತೋರಿತ್ತಲಾ= ಸಂಸಾರ ಸಾಗರವನ್ನು ದಾಟುವ ಒಳ್ಳೆಯ ಹಾದಿಯನ್ನು ತಂದು ತೋರಿಸಿತಲ್ಲವೇ; **ಶ್ರೀಗುರು ವಿರೂಪಾಕ್ಷ ತಂದೆಯನ್ ಕಾಣಿಸಿತು**=ಶ್ರೀಗುರು ವಿರೂಪಾಕ್ಷ ತಂದೆಯನ್ನು ಕಾಣುವುದಕ್ಕೆ ನೆರವಾಯಿತು; **"ಬಿಟ್ಟಿಯಿಂದ ಕಟಕವ ಕಂಡೆನ್"** ಎಂಬುದು ಜನಸಮುದಾಯದಲ್ಲಿ ಮಾತುಕತೆಯಲ್ಲಿ ಅಂದು ಬಳಕೆಯಲ್ಲಿದ್ದ ಒಂದು ಗಾದೆ. ಈ ಗಾದೆಯ ತಿರುಳು ಏನೆಂದರೆ "ಯಾವುದೇ ಸಾಹಸ, ಪ್ರಯತ್ನ ಇಲ್ಲವೇ ತೊಂದರೆಯಿಲ್ಲದೆ ಬಹು ಸಲೀಸಾಗಿ ರಾಜಧಾನಿಯನ್ನು ನೋಡುವ ಅವಕಾಶ ದೊರೆಯಿತು." ಅಂದರೆ ಅನಾಯಾಸವಾಗಿ ಒಳ್ಳೆಯದನ್ನು ಕಾಣುವ ಮತ್ತು ಪಡೆಯುವ ಭಾಗ್ಯ ಕೂಡಿಬಂದಿತು;

ನಾಡ ಗಾದೆಯ ಬಿಟ್ಟಿಯಿಂದ ಕಟಕವ ಕಂಡೆನ್ ಎಂಬುದು ಎನಗಾಯ್ತು ಎನುತ್ತೆ ಭೂನಾಥನು ಎರಗಿದನ್=ನಾಡಿನ ಜನರಾಡುವ ಗಾದೆ ಮಾತಿನಂತೆ 'ಬಿಟ್ಟಿಯಿಂದ ರಾಜಧಾನಿಯನ್ನು ನೋಡಿದೆನು' ಎಂಬುದು ನನ್ನ ಪಾಲಿಗೆ ಇಂದು ನಿಜವಾಯಿತು. ವಿರೂಪಾಕ್ಷ ದೇವರನ್ನು ಕಣ್ತುಂಬ ನೋಡುವ ಭಾಗ್ಯ ನನಗೆ ಅನಾಯಾಸವಾಗಿ ದೊರೆಯಿತು ಎಂದು ಹೇಳಿಕೊಳ್ಳುತ್ತ, ಹರಿಶ್ಚಂದ್ರನು ವಿರೂಪಾಕ್ಷ ದೇವರಿಗೆ ನಮಿಸಿದನು.

❖

ಪ್ರಸಂಗ–೭

ವಿಶ್ವಾಮಿತ್ರ ಮುನಿಯ ಮಾಯಾ ವರಾಹದ ಬೇಟೆ

ವರಾಹ=ಹಂದಿ; **ಮಾಯಾ ವರಾಹ**=ಹರಿಶ್ಚಂದ್ರನಿಗೆ ಕಾಟವನ್ನು ಕೊಟ್ಟು, ಅವನನ್ನು ಸತ್ಯದ ನಡೆನುಡಿಯಿಂದ ತಪ್ಪಿ ನಡೆಯುವಂತೆ ಮಾಡಬೇಕೆಂಬ ಕೆಟ್ಟ ಉದ್ದೇಶದಿಂದ ವಿಶ್ವಾಮಿತ್ರ ಮುನಿಯು ಹುಟ್ಟುಹಾಕಿರುವ ಹಂದಿ; ಮಕರ=ಮೊಸಳೆ; ಮಕರಧ್ವಜನ್=ಹರಿಶ್ಚಂದ್ರನ ರಾಜ ಲಾಂಛನದ ಬಾವುಟದಲ್ಲಿ ಮೊಸಳೆಯ ಚಿತ್ರವಿತ್ತು; ಭೂಪಾಲ ಮಕರಧ್ವಜನ್= ರಾಜ ಹರಿಶ್ಚಂದ್ರ;

ಭೂಪಾಲ ಮಕರಧ್ವಜನ್ ಗುರುವಸಿಷ್ಠಂಗೆ ಎರಗಿ ನೇಮವಮ್ ಪಡೆದು= ರಾಜ ಹರಿಶ್ಚಂದ್ರನು ಗುರು ವಸಿಷ್ಠನಿಗೆ ನಮಿಸಿ, ಅವರ ಆಶ್ರಮದಿಂದ ತೆರಳಲು ಅನುಮತಿಯನ್ನು ಪಡೆದುಕೊಂಡು; **ಅಖಿಳ ಗುರು ವಿರೂಪಾಕ್ಷಲಿಂಗವನು ಬೀಳ್ಕೊಂಡು**=ಜಗತ್ತಿನ ಗುರುವಾದ ವಿರೂಪಾಕ್ಷಲಿಂಗವಿದ್ದ ಪಂಪಾಕ್ಷೇತ್ರದಿಂದ ಹೊರಟು; **ಭಾಸುರ ವರೂಥವನೇರಿ ತಡೆವೇಂಟೆಗೆ ನಡೆಯೆ**=ಅಂದವಾಗಿ ಸಿದ್ಧಗೊಂಡಿದ್ದ ತೇರನ್ನೇರಿ, ಜನರಿಗೆ ಹಾನಿಯನ್ನುಂಟುಮಾಡುತ್ತಿದ್ದ ಕಾಡುಪ್ರಾಣಿಗಳನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿ ಬೇಟೆಯಾಡಲೆಂದು ಕಾಡಿನತ್ತ ನಡೆಯಲು; **ಪರಿಕರದ ಪರಿವಾರ ಅನುವಾಗಿ ವಿಪಿನದೊಳು ಅತ್ತಲ್ ಹರೆದು ನಡೆಯಲ್ಕೆ**=ರಾಜನ ಸುತ್ತಮುತ್ತ ನೆರೆದಿದ್ದ ಬೇಡ ಪಡೆಯವರು ಸಿದ್ಧರಾಗಿ ರಾಜನ ಜತೆಜತೆಯಲ್ಲಿಯೇ ಕಾಡಿನತ್ತ ಸಾಗುತ್ತಿರಲು; **ಇತ್ತ ಕೌಶಿಕ ಮುನೀಶ್ವರನ್ ಒಂದು**

ಮಾಯಾ ವರಾಹನಮ್ ಮಾಡಿ ಭೂರಮಣನೆಡೆಗೆ ಕಳುಹಿದನು=ಈ ಕಡೆ ವಿಶ್ವಾಮಿತ್ರ ಮುನಿಯು ತನ್ನ ಮಂತ್ರಬಲದಿಂದ ಒಂದು ಹಂದಿಯನ್ನು ರೂಪಿಸಿ ರಾಜನು ಬೇಟೆಯಾಡುತ್ತ ಬರುತ್ತಿರುವ ಕಾಡಿನತ್ತ ಕಳುಹಿಸಿದನು; **ಎಲೆಲೆಲೆಲೆಲೇ... ಹಂದಿ ಅನುವಾದುದು ಉಬುಬುಬು ಎಂದು ಉಲಿದು**=ಎಲೆಲೆಲೆಲೆಲೇ... ಹಂದಿ ಮೇಲೆ ಬಿದ್ದು ತಿವಿಯಲು ಬರಲಿದೆ... ಅದನ್ನು ಕೊಲ್ಲಲು ಸಿದ್ಧರಾಗಿ ಎಂದು ಬೇಡ ಪಡೆಯವರು ಅರಚುತ್ತಾ; **ನಾಯ್ಗಳ್ ಬೆರಸಿ ಮುಕ್ಕುರಿಕ್ಕಲು**=ಬೇಡರು ಬೇಟೆ ನಾಯಿಗಳೊಡನೆ ಹಂದಿಯನ್ನು ಸುತ್ತುವರಿಯಲು; **ಕಾಡೊಳ್ ಅಂದು ರಕ್ಕಸ ಮಿಗಮ್**=ಕಾಡಿನಲ್ಲಿ ಆಗ ದೊಡ್ಡ ಗಾತ್ರದ ಮತ್ತು ಶಕ್ತಿಯುಳ್ಳ ಆ ಮಾಯಾ ಹಂದಿಯು; **ಮೆಲ್ಲನೆ ಒಲೆದು**=ಮೆಲ್ಲಗೆ ತೂಗಾಡುತ್ತ; ಅಂದರೆ ಮಯ್ಯನ್ನು ಅತ್ತಿತ್ತ ಓಲಾಡಿಸುತ್ತ; **ಉಬ್ಬಿ ಪುಟನೆಗೆದು**=ಮೇಲೆದ್ದು ಜಿಗಿದು; **ಗಜರಿ ಗರ್ಜಿಸಿ**=ಬೆದರಿಸುವಂತೆ ದೊಡ್ಡ ದನಿಯಲ್ಲಿ ಗರ್ಜಿಸುತ್ತ; **ಪುಳಿಂದರ ಮೇಲೆ ಬವರಿ ತಿರುಗಿ ಬಲವಂದು ಹೊಯ್ದ ಬೇಗಕ್ಕೆ**=ಬೇಡರ ಮೇಲೆ ನುಗ್ಗಿಬಂದು, ಒಮ್ಮೆ ಅವರ ಸುತ್ತ ಬಳಸಿ ಬಂದು ತಿವಿದ ರಭಸಕ್ಕೆ;

ನಾಳಲ=ತಾವರೆ ಹೂವಿನ ಗಿಡದ ಟೊಳ್ಳಾಗಿರುವ ಕಾಂಡದ ದಂಟು; **ನಾಳಲ ಹೊರೆಗಳಮ್ ಕೊಚ್ಚಿದಂತೆ**=ಟೊಳ್ಳಾದ ದಂಟುಗಳ ಕಂತೆಯನ್ನೇ ಕತ್ತರಿಸಿ ತುಂಡುತುಂಡು ಮಾಡುವಂತೆ; ಕಳವಳಿ=ರಣಬಲಿ; ಕಳವಳಿ ಗೆಯ್=ಯುದ್ಧ ನಡೆಯಲಿರುವ ಭೂಮಿಗೆ ಪ್ರಾಣಿಗಳನ್ನು ಬಲಿಕೊಡುವ ಆಚರಣೆ; **ಬಿರುಮಂದಿ ಎಲ್ಲರ ಒಡಲ ಕಳವಳಿ ಗೆಯ್ದು**=ಗಟ್ಟಿಮುಟ್ಟಾಗಿದ್ದ ದೇಹವನ್ನುಳ್ಳ ಬೇಡ ಪಡೆಯವರೆಲ್ಲರನ್ನೂ ರಣಬಲಿಕೊಟ್ಟಂತೆ ಕೊಚ್ಚಿಹಾಕಿ; **ಬೀದಿವರಿದು ಒಕ್ಕಲಿಕ್ಕಿತ್ತು**=ತನಗೆ ಇಚ್ಚೆಬಂದ ಕಡೆಯಲ್ಲೆಲ್ಲಾ ಅಡ್ಡಾಡಿ ಬೇಡಪಡೆಯನ್ನು ಒಕ್ಕಲಿಕ್ಕಿತು. ಅಂದರೆ ತೆನೆಯನ್ನು ಬಡಿದು ಕಾಳುಗಳನ್ನು ಬೇರ್ಪಡಿಸುವಂತೆ ಬೇಡಪಡೆಯನ್ನು ಸಾವುನೋವಿಗೆ ಗುರಿಮಾಡಿ ಚಲ್ಲಾಪಿಲ್ಲಿಯಾಗಿ ಚದುರುವಂತೆ ಮಾಡಿತು;

ಒರ್ವನ್=ಮಾಯಾ ಹಂದಿಯ ಹೊಡೆತಕ್ಕೆ ಸಿಲುಕಿ ಬದುಕಿ ಉಳಿದಿರುವ ಒಬ್ಬನು; **ಬಿಟ್ಟ ತಲೆ**=ಕೆದರಿದ ತಲೆಗೂದಲು; **ಗಿಡು ಹಿಡಿದು ಕಳೆದ ಉಡುಗೆ**=ಬಿದ್ದಂಬೀಳ ಓಡಿ ಬರುವಾಗ ಗಿಡಗಂಟೆ ಪೊದರಿನ ರೊಂಬೆ ಕೊಂಬೆ ಮುಳ್ಳುಗಳಿಗೆ ಸಿಕ್ಕಿ ಹರಿದಿರುವ ಬಟ್ಟೆ; **ಕಾಡ ಮುಳು ನಟ್ಟು ಕುಂಟುವ ಪದಮ್**=ಕಾಡಿನ ಮರಗಿಡ ಪೊದೆಯ ಮುಳ್ಳುಗಳು ಕಾಲಿಗೆ ಚುಚ್ಚಿಕೊಂಡು ಕುಂಟುತ್ತಿರುವ ಪಾದ; ಮೊಟ್ಟೆ+ಕೂಳ್; ಮೊಟ್ಟೆ=ಬುತ್ತಿ; ಕೂಳ್=ಅನ್ನ/ಆಹಾರ; ಮೊಟ್ಟೆಗೂಳ್=ಉಣಿಸುತಿನಸನ್ನು ಕಟ್ಟಿತಂದಿರುವ ಗಂಟು/ಬುತ್ತಿ; **ಬೆನ್ನ ಬಿಗು ಹಳಿದು ಎಳಲ್ವ ಮೊಟ್ಟೆಗೂಳ್**=ಬೆನ್ನಿಗೆ ಬಿಗಿಯಾಗಿ ಕಟ್ಟಿಕೊಂಡಿದ್ದ ಕುಣಿಕೆಯು

ಸಡಿಲಗೊಂಡು ನೇತಾಡುತ್ತಿರುವ ಬುತ್ತಿಯ ಗಂಟು; **ಎಡಹಿ ಕೆಡೆದು ಒಡೆದ ಮೊಳಕಾಲ್**=ಓಡುತ್ತಿರುವಾಗ ಎಡವಿ ಬಿದ್ದು ಗಾಯಗೊಂಡಿರುವ ಮೊಳಕಾಲು; **ತೇಕುವ ಅಳ್ಳೆಗಳ್ ಬೆರಸು**=ಏದುಸಿರು ಬಿಡುತ್ತಿರುವುದರಿಂದ ಅದುರುತ್ತಿರುವ ಪಕ್ಕೆಗಳಿಂದ ಕೂಡಿದವನಾಗಿ; **ಒರಲುತ ಕೆಟ್ಟೋಡುತಿರಲ್ ಅವನ ಕಂಡು**= ಪ್ರಾಣಭೀತಿಯಿಂದ ಕಿರುಚುತ್ತ ಓಡುತ್ತಿರುವ ಆ ಬೇಡನನ್ನು ಕಂಡು; **ಇದಿರು ಅಡ್ಡಗಟ್ಟಿ ಕೇಳಲು**=ಇದಿರು ಬಂದ ಅವನನ್ನು ತಡೆದು ನಿಲ್ಲಿಸಿ ಈ ಕಡೆಯಿಂದ ಹೋಗುತ್ತಿದ್ದ ಬೇಡಪಡೆಯವರು ಅವನನ್ನು ಕೇಳಲು;

ಹುಹುಹು... ಹುಲಿಯಲ್ಲ ಹಂದಿ ಅರೆಯಟ್ಟಿ ಬರುತಿರ್ದುದು=ಹೆದರಿಕೆಯಿಂದ ಕಂಪಿಸುತ್ತಿರುವ ಆ ಬೇಡನು "ಬರುತ್ತಿರುವುದು ಹುಲಿಯಲ್ಲ... ಹಂದಿಯೊಂದು ಬೇಡರ ಪಡೆಯನ್ನು ಬೆನ್ನಟ್ಟಿ ಬರುತ್ತಿರುವುದು..." **ಎಲ್ಲಿ ತೋರು**=ಅದು ಎಲ್ಲಿದೆ ನಮಗೆ ತೋರು; **ನೀವೇ ಅರಸಿಕೊಂಬುದು ಎಂದ ಹೆದರೆದೆಯ ಬೇಡನನ್ ಬೋಳೈಸಿ**=ನೀವೇ ಹುಡುಕಿಕೊಳ್ಳುವುದು ಎಂದು ಹೇಳಿ ಹೆದರಿಕೆಯಿಂದ ಕಂಪಿಸುತ್ತಿದ್ದ ಬೇಡನನ್ನು ಸಂತಯಿಸಿ; **ನೃಪರೂಪ ಮದನನಲ್ಲಿಗೆ ತಂದು ನುಡಿಸಿ ಕೇಳಲು**=ಕಾಮದೇವನಂತೆ ರೂಪವಂತನಾದ ರಾಜ ಹರಿಶ್ಚಂದ್ರನ ಬಳಿಗೆ ಅವನನ್ನು ಕರೆತಂದು, ರಾಜನ ಮುಂದೆ ಮತ್ತೆ ಆ ಹಂದಿಯ ಬಗ್ಗೆ ವಿಚಾರಿಸಲು; **ಅರಸ, ಪೇಳ್ವ ಕುದಿಹವೇಕೆ**=ಅರಸ, ಆ ಸಂಕಟವನ್ನು ಏನೆಂದು ತಾನೆ ಹೇಳಲಿ; **ಅದು ಇದು ಎನ್ನದೆ ಎಲ್ಲಾ ಕಿರಾತ ಸಂಕುಲದ ಗುರಿ ನೆರೆದುದು**=ಆ ಹಂದಿಯು ಬೇಡಪಡೆಯ ಯಾರನ್ನೂ ಲೆಕ್ಕಿಸದೆ, ಇಡೀ ಕಿರಾತ ಸಮೂಹವನ್ನೇ ಬಲಿತೆಗೆದುಕೊಳ್ಳುವ ಗುರಿಯನ್ನಿಟ್ಟುಕೊಂಡು ಬೆನ್ನಟ್ಟಿಬರುತ್ತಿದೆ;

ಇಂದು ಬೇಗದೊಳು ಹದುಳದಿಂದೆ ಮನ್ನೆಯ ಗಂಡನಾಗು=ಈ ಗಳಿಗೆಯಿಂದಲೇ ಹುರುಪಿನಿಂದ ಕೂಡಿ ನಾಯಕನಾದ ನೀನು ವೀರನಾಗು; **ಏನ್ ಕಾರಣಮ್ ಪೇಳ್**=ನಿನ್ನ ಹೆದರಿಕೆಗೆ ಕಾರಣವೇನೆಂಬುದನ್ನು ಹೇಳು; **ಪೇಳ್ವುದಕೆ ತೆರಹಿಲ್ಲ ಹೋಗು ಎಂದಡೆ**= "ಅದನ್ನೆಲ್ಲಾ ಹೇಳುವುದಕ್ಕೆ ಇದು ಸಮಯವಲ್ಲ. ಮೊದಲು ಹೋಗಿ ಬೇಡರನ್ನು ಕಾಪಾಡು" ಎಂದು ಬೇಡನು ಹೇಳಿದಾಗ; ಅಂದರೆ ಮರುಗಳಿಗೆಯಲ್ಲೇ ಬೇಡ ಪಡೆಗೆ ಗಂಡಾಂತರವಿದೆ. ನಾನು ಹೇಳುವುದನ್ನು ನೀನು ಕೇಳುವಷ್ಟರಲ್ಲಿ ಏನು ಬೇಕಾದರೂ ಆಗಬಹುದು; **ಅವನೀಶನ್ ಅವನನ್ ಜರೆದು ಬೆಸಗೊಂಡನು**=ರಾಜ ಹರಿಶ್ಚಂದ್ರನು ಅವನನ್ನು ಗದರಿಸಿ, ಅದೇನೆಂಬುದನ್ನು ಹೇಳು ಎಂದು ಪ್ರಶ್ನಿಸಿದನು;

ಅರಸ, ಚಿತ್ತೈಸು=ರಾಜನೇ ಹೇಳುತ್ತೇನೆ ಕೇಳು; **ಕಡುಗಲಿ ಹಿರಣ್ಯಾಕ್ಷನೆಂಬ ರಕ್ಕಸನ ಬೆನ್ನ ಅಡಗನ್ ಉಗಿದ ಅಂದಿನ ವರಾಹನೋ**=ಮಹಾವೀರ

ಹಿರಣ್ಯಾಕ್ಷನೆಂಬ ರಕ್ಕಸನ ಬೆನ್ನಿನ ಮಾಂಸವನ್ನು ಹೊರಕ್ಕೆ ತೆಗೆದ ವಿಷ್ಣುವಿನ ಅವತಾರಿಯಾದ ಹಂದಿಯೋ; **ಪುರಹರನ್ ಪೊಡೆಯೆ ತೋಳ್ ಪರಿದ ಭೀಕರ ಗಜಾಸುರನೊ**=ಶಿವನು ಹೊಡೆದಾಗ ಸೊಂಡಿಲು ತುಂಡಾದ ಭಯಂಕರ ಆಕಾರನಾದ ಗಜನೆಂಬ ರಕ್ಕಸನೋ; **ಜಗದ ಅಳಲನ್ ಆರಿಸುವೆನೆಂದು ಕಡುಕೈದು ದುರ್ಗಿ ನಿರ್ಘಾತನಮ್ ಗೆಯ್ಯೆ ಕೋಡು ಉಡಿದ ಮಹಿಷಾಸುರನೊ**=ಜಗತ್ತಿನ ಸಂಕಟವನ್ನು ಪರಿಹರಿಸುವೆನೆಂದು ಶಕ್ತಿಯನ್ನು ಒಗ್ಗೂಡಿಸಿಕೊಂಡು ದುರ್ಗಿಯು ಕತ್ತಿಯಿಂದ ಜೋರಾಗಿ ಹೊಡೆಯಲು ಕೊಂಬು ತುಂಡಾದ ಮಹಿಷನೆಂಬ ರಕ್ಕಸನೋ; **ಎಂದೆಂಬ ಸಂದೇಹಕೆ ಎಡೆಯಾದ**=ಎಂದೆನ್ನುವ ಸಂದೇಹ ಮೂಡುವಂತೆ; ಅಂದರೆ ಇದು ಯಾವುದೋ ಒಂದು ಕಾಡುಹಂದಿಯಲ್ಲ. ಅಸಾಮಾನ್ಯವಾದ ಮಹಿಮೆ ಮತ್ತು ಶಕ್ತಿಯನ್ನುಳ್ಳ ಹಂದಿಯಾಗಿರಬಹುದು ಎಂಬ ಅನುಮಾನವನ್ನು ಹುಟ್ಟಿಸುವಂತೆ; ಎಕ್ಕಲ=ಹಂದಿ; **ಸೊಕ್ಕಿದ ಎಕ್ಕಲನನ್ ಒಂದನ್ ಕಂಡೆನ್**=ಮದಿಸಿದ ಹಂದಿಯೊಂದನ್ನು ಕಂಡೆನು;

ಅಬ್ಬರಿಸಿ ನುಡಿವೆ=ಸಾಮಾನ್ಯವಾದ ಸಂಗತಿಯೊಂದನ್ನೇ ಅತಿಶಯಮಾಡಿ ಹೇಳುತ್ತಿರುವೆ; **ಕಾಡೊಳ್ ಕೊಬ್ಬಿ ಬೆಳೆದ ವರಾಹನ್ ಇರಲಾಗದೇ**=ಕಾಡಿನಲ್ಲಿ ಕೊಬ್ಬಿ ಬೆಳೆದಿರುವ ಹಂದಿಗಳು ಇರುವುದು ಸಹಜವಲ್ಲವೇ; **ಅದರಿಮ್ ಬೇಡವಡೆಗೆ ಬಪ್ಪ ಉಬ್ಬಸವದೇನೊ**=ಕೊಬ್ಬಿ ಬೆಳೆದಿರುವ ಹಂದಿಯೊಂದರಿಂದ ಬೇಡಪಡೆಗೆ ಬರುವ ಆಪತ್ತು ಅದಾವ ಬಗೆಯದು; **ಎಲವೋ, ನೀನು ಓಡಿಹೋಹುದಕೆ ಕಾರಣವಾವುದು**=ಎಲವೋ ಈ ರೀತಿ ನೀನು ಹೆದರಿಕೆಯಿಂದ ನಡುಗುತ್ತ ಓಡಿಹೋಗುತ್ತಿದ್ದುದಕ್ಕೆ ನಿಜವಾದ ಕಾರಣವೇನೆಂಬುದನ್ನು ತಿಳಿಸು;

ನಾನೇಕೆ=ನಾನೇಕೆ ಆ ಹಂದಿಯಿಂದ ಬೇಡ ಪಡೆಗೆ ಎಂತಹ ಆಪತ್ತು ಉಂಟಾಗಿದೆ ಎಂಬುದನ್ನು ಹೇಳಬೇಕು. ಹಂದಿಯ ಆಕ್ರಮಣವೇ ಅದನ್ನು ಹೇಳುತ್ತಿದೆ; **ಉಬ್ಬಿ ಮುಂಗುಡಿವರಿದು ಕಡುಕೈದ ಶಬರರೊಳಗೆ ಒಬ್ಬರುಳಿಯದ ತೆರದಿ ಕೊಂದಿಕ್ಕಿ**=ಅತಿ ವೇಗದಿಂದ ಮುನ್ನುಗ್ಗಿ ಶಕ್ತಿಯುತರಾದ ಬೇಡರಲ್ಲಿ ಒಬ್ಬರನ್ನು ಉಳಿಯಗೊಡದಂತೆ ಕೊಂದು ಉರುಳಿಸಿ; **ನಾಯ್ಗಳಮ್ ಗಬ್ಬವಿಕ್ಕಿಸಿದ ರಕ್ಕಸ ಹಂದಿ ತಾನೆ ಹೇಳಿತ್ತು**=ಬೇಟೆ ನಾಯಿಗಳ ಹೊಟ್ಟೆಯನ್ನು ಬಗೆದು ಕರುಳನ್ನು ಹೊರತೆಗೆದ ರಕ್ಕಸ ಹಂದಿಯ ಆಕ್ರಮಣವೇ ಅದು ಎಷ್ಟು ದೊಡ್ಡದು ಮತ್ತು ಎಂತಹ ಶಕ್ತಿಯನ್ನು ಪಡೆದಿದೆ ಎಂಬುದನ್ನು ಹೇಳುತ್ತಿದೆ; **ಪಡೆ ಎಯ್ದೆ ಮಡಿಯಿತ್ತೆ**= ಅಲ್ಲಿದ್ದ ಬೇಡ ಪಡೆಯು ಇನ್ನಿಲ್ಲದಂತೆ ಸಾವನ್ನಪ್ಪಿತೆ; ಮಡಿಯಿತ್ತು=ಸಾವನ್ನಪ್ಪಿತು; **ನಾಯ್ ಕೂಡೆ ಕೆಡೆದವೇ**=ನಾಯಿಗಳು ಕೂಡ ಕೆಳಕ್ಕೆ ಉರುಳಿದವೆ; ಕೆಡೆದವು= ಉರುಳಿದವು; **ಹಂದಿ ಇರ್ದಪುದೆ**=ನೀನು ಓಡಿಬಂದ ಕಾಡಿನ ಎಡೆಯಲ್ಲಿಯೇ ಆ

ಹಂದಿ ಈಗ ಇರುವುದೇ; **ಅದೆ**=ಅಲ್ಲಿಯೇ ಇದೆ; **ಎಡೆ ಎನಿತು**=ಇಲ್ಲಿಂದ ಎಷ್ಟು ದೂರ; **ಸಾರೆ**=ಹತ್ತಿರದಲ್ಲಿಯೇ ಇದೆ; **ತೋರಿಸಿದಪಾ**=ನನಗೆ ಅದು ಇರುವ ಎಡೆಯನ್ನು ತೋರಿಸುವೆಯಾ; **ತೋರಿದಪೆನ್**=ತೋರಿಸುತ್ತೇನೆ; **ಏಳ್ವೆವೇ**= ಬೇಟೆಗೆ ಹೊರಡೋಣವೇ; **ನಡೆಯಿಮ್ ಎನಲು**=ನಡೆಯಿರಿ ಎಂದು ಆ ಬೇಡನು ರಾಜ ಹರಿಶ್ಚಂದ್ರನಿಗೆ ಹೇಳಲು;

ಕಡುಮುಳಿದು ರಥವನ್ ಉರವಣಿಸಿ ನೂಂಕುವ ಭೂಮಿಯೊಡೆಯಂಗೆ= ಹಂದಿಯಿಂದ ಬೇಡಪಡೆಗೆ ಆದ ಸಾವುನೋವನ್ನು ಕೇಳಿ ಕಡುಕೋಪಗೊಂಡು ತೇರನ್ನು ವೇಗವಾಗಿ ನಡೆಸಲು ಅಣಿಯಾದ ರಾಜ ಹರಿಶ್ಚಂದ್ರನಿಗೆ; **ನಾನಾ ಬೇಡವಡೆ ಒಡೆಯರ್ ಎಯ್ದೆ ಭಾಷೆಯಮ್ ಕೊಟ್ಟು**=ಕಾಡಿನ ವಾಸಿಗಳಾದ ಬೇಡಪಡೆಯ ಬೇರೆ ಬೇರೆ ಗುಂಪಿನವರು ತಾವು ರಾಜನ ಜತೆಯಲ್ಲಿಯೇ ಬೇಟೆಗೆ ಬಂದು ಸಾಹಸದಿಂದ ಮುನ್ನುಗ್ಗುತ್ತೇವೆ ಎಂದು ಮಾತುಕೊಟ್ಟು; ರೊಪ್ಪ=ಪ್ರಾಣಿ ಗಳನ್ನು ಕೂಡಿಹಾಕುವ ನೆಲೆ/ದೊಡ್ಡಿ/ಪ್ರಾಣಿಗಳ ಅಡಗುತಾಣ; **ರೊಪ್ಪಮಮ್ ಮಲಗಿ ದಾಡೆಗಡಿವ ಎಕ್ಕಲನನು ಕಂಡು**=ಗವಿಯಂತಿರುವ ಬಿಲದೊಳಗೆ ಮಲಗಿ ಕೊಂಡು ಕೋರೆಹಲ್ಲುಗಳನ್ನು ಮಸೆಯುತ್ತಿರುವ ಹಂದಿಯನ್ನು ಕಂಡರು; **ಮಸೆದ ದಾಡೆಯ ಕುಡಿಗಳಿಂದ ಕಿಡಿ ಸುರಿಯೆ**=ಮಸೆಯುತ್ತಿರುವ ದಾಡೆಯ ಅಂಚಿನಿಂದ ಬೆಂಕಿಯ ಕಣಗಳಂತಹ ಕಿಡಿ ಹೊರಹೊಮ್ಮುತ್ತಿರಲು; **ಘೂರ್ಮಿಸುವ ಮೂಗಿನಿಂದ ಕರ್ಬೊಗೆ ನೆಗೆಯೆ**=ಗೊರಗೊರಗುಟ್ಟುತ್ತಿರುವ ಮೂಗಿನಿಂದ ಕಪ್ಪನೆಯ ಹೊಗೆಯು ಹಬ್ಬುತ್ತಿರಲು;

ಮುನಿದು ದಿಟ್ಟಿಸುವ ಕೆಂಗಣ್ಣ ಕಡೆಯಿಂದ ದಳ್ಳುರಿ ಸೂಸೆ=ಹಂದಿಯು ತನ್ನತ್ತ ಬರುತ್ತಿರುವ ಬೇಡಪಡೆಯನ್ನು ಕಂಡು ಆಕ್ರೋಶಗೊಂಡು ನೆಟ್ಟನೆಯ ನೋಟದಿಂದ ನೋಡಲು ತೊಡಗಿದಾಗ... ಹಂದಿಯ ಕೆಂಪಾದ ಕಣ್ಣುಗಳಿಂದ ದಗದಗನೆ ಉರಿಯುತ್ತಿರುವ ಬೆಂಕಿಯ ಜ್ವಾಲೆಯು ಹಬ್ಬುತ್ತಿರಲು; ಹಂದಿಯ ಕೋರೆಹಲ್ಲುಗಳಿಂದ ಬೆಂಕಿಯ ಕಿಡಿ ಹೊರಹೊಮ್ಮುತ್ತಿರುವುದು; ಮೂಗಿನಿಂದ ಕಪ್ಪನೆಯ ಹೊಗೆ ಹರಡುತ್ತಿರುವುದು; ಕಣ್ಣುಗಳಿಂದ ದಗದಗನೆ ಹತ್ತಿ ಉರಿಯುತ್ತಿರುವ ಬೆಂಕಿಯ ಜ್ವಾಲೆಯು ರೂಪಕದ ತಿರುಳಿನಲ್ಲಿ ಮಾಯಾ ವರಾಹದ ಆಕ್ರೋಶ ಮತ್ತು ಶಕ್ತಿಯನ್ನು ಸೂಚಿಸುತ್ತವೆ;

ಬಲಿದ ಕೊರಳ್=ಬಲವುಳ್ಳ ದೊಡ್ಡ ಕೊರಳು; **ಒಲೆದ ಮುಸುಡು**=ಅತ್ತಿತ್ತ ತೂಗಾಡುತ್ತಿರುವ ಉದ್ದನೆಯ ಮೂತಿ; **ಕುಸಿದ ತಲೆ**=ಮುನ್ನುಗ್ಗಲು ಹೊಂಚು ಹಾಕುತ್ತ ಬಗ್ಗಿರುವ ತಲೆ; **ನೆಗೆದ ಬೆನ್**=ಎತ್ತರಿಸಿದ ಬೆನ್ನು; **ನಟ್ಟ ರೋಮಾಳಿ**= ಮಯ್ ಮೇಲೆ ನೆಟ್ಟಗೆ ನಿಂತಿರುವ ಉದ್ದನೆಯ ರೋಮಗಳು; **ಮಿಳ್ಳಿಸುವ**

ಬಾಲಮ್=ಅತ್ತಿತ್ತ ಅಲ್ಲಾಡುತ್ತಿರುವ ಬಾಲ; **ರೌದ್ರ ಕೋಪಮಮ್ ಬೀರಿ ಗರ್ಜಿಸಿ**=ಭಯಂಕರವಾದ ಕೋಪವನ್ನು ಕಾರಿ ಅಬ್ಬರಿಸುತ್ತ; **ಬೀದಿವರಿದು ಲುಬ್ಧಕರನು ತೊತ್ತಳದುಳಿದು ಕೊಂದು ಕೂಗಿಡಿಸಿತ್ತು**=ಅತ್ತಿತ್ತ ರಭಸದಿಂದ ಅಡ್ಡಾಡಿ ಬೇಡರನ್ನು ನುಗ್ಗುನುರಿಯಾಗುವಂತೆ ತಿವಿದು ತುಳಿದು ಕೊಂದುಹಾಕಿತು; **ಇದ್ದ ಬೇಟರನ್ ಎಯ್ದೆ ಕೆಡಹಿದಡೆ**=ಅಲ್ಲಿದ್ದ ಬೇಟೆಗಾರರನ್ನು ಸಂಪೂರ್ಣವಾಗಿ ಕೆಳಕ್ಕೆ ಉರುಳಿಸಿದಾಗ;

ರಥದ ಮೇಲಿದ್ದು, ಕೋಪಾಟೋಪದಿಂದ ಕರತಳವ ಮಾರುದ್ದಿ=ತೇರಿನಲ್ಲಿ ಕುಳಿತಿದ್ದ ರಾಜ ಹರಿಶ್ಚಂದ್ರನು ತನ್ನ ಕಣ್ಣ ಮುಂದೆಯೇ ಹಂದಿಯ ಆಕ್ರಮಣದಿಂದ ಬೇಡೆ ಪಡೆ ನಾಶವಾಗುತ್ತಿರುವುದನ್ನು ಕಂಡು, ತೀವ್ರವಾದ ಕೋಪೋದ್ರೇಕದಿಂದ ತನ್ನ ಅಂಗಯ್‍ಗಳನ್ನು ಪರಸ್ಪರ ಉಜ್ಜಿಕೊಂಡು; **ಕೋದಂಡಮಮ್ ಸೆಳೆದು=ಬಿಲ್ಲನ್ನು ಜಗ್ಗಿಸುತ್ತ; ಶರಮೂಡಿಗೆಯ ಮಡಲಿರಿದು**=ಬತ್ತಳಿಕೆಯಲ್ಲಿರುವ ಬಾಣಗಳನ್ನು ಒಗ್ಗೂಡಿಸಿಕೊಂಡು; **ಕೈಹೊಡೆಯನು ತಿದ್ದಿ**=ಬಿಲ್ಲುಗಾರನು ಕಯ್ಗ್ಗಳಿಗೆ ಹಾಕಿಕೊಳ್ಳುವ ತೊಗಲಿನ ಪಟ್ಟಿಯನ್ನು ಸರಿಪಡಿಸಿಕೊಂಡು; ನಾರಿ=ಬಿಲ್ಲಿಗೆ ಕಟ್ಟಿರುವ ಹುರಿ; **ನಾರಿಯ ನೀವಿ ಮಿಡಿದು**=ಬಿಲ್ಲಿಗೆ ಕಟ್ಟಿರುವ ಹುರಿಯನ್ನು ಕಯ್ ಬೆರಳಿನಿಂದ ಒಮ್ಮೆ ಮೆಲ್ಲನೆ ಸವರಿ, ಉಗುರ ಮೊನೆಯಿಂದ ಮೀಟಿ; **ಬಾಗಿದ ಕೊಪ್ಪಿನ ಇದ್ದೆಸೆಯನ್ ಆರಯ್ದು**=ಬಾಗಿರುವ ಬಿಲ್ಲಿನ ಎರಡು ತುದಿಗಳಲ್ಲಿ ಕಟ್ಟಿರುವ ಹುರಿಯನ್ನು ಮತ್ತೊಮ್ಮೆ ನೋಡಿಕೊಂಡು;

ಮೃತ್ಯುದೇವತೆಗೆ ನೆರೆ ಬಿದ್ದನ್ ಇಕ್ಕುವೆನ್ ಎಂದು ಭೂವಲ್ಲಭನ್ ನುಡಿಯೆ=ಸಾವಿನ ದೇವತೆಯು ತಣಿಯುವಂತೆ ದೊಡ್ಡ ಊಟವನ್ನು ಬಡಿಸುತ್ತೇನೆ ಎಂದು ರಾಜ ಹರಿಶ್ಚಂದ್ರನು ನುಡಿಯಲು; **ದಿಗುಪಾಲರ್ ಅಳವಳಿದರು**=ದಿಕ್ಕುಗಳನ್ನು ಕಾಯುವ ದೇವತೆಗಳು ಮುಂದೆ ಏನಾಗುವುದೋ ಎಂಬ ಅಂಜಿಕೆಯಿಂದ ಶಕ್ತಿಗುಂದಿದರು; **ಗರಳ ಕೊರಳವನ್**=ಶಿವ; **ಅರಳ ಸರಳವನ್**=ಮನ್ಮಥ; **ಗರಳ ಕೊರಳವನ್ ಅರಳ ಸರಳಂಗೆ ಮುನಿವಂತೆ**=ಶಿವನು ಮನ್ಮಥನಿಗೆ ಕೋಪಗೊಳ್ಳುವಂತೆ; **ಇರುಳ ತಿರುಳಿನ ಹೊರಳಿಗೆ ಆ ತರಣಿ ಕೆರಳ್ವಂತೆ**=ರಾತ್ರಿ ದಟ್ಟವಾದ ಕತ್ತಲ ರಾಶಿಗೆ ಆ ಸೂರ್ಯನು ಕೆರಳುವಂತೆ; **ಸರಳ ತೆರಳಿಕೆಗೆ ಕರುಳ ಸುರುಳಿಯೊಳು ಹೊರಳುತ ಬೀಳುತ್ತಲು ಮರಳಿತು**=ಹರಿಶ್ಚಂದ್ರನು ಒಂದೇ ಸಮನೆ ಬಿಟ್ಟ ಬಾಣಗಳ ಪೆಟ್ಟಿಗೆ ಸಿಲುಕಿ, ಹೊರಬಂದ ಒಂದಕ್ಕೊಂದು ಸುತ್ತಿಕೊಂಡಿರುವ ಕರುಳ ಗಂಟಿನೊಡನೆ ಹೊರಳುತ್ತ ಬೀಳುತ್ತ ಹಂದಿಯು ಹಿಮ್ಮೆಟ್ಟತೊಡಗಿತು; **ಸರಳ್ ಉರ್ಚೆ ಹುರುಳ್ ಅಳಿದುದು**=ಬಾಣಗಳು ಮಯ್ ತುಂಬಾ ನಾಟಿಕೊಳ್ಳುತ್ತಿದ್ದಂತೆಯೇ ಮಾಯಾ ವರಾಹನ ಶಕ್ತಿ ಉಡುಗಿತು; **ಉರವೊಡೆದು ನರಳುತ್ತ ನರಳುತ್ತ**=ಎದೆಯೊಡೆದು ನರಳುತ್ತ ನರಳುತ್ತ; **ತೊರಳೆ ಅಡಸಲು**=ಮಯ್ ಒಳಗಿನ ತೊಳ್ಳೆ ಬಿಗಿಯಾಗಿ ಒತ್ತಿ ಹಾನಿಗೊಳ್ಳಲು;

ಮೂಗನ್ ಅರಳಿಸಿ=ಏದುಸಿರಿನ ಕಾರಣದಿಂದ ಮೂಗಿನ ಹೊಳ್ಳೆಗಳನ್ನು ಅಗಲಿಸುತ್ತ; **ಎಚ್ಚ ಅಂಬ ಹೊತ್ತು**=ಮಯ್ ಮೇಲಿ ನಾಟಿಕೊಂಡಿರುವ ಬಾಣಗಳನ್ನು ಹೊತ್ತುಕೊಂಡು; **ಉರುಳ್ವ ಕಂಬನಿಯಿಂದ**=ಕಣ್ಣೀರನ್ನು ಹಾಕುತ್ತ; **ತರಳ ಚಿತ್ತದ ಹಂದಿ ಮರಳಿ ಕಾನನಕೆ ಎಯ್ದಿತು**=ಜೀವ ಭಯದಿಂದ ನಡುಗುತ್ತಿರುವ ಮಾಯಾ ಹಂದಿಯು ತನ್ನನ್ನು ರೂಪಿಸಿ ಕಳುಹಿಸಿದ್ದ ವಿಶ್ವಾಮಿತ್ರ ಮುನಿಯು ಇದ್ದ ಕಾಡಿಗೆ ಮರಳಿತು.

❖

ಪ್ರಸಂಗ–೮

ಹರಿಶ್ಚಂದ್ರನಿಗೆ ಬಿದ್ದ ಕನಸು

ಬಳಿಚಿದ ಅಂಬಿಮ್=ಹರಿಶ್ಚಂದ್ರನು ಬಿಟ್ಟ ಬಾಣಕ್ಕೆ ಬಲಿಯಾಗದೆ ತಪ್ಪಿಸಿಕೊಂಡು; **ಮುಂದೆ ಹರಿದು**=ಕಾಡಿನ ಮತ್ತೊಂದು ಕಡೆಯಲ್ಲಿ ಓಡುತ್ತ; **ವನದೊಳಗೆ ಅಡಗಿ ಮಾಯವಾದ ಎಕ್ಕಲನನ್ ಬಳಿವಿಡಿದು**=ಕಾಡಿನಲ್ಲಿ ಅಡಗಿ ಕಣ್ಮರೆಯಾದ ಹಂದಿಯನ್ನು ಹಿಂಬಾಲಿಸುತ್ತ; **ಅಲ್ಲಲ್ಲಿ ಸುಳಿದು ಅರಸಿ ಕಾಣದೆ**=ಕಾಡಿನ ಎಲ್ಲೆಡೆಯಲ್ಲಿಯೂ ಸುತ್ತಾಡಿ ಹುಡುಕಿದರೂ ಪೆಟ್ಟುಬಿದ್ದು ಪಾರಾದ ಹಂದಿಯನ್ನು ಕಾಣದೆ; **ಮನಮ್ ನೊಂದು**=ಬೇಡರ ಪಡೆಯಲ್ಲಿ ಬಹುತೇಕ ಮಂದಿಯ ಸಾವು ನೋವಿಗೆ ಕಾರಣವಾಗಿದ್ದ ದೊಡ್ಡ ಹಂದಿಯನ್ನು ಕೊಲ್ಲಲಾಗಲಿಲ್ಲವೆಂಬ ಸಂಕಟದಿಂದ ಮನದಲ್ಲಿ ಕೊರಗುತ್ತ; **ಧೃತಿ ಅಡಗಿ**=ಕೆಚ್ಚು ಕುಗ್ಗಿ; **ದಗೆ ತೋರಿ**=ಸೆಕೆಯುಂಟಾಗಿ; **ಕಟ್ಟಾಸರು ಮೊಳೆತು ಬಾಯಾರಿ**=ತುಂಬಾ ಬಳಲಿಕೆಯುಂಟಾಗಿ ಬಾಯಾರುತ್ತ; **ತನು ಬೆಮರಿ**=ಮಯ್ ಬೆವರಿ; **ಮುಖ ಬಾಡಿ**=ಮೊಗದ ಕಳೆಗುಂದಿ; **ರವಿ ಕುಲಶಿರೋಮಣಿ ಹರಿಶ್ಚಂದ್ರರಾಯನ್ ಅಳವಿಯೊಳು**=ಸೂರ್ಯವಂಶದ ಹೆಸರಾಂತ ರಾಜನಾದ ಹರಿಶ್ಚಂದ್ರನು ಹತ್ತಿರದಲ್ಲಿಯೇ;

ನಾನಾ ವಿಶೇಷ ವಿಭವಮ್ ಪಡೆದ ಮಂಗಳ ತಪೋವನವನು ಕಂಡನ್=ಬಹುಬಗೆಯ ಚೆಲುವು ಮತ್ತು ಮಹತ್ವದಿಂದ ಕೂಡಿದ್ದ ಮಂಗಳಕರವಾದ ತಪೋವನವನ್ನು ಕಂಡನು; **ಕಂದಮೂಲಮ್ ಕೀಳ್ವ**=ಗೆಡ್ಡೆಗೆಣಸುಗಳನ್ನು

ಕೇಳುತ್ತಿರುವ; **ಪೂ ಕೊಯ್ವ**=ಹೂವನ್ನು ಕೊಯ್ಯುತ್ತಿರುವ; **ಕೃಷ್ಣಾಜಿನಮ್ ತಳೆವ**=ಜಿಂಕೆಯ ಚರ್ಮವನ್ನು ಉಡುಗೆಯಾಗಿ ಉಟ್ಟುಕೊಳ್ಳುತ್ತಿರುವ; **ರುದ್ರಾಕ್ಷೆ ಕೋವ**=ರುದ್ರಾಕ್ಷಿ ಕಾಯಿಗಳನ್ನು ಮಣಿಗಳನ್ನಾಗಿಸಿಕೊಂಡು ಸರವಾಗಿ ಪೋಣಿಸುತ್ತಿರುವ; **ವಲ್ಕಲ ವಸನ ವೃಂದವಮ್ ತೊಳೆವ**=ನಾರುಬಟ್ಟೆಗಳನ್ನು ತೊಳೆದು ಮಡಿ ಮಾಡುತ್ತಿರುವ; **ಮಿಸುಪ ಆ ದಾರಮಮ್ ಬಿಗಿವ**=ಹೊಳೆ ಹೊಳೆಯುವ ದಾರಗಳನ್ನು ಬಿಗಿದು ಸರಿಪಡಿಸುತ್ತಿರುವ; **ಮೌಂಜಿ ಮೇಖಲೆ ಕಟ್ಟುವ**=ಉಡುದಾರವನ್ನು ಸೊಂಟಕ್ಕೆ ಬಿಗಿದು ಕಟ್ಟಿಕೊಳ್ಳುತ್ತಿರುವ; **ಒಂದಿ ಭಸಿತವನ್ ಇಡುವ**=ಹಣೆಗೆ ಹೊಂದಿಕೊಳ್ಳುವಂತೆ ವಿಭೂತಿಯನ್ನು ಇಟ್ಟುಕೊಳ್ಳುತ್ತಿರುವ; **ಯಜ್ಞೋಪವೀತಮಮ್ ಬಂಧಿಸುವ**=ಜನಿವಾರವನ್ನು ತೊಡುತ್ತಿರುವ;

ಜಡೆಯ ಸುಂಕಿಡಿವ=ಜಡೆಯನ್ನು ಸುರುಳಿಮಾಡಿ ತಲೆಯ ಮೇಲೆ ಎತ್ತಿ ಕಟ್ಟುತ್ತಿರುವ; **ಸಮಿತಮ್ ತಪ್ಪ**=ಯಾಗದ ಬೆಂಕಿಯ ಕುಂಡದಲ್ಲಿ ಉರಿಸಲೆಂದು ಅತ್ತಿ, ಅರಳೆ ಮುಂತಾದ ಮರಗಳ ಸಣ್ಣ ಸಣ್ಣ ಕಡ್ಡಿಗಳನ್ನು ಆಯ್ದು ತರುತ್ತಿರುವ; **ಹೆಂದದ ಮುನೀಶ್ವರ ಕುಮಾರರಮ್ ಕಂಡು ಹರಿಶ್ಚಂದ್ರನು ಕೈಮುಗಿದನ್**= ಉತ್ಸಾಹ ಕಡಿಮೆಯಾಗದೆ ಇನ್ನೂ ಹೆಚ್ಚಿನ ಸಡಗರದಿಂದ ಮಂಗಳಕಾರ್ಯಗಳಲ್ಲಿ ಮಗ್ನರಾಗಿರುವ ಆಶ್ರಮದ ವಟುಗಳನ್ನು ನೋಡಿ ಹರಿಶ್ಚಂದ್ರನು ಅವರಿಗೆ ಕಯ್ ಮುಗಿದನು; **ವಿದಿತವೆನೆ ವೇದಘೋಷದ**=ಸುಪ್ರಸಿದ್ಧವಾದ ವೇದ ಮಂತ್ರಗಳ ಎತ್ತರದ ದನಿಯ ಉಚ್ಚಾರಣೆ; **ಪುರಾಣ ಪ್ರಸಂಗದ**=ಪುರಾಣ ಪ್ರಸಂಗಗಳ ಓದು; **ತರ್ಕ ತಂತ್ರ ಸಂವಾದ**=ತರ್ಕಶಾಸ್ತ್ರದಲ್ಲಿನ ವಿಚಾರಗಳನ್ನು ಒರೆಹಚ್ಚಿ ನೋಡಿ, ಅವನ್ನು ಆಚರಿಸುವುದರ ಬಗೆಗಿನ ಸಂಗತಿಗಳ ಬಗ್ಗೆ ಮಾತುಕತೆ;

ಆಗಮ ವಿಚಾರದ=ದೇವ ಪೂಜೆಯ ವಿಧಾನಗಳನ್ನು ತಿಳಿಸುವ ಶಾಸ್ತ್ರದ ಸಂಗತಿಗಳ ಪ್ರಸ್ತಾಪ; **ಸತ್ ಉಪನಿಷತ್ ಅರ್ಥಶ್ರವಣದ**=ಒಳ್ಳೆಯ ಅರಿವನ್ನು ನೀಡುವ ಉಪನಿಷತ್ತಿನ ತಿರುಳನ್ನು ಕೇಳಿ ತಿಳಿದುಕೊಳ್ಳುವ; **ಸ್ತೋತ್ರ ಸ್ತವ ಪಠನ ಪ್ರಕರದ**=ಸ್ತೋತ್ರದಲ್ಲಿರುವ ಸಂಗತಿಗಳನ್ನು ಗುಣಗಾನ ಮಾಡುತ್ತ ಓದುತ್ತಿರುವ ಸಮೂಹದ; **ಕಾವ್ಯಲಕ್ಷಣ ಮೃದು ಆಲಾಪದ**=ಕಾವ್ಯದಲ್ಲಿ ಕಲಾತ್ಮಕವಾಗಿ ರಚನೆ ಗೊಂಡಿರುವ ಪದರಚನೆ, ವಾಕ್ಯರಚನೆ, ತಿರುಳಿನ ರಚನೆ ಮತ್ತು ವ್ಯಂಗೋಕ್ತಿಗಳ ಸೊಗಸನ್ನು ಕುರಿತ ಮಾತುಕತೆಯ; **ಶಿವಾರ್ಚನಾ ಅಂಗದ ಘಂಟಿಕಾ ರವದ**=ಶಿವ ಪೂಜೆಯ ಸಮಯದಲ್ಲಿ ಹೊಡೆಯುತ್ತಿರುವ ಗಂಟೆಯ ನಿನಾದದ; **ನಿತ್ಯ ಹೋಮ ಸ್ವಧಾಂತ್ಯದ ಶ್ರವಣ ಸಂಭ್ರಮಕೆ**=ನಿತ್ಯವೂ ನಡೆಯುವ ಹೋಮದ ಆಚರಣೆಯಲ್ಲಿ ಯಾಗಕುಂಡದ ಬೆಂಕಿಗೆ ಹವಿಸ್ಸನ್ನು ಅರ್ಪಿಸಿ ಮಾಡುವ ಪೂಜೆಯ ಕೊನೆಯ ಹಂತದಲ್ಲಿ ಮಂಗಳಕರವಾದ ಮಂತ್ರಗಳ ಉಚ್ಚಾರಣೆಯನ್ನು ಕೇಳುವ ಸಡಗರ ತುಂಬಿದ ಆನಂದಕ್ಕೆ;

ಹರಿಶ್ಚಂದ್ರ ಭೂನಾಥನು ಬೆರಗಾಗುತಿರ್ದನು=ರಾಜ ಹರಿಶ್ಚಂದ್ರನು ಅಚ್ಚರಿಯಿಂದ ತಪೋವನದ ಆಚರಣೆಗಳೆಲ್ಲವನ್ನೂ ಗಮನಿಸತೊಡಗಿದನು; **ಫಳಭಾರದಿಂದ ಒಲೆದು ತೂಗಿ ಬಾಗುವ ಮರಂಗಳ ಕೆಳಗೆ**=ರೆಂಬೆಕೊಂಬೆಗಳಲ್ಲಿ ಹಣ್ಣುಕಾಯಿಗಳಿಂದ ತುಂಬಿ ತೊನೆದಾಡುತ್ತ ತೂಗಿ ಬಾಗುತ್ತಿರುವ ಮರಗಳ ಕೆಳಗೆ; **ತುರುಗಿ ನಳನಳಿಸಿ ಬೆಳೆದ ಎಳ ಲತೆಯ ತಳಿರ**=ಒತ್ತೊತ್ತಾಗಿ ಕೋಮಲವಾಗಿ ಬೆಳದಿರುವ ಎಳೆಯ ಬಳ್ಳಿಗಳ ಚಿಗುರಿನ; **ತಿಳಿಗೊಳನ ಪುಳಿನ ಸ್ಥಳದ ಕಮಲ ಕೈರವದ ತನಿಗಂಪು ಬೆರಸಿ ಸುಳಿವ ತಣ್ಣೆಲರ ತಂಪಮ್ ಮಂತ್ರಿ ಕಂಡು**=ತಿಳಿಗೊಳನ ಮರಳದಂಡೆಯ ಕಡೆಯಿಂದ ಬಿಳಿಯ ತಾವರೆ ಹೂವಿನ ಕಂಪಿನಿಂದ ಒಡಗೂಡಿ ಹಿತಕರವಾಗಿ ಬೀಸುತ್ತಿರುವ ತಣ್ಣನೆಯ ಗಾಳಿಯ ತಂಪಾದ ಜಾಗವನ್ನು ಮಂತ್ರಿಯು ಕಂಡು; **ಭೂತಳನಾಥ ಬಿಡುವಡೆ ಇದು ಠಾವು ಎಂದು ಬಿನ್ನೈಸೆ**= ರಾಜನೇ, ಈಗ ತಂಗುವುದಕ್ಕೆ ಇದು ಸರಿಯಾದ ಜಾಗ ಎಂದು ಮಂತ್ರಿಯು ಅರಿಕೆ ಮಾಡಿಕೊಳ್ಳಲು;

ಅಂದು ಜಲಜಸಖಕುಲನ್ ಪಟ್ಟದಂಗನೆ ಕುಮಾರ ಸಹಿತ ರಥಮಮ್ ಇಳಿದನ್=ಆಗ ಸೂರ್ಯವಂಶದ ರಾಜನಾದ ಹರಿಶ್ಚಂದ್ರನು ಪಟ್ಟದ ರಾಣಿ ಚಂದ್ರಮತಿ ಮತ್ತು ಮಗ ಲೋಹಿತಾಶ್ವನೊಡನೆ ತೇರಿನಿಂದ ಇಳಿದನು; **ಪ್ರಧಾನ ಬಳವಳಿದ ರಥ ತುರಗ ವೃಂದಮಮ್ ಬಿಟ್ಟು**=ಮಂತ್ರಿಯು ಬಳಲಿದ್ದ ಕುದುರೆಗಳನ್ನು ತೇರಿನಿಂದ ಬಿಚ್ಚಿ; **ಶೀತಳ ವಾರಿಯಮ್ ತೋರಿ ಮೆಯ್ದೊಳೆದು**= ತಣ್ಣನೆಯ ನೀರಿಗೆ ಬಿಟ್ಟು, ಕುದುರೆಗಳ ಮಯ್ಯನ್ನು ತೊಳೆದು, **ಲಲಿತ ಶಾಡ್ವಳವನ್ ಒಲವಿಮ್ ಕೊಯ್ದು ಮುಂದಿಟ್ಟು ಕಟ್ಟಿ**=ಕೋಮಲವಾದ ಎಳೆಯ ಚಿಗುರು ಹುಲ್ಲನ್ನು ಕೊಯ್ದು ತಂದು ಕುದುರೆಗಳ ಮುಂದಿಟ್ಟು, ಅವನ್ನು ಒಂದೆಡೆ ಕಟ್ಟಿ; **ಬಳಿವಿಡಿದು ಬಂದ ಕಟಕವನ್ ನಟ್ಟಡವಿಯೊಳಗೆ ಎಯ್ದೆ ಬಿಡಿಸಿ**=ರಾಜನನ್ನು ಹಿಂಬಾಲಿಸಿಕೊಂಡು ಬಂದಿರುವ ಸೇನೆಯನ್ನು ಕಾಡಿನ ನಡುವೆ ಸರಿಯಾದ ಜಾಗವೊಂದರಲ್ಲಿ ತಂಗುವಂತೆ ಮಾಡಿ;

ಭೂತಳಪತಿಗೆ ಕೈಗೊಟ್ಟು ನಿರ್ಮಳ ಸರೋವರದೊಳ್ ಇಳುಪಿ=ರಾಜನ ಕಯ್ಯನ್ನು ಹಿಡಿದುಕೊಂಡು ಶುಚಿಯಾದ ನೀರಿನಿಂದ ಕೂಡಿದ ಸರೋವರ ದೊಳಕ್ಕೆ ಇಳಿಸಿ; **ಡಗೆ ತೊಲಗಿ**=ಸೆಕೆಯನ್ನು ಹೋಗಲಾಡಿಸಿ; **ವಿಶ್ರಮಿಸಲು ಶಿಶಿರೋಪಚಾರಂಗಳಮ್ ಮಾಡಿದನ್**=ರಾಜ ಹರಿಶ್ಚಂದ್ರನು ವಿಶ್ರಾಂತಿಯನ್ನು ತೆಗೆದುಕೊಳ್ಳಲು ಅಗತ್ಯವಾದ ತಂಪನ್ನುಂಟುಮಾಡುವ ಉಪಚಾರಗಳನ್ನು ಮಾಡಿದನು; **ಘನಪುಣ್ಯಮಯ ಎನಿಪ್ಪ ಈ ತಪೋವನದೊಳಿಹ ಮುನಿ ಆವನೋ ಮಹಾದೇವನೇ ಬಲ್ಲನ್**=ಎಲ್ಲ ರೀತಿಯಿಂದಲೂ ಮಂಗಳಕರವೆನಿಸವಂತಹ ಈ

ಆಶ್ರಮದಲ್ಲಿರುವ ಮುನಿಯು ಯಾರಾಗಿರಬಹುದು... ದೇವರಾದ ಆ ಮಹಾದೇವನೇ ಬಲ್ಲ; **ಆತನ ಶಾಂತಿಯಿಂದ ಶಶಿ**=ಮುನಿಯ ಶಾಂತಚಿತ್ತದ ನಡೆನುಡಿಯಿಂದ ಚಂದ್ರ; **ಚಾರಿತ್ರದಿಮ್ ಗಂಗೆ**=ಒಳ್ಳೆಯ ವ್ಯಕ್ತಿತ್ವದಿಂದ ಗಂಗೆ; **ವರ ತಪಸ್ತೇಜದಿಂದ ದಿನಕರನ್**=ಅತ್ಯುತ್ತಮವಾದ ತಪಸ್ಸಿನ ಮಹಿಮೆಯಿಂದ ಸೂರ್ಯ; **ಸುಳಿವಿಂದ ತಂಗಾಳಿ**=ಮುನಿಯ ಸಂಚಾರದಿಂದ ತಣ್ಣನೆಯ ಗಾಳಿ; **ನುಡಿಯ ಮೋಹನದಿಂದ ಸುಧೆ**=ಮುನಿಯ ಒಲವು ನಲಿವಿನ ನುಡಿಯ ಮೋಡಿಯಿಂದ ಅಮೃತ;

ಉದಾರತ್ವದಿಮ್ ಸುರಕುಜಮ್ ಜನಿಸದೆ ಇರವು ಎಂದು ಮಂತ್ರಿಯೊಡನೆ ಆ ಹರಿಶ್ಚಂದ್ರನ್ ಕೊಂಡಾಡುತಿರ್ದನ್=ಮುನಿಯ ನ್ಯಾಯಸಮ್ಮತವಾದ ಮತ್ತು ತ್ಯಾಗಶೀಲವಾದ ನಡೆನುಡಿಯಿಂದ ದೇವಲೋಕದ ಅಮರಾವತಿಯ ಉದ್ಯಾನ ದಲ್ಲಿರುವ ಕಲ್ಪವೃಕ್ಷ ಹುಟ್ಟದೇ ಇರವು ಎಂದು ಅತಿಶಯವಾದ ನುಡಿಗಳಿಂದ ಮಂತ್ರಿಯೊಡನೆ ರಾಜ ಹರಿಶ್ಚಂದ್ರನು ಮುನಿಯನ್ನು ಕೊಂಡಾಡುತ್ತಿದ್ದನು; **ಹೊಗಳುತ್ತ ಹಾರಯಿಸುತ ಉಬ್ಬುತ್ತ ಕೊಬ್ಬುತ್ತ ನಗುತ ನಲಿಯುತ್ತ ಹಾಡುತ್ತ ಆಡುತ ಆನಂದ ಒಗೆಯುತಿರಲ್ ಒಬ್ಬ ಮುನಿಯನ್ ಕಂಡು**=ಈ ರೀತಿ ಆ ಆಶ್ರಮದಲ್ಲಿ ಇರಬಹುದಾದ ದೊಡ್ಡ ವ್ಯಕ್ತಿತ್ವವುಳ್ಳ ಮುನಿಯನ್ನು ಹೊಗಳುತ್ತ, ಆ ಮುನಿಗೆ ಒಳಿತನ್ನು ಬಯಸುತ್ತ, ಅತಿಯಾದ ಹೆಮ್ಮೆಯಿಂದ ಹಿಗ್ಗಿ ಮೆರೆಯುತ್ತ, ನಕ್ಕು ನಲಿದು ಹಾಡಿ ಆನಂದದಿಂದ ಓಲಾಡುತ್ತಿದ್ದ ಸಮಯದಲ್ಲಿ ರಾಜ ಹರಿಶ್ಚಂದ್ರನು ಆಶ್ರಮವಾಸಿಯಾಗಿದ್ದ ಒಬ್ಬ ಮುನಿಯನ್ನು ಕಂಡು; **ಇದು ಅವನ ಆಶ್ರಮ ಎಂದು ಬೆಸಗೊಂಡಡೆ**=ಇದು ಯಾರ ಆಶ್ರಮ ಎಂದು ವಿಚಾರಿಸಲು;

ವಿಗಡ ವಿಶ್ವಾಮಿತ್ರಮುನಿಯ ಬನ ಎನೆ=ಇದು ಮಹಿಮೆವೆತ್ತ ವಿಶ್ವಾಮಿತ್ರ ಮುನಿಯ ಆಶ್ರಮವಿರುವ ಕಾಡು ಎನ್ನಲು; **ಸುಖಮ್ ಸುಗಿದು**=ಆನಂದದ ಒಳಮಿಡಿತಗಳು ಉಡುಗಿ; **ಪೊಯ್ವಡೆದಂತೆ**=ದೊಡ್ಡ ಹೊಡೆತವನ್ನು ತಿಂದಂತೆ; **ಹಾವು ಅಗಿದು ಬಿಟ್ಟಂತೆ**=ಹಾವು ಕಚ್ಚಿ ಬಿಟ್ಟಂತೆ; **ಬಗೆ ಬೆದರಿ**=ರಾಜ ಹರಿಶ್ಚಂದ್ರನ ಮನಸ್ಸು ಅಂಜಿಕೆಯಿಂದ ತತ್ತರಿಸಿಹೋಗಿ; **ಗುರುವಾಜ್ಞೆ ಅಳಿದುದು. ಇನ್ನೇವೆನ್ ಎಂದನು ಹರಿಶ್ಚಂದ್ರನೃಪನು**="ವಿಶ್ವಾಮಿತ್ರನ ಆಶ್ರಮದತ್ತ ಮರೆತಾದರೂ ಹೋಗಬೇಡ" ಎಂದು ಹೇಳಿದ್ದ ಗುರುವಿನ ಮಾತಿಗೆ ತಪ್ಪಿ ನಡೆದನು. ಈಗ ಇನ್ನೇನು ಮಾಡಲಿ ಎಂದು ರಾಜ ಹರಿಶ್ಚಂದ್ರನು ಕಂಗಾಲಾದನು; **ಹೊಳೆವ ಮೇರುವ ಸುತ್ತಿ ಬೆಂಡಾದ ರವಿ ಚಂದ್ರ ಕಳೆಯ ತೊಡೆ ಎಡೆಯೊಳ್ ಒಯ್ಯನೆ ಮಲಗುವಂತೆ**=ಹೊಳೆಯುತ್ತಿರುವ ಚಿನ್ನದ ಪರ್ವತವೆಂದು ಹೆಸರಾಂತ ಮೇರುವನ್ನು ಸುತ್ತಿ ಆಯಾಸಗೊಂಡ ಸೂರ್ಯನು ಚಂದ್ರಕಾಂತಿಯ ತೊಡೆಯ ಜಾಗದಲ್ಲಿ ಕೂಡಲೇ ಮಲಗುವಂತೆ;

ರವಿ ಕುಲಲಲಾಮನ್=ಸೂರ್ಯವಂಶದ ಉತ್ತಮರಾಜನಾದ ಹರಿಶ್ಚಂದ್ರನು; **ವರಾಹನ ಹಿಂದೆ ಹತ್ತಿದ ಆಸರ**=ಹಂದಿಯನ್ನು ಬೆನ್ನಟ್ಟಿ ಬಂದ ಬಳಲಿಕೆ; **ಮೇಲೆ ಗುರುವಾಜ್ಞೆಯ ಕಳೆದ**=ಬಳಲಿಕೆಯ ಜತೆಜತೆಗೆ ಗುರು ವಸಿಷ್ಠರ ಹಿತನುಡಿಯನ್ನು ಕಡೆಗಣಿಸಿದ ತಪ್ಪಿನ ನಡೆ; **ಕೌಶಿಕನ ಆಶ್ರಮಮ್ ಪೊಕ್ಕ ಚಿಂತೆಯಿಮ್ ಮುಳುಗುತ್ತ**=ವಿಶ್ವಾಮಿತ್ರ ಮುನಿಯ ಆಶ್ರಮವನ್ನು ಹೊಕ್ಕ ಚಿಂತೆಯಲ್ಲಿ ಮುಳುಗಿದ ಹರಿಶ್ಚಂದ್ರನು; **ಆಗಳು ನಿಜಸತಿಯ ತೋರ ತೊಡೆಗಳ ಮೇಲೆ**=ಆಗ ತನ್ನ ಹೆಂಡತಿ ಚಂದ್ರಮತಿಯ ದೊಡ್ಡದಾದ ತೊಡೆಗಳ ಮೇಲೆ; **ಲಲಿತ ಮಣಿಮಕುಟ ಮಂಡಿತ ಮಸ್ತಕವನಿಕ್ಕಿ ಮಗ್ಗುಲಿಕ್ಕಿದನ್**=ಮನೋಹರವಾದ ಮಣಿಗಳಿಂದ ಕೂಡಿದ ಕಿರೀಟ ಸಹಿತವಾದ ತನ್ನ ತಲೆಯನ್ನಿಟ್ಟು, ಒಂದು ಪಕ್ಕಕ್ಕೆ ಹೊರಳಿ ಮಲಗಿಕೊಂಡನು; **ಸತಿ ಮಡಿಸಿ ನೀಡುವ ಎಲೆವಿಡಿದ ಕೈ**=ಚಂದ್ರಮತಿಯು ವೀಳೆಯದ ಎಲೆಯಲ್ಲಿ ಅಡಕೆಯನ್ನಿಟ್ಟು ಸುಣ್ಣವನ್ನು ಬಳಿದು, ಎಲೆಯನ್ನು ಮಡಿಸಿ ನೀಡುತ್ತಿರುವ ಕಯ್;

ಬಸವಳಿವುತ ಅತಿಚಿಂತೆಯೊಳು ಮರೆದ ತನು=ತೀವ್ರವಾದ ಆಯಾಸ ಮತ್ತು ಅತಿಚಿಂತೆಯಲ್ಲಿ ಎಲ್ಲವನ್ನು ಮರೆತಿರುವ ದೇಹ; **ಜೊಮ್ಮುವಿಡದ ಪುರ್ಬು ಅತಿಭಾರಮಾಗಿ ಕಣ್ ಮುಚ್ಚಿ**=ಮಂಪರು ಕವಿದು ಹುಬ್ಬು ಗಂಟಿಕ್ಕಿ ಅತಿಭಾರವಾದಂತಾಗಿ ಕಣ್ಣುಗಳನ್ನು ಮುಚ್ಚಿ; **ತೋಳ್ ತೊಡೆ ಮಿಡುಕೆ**=ತೋಳು ತೊಡೆಗಳು ಕಂಪಿಸಲು; **ಸುಯ್ ಸೂಸೆ**=ಆಯಾಸ ಮತ್ತು ಚಿಂತೆಯಿಂದ ನಿಟ್ಟುಸಿರು ಹೊರಹೊಮ್ಮುತ್ತಿರಲು; **ನಿದ್ರೆ ಕವಿದು ವಿತತ ಸುಖದಿಂದ ಇರುತಿರಲ್ಕೆ**=ನಿದ್ರೆಯು ಆವರಿಸಿ ಚೆನ್ನಾಗಿ ಸುಖ ನಿದ್ರೆಯಲ್ಲಿ ಮುಳುಗಿರಲು; **ನಾನಾ ದುಃಖಯುತವಪ್ಪುದೊಂದು ಕನಸಮ್ ಕಂಡು ನೊಂದು**=ಬಹುಬಗೆಯ ಸಂಕಟಗಳಿಂದ ಕೂಡಿದ ಕನಸನ್ನು ಕಂಡು ನೊಂದು; **ಭೂಪತಿ ಬೆದರಿದಂತೆ ಭೋಂಕೆನಲ್ ಎದ್ದು ಬೆಬ್ಬಳಿಸಿ ನಾಲ್ದೆಸೆಯನ್ ಆರಯ್ದನು**=ರಾಜನು ಹೆದರಿಕೊಂಡು ದಿಡೀರೆನೆ ಮೇಲಕ್ಕೆದ್ದು ಗಾಬರಿಯಿಂದ ನಾಲ್ಕು ದಿಕ್ಕುಗಳನ್ನು ನೋಡತೊಡಗಿದನು;

ದುರದೊಳ್ ಅರಿ ಭೂಭುಜರನ್ ಅಂಜಿಸುವ ನಡುಗಿಸುವ ಕೊರಗಿಸುವ ಕೋಡಿಸುವ ಬಳುಕಿಸುವ ಜಳಕಿಸುವ ಬಿರುದಂಕಮಲ್ಲ ನೀ ನಡುಗಲೇತಕ್ಕೆ ಹೇಳ್ ಎಂದು ಮೆಲ್ಲನೆ ನುಡಿಸಲು=ರಣರಂಗದಲ್ಲಿ ಹಗೆಗಳಾದ ರಾಜರನ್ನು ಅಂಜಿಸುವ, ನಡುಗಿಸುವ, ಕೊರಗಿಸುವ, ಬೆದರಿಸುವ, ತರತರನೆ ಕಂಪಿಸುವಂತೆ ಮಾಡುವ ಬಿರುದಾಂಕಿತ ವೀರನೇ, ನೀನು ಈ ರೀತಿ ನಡುಗುತ್ತಿರುವುದೇಕೆ ಹೇಳು ಎಂದು ಚಂದ್ರಮತಿಯು ಮೆಲುನುಡಿಯಿಂದ ಕೇಳಲು; **ತರುಣಿ ಕೇಳ್, ಒಂದು ಕನಸಮ್ ಕಂಡೆನ್**=ಚಂದ್ರಮತಿಯೇ ಕೇಳು. ಈಗ ಒಂದು ಕನಸನ್ನು ಕಂಡೆನು; **ಆ ಕನಸು ನಿರುತವೆಂದೇ ಕಣ್ಣ ತೆರೆದೆ**=ಆ ಕನಸು ನಿಜವೆಂದೇ ತಿಳಿದು ಗಾಬರಿಗೊಂಡು

ಕಣ್ಣನ್ನು ತೆರೆದೆ; **ನೀನ್ ಇಂತು ಇದರ ಪರಿಯಮ್ ವಿಚಾರಿಸು ಎಂದು ಅವನೀಶ ನುಡಿಯಲು ಆ ನುಡಿಗೆ ಸತಿ ಹೂಂಕೊಂಡಳು**=ನಾನು ಈಗ ಕನಸಿನಲ್ಲಿ ಕಂಡ ನೋಟವನ್ನು ನಿನಗೆ ಹೇಳುತ್ತೇನೆ. ಅದು ಏನನ್ನು ಸೂಚಿಸುತ್ತದೆ ಮತ್ತು ಅದರ ಪರಿಣಾಮಗಳೇನು ಎಂಬುದನ್ನು ಚಿಂತಿಸು ಎಂದು ರಾಜ ಹರಿಶ್ಚಂದ್ರನು ಹೇಳಲು, ಗಂಡನ ಮಾತಿಗೆ ಸತಿಯು ಆಗಲಿ ಎಂದಳು;

ಘುಡಿಘುಡಿಸುತ ಒಬ್ಬ ಮುನಿ ಬಂದು=ಕೋಪೋದ್ರೇಕದಿಂದ ಅಬ್ಬರಿಸಿ ಕೂಗುತ್ತ ಒಬ್ಬ ಮುನಿಯು ಅರಮನೆಗೆ ಬಂದು; **ನಾನ್ ಓಲಗಮ್ ಕೊಡುವ ಮಣಿಮಂಟಪದ ಕಂಭವೆಲ್ಲವನು ತಡೆಗಡಿದು**=ನಾನು ಒಡ್ಡೋಲಗವನ್ನು ನಡೆಸುತ್ತಿದ್ದ ರತ್ನಗಳಿಂದ ಕೂಡಿದ ಮಂಟಪದ ಕಂಬಗಳೆಲ್ಲವನ್ನೂ ಕೊಚ್ಚಿಹಾಕಿ; **ಹೊಂಗಳಸಂಗಳಮ್ ಮಾಣದೆ ಒಡೆಬಡಿದು**=ಹೊನ್ನಿನ ಕಳಸವನ್ನು ಬಿಡದೆ ನೆಲಕ್ಕೆ ಉರುಳುವಂತೆ ಒಡೆದುಹಾಕಿ; **ನೆರೆದ ಸಭೆಯೊಳಗೆ ಎನ್ನನು ಕೆಡಹಿ**=ಒಡ್ಡೋಲಗದ ಸಿಂಹಾಸನದಲ್ಲಿ ಕುಳಿತಿದ್ದ ನನ್ನನ್ನು ಕೆಳಕ್ಕೆ ಎಳೆದು ಬೀಳಿಸಿ; **ಸಿಂಹಾಸನವನ್ ಒಯ್ವಾಗಳ್**=ಸಿಂಹಾಸನವನ್ನು ಮುನಿಯು ಹೊತ್ತೊಯ್ಯುವಾಗ; **ಎನ್ನ ಎದೆಯನ್ ಅಡರ್ದು ಒಂದು ಕಾಗೆ ಕರೆದುದು**=ನನ್ನ ಎದೆಯ ಮೇಲೆ ಒಂದು ಕಾಗೆ ಬಂದು ಕುಳಿತು 'ಕಾ ಕಾ...' ಎಂದು ಅರಚತೊಡಗಿತು; **ಬಳಿಕ್ಕ ಆನ್ ಗಿರಿಯನ್ ಅಡರ್ದು**=ಅನಂತರ ನಾನು ಒಂದು ಬೆಟ್ಟವನ್ನು ಏರಿ;

ಶಿಖರದೊಳ್ ಎಸೆವ ಮಣಿಗೃಹಮ್ ಪೊಕ್ಕೆನ್=ಬೆಟ್ಟದ ತುದಿಯಲ್ಲಿ ಕಂಗೊಳಿಸುತ್ತಿದ್ದ ರತ್ನಗಳಿಂದ ಮಾಡಿದ್ದ ಮನೆಯೊಂದನ್ನು ಹೊಕ್ಕೆನು; **ಇದರ ಅಂತಸ್ಥವೇನು**=ಈ ಕನಸು ಏನನ್ನು ಸೂಚಿಸುತ್ತಿದೆ; ಮುಂದಿನ ನಮ್ಮ ಬದುಕಿನಲ್ಲಿ ನಡೆಯಲಿರುವ ಯಾವ ಬಗೆಯ ಒಳಿತು ಕೆಡುಕಿಗೆ ಇದು ಮುನ್ಸೂಚನೆಯಾಗಿದೆ ಎಂದು ಹರಿಶ್ಚಂದ್ರನು ಚಂದ್ರಮತಿಯನ್ನು ಕೇಳಿದನು; **ಅವನೀಶ ಬಗೆವಡೆ ಈ ಕನಸು ಗುರುವಾಜ್ಞೆಯಮ್ ಮೀರಿತಕ್ಕೆ ಒಗೆವ ಕೇಡಿಂಗೆ ಸೂಚನೆ**=ರಾಜ... ಚಿಂತಿಸಿ ನೋಡಿದರೆ ಈ ಕನಸು ನೀನು ಗುರು ವಸಿಷ್ಠರ ಎಚ್ಚರಿಕೆಯ **'ವಿಶ್ವಾಮಿತ್ರ ಮುನಿಯ ಆಶ್ರಮದತ್ತ ಹೋಗಬೇಡ'** ಎಂಬುದನ್ನು ಮೀರಿದ್ದಕ್ಕೆ ಉಂಟಾಗಲಿರುವ ಕೇಡಿಗೆ ಮುನ್ ಸೂಚನೆಯಾಗಿದೆ; **ಮುನಿಯಬೇಡ**=ಇಂತಹ ತಪ್ಪು ನಿನ್ನಿಂದ ಆಗಿರುವುದಕ್ಕಾಗಿ ನಿನ್ನ ಬಗ್ಗೆ ನೀನೇ ಬೇಸರಪಟ್ಟುಕೊಳ್ಳಬೇಡ ಇಲ್ಲವೇ ಎದೆಗುಂದಬೇಡ;

ಮಂತ್ರಿಗೆ... ಮಗಂಗೆ... ಎನಗೆ... ರಾಜ್ಯಕ್ಕೆ... ಚತುರಂಗಸೇನೆಗೆ... ಸಕಲ ಭಂಡಾರಕೆ... ನಗರಕ್ಕೆ... ಸರ್ವಪರಿವಾರಕ್ಕೆ... ತೇಜದ ಏಳ್ಗೆಗೆ... ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿ=ಗುರುವಿನ ಹಿತನುಡಿಯನ್ನು ಮರೆತು ನಡೆದುಕೊಂಡ ತಪ್ಪಿನಿಂದಾಗಿ ಮಂತ್ರಿಗೆ, ನಮ್ಮ ಮಗನಿಗೆ, ನನಗೆ, ರಾಜ್ಯಕ್ಕೆ, ಚತುರಂಗಸೇನೆಗೆ,

ಸಕಲ ಸಂಪತ್ತಿಗೆ, ಅಯೋಧ್ಯಾ ನಗರಕ್ಕೆ, ನಮ್ಮ ಸಕಲ ಪ್ರಜೆಗಳಿಗೆ, ನಿನ್ನ ತೇಜಸ್ಸಿನ ಏಳಿಗೆಗೆ, ಕಟ್ಟಕಡೆಯದಾಗಿ ನಿನ್ನ ಪ್ರಾಣಕ್ಕೆ ಕೇಡು ಬಂದರೆ ಬರಲಿ; **ಮಿಗೆ ಸತ್ಯವಮ್ ಬಿಟ್ಟು ಕೆಡದಿರ್**=ಎಲ್ಲಕ್ಕಿಂತ ಹೆಚ್ಚಾಗಿ ಸತ್ಯದ ನಡೆನುಡಿಯನ್ನು ಬಿಟ್ಟು, ನಿನ್ನ ವ್ಯಕ್ತಿತ್ವಕ್ಕೆ ಕುಂದನ್ನು ತಂದು ಕೊಳ್ಳದಿರು; **ಕೈಮುಗಿದು ಬೇಡಿದೆನ್**=ನಿನ್ನಲ್ಲಿ ಇದೊಂದನ್ನು ನಡೆಸಿಕೊಡ ಬೇಕೆಂದು ಕಯ್ ಮುಗಿದು ಬೇಡಿಕೊಳ್ಳುತ್ತಿದ್ದೇನೆ. ನನ್ನ ಪಾಲಿಗೆ ನಿನ್ನ ಪ್ರಾಣಕ್ಕಿಂತಲೂ **"ರಾಜ ಹರಿಶ್ಚಂದ್ರನು ಸತ್ಯವಂತನೆಂಬ ವ್ಯಕ್ತಿತ್ವ ದೊಡ್ಡದು"**. ಅದನ್ನು ಎಂದೆಂದಿಗೂ ಉಳಿಸಿಕೊಳ್ಳುವುದು ಎಂದಳು;

ತಪೋವನವ ಕಾಣುತ್ತ ಕಡೆಗಣಿಸಿ ಬಿಡೆ ಪೋದಡೆ ಕೇಳ್ದು, ಮುನಿವನ್= ರಾಜನಿಗೆ ಮಂತ್ರಿಯು ಸಲಹೆಯೊಂದನ್ನು ನೀಡುತ್ತಾನೆ. ವಿಶ್ವಾಮಿತ್ರ ಮುನಿಯ ಆಶ್ರಮವನ್ನು ನೋಡಿದರೂ ನೋಡದಂತೆ ಕಡೆಗಣಿಸಿ, ನಾವು ಇಲ್ಲಿಂದ ಹೋದರೆ, ಆ ಸುದ್ದಿಯನ್ನು ಕೇಳಿ ವಿಶ್ವಾಮಿತ್ರ ಮುನಿಯು ನಿನ್ನ ಬಗ್ಗೆ ಕೋಪ ಗೊಳ್ಳುತ್ತಾನೆ; **ಅಲ್ಲದೆ ಇಂದಿನ ಹಗಲ ಕಡೆತನಕ ನೋಡಿದೆವು**=ಅದರ ಜತೆಗೆ ಇಂದು ಬೆಳಗ್ಗೆಯಿಂದ ಇರುಳಿನ ತನಕ ಮಾಯ ವರಾಹದ ಬೇಟೆಯಾಟದಲ್ಲಿ ನಮಗೆ ತಿಳಿಯದಂತೆ ವಿಶ್ವಾಮಿತ್ರ ಮುನಿಯ ಆಶ್ರಮಕ್ಕೆ ಬಂದೆವು. ಇಲ್ಲಿಗೆ ಬರಬೇಕೆಂಬ ಉದ್ದೇಶ ನಮಗಿಲ್ಲದಿದ್ದರೂ ಇದು ನಡೆದುಹೋಗಿದೆ;

ಕೌಶಿಕಮುನೀಶ್ವರಂಗೆ ಅರಸ ವಂದಿಸಿದನೆಂದು ನುಡಿದು ನಡೆಗೊಂಬವು= ಆಶ್ರಮದೊಳಕ್ಕೆ ಹೋಗಿ **"ವಿಶ್ವಾಮಿತ್ರ ಮುನೀಶ್ವರರಿಗೆ ರಾಜ ಹರಿಶ್ಚಂದ್ರನು ನಮಿಸುತ್ತಿದ್ದಾನೆ"** ಎಂದು ನಮ್ರತೆಯಿಂದ ನುಡಿದು ಮುಂದೆ ಸಾಗೋಣ; **ಏಳು ಏಳು ಎಂದು ಮಂತ್ರಿ ತನ್ನೊಡೆಯಂಗೆ ಬುದ್ಧಿ ಪೇಳ್ದು ಎಬ್ಬಿಸುತ್ತಿರಲ್**=ಕೆಟ್ಟ ಕನಸಿನ ಹೆದರಿಕೆಯಲ್ಲಿಯೇ ಕಂಗಾಲಾಗಿದ್ದ ರಾಜ ಹರಿಶ್ಚಂದ್ರನ ಮನದಲ್ಲಿ ಮಂತ್ರಿಯು ಕೆಚ್ಚನ್ನು ತುಂಬಿ, ಮುಂದೆ ಏನು ಮಾಡಬೇಕೆಂಬ ಬುದ್ಧಿಯನ್ನು ಹೇಳಿ, ಚಂದ್ರಮತಿಯ ಬಳಿಯಲ್ಲಿ ಕುಳಿತಿದ್ದ ರಾಜನನ್ನು ಮೇಲಕ್ಕೆ ಎಬ್ಬಿಸುತ್ತಿರಲು; **ಪೊಡವೀಶನನ್ ತಂದ ಹಂದಿ**=ಭೂಮಂಡಲದ ಒಡೆಯನಾದ ಹರಿಶ್ಚಂದ್ರನನ್ನು ವಿಶ್ವಾಮಿತ್ರನ ಆಶ್ರಮದತ್ತ ಎಳೆತಂದ ಮಾಯಾ ಹಂದಿಯು; **ಅತ್ತ ಕೌಶಿಕನ ಅನುಷ್ಠಾನದ ಎಡೆಗೆ ಹರಿಯಿತ್ತು**=ಅತ್ತ ವಿಶ್ವಾಮಿತ್ರನ ಯಾಗಶಾಲೆಯ ಜಾಗಕ್ಕೆ ಓಡಿಬಂದಿತು;

❖

ಪ್ರಸಂಗ–೯

ಗಾಣ ರಾಣಿಯರ ಪ್ರಸಂಗ

ಮಾಯಾ ವರಾಹವು ಹರಿಶ್ಚಂದ್ರನ ಬಾಣಗಳ ಪೆಟ್ಟಿಗೆ ಸಿಲುಕಿ ಸಾಯದೆ ಪಾರಾಗಿ ವಿಶ್ವಾಮಿತ್ರ ಮುನಿಯ ಆಶ್ರಮದ ಕಡೆಗೆ ಬಿದ್ದಂಬೀಳ ಓಡೋಡಿ ಬರುತ್ತಿರುವಾಗ, ಅದರ ಮಯ್ಯಲ್ಲಿ ಉಂಟಾಗುತ್ತಿದ್ದ ಚಹರೆಗಳನ್ನು ಇಲ್ಲಿ ಚಿತ್ರಿಸಲಾಗಿದೆ; **ನಿಡುಸರದೊಳ್ ಇಳಿವ ಉಸುರು**=ದೊಡ್ಡದಾದ ಅರಚುವಿಕೆಯೊಡನೆ ಹೊರಬೀಳುತ್ತಿರುವ ಉಸಿರು; **ಹೊಯ್ ಅಳ್ಳೆ**=ಎರಡು ಪಕ್ಕೆಗಳು ಏರಿಳಿದು ಹೊಡೆದುಕೊಳ್ಳುತ್ತಿವೆ; **ಡೆಂಡಣಿಸುವ ಅಡಿ**=ನಡುಗುತ್ತಿರುವ ಕಾಲುಗಳು; **ಹನಿವ ಬೆಮರು**=ಸುರಿಯುತ್ತಿರುವ ಬೆವರು; **ಮರುಮೊನೆಗಂಡ ಬಾಣಂಗಳ ಎಡೆಯಿಂದ ಸುರಿವ ಬಿಸಿನೆತ್ತರ್**=ಹಂದಿಯ ಮಯ್ಯನ್ನು ಒಂದೆಡೆಯಲ್ಲಿ ಹೊಕ್ಕು ಮತ್ತೊಂದು ಎಡೆಯಲ್ಲಿ ಕಾಣಿಸಿಕೊಂಡಿರುವ ಬಾಣಗಳ ಮೊನೆಯಲ್ಲಿ ಒಂದೇ ಸಮನೆ ತೊಟ್ಟಿಕ್ಕಿತ್ತಿರುವ ಬಿಸಿ ರಕ್ತ; **ಏರುಗಳ ವೇದನೆಗೆ ಆಱದೆ ಅರೆಮುಚ್ಚುವ ಕಡೆಗಣ್ಗಳ್**=ಬಾಣಗಳ ನಾಟುವಿಕೆಯಿಂದ ಆಗಿರುವ ಗಾಯಗಳ ನೋವನ್ನು ತಡೆಯಲಾರದೆ ಅರೆಮುಚ್ಚಿರುವ ಕಣ್ಣುಗಳು;

ಅರಳ್ವ ನಾಸಾಪುಟಮ್=ಅಗಲವಾಗಿರುವ ಮೂಗಿನ ಹೊಳ್ಳೆಗಳು; **ಬಲಿದ ನೊರೆಯಿಡುವ ಕಟವಾಯ್**=ಬಾಯಿಯ ಎರಡು ಕಡೆಯ ಅಂಚಿನಿಂದ ಹೆಚ್ಚಾಗಿ ಸುರಿಯುತ್ತಿರುವ ಬಿಳಿಯ ನೊರೆ; **ಕುಸಿದ ತಲೆ**=ಬಾಗಿದ ತಲೆ; **ಸುಗಿದ ದರ್ಪ**=

ಅಡಗಿದ ಸೊಕ್ಕು/ಕುಗ್ಗಿರುವ ಬಲ; **ಹುರಿಯೊಡೆದ ರೋಮಮ್**=ನೆತ್ತರಿನಿಂದ ತೊಯ್ದು ಒಂದಕ್ಕೊಂದು ಅಂಟಿಕೊಂಡಿರುವ ರೋಮಗಳು; **ತೂಗಿ ತೊನೆದು ಮೆಯ್ ಮರೆವ ಹಂದಿಯನು ಕೌಶಿಕ ಕಂಡನು**=ಅತ್ತಿತ್ತ ತೂರಾಡಿ ಮಯ್ ಮೇಲಣ ಹತೋಟಿಯನ್ನು ಕಳೆದುಕೊಂಡು ತನ್ನ ಆಶ್ರಮದ ಬಳಿಗೆ ಬರುತ್ತಿರುವ ಹಂದಿಯನ್ನು ವಿಶ್ವಾಮಿತ್ರ ಮುನಿಯು ಕಂಡನು; **ಹಂದಿಯಮ್ ಕಾಣುಹ ತಡಮ್ ಕೋಪಗಿಚ್ಚು ಭುಗಿಲೆಂದು**=ಹಂದಿಯನ್ನು ನೋಡುತ್ತಿದ್ದಂತೆಯೇ ವಿಶ್ವಾಮಿತ್ರನ ಮನದಲ್ಲಿ ಕೋಪದ ಕಿಚ್ಚು ಭುಗಿಲ್ ಎಂದು ಹತ್ತಿಕೊಂಡು ಉರಿಯತೊಡಗಿತು. ಅಂದರೆ ಅವನ ಮಯ್ ಮನ ಕೋಪೋದ್ರೇಕಕ್ಕೆ ಒಳಗಾಯಿತು; **ಜಪ ಜಾರಿ**= ಜಪಿಸುತ್ತಿದ್ದ ಮಂತ್ರಗಳು ಮರೆತುಹೋಗಿ; **ತಪ ತಗ್ಗಿ**=ತಪಸ್ಸಿನ ಏಕಾಗ್ರತೆಯು ಅಳಿದು; **ಮತಿ ಗತವಾಗಿ**=ವಿವೇಕವು ಲಯವಾಗಿ;

ಸಂದ ಯೋಗಮ್ ಹಿಂಗಿ=ಯೋಗ ಸಾಧನೆಯಿಂದ ಪಡೆದಿದ್ದ ಮನೋಶಕ್ತಿಯು ಹಿಂಗಿಹೋಗಿ; **ದಯೆ ದಾಂಟಿ**=ಕರುಣೆಯ ಮನಸ್ಸು ಇಲ್ಲವಾಗಿ; **ನೀತಿ ಬೀತು**=ನೀತಿಯ ನಡೆನುಡಿಗಳು ನಾಶವಾಗಿ; **ಆನಂದ ಅರತು ಹೋಗಿ**= ಆನಂದವು ಒಣಗಿಹೋಗಿ ಅಂದರೆ ಇಲ್ಲವಾಗಿ; **ಹಿಂದ ನೆನೆದು ಉರಿದೆದ್ದು**= ಹರಿಶ್ಚಂದ್ರನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇನೆ ಎಂಬ ತನ್ನ ಪಣವನ್ನು ನೆನೆಸಿಕೊಂಡು ಕೋಪೋದ್ರೇಕದಿಂದ ಮೇಲೆದ್ದು; **ಸಿಕ್ಕಿದನಲಾ ಭೂಪನ್**= ನಾನೊಡ್ಡಿದ ಬಲೆಯಲ್ಲಿ ರಾಜ ಹರಿಶ್ಚಂದ್ರನು ಸಿಕ್ಕಿಬಿದ್ದಿದ್ದಾನೆ; **ಇಂದು ನಾನಾಯ್ತು ತಾನಾಯ್ತು**=ಇಂದು ನಾವಿಬ್ಬರು ಮಾತ್ರ ಪರಸ್ಪರ ಎದುರಾಗಿದ್ದೇವೆ. ಈಗ ಅವನಿಗೆ ಮತ್ತಾರ ನೆರವು ಸಿಗುವುದಿಲ್ಲ; **ಕೆಡಿಸದೆ ಮಾಣೆನ್ ಎಂದು ಗರ್ಜಿಸುವ ಕೌಶಿಕನ ಹೂಂಕಾರದಿಂದ ಇಬ್ಬರು ಸತಿಯರು ಒಗೆದರ್**=ರಾಜ ಹರಿಶ್ಚಂದ್ರನನ್ನು ಕೆಡಿಸದೆ ಬಿಡುವುದಿಲ್ಲ ಎಂದು ಅಬ್ಬರಿಸುತ್ತ ವಿಶ್ವಾಮಿತ್ರನು ಮಾಡಿದ ಹೂಂಕಾರದಿಂದ ಇಬ್ಬರು ತರುಣಿಯರು ಮೂಡಿಬಂದರು;

ಮುನಿಗೆ ಹೊಲೆ ಆವುದು ಅತಿಕೋಪ ಬದ್ಧ ದ್ವೇಷ ಅನಿಮಿತ್ತವೈರ=ಮುನಿಯ ವ್ಯಕ್ತಿತ್ವಕ್ಕೆ ಕೆಟ್ಟದ್ದು ಯಾವುದು ಎಂದರೆ ಅತಿಯಾದ ಕೋಪ; ತೀವ್ರವಾದ ಹಗೆತನ; ವಿನಾಕಾರಣ ಮತ್ತೊಬ್ಬರ ಬಗ್ಗೆ ಅಸೂಯೆ, ಅಸಮಾಧಾನ ಮತ್ತು ಆಕ್ರೋಶ; **ಅದರಿಂದ ಹುಟ್ಟಿದರಾಗಿ ವನಿತೆಯರು ಕಡೆಗೆ ಹೊಲತಿಯರಾಗಿ ಕೆಲಸಾರಿ ನಿಂದು**= ವಿಶ್ವಾಮಿತ್ರ ಮುನಿಯ ಕೆಟ್ಟ ನಡೆನುಡಿಯಿಂದ ಈ ತರುಣಿಯರು ಹುಟ್ಟಿದ್ದರಿಂದ ಹೊಲತಿಯರಾಗಿ ರೂಪುಗೊಂಡು ವಿಶ್ವಾಮಿತ್ರನ ಬಳಿಗೆ ಬಂದು;

ಹೊಲತಿಯರು=ಪ್ರಾಚೀನ ಕಾಲದ ಇಂಡಿಯಾದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಜನಸಮುದಾಯವು ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ ಎಂಬ

ನಾಲ್ಕು ಬಗೆಯ ವರ್ಣಗಳಿಂದ ಮತ್ತು ಚಂಡಾಲರೆಂಬ ಬಗೆಯಲ್ಲಿ ವಿಂಗಡಿಸಲ್ಪಟ್ಟಿತ್ತು. ಚಂಡಾಲರಲ್ಲಿಯೇ ಹೊಲೆಯರು ಮತ್ತು ಮಾದಿಗರು ಎಂಬ ಒಳಪಂಗಡಗಳು ಇದ್ದವು; ವಿದ್ಯೆ, ನಾಡನ್ನಾಳುವ ಆಡಳಿತದ ಗದ್ದುಗೆ ಮತ್ತು ಭೂಸಂಪತ್ತಿಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಮಾತ್ರ ಒಡೆಯರಾಗಿದ್ದರು. ಶೂದ್ರ ವರ್ಣಕ್ಕೆ ಸೇರಿದವರು ತಮಗಿಂತ ಮೇಲಿನ ಮೂರು ವರ್ಣದವರ ಸೇವೆಯಲ್ಲಿಯೇ ತಮ್ಮ ಬದುಕನ್ನು ಕಳೆಯಬೇಕಿತ್ತು. ಇನ್ನುಳಿದ ಚಂಡಾಲರು ಊರಿನಿಂದ ಹೊರಹಾಕಲ್ಪಟ್ಟು, ಅವರನ್ನು ಪ್ರಾಣಿಪಕ್ಷಿಗಳಿಗಿಂತ ಕೀಳಾಗಿ ಕಾಣಲಾಗುತ್ತಿತ್ತು. ಇಡೀ ಇಂಡಿಯಾದೇಶದ ಒಟ್ಟು ಜನಸಂಕೆಯಲ್ಲಿ ಶೇಕಡಾ ಎಂಬತ್ತರಷ್ಟು ಇದ್ದ ಶೂದ್ರರು, ಚಂಡಾಲರು, ಹೊಲೆಯರು ಮತ್ತು ಮಾದಿಗರು ವರ್ಣ ವ್ಯವಸ್ಥೆಯ ಕಾರಣದಿಂದಾಗಿ ಬದುಕಿನ ಅವಕಾಶಗಳಿಂದ ವಂಚಿತರಾಗಿ ಸಾವಿರಾರು ವರುಶಗಳಿಂದ ಹಸಿವು, ಬಡತನ ಮತ್ತು ಅಪಮಾನದಿಂದ ನರಳುತ್ತಿದ್ದರು; ವಿಶ್ವಾಮಿತ್ರನಿಂದ ರೂಪು ತಳೆದ ಈ ಇಬ್ಬರು ತರುಣಿಯರು ವರ್ಣ ವ್ಯವಸ್ಥೆಯ ಅತ್ಯಂತ ಕೆಳ ವರ್ಗಕ್ಕೆ ಸೇರಿದವರಾಗಿದ್ದಾರೆ; ಮೇಲು ವರ್ಣಕ್ಕೆ ಸೇರಿದ ಕ್ಷತ್ರಿಯನಾದ ವಿಶ್ವಾಮಿತ್ರನು ತನ್ನ ಕೆಟ್ಟ ಉದ್ದೇಶವನ್ನು ಈಡೇರಿಸಿಕೊಳ್ಳಲು ಕೆಳವರ್ಗದ ಹೆಣ್ಣುಮಕ್ಕಳನ್ನು ರೂಪಿಸಿದ್ದಾನೆ;

ಬೆಸನ್ ಆವುದು ಎನಲು=ನಾವು ಮಾಡಬೇಕಾದ ಕೆಲಸ ಯಾವುದು ಎಂದು ಕೇಳಲು; **ಜನಪತಿ ಹರಿಶ್ಚಂದ್ರ ಬಂದು ನಮ್ಮಯ ತಪೋವನದೊಳೈದನೆ**=ರಾಜ ಹರಿಶ್ಚಂದ್ರನು ಬಂದು ನಮ್ಮ ಆಶ್ರಮದಲ್ಲಿ ತಂಗಿದ್ದಾನೆ; **ನೀವು ಸರ್ವಬುದ್ಧಿಗಳೊಳ್ ಆತನ ಮರುಳುಮಾಡುತಿರಿ ಹೋಗಿ ಎಂದು ದುರ್ಮಂತ್ರಬಲವಂತನು ಅಟ್ಟಿದನ್**= ನೀವು ನಿಮ್ಮೆಲ್ಲಾ ಬುದ್ಧಿಶಕ್ತಿಯನ್ನು ಬಳಸಿ, ಅವನು ನಿಮ್ಮ ಅಂದಚಂದಕ್ಕೆ ಮೋಹಗೊಳ್ಳುವಂತೆ ಮಾಡಿ ಅವನು ಇರುವಲ್ಲಿಗೆ ಹೋಗಿ ಎಂದು ವಿಶ್ವಾಮಿತ್ರ ಮುನಿಯು ಆ ಇಬ್ಬರು ತರುಣಿಯರನ್ನು ರಾಜನ ಬಳಿಗೆ ಕಳುಹಿಸಿದನು; **ಸಂದ ಕಾರಿರುಳ ಕನ್ನೆಯರು ಹಗಲಮ್ ನೋಡಲೆಂದು ಬಂದರೊ**=ಹೆಸರಾಂತ ಕಾಳರಾತ್ರಿಯ ಕನ್ನೆಯರು ಅಂದರೆ ಕಪ್ಪನೆಯ ಮಯ್ ಬಣ್ಣವುಳ್ಳ ಕನ್ನೆಯರು ಬೆಳಕಿನ ಕಿರಣಗಳಿಂದ ಕೂಡಿರುವ ಹಗಲನ್ನು ನೋಡಲೆಂದು ಬಂದರೊ;

ಸುರಾಸುರರ್ ಅಬುಧಿಯಮ್ ಮಥಿಸುವಂದು ಹೊಸ ವಿಷದ ಹೊಗೆ ಹೊಯ್ದು ಕಗ್ಗನೆ ಕಂದಿ ಜಲದೇವಿಯರು ಮನದಲಿ ನೊಂದು ಮಾನಿಸರಾದರೋ= ದೇವತೆಗಳು ಮತ್ತು ರಕ್ಕಸರು ಹಾಲಿನ ಕಡಲನ್ನು ಕಡೆಯುವಾಗ ಹೊರಹೊಮ್ಮಿದ ನಂಜಿನ ಹೊಗೆಯು ದಟ್ಟವಾಗಿ ಹಬ್ಬಿಕೊಂಡಿದ್ದರಿಂದ ಕಳೆಗುಂದಿದ ಜಲದೇವಿಯರು ಮನದಲ್ಲಿ ನೊಂದು ಮಾನವ ರೂಪನ್ನು ತಳೆದರೊ; **ಕಮಲಜನ್ ನೀಲದಿಂದ ಮಾಡಿದ ಸಾಲಭಂಜಿಕೆಗಳ್ ಒದವಿ ಜೀವಮ್ ತಳೆದವೋ**

ಎನಿಪ್ಪ ಅಂದದಿಮ್=ಬ್ರಹ್ಮದೇವನು ನೀಲಿಯ ಬಣ್ಣದಿಂದ ನಿರ್ಮಿಸಿದ ಗೊಂಬೆಗಳಿಗೆ ಜೀವ ಬಂದು ಈ ತರುಣಿಯರ ರೂಪವನ್ನು ತಳೆದವೋ ಎನ್ನುವ ರೀತಿಯಲ್ಲಿ; **ಅಂಗನೆಯರ್ ಅವನೀಶನೆಡೆಗೆ ಬಂದರ್**=ನೀಲಿ ಮಿಶ್ರಿತ ಕಪ್ಪು ಮಯ್ ಬಣ್ಣದ ಆ ಇಬ್ಬರು ತರುಣಿಯರು ರಾಜ ಹರಿಶ್ಚಂದ್ರನು ಇದ್ದ ಕಡೆಗೆ ಬಂದರು;

ಮಾಯದ ಅಬಲೆಯರು ಕಾಣುತ್ತ=ಮಾಯಾ ವನಿತೆಯರಾದ ಅವರಿಬ್ಬರು ರಾಜ ಹರಿಶ್ಚಂದ್ರನನ್ನು ಕಾಣುತ್ತಿದ್ದಂತೆಯೇ ಕೇಡಿ ವಿಶ್ವಾಮಿತ್ರನ ಆಣತಿಯಂತೆ ರಾಜನನ್ನು ತಮ್ಮತ್ತ ಸೆಳೆದುಕೊಳ್ಳಲು ರಾಜನ ಗುಣಗಾನದಲ್ಲಿ ತೊಡಗುತ್ತಾರೆ; ಮಝು/ಮಝುರೆ=ಮೆಚ್ಚುಗೆಯನ್ನು ಸೂಚಿಸಿ ಹೊಗಳುವಾಗ ಹೇಳುವ ಪದಗಳು; ಭಾಪು=ವ್ಯಕ್ತಿಯ ಶೂರತನ ಮತ್ತು ಸಾಹಸವನ್ನು ಕೊಂಡಾಡುವಾಗ ಬಳಸುವ ಪದ; **ಮಝು ಭಾಪು ಅದಟ ರಾಯ**=ಮಝು ಭಾಪು ಪರಾಕ್ರಮಿಯಾದ ರಾಜ; **ಮಝುರೇ ರಾಯ**=ಶೂರತನ ಮತ್ತು ಸಾಹಸದಲ್ಲಿ ಜನಮೆಚ್ಚುಗೆಯನ್ನು ಪಡೆದಿರುವ ರಾಜ; **ರಾಯ ದಳವುಳಕಾರ**=ಹಗೆಗಳ ಮೇಲೆ ಆಕ್ರಮಣ ಮಾಡುವ ರಾಜ; **ರಾಯ ಕಂಟಕ**=ಹಗೆಗಳಿಗೆ ಕೇಡನ್ನುಂಟುಮಾಡುವ ರಾಜ; **ರಾಯ ಜಗಜಟ್ಟಿ**=ಜಗಜಟ್ಟಿಯಾದ ರಾಜ; **ರಾಯ ತಲ್ಲಣ**=ಜಗತ್ತನ್ನೇ ಅಂಜಿಸಿ ಅಂಕೆಯಲ್ಲಿಟ್ಟುಕೊಳ್ಳಬಲ್ಲ ರಾಜ; **ರಾಯ ಕೋಳಾಹಳ**=ಕಾಳೆಗದಲ್ಲಿ ಹಗೆಗಳನ್ನು ಗಾಬರಿ ಬೀಳುವಂತೆ ಮಾಡುವ ರಾಜ;

ರಾಯ ಭುಜಬಲ ಭೀಮ=ತೋಳ್ಬಲದಲ್ಲಿ ಭೀಮನೆನೆಸಿದ ರಾಜ; ರಾಯ ಮರ್ದನ ರಾಯ=ಶತ್ರು ರಾಜರನ್ನ ಸದೆಬಡಿಯುವ ರಾಜ; **ಜೀಯ ಸ್ಥಿರಂಜೀವ ಎಂದು ಕೀರ್ತಿಸಿ**= ರಾಜನೇ ಅಮರನಾಗು ಎಂದು ಗುಣಗಾನಮಾಡಿ; **ಗಾಣ ನಾಯಕಿಯರ್ ಒಲಿದು, ಪೊಡಮಟ್ಟು ದಂಡಿಗೆ ಪಿಡಿದು, ಹಾಡಲು ಉದ್ಯೋಗಿಸಿದರು**=ಗಾಣ ನಾಯಕಿಯರು ರಾಜ ಹರಿಶ್ಚಂದ್ರನನ್ನು ಮೆಚ್ಚಿಕೊಂಡು, ನಮಸ್ಕರಿಸಿ ದಂಡಿಗೆ ಎಂಬ ತಂತಿ ವಾದ್ಯವನ್ನು ನುಡಿಸುತ್ತ ಹಾಡಲು ತೊಡಗಿದರು; **ಎಕ್ಕಲನ ಬಳಿವಿಡಿದು ಸುತ್ತಿದ ಆಸರನು**=ಬಾಣಗಳ ಪೆಟ್ಟಿಗೆ ಬಲಿಯಾಗಿ ಬೀಳದೆ ಓಡುತ್ತಿದ್ದ ಹಂದಿಯನ್ನು ಹಿಂಬಾಲಿಸಿಕೊಂಡು ಅಲೆದಾಡಿದ ಆಯಾಸವನ್ನು; **ಮುನಿ ರಕ್ಕಸನ ಬನಕೆ ಬಂದ ಅಂಜಿಕೆಯನ್**=ಕೇಡಿಗನಾದ ವಿಶ್ವಾಮಿತ್ರ ಮುನಿಯ ಕಾಡಿಗೆ ಬಂದಿದ್ದರಿಂದ ಉಂಟಾಗಿರುವ ಹೆದರಿಕೆಯನ್ನು;

ಎರಡನೆಯ ಮುಕ್ಕಣ್ಣನ್ ಎನಿಪ ಗುರುವಾಜ್ಞೆಗೆಟ್ಟ ಅಳಲನ್=ಎರಡನೆಯ ಶಿವ ಎಂದು ಹೆಸರಾಂತ ಗುರು ವಸಿಷ್ಠ ಮುನಿಯ ಆದೇಶವನ್ನು ಮೀರಿದ್ದರಿಂದ ಉಂಟಾಗಿರುವ ಸಂಕಟವನ್ನು; **ಅಲ್ಲದೆ ಕನಸ ಕಂಡ ಭಯವ ಮಿಕ್ಕು ಮರೆವಂತೆ**=

ಇದೆಲ್ಲದರ ಜತೆಗೆ ಕೆಟ್ಟ ಕನಸನ್ನು ಕಂಡ ಹೆದರಿಕೆಯನ್ನು ಸಂಪೂರ್ಣವಾಗಿ ಮರೆಯುವ ರೀತಿಯಲ್ಲಿ; **ಅಡಸಿ ಕವಿವ ಗತಿಗಳ ಸೊಗಸನ್ ಅಕ್ಕಿಸದೆ, ಸಮಯೋಚಿತದ ಪಸಾಯಕ್ಕೆ ಮನವುಕ್ಕಿ ಸರ್ವ ಆಭರಣಮಮ್ ಗಾಣರಾಣಿಯರಿಗೆ ಹರಿಶ್ಚಂದ್ರನು ಇತ್ತನು**=ರಾಜ ಹರಿಶ್ಚಂದ್ರನು ಎಲ್ಲೆಡೆಯಲ್ಲಿಯೂ ಆವರಿಸಿಕೊಂಡು ಕೇಳಿಬರುತ್ತಿರುವ ಸಂಗೀತದ ನಾದಲಯದ ಗತಿಗಳ ಸೊಗಸಿನಿಂದಾದ ಆನಂದವನ್ನು ತಡೆದುಕೊಳ್ಳದೆ ಅಂದರೆ ತನ್ನ ಆನಂದವನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತ, ಹಾಡು ಮತ್ತು ದಂಡಿಗೆಯ ನಾದಕ್ಕೆ ಸೂಕ್ತವಾದ ಮೆಚ್ಚಿನ ಉಡುಗೊರೆಯನ್ನು ನೀಡಲು ಮನಸ್ಸು ತುಂಬಿ ಬಂದು, ತಾನು ತೊಟ್ಟಿದ್ದ ಬೆಲೆಬಾಳುವ ಒಡವೆಗಳೆಲ್ಲವನ್ನೂ ಗಾಣರಾಣಿಯರಿಗೆ ಕೊಟ್ಟನು; ಆಗ ಗಾಣ ರಾಣಿಯರು ಒಡವೆಗಳ ಕೊಡುಗೆಯನ್ನು ನಿರಾಕರಿಸುತ್ತ;

ಭೂಪಾಲ, ಬಡತನದ ಹೊತ್ತು ಆನೆ ದೊರಕಿ ಫಲವೇನು=ರಾಜ, ಬಡತನದಿಂದ ನರಳುತ್ತಿರುವಾಗ ಆನೆಯು ದೊರಕಿದರೆ ಏನು ಪ್ರಯೋಜನ; ಅಂದರೆ ತನ್ನ ಹೊಟ್ಟೆಗೆ ಅನ್ನವಿಲ್ಲದ ಹಸಿದಿರುವ ವ್ಯಕ್ತಿಯು ಆನೆಯನ್ನು ಹೇಗೆ ಸಾಕಬಲ್ಲ; **ನೀರಡಸಿರ್ದ ಹೊತ್ತು ಆಜ್ಯ ದೊರಕಿ ಫಲವೇನು**=ಬಾಯಾರಿಕೆಯಿಂದ ಬಳಲುತ್ತಿರುವ ವ್ಯಕ್ತಿಗೆ ತುಪ್ಪ ದೊರಕಿದರೆ ಏನು ಪ್ರಯೋಜನ; ಅಂದರೆ ಬಾಯಾರಿಕೆಯನ್ನು ತಣಿಸಲು ನೀರು ಬೇಕೆ ಹೊರತು ತುಪ್ಪವಲ್ಲ; **ರುಜೆಯಡಸಿ ಕೆಡೆದಿಹ ಹೊತ್ತು ರಂಭೆ ದೊರೆಕೊಂಡಲ್ಲಿ ಫಲವೇನು**=ರೋಗದಿಂದ ನರಳುತ್ತ ಕಂಗಾಲಾಗಿ ಮಲಗಿರುವಾಗ ವ್ಯಕ್ತಿಗೆ ದೇವಲೋಕದ ಸುರಸುಂದರಿಯಾದ ರಂಭೆಯು ದೊರಕಿದರೆ ಏನು ಪ್ರಯೋಜನ; **ಸಾವ ಹೊತ್ತು ಪೊಡವಿಯ ಒಡೆತನ ದೊರಕಿ ಫಲವೇನು**=ವ್ಯಕ್ತಿಯು ಸಾಯುತ್ತಿರುವಾಗ ಭೂಮಿಯ ಒಡೆತನ ದೊರಕಿದರೆ ಏನು ಪ್ರಯೋಜನ; **ಕಡುವಿಸಿಲು ಹೊಡೆದು ಬೆಂಡಾಗಿ ಬೀಳ್ವ ಎಮಗೆ ನೀನ್ ಒಲಿದು ಮಣಿ ತೊಡಿಗೆಗಳನ್ ಇತ್ತು ಫಲವೇನು ಹೇಳ್ ಎನುತ**=ಹೆಚ್ಚಾದ ಬಿಸಿಲಿನ ತಾಪದಿಂದ ನೊಂದು ಸುಸ್ತಾಗಿ ಕೆಳಕ್ಕೆ ಬೀಳುತ್ತಿರುವ ನಮಗೆ ನೀನು ಮೆಚ್ಚುಗೆಯಿಂದ ಮುತ್ತು ರತ್ನ ವಜ್ರದ ಒಡವೆಗಳನ್ನು ಕೊಟ್ಟರೆ ಪ್ರಯೋಜನವೇನು ಹೇಳು ಎಂದು ರಾಜನನ್ನು ಪ್ರಶ್ನಿಸುತ್ತ; **ಮತ್ತೆ ಇಂತು ಎಂದರು**=ಮತ್ತೆ ತಮ್ಮ ಮಾತನ್ನು ಮುಂದುವರಿಸಿ, ಈ ರೀತಿ ನುಡಿದರು;

ಕಡಲೊಳ್ ಆಳ್ವಂಗೆ ತೆಪ್ಪವನು=ಕಡಲಿನಲ್ಲಿ ಮುಳುಗಿ ಸಾಯುತ್ತಿರುವವನಿಗೆ ತೆಪ್ಪವನ್ನು; **ದಾರಿದ್ರಂಗೆ ಕಡವರವನ್**=ಬಡತನದಿಂದ ನರಳುತ್ತಿರುವವನಿಗೆ ಹೊನ್ನನ್ನು; **ಅತಿರೋಗಿಗೆ ಅಮೃತಮಮ್ ಕೊಟ್ಟಡೆ**=ದೊಡ್ಡ ರೋಗದಿಂದ ನರಳುತ್ತಿರುವವನಿಗೆ ರೋಗವನ್ನು ನಿವಾರಿಸಿ ಜೀವವನ್ನು ಉಳಿಸುವ

ಅಮೃತವನ್ನು ನೀಡಿದರೆ; **ಅವರ್ ಅಡಿಗಡಿಗೆ ಅದಾವ ಹರುಷವಮ್ ಎಯ್ದುತಿಪ್ಪರ್ ಅವರಮ್ ಪೋಲ್ವರ್**=ಅವರು ತಮ್ಮನ್ನು ಸಂಕಟದಿಂದ ಪಾರುಮಾಡಿದ ವಸ್ತು ದೊರಕಿದ ಸಮಯದಲ್ಲಿ ಯಾವ ರೀತಿಯಲ್ಲಿ ಆನಂದವನ್ನು ಹೊಂದುತ್ತಾರೆಯೋ ಅವರನ್ನೇ ನಾವು ಹೋಲುತ್ತಿದ್ದೇವೆ. ಅಂದರೆ ಅವರಂತೆ ನಾವು ಕೂಡ ಸಂಕಟದಿಂದ ಪರಿತಪಿಸುತ್ತಿದ್ದೇವೆ;

ಈ ಪೊತ್ತಿನ ಸುಡುಸುಡನೆ ಸುಡುವ ಬಿರುಬಿಸಿಲ ಸೆಕೆಯುಸುರ ಬಿಸಿ ಹೊಡೆದುದು ಉರಿ ಹತ್ತಿ ಬಾಯ್ ಬತ್ತಿ ಡಗೆ ಸುತ್ತಿ ಸಾವ್ ಅಡಸುತಿದೆ=ಈ ಹೊತ್ತಿನ ಸುಡುಸುಡುವ ಭಯಂಕರವಾದ ಬಿಸಿಲಿನ ಜಳದಿಂದ ಸೆಕೆಯು ಹೆಚ್ಚಾಗಿ, ನಾವು ಬಿಡುತ್ತಿರುವ ಉಸಿರು ಬಿಸಿಯಾಗಿ, ಬಾಯಾರಿ, ಸೆಕೆ ಸುತ್ತಿಕೊಂಡು, ನಮಗೆ ಸಾವು ಬರುವಂತಾಗಿದೆ; ಸತ್ತಿಗೆ=ಕೊಡೆ/ಛತ್ರಿ. ರಾಜತ್ವದ ಸಂಕೇತಗಳಾಗಿ ಸಿಂಹಾಸನ, ಕಿರೀಟ ಮತ್ತು ಬೆಳ್ಗೊಡೆಗಳಿವೆ; ಬೆಳ್ಗೊಡೆ ಎಂದರೆ ಬಿಳಿಯ ಬಣ್ಣದ ದೊಡ್ಡ ಕೊಡೆ. ಇದು ಸಿಂಹಾಸನದ ಮೇಲೆ ಇರುತ್ತದೆ. ರಾಜನು ಹೊರಗಡೆ ಹೋದಾಗ, ಜತೆಯಲ್ಲಿ ದೊಡ್ಡದಾದ ಒಂದು ಬೆಳ್ಗೊಡೆಯನ್ನು ತೆಗೆದುಕೊಂಡು ಹೋಗಿರುತ್ತಾರೆ; **ಭೂಭುಜ, ನಿನ್ನ ಮುತ್ತಿನ ಸತ್ತಿಗೆಯನ್ ಇತ್ತು ಸಲಹು**=ರಾಜ, ನಿನ್ನ ಮುತ್ತಿನ ಬೆಳ್ಗೊಡೆಯನ್ನು ಕೊಟ್ಟು ನಮ್ಮನ್ನು ಕಾಪಾಡು;

ರವಿಕುಲದ ಪೀಳಿಗೆಯೊಳ್ ಒಗೆದ ರಾಯರ್ಗೆ ಪಟ್ಟವ ಕಟ್ಟುವಂದು ಇದಿಲ್ಲದಡೆ ಅರಸುತನ ಸಲ್ಲದು=ಸೂರ್ಯವಂಶದ ಪೀಳಿಗೆಯಲ್ಲಿ ಹುಟ್ಟಿದ ರಾಜಕುಮಾರರಿಗೆ ಪಟ್ಟವನ್ನು ಕಟ್ಟುವಾಗ ಈ ಬೆಳ್ಗೊಡೆಯು ಇಲ್ಲದಿದ್ದರೆ, ಅವರಿಗೆ ಅರಸುತನವೇ ಮಾನ್ಯವಾಗದು; **ಅವನಿಯೊಳು ಯುದ್ಧರಂಗದೊಳ್ ಇದಮ್ ಕಂಡ ಹಗೆಗಳು ನಿಲ್ಲರು**=ಭೂಮಂಡಲದಲ್ಲಿ ನಡೆಯುವ ಕಾಳೆಗದ ಕಣದಲ್ಲಿ ಈ ಬೆಳ್ಗೊಡೆಯನ್ನು ಕಂಡ ಹಗೆಗಳು ಜೀವ ಭಯದಿಂದ ತತ್ತರಿಸುತ್ತ ಪಲಾಯನ ಮಾಡುತ್ತಾರೆ; **ಇದರ ಕೆಳಗೆ ಕವಿವ ನೆಳಲೊಳಗೆ ಆವನ್ ಇರ್ದನ್ ಆತಂಗೆ ತಾನ್ ತವಿಲ್ ಎಡರು ಬಡತನಮ್ ರೋಗ ಅಪಕೀರ್ತಿ ಪರಿಭವ ಭಯಮ್ ಹರೆವುದು**=ಈ ಬೆಳ್ಗೊಡೆಯ ನೆರಳಲ್ಲಿ ಯಾವನು ಇರುತ್ತಾನೆಯೋ ಆತನಿಗೆ ಯಾವುದೇ ಬಗೆಯ ಆಪತ್ತು, ಅಡೆತಡೆ, ಬಡತನ, ರೋಗ, ಕೆಟ್ಟಹೆಸರು, ಸೋಲು, ಅಂಜಿಕೆಯುಂಟಾಗುವುದಿಲ್ಲ;

ಇದನ್ ಅರಿದರಿದು ಸತ್ತಿಗೆಯ ಕೊಡಬಹುದೆ ಹೇಳ್=ಬೆಳ್ಗೊಡೆಯಿಂದ ಉಂಟಾಗುವ ಒಳಿತಿನ ಮಹಿಮೆಗಳೆಲ್ಲವನ್ನೂ ತಿಳಿದಿದ್ದರೂ, ಅದೆಲ್ಲವನ್ನು ಕಡೆಗಣಿಸಿ ಸತ್ತಿಗೆಯನ್ನು ನಿಮಗೆ ಕೊಡಬಹುದೆ ಹೇಳಿರಿ ಎಂದು ರಾಜ ಹರಿಶ್ಚಂದ್ರನು ಗಾಣ ರಾಣಿಯರನ್ನು ಪ್ರಶ್ನಿಸಿದನು; **ಅನುನಯದೊಳ್ ಎಲ್ಲವಮ್ ಕೊಡಬಹುದು ಬಿಡಬಹುದು**=ಮಹಿಮೆಯಿಂದ ಕೂಡಿದ ಬೆಲೆಬಾಳುವ ವಸ್ತುವಿನ

ಮೇಲಣ ಮೋಹವನ್ನು ತೊರೆದು, ಅದನ್ನು ತಮ್ಮ ಪ್ರೀತಿಪಾತ್ರರಿಗೆ ಮೆಚ್ಚುಗೆಯಿಂದ ಕೊಡಬಹುದು; **ಜನನಿಯನ್ ಜನಕನನ್ ನಲ್ಲಳನ್ ದೈವವಮ್ ಮನವಾರೆ ನಂಬಿ ನಚ್ಚಿರ್ದ ಪರಿವಾರಮಮ್ ಕೊಡುವ ಬಿಡುವ ಅತಿಕಲಿಗಳು ಜನರೊಳಗೆ ಜನಿಸರ್**=ತಾಯಿಯನ್ನು, ತಂದೆಯನ್ನು, ಹೆಂಡತಿಯನ್ನು, ದೇವರನ್ನು, ನನ್ನನ್ನು ಮನಸಾರ ಪ್ರೀತಿಸುತ್ತ ನನ್ನನ್ನೇ ನಂಬಿಕೊಂಡಿರುವ ಪ್ರಜೆಗಳನ್ನು ಕೊಡುವ ಇಲ್ಲವೇ ಬಿಡುವ ಪರಾಕ್ರಮಿಗಳು ಜನರಲ್ಲಿ ಹುಟ್ಟುವುದಿಲ್ಲ. ಅಂದರೆ ಆ ರೀತಿ ಬೆಳ್ಗೊಡೆಯನ್ನೇ ದಾನವಾಗಿ ಇತರರಿಗೆ ಕೊಡುವ ರಾಜನು ಇದುವರೆಗೂ ಜಗತ್ತಿನಲ್ಲಿ ಹುಟ್ಟಿಲ್ಲ;

ಅರಸ, ನೀನೀಗ ಪೇಳ್ದ ಅನಿತರೊಳು ಬೇಡಿದಡೆ ಕೊಡಬೇಡ. ಲೋಭವೇಕೆ ಕೊಡೆಯನ್ ಈಯ=ರಾಜ, ನೀನು ಈಗ ಹೇಳಿದ ವ್ಯಕ್ತಿಗಳಲ್ಲಿ ಯಾರೊಬ್ಬರನ್ನು ನಾವು ಬೇಡಿದರೂ ಕೊಡಬೇಡ. ನಮಗೆ ಬೆಳ್ಗೊಡೆಯೊಂದನ್ನು ಮಾತ್ರ ಕೊಡು; **ಇದಲ್ಲದೆ ಬೇರೆ ಮಾತೆಪಿತರಿಲ್ಲ**=ಈ ಬೆಳ್ಗೊಡೆಯಲ್ಲದೆ ನಮಗೆ ಬೇರೆ ತಾಯಿ ತಂದೆಯಿಲ್ಲ. ಅಂದರೆ ರಾಜರಾದ ನಮ್ಮ ಪಾಲಿಗೆ ಇದೇ ತಾಯಿತಂದೆ; **ಈ ಛತ್ರ ಲೋಗರಿಗೆ ಕೊಡಬಾರದಾಗಿ ಸತಿ**=ರಾಜ ಲಾಂಛನವಾದ ಈ ಸತ್ತಿಗೆಯನ್ನು ಇತರರಿಗೆ ಕೊಡಬಾರದು.ಆದ್ದರಿಂದ ಇದು ನಮ್ಮ ಹೆಂಡತಿ; **ವಂಶಗತವಾಗಿ ಬಂದುದರಿಂದ ತಂದೆ**=ತಲೆತಲೆಮಾರುಗಳಿಂದಲೂ ವಂಶಪರಂಪರೆಯಾಗಿ ಬಂದಿರುವುದರಿಂದ ತಂದೆ; **ಪಟ್ಟವ ಕಟ್ಟುವಾಗಲ್ ಅರ್ಚಿಸಿಕೊಂಬುದಾಗಿ ದೈವವಮ್**=ಪಟ್ಟವನ್ನು ಕಟ್ಟುವಾಗ ಪೂಜಿಸಿಕೊಳ್ಳುವುದರಿಂದ ನಮ್ಮ ಪಾಲಿನ ದೇವರು;

ನೆಳಲ ತಂಪನ್ ಒಸೆದೀವುದಾಗಿ ಸಾಗಿಸುವ ತಾಯ್=ಬೆಳ್ಗೊಡೆಯ ನೆರಳ ತಂಪಿನಲ್ಲಿ ನಾವು ಇರುವುದರಿಂದ ಅಂದರೆ ಅದರ ಆಶ್ರಯದಲ್ಲಿ ಆಡಳಿತವನ್ನು ಮಾಡುವುದರಿಂದ ನಮ್ಮ ಪಾಲಿಗೆ ಸತ್ತಿಗೆಯು ಒಲವು ನಲಿವಿನಿಂದ ಪೊರೆಯುವ ತಾಯಿ; **ಧುರದೊಳ್ ಅರಿಗಳಮ್ ನಡುಗಿಸುವುದಾಗಿ ಚತುರಂಗಬಲ ಎನಿಸಿತು ಎಂಬಾಗಳ್**=ರಣರಂಗದಲ್ಲಿ ಶತ್ರುಗಳನ್ನು ನಡುಗಿಸುವುದರಿಂದ ಚತುರಂಗ ಬಲ ಎನ್ನಿಸಿದೆ ಎಂಬ ಕೀರ್ತಿಯನ್ನು ಮತ್ತು ಮಹಿಮೆಯನ್ನು ಬೆಳ್ಗೊಡೆಯು ಹೊಂದಿರುವಾಗ; **ಇದನು ಅರಿದರಿದು ಬೇಡುವರನ್ ಮೂಜಗದೊಳು ಅತಿಮರುಳರ್ ಎನ್ನರೇ**=ನಾನಾ ಬಗೆಗಳಲ್ಲಿ ರಾಜರ ಪಾಲಿಗೆ ಬೆಳ್ಗೊಡೆಯು ಅತ್ಯಂತ ಅಮೂಲ್ಯವಾದುದು ಎಂಬುದನ್ನು ಚೆನ್ನಾಗಿ ತಿಳಿದಿದ್ದಿರೂ, ಮತ್ತೆ ಬೆಳ್ಗೊಡೆಯನ್ನೇ ರಾಜರಿಂದ ಬೇಡುವವರನ್ನು ಮೂರು ಜಗತ್ತಿನಲ್ಲಿಯೂ ಅತಿ ತಿಳಿಗೇಡಿಗಳು ಎನ್ನುವುದಿಲ್ಲವೇ;

ಇಳೆಯೊಳಗೆ ಹೆಸರುಳ್ಳ ದಾನಿ ಹರಿಶ್ಚಂದ್ರ ಭೂನಾಥ ಎಂಬುದನು ಕೇಳ್ದು= ಭೂಮಂಡಲದಲ್ಲಿ ಹೆಸರಾಂತ ದಾನಿ ಹರಿಶ್ಚಂದ್ರ ರಾಜ ಎಂಬುದನ್ನು ಕೇಳಿ; **ಎಳಸಿ ಕಟ್ಟಾಸೆ ಪಟ್ಟು ಎಯ್ತಂದು**=ಬಹು ದೊಡ್ಡ ಆಸೆಯನ್ನಿಟ್ಟುಕೊಂಡು ಬಂದಿದ್ದೇವೆ; **ಬೇಡಿ ನಿಷ್ಫಳವಾಗದಂತೆ, ನಾವ್ ಅತಿ ಮರುಗದಂತೆ, ಅಳಲದಂತೆ, ಬಿಸುಸುಯ್ಯದಂತೆ ತಿಳಿದು**=ನಾವು ಕೋರಿದ್ದನ್ನು ನಿರಾಕರಿಸದಂತೆ, ನಾವು ಬಹಳವಾಗಿ ಮರುಗದಂತೆ, ಸಂಕಟಪಡದಂತೆ, ನಿಟ್ಟುಸಿರಿನಿಂದ ಆತಂಕಪಡದಂತೆ ನಮ್ಮ ಮನಸ್ಸನ್ನು ಅರಿತುಕೊಂಡು; **ನೀನು ಎಮಗೆ ವಲ್ಲಭನಾಗಿ ಚಿತ್ತದ ಉಮ್ಮಳಿಕೆಯಮ್ ಕಳೆ ಎಂದು**=ನೀನು ನಮಗೆ ಗಂಡನಾಗಿ ನಮ್ಮ ಮನದ ದುಗುಡವನ್ನು ನಿವಾರಿಸು ಎಂದು;

ಅಳವಳಿದು ಬಾಯ್ಬಿಟ್ಟು ಕೈಮುಗಿದು ಒಲವಿಂದ ಅನಾಮಿಕ ಸತಿಯರು ನುಡಿದರ್=ಕಂಗಾಲಾಗಿ ಬಾಯಿ ಬಿಡುತ್ತ ಕಯ್ ಮುಗಿದು ಪ್ರೀತಿಯಿಂದ ಮಾಯಾ ವನಿತೆಯರು ಹರಿಶ್ಚಂದ್ರನನ್ನು ಕೇಳಿಕೊಂಡರು; **ಇಂದು ತನಕ ಲಲಿತ ವಸುಮತಿ ಹುಟ್ಟುವಂದು ಹುಟ್ಟಿದ ಸೂರ್ಯಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜಬಲದೊಳ್ ಒರೆದೊರೆ ಎನಿಸಿ ಕನ್ನಿಕೆಯರಮ್ ಕೊಡುವ ಭೂಪರಿಲ್ಲ**=ಇವತ್ತಿನ ತನಕ ಸುಂದರವಾದ ಭೂಮಿಯ ಜತೆಜತೆಯಲ್ಲಿ ಹುಟ್ಟಿದ ಸೂರ್ಯವಂಶದ ರಾಜರಿಗೆ ವಂಶದಲ್ಲಿ, ಕೀರ್ತಿಯಲ್ಲಿ ಮತ್ತು ಪರಾಕ್ರಮದಲ್ಲಿ ತಾವು ಸರಿಸಮಾನವೆಂಬ ಅಂತಸ್ತನ್ನು ಹೊಂದಿ ಕನ್ನೆಯರನ್ನು ಕೊಡುವ ರಾಜರಿಲ್ಲ. ಅಂದರೆ ಸೂರ್ಯವಂಶದ ರಾಜಮನೆತನ ಮತ್ತು ರಾಜರಿಗೆ ಸಮನಾದವರು ಜಗತ್ತಿನಲ್ಲಿಯೇ ಇಲ್ಲ;

ಹೊಲತಿಯರು ಬಂದು ಆವು ಸತಿಯರಾದಪ್ಪೆವು ಎಂಬ ಉಲಿಹವೆಂಬುದು= ಹೊಲತಿಯರು ಬಂದು 'ನಾವು ನಿನಗೆ ಹೆಂಡತಿಯರಾಗುತ್ತೇವೆ' ಎಂದು ಮಾತನಾಡುತ್ತಿರುವುದು; **ಬಂದ ಕಾಲಗುಣವೋ ನಿಂದ ನೆಲದ ಗುಣವೋ**=ನಿಮ್ಮ ಕಾಲಗುಣವೋ ಇಲ್ಲವೇ ನೀವು ನಿಂತಿರುವ ಈ ನೆಲದ ಗುಣವೋ; ಈ ಬಗೆಯ ನುಡಿಗಳು ಜನಮನದಲ್ಲಿರುವ ನಂಬಿಕೆಯನ್ನು ಸೂಚಿಸುತ್ತವೆ. ಕೆಲವರ ಬರುವಿಕೆಯಿಂದ ವ್ಯಕ್ತಿಗಳಿಗೆ ಒಳ್ಳೆಯದು ಇಲ್ಲವೇ ಕೆಟ್ಟದ್ದು ಆಗುತ್ತದೆ; ಕೆಲವು ಜಾಗಗಳಲ್ಲಿ ಒಳ್ಳೆಯದನ್ನು ಇಲ್ಲವೇ ಕೆಟ್ಟದ್ದನ್ನು ಮಾಡುವ ಶಕ್ತಿಯಿರುತ್ತದೆ. ಆದ್ದರಿಂದಲೇ ಒಂದು ಜಾಗಕ್ಕೆ ಹೋದಾಗ ಅಲ್ಲಿನ ಶಕ್ತಿಗೆ ತಕ್ಕಂತೆ ಒಳಿತು ಕೆಡುಕಾಗುತ್ತದೆ; **ನೋಡು ನೋಡು ಎಂದು ಅವನೀಶನು ಕಡುಮುಳಿದು ಕೋಪಿಸಿದನ್**=ನೋಡು ನೋಡು ನಿಮ್ಮ ವರ್ತನೆಯು ಎಷ್ಟು ಕೀಳಾಗಿದೆ ಎಂದು ರಾಜನು ಬಹಳ ಕೆರಳಿ ಕೋಪಿಸಿಕೊಂಡನು; **ಅವನೀಶ ಕೇಳ್**=ರಾಜ, ಕೇಳು;

ಪಾವನಕ್ಷೀರಮಮ್ ಕೊಡುವ ಕೆಚ್ಚಲ ಮಾಂಸ ಆವ ಲೇಸು=ಪವಿತ್ರವಾದ ಹಾಲನ್ನು ಕೊಡುವ ಹಸುವಿನ ಕೆಚ್ಚಲ ಮಾಂಸ ಯಾವ ರೀತಿಯಲ್ಲಿ ಒಳ್ಳೆಯದು; **ಇನಿದುಳ್ಳ ಮಧುವನ್ ಒಸೆದೀವ ನೊಳ ಆವ ಲೇಸು**=ಸಿಹಿಯಾದ ಜೇನುತುಪ್ಪವನ್ನು ಸೊಗಸಾಗಿ ನೀಡುವ ಜೇನು ನೊಣ ಯಾವ ರೀತಿಯಲ್ಲಿ ಸುಂದರವಾಗಿದೆ; **ಅಧಿಕ ಕಸ್ತೂರಿಯಮ್ ಕೊಡುವ ಮೃಗನಾಭಿ ತಾನ್ ಆವ ಲೇಸು**=ಸುವಾಸನೆಯಿಂದ ಕೂಡಿದ ಕಸ್ತೂರಿಯನ್ನು ಕೊಡುವ ಪ್ರಾಣಿಯ ಹೊಕ್ಕಳು ತಾನದು ಯಾವ ರೀತಿಯಲ್ಲಿ ಚೆನ್ನಾಗಿದೆ; ಕಸ್ತೂರಿ ಎಂಬ ಹೆಸರಿನ ಪ್ರಾಣಿಯ ಹೊಕ್ಕಳಿನಲ್ಲಿ ಜೈವಿಕವಾಗಿ ಸಂಗ್ರಹವಾಗುವ ದ್ರವ್ಯ ಅತ್ಯಂತ ಸುವಾಸನೆಯಿಂದ ಕೂಡಿರುತ್ತದೆ; **ದೇವರಿಗೆ ಸಲ್ಲವೇ**=ಹಾಲು, ಜೇನುತುಪ್ಪ, ಕಸ್ತೂರಿಯೆಲ್ಲವನ್ನು ದೇವರಿಗೆ ಅರ್ಪಿಸುವುದಿಲ್ಲವೇ;

ಉತ್ತಮಗುಣಂಗಳಿರ್ದು ಆವ ಕುಂದಮ್ ಕಳೆಯಲಾರವು=ಉತ್ತಮ ಗುಣಗಳಿಂದ ಕೂಡಿದ ವಸ್ತುಗಳ ಇಲ್ಲವೇ ವ್ಯಕ್ತಿಗಳ ಸಂಗಡ ನಾವು ನಂಟನ್ನು ಪಡೆದರೆ, ನಮ್ಮಲ್ಲಿ ಯಾವ ಬಗೆಯ ಕೀಳುತನವಿದ್ದರೂ ಅದು ತಾನಾಗಿಯೇ ನಿವಾರಣೆಗೊಳ್ಳುತ್ತದೆ; **ಭಾವಿಸುವಡೆ ಇಂದು ಎಮ್ಮ ರೂಪು ಜವ್ವನವಿರಲು ಕುಲದ ಮಾತೇಕೆ**=ಈಗ ತಿಳಿದು ನೋಡುವುದಾದರೆ ಇಂದು ನಮ್ಮಲ್ಲಿ ಚೆಲುವಾದ ರೂಪ ಮತ್ತು ತಾರುಣ್ಯವಿರಲು, ನಮ್ಮನ್ನು ಮದುವೆಯಾಗುವುದಕ್ಕೆ ಕುಲದ ಸಂಗತಿಯನ್ನೇಕೆ ಮಾತನಾಡುತ್ತಿರುವೆ; **ಅಕ್ಕಕ್ಕು ಬಚ್ಚಲ ಉದಕಮ್ ತಿಳಿದಡೆ ಆರ ಮೀಹಕ್ಕೆ ಯೋಗ್ಯಮ್**=ಅಹುದಹುದು. ನೀವು ಹೇಳುವ ಮಾತು ತುಂಬಾ ಸೊಗಸಾಗಿದೆ. ಬಚ್ಚಲ ನೀರು ತಿಳಿಯಾದರೆ, ಅದು ಯಾರ ಸ್ನಾನಕ್ಕೆ ಯೋಗ್ಯವಾಗುತ್ತದೆ;

ನಾಯ್ಗೆ ಹಾಲುಳ್ಳಡೆ ಆವನ ಊಟಕ್ಕೆ ಯೋಗ್ಯಮ್=ನಾಯಿಯ ಮೊಲೆಯಲ್ಲಿ ಹಾಲು ತುಂಬಿದ್ದರೆ, ಅದು ಯಾವನ ಊಟಕ್ಕೆ ಯೋಗ್ಯವಾಗುತ್ತದೆ; **ಪ್ರೇತವನದೊಳಗೆ ಬೆಳೆದ ಹೂವು ಆರ ಮುಡಿಹಕ್ಕೆ ಯೋಗ್ಯಮ್**=ಮಸಣದಲ್ಲಿ ಬೆಳೆದಿರುವ ಹೂವು ಯಾರ ತಲೆಯಲ್ಲಿ ಮುಡಿಯುವುದಕ್ಕೆ ಯೋಗ್ಯವಾಗಿದೆ; **ಮಿಕ್ಕ ಹೊಲತಿಯರು ನೀವೆನೆ**=ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಸಮಾಜದ ಅತ್ಯಂತ ಕೆಳಸ್ತರದ ಹೊಲತಿಯರು ನೀವಾಗಿರುವಾಗ; **ನಿಮ್ಮ ಜವ್ವನದ ಸೊಕ್ಕು ರೂಪಿನ ಗಾಡಿ ಜಾಣತನದ ಒಪ್ಪ ಏತಕ್ಕೆ ಯೋಗ್ಯಮ್**=ನಿಮ್ಮ ತಾರುಣ್ಯದ ಸೊಕ್ಕು ರೂಪದ ಚೆಲುವು... ಜಾಣತನದ ನುಡಿಗಳು ಯಾವುದಕ್ಕೆ ಯೋಗ್ಯವಾಗಿವೆ;

ರಮಿಸಿದವರುಂಟೆ=ಹೊಲತಿಯರೊಡನೆ ಜತೆಗೂಡಿ ಆನಂದಪಟ್ಟವರು ಯಾರಾದರೂ ಇದ್ದಾರೆಯೆ; **ಶಿವಶಿವ ಈ ಮಾತು ತಾ ಹೊಲೆ**=ಶಿವ ಶಿವ ಸೂರ್ಯವಂಶ ರಾಜನಾದ ನನ್ನನ್ನು ಮದುವೆಯಾಗಬೇಕೆಂಬ ನಿಮ್ಮ

ಮಾತುಗಳೇ ಅತ್ಯಂತ ಕೆಟ್ಟದ್ದಾಗಿವೆ; ಹೊಲೆ=ಕೊಳಕು/ಹೇಸಿಗೆ; **ಹಾಡನ್ ಒಲಿದು ಆಲಿಸಿದ ಕಿವಿಗೆ ಹೊಲೆಯಿಲ್ಲ**=ಹೊಲತಿಯರಾದ ನಾವು ಇಂಪಾಗಿ ಹಾಡಿದ ಹಾಡನ್ನು ಮೆಚ್ಚುಗೆಯಿಂದ ಕೇಳಿದ ನಿನ್ನ ಕಿವಿಗೆ ಹೊಲೆಯಿಲ್ಲ; **ಮಾತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ**=ನಮ್ಮ ಅಂದಚೆಂದದ ಹಾಡು ಕುಣಿತವನ್ನು ನೋಡಿ ಆನಂದಗೊಂಡು ಹೊಗಳಿದ ನಿನ್ನ ನಾಲಿಗೆಗೆ ಹೊಲೆಯಿಲ್ಲ; **ರೂಪ ನೆರೆ ನೋಡಿದ ವಿಲೋಚನಕೆ ಹೊಲೆಯಿಲ್ಲ**=ನಮ್ಮ ರೂಪದ ಚೆಲುವನ್ನು ಕಣ್ತುಂಬ ನೋಡಿ ಸವಿದ ನಿನ್ನ ಕಣ್ಣುಗಳಿಗೆ ಹೊಲೆಯಿಲ್ಲ;

ಮೆಯ್ ಮುಡಿಗಳಿಮ್ ಸುಳಿವ ತಂಗಾಳಿಯಿಮ್ ತೀಡುವ ಸುಗಂಧಮಮ್ ವಾಸಿಸಿದ ನಾಸಿಕಕೆ ನಾಡೆ ಹೊಲೆಯಿಲ್ಲ=ನಮ್ಮ ಮಯ್ ಮುಡಿಗಳ ಕಡೆಯಿಂದ ಸುಳಿಯುತ್ತಿರುವ ತಣ್ಣನೆಯ ಗಾಳಿಯೊಡನೆ ತೇಲಿಬರುತ್ತಿರುವ ಸುವಾಸನೆಯನ್ನು ಮೂಸಿಸುತ್ತ ಆನಂದಿಸುತ್ತಿರುವ ನಿನ್ನ ಮೂಗಿಗೆ ಯಾವುದೇ ಹೊಲೆಯಿಲ್ಲ; **ಸೋಂಕಿಂಗೆ ಹೊಲೆಯುಂಟಾಯ್ತೆ**=ನಮ್ಮ ದೇಹವನ್ನು ಮುಟ್ಟುವುದರಿಂದ ನಿನಗೆ ಹೊಲೆಯು ತಟ್ಟುವುದೆ; **ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕು ಅಧಮ ಒಂದು ಅಧಿಕವೇ**=ಮಾನವ ಜೀವಿಯ ಮಯ್ ಮನದಲ್ಲಿರುವ **“**ಕಿವಿ–ನಾಲಗೆ–ಕಣ್ಣು–ಮೂಗು–ತೊಗಲು**”** ಎಂಬ ಅಯ್ದು ಇಂದ್ರಿಯಗಳಲ್ಲಿ ನಾಲ್ಕು ಕೀಳು ಒಂದು ಮೇಲು ಆಗಿದೆಯೆ. ಅಂದರೆ ನಮ್ಮ ಅಂದಚೆಂದವನ್ನು ಮತ್ತು ಕಲೆಯ ಸೊಗಸನ್ನು ನೋಡಿ ಸವಿದು ಆನಂದಿಸಿದ ನಿನ್ನ ಕಣ್ಣು/ಮೂಗು/ನಾಲಗೆ/ಕಿವಿಗಳಿಗೆ ಯಾವ ಹೊಲೆಯು ತಟ್ಟಲಿಲ್ಲ. ನಮ್ಮನ್ನು ಮದುವೆಯಾಗಿ ನಮ್ಮ ದೇಹದೊಡನೆ ನಂಟನ್ನು ಪಡೆದರೆ, ಆಗ ಹೊಲೆಯಾಗುವುದೆ;

ನಯನೇಂದ್ರಿಯಮ್ ಕಂಡು ಅರಿವವೈಸಲೇ=ಕಣ್ಣುಗಳು ನೋಡುವುದರಿಂದ ತಿಳಿದುಕೊಳ್ಳುತ್ತವೆ; **ಘ್ರಾಣ ವಾಸನೆಯ ಕೊಂಡು ಅರಿವವೈಸಲೆ**=ಮೂಗು ಮೂಸಿಸುವುದರಿಂದ ವಾಸನೆಯನ್ನು ಗ್ರಹಿಸಿಕೊಳ್ಳುತ್ತದೆ; **ಕರ್ಣಂಗಳ್ ಶಬ್ದಮಮ್ ಉಂಡು ಅರಿವವೈಸಲೇ**=ಕಿವಿಗಳು ಕೇಳುವುದರಿಂದ ಶಬ್ದವನ್ನು ತಿಳಿದುಕೊಳ್ಳುತ್ತವೆ; **ಅವು ದೂರದಿಂದಲ್ಲದೆ ಮುಟ್ಟಲಿಲ್ಲ**=ಈ ನಾಲ್ಕು ಇಂದ್ರಿಯಗಳು ದೂರದಿಂದಲ್ಲದೆ ಯಾವುದನ್ನು ಮುಟ್ಟಲಿಲ್ಲ; **ಭಂಡತನವು ಈ ಮಾತು**=ನೀವು ಕೇಳುತ್ತಿರುವ ಪ್ರಶ್ನೆಯು ನಾಚಿಕೆಯನ್ನು ತೊರೆದ ಹಟಮಾರಿತನದ ಮಾತುಗಳಾಗಿವೆ; **ಇದಕ್ಕೆ ಉಪಮಾನವೇ**=ನಿಮ್ಮ ಕೆಟ್ಟ ನಡೆನುಡಿಗೆ ಹೋಲಿಕೆ ಬೇಕೆ; **ಕೆಂಡವನು ಮುಟ್ಟಿದಡೆ ಬೇವಂತೆ ಕೇಳ್ದಡಮ್, ಕಂಡು ವಾಸಿಸಿದಡಮ್ ಬೆಂದವೇ**=ಕೆಂಡವನ್ನು ಮುಟ್ಟಿದರೆ ಸುಡುವಂತೆ ಅಲ್ಲಿ ಕೆಂಡ ಇದೆ ಎಂಬುದನ್ನು ಕೇಳಿದಾಗ... ಕೆಂಡದ ಬಿಸಿಯಿಂದ ಹೊರಹೊಮ್ಮುವ ಹೊಗೆಯ ಗಾಟು ಮೂಗಿಗೆ ಹೊಡೆದಾಗ...ಕಿವಿ ಇಲ್ಲವೇ ಮೂಗು ಬೆಂದುಹೋದವೆ;

ನೀವ್ ಕಾಳುಗೆಡೆಯದೆ.. ಹೋಗಿ=ನೀವು ಕೆಟ್ಟ ಮಾತುಗಳನ್ನಾಡದೆ ಇಲ್ಲಿಂದ ಹೋಗಿ; **ಸತ್ಕುಲಜ ಭೂಪ, ಶಾಪದಿಂದೆ ಎಮಗಾದ ದುಷ್ಕುಲಮ್ ನಿನ್ನಯ ಸಂಗದಿಮ್ ಶುದ್ಧವಪ್ಪುದು ಎಂಬ ಅಪೇಕ್ಷೆಯಿಮ್ ಬಂದೆವು ಎನಲ್**=ಒಳ್ಳೆಯ ಕುಲದಲ್ಲಿ ಹುಟ್ಟಿರುವ ರಾಜನೇ, ಶಾಪದಿಂದ ಕೀಳು ಕುಲದಲ್ಲಿ ಹುಟ್ಟಿರುವ ನಾವು ನಿನ್ನ ಸಂಗದಿಂದ ಮೇಲು ಕುಲದವರಾಗುತ್ತೇವೆ ಎಂಬ ಬಯಕೆಯಿಂದ ನಿನ್ನ ಬಳಿ ಬಂದೆವು ಎನ್ನಲು; **ಒಡನೆ**=ಗಾಣರಾಣಿಯರ ಉದ್ದೇಶವನ್ನು ಕೇಳಿದ ಮರುಗಳಿಗೆಯಲ್ಲಿಯೇ ರಾಜ ಹರಿಶ್ಚಂದ್ರನ ಮನದಲ್ಲಿ ತನ್ನ ಕುಲದ ಹಿರಿಮೆಯ ಅಹಂಕಾರ ಹೆಡೆಯೆತ್ತಿ; **ನಿಮಗೋಸುಗ ಎನ್ನ ಕುಲಮಮ್ ಕೆಡಿಪೆನೆ**=ನಿಮಗಾಗಿ ನನ್ನ ಕುಲದ ಉತ್ತಮಿಕೆಯನ್ನು ಕೆಡಿಸಿಕೊಳ್ಳುತ್ತೇನೆಯೆ;

ಮೇಲು ವರ್ಣಕ್ಕೆ ಸೇರಿದ ಬ್ರಾಹ್ಮಣ–ಕ್ಷತ್ರಿಯ–ವೈಶ್ಯರ ಮಯ್ ಮನದಲ್ಲಿ "ತಾವು ಮಾತ್ರ ಕುಲದಲ್ಲಿ ಉತ್ತಮರು" ಎಂಬ ಮೇಲರಿಮೆಯು ನೆಲೆಗೊಂಡಿದೆ. ಶೂದ್ರ ಮತ್ತು ಚಂಡಾಳ ಸಮುದಾಯಕ್ಕೆ ಸೇರಿದ ಹೊಲೆಯ ಮಾದಿಗರು ಕೀಳು ಕುಲದವರು ಎಂಬ ತಿರಸ್ಕಾರದ ಭಾವನೆಯಿದೆ; ಕುಲದ ಮೇಲರಿಮೆಯು ರಾಜ ಹರಿಶ್ಚಂದ್ರನ ಮಯ್ ಮನದಲ್ಲಿ ಹಾಸುಹೊಕ್ಕಾಗಿದೆ;

ಅರಸ, ಹೇಳ್ ಪಾಪಿಗಳ ಪಾಪಮಮ್ ತೊಳೆವ ಗಂಗೆಗೆ ಪಾಪ ಲೇಪವುಂಟಾಯ್ತೆ=ಅರಸನೇ ಹೇಳು. ಪಾಪಿಗಳ ಪಾಪವನ್ನು ತೊಳೆಯುವ ಗಂಗೆಗೆ ಪಾಪ ಅಂಟಿಕೊಳ್ಳುವುದೆ; ಅಂದರೆ ತನ್ನಲ್ಲಿ ಮಿಂದವರೆಲ್ಲರ ಪಾಪವನ್ನು ಹೋಗಲಾಡಿಸಿ, ತಾನು ಪವಿತ್ರಳಾಗಿಯೇ ಉಳಿಯುತ್ತಾಳಲ್ಲವೇ ಎಂದು ಗಾಣ ರಾಣಿಯರು ರಾಜ ಹರಿಶ್ಚಂದ್ರನನ್ನು ಪ್ರಶ್ನಿಸುತ್ತಾರೆ; **ಕುಲಧರ್ಮ ಈ ಪಂಥವಲ್ಲ**=ಕುಲಧರ್ಮದ ಸಂಪ್ರದಾಯ ಮತ್ತು ಆಚರಣೆಗಳು ಆ ರೀತಿಯದಲ್ಲ; ವ್ಯಕ್ತಿಯು ಹುಟ್ಟಿನಿಂದ ಸಾಯುವ ತನಕ ತಾನು ಹುಟ್ಟಿದ ಕುಲದ ಉತ್ತಮಿಕೆಯನ್ನು ಕಾಪಾಡಿ ಕೊಳ್ಳಲೇಬೇಕು; **ಕೊಡವಾಲ ಕೆಡಿಸುವಡೆ ಆಮ್ಲ ಎನಿತಾಗಬೇಕು**=ಕೊಡದಲ್ಲಿರುವ ಹಾಲನ್ನು ಕೆಡಿಸುವುದಕ್ಕೆ ಹುಳಿ ಎಷ್ಟಾಗಬೇಕು. ಅಂದರೆ ತುಂಬಿದ ಕೊಡದಲ್ಲಿರುವ ಹಾಲಿಗೆ ಒಂದು ತೊಟ್ಟು ಹುಳಿ ಬಿದ್ದರೆ ಸಾಕು ಹಾಲು ಒಡೆದುಹೋಗಿ ಹಾಳಾಗುತ್ತದೆ. ಅಂತೆಯೇ ಸೂರ್ಯವಂಶದ ರಾಜನಾದ ನಾನು ಹೊಲತಿಯರಾದ ನಿಮ್ಮನ್ನು ಮದುವೆಯಾದರೆ, ನನ್ನ ಕುಲದ ಉತ್ತಮಿಕೆಯೆಲ್ಲವೂ ನಾಶವಾಗುತ್ತದೆ;

ಮಾತಿಂಗೆ ಮಾತು ಕೊಡಲು ಅರಿದು=ರಾಜನೇ, ನಿನ್ನೊಡನೆ ಮಾತಿಗೆ ಮಾತು ಕೊಡುವಷ್ಟು ಶಕ್ತಿಯಾಗಲಿ ಯುಕ್ತಿಯಾಗಲಿ ನಮ್ಮಲ್ಲಿಲ್ಲ; **ನಿನ್ನಯ ನುತ ಖ್ಯಾತಿಗೆ, ಅದಟಿಂಗೆ, ರೂಪಿಂಗೆ, ಸುರುಚಿರ ಗುಣವ್ರಾತಕ್ಕೆ, ಹರೆಯಕ್ಕೆ, ಗರುವಿಕೆಗೆ ಮನಸಂದು ಮತಿಗೆಟ್ಟು ಮರುಳಾದೆವು**=ನಿನ್ನ ಪ್ರಸಿದ್ಧವಾದ ಕೀರ್ತಿಗೆ, ಪರಾಕ್ರಮಕ್ಕೆ, ರೂಪಕ್ಕೆ,

ಮನೋಹರವಾದ ಸದ್ಗುಣಗಳಿಗೆ, ಪ್ರಾಯಕ್ಕೆ, ಅತ್ಯುತ್ತಮವಾದ ವ್ಯಕ್ತಿತ್ವಕ್ಕೆ ಮನಸೋತು ಹುಚ್ಚುಹಿಡಿದಂತಾಗಿ ನಿನ್ನನ್ನು ಗಂಡನನ್ನಾಗಿ ಪಡೆಯಲೇಬೇಕೆಂದು ನಿಶ್ಚಯಿಸಿಕೊಂಡೆವು;

ಓತು ಬಂದವರನ್ ಉಪಚರಿಸದಿಪ್ಪುದು ನಿನಗೆ ನೀತಿಯಲ್ಲ=ಒಲಿದು ಬಂದವರನ್ನು ಒಲವು ನಲಿವಿನಿಂದ ಕಾಣದೆ ಇರುವುದು ನಿನ್ನ ಉನ್ನತವಾದ ವ್ಯಕ್ತಿತ್ವಕ್ಕೆ ಒಪ್ಪುವುದಿಲ್ಲ; **ಏಗೆಯ್ದಡಮ್ ಗಂಡನಾದಲ್ಲದೆ ಆತುರಮ್ ಪೋಗದು**= ನೀನು ಏನೇ ಮಾಡಿದರೂ ಏನೇ ಹೇಳಿದರೂ ನೀನು ನಮ್ಮ ಗಂಡನಾದಲ್ಲದೆ ನಮ್ಮ ಮಯ್ ಮನದಲ್ಲಿ ತುಡಿಯುತ್ತಿರುವ ಆಸೆಯು ಹೋಗುವುದಿಲ್ಲ; **ಇನ್ನು ಒಲಿದಂತೆ ಮಾಡು. ನಿನ್ನಯ ಬೆನ್ನ ಬಿಡೆವು**=ಇನ್ನು ನಿನ್ನ ಮನಸ್ಸಿಗೆ ಬಂದುದನ್ನು ಮಾಡು. ನೀನು ಏನು ಮಾಡಿದರೂ ನಿನ್ನನ್ನು ಹಿಂಬಾಲಿಸುವುದನ್ನು ಬಿಡುವುದಿಲ್ಲ; **ಬಳಿವಿಡಿದು ಬಂದು ಮಾಡುವುದೇನು**=ನನ್ನನ್ನು ಹಿಂಬಾಲಿಸಿಕೊಂಡು ಬಂದು ನೀವೇನು ಮಾಡುತ್ತೀರಿ;

ನಮ್ಮ ಬೆಂಬಳಿಯಲಿ ಎನಿಬರು ಹೊಲೆಯರಿಲ್ಲ=ನಮ್ಮ ಬಳಿಯಲ್ಲಿ ಎಷ್ಟೊಂದು ಮಂದಿ ಹೊಲೆಯರಿಲ್ಲ. ಅಂದರೆ ಅಯೋಧ್ಯೆಯಲ್ಲಿ ಸಾಕಷ್ಟು ಮಂದಿ ಹೊಲೆಯರಿದ್ದಾರೆ; **ಅಹಗೆ ಬಿಡೆವು**=ಆಗಲಿ. ನಿನ್ನ ಮಾತು ನಿಜವಾದರೂ ನಾವು ನಿನ್ನನ್ನು ಹಿಂಬಾಲಿಸುವುದನ್ನು ಬಿಡೆವು; **ಎಳಸಿ ಮಚ್ಚಿಸಿ ಮರುಳ್ಗೊಳಿಸಿ ಮತ್ತೆ ಒಲ್ಲನ್ ಅವನಿಪನ್ ಎಂದು ಮೊರೆಯಿಡುತ್ತ ಇಳೆಯೊಳಗೆ ಸಾರುತ್ತ ದೂರುತ್ತ ಬಪ್ಪೆವು ಎನೆ**=ರಾಜ ಹರಿಶ್ಚಂದ್ರನು ನಮ್ಮನ್ನು ಬಯಸಿ, ಮೆಚ್ಚಿಕೊಂಡು, ಒಲವು ನಲಿವಿನಿಂದ ಮನವೊಲಿಸಿಕೊಂಡು, ಅನಂತರ ನಮ್ಮನ್ನು ನಿರಾಕರಿಸುತ್ತಿದ್ದಾನೆ ಎಂದು ಮೊರೆಯಿಡುತ್ತ ಭೂಮಂಡಲದಲ್ಲಿ ಕೂಗಿಹೇಳುತ್ತ ನಿನ್ನ ಬಗ್ಗೆ ದೂರುತ್ತ ಬರುತ್ತೇವೆ ಎಂದು ಗಾಣ ರಾಣಿಯರಿಬ್ಬರು ನುಡಿಯಲು; **ಮುಳಿದು ಘುಡುಘುಡಿಸಿ ಕೋಪಾಟೋಪದಿಮ್**=ಗಾಣ ರಾಣಿಯರ ಹಟಮಾರಿತನದ ನುಡಿಗಳನ್ನು ಕೇಳುತ್ತಿದ್ದಂತೆ ಹರಿಶ್ಚಂದ್ರನು ಅಬ್ಬರಿಸಿ ಕೋಪೋದ್ರೇಕದಿಂದ;

ಹಲ್ಲ ಕಳೆ ಬಾಯ ಹರಿಯ ಹೊಯ್ ಹೊಡೆಹೊಡೆ ಎನುತ್ತ ಭೂನಾಥನು ಉರವಣಿಸಿ ಎದ್ದನ್=ಹಲ್ಲನ್ನು ಉದುರಿಸು ಬಾಯಿ ಹರಿದುಹೋಗುವಂತೆ ಹೊಡೆ ಸರಿಯಾಗಿ ಹೊಡೆ ಹೊಡೆ ಎನ್ನುತ್ತ ರಾಜ ಹರಿಶ್ಚಂದ್ರನು ರಭಸದಿಂದ ಮೇಲೆದ್ದನು; **ಪ್ರಧಾನ ಬಳಿವಿಡಿದು ಚಮ್ಮಟಿಗೆಯಮ್ ತುಡುಕಿ ಸೆಳೆದು ಏಳಲ್**= ಮಂತ್ರಿಯಿದ್ದ ಕಡೆಗೆ ಬಂದು, ಅವನ ಬಳಿಯಿದ್ದ ಚಾವಟಿಯನ್ನು ತಟ್ಟನೆ ಹಿಡಿದೆಳೆದುಕೊಂಡು ಗಾಣ ರಾಣಿಯರ ಕಡೆಗೆ ಮುನ್ನುಗ್ಗಿ; **ಒಬ್ಬರೊಬ್ಬರನು ಬೆನ್ನೊಡೆಯೆ**=ಇಬ್ಬರು ಗಾಣ ರಾಣಿಯರ ಬೆನ್ನು ಮೂಳೆ ಮುರಿಯುವಂತೆ

ಹರಿಶ್ಚಂದ್ರನು ಬಲವಾಗಿ ಹೊಡೆಯಲು; **ಮುಡಿ ಹುಡಿಯೊಳಗೆ ಹೊರಳೆ**= ಹರಿಶ್ಚಂದ್ರನ ಬಲವಾದ ಹೊಡೆತಗಳನ್ನು ತಡೆಯಲಾರದೆ ನೆಲದ ಮೇಲೆ ಬಿದ್ದ ಗಾಣರಾಣಿಯರ ಮುಡಿಯು ದೂಳಿನಲ್ಲಿ ಹೊರಳಾಡುತ್ತಿರಲು;

ಹಲು ಬೀಳೆ, ಬಾಯ್ ಒಡೆಯೆ, ಮೆಯ್ ನೋಯೆ, ಕೈಯುಳುಕೆ=ನೆಲಕ್ಕೆ ಉರುಳಿ ಬಿದ್ದು ಹೊರಳಾಡುತ್ತಿರುವ ಗಾಣ ರಾಣಿಯರ ಮಯ್ ಮೇಲೆ ಹರಿಶ್ಚಂದ್ರನು ಮನಸೋ ಇಚ್ಚೆ ಹೊಡೆಯುತ್ತಿರಲು ಅವರಿಬ್ಬರ ಹಲ್ಲುಗಳು ಉದುರಿಬಿದ್ದವು; ಬಾಯಿ ಒಡೆದು ನೆತ್ತರು ಹರಿಯತೊಡಗಿತು; ಮಯ್ ನೋಯುತ್ತಿರಲು; ಎದ್ದುಬಿದ್ದೇಳುತ್ತಿರುವಾಗ ಕಯ್ ಉಳುಕಲು; **ಮೀರಿ ನಡೆದಲ್ಲಿ ನಡೆದು**=ತನ್ನ ಹೊಡೆತದಿಂದ ತಪ್ಪಿಸಿಕೊಂಡು ಗಾಣರಾಣಿಯರು ಓಡುತ್ತಿರುವ ಎಡೆಯತ್ತ ಹರಿಶ್ಚಂದ್ರನು ಅವರನ್ನು ಅಟ್ಟಿಸಿಕೊಂಡು ಹೋಗಿ;

ಹೊಕ್ಕಲ್ಲಿ ಹೊಕ್ಕು=ಗಾಣ ರಾಣಿಯರು ತಪ್ಪಿಸಿಕೊಂಡು ಹೋಗಲೆಂದು ಅಡಗಿದ ಎಡೆಯೆಲ್ಲವನ್ನು ಹೊಕ್ಕು; **ರುಧಿರಮ್ ಬಸಿಯೆ ಹೊಯ್ದು**=ನೆತ್ತರು ತೊಟ್ಟಿಕ್ಕಿ ಹರಿಯುವಂತೆ ಹೊಡೆದು; **ಹೊಗರ್ ಉಡುಗಲ್**=ಹರಿಶ್ಚಂದ್ರನ ಆಕ್ರೋಶ ತುಸು ಕಡಿಮೆಯಾಗಲು; **ಅರಸನ್ ತಿರುಗಲ್**=ರಾಜನು ಗಾಣ ರಾಣಿಯರನ್ನು ಬಿಟ್ಟು, ಇತ್ತ ಹೆಂಡತಿ ಮಗ ಇದ್ದ ಕಡೆಗೆ ಹಿಂತಿರುಗಲು; **ಅತ್ತಲ್ ಅವರ್ ಒರಲುತ್ತ ಆ ಮುನಿಪನೆಡೆಗೆ ಹರಿದರ್**=ಅತ್ತಲು ಗಾಣ ರಾಣಿಯರು ಸಂಕಟದಿಂದ ಅರಚುತ್ತ, ವಿಶ್ವಾಮಿತ್ರ ಮುನಿಯ ಆಶ್ರಮದಿಂದ ಓಡಿದರು;

ಈ ಸನ್ನಿವೇಶದಲ್ಲಿ ಹರಿಶ್ಚಂದ್ರನು ಅತ್ಯಂತ ಕ್ರೂರವಾಗಿ ಗಾಣ ರಾಣಿಯರ ಮೈ ಮೇಲೆ ಹಲ್ಲೆ ನಡೆಸಿದ್ದಾನೆ. ಇಂಡಿಯಾ ದೇಶದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ವರ್ಣ ಮತ್ತು ಜಾತಿ ಪದ್ಧತಿಯಲ್ಲಿನ ಮೇಲು ಕೀಳಿನ ತಾರತಮ್ಯವು ಇತಿಹಾಸದ ಉದ್ದಕ್ಕೂ ಜನಸಮುದಾಯದ ಬದುಕಿನಲ್ಲಿ ನೆಲೆಗೊಂಡಿರುವುದನ್ನು ಹರಿಶ್ಚಂದ್ರನ ಹಲ್ಲೆಯು ಸಂಕೇತಿಸುತ್ತಿದೆ.

ವರ್ಣ ಮತ್ತು ಜಾತಿ ವ್ಯವಸ್ಥೆಯಲ್ಲಿ ಹುಟ್ಟಿ ಬೆಳೆದ ವ್ಯಕ್ತಿಯೊಬ್ಬನು ಒಳ್ಳೆಯ ನಡೆನುಡಿಯಿಂದ ಕೂಡಿ ಪ್ರಾಮಾಣಿಕತನದಿಂದ ಸಹಮಾನವರಿಗೆ ಯಾವುದೇ ಬಗೆಯ ಕೇಡನ್ನು ಮಾಡದೆ ಬದುಕುತ್ತಿದ್ದರೂ, ಅವನ ಮಯ್ ಮನದಲ್ಲಿ ವರ್ಣ ಇಲ್ಲವೇ ಜಾತಿಯ ಮೇಲರಿಮೆಯು ರಕ್ತಗತವಾಗಿರುತ್ತದೆ. ಆದ್ದರಿಂದಲೇ ವರ್ಣ ಮತ್ತು ಜಾತಿಯ ಸಂಪ್ರದಾಯಗಳನ್ನು ಹಾಗೂ ಕಟ್ಟುಪಾಡುಗಳನ್ನು ಚಾಚುತಪ್ಪದೆ ಜೀವನದ ಉದ್ದಕ್ಕೂ ಅಂದರೆ ಹುಟ್ಟಿನಿಂದ ಹಿಡಿದು ಮದುವೆ ಮತ್ತು ಸಾವಿನ ವರೆಗೂ ಪಾಲಿಸುತ್ತಾನೆ. ಸಾವಿನಲ್ಲಿಯೂ ಆಯಾಯ ವರ್ಣ ಮತ್ತು ಜಾತಿಯ ಸುಡುಗಾಡಿನಲ್ಲಿಯೇ ಅವನ ಶವ ಸಂಸ್ಕಾರ ನಡೆಯುತ್ತದೆ. ವರ್ಣ ಮತ್ತು ಜಾತಿ

ವ್ಯವಸ್ಥೆಯಲ್ಲಿ ಜನರ ಬದುಕು ಈ ರೀತಿ ಎಂದೆಂದಿಗೂ ಯಾವುದೇ ಕಾರಣಕ್ಕೂ ಮೀರಬಾರದ ಸಂಪ್ರದಾಯ ಹಾಗೂ ಕಟ್ಟುಪಾಡುಗಳಿಗೆ ಬದ್ಧವಾಗಿರುವುದರಿಂದಲೇ ತಮ್ಮದಲ್ಲದ ಇನ್ನಿತರ ವರ್ಣ ಮತ್ತು ಜಾತಿಯ ಜನರ ಬಗ್ಗೆ ಜನರು ಅತ್ಯಂತ ಕ್ರೂರವಾಗಿ ನಡೆದುಕೊಳ್ಳುತ್ತಾರೆ.

ಜಗತ್ತಿನಲ್ಲಿರುವ ಮಾನವ ಜೀವಿಗಳನ್ನು ಬೇರೆ ಬೇರೆ ಬುಡಕಟ್ಟುಗಳನ್ನಾಗಿ, ಜನಾಂಗಗಳನ್ನಾಗಿ, ಧರ್ಮಗಳನ್ನಾಗಿ, ಜಾತಿಗಳನ್ನಾಗಿ, ಉಪಜಾತಿಗಳನ್ನಾಗಿ ಹೆಸರಿಸಿರುವುದು ಮಾನವರೇ ಎಂಬ ವಾಸ್ತವವನ್ನು ಅರಿಯದೆ, ಇಂತಹ ವಿಂಗಡಣೆಯು ದೇವ ನಿರ್ಮಿತವೆಂಬ ನಂಬಿಕೆಯು ಜನಮನದಲ್ಲಿರುವುದೇ ಜಗತ್ತಿನ ಜನಸಮುದಾಯದ ಸಹಬಾಳ್ವೆಗೆ ಮಾರಕವಾಗಿ, ಕ್ರೌರ್ಯಕ್ಕೆ ಕಾರಣವಾಗಿದೆ.

ಈ ಸನ್ನಿವೇಶದಲ್ಲಿ ಗಾಣ ರಾಣಿಯರ ಮಯ್ ಮೇಲೆ ನಡೆದ ಹರಿಶ್ಚಂದ್ರನ ಕ್ರೂರವಾದ ಹಲ್ಲೆಗೆ ವರ್ಣ ವ್ಯವಸ್ಥೆಯ ಕಟ್ಟುಪಾಡುಗಳಿಗೆ ಆತ ಬದ್ಧನಾಗಿರುವುದೇ ಕಾರಣವಾಗಿದೆ. ವರ್ಣ ಮತ್ತು ಜಾತಿ ವ್ಯವಸ್ಥೆಯಲ್ಲಿ ಸಹಮಾನವರ ಬಗ್ಗೆ ಪರಸ್ಪರ ಪ್ರೀತಿ, ಕರುಣೆ, ತಾಳ್ಮೆ, ಜವಾಬ್ದಾರಿ ಮತ್ತು ಸಮಾನತೆಯ ನಡೆನುಡಿಗೆ ಅವಕಾಶವಿಲ್ಲ. ಏಕೆಂದರೆ ಮೇಲು ಕೀಳಿನ ತರತಮಗಳಿಂದಲೇ ವರ್ಣ ಮತ್ತು ಜಾತಿಗಳು ರಚನೆಗೊಂಡಿವೆ;

❖

ಪ್ರಸಂಗ–೧೦

ಗಾಣ ರಾಣಿಯರ ಮೊರೆ

ಬಿಡುಮುಡಿಯ=ಕೂದಲು ಕೆದರಿದ ತಲೆಯ; **ಸುರಿವ ಕಂಬನಿವೊನಲ**= ಕಣ್ಣುಗಳಿಂದ ಒಂದೇ ಸಮನೆ ಸುರಿಯುತ್ತಿರುವ ಕಣ್ಣೀರಿನ ಕೋಡಿಯ; **ಕಳೆದ ಎಳಲು ಉಡುಗೆಗಳ**=ಹರಿದು ಚಿಂದಿ ಚಿಂದಿಯಾಗಿ ನೇತಾಡುತ್ತಿರುವ ಬಟ್ಟೆಗಳ; **ಬೆನ್ನೊಡೆದು ಹನಿವ ರಕುತದ**=ಬೆನ್ನಿನ ತೊಗಲು ಹರಿದು ಮೂಳೆ ಮುರಿದು ತೊಟ್ಟಿಕ್ಕಿತ್ತಿರುವ ನೆತ್ತರಿನ; **ಹೊಯ್ವ ಕುಡಿ ಅಳ್ಳೆಗಳ**=ಏದುಸಿರನ್ನು ಬಿಡುತ್ತಿರುವಾಗ ಉಬ್ಬಿ ತಗ್ಗುತ್ತಿರುವ ಪಕ್ಕೆಗಳ; **ಹರಿವ ಕಾಲುಗಳ**=ಬಿದ್ದಂಬೀಳ ಓಡಿಬರುತ್ತಿರುವ ಕಾಲುಗಳ; **ಮರಳಿ ನೋಡುವ ಹೆದರುಗಣ್ಣ**=ರಾಜ ಹರಿಶ್ಚಂದ್ರನು ತಮ್ಮನ್ನು ಬೆನ್ನಟ್ಟಿ ಬರುತ್ತಿರಬಹುದೆಂಬ ಅಂಜಿಕೆಯಿಂದ ಹಿಂತಿರುಗಿ ನೋಡುತ್ತಿರುವ ಹೆದರಿದ ಕಣ್ಣುಗಳ;

ತೃಣವ ತುಡುಕಿ ನೆಗಹಿದ ಕೈಯ ಗಾಣ ರಾಣಿಯರು=ಹುಲ್ಲುಕಡ್ಡಿಯನ್ನು ಕಯ್ಗಳಲ್ಲಿ ಎತ್ತಿಹಿಡಿದುಕೊಂಡು ಓಡಿಬರುತ್ತಿರುವ ಗಾಣ ರಾಣಿಯರು; ಹುಲ್ಲು ಕಡ್ಡಿಯನ್ನು ಕಯ್ಗಳಲ್ಲಿ ಎತ್ತಿ ಹಿಡಿದುಕೊಂಡು ಬರುವುದು ಒಂದು ಆಚರಣೆಯ ಸಂಕೇತ.

೧. ವ್ಯಕ್ತಿಗಳು ಬೇರೆಯವರಿಂದ ಆಪತ್ತಿಗೆ ಗುರಿಯಾಗುವ ಸನ್ನಿವೇಶದಲ್ಲಿ **'ತಮ್ಮ ಮಾನಪ್ರಾಣಗಳಿಗೆ ಅಪಾಯ ತಟ್ಟುತ್ತಿದೆ ತಮ್ಮನ್ನು ಕಾಪಾಡಿ'** ಎಂಬುದನ್ನು

ಇತರರಿಗೆ ಸೂಚಿಸಲು ಹುಲ್ಲುಕಡ್ಡಿಗಳನ್ನು ಕಯ್ಗಳಲ್ಲಿ ಹಿಡಿದು ಬರುತ್ತಿದ್ದರು.

೨. ಜನರು ತಮ್ಮ ಮಾನಪ್ರಾಣವನ್ನು ಉಳಿಸಿಕೊಳ್ಳಲೆಂದು ಶರಣಾಗತಿ ಸೂಚಕವಾಗಿ ಕಯ್ಯಲ್ಲಿ ಹುಲ್ಲನ್ನು ಹಿಡಿದು ಇಲ್ಲವೇ ಬಾಯಲ್ಲಿ ಹುಲ್ಲನ್ನು ಕಚ್ಚಿಹಿಡಿದು ಹಗೆಗಳ ಬಳಿಗೆ ಬರುತ್ತಿದ್ದರು.

ಎಲೆ ಕೌಶಿಕಮುನೀಂದ್ರ ನೃಪತಿ ನಿಷ್ಕಾರಣಮ್ ಹೊಡೆದನ್ ಮೊರೆಯೋ ಎಂಬ ನಿಡುಸರದ ಮಡದಿಯರ ದನಿಯನ್ ಆಲಿಸಿ=ಎಲೆ ವಿಶ್ವಾಮಿತ್ರ ಮುನಿಯೇ, ರಾಜ ಹರಿಶ್ಚಂದ್ರನು ವಿನಾಕಾರಣವಾಗಿ ನಮ್ಮನ್ನು ಹೊಡೆದನು ನಮ್ಮ ಸಂಕಟವನ್ನು ನೋಡು ಎಂದು ದೊಡ್ಡ ದನಿಯಲ್ಲಿ ಅರಚುತ್ತ, ತನ್ನತ್ತ ಬರುತ್ತಿರುವ ಗಾಣರಾಣಿಯರ ಗೋಳಿನ ದನಿಯನ್ನು ಕೇಳಿ;

ಪರ್ಣಶಾಲೆಯಮ್ ಹೊರಮಟ್ಟನು=ಆಶ್ರಮದ ಎಲೆಮನೆಯಿಂದ ವಿಶ್ವಾಮಿತ್ರನು ಹೊರಬಂದನು; **ತಂದೆ, ಓರಂತೆ ಕೇಳ್**=ತಂದೆಯೇ, ಮನವಿಟ್ಟು ಕೇಳು; **ಆರ ಮನೆಯವರ್ ಎಂದು ಕೇಳ್ದಡೆ**=ರಾಜ ಹರಿಶ್ಚಂದ್ರನು ನಮ್ಮನ್ನು ನೀವು ಯಾರ ಮನೆಯವರು ಎಂದು ಕೇಳಿದಾಗ;

ಎರಡನೆಯ ಪುರವೈರಿ ವಿಶ್ವಾಮಿತ್ರಮುನಿಯ ಮನೆಯವರ್ ಎಂದಡೆ= ಎರಡನೆಯ ಶಿವನಾದ ವಿಶ್ವಾಮಿತ್ರ ಮುನಿಯ ಮನೆಯವರು ಎಂದು ಹೇಳಿದಾಗ; **ಆ ರಾಯನ್ ಎದ್ದು ಕೈಯಾರೆ ಎಮ್ಮನ್ ಸದೆಬಡಿದನ್**=ಆ ರಾಜನು ಎದ್ದು ಬಂದು ತನ್ನ ಕಯ್ಯಾರೆ ನಮ್ಮ ಮೇಲೆ ಹಲ್ಲೆ ಮಾಡಿ, ಮನಬಂದಂತೆ ಹೊಡೆದನು; **ನಿರಪರಾಧಿಗಳನು ಕಾರುಣ್ಯಚಿತ್ತದಿಮ್ ಕಳುಹಿ ಕೊಲಿಸಿದೆ ಎಂದು ಮೊರೆಯಿಟ್ಟಡೆ**= ಯಾವ ತಪ್ಪನ್ನು ಮಾಡದ ಮುಗ್ಧೆಯರಾದ ನಮ್ಮನ್ನು **'ಮಕ್ಕಳಿಗೆ ಒಳ್ಳೆಯದಾಗಲಿ'** ಎಂಬ ಒಲವಿನಿಂದ ನೀನು ಅವನ ಬಳಿಗೆ ಕಳುಹಿಸಿ, ನಮ್ಮನ್ನು ಸಂಕಟಕ್ಕೆ ಗುರಿಮಾಡಿದೆ ಎಂದು ದೂರನ್ನು ಹೇಳಿದಾಗ;

ಎನ್ನಯ ಮನೋರಥಮ್ ಕೈಸಾರ್ದುದು ಅಳಲಬೇಡಿ ಎಂದು ಕೋಪಾಟೋಪದಿಮ್ ಹರಿದನು=ನನ್ನ ಮನದ ಉದ್ದೇಶ ಈಡೇರಿತು. ನೀವು ಇನ್ನು ಸಂಕಟಪಡಬೇಡಿ ಎಂದು ಗಾಣ ರಾಣಿಯರನ್ನು ಸಂತಯಿಸಿ, ಕೋಪೋದ್ರೇಕದಿಂದ ಅಬ್ಬರಿಸುತ್ತ ರಾಜ ಹರಿಶ್ಚಂದ್ರನು ಇದ್ದ ಎಡೆಗೆ ಬಂದನು;

❖

ಪ್ರಸಂಗ–೧೧

ರಾಜ್ಯ ಸರ್ವಸ್ವ ದಾನ

ರಾಜ್ಯ ಸರ್ವಸ್ವ ದಾನ=ರಾಜ್ಯದ ಸಕಲ ಸಂಪತ್ತನ್ನು ದಾನಮಾಡುವುದು;

ವಿಶ್ವಾಮಿತ್ರನ ಕೋಪೋದ್ರೇಕದ ಚಹರೆಯನ್ನು ಮುನಿಯಾದವನ ಉಡುಗೆ ತೊಡುಗೆಗಳೊಡನೆ ಸಮೀಕರಿಸಿ ಅತಿಶಯವಾದ ನುಡಿಗಳ ಮೂಲಕ ಚಿತ್ರಿಸಲಾಗಿದೆ. ವಡಬಾಗ್ನಿ=ಕಡಲಿನಲ್ಲಿ ಕಾಣಿಸಿಕೊಳ್ಳುವ ಬೆಂಕಿ; **ವಡಬಾಗ್ನಿ ಜಡೆವೊತ್ತುದೋ**=ಕಡಲಿನ ಬೆಂಕಿಯೇ ತಲೆಯಲ್ಲಿ ಎತ್ತಿಕಟ್ಟಿರುವ ಜಡೆಯ ರೂಪವನ್ನು ತಳೆಯಿತೋ; **ಸಿಡಿಲು ಹೊಸ ಭಸಿತವ ಇಡಕಲಿತುದೋ**=ಎಲ್ಲವನ್ನೂ ಸುಟ್ಟು ಬೂದಿ ಮಾಡಬಲ್ಲ ಸಿಡಿಲು... ಹಣೆಯಲ್ಲಿ ಹೊಸ ವಿಭೂತಿಯನ್ನು ಇಡಲು ಕಲಿಯಿತೋ; ಕೃಷ್ಣಾಜಿನ=ಕರಿಯ ಜಿಂಕೆಯ ತೊಗಲು; **ಕಾಡ ಕಿಚ್ಚು ಕೃಷ್ಣಾಜಿನವನ್ ಉಡಕಲಿತುದೋ**=ಕಾಡೆಲ್ಲವನ್ನೂ ಸುಡುವ ಬೆಂಕಿಯು ಜಿಂಕೆಯ ತೊಗಲನ್ನು ಉಡಲು ಕಲಿತುದೋ; ವಹ್ನಿ=ಬೆಂಕಿ;

ಪ್ರಳಯ ವಹ್ನಿ ತಪವಿರ್ದುದೋ=ಪ್ರಳಯ ಕಾಲದ ಬೆಂಕಿಯು ತಪಸ್ಸಿಗೆ ಕುಳಿತಿದೆಯೋ; ಭಾಳಲೋಚನ=ಹಣೆಯಲ್ಲಿ ಮೂರನೆಯ ಕಣ್ಣುಳ್ಳ ಶಿವ; ಕಡುಗು=ಹೆಚ್ಚಾಗು; **ಭಾಳಲೋಚನನ ಕೋಪ ಕಡುಗಿ ಮುನಿಯಾಯ್ತೊ**= ಮುಕ್ಕಣ್ಣನಾದ ಶಿವನ ಕೋಪವೇ ಹೆಚ್ಚಾಗಿ ವಿಶ್ವಾಮಿತ್ರ ಮುನಿಯ ರೂಪವನ್ನು ತಳೆಯಿತೊ; **ಹೇಳ್ ಎನೆ**=ಹೇಳು ಎನ್ನುವಂತೆ; ಕಣ್ಣ ಕಡೆ=ಕಣ್ಣುಗಳ ಅಂಚು;

ತೋರ+ಕಿಡಿ=ದಪ್ಪನೆಯ ಕೆಂಡ; **ಕಣ್ಣ ಕಡೆ ತೋರಗಿಡಿ ಕೆದರೆ**=ವಿಶ್ವಾಮಿತ್ರನ ಕಣ್ಣಂಚುಗಳಿಂದ ದೊಡ್ಡ ಕಿಡಿ ಹಾರುತ್ತಿರಲು; **ಮೀಸೆಗೂದಲು ಹೊತ್ತಿ ಹೊಗೆಯ ಬಿರುನುಡಿಗಳ ಉರಿಯುಗುಳೆ**=ಮೀಸೆಯ ಕೂದಲು ಹೊತ್ತಿಕೊಂಡು ಹೊಗೆಯು ಹೊರಹೊಮ್ಮುತ್ತಿದೆ ಎಂಬ ನುಡಿಗಳು ಕೋಪದ ತೀವ್ರತೆಯನ್ನು ಸೂಚಿಸುವ ರೂಪಕದ ನುಡಿಗಳಾಗಿವೆ. ವಿಶ್ವಾಮಿತ್ರನು ಒರಟೊರಟಾಗಿ ಆಕ್ರೋಶದಿಂದ ಮಾತನಾಡಲು ತೊಡಗಲು;

ವಡಬಾಗ್ನಿ–ಸಿಡಿಲು–ಕಾಡ ಕಿಚ್ಚು–ಪ್ರಳಯ ವಹ್ನಿ–ಭಾಳಲೋಚನ–ಕಣ್ಣ ಕಡೆ ತೋರಗಿಡಿ–ಮೀಸೆಯ ಕೂದಲು ಹೊತ್ತಿಕೊಂಡು ಉರಿಯುವುದು––ಇವೆಲ್ಲವೂ ವಿಶ್ವಾಮಿತ್ರನ ಕೋಪೋದ್ರೇಕದ ಸ್ವರೂಪಕಕ್ಕೆ ರೂಪಕಗಳಾಗಿ ಮೂಡಿಬಂದಿವೆ; **ವಿಶ್ವಾಮಿತ್ರನ್ ಅವನೀಶನ ಎಡೆಗೆ ಉರವಣಿಸಿ ಬಂದನ್**=ವಿಶ್ವಾಮಿತ್ರನು ರಾಜ ಹರಿಶ್ಚಂದ್ರನು ಇದ್ದ ಕಡೆಗೆ ರಭಸದಿಂದ ಧಾವಿಸಿ ಬಂದನು; ಅನಿಲ=ಗಾಳಿ/ವಾಯುದೇವ; **ಅನಿಲನ್ ಬಿರುಗಾಳಿಯನ್ ಬೀಸಲಮ್ಮನ್**=ನನ್ನ ಆಶ್ರಮದ ಪ್ರದೇಶದಲ್ಲಿ ವಾಯುದೇವನು ಬಿರುಗಾಳಿಯನ್ನು ಬೀಸಲಾರ; ಸುರಪ=ದೇವೇಂದ್ರ/ವರುಣ ದೇವ; ಅರೆವಳೆ=ಬಿರುಸಾದ ಮಳೆ/ಚಚ್ಚುಮಳೆ; **ಸುರಪನ್ ಅರೆವಳೆಗಳನ್ ಕರೆಯಲಮ್ಮನ್**=ನನ್ನ ಆಶ್ರಮದ ಪ್ರದೇಶದಲ್ಲಿ ದೇವೇಂದ್ರನು ದೊಡ್ಡ ಮಳೆಯನ್ನು ಸುರಿಸಲಾರ; ತರಣಿ=ಸೂರ್ಯ;

ತರಣಿ ಅತಿ ಕಡುವಿಸಿಲ ಕರೆಯಲಮ್ಮನ್=ನನ್ನ ಆಶ್ರಮದ ಪ್ರದೇಶದಲ್ಲಿ ಸೂರ್ಯನು ಅತಿಯಾಗಿ ಸುಡು ಬಿಸಲಿನ ಪ್ರಖರ ಕಿರಣಗಳನ್ನು ಬೀರಲಾರ; **ದಾವಾಗ್ನಿ ಮೇರೆಯನ್ ಮೀರಲಮ್ಮನ್**=ನನ್ನ ಆಶ್ರಮದ ಪ್ರದೇಶದೊಳಕ್ಕೆ ಕಾಳ್ಗಿಚ್ಚು ತನ್ನ ಮಿತಿಯನ್ನು ಮೀರಿ ಹಬ್ಬುವುದಿಲ್ಲ; ಜವ=ಯಮ; ಗಿವ=ಗಿವ ಎಂಬ ಪದಕ್ಕೆ ಯಾವ ತಿರುಳು ಇಲ್ಲ; ದೂತ=ಸೇವಕ; ಗೀತರು=ಗೀತರು ಎಂಬ ಪದಕ್ಕೆ ಯಾವ ತಿರುಳು ಇಲ್ಲ; ಜನರು ಮಾತಿನ ಸನ್ನಿವೇಶಗಳಲ್ಲಿ ವ್ಯಕ್ತಿಗಳು ಇಲ್ಲವೇ ವಸ್ತುಗಳ ಬಗ್ಗೆ ತಾವು ಹೊಂದಿರಬಹುದಾದ ತಿರಸ್ಕಾರದ ಭಾವನೆಯನ್ನು ಸೂಚಿಸುವಾಗ ಈ ರೀತಿ "ಜವಗಿವ–ದೂತರುಗೀತರು" ಎಂಬ ಪದರೂಪವನ್ನು ಬಳಸುತ್ತಾರೆ;

ಲೋಕವ ಮುರಿವ ಜವಗಿವನ ದೂತರು ಗೀತರ್ ಎಂಬರ್ ಎದ್ದು ಎರಗಲಮ್ಮರು=ಲೋಕದಲ್ಲಿ ಎಲ್ಲ ಜೀವಿಗಳಿಗೂ ಸಾವಿನ ಕುಣಿಕೆಯನ್ನು ಹಾಕಿ ಎಳೆದೊಯ್ಯುವ ಯಮನ ದೂತರು ನನ್ನ ಆಶ್ರಮದೊಳಕ್ಕೆ ಬಂದು ಯಾವ ಜೀವಗಳ ಮೇಲೂ ಆಕ್ರಮಣ ಮಾಡಲಾರರು; ಧೀವಶ=ಉದ್ಧಟತನ/ಕೆಚ್ಚು/ದಿಟ್ಟತನ; **ನಿನ್ನ ಧೀವಶ**=ನಿನ್ನಲ್ಲಿ ಉದ್ಧಟತನ ಹೆಚ್ಚಾಗಿದೆ; ಕೊರಚಾಡು=ಪೀಡಿಸು/ಹಿಂಸಿಸು; **ತಪೋವನದೊಳ್ ಇಂದು ಎಮ್ಮ ನೀನ್ ಕೊರಚಾಡಲೆಂದು ಅರಿದರಿದು**

ಬೀಡಮ್ ಬಿಟ್ಟೆ=ಈ ತಪೋವನವು ನನ್ನದೆಂದು ತಿಳಿದಿದ್ದರೂ ಇಂದು ನಮ್ಮನ್ನು ಪೀಡಿಸಲೆಂಬ ಉದ್ದೇಶದಿಂದಲೇ ನನ್ನ ಆಶ್ರಮದ ಪ್ರದೇಶಕ್ಕೆ ಬಂದು ಬೀಡನ್ನು ಬಿಟ್ಟಿದ್ದೀಯೆ; **ತಂದೆ, ಎಳಸಿ ಪುಣ್ಯಾರ್ಥದಿಮ್**=ತಂದೆಯೇ, ನಿನ್ನನ್ನು ಕಣ್ತುಂಬ ನೋಡಿ ಪುಣ್ಯವನ್ನು ಪಡೆಯಬೇಕೆಂದು ಬಯಸಿ; **ವಂದನೆ ನಿಮಿತ್ತ**=ನಿನಗೆ ನಮಸ್ಕರಿಸಿ ಹೋಗಬೇಕೆಂಬ ಕಾರಣದಿಂದ; **ಗುರುನಿಳಯಕ್ಕೆ ಶಿಷ್ಯನ್ ಎಯ್ತುಪ್ಪುದಕೆ ಸಾಹಸದ ಬಲವೇಕೆ**=ಗುರುವಿನ ಆಶ್ರಮಕ್ಕೆ ಶಿಷ್ಯನಾದ ನಾನು ಬಂದುದಕ್ಕೆ, ರಾಜಬಲವನ್ನು ತೋರಿಸುವುದಕ್ಕಾಗಿ ಉದ್ಧಟತನದಿಂದ ನಾನು ಬಂದಿದ್ದೇನೆ ಎಂದು ಈ ರೀತಿ ಏಕೆ ಆರೋಪಿಸುತ್ತಿರುವಿರಿ;

ನುಡಿಯೊಳು ನಯಮ್ ಪಡೆದು=ಮಾತಿನಲ್ಲಿ ಒಲವು ನಲಿವಿನ ಹಿತನುಡಿಗಳನ್ನಾಡುತ್ತ; **ಕಾರ್ಯದೊಳು ಗುರುವಿನ ಅಸುಗೆ ಮುಳಿದು**=ಕ್ರಿಯೆಯಲ್ಲಿ ಗುರುವಾದ ನನ್ನ ಪ್ರಾಣಕ್ಕೆ ಸಂಚಕಾರವನ್ನು ತರಬೇಕೆಂಬ ದುರುದ್ದೇಶದಿಂದ ಕೂಡಿ; **ಸರ್ವಸ್ವ ಅಪಹರಣವಮ್ ಮಾಳ್ಪ ಕಡುಗಲಿತನವು**=ನನ್ನದೆಲ್ಲವನ್ನೂ ವಶಪಡಿಸಿಕೊಳ್ಳಬೇಕೆಂದು ಸೇನಾಬಲದೊಡನೆ ಬಂದು ನನ್ನ ಆಶ್ರಮದ ಪ್ರದೇಶದಲ್ಲಿ ನೀನು ಮಾಡುತ್ತಿರುವ ದಾಳಿಯು; **ಇದಾವ ಪುಣ್ಯವ ಪಡೆವ ಶಿಷ್ಯತನದ ಒಳಗು ಪೇಳು**=ಇದಾವ ರೀತಿಯಲ್ಲಿ ಪುಣ್ಯವನ್ನು ಪಡೆಯಲು ಬರುವ ಶಿಷ್ಯತನದ ಒಳ್ಳೆಯ ನಡೆನುಡಿಯಾಗುತ್ತದೆ ಎಂಬುದನ್ನು ಹೇಳು; **ಎನ್ನ ದೆಸೆಯಿಂದ ಕೆಟ್ಟುದೇನ್**=ನನ್ನಿಂದ ಏನು ಹಾಳಾಯಿತು ಯಾರಿಗೆ ಹಾನಿಯುಂಟಾಯಿತು;

ಅರಸುಗಳಿಗೆ ಉಪದೇಶವನ್ ಮಾಡಿ ವಸ್ತುವನ್ ನೆರಹಬಲ್ಲವನಲ್ಲ= ಅರಸುಗಳಿಗೆ ತಿಳುವಳಿಕೆಯನ್ನು ಹೇಳಿ, ನಡೆದ ಸಂಗತಿಯನ್ನು ಅವರಿಗೆ ಮನವರಿಕೆ ಮಾಡುವ ಶಕ್ತಿ ನನ್ನಲ್ಲಿಲ್ಲ; **ನಿಜವೈರವಮ್ ಬಿಟ್ಟು**=ನಿಸರ್ಗಸಹಜವಾದ ಹಗೆತನವನ್ನು ಬಿಟ್ಟು; **ಹರುಷದಿಂದಿರ್ಪ ಮೃಗಸಂಕುಳಮ್**=ಆನಂದಿಂದ ಬಾಳುತ್ತಿರುವ ಪ್ರಾಣಿಗಳ ಸಮೂಹ;

ಸರ್ವಋತುಗಳೊಳು ಫಲವಿಡಿದು ಒರಗುವ ತರುಕುಲಮ್=ವಸಂತ–ಗ್ರೀಷ್ಮ–ವರ್ಷ–ಶರತ್–ಹೇಮಂತ–ಶಿಶಿರ ಎಂಬ ಆರು ಋತುಮಾನಗಳಲ್ಲಿಯೂ ಹೂ ಕಾಯಿ ಹಣ್ಣುಗಳಿಂದ ತುಂಬಿ ಬಾಗಿ ಬಳುಕುವ ಮರಗಿಡಪೊದೆಗಳಿಂದ ಕೂಡಿರುವ ಸಸ್ಯಸಮೂಹ; **ಬತ್ತದೆ ಒಂದೇ ಪರಿಯಲಿಹ ಸರೋವರವೆಂಬ ಧನ**= ಬಿರುಬೇಸಗೆಯಲ್ಲಿಯೂ ಬತ್ತದೆ, ವರುಶದ ಎಲ್ಲಾ ಕಾಲದಲ್ಲಿಯೂ ಒಂದೇ ರೀತಿಯಲ್ಲಿ ತುಂಬಿ ತುಳುಕುತ್ತಿರುವ ಜಲ ಸಂಪತ್ತಿನಿಂದ ಕೂಡಿದ ಸರೋವರ; **ಇದೆಲ್ಲವನ್ ಇರಿದು ಮುರಿದು ಕುಡಿದು ಅರೆಮಾಳ್ಪ ಬಲುಹು**=ಪ್ರಾಣಿಪಕ್ಷಿಗಳನ್ನು ಕೊಂದು, ಮರಗಿಡಬಳ್ಳಿಗಳನ್ನು ಕತ್ತರಿಸಿ, ಕೆರೆಕೊಳಸರೋವರದ ನೀರೆಲ್ಲವನ್ನೂ

ಬಗ್ಗಡಗೊಳಿಸಿ ಕಾಡಿನ ಸಂಪತ್ತಿನಲ್ಲಿ ಅರ್ಧ ಭಾಗವನ್ನು ನಾಶಮಾಡಿದ ನಿನ್ನ ಶಕ್ತಿ; **ಸರ್ವಸ್ವ ಅಪಹರಣವಲ್ಲದೆ ಬಳಿಕ್ಕ ಏನು**=ಮುನಿಗಳಿಗೆ ನೆಲೆಯಾದ ಕಾಡು ಮತ್ತು ಆಶ್ರಮದ ಲೂಟಿಯಲ್ಲದೆ ಮತ್ತಿನ್ನೇನು;

ಬರುಮುನಿಸನ್ ಇಟ್ಟುಕೊಂಡು ಅರುಹುವಂತಾಗಿ=ವಿನಾಕಾರಣ ನನ್ನ ಬಗ್ಗೆ ಕೋಪಿಸಿಕೊಂಡು ಈ ರೀತಿ ಆಪಾದನೆಯನ್ನು ಮಾಡುತ್ತಿದ್ದೀರಿ; **ಎಲೆ, ಕಿರುಜಡೆಯ ನೀತಿವಿದ... ನಾನ್ ಇರಿದ ಮೃಗ ಮುರಿದ ಮರ ಕುಡಿದ ಕೊಳನ್ ಆವುದು ತೋರಿಸು ಎನೆ**=ನೀತಿವಂತರಾದ ವಿಶ್ವಾಮಿತ್ರ ಮುನಿಯೇ, ನಾನು ಕೊಂದ ಪ್ರಾಣಿ... ಕತ್ತರಿಸಿದ ಮರ... ಬಗ್ಗಡಗೊಳಿಸಿದ ಕೊಳ... ಯಾವುದು ತೋರಿಸಿ ಎಂದು ರಾಜ ಹರಿಶ್ಚಂದ್ರನು ಮರುಪ್ರಶ್ನಿಸಲು; **ಘುಡುಘುಡುಸುತ ಎದ್ದು**= ವಿಶ್ವಾಮಿತ್ರ ಮುನಿಯು ದೊಡ್ಡ ದನಿಯಲ್ಲಿ ಅಬ್ಬರಿಸುತ್ತ ಮೇಲೆದ್ದು; **ಹಳಗಾಲದಂದು ಅರತ ಕೊಳನಮ್**=ಈ ಹಿಂದೆ ಎಂದೋ ಒಂದು ಕಾಲದಲ್ಲಿ ಬತ್ತಿಹೋಗಿದ್ದ ಕೊಳವನ್ನು; **ಕೊಳೆತು ಮುರಿದ ಮರನಮ್**=ವಯಸ್ಸಾಗಿ ಟೊಳ್ಳುಹಿಡಿದು ಕೊಳೆತು ಮುರಿದುಹೋಗಿ ಬಿದ್ದಿರುವ ಮರವನ್ನು;

ನೃಪನನ್ ಉರೆ ತಂದ ಹಲವು ಗಾಯದ ಹಂದಿಯನ್ ತೋರಿ ಜರೆದು=ರಾಜ ಹರಿಶ್ಚಂದ್ರನನ್ನು ನೇರವಾಗಿ ತನ್ನ ಆಶ್ರಮದತ್ತ ಬರುವಂತೆ ಮಾಡಿದ ಗಾಯಗೊಂಡಿದ್ದ ಹಂದಿಯನ್ನು ತೋರಿ, ಇದಕ್ಕೆಲ್ಲಾ ನೀನೇ ಕಾರಣನೆಂದು ಹರಿಶ್ಚಂದ್ರನನ್ನು ನಿಂದಿಸಿ; **ಪಾಪಿ, ನೀನ್ ಇನ್ನಾವ ನೆವವನ್ ಒಡ್ಡುವೆ ಎನುತ ಮತ್ತೆ ಇಂತು ಎಂದನು**=ಪಾಪಿಯಾದ ಹರಿಶ್ಚಂದ್ರನೇ, ನೀನು ಈಗ ಮಾಡಿರುವ ತಪ್ಪನ್ನು ಮುಚ್ಚಿಟ್ಟುಕೊಳ್ಳುವುದಕ್ಕೆ ಇನ್ನಾವ ನೆಪವನ್ನು ಹೇಳುತ್ತೀಯೆ ಎಂದು ಜರೆದು, ಮತ್ತೆ ಈ ರೀತಿ ವಿಶ್ವಾಮಿತ್ರನು ಹೇಳತೊಡಗಿದನು; ಸಕ್ರಂದನ=ದೇವೇಂದ್ರ; ಮುನಿಪ= ದೂರ್ವಾಸ ಮುನಿ; ನೀರೊಳಗೆ ನೆರಹು=ಇದೊಂದು ನುಡಿಗಟ್ಟು. ನೀರಿನಲ್ಲಿ ಕೊನೆಗೊಳಿಸು/ಮುಗಿಸು. ಅಂದರೆ ಸರ್ವನಾಶ ಮಾಡು ಎಂಬ ತಿರುಳಿನಲ್ಲಿ ಬಳಕೆಯಾಗುತ್ತದೆ;

ಹಿಂದೆ ಸಂಪದದೊಳ್ ಉರೆ ಗರ್ವದಿಮ್ ಮೆರೆದ ಸಕ್ರಂದನನ ಸಿರಿಯ ನೀರೊಳಗೆ ನೆರಹಿದ ಮುನಿಪನ ಅಂದವನ್ ಮಾಡುವೆನು=ಈ ಹಿಂದೆ ದೇವೇಂದ್ರನು ಸಿರಿಸಂಪತ್ತಿನ ಸೊಕ್ಕಿನಿಂದ ಮೆರೆಯುತ್ತಿದ್ದಾಗ, ಅವನಲ್ಲಿಗೆ ಬಂದ ದೂರ್ವಾಸ ಮುನಿಯು ಕೊಟ್ಟ ಶಿವನ ಪ್ರಸಾದವನ್ನು ದೇವೇಂದ್ರನು ತಿರಸ್ಕರಿಸಲು, ಕೋಪಗೊಂಡ ಮುನಿಯು ದೇವೇಂದ್ರನ ಸಿರಿಸಂಪತ್ತನ್ನೆಲ್ಲಾ ಸರ್ವನಾಶ ಮಾಡಿದಂತೆ ಈಗ ನಾನು ನಿನ್ನ ಸಿರಿಸಂಪತ್ತನ್ನೆಲ್ಲಾ ನಾಶ ಮಾಡಿ, ನಿನ್ನ ಸೊಕ್ಕನ್ನು ಅಡಗಿಸುತ್ತೇನೆ; ಹಗ್ಗಿ=ಬೆಂಕಿ; **ಹರನ ಹಣೆಗಣ್ಣ ಹಗ್ಗಿಯನು ಹಗೆಗೊಂಬ**

ಅಂದದಿನ್ ಇಂದು ಎನ್ನ ಹಗೆಗೊಂಡೆ=ಶಿವನನ್ನು ಕೆರಳಿಸಿ, ಅವನ ಹಣೆಗಣ್ಣಿನ ಬೆಂಕಿಗೆ ಆಹುತಿಯಾಗುವ ರೀತಿಯಲ್ಲಿ ಇಂದು ನೀನು ನನಗೆ ಹಗೆಯಾದೆ; ಕೂಗಿಡಿಸು=ಕೂಗಿಕೊಳ್ಳುವಂತೆ ಮಾಡು/ಗೋಳಾಡಿಸು;

ಬಿಟ್ಟ ಬೀಡೆಲ್ಲಮನ್ ಕೊಂದು ಕೂಗಿಡಿಸಿ ನೆರೆ ಸುಟ್ಟು ಬೊಟ್ಟಿಡುವೆನ್=ಕಾಡಿನ ಈ ನನ್ನ ಆಶ್ರಮದಲ್ಲಿ ನೀನು ಬಿಟ್ಟಿರುವ ಸೇನಾಬಲವೆಲ್ಲವನ್ನೂ ಮತ್ತು ಪರಿವಾರವೆಲ್ಲವನ್ನೂ ಕೊಂದು ಕೂಗಿಡಿಸಿ, ಎಲ್ಲವನ್ನೂ ಸುಟ್ಟು ಬೂದಿಮಾಡಿ ನನ್ನ ಹಣೆಗೆ ಬೊಟ್ಟನ್ನು ಇಟ್ಟುಕೊಳ್ಳುವೆನು; **ಆರ್ ಎಂದು ಇರ್ದೆ**=ನನ್ನನ್ನು ಯಾರೆಂದು ತಿಳಿದಿರುವೆ. ಅಂದರೆ ನನ್ನ ಶಕ್ತಿ, ಪರಾಕ್ರಮ ಮತ್ತು ಮಹಿಮೆಯು ಏನೆಂಬುದನ್ನು ನೀನು ತಿಳಿದಿಲ್ಲ; ಅಳಲು=ಸಂಕಟ/ಶೋಕ; ತಿಣ್ಣ=ಹೊರೆ/ಭಾರ; **ತನ್ನ ಸುತರ ಅಳಲ ತಿಣ್ಣವನ್ ನಿನ್ನ ಗುರು ಹೇಳನೇ**=ತನ್ನ ಮಕ್ಕಳು ನನ್ನಿಂದ ಅನುಭವಿಸಿದ ಸಂಕಟದ ತೀವ್ರತೆಯನ್ನು ನಿನ್ನ ಗುರುವಾದ ವಸಿಷ್ಠನು ನಿನಗೆ ಹೇಳಲಿಲ್ಲವೇ; **ಒಸೆದು ಹುಟ್ಟಿಸುವ, ಪಾಲಿಸುವ, ಮರ್ದಿಸುವ ಸತ್ವಸಮರ್ಥನ್ ಎನಿಪ ನೀನೇ ತಪ್ಪ ಹೊರಿಸಿ ದಟ್ಟಿಸುವಡೆ**=ಜಗತ್ತಿನಲ್ಲಿ ಎಲ್ಲರನ್ನು ಪ್ರೀತಿಯಿಂದ ಹುಟ್ಟಿಸುವ, ಸಾಕಿ ಸಲಹುವ, ತಪ್ಪನ್ನು ಮಾಡಿದಾಗ ತಿದ್ದಿ ಸರಿಪಡಿಸುವ ಶಕ್ತಿಯುಳ್ಳವನು ಎಂದು ಹೆಸರಾಂತ ಮುನಿಯಾದ ನೀನೇ... ಈಗ ನನ್ನ ಮೇಲೆ ವಿನಾಕಾರಣ ತಪ್ಪನ್ನು ಹೊರಿಸಿ ಮೂದಲಿಸುತ್ತಿರುವಾಗ;

ಇನ್ನು ಉತ್ತರಿಸಿ ಶುದ್ಧವಹುದು ಅರಿದಯ್ಯ=ನಿನಗೆ ಉತ್ತರವನ್ನು ನೀಡಿ, ನಿನ್ನನ್ನು ಶಾಂತಗೊಳಿಸಲು ನನ್ನಿಂದ ಆಗುವುದಿಲ್ಲ; **ತಂದೆ, ಆನ್ ನಿಮ್ಮ ಕರುಣದ ತೊಟ್ಟಿಲ ಹಸುಳೆ**=ತಂದೆ, ನಾನು ನಿಮ್ಮ ಕರುಣೆಯ ತೊಟ್ಟಿಲ ಮಗು; **ಆನ್ ಸರ್ವ ಅಪರಾಧಿ**=ನಾನು ಎಲ್ಲ ರೀತಿಯಿಂದಲೂ ತಪ್ಪನ್ನು ಮಾಡಿದ್ದೇನೆ; ಪದ=ಪಾದ; ಬಿಸರುಹ=ಕಮಲ/ತಾವರೆ;

ಕರುಣಿಸು ದಯಮ್ ಕೆಡದಿರ್ ಉದ್ರೇಕಿಸದಿರ್ ಎಂದು ಪದ ಬಿಸರುಹದ ಮೇಲೆ ನಿಜಮಣಿ ಮಕುಟ ಮಂಡಿತ ಶಿರೋಂಬುಜವನು ಕೆಡಹಿದನು= ಕರುಣೆಯನ್ನು ನೀಡು... ಕ್ರೂರನಾಗಬೇಡ... ಕೆರಳಬೇಡ ಎಂದು ಮೊರೆಯಿಡುತ್ತ, ವಿಶ್ವಾಮಿತ್ರ ಮುನಿಯ ಪಾದಕಮಲದ ಮೇಲೆ ರತ್ನಗಳಿಂದ ಕಂಗೊಳಿಸುತ್ತಿದ್ದ ಕಿರೀಟಧಾರಿಯಾದ ರಾಜ ಹರಿಶ್ಚಂದ್ರನು ತನ್ನ ತಲೆಯನ್ನು ಇಟ್ಟನು; **ನೋಡಿ ವಂದಿಸಿ ಹೋಹ ಶಿಷ್ಯಂಗೆ ನೀಮ್ ಕೃಪೆಯ ಮಾಡುವುದು**=ನಿಮ್ಮನ್ನು ಕಂಡು, ನಮಿಸಿ ಹೋಗಬೇಕೆಂದು ಬಂದಿರುವ ಶಿಷ್ಯನಿಗೆ ನೀವು ಒಳಿತಾಗಲೆಂದು ಅನುಗ್ರಹವನ್ನು ಮಾಡುವುದು;

ಹದುಳದಿಮ್ ಬಲವನೆಲ್ಲವ ಹೊಳ್ಳು ಮಾಡಬಗೆವರೆ ಹೇಳ್=ಹುಮ್ಮಸ್ಸಿನಿಂದ

ನನ್ನ ಶಕ್ತಿಯನ್ನೆಲ್ಲ ಇಲ್ಲದಂತೆ ಮಾಡಲು ನೀವು ಮನಸ್ಸು ಮಾಡಿರುವುದು ಸರಿಯೇ ನೀವೇ ಹೇಳಿ; **ಪ್ರಳಯ ಫಣಿಯ ಅಣಲ ಹೊಳಲೊಳಗೆ ಕೈಯ ನೀಡಿ ದಾಡೆಯಮ್ ಮುರಿಯ ಬಗೆವಂತೆ**=ಪ್ರಳಯ ಕಾಲದಲ್ಲಿ ಬುಸುಗುಡುತ್ತ ಹೆಡೆ ಎತ್ತಿರುವ ಹಾವಿನ ಬಾಯೊಳಕ್ಕೆ ಕಯ್ ಹಾಕಿ, ಹಾವಿನ ಹಲ್ಲನ್ನು ಮುರಿಯಲು ಸಾಹಸ ಮಾಡುವಂತೆ;

ಎನ್ನ ಬಸುರಿಂದ ಮೂಡಿರ್ದ ಕನ್ನೆಯರ ಚೆನ್ನೆಯರನ್ ಅಬಲೆಯರ ಗಾಡಿಕಾತಿಯರನ್ ಅರಿದರಿದು ಇಂತು ಸಾಯ ಸದೆಬಡಿವರೇ ಹೇಳು=ನನ್ನ ಹೊಟ್ಟೆಯಲ್ಲಿ ಹುಟ್ಟಿದ ಕನ್ನೆಯರನ್ನು ಚೆಲುವೆಯರನ್ನು ಬಲಹೀನರಾದ ಆ ಸುಂದರಿಯರನ್ನು ಅವರು ಯಾರೆಂಬುದನ್ನು ಚೆನ್ನಾಗಿ ತಿಳಿದಿದ್ದರೂ ಈ ರೀತಿ ಸಾಯುವಂತೆ ಸದೆಬಡಿಯುವುದು ನ್ಯಾಯವೇ ನೀನೇ ಹೇಳು; **ಬೇಗದಲಿ ನಿಮ್ಮ ಮನೆಯವರೆಂದು ಮೊರೆಯಿಟ್ಟರಾಗಿ ಕರುಣಿಸಿ ಬಿಟ್ಟೆನ್**=ನೀವು ಯಾರೆಂದು ನಾನು ಕೇಳಿದಾಗ ತಡಮಾಡದೆ ನಿಮ್ಮ ಮನೆಯವರೆಂದು ಮೊರೆಯಿಟ್ಟುದ್ದರಿಂದ, ಕರುಣೆಯಿಂದ ಅವರನ್ನು ಓಡಿಹೋಗಲು ಬಿಟ್ಟೆನು; **ಅಲ್ಲದಿರ್ದಡೆ**=ಇವರು ನಿಮ್ಮ ಹೆಣ್ಣು ಮಕ್ಕಳಲ್ಲದೆ ಬೇರೆಯ ಹೆಂಗಸರಾಗಿದ್ದರೆ; **ಕೆಡಹಿ ಮೂಗನ್ ಅರಿದು**=ಕೆಳಕ್ಕೆ ಬೀಳಿಸಿ, ಮೂಗನ್ನು ಕೊಯ್ದು; ಎಳಹೂಟೆ=ಬೆಳೆಯ ನಡುವೆ ಇರುವ ಹೆಚ್ಚಿನ ಪಯಿರುಗಳನ್ನು ಮತ್ತು ಕಳೆಯನ್ನು ಕೀಳುವುದಕ್ಕಾಗಿ ಬಳಸುವ ಬೇಸಾಯದ ಒಂದು ಉಪಕರಣ. ಇದನ್ನು 'ಹಲಬೆ' ಎನ್ನುತ್ತಾರೆ; ಪೆಟ್ಟ/ಹೆಟ್ಟ=ಮಣ್ಣಿನ ಹೆಂಟೆಯನ್ನು ಪುಡಿಮಾಡಲು ಬಳಸುವ ಬೇಸಾಯದ ಉಪಕರಣ; ಹೆಟ್ಟವೆಳಸು=ಹೆಟ್ಟ ಉಪಕರಣವನ್ನು ಹೊಲಗದ್ದೆಯಲ್ಲಿ ಹೂಡಿ ಎಳೆದಾಗ ಮಣ್ಣಿನ ಮುದ್ದೆಗಳೆಲ್ಲವೂ ಪುಡಿಯಾಗಿತ್ತವೆ;

ಎಳಹೂಟೆಯಮ್ ಕಟ್ಟಿ, ಬಟ್ಟಬಯಲೊಳ್ ಹೆಟ್ಟವೆಳಸುವೆ=ಎಳಹೂಟೆಯನ್ನು ಕಟ್ಟಿ ಬಟ್ಟಬಯಲಿನಲ್ಲಿ ಹೆಟ್ಟ ಎಳಸುತ್ತಿದ್ದೆ. ಹಲಬೆಯನ್ನು ಹೊಡೆಯುವುದಕ್ಕೆ ದನಗಳನ್ನು ಕಟ್ಟುವ ಬದಲು, ಈ ಇಬ್ಬರು ತರುಣಿಯರನ್ನು ನೊಗಕ್ಕೆ ಕಟ್ಟಿ, ದೊಡ್ಡದಾಗಿರುವ ಬಯಲಿನಲ್ಲಿ ಮಣ್ಣಿನ ಹೆಂಟೆಗಳನ್ನು ಇವರಿಂದಲೇ ಪುಡಿಮಾಡಿಸುತ್ತಿದ್ದೆ; **ಏಗೆಯ್ದರ್**=ಅವರು ಅಂತಹ ತಪ್ಪೇನನ್ನು ಮಾಡಿದರು; **ಅವರೊಳ್ ಅನ್ಯಾಯವೇನ್**=ಅವರ ನಡೆನುಡಿಯಲ್ಲಿ ತಪ್ಪೇನು; ನಿನಗೆ ಯಾವ ಅನ್ಯಾಯವನ್ನು ಮಾಡಿದರು. ಅವರಿಂದ ನಿನಗಾದ ತೊಂದರೆಯೇನು; **ಮುನೀಶ ಚಿತ್ತೈಸು**=ಮುನಿಗಳ ಒಡೆಯನಾದ ವಿಶ್ವಾಮಿತ್ರರೇ ಮನವಿಟ್ಟು ಕೇಳಿರಿ; ಸತ್ತಿಗೆ=ರಾಜ ಲಾಂಛನವಾದ ಬೆಳ್ಗೊಡೆ;

ಎನ್ನ ಮೇಗಿರ್ದ ಸತ್ತಿಗೆಯನ್ ಈಯ ಅಲ್ಲದೊಡೆ ಗಂಡನಾಗು ನೀನ್ ಆಗದೊಡೆ ಮೊರೆಯಿಡುವೆವು ಎಂದರು=ರಾಜತನದ ಲಾಂಛನವಾಗಿ ನನ್ನ ತಲೆಯ ಮೇಲೆ ಇರುವ ಸತ್ತಿಗೆಯನ್ನು ಕೊಡು. ಅದನ್ನು ಕೊಡಲಾಗದಿದ್ದರೆ ನೀನು ನಮ್ಮ ಗಂಡನಾಗು. ನೀನು ನಮ್ಮನ್ನು ಮದುವೆಯಾಗಿದಿದ್ದರೆ ನಾವು ಎಲ್ಲರ ಮುಂದೆ ನಮ್ಮ ಸಂಕಟವನ್ನು ತೋಡಿಕೊಳ್ಳುತ್ತೇವೆ ಎಂದರು; **ಹೊಡೆ ಅದಕ್ಕೇನು**=ನಿನಗೆ ಅನ್ನಿಸಿದಂತೆ ನನ್ನ ಮಕ್ಕಳನ್ನು ಹೊಡೆ. ಅದಕ್ಕೇನು ನಾನು ಅಡ್ಡಿಬರುವುದಿಲ್ಲ. ಆದರೆ; **ಅವದಿರನ್ ಹೊಡೆದ ಕೈಗಳಮ್ ಕಡಿವೆ**=ಅವರನ್ನು ಹೊಡೆದ ನಿನ್ನ ಕಯ್ಗಳನ್ನು ಕತ್ತರಿಸಿಹಾಕುತ್ತೇನೆ; **ನಿನ್ನನ್ ನಚ್ಚಿ ಮಲೆತ ದೇಶವನ್ ಉರುಹಿ ಸುಡುವೆನ್**=ನಿನ್ನನ್ನು ನಂಬಿಕೊಂಡು ಸೊಕ್ಕಿನಿಂದ ಮೆರೆಯುತ್ತಿರುವ ದೇಶವನ್ನು ಬೆಂಕಿಯಿಂದ ಸುಟ್ಟು ಬೂದಿಮಾಡುವೆನು;

ಆ ದೇಶಕ್ಕೆ ಹಿತವಾಗಿ ಬಂದ ಮುನಿಯನ್ ಮುರಿವೆನ್=ಆ ನಿನ್ನ ದೇಶಕ್ಕೆ ಒಳಿತನ್ನು ಮಾಡಲೆಂದು ಬರುವ ನಿನ್ನ ಗುರು ವಸಿಷ್ಠ ಮುನಿಯನ್ ನಾಶಪಡಿಸುತ್ತೇನೆ; **ಹುಡುಕು ನೀರ್**=ಕುದಿಯುವ ನೀರು/ಬಿಸಿನೀರು; **ಆ ಮುನಿಯನು ಹಿಡಿದು, ಕದನಕ್ಕೆಂದು ಬಂದ ಅಮರರಮ್ ಕೆಡಹಿ ಹುಡುಕುನೀರ್ ಅದ್ದುವೆ**=ವಸಿಷ್ಠನನ್ನು ಕಾಪಾಡಲೆಂದು ನನ್ನೊಡನೆ ಕಾಳೆಗಕ್ಕೆ ಬರುವ ದೇವತೆಗಳನ್ನು ಬೀಳಿಸಿ, ಅವರನ್ನು ಕುದಿಯುವ ನೀರಿನಲ್ಲಿ ಮುಳುಗಿಸುತ್ತೇನೆ; **ಎನ್ನ ಅಳವನ್ ಅರಿಯಾ**=ನನ್ನ ಶಕ್ತಿಯನ್ನು ನೀನು ತಿಳಿದಿರುವೆಯಾ; **ಮುನ್ನ ತೊಡಕಿ ತನಗಾದ ಭಂಗಗಳಮ್ ಕಮಲಕಂದನು ನಿನಗೆ ಹೇಳನೇ**=ಈ ಮೊದಲು ನನ್ನೊಡನೆ ಹೋರಾಡಲು ಬಂದು ತಾನು ಪಟ್ಟ ಸೋಲುಸಂಕಟಗಳನ್ನು ಬ್ರಹ್ಮನ ಮಗನಾದ ಮತ್ತು ನಿನ್ನ ಗುರುವಾದ ವಸಿಷ್ಠನು ನಿನಗೆ ಹೇಳಿಲ್ಲವೇ;

ತರಿಸಂದ ಮುನಿಯ ಕೋಪದ ಕಿಚ್ಚನ್=ತನಗೆ ಕೇಡನ್ನು ಬಗೆಯಲೇ ಬೇಕೆಂದು ನಿಶ್ಚಯಿಸಿಕೊಂಡಿರುವ ವಿಶ್ವಾಮಿತ್ರ ಮುನಿಯ ಕೋಪದ ಬೆಂಕಿಯ ತೀವ್ರತೆಯನ್ನು; **ಉಬ್ಬರದ ಬಿರುಬನ್ ಅರಿದು**=ಆಕ್ರೋಶದ ಬಿರುನುಡಿಗಳನ್ನು ಅರಿತುಕೊಂಡು; **ಅತಿ ತೀವ್ರತರವಾಯಿತು ಇನ್ನು ಕಿರಿದರಲಿ ತಗ್ಗುವುದಲ್ಲ ಗರ್ವಿಸುವುದು ಉಚಿತವಲ್ಲ ಎಂದು ವಸುಧಾಧೀಶನು**=ಹರಿಶ್ಚಂದ್ರನು ತನ್ನ ಮನದಲ್ಲಿ ಈ ರೀತಿ ಚಿಂತಿಸತೊಡಗುತ್ತಾನೆ. ವಿಶ್ವಾಮಿತ್ರಮುನಿಯ ಆಕ್ರೋಶ ತುಂಬಾ ಹೆಚ್ಚಾಗಿದೆ. ಇದನ್ನು ನಯವಿನಯದ ಒಳ್ಳೆಯ ಮಾತುಗಳಿಂದ ಹೋಗಲಾಡಿಸಲು ಆಗುವುದಿಲ್ಲ. ಈಗ ಈ ಮುನಿಯ ಮುಂದೆ ನಾನು ಸೊಕ್ಕಿನಿಂದ ಮಾತನಾಡುವುದಾಗಲಿ ಇಲ್ಲವೇ ನನ್ನ ರಾಜಬಲವನ್ನು ತೋರಿಸುವುದಾಗಲಿ ಸರಿಯಲ್ಲ ಎಂದು ಚಿಂತಿಸಿ;

ಅರಿಯದೆ ಅನ್ಯಾಯಮನ್ ಮಾಡಿದೆನ್=ನಿಮ್ಮ ಶಕ್ತಿಯ ಮಹಿಮೆಯನ್ನು ತಿಳಿಯದೆ ತಪ್ಪನ್ನು ಮಾಡಿದೆನು; **ಇದು ಒಮ್ಮೆಂಗೆ ನೆರೆದ ಕೋಪಾಗ್ನಿಯಮ್ ಬಿಡು ತಂದೆ ಎಂದು ಧರೆಗೆ ಉರುವ ಸತಿಸುತವೆರಸಿ ಪೊಡವಟ್ಟಡೆ**=ಇದೊಂದು ಸಲ ಕೆರಳಿರುವ ನಿನ್ನ ಕೋಪವನ್ನು ಬಿಡು ತಂದೆ ಎಂದು ಕೇಳಿಕೊಳ್ಳುತ್ತ, ತನ್ನ ಹೆಂಡತಿ ಚಂದ್ರಮತಿ ಮತ್ತು ಮಗ ಲೋಹಿತಾಶ್ವರೊಡನೆ ವಿಶ್ವಾಮಿತ್ರನ ಪಾದಗಳಿಗೆ ನಮಸ್ಕರಿಸಿದಾಗ; **ಆಸುರದ ಕೋರಡಿಗನು ಅಣಕಿಸಿದನ್**=ಅಹಂಕಾರದಿಂದ ಮೆರೆಯುತ್ತಿರುವ ನೀಚನಾದ ವಿಶ್ವಾಮಿತ್ರನು ರಾಜ ಹರಿಶ್ಚಂದ್ರನನ್ನು ಅಪಹಾಸ್ಯ ಮಾಡತೊಡಗಿದನು;

ಕೋಡದೆ ಅಂಜದೆ ಲೆಕ್ಕಿಸದೆ ಬಂದು ಬನದೊಳಗೆ ಬೀಡ ಬಿಟ್ಟು= ಹಿಂಜರಿಯದೆ ಹೆದರದೆ ಲೆಕ್ಕಿಸದೆ ಬಂದು ನನ್ನ ಆಶ್ರಮವಿರುವ ಕಾಡಿನೊಳಗೆ ಬೀಡನ್ನು ಬಿಟ್ಟು; **ಅನಿಮಿತ್ತ ಅನ್ಯಾಯ ಕೋಟಿಯಮ್ ಮಾಡಿ**=ವಿನಾಕಾರಣ ಕಾಡಿನ ನಿಸರ್ಗ ಸಂಪತ್ತೆಲ್ಲವನ್ನೂ ಹಾಳುಮಾಡುವ ಕೇಡಿನ ಕೆಲಸಗಳನ್ನು ಮನಬಂದಂತೆ ಮಾಡಿ; **ಮಕ್ಕಳುಗಳನ್ ಸಾಯ ಸದೆಬಡಿದುದಲ್ಲದೆ**=ನನ್ನ ಮಕ್ಕಳನ್ನು ಸಾಯುವಂತೆ ಸದೆಬಡಿದಿದ್ದಲ್ಲದೆ; **ಬನ್ನವೆತ್ತಿ ಹಲವು ಕೇಡು ಮಾತುಗಳಿಂದ ಕೆಡೆನುಡಿದು**= ಅಪಮಾನಪಡಿಸಲೆಂದು ಮಾನಹಾನಿಯನ್ನುಂಟುಮಾಡುವ ಕೆಟ್ಟಮಾತು ಗಳನ್ನಾಡಿ; **ಮತ್ತೆ ಈಗ ಬೇಡ ಕೋಪವನ್ ಉಡುಗು ತಂದೆ ಎಂದೆನೆ**=ನನಗೆ ಮತ್ತು ನನ್ನ ಮಕ್ಕಳಿಗೆ ಮಾಡಿರುವ ಅಪಮಾನದ ಆ ಸಂಗತಿಯನ್ನು ಮಾತನಾಡುವುದು ಬೇಡಿ, ಕೋಪವನ್ನು ಬಿಟ್ಟುಬಿಡು ತಂದೆ ಎಂದು ಕೇಳಿಕೊಂಡರೆ;

ಎಲವೊ ಕೇಳ್, ನಿನ್ನ ಕೋಡ ಕೊರೆಯದೆ ಬರಿದೆ ಬಿಟ್ಟಪೆನೆ=ಎಲವೊ ಕೇಳು, ನಿನ್ನ ಕೊಂಬನ್ನು ಮುರಿಯದೆ ಸುಮ್ಮನೆ ಬಿಡುತ್ತೇನೆಯೇ. ಅಂದರೆ ನಿನ್ನ ರಾಜಬಲದ ಹೆಮ್ಮೆಯನ್ನು ಅಡಗಿಸುತ್ತೇನೆ; **ಕ್ರೂರರ್, ಅತ್ಯಧಮರ್, ಉದ್ರೇಕಿಗಳು, ದುರ್ಜನಾಕಾರರುಮ್ ಧೂರ್ತರೊಳಗಾಗಿ ಶರಣ್ ಎನಲು ನಿಜ ವೈರವಮ್ ಬಿಡುವರ್ ಎಂಬಾಗ**=ಕ್ರೂರಿಗಳು, ತುಂಬಾ ನೀಚರು, ಕೋಪತಾಪಗಳಿಂದ ಕೆರಳಿದವರು, ಕೇಡಿಗಳಾದ ದುರುಳರ ಮುಂದೆ ವ್ಯಕ್ತಿಯೊಬ್ಬನು **'ನಾನು ನಿಮಗೆ ಶರಣಾಗಿದ್ದೇನೆ. ನನ್ನನ್ನು ಮನ್ನಿಸಿ'** ಎಂದು ಕೇಳಿಕೊಂಡರೆ, ಅಂತಹ ವ್ಯಕ್ತಿಗಳು ಕೂಡ ತಮ್ಮ ಕ್ರೂರತನವನ್ನು ಬಿಟ್ಟು, ಬೇಡಿಕೊಂಡವನಿಗೆ ಕರುಣೆಯನ್ನು ತೋರಿಸಿ, ಹಗೆತನವನ್ನು ಬಿಡುತ್ತಾರೆ ಎಂದ ಮೇಲೆ;

ನೆರೆ ಸರ್ವಸಂಗನಿವೃತ್ತರ್ ಎನಿಪ ನಿಮಗೆ ಓರಂತೆ ಬೇಡಿಕೊಳುತಿಪ್ಪ ಎನ್ನ ಮೇಲೆ ಇನಿತು ಕಾರುಣ್ಯವೇಕಿಲ್ಲ ತಂದೆ=ಎಲ್ಲ ರೀತಿಯಿಂದಲೂ ಸರ್ವಸಂಗ ಪರಿತ್ಯಾಗಿ ಗಳೆಂದು ಹೆಸರನ್ನು ಪಡೆದಿರುವ ನಿಮ್ಮ ಮುಂದೆ... ಒಂದೇ ಸಮನೆ ನನ್ನ ತಪ್ಪನ್ನು

ಮನ್ನಿಸಿ ಎಂದು ನಾನು ಬೇಡಿಕೊಳ್ಳುತ್ತಿದ್ದರೂ, ನನ್ನ ಮೇಲೆ ಕಿಂಚಿತ್ತಾದರೂ ಕರುಣೆಯನ್ನು ಏಕೆ ತೋರಿಸುತ್ತಿಲ್ಲ ತಂದೆಯೇ ಎಂದು ಮತ್ತೆ ಹರಿಶ್ಚಂದ್ರನು ವಿನಮ್ರನಾಗಿ ಮೊರೆಯಿಡುತ್ತಾನೆ; **ಇಂತು ಈಗ ಎನ್ನಯ ಕುಮಾರಿಯರ ಮದುವೆಯಾಗು**=ಈ ರೀತಿ ಮೊರೆಯಿಡುವುದಾದರೆ ಈಗ ನನ್ನ ಮಕ್ಕಳನ್ನು ಮದುವೆಯಾಗು; **ಎಲ್ಲಾ ನಿರೋಧಮಮ್ ಬಿಡುವೆನ್**=ನಿನ್ನ ಬಗ್ಗೆ ಇರುವ ಕೋಪತಾಪವನ್ನು ಮರೆತು ನಿನ್ನನ್ನು ಮನ್ನಿಸುತ್ತೇನೆ;

ವಿವಿಧ ಗುರ್ವಾಜ್ಞೆಯೊಳು ಕೆಲವು ಮಾಡುವವು ಕೆಲವು ಮೀರುವವು= ಗುರುವಾದವನು ಮಾಡುವ ಬಹುಬಗೆಯ ಆಜ್ಞೆಗಳಲ್ಲಿ ಶಿಷ್ಯಂದಿರು ಕೆಲವು ಒಪ್ಪಿಕೊಂಡು ಮಾಡುವ ಬಗೆಯಲ್ಲಿರುತ್ತವೆ. ಕೆಲವು ನಿರಾಕರಿಸುವಂತಿರುತ್ತವೆ. ಅಂದರೆ ಗುರು ಹೇಳಿದ ಎಲ್ಲ ಕಾರ್ಯಗಳನ್ನು ಶಿಷ್ಯನು ಮಾಡಲಾಗುವುದಿಲ್ಲ; **ಆ ಕಾರ್ಯಮ್ ಉಳ್ಳವಮ್ ಮಾಳ್ಪುದು ಉಳಿದವ ಬಿಡುವುದೈಸಲೇ ಗುರುಭಕ್ತಿ**= ಶಿಷ್ಯನು ಒಳ್ಳೆಯ ಕೆಲಸಗಳನ್ನು ಮಾಡಿ, ಕೆಟ್ಟ ಕೆಲಸಗಳನ್ನು ಬಿಡುವುದಲ್ಲವೇ ನಿಜವಾದ ಗುರುಭಕ್ತಿ; **ಮುನಿಪ ಕೇಳ್, ನೀವ್ ಎನ್ನ ಮನದ ಹವಣನ್ ಆರಯ್ಯಲೆಂದು ಅನುಗೆಯ್ದಿರಲ್ಲದೆ, ಈ ನವ ನರಕಮನ್ ಮಾಡ ಹೇಳಿದವರುಂಟೆ**= ವಿಶ್ವಾಮಿತ್ರ ಮುನಿಯೇ ಕೇಳಿರಿ, ನೀವು ನನ್ನ ಮನಸ್ಸಿನಲ್ಲಿರುವ ನೀತಿಯ ಭಾವನೆಯನ್ನು ಒರೆಹಚ್ಚಿ ನೋಡಲೆಂದು ಈ ರೀತಿಯ ಪ್ರಸಂಗಗಳನ್ನು ಒಡ್ಡುತ್ತಿರುವಿರೇ ಹೊರತು, ನನ್ನ ಬಾಳು ನರಕವಾಗಲಿ ಎಂಬ ದುರುದ್ದೇಶದಿಂದ ಹೇಳುತ್ತಿಲ್ಲ;

ನಾ ನಿಮ್ಮವನು. ನಿಮ್ಮ ಮನದ ಅನುವನ್ ಅರಿಯೆನೆ=ನಾನು ನಿಮ್ಮ ಮೆಚ್ಚಿನ ಶಿಷ್ಯ. ನಿಮ್ಮ ಮನದ ಆಶಯವೇನೆಂಬುದನ್ನು ನಾನು ತಿಳಿದಿಲ್ಲವೇ. ಅಂದರೆ ನಿಮಗೆ ನನ್ನ ಬಗ್ಗೆ ಪ್ರೀತಿ ಮತ್ತು ಒಳ್ಳೆಯ ಭಾವನೆಯಿದೆ; **ನಿನ್ನಯ ಮನದ ಹವಣರಿಯಲೆಂದು ಒತ್ತಿ ನುಡಿಯಿತಿಲ್ಲ**=ನಿನ್ನ ಮನಸ್ಸಿನಲ್ಲಿ ಏನಿದೆಯೆಂಬುದನ್ನು ತಿಳಿಯಲು ನಾನು ಒತ್ತಾಯಪೂರ್ವಕವಾಗಿ ನುಡಿಯುತ್ತಿಲ್ಲ; **ತಾತ್ಪರ್ಯವಾಗಿ ನುಡಿದೆವು**=ನಿಜವಾಗಿಯೂ ನನ್ನ ಇಬ್ಬರು ಹೆಣ್ಣು ಮಕ್ಕಳು ನಿನ್ನ ರಾಣಿಯರಾಗಲಿ ಎಂಬ ಆಸೆಯಿಂದಲೇ ಹೇಳುತ್ತಿದ್ದೇನೆ; **ನಿನ್ನ ಚಿತ್ತದಲಿ ಶಂಕಿಸದೆ ಮದುವೆಯಾಗು ಎಂದು ಕೌಶಿಕ ಮುನೀಂದ್ರನ್ ನುಡಿಯಲು**=ನಿನ್ನ ಮನದಲ್ಲಿ ನನ್ನ ಮಕ್ಕಳನ್ನು ಮದುವೆಯಾಗುವುದು ಸರಿಯೋ ತಪ್ಪೋ ಎಂಬ ಇಬ್ಬಗೆಯ ತೊಳಲಾಟಕ್ಕೆ ಒಳಗಾಗದೆ, ನನ್ನ ಮಕ್ಕಳನ್ನು ಮದುವೆಯಾಗು ಎಂದು ವಿಶ್ವಾಮಿತ್ರನು ನುಡಿಯಲು;

ಉತ್ತಮದ ರವಿಕುಲದೊಳ್ ಉದಿಸಿ=ಒಳ್ಳೆಯ ಸೂರ್ಯವಂಶದಲ್ಲಿ ಹುಟ್ಟಿ; **ಚಾಂಡಾಲತ್ವ ಪೆತ್ತ ಸತಿಯರ್ಗೆ ಎಳಸಿ**=ಚಾಂಡಾಲರಾಗಿ ಹುಟ್ಟಿರುವ ಹೆಣ್ಣುಗಳಿಗೆ

ಆಸೆಪಟ್ಟು/ಚಾಂಡಾಲ ಕನ್ನೆಯರನ್ನು ಮದುವೆಯಾಗಿ; **ಘೋರ ನರಕಾಳಿಗೆ ಅನಿಮಿತ್ತ ಹೋಹವನಲ್ಲ**=ವಿನಾಕಾರಣ ನಾನು ಭಯಂಕರವಾದ ನರಕಗಳಲ್ಲಿ ಯಾತನೆಯನ್ನು ಅನುಭವಿಸಲು ಹೋಗುವವನಲ್ಲ; **ಇದನ್ ಬೆಸಸಬೇಡಿ ಎಂದು ಭೂಭುಜನ್ ಕೈಮುಗಿದನು**=ಮದುವೆಯಾಗು ಎಂಬ ಸಂಗತಿಯನ್ನು ಮಾತ್ರ ನನಗೆ ಹೇಳಬೇಡಿ ಎಂದು ರಾಜನು ವಿಶ್ವಾಮಿತ್ರನ ಮುನಿಗೆ ಕಯ್ ಮುಗಿದನು; **ಬಿಡದೆ ಸತಿಯರ ಹೊಲೆಯರೆಂಬ ನೆವ ಏಕೆ**=ಒಂದೇ ಸಮನೆ ನನ್ನ ಮಕ್ಕಳನ್ನು ಹೊಲೆಯರು ಹೊಲೆಯರು ಎಂದು ಹೇಳುತ್ತ, ಅದೊಂದೇ ಕಾರಣಕ್ಕಾಗಿ ಏಕೆ ನಿರಾಕರಿಸುತ್ತಿರುವೆ; **ಅವರ ಹಡೆದ ಎನ್ನನೇ ಹೊಲೆಯನ್ ಎಂದು ಆಡಿದಾತನ್**= ನಿನ್ನ ಈ ಮಾತುಗಳು ಅವರನ್ನು ಹಡೆದ ನನ್ನನ್ನೇ ಹೊಲೆಯನು ಎಂದು ಹೇಳಿದಂತಾಗುತ್ತಿಲ್ಲವೇ;

ಮುನಿಪ, ಭಸಿಥರನ್ ಎನಲು ರುದ್ರನನ್ ಬಯ್ದವನೆ=ವಿಶ್ವಾಮಿತ್ರ ಮುನಿಯೇ, ದೇವರಾದ ಶಿವನನ್ನು ಬೂದಿ ಬಳಿದುಕೊಂಡವನು ಎಂದು ಕರೆದರೆ ಶಿವನನ್ನು ನಾನು ಬಯ್ದಂತೆ ಆಗುತ್ತದೆಯೇ; ಅಂದರೆ ಅದು ಶಿವನ ಮಹಿಮೆಯನ್ನು ಕೊಂಡಾಡುವ ಮಾತೇ ಹೊರತು ಬಯ್ಗುಳವಲ್ಲ; **ಹೊಲೆಗೆರೆಯ ಜಲದ ನಡುವೆ ಬಿಂಬಿಸುವ ರವಿ ಹೊಲೆಯನೇ**=ಹೊಲಗೇರಿಯಲ್ಲಿರುವ ಕೆರೆಯೊಂದರ ನೀರಿನ ನಡುವೆ ಪ್ರತಿಬಿಂಬಿಸುವ ಸೂರ್ಯನು ಹೊಲೆಯನಾಗುತ್ತಾನೆಯೇ; ಅಂದರೆ ಹೊಲಗೇರಿಯ ಕೆರೆಯಲ್ಲಿ ಕಾಣಿಸಿಕೊಂಡ ಮಾತ್ರಕ್ಕೆ ಸೂರ್ಯನಿಗೆ ಕುಂದು ಬರಲಿಲ್ಲ. ಅಂತೆಯೇ ಈ ಹೊಲತಿಯರನ್ನು ನೀವು ಹಡೆದ ಮಾತ್ರಕ್ಕೆ ನಿಮ್ಮ ಮಹಿಮೆಗೆ ಯಾವ ಕಳಂಕವೂ ತಟ್ಟಲಿಲ್ಲ; **ಕಮಲಭವನೊಡನೆ ಹುರುಡಿಸಿ, ಬೇರೆ ಸರ್ವಜೀವರ ಮಾಡುವೆಡೆಯೊಳ್ ಆ ಜೀವರೊಳಗಾದವನೆ**=ಜಗತ್ತಿನಲ್ಲಿ ಜೀವರಾಶಿ ಗಳನ್ನು ನಿರ್ಮಾಣ ಮಾಡುವ ಬ್ರಹ್ಮನೊಡನೆ ಸೆಣಸಾಡಿ, ಅವನಂತೆಯೇ ಮತ್ತೊಂದು ಜಗತ್ತನ್ನು ಹೊಸದಾಗಿ ನಿರ್ಮಿಸುವ ಶಕ್ತಿಯುಳ್ಳ ಮುನಿಯೇ;

ನಿಮ್ಮ ಹವಣರಿಯದೆ ಆಡಿದರಿ=ನಿಮ್ಮ ಮಹಿಮೆಯನ್ನು ನೀವೇ ತಿಳಿಯದೆ ಮಾತನಾಡುತ್ತಿರುವಿರಿ; **ಅಂಬುಧಿವ್ರಜಪರಿಮಿತ ಅವನೀತಳದೊಳ್**=ಕಡಲುಗಳಿಂದ ಸುತ್ತುವರಿದ ಭೂಮಂಡಲದಲ್ಲಿ; **ಆಡಂಬರದ ಕೀರ್ತಿಯಮ್ ತಳೆದ**= ದೊಡ್ಡದಾದ ಹೆಸರನ್ನು ಪಡೆದಿರುವ; **ನಾನಾ ಮುನಿ ಕದಂಬ ಅಧಿನಾಥ ವಿಶ್ವಾಮಿತ್ರಮುನಿ ಸುತೆಯರನ್**=ಮುನಿಗಳ ಸಮೂಹದ ಒಡೆಯನಾಗಿರುವ ವಿಶ್ವಾಮಿತ್ರ ಮುನಿಯ ಹೆಣ್ಣುಮಕ್ಕಳನ್ನು; ನಿಕುರುಂಬ=ಗುಂಪು/ಸಮೂಹ; **ಜಗಚ್ಚಕ್ಷು ಎನಿಪ ಅಂಬುಜಪ್ರಿಯ ಕುಲ ಲಲಾಮನ್ ಅವನೀಶ ನಿಕುರುಂಬ ಅಧಿಪತಿ ಹರಿಶ್ಚಂದ್ರರಾಯನ್ ತಂದನ್ ಎಂಬೊಂದು ತೇಜಮಮ್ ಕೊಡಬೇಕು**=ಜಗತ್ತಿನ

ಕಣ್ಣು ಎನಿಸಿರುವ ಸೂರ್ಯದೇವನ ಕುಲದ ರಾಜರ ಸಾಲಿನಲ್ಲಿ ಹೆಸರಾಂತ ಹರಿಶ್ಚಂದ್ರರಾಜನು ಮದುವೆಯಾದನು ಎಂಬ ಒಂದು ಹಿರಿಮೆಯನ್ನು ನನಗೆ ತಂದುಕೊಡಬೇಕು;

ಭೂಪ, ಕೈಮುಗಿದು ಬೇಡಿದೆನ್=ರಾಜನೇ, ನಿನಗೆ ಕಯ್ ಮುಗಿದು ಬೇಡಿಕೊಳ್ಳುತ್ತಿದ್ದೇನೆ; **ಎಡೆವಿಡದೆ ಬೇಡಿ ಕಾಡುವಿರಾದಡೆ ಇನ್ನು ಕೇಳ್, ಕಡೆಗೆ ಎನ್ನ ಸರ್ವರಾಜ್ಯವನಾದಡಮ್ ನಿಮಗೆ ಕೊಡಹಡೆವೆನ್ನೈ ಸಲ್ಲದು ಈ ಒಂದು ತೇಜಮನ್ ಕೊಡೆನ್ ಎಂದು ಭೂಪಾಲನು ನುಡಿಯಲು**=ನೀವು ಒಂದೇ ಸಮನೆ ಈ ರೀತಿ ಬೇಡಿ ಕಾಡುವಿರಾದರೆ ಇನ್ನು ಕೇಳಿರಿ... ಕಡೆಗೆ ನನ್ನ ಸಕಲ ರಾಜ್ಯವನ್ನು ಬೇಕಾದರೂ ನಿಮಗೆ ಕೊಟ್ಟುಬಿಡುತ್ತೇನೆ. ಆದರೆ ಸೂರ್ಯಕುಲದ ತೇಜಸ್ಸನ್ನು ಕೊಡುವುದಿಲ್ಲ ಎಂದು ರಾಜ ಹರಿಶ್ಚಂದ್ರನು ನುಡಿಯಲು;

"ಕುಲದ ಪವಿತ್ರತೆ ದೊಡ್ಡದೇ ಹೊರತು ಅದಕ್ಕಿಂತ ರಾಜ್ಯದ ಗದ್ದುಗೆ ಮತ್ತು ಸಂಪತ್ತು ದೊಡ್ಡದಲ್ಲ" ಎಂಬ ಅಚಲವಾದ ನಂಬಿಕೆ ಮತ್ತು ನಿಲುವು ರಾಜ ಹರಿಶ್ಚಂದ್ರನ ಮಯ್ ಮನದಲ್ಲಿ ನೆಲೆಗೊಂಡಿದೆ;

"ತಥಾಸ್ತು ಹಡೆದೆನ್ ಹಡೆದೆನ್ ಅವನೀಶರ ಒಡೆಯ ದಾನಿ ಲಲಾಮ ಸತ್ಯಾವತಂಸ..." ಎಂದು ಎಡೆವಿಡದೆ ಹೊಗಳಿ ಬಿಡದೆ ಸಂಗಡದ ಮುನಿವರರು ಸಹಿತ ಆಘೋಷಿಸಿದನು="ಹಾಗೆಯೇ ಆಗಲಿ. ಪಡೆದೆನು ಪಡೆದೆನು. ರಾಜರ ಒಡೆಯನಾದ ಚಕ್ರವರ್ತಿಯೇ ದಾನಿಗಳ ಸಮೂಹದಲ್ಲಿ ತಿಲಕಪ್ರಾಯನಾದವನೇ ಸತ್ಯವನ್ನೇ ಒಡವೆಯನ್ನಾಗಿ ಉಳ್ಳವನೇ" ಎಂದು ವಿಶ್ವಾಮಿತ್ರನು ಒಂದೇ ಸಮನೆ ರಾಜ ಹರಿಶ್ಚಂದ್ರನನ್ನು ಗುಣಗಾನ ಮಾಡುತ್ತ ಮುಂದುವರಿದು ತನ್ನೆಲ್ಲಾ ಮುನಿ ಸಮೂಹದ ಜತೆಗೂಡಿ ಗಟ್ಟಿಯಾದ ದನಿಯಲ್ಲಿ ಸಾರಿ ಹೇಳಿದನು;

ನೃಪ, ಇಂತು ಎನ್ನ ಕಾಟಕ್ಕೆ ಬೇಸತ್ತು ನೀನೊಬ್ಬನ್ ಎಂತಕ್ಕೆ ಕೊಟ್ಟನ್ ಎಂದಡೆ ಬಿಡೆನು=ರಾಜನೇ, ಈ ರೀತಿ ನನ್ನ ಕಾಟಕ್ಕೆ ತಡೆಯಲಾರದೆ ಬೇಸರದಿಂದ ಹೇಗೋ ಕೊಟ್ಟುಬಿಡೋಣವೆಂದು ತೀರ್ಮಾನಿಸಿದ್ದರೆ ಅದನ್ನು ನಾನು ಒಪ್ಪುವುದಿಲ್ಲ; **ನಿನ್ನ ಕಾಂತೆ, ಸುತ, ಮಂತ್ರಿಗಳ ಮತ ಬೇಹುದು. ಅವರುಗಳನ್ ಬೇಗ ಒಡಬಡಿಸು**=ನಿನ್ನ ಮಡದಿ, ನಿನ್ನ ಮಗ, ನಿನ್ನ ಮಂತ್ರಿಗಳ ಒಪ್ಪಿಗೆಯು ಇದಕ್ಕೆ ಬೇಕು. ಅವರನ್ನು ಬೇಗ ಒಪ್ಪುವಂತೆ ಮಾಡು; **ಭ್ರಾಂತಮುನಿ, ನಾನೊಬ್ಬ ಸಾಲದೇ ಸ್ತ್ರೀ ಬಾಲರ್ ಎಂತಾದಡಮ್ ನುಡಿವರ್. ಅವರ ಇಚ್ಛೆಯೇ, ಎನ್ನ ಸಂತಸದೆ ಕೋ**=ನಾನು ಏನೆಂಬುದನ್ನು ತಪ್ಪಾಗಿ ತಿಳಿದುಕೊಂಡಿರುವ ಮುನಿಯೇ, ರಾಜ್ಯದಾನಕ್ಕೆ ನಾನೊಬ್ಬನೇ ಸಾಕಲ್ಲವೇ. ಹೆಂಗಸರು ಮಕ್ಕಳು ಯಾವ ರೀತಿಯಲ್ಲಾದರೂ ಮಾತನಾಡುತ್ತಾರೆ. ಅವರಿಗೆ ತಮ್ಮದೆನ್ನುವ ಯಾವ ನಿಲುವು ಇಲ್ಲ. ನನ್ನ

ತೀರ್ಮಾನವೇ ಅವರ ತೀರ್ಮಾನ. ನಾನು ಆನಂದದಿಂದ ನೀಡುತ್ತಿದ್ದೇನೆ. ಸ್ವೀಕರಿಸು; ಧಾರೆ=ದಾನವನ್ನು ನೀಡುವಾಗ ದಾನಿಯು ದಾನ ತೆಗೆದುಕೊಳ್ಳುವವನ ಕಯ್ ಮೇಲೆ ಎರೆಯುವ ನೀರು;

ಅದರ ಮಾತನ್ ಬಿಟ್ಟು ಧಾರೆಯಮ್ ತಾ=ಹಾಗಾದರೆ ಆ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ, ಈಗ ರಾಜ್ಯವನ್ನು ದಾನ ನೀಡುವ ಆಚರಣೆಗೆ ಬೇಕಾದ ನೀರನ್ನು ತೆಗೆದುಕೊಂಡು ಬಾ; ಆಪೋಶನ=ಊಟಕ್ಕೆ ಕುಳಿತಾಗ ಮಾಡುವ ಒಂದು ಆಚರಣೆ. ತಟ್ಟೆ/ಎಲೆಯಲ್ಲಿರುವ ಉಣಿಸುತಿನಸನ್ನು ಉಣ್ಣುವ ಮೊದಲು ಮತ್ತು ಉಂಡ ನಂತರ ಅಂಗಯ್ ಮೇಲೆ ನೀರನ್ನು ಹಾಕಿಕೊಂಡು ಮಂತ್ರಗಳನ್ನು ಉಚ್ಚರಿಸುತ್ತ ನೀರನ್ನು ಹೀರುವುದು; **ಅಡವಿಯಂ ಮೊಗೆದು ಸುಡುವ ಅಗ್ನಿಗೆ ಆಪೋಶನದ ಗೊಡವೆ ಏವುದು**?=ಕಾಡೆಲ್ಲವನ್ನೂ ಆವರಿಸಿ ಕೊಂಡು ಸುಡುವ ಬೆಂಕಿಗೆ ಆಪೋಶನದ ಆಚರಣೆಯ ಹಂಗೇಕೆ; ಅಂದರೆ ನನ್ನ ಬಾಳಿನಲ್ಲಿ ಕಾಳ್ಗಿಚ್ಚಿನಂತೆ ಬಂದಿರುವ ನಿಮಗೆ ಅಂತಹ ಧಾರೆಯ ನೀರನ್ನು ಎರೆಯುವ ಆಚರಣೆಯ ಅಗತ್ಯವಾದರೂ ಏನು;

ಬಲಾತ್ಕಾರದಿಮ್ ಕೊಂಬಿರಾದಡೆ ಧಾರೆಯೇಕಯ್ಯ=ಬಲಾತ್ಕಾರದಿಂದಲೇ ಪಡೆದುಕೊಳ್ಳುತ್ತಿರುವ ನಿಮಗೆ ಧಾರೆ ಏಕಯ್ಯ; **ಧಾರೆ ಕೊಡದಿರೆ, ಮರಳಿ ನೀನ್ ಬಿಡುವುದುಂಟೆ**=ಧಾರೆಯ ಆಚರಣೆಯ ಮೂಲಕ ಶಾಸ್ತ್ರೋಕ್ತವಾಗಿ ನಾನು ಕೊಡದಿದ್ದರೆ, ಮತ್ತೆ ನೀನು ರಾಜ್ಯವನ್ನು ವಶಪಡಿಸಿಕೊಳ್ಳದೆ ಬಿಡುತ್ತೀಯ; **ಬಿಡುವೆನ್, ಎನ್ನಯ ಮಕ್ಕಳನ್ ಮದುವೆಯಾಗು**=ಬಿಡುತ್ತೇನೆ. ನನ್ನ ಮಕ್ಕಳನ್ನು ಮದುವೆಯಾಗು; **ಅಡಿಗಡಿಗೆ ಕೆಟ್ಟ ನುಡಿಯನ್ ನುಡಿಯುತಿರಬೇಡ. ಹಿಡಿ ಎಂದು ಅವನೀಶನು ಸರ್ವಸಾಮ್ರಾಜ್ಯಮನ್ ಮುನಿಗೆ ಧಾರೆಯನ್ ಎರೆದನ್**=ಪದೇ ಪದೇ ನಿನ್ನ ಹೆಣ್ಣುಮಕ್ಕಳನ್ನು ಮದುವೆಯಾಗು ಎಂಬ ಕೆಟ್ಟ ನುಡಿಯನ್ನು ಆಡುತ್ತಿರಬೇಡ. ತೆಗೆದುಕೊ ಎಂದು ಹೇಳುತ್ತ ರಾಜ ಹರಿಶ್ಚಂದ್ರನು ತನ್ನ ಸಕಲಸಾಮ್ರಾಜ್ಯವನ್ನು ವಿಶ್ವಾಮಿತ್ರ ಮುನಿಗೆ ಧಾರೆ ಎರೆದನು; **ಏನೇನನ್ ಧಾರೆಯನ್ ಎರೆದೆ**=ಏನೇನನ್ನು ನನ್ನ ಪಾಲಿಗೆ ನೀಡಿದೆ;

ಚತುರಂಗ ಸೇನೆಯಮ್=ಆನೆ–ಕುದುರೆ–ತೇರು–ಕಾಲ್ದಳ ಎನ್ನುವ ನಾಲ್ಕು ಬಗೆಯ ಸೇನಾ ಪಡೆಯನ್ನು; **ಸಕಲ ಭಂಡಾರವಮ್**=ರಾಜ್ಯದ ಬೊಕ್ಕಸದಲ್ಲಿರುವ ಎಲ್ಲಾ ವಸ್ತು ನಗ ನಾಣ್ಯಗಳನ್ನು; **ನಿಜ ರಾಜಧಾನಿಯಮ್**=ನನ್ನ ರಾಜಧಾನಿಯಾದ ಅಯೋಧ್ಯಾ ನಗರವನ್ನು; **ಜಗದಾಣೆ ಘೋಷಣೆಯುಮನ್**=ಜಗತ್ತನ್ನು ನಿಯಂತ್ರಿಸಬಲ್ಲ ಮತ್ತು ಆಜ್ಞೆಯನ್ನು ಮಾಡಬಲ್ಲ ರಾಜನ ಅಧಿಕಾರವನ್ನು; **ಕಟಕವನು**=ದೊಡ್ಡ ಪಟ್ಟಣಗಳನ್ನು; **ಸಪ್ತದ್ವೀಪಂಗಳ ಆನಂದದಿಂದೆ ಇತ್ತೆನ್**=ಏಳು

ದ್ವೀಪಗಳನ್ನು ಆನಂದದಿಂದ ನಿನಗೆ ಧಾರೆ ಎರೆದಿದ್ದೇನೆ; **ಇನ್ನು ಸರ್ವ ಅನುಸಂಧಾನಮನ್ ಬಿಟ್ಟು, ಕರುಣಿಸಿ ಹರಸುತಿಹುದು ಎಂದು ಭೂನಾಥನ್ ಎರಗಿ ಬೀಳ್ಕೊಂಡಡೆ**=ಇನ್ನು ನನ್ನ ಎಲ್ಲ ಬಗೆಯ ತಪ್ಪು ಒಪ್ಪುಗಳನ್ನು ಎತ್ತಿ ಆಡುವುದನ್ನು ಬಿಟ್ಟು, ಕರುಣೆಯಿಂದ ನನ್ನನ್ನು ಆಶೀರ್ವದಿಸುವುದು ಎಂದು ನುಡಿದ ಹರಿಶ್ಚಂದ್ರನು ವಿಶ್ವಾಮಿತ್ರನ ಪಾದಗಳಿಗೆ ನಮಿಸಿ ಹೊರಡುತ್ತಿರಲು; **ಅಣಕಿಸಿ ನಗುತ ಹೋಗಯ್ಯ ಹೋಗು**=ವಿಶ್ವಮಿತ್ರನು ಹರಿಶ್ಚಂದ್ರನನ್ನು ಅಪಹಾಸ್ಯಮಾಡಿ ನಗುತ್ತ ಹೋಗಯ್ಯ ಹೋಗು ಎಂದನು;

ಹರಣಮನ್ ಬೇಡದೆ ಉಳುಹಿದನು ಲೇಸಾಯ್ತು, ಮುನಿ ಕರುಣಿಸಿದನ್ ಎಂದು ತಲೆದಡವಿಕೊಳುತ ಉತ್ಸವದೊಳ್ ಉರವಣಿಸಿ ರಥವೇರಿ ನಡೆಗೊಳಲು="ನನ್ನ ಪ್ರಾಣವನ್ನು ಕೊಡು ಎಂದು ಕೇಳದೆ ನನ್ನನ್ನು ಜೀವಂತವಾಗಿರಲು ಬಿಟ್ಟನು. ಒಳ್ಳೆಯದಾಯಿತು. ವಿಶ್ವಾಮಿತ್ರ ಮುನಿಯು ನನಗೆ ಕರುಣೆಯನ್ನು ತೋರಿಸಿದನು" ಎಂದ ರಾಜ ಹರಿಶ್ಚಂದ್ರನು ತನ್ನ ತಲೆಯನ್ನು ಮುಟ್ಟಿ ನೇವರಿಸಿಕೊಳ್ಳುತ್ತ, ವಿಶ್ವಾಮಿತ್ರ ಮುನಿಯ ಕಾಟ ತಪ್ಪಿತಲ್ಲ ಎಂಬ ಸಡಗರದಿಂದ ವೇಗವಾಗಿ ಮುನ್ನಡೆದು ತೇರನ್ನೇರಿ ಮುಂದೆ ಸಾಗುತ್ತಿರಲು; **ಬಂದು ಹೋಗು. ಒಂದು ನುಡಿ ಪೇಳ್ವೆನ್ ಎಂದು ಹುರುಡಿಗನು ಮತ್ತೆ ಕರೆಯಲು**=ಮತ್ಸರದ ಮನದ ವಿಶ್ವಾಮಿತ್ರನು "ಬಂದು ಹೋಗು. ಒಂದು ಮಾತನ್ನು ಹೇಳುತ್ತೇನೆ ಎಂದು ಮತ್ತೆ ಕರೆಯಲು;

ಮರಳಿ ಬಂದು=ತೇರಿನಿಂದ ಇಳಿದು ವಿಶ್ವಾಮಿತ್ರನ ಬಳಿಗೆ ಬಂದು; **ಚಚ್ಚರ ಬೆಸಸು ಬೆಸನ್ ಆವುದು... ಎಂದು ಧೀರೋದಾತ್ತನ್ ಎರಡು ಕೈಮುಗಿಯಲ್**= ಬೇಗನೆ ಹೇಳು. ಅಪ್ಪಣೆ ಯಾವುದು ಎಂದು ಕೆಚ್ಚೆದೆಯವನು ಮತ್ತು ಉದಾರವಂತನು ಆದ ಹರಿಶ್ಚಂದ್ರನು ತನ್ನ ಎರಡು ಕಯ್ಗಳನ್ನು ಎತ್ತಿ ಮುಗಿಯಲು; **ಆ ಮುನಿ ನುಡಿದ ಕಷ್ಟವನ್ ಅದಾವ ಜೀವರು ಕೇಳ್ವರು**=ಆ ಮುನಿಯು ನುಡಿದ ಸಂಕಟದ ಸುದ್ದಿಯನ್ನು ಅದಾವ ವ್ಯಕ್ತಿ ತಾನೆ ಕೇಳಲು ಆಗುತ್ತದೆ. ವಿಶ್ವಾಮಿತ್ರ ಮುನಿಯು ಮಾನವೀಯತೆಯನ್ನೆ ಮರೆತು, ಕ್ರೂರವಾದ ಅಪ್ಪಣೆಯನ್ನು ಮಾಡುತ್ತಾನೆ; **ಎಳಸಿ ನೀನ್ ಎನಗೆ ಧಾರೆಯನ್ ಎರೆದ ಸರ್ವಸ್ವದೊಳಗಣವು ನಿನ್ನ ತೊಡಿಗೆಗಳ್. ಅವಮ್ ನೀಡು ಎನಲು**=ನೀನಾಗಿಯೇ ಬಯಸಿ ನನಗೆ ಧಾರೆಯೆರದ ರಾಜ್ಯದ ಸಕಲ ಸಂಪತ್ತಿನೊಳಗೆ ನೀನು ತೊಟ್ಟಿರುವ ಒಡವೆಗಳು ಸೇರಿವೆ. ಅವನ್ನು ಕೊಡು ಎಂದು ನುಡಿಯಲು;

ಕಳೆದು ನೀಡಿದಡೆ=ಹರಿಶ್ಚಂದ್ರನು ಮರುಮಾತನಾಡದೆ ತಾನು ತೊಟ್ಟಿದ್ದ ಎಲ್ಲ ಒಡವೆಗಳನ್ನು ಕಳೆದು ಕೊಟ್ಟರೆ; **ಇನ್ನು ಮಂತ್ರಿ ಸತಿ ಸುತರ ತೊಡಿಗೆಗಳ ಈಗಳ್ ನೀಡು ಎನಲು**=ನಿನ್ನದು ಮಾತ್ರವಲ್ಲ, ನಿನ್ನ ಮಂತ್ರಿ, ಹೆಂಡತಿ ಮಗ ತೊಟ್ಟಿರುವ

ಒಡವೆಗಳನ್ನು ಈಗ ನನಗೆ ಒಪ್ಪಿಸು ಎಂದು ಆಜ್ಞಾಪಿಸಲು; **ಕಳೆದು ಕೊಟ್ಟಡೆ**=ಅವರೆಲ್ಲರೂ ತಮ್ಮ ತೊಟ್ಟಿದ್ದ ಒಡವೆಗಳನ್ನು ಕಳಚಿಕೊಡಲು; **ಮೇಲೆ ನೀವೆಲ್ಲರು ಉಟ್ಟ ಉಡುಗೆಗಳನು ನೀಡು**=ಮಯ್ ಮೇಲೆ ನೀವೆಲ್ಲರೂ ಉಟ್ಟಿರುವ ಬಟ್ಟೆಗಳನ್ನು ಕೊಡಿರಿ ಎಂದು ವಿಶ್ವಾಮಿತ್ರ ಮುನಿಯು ಹೇಳಲು; **ಅವನ್ ಈವ ಪರಿ ಆವುದು ಎಂದು ಅಳುಕಿ ಮನಗುಂದಿ ಚಿಂತಿಸುತ ಕೈಮುಗಿದಿರ್ಪ ಭೂಪನನ್ ಕಂಡು**=ಮಯ್ ಮೇಲೆ ಉಟ್ಟಿರುವ ಬಟ್ಟೆಗಳನ್ನು ಕಳಚಿ ಕೊಡುವ ರೀತಿ ಯಾವುದು ಎಂದು ಹಿಂಜರಿದು, ಗಾಸಿಗೊಂಡ ಮನದಿಂದ ಚಿಂತಿಸುತ್ತ, ಕಯ್ ಮುಗಿಯುತ್ತಿದ್ದ ಹರಿಶ್ಚಂದ್ರನನ್ನು ವಿಶ್ವಾಮಿತ್ರನು ಗಮನಿಸಿ; **ಅವನಿಪರು ಮರುಳರ್ ಎಂಬುದು ತಪ್ಪದು**=ರಾಜರು ದಡ್ಡರು ಎಂಬ ಮಾತು ಸುಳ್ಳಲ್ಲ;

ಇದಕ್ಕೆ ಉಪಾಯವ ಕಾಣ್ಬುದು ಅರಿದೆ. ನಾ ತೋರಿದಪೆನ್ ಎಂದು=ಉಟ್ಟಬಟ್ಟೆಯನ್ನು ಕಳಚಿಕೊಡುವ ರೀತಿಯನ್ನು ತಿಳಿಯುವುದು ಕಷ್ಟವೇನಲ್ಲ. ಅದು ಹೇಗೆ ಎಂಬುದನ್ನು ನಾನು ತೋರಿಸಿಕೊಡುತ್ತೇನೆ ಎಂದು ನುಡಿದು; **ತನ್ನವನ್ ಒಬ್ಬನ್ ಉಟ್ಟ ಹಣ್ಣುರುವೆ ಸೀರೆಯನ್ ಈಸಿಕೊಂಡು ನಾಲ್ಕಾಗಿ** ಸೀಳಿ=ತನ್ನ ಸಹಚರರಲ್ಲಿ ಒಬ್ಬ ಮುನಿಯು ತೊಟ್ಟಿದ್ದ ಚಿಂದಿಯಾಗಿದ್ದ ನಾರುಮಡಿ ಯೊಂದನ್ನು ಈಸಿಕೊಂಡು, ನಾಲ್ಕಾಗಿ ಸೀಳಿ; **ಶಿವಶಿವ... ಮಹಾದೇವ ಕರುಣ ವಿಲ್ಲದ ಪಾಪಿ ಅವಿಚಾರದಿಮ್ ನೀಡೆ**=ಶಿವಶಿವ ಮಹಾದೇವ ಕರುಣೆಯಿಲ್ಲದ ಆ ಪಾಪಿ ವಿಶ್ವಾಮಿತ್ರನು ಚಿಂದಿಯಾಗಿರುವ ನಾರುಬಟ್ಟೆಯ ನಾಲ್ಕು ತುಂಡುಗಳನ್ನು ಕೆಟ್ಟ ಉದ್ದೇಶದಿಂದ ಹರಿಶ್ಚಂದ್ರನಿಗೆ ನೀಡಲು; **ನಾಚದೆ ಒಗಡಿಸದೆ ಅಳುಕದೆ ಅವರ್ ಒಬ್ಬರು ಒಂದೊಂದನು ಉಟ್ಟು ದಿವ್ಯಾಂಬರವನ್ ಇತ್ತಡೆ**=ನಾಲ್ಕು ಮಂದಿಯೂ ನಾಚಿಕೊಳ್ಳದೆ ಜುಗುಪ್ಸೆ ಪಡದೆ ಹಿಂಜರಿಯದೆ ಅವರೆಲ್ಲರೂ ಒಂದು ತುಂಡನ್ನು ಉಟ್ಟುಕೊಂಡು, ತಾವು ಕಳಚಿದ ಬೆಲೆಬಾಳುವ ಬಟ್ಟೆಗಳನ್ನು ವಿಶ್ವಾಮಿತ್ರನಿಗೆ ಕೊಟ್ಟಾಗ; **ಅಲಸದೆ ಕೊಂಡನು**=ತಡಮಾಡದೆ ಅವರಿಂದ ಈಸಿಕೊಂಡನು;

ತೃಣ ಸಸಿ ಮುಖ್ಯ ಜೀವಿಗಳಿಗೆ ಮಿಸುಪ ಕಳೆಗಳನು ಒಸೆದೊಸೆದು ದಾನವಿತ್ತು ಅಂಬರವನು ಉಳಿದ ಅಮಳ ಶಶಿಯಂತೆ=ಭೂಮಂಡಲದಲ್ಲಿರುವ ಹುಲ್ಲು ಗಿಡ ಮರ ಬಳ್ಳಿಗಳನ್ನು ಒಳಗೊಂಡಂತೆ ಸಕಲ ಜೀವಿಗಳಿಗೂ ಹೊಳೆಯುವ ಕಾಂತಿಯನ್ನು ಅನುಗ್ರಹಿಸಿ ಆಕಾಶದಿಂದ ಮರೆಯಾದ ಪರಿಶುದ್ಧ ಚಂದ್ರನಂತೆ; **ಅಂಬರವನ್ ಉಳಿದು ಅರುವೆಯುಟ್ಟ ಅರಸನು ಸರ್ವತೊಡಿಗೆಗಳನ್ ಇತ್ತು ಕುಸಿದು ಪೊಡಮಟ್ಟು**=ಉಟ್ಟಿದ್ದ ಬಟ್ಟೆಯೆಲ್ಲವನ್ನೂ ಕಳಚಿ, ನಾರುಮಡಿಯನ್ನುಟ್ಟ ಹರಿಶ್ಚಂದ್ರನು ತನ್ನ ಹೆಂಡತಿಯ, ಮಗನ ಮತ್ತು ಮಂತ್ರಿಯ ಬಟ್ಟೆಗಳೆಲ್ಲವನ್ನೂ ವಿಶ್ವಾಮಿತ್ರನಿಗೆ ಕೊಟ್ಟು, ಕೆಳಕ್ಕೆ ಬಾಗಿ, ಮುನಿಯ ಪಾದಗಳಿಗೆ ನಮಸ್ಕರಿಸಿ; **ಇನ್ನು**

ಹೋಹೆನ್ನೈ ತಂದೆ. ಸಂತಸವೆ ನಿಮಗೆ ಎನಲ್=ಇನ್ನು ಹೋಗುತ್ತೇನೆ. ತಂದೆಯೇ, ಈಗ ನಿಮಗೆ ಸಮಾಧಾನವಾಯಿತೇ ಎಂದು ಕೇಳಲು;

ಅಡ್ಡಮೋರೆಯೊಳ್ ಉದಾಸೀನ ಮಸಕದಿಮ್ ಹೋಗು ಎಂದು... ಹೋಗಬಿಟ್ಟು, ಅಳುಪಿ ಮತ್ತೆ ಆ ಕೈಯಲೇ ಕರೆದನು=ಮೊಗವನ್ನು ಗಂಟು ಹಾಕಿಕೊಂಡು ಕೋಪ ಬೆರೆತ ತಿರಸ್ಕಾರದ ನೋಟವನ್ನು ಬೀರುತ್ತ ಹೋಗು ಎಂದು ಹರಿಶ್ಚಂದ್ರನಿಗೆ ಹೋಗಲು ಅನುಮತಿಯನ್ನು ನೀಡಿ ಹರಿಶ್ಚಂದ್ರನು ಅಡಿಯಿಟ್ಟು ಹೊರಡುತ್ತಿದ್ದಂತೆಯೇ, ಅವನಿಗೆ ಮತ್ತೊಂದನ್ನು ಕೇಡನ್ನು ಬಗೆಯಲು ಬಯಸಿ ಮರುಗಳಿಗೆಯಲ್ಲಿಯೇ ತನ್ನತ್ತ ಬರುವಂತೆ ಕರೆದನು; **ಮನದೊಳ್ ಇರ್ದುದನ್ ಒಂದನ್ ಆಡಬೇಕು. ಆಡಿದಡೆ ಮುನಿಯಲೇ**=ನನ್ನ ಮನದಲ್ಲಿರುವ ಮತ್ತೊಂದು ಸಂಗತಿಯನ್ನು ನಿನಗೆ ಹೇಳಬೇಕು. ಹೇಳಿದರೆ ನೀನು ಕೋಪಿಸಿಕೊಳ್ಳುವುದಿಲ್ಲವೇ; **ಎಲೆ ತಂದೆ, ಮುನ್ನ ಏನನ್ ಆಡಿದಡೆ ನಾ ಮುನಿದೆನ್ ಪೇಳ್**=ಎಲೆ ತಂದೆ, ಈ ಮೊದಲು ನೀನು ಆಡಿದ ಯಾವ ಮಾತಿಗೆ ನಾನು ಕೋಪಿಸಿಕೊಂಡಿದ್ದೇನೆ ಹೇಳು. ನಿನ್ನೆಲ್ಲ ಮಾತುಗಳನ್ನು ತಾಳ್ಮೆಯಿಂದ ಕೇಳಿಲ್ಲವೇ;

ನೀನು ಬಹು ಸುವರ್ಣಯಾಗವ ಮಾಡಿದಂದು ಎನಗೆ ದಕ್ಷಿಣೆಗೆ ಇತ್ತ ಧನವನ್ ಈವುದು=ನೀನು ಬಹು ಸುವರ್ಣಯಾಗವನ್ನು ಮಾಡಿದಾಗ ನನಗೆ ಕಾಣಿಕೆಯಾಗಿ ನೀಡಿದ್ದ ಸಂಪತ್ತನ್ನು ಕೊಡುವುದು. ಅಂದು ಸುವರ್ಣಯಾಗಕ್ಕೆ ಬಂದಿದ್ದ ವಿಶ್ವಾಮಿತ್ರ ಮುನಿಯ ಕೋರಿಕೆಯಂತೆ ದೊಡ್ಡ ಆನೆಯ ಮೇಲೆ ಒಬ್ಬ ವ್ಯಕ್ತಿಯು ನಿಂತುಕೊಂಡು, ಕವಡೆಯನ್ನು ಮೇಲಕ್ಕೆ ಚಿಮ್ಮಿದರೆ, ಕವಡೆಯು ಎಷ್ಟು ಎತ್ತರಕ್ಕೆ ಹೋಗುವುದೋ, ಆ ಎತ್ತರಕ್ಕೆ ಸರಿಸಮನಾಗಿ ಸುರಿದ ಹೊನ್ನಿನ ರಾಸಿಯನ್ನು ರಾಜ ಹರಿಶ್ಚಂದ್ರನು ನೀಡಿದ್ದನು. ಅದನ್ನು ಆಗ ವಿಶ್ವಾಮಿತ್ರನು ತೆಗೆದುಕೊಂಡು ಹೋಗದೆ, ಹರಿಶ್ಚಂದ್ರನ ಬೊಕ್ಕಸದಲ್ಲಿಯೇ ಇರಿಸಿ, ತನಗೆ ಬೇಕಾದಾಗ ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದನು. ಈಗ ವಿಶ್ವಾಮಿತ್ರನು ಅದನ್ನು ಕೊಡುವಂತೆ ಕೇಳುತ್ತಿದ್ದಾನೆ;

ದೇಶವನು ಬಿಟ್ಟು ಹೋಹಾತನ್ ಅನ್ಯಸಾಲವನು ನೆಟ್ಟನೆ ಹೊತ್ತು ಹೋಗಲಾಗದು ನಿಲಿಸಲಾಗದು ಇತ್ತು ಬಳಿಕ ಅಡಿಯನಿಡು=ದೇಶವನ್ನು ಬಿಟ್ಟು ಹೋಗುತ್ತಿರುವ ನೀನು .ಕೊಡಬೇಕಾಗಿರುವ ಸಾಲವನ್ನು ಸಂಪೂರ್ಣವಾಗಿ ತೀರಿಸದೆ ಹೋಗಬಾರದು ಸಾಲದ ಬಾಕಿಯನ್ನು ಉಳಿಸಿಕೊಳ್ಳಲಾಗದು. ನನಗೆ ಕೊಡಬೇಕಾದ ಸಂಪತ್ತನ್ನು ಕೊಟ್ಟು ನಂತರ ನೀನು ಇಲ್ಲಿಂದ ಹೊರಡು; **ಅನುಗೆಟ್ಟ ಮರುಳೆ**=ನೀತಿನಿಯಮಗಳನ್ನು ಅರಿಯದ ತಿಳಿಗೇಡಿಯೇ; **ನೀನ್ ಎಂದ ಅಲ್ಪದಕ್ಷಿಣೆಯ ಧನವು ಎನಿತು**=ಇಡೀ ರಾಜ್ಯದ ಸಂಪತ್ತೇ ನಿನ್ನದಾಗಿರುವಾಗ,

ನೀನು ಕೇಳುತ್ತಿರುವ ಅಲ್ಪಕಾಣಿಕೆಯ ಸಂಪತ್ತು ಎಷ್ಟು ದೊಡ್ಡದು; **ನಿನ್ನ ಮನದಾರ್ತವ ಎನಿತರೊಳ್ ಅಳಿವುದು**=ನಿನ್ನ ಮನದ ದುರಾಶೆಯು ಯಾವ ಪ್ರಮಾಣದ ಸಂಪತ್ತಿನಿಂದ ತಾನೆ ಹಿಂಗುತ್ತದೆ. ನಿನ್ನ ದುರಾಶೆಗೆ ಕೊನೆಯಿಲ್ಲವೇ;

ಅನಿತರ್ಥ ಮೊದಲ ಭಂಡಾರದೊಳಗೆ ಅದೆ=ನಿನಗೆ ನಾನು ಕೊಟ್ಟಿದ್ದ ಕಾಣಿಕೆಯ ಸಂಪತ್ತೆಲ್ಲವೂ ರಾಜ್ಯದ ಬೊಕ್ಕಸದಲ್ಲಿಯೇ ಇದೆ; **ನೀನ್ ಇನ್ನು ಬಳಲಿಸದಿರ್ ಎನಲು**=ನೀನು ಇನ್ನು ನಮ್ಮನ್ನು ಇಲ್ಲಸಲ್ಲದ ಕಾರಣಗಳನ್ನು ಒಡ್ಡಿ ಬಳಲಿಸಬೇಡ ಎಂದು ಹರಿಶ್ಚಂದ್ರನು ನುಡಿಯಲು; **ಕೊನೆ ಬೆರಳನು ಅಲುಗಿ ತಲೆದೂಗಿ**=ವಿಶ್ವಾಮಿತ್ರ ಮುನಿಯು ಹರಿಶ್ಚಂದ್ರನನ್ನು ಅಣಕ ಮಾಡುವಂತೆ ತನ್ನ ಕಿರು ಬೆರಳನ್ನು ಆಡಿಸುತ್ತ, ತಲೆ ತೂಗುತ್ತ; **ಲೇಸೈ ನಿನ್ನ ಮನಕೆ ಸರಿಯಿಲ್ಲ**=ಒಳ್ಳೆಯದು... ನನ್ನ ಮಾತು ನಿನ್ನ ಮನಸ್ಸಿಗೆ ಸರಿ ಎನಿಸಿಲ್ಲ; **ಮಝು-ಭಾಪು-ಭಾಪರರೆ**=ಈ ಪದಗಳೆಲ್ಲವೂ ಇತರರ ಸಾಧನೆಗಳನ್ನು ಗುರುತಿಸಿ ಕೊಂಡಾಡುವಾಗ ಬಳಸುವ ಮೆಚ್ಚುಗೆಯ ಪದಗಳು. ಈ ಸನ್ನಿವೇಶದಲ್ಲಿ ಅಪಹಾಸ್ಯದ ತಿರುಳಿನಲ್ಲಿ ಬಳಕೆಗೊಂಡಿವೆ;

ಮಝು ಭಾಪು ಭಾಪರರೆ ನೆಟ್ಟನೆ ಕೊಟ್ಟು, ಕಾಳ್ಗೆಡೆದು ನುಡಿವ ನುಡಿ ಹಸನಾಯಿತು ಎಂದು ಘೂರ್ಮಿಸಿ ನಕ್ಕನು=ಹರಿಶ್ಚಂದ್ರನೇ... ಮಝು ಭಾಪು ಭಾಪರರೆ... ಮೊದಲು ನನಗೆ ದಕ್ಷಿಣೆಯನ್ನು ನೀನೇ ಕೊಟ್ಟು, ಈಗ ಕೊಡಲಾಗದೆ ಕೆಟ್ಟ ಮಾತುಗಳನ್ನಾಡುತ್ತಿರುವ ನಿನ್ನ ನುಡಿಗಳು ಬಹಳ ಚೆನ್ನಾಗಿವೆ ಎಂದು ಗಹಗಹಿಸಿ ನಕ್ಕನು; **ಕಡೆಗಣಿಸಿ ನಗಲೇಕೆ ತಂದೆ**=ನನ್ನನ್ನು ಕಡೆಗಣಿಸಿ ಅಣಕಿಸುವಂತೆ ಏಕೆ ನಗುತ್ತಿರುವೆ ತಂದೆ. ನನ್ನ ನಡೆನುಡಿಯಲ್ಲಿ ಅಂತಹ ಇಬ್ಬಂದಿತನವನ್ನು ನೀನೇನು ಕಂಡೆ; **ಧಾರೆಯಮ್ ಕೊಡುವಾಗ ದಕ್ಷಿಣೆಯ ಧನವು ಅದರೊಳ್ ಅದೆಯೆಂದು ನುಡಿದುದುಂಟೇ**=ನಿನ್ನ ರಾಜ್ಯವನ್ನು ನನಗೆ ಧಾರೆಯೆರೆಯುವಾಗ, ಆ ಸಂಪತ್ತಿನಲ್ಲಿ ನನಗೆ ಕೊಟ್ಟಿದ್ದ ದಕ್ಷಿಣೆಯ ಹಣವೂ ಇದೆ ನೀನು ಹೇಳಿದ್ದೆಯ; ಸುಂಕ=ಒಂದು ಊರಿನಿಂದ ಮತ್ತೊಂದು ಊರಿಗೆ ಸರಕನ್ನು ಸಾಗಿಸುವಾಗ, ಆಡಳಿತ ನಡೆಸುವ ರಾಜ್ಯದ ಬೊಕ್ಕಸಕ್ಕೆ ಕೊಡಬೇಕಾದ ತೆರಿಗೆಯ ಹಣ;

ಹೇರನ್ ಒಪ್ಪಿಸಿದವಂಗೆ ಎಲ್ಲಿಯದು ಸುಂಕ=ಬಂಡಿಯಲ್ಲಿ ತುಂಬಿರುವ ವಸ್ತುಗಳೆಲ್ಲವನ್ನು ವಶಪಡಿಸಿಕೊಂಡಿರುವ ತೆರಿಗೆಯ ಅಧಿಕಾರಿಗೆ ಮತ್ತೆ ಸುಂಕವನ್ನೇಕೆ ಕೊಡಬೇಕು; **ಒಡಲ್ ಅಳಿದಡಮ್ ಸಾಲ ಅಳಿಯದು ಎನಲ್**=ಸಾಲಗಾರ ಸತ್ತುಹೋದರೂ, ಆತನು ಮಾಡಿದ್ದ ಸಾಲ ಹಾಗೆಯೇ ಉಳಿಯುತ್ತದೆ; **ಈ ಧರಣಿ ಒಡೆತನಮ್ ಹೋದಡೆ ಏನ್ ಸಾಲ ಹೋಹುದೆ**=ನಿನ್ನ ಪಾಲಿಗೆ ಈ ರಾಜ್ಯದ ಒಡೆತನ ಈಗ ಇಲ್ಲವಾದರೂ ನೀನು ನನಗೆ ಕೊಡಬೇಕಾದ ಕಾಣಿಕೆಯ

ಮೊತ್ತ ಹೋಗುತ್ತದೆಯೇ; **ಮುನ್ನಿನ ಒಡವೆಯನ್ ಕೊಡು. ಕೊಡದಡೆ ಎಲ್ಲವಮ್ ಮರಳಿ ಕೈಕೊಳು. ಬರಿದೆ ಬಿಡೆನ್ ಎಂದನು**=ಈ ಮೊದಲು ನೀನು ನನಗೆ ಕೊಟ್ಟಿದ್ದ ಸಂಪತ್ತನ್ನು ಕೊಡು. ಕೊಡಲಾಗದಿದ್ದರೆ ನಿನ್ನ ರಾಜ್ಯಸಂಪತ್ತೆಲ್ಲವನ್ನೂ ಪುನಃ ನೀನೇ ತೆಗೆದುಕೊ. ನನ್ನ ಪಾಲಿನ ಕಾಣಿಕೆಯ ಸಂಪತ್ತು ಬರದ ಹೊರತು ನಿನ್ನನ್ನು ಬಿಡುವುದಿಲ್ಲ ಎಂದು ವಿಶ್ವಾಮಿತ್ರನು ಹರಿಶ್ಚಂದ್ರನಿಗೆ ಧರ್ಮಸಂಕಟವನ್ನು ತಂದಿತ್ತನು; ಸಡಿಫಡ=ತಿರಸ್ಕಾರ ಮತ್ತು ಕೋಪವನ್ನು ಸೂಚಿಸುವ ಪದ;

ಜತ್ತಕನ ನುಡಿಗೆ ತೆಕ್ಕಿದನೆ ತೆರಳಿದನೆ ತಲೆಗುತ್ತಿದನೆ ಸಡಿಫಡಿಲ್ ಇಲ್ಲ=ಕಪಟಿ ವಿಶ್ವಾಮಿತ್ರ ಮುನಿಯ ಮಾತಿಗೆ ಹರಿಶ್ಚಂದ್ರನು ಹೆದರಿದನೆ... ಹಿಂಜರಿದನೆ ತಲೆ ತಗ್ಗಿಸದನೆ... ತಿರಸ್ಕಾರ ಮತ್ತು ಕೋಪದಿಂದ ಉದ್ರೇಕಗೊಂಡನೆ–ಈ ಯಾವುದೇ ಬಗೆಯ ಒಳಮಿಡಿತಗಳಿಗೆ ಒಳಗಾಗಲಿಲ್ಲ. ಶಾಂತಚಿತ್ತನಾಗಿಯೇ ಈ ಸನ್ನಿವೇಶವನ್ನು ಎದುರಿಸಲು ಸಿದ್ಧನಾಗುತ್ತಾನೆ; **ಅವಧಿಯಮ್ ಕೊಟ್ಟು**=ದಕ್ಷಿಣೆಯ ಸಂಪತ್ತನ್ನು ಹಿಂತಿರುಗಿಸಲು ಕಾಲಾವಕಾಶವನ್ನು ನೀಡಿ; **ಚಿತ್ತವಿತ್ತು ಅನುಸರಿಸಿ ಕೊಂಬಿರಾದೆಡೆ**=ಸ್ವಲ್ಪ ಸಮಾಧಾನದಿಂದ ನೆರವಾದರೆ; **ತಂದು ನಿರ್ಣಯಿಸಿ ಕೊಡುವೆನ್**=ಸಂಪತ್ತನ್ನು ಗಳಿಸಿ ಕೊಡಬೇಕಾದುದನ್ನು ಚುಕ್ತ ಮಾಡುತ್ತೇನೆ; **ಹತ್ತು ದಿನ... ಆರೆನ್**=ಹತ್ತು ದಿನ... ಶಕ್ತನಾಗೆನು; **ಇಪ್ಪತ್ತು ದಿನ... ದೊರಕದು**=ಇಪ್ಪತ್ತು ದಿನ... ದೊರಕುವುದಿಲ್ಲ; **ಮೂವತ್ತು ದಿನ... ಆಗದು**=ಮೂವತ್ತು ದಿನ... ಸಾಕಾಗುವುದಿಲ್ಲ; **ನಾಲ್ವತ್ತೆಂಟು ದಿನ... ಅಲ್ಲವೆಂದೆನ್ನೆ**=ನಲವತ್ತೆಂಟು ದಿನ... ಸಾಕಾಗದು ಎನ್ನಲಾರೆ. ಈ ಅವಧಿಯೊಳಗೆ ಕೊಡಬಲ್ಲೆ;

ನೀನ್ ಇತ್ತ ಅವಧಿ ಕಿರಿದು=ಆದರೆ ನೀನು ಕೊಟ್ಟಿರುವ ಕಾಲಾವಕಾಶ ಬಹಳ ಕಡಿಮೆಯಾಗಿದೆ; **ಈವರಿಲ್ಲ**=ನಿನಗೆ ಕೊಡಬೇಕಾದಷ್ಟು ದೊಡ್ಡ ಮೊತ್ತದ ಸಂಪತ್ತನ್ನು ನನಗೆ ಕೊಡುವವರು ಯಾರು ಇಲ್ಲ; **ಧನವಮ್ ಗಳಿಸಿ ತಂದು ಈವೆನ್ ಎನಲು ದಿನವಿಲ್ಲ**=ಸಂಪತ್ತನ್ನು ದುಡಿದು ಸಂಪಾದಿಸಿ ತಂದುಕೊಡೋಣ ವೆಂದರೆ ಹೆಚ್ಚು ದಿನಗಳ ಕಾಲಾವಕಾಶವಿಲ್ಲ; **ಒಬ್ಬ ತೆರಕಾರನನ್ ನಿರ್ಣಯಿಸಿ ಕೊಟ್ಟಡೆ ಆತಂಗೆ ಕೊಡುವೆನ್**=ಒಬ್ಬ ವಸೂಲಿಕಾರನನ್ನು ನೇಮಿಸಿ ನನ್ನೊಡನೆ ಕಳುಹಿಸಿದರೆ, ಆತನ ಕಯ್ಗೆ ಸಂಪತ್ತನ್ನು ಕೊಡುತ್ತೇನೆ; **ಬಲ್ಲಿದನನ್ ಒಬ್ಬನನ್ ಕೊಡುವೆನ್**=ಶಕ್ತನಾದ ಒಬ್ಬನನ್ನು ನಿನ್ನೊಡನೆ ಕಳುಹಿಸುತ್ತೇನೆ; **ಆತಂಗೆ ಧನವೆಲ್ಲವಮ್ ನಿರ್ಣಯಿಸಿ ಕೊಡುವಂತಿರೆ**=ಆತನ ಕಯ್ಗೆ ನೀನು ಸಂಪತ್ತನ್ನು ಕೊಡುತ್ತೇನೆ ಎಂದು ಹೇಳಿದ್ದರೂ;

ಎನಗೆ ಇಲ್ಲಿ ಹೊಲ್ಲಹಮ್=ನನಗೆ ನಿನ್ನ ಮಾತಿನಲ್ಲಿ ನಂಬಿಕೆಯಿಲ್ಲ. ಏನೋ ಕೆಡುಕು ಕಾಣಿಸುತ್ತಿದೆ; **ಸೂರುಳು ಸೂರುಳಿಡು**=ನಲವತ್ತೆಂಟು ದಿನಗಳ

ಒಳಗಾಗಿಯೇ ಸಂಪತ್ತನ್ನು ಹಿಂತಿರುಗಿಸುತ್ತೇನೆ ಎಂದು ಮತ್ತೊಮ್ಮೆ ಆಣೆಯಿಟ್ಟು ಹೇಳು; **ಕಾಡದೆ ಬೇಗ ಕಳುಹಿದಪೆನ್**=ನಿನ್ನನ್ನು ಹೆಚ್ಚು ಕಾಡಿಸದೆ ಬೇಗ ಕಳುಹಿಸುತ್ತೇನೆ; **ಅವಧಿಗೆ ನಿಮ್ಮ ಧನವಮ್ ಈಯದಡೆ**=ನೀವು ಕೊಟ್ಟಿರುವ ನಲವತ್ತೆಂಟು ದಿನದೊಳಗೆ ನಿಮಗೆ ಕೊಡಬೇಕಾದ ಸಂಪತ್ತನ್ನು ನಾನು ಕೊಡದಿದ್ದರೆ; **ಶಿವಪೂಜೆಯಮ್ ಮಾಡದವನು**=ಶಿವ ಪೂಜೆಯನ್ನು ಮಾಡದವನು; **ಗುರ್ವಾಜ್ಞೆ ಕೆಟ್ಟವನು**=ಗುರುವಿನ ಆಜ್ಞೆಗೆ ತಪ್ಪಿನಡೆದವನು; **ಪರಸತಿಗೆ ಅಳುಪುವವನು**=ಇತರರ ಹೆಂಡತಿಯೊಡನೆ ಕಾಮದ ನಂಟನ್ನು ಪಡೆಯಲು ಬಯಸುವವನು; **ಪರರ ಅಸುಗೆ ಮುಳಿವವನು**=ಬೇರೆಯವರ ಜೀವಕ್ಕೆ ಹಾನಿಯನ್ನುಂಟುಮಾಡುವವನು; **ತಾಯನ್ ಬಗೆಯದವನು**= ತಾಯಿಯನ್ನು ಪ್ರೀತಿಯಿಂದ ಸಲಹದವನು; **ತಂದೆಯನ್ ಒಲ್ಲದವನು**=ತಂದೆಯನ್ನು ದೂರತಳ್ಳಿದವನು; **ಪರನಿಂದೆಗೆಯ್ವವನು**=ಇತರರನ್ನು ಬಯ್ಯುವವನು;

ಇಟ್ಟಿಗೆಯ ಸುಟ್ಟವನು=ಇಟ್ಟಿಗೆಯನ್ನು ಸುಟ್ಟವನು (ಈ ನುಡಿಗಳಿಗೆ ಸರಿಯಾದ ತಿರುಳು ಏನೆಂಬುದು ತಿಳಿದುಬಂದಿಲ್ಲ); **ಬೇಗೆಯನ್ ಇಕ್ಕುವವನ್**=ನಾಡಿನ ಮತ್ತು ಕಾಡಿನ ಸಂಪತ್ತಿಗೆ ಬೆಂಕಿಯನ್ನು ಹಾಕುವವನು; **ಅಧಮರನು ಬೆರಸುವವನು**=ಕೆಟ್ಟವರ ಸಹವಾಸವನ್ನು ಮಾಡುವವನು; **ಕುಲಧರ್ಮ ಕೆಟ್ಟವನ್**= ತಾನು ಹುಟ್ಟಿದ ಕುಲದ ಸಂಪ್ರದಾಯ ಮತ್ತು ಆಚರಣೆಗಳನ್ನು ಕಡೆಗಣಿಸಿದವನು; **ಇಳಿವ ನರಕದೊಳಗೆ ಇಳಿವೆನ್**=ಇಂತಹ ನೀಚರೆಲ್ಲರೂ ಹೋಗುವ ನರಕದೊಳಕ್ಕೆ ಹೋಗುತ್ತೇನೆ; **ಮೇಲಿನ್ನು ನಾನು ಆಳ್ವ ದೇಶದೊಳು ಬೇಡದಂತೆ, ಓಲೈಸದಂತೆ, ಕೃಷಿ ವ್ಯವಸಾಯಮ್ ಮಾಡದೆ, ಆಲಯಮ್ ಕಟ್ಟಿರದೆ, ಅವಧಿಯೊಳು ಹೊನ್ನ ನಿರ್ಣಯಿಸುವುದು ಬೇಗ ಎನಲು**=ಈಗ ವಿಶ್ವಾಮಿತ್ರ ಮುನಿಯು ಹರಿಶ್ಚಂದ್ರನಿಗೆ ಮತ್ತೊಂದು ಕರಾರನ್ನು ಹಾಕುತ್ತಾನೆ. ಇನ್ನು ಮುಂದೆ ನನ್ನ ಆಳ್ವಿಕೆಗೆ ಒಳಪಟ್ಟ ದೇಶದಲ್ಲಿ ನೀನು ಸಂಪತ್ತಿಗಾಗಿ ಯಾರನ್ನು ಬೇಡಬಾರದು; ಯಾರ ಸೇವೆಯನ್ನು ಮಾಡಬಾರದು; ಬೇಸಾಯದಲ್ಲಿ ತೊಡಗಬಾರದು; ಮನೆಯನ್ನು ಕಟ್ಟಬಾರದು. ಕೊಟ್ಟಿರುವ ಕಾಲಾವಕಾಶದಲ್ಲಿ ನನ್ನ ಕಾಣಿಕೆಯ ಹೊನ್ನನ್ನು ಬೇಗ ಹಿಂತಿರುಗಿಸು ಎಂದು ಆಜ್ಞಾಪಿಸಲು;

ಭೂಲೋಲನ್ ಅದಕೆ ಒಡಂಬಡಲು=ಹರಿಶ್ಚಂದ್ರನು ಅದಕ್ಕೆ ಒಪ್ಪಿಗೆ ನೀಡಲು; **ಸಪ್ತದ್ವೀಪಜಾಲವೆಲ್ಲ ಎನ್ನವು ಅವರಿಂದ ಹೊರಗೆ ಆವುದು ಎಂದಾಲಿಸಲು**=ಏಳು ದ್ವೀಪಗಳ ಸಮೂಹದಿಂದ ಕೂಡಿದ ಭೂಮಂಡಲವೆಲ್ಲವೂ ನನ್ನ ಆಳ್ವಿಕೆಯಲ್ಲಿರುವಾಗ, ಅದರಿಂದ ಹೊರಪಟ್ಟ ರಾಜ್ಯ ಯಾವುದು. ಎಲ್ಲಿ ನೀನು ನನಗೆ ಕೊಡಬೇಕಾದ ಸಂಪತ್ತನ್ನು ಸಂಪಾದಿಸುತ್ತೀಯೆ ಎಂದು ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಪ್ರಶ್ನಿಸಲು; **ಮುನಿ ಕೇಳ್, ಹೇಮಕೂಟಮ್ ವಾರಣಾಸಿಗಳು**

ಹೊರಗು=ಮುನಿಯೇ ಕೇಳು, ಹೇಮಕೂಟವೆಂದು ಹೆಸರಾಂತ ಹಂಪಿ ಮತ್ತು ವಾರಣಾಸಿಯೆಂದು ಹೆಸರಾಂತ ಕಾಶಿಯ ಪ್ರಾಂತ್ಯಗಳು ನಿನ್ನ ಆಳ್ವಿಕೆಗೆ ಒಳಪಟ್ಟಿಲ್ಲ; **ಪ್ರಳಯಕ್ಕೆ ಹೊರಗು**=ಅಲ್ಲಿ ಪ್ರಳಯ ಉಂಟಾಗುವುದಿಲ್ಲ; **ಕಲಿಕಾಲ ಹೊಗದು**= ಕಲಿಯುಗದ ಪ್ರವೇಶವಿಲ್ಲ. ಕೃತಯುಗ-ತ್ರೇತಾಯುಗ-ದ್ವಾಪರಾಯುಗ-ಕಲಿಯುಗ ಎಂಬ ನಾಲ್ಕು ಕಾಲಮಾನಗಳ ಕಲ್ಪನೆಯು ಜನಮನದಲ್ಲಿದೆ. ಒಂದೊಂದು ಯುಗ ಕಳೆದು ಮತ್ತೊಂದು ಯುಗ ಹುಟ್ಟುತ್ತಿದ್ದಂತೆಯೇ ಮಾನವ ಸಮುದಾಯದ ನಡೆನುಡಿಗಳಲ್ಲಿ ಒಳ್ಳೆಯತನದ ಪ್ರಮಾಣ ಕಡಿಮೆಯಾಗುತ್ತದೆ ಎಂಬ ಭಾವನೆಯು ಜನಮನದಲ್ಲಿದೆ;

ಅಂತಕನ ಸುಳಿವು ಅವರೊಳಿಲ್ಲ=ಸಾವಿನ ದೇವತೆಯಾದ ಯಮನು ಅಲ್ಲಿಗೆ ಬರುವುದಿಲ್ಲ; **ಕಾಮನ ಡಾವರಮ್ ಕೊಳ್ಳದು**=ಮಯ್ ಮನವನ್ನು ಕಾಡುವ ಕಾಮದೇವನ ಹಿಂಸೆಗೆ ಅಲ್ಲಿ ಅವಕಾಶವಿಲ್ಲ; **ಉಳಿದ ಮಾಯೆಯ ಮಾತು ಬೇಡ**= ಇನ್ನುಳಿದಂತೆ ಮಾನವರ ಮನಸ್ಸನ್ನು ಕೆಟ್ಟದ್ದರ ಕಡೆಗೆ ಎಳೆದೊಯ್ಯುವ ಯಾವದೇ ಬಗೆಯ ವ್ಯಾಮೋಹ/ಕಪಟತನ/ಭ್ರಮೆಯ ಸಂಗತಿಗಳು ಅಲ್ಲಿಲ್ಲ; **ಪಾಪಂಗಳ ಆಟಮ್ ನಾಟವು**=ಪಾಪದ ವ್ಯವಹಾರಗಳು ಅಲ್ಲಿ ನಡೆಯುವುದಿಲ್ಲ; **ಅನ್ಯಾಯದ ಕಳೆಗೆ ತೆಕ್ಕವು**=ಅನ್ಯಾಯದ ನಡೆನುಡಿಗೆ ಹಿಮ್ಮೆಟ್ಟುವುದಿಲ್ಲ. ಅಂದರೆ ಅನ್ಯಾಯದ ನಡೆನುಡಿಯನ್ನು ಅಡಗಿಸಲಾಗುತ್ತದೆ; **ಮಾರಿ ಮೃತ್ಯುಗಿತ್ಯುಗಳ ಬಲೆಗೆ ಒಳಗಾಗದು**=ಕೇಡನ್ನುಂಟುಮಾಡುವ ಸಾವಿನ ಬಲೆಗೆ ಅಲ್ಲಿ ಯಾರೂ ಸಿಲುಕುವುದಿಲ್ಲ; **ಅಧಿಕ ಪುಣ್ಯದ ಬೀಡು**=ಹೆಚ್ಚಿನ ಪುಣ್ಯದ ನೆಲೆ; **ಮಂಗಳದ ನಿಳಯ**=ಒಳಿತನ್ನುಂಟುಮಾಡುವ ಮಂದಿರ;

ಕಾಶಿ ಹಂಪೆಗಳು ಮುಕ್ತಿಯ ಮೂಲ ಎನಿಸುವವು=ಕಾಶಿ ಮತ್ತು ಹಂಪೆಗಳು ಎಲ್ಲ ರೀತಿಯ ಒಳಿತಿಗೆ ಮೂಲ ನೆಲೆಗಳು ಎಂದು ಹೆಸರನ್ನು ಪಡೆದಿವೆ; **ಮುನಿ ಕೇಳು, ಅವಕೆ ವಿಶ್ವೇಶ್ವರ ವಿರೂಪಾಕ್ಷರೇ ಒಡೆಯರ್**=ಮುನಿಯೇ ಕೇಳು, ಕಾಶಿ ಪಟ್ಟಣಕ್ಕೆ ವಿಶ್ವೇಶ್ವರನು ಒಡೆಯ ಮತ್ತು ಹಂಪೆಯ ಪಟ್ಟಣಕ್ಕೆ ವಿರೂಪಾಕ್ಷನೇ ಒಡೆಯ; **ಅವನಿಯೊಳಗೆ ಅಲ್ಲಿ ನಿನ್ನ ಆಜ್ಞೆಗಳು ಸಲ್ಲ**=ದೇವರ ಆಳ್ವಿಕೆಗೆ ಒಳಪಟ್ಟಿರುವ ಕಾಶಿಯಲ್ಲಿ ಮತ್ತು ಹಂಪೆಯಲ್ಲಿ ನಿನ್ನ ರಾಜಾಜ್ಞೆಗಳು ನಡೆಯುವುದಿಲ್ಲ; **ಬರಿಯ ವಿಚಾರ ಹೊಲ್ಲ**=ತರ್ಕದ ವಿಚಾರಗಳಿಗೆ ಅಲ್ಲಿ ಅವಕಾಶವಿಲ್ಲ; **ಹಂಪೆಗೆ ಹೋಹದು ಎಡೆಯಿಲ್ಲ**=ಹಂಪೆಗೆ ಹೋಗುವುದಕ್ಕೆ ಅವಕಾಶವಿಲ್ಲ. ಏಕೆಂದರೆ ಹಂಪೆಯು ಅಯೋಧ್ಯಾ ನಗರದಿಂದ ಬಹುದೂರದಲ್ಲಿದೆ; **ಕಾಶೀಪುರವನೆ ಸಾರ್ದು**= ಆದ್ದರಿಂದ ಕಾಶಿ ಪಟ್ಟಣಕ್ಕೆ ತೆರಳಿ; **ನಿವಗೆ ಕೊಡುವ ಅರ್ಥಮನ್ ಕೊಡುವೆನ್**= ನಿಮಗೆ ಕೊಡಬೇಕಾದ ಸಂಪತ್ತನ್ನು ಹಿಂತಿರುಗಿಸುತ್ತೇನೆ;

ಇನ್ನು ಅಳಲಿಸದೆ ಶಿವಮೂರ್ತಿ ಮುನಿನಾಥ ಕರುಣಿಸು=ಇನ್ನು ಹೆಚ್ಚಿನ ಕಾಟವನ್ನು ಕೊಡದೆ ಶಿವನಂತಿರುವ ಮುನಿಗಳ ಒಡೆಯನಾದ ವಿಶ್ವಾಮಿತ್ರನೇ, ಕರುಣೆಯನ್ನು ತೋರಿ, ನಾನು ಇಲ್ಲಿಂದ ಹೋಗಲು ಅನುಮತಿಯನ್ನು ನೀಡು; **ಹೋಗು ವಸ್ತುವ ಬೇಗ ಮಾಡು ಎಂದಡೆ**=ಹೋಗು ನನಗೆ ಕೊಡಬೇಕಾದ ಸಂಪತ್ತನ್ನು ಬೇಗ ಜತೆಗೂಡಿಸು ಎಂದು ವಿಶ್ವಾಮಿತ್ರನು ನುಡಿಯಲು; **ಆ ಧೈರ್ಯನಿಧಿ ಭೂಪಾಲನು ವಿಶ್ವಾಮಿತ್ರ ಮುನಿಯ ಅಡಿಗೆ ಎರಗಿ ನಡೆದನು**=ಎದೆಗುಂದದ ಹರಿಶ್ಚಂದ್ರನು ವಿಶ್ವಾಮಿತ್ರನ ಪಾದಕ್ಕೆ ನಮಿಸಿ, ಸತಿ ಸುತ ಮಂತ್ರಿ ಮತ್ತು ತೆರಕಾರನ ಜತೆಗೂಡಿ ಕಾಶಿಯತ್ತ ನಡೆದನು;

❖

ಪ್ರಸಂಗ–೧೨

ವಿಶ್ವಾಮಿತ್ರ ಮುನಿಯ ಮತ್ತೊಂದು ಒಳಸಂಚು

ಕಳೆ=ಹೋಗು; **ಬಿಟ್ಟು ಹೆದರದೆ ಹೋಹ ನೃಪನ ಕಳೆಯಮ್ ಕಂಡು**=ರಾಜ್ಯದ ಸಂಪತ್ತೆಲ್ಲವನ್ನೂ ತನಗೆ ಧಾರೆಯೆರೆದು, ಕಿಂಚಿತ್ತಾದರೂ ಚಿಂತೆಯಾಗಲಿ ಇಲ್ಲವೇ ಹಿಂಜರಿಕೆಯಾಗಲಿ ಇಲ್ಲದೆ ಹರಿಶ್ಚಂದ್ರನು ಹೋಗುತ್ತಿರುವುದನ್ನು ವಿಶ್ವಾಮಿತ್ರನು ಗಮನಿಸಿ; **ಕೆಟ್ಟೆನ್**=ನಾನು ಕೆಟ್ಟೆನಲ್ಲಾ. ಅಂದರೆ ನನಗೆ ಸೋಲುಂಟಾಯಿತು ಎಂದು ವಿಶ್ವಾಮಿತ್ರ ಮುನಿಯು ಗಾಸಿಗೊಂಡನು; **ಅವನಿಯನ್ ಎಯ್ದೆ ಕೊಂಡಡೆ**=ರಾಜ್ಯ ಸರ್ವಸ್ವವನ್ನು ಸಂಪೂರ್ಣವಾಗಿ ಕಿತ್ತುಕೊಂಡರೆ; **ಅಂತು ಅದನ್ ಒಡಂಬಟ್ಟು**=ಆ ರೀತಿ ರಾಜ್ಯವನ್ನು ಬಿಟ್ಟುಕೊಡುವುದಕ್ಕೆ ಒಪ್ಪಿಕೊಂಡು; **ಶಪಥಕ್ಕೆ ಮೆಯ್ಗೊಟ್ಟನ್**=ಸತ್ಯದ ನಡೆನುಡಿಗೆ ಶರಣಾದನು; **ಅವನಲ್ಲಿ ಹುಸಿ ಹುಟ್ಟದು**=ಹರಿಶ್ಚಂದ್ರ ನಡೆನುಡಿಯಲ್ಲಿ ಸುಳ್ಳನ್ನು ಕಾಣಲಾಗದು;

ಅಕಟ... ಇನ್ನು ನಾನು ನಟ್ಟು ಕೋಟಲೆಗೊಂಡು ಅನಂತಕಾಲಮ್ ತಪಮ್ ಪಟ್ಟ ಪುಣ್ಯವನ್ ಈವೆನ್ ಎಂದೆನ್=ಅಯ್ಯೋ... ಇನ್ನು ನಾನೇನು ಮಾಡಲಿ. ರಾಜ ಹರಿಶ್ಚಂದ್ರನು ಸುಳ್ಳನ್ನಾಡದೆ ಸತ್ಯವಂತನಾಗಿಯೇ ಉಳಿದರೆ, ಆಗ ಅಪಾರವಾದ ಪರಿಶ್ರಮ ಮತ್ತು ತೊಂದರೆಗಳನ್ನು ಎದುರಿಸಿ ಅನಂತಕಾಲ ತಪಸ್ಸನ್ನು ಮಾಡಿ, ನಾನು ಗಳಿಸಿರುವ ಪುಣ್ಯವನ್ನೆಲ್ಲಾ ಆತನಿಗೆ ನೀಡುವೆನೆಂದು

ದೇವೇಂದ್ರನ ಒಡ್ಡೋಲಗದಲ್ಲಿ ಮುನಿಗಳ ಮುಂದೆ ವಸಿಷ್ಠನಿಗೆ ಮಾತು ಕೊಟ್ಟಿದ್ದೇನೆ; **ಅದು ಹೋದಡೆ ಮುನಿಗಳ್ ಎನ್ನನ್ ಒಳಗಿಟ್ಟುಕೊಂಬರೆ ಎಂದು ಓರಂತೆ ಮುನಿನಾಥನು ಮರುಗಿದನ್**=ನಾನು ಗಳಿಸಿರುವ ಪುಣ್ಯ ಹೋದರೆ, ಮುನಿಗಳು ತಮ್ಮ ಸಂಗಡ ನನ್ನನ್ನು ಇಟ್ಟುಕೊಳ್ಳುತ್ತಾರೆಯೇ. ಪುಣ್ಯವನ್ನು ಕಳೆದುಕೊಂಡ ನನ್ನನ್ನು ದೇವಲೋಕದಿಂದ ಹೊರದೂಡುತ್ತಾರೆ;

ಕುಂದದೆ ವಸಿಷ್ಠನೊಳು ಮಲೆತು ಬೆಂಗೊಟ್ಟು ಉಳ್ಳ ಹೆಂದದ ತಪಃಫಲವ ಹೋಗಾಡಿದಾತನ್ ಈ ಬಂದನ್ ಎಂದು ಎನ್ನನ್ ಎಲ್ಲಾ ಮುನೀಶ್ವರರು ನಗದೆ ಇರರ್ ಎಂದು ತನ್ನ ತಾನು ಕೊಂದುಕೊಳ ಬಗೆದು, ಮತ್ತೆ ಎಚ್ಚತ್ತು= "ನಾನು ದೇವೇಂದ್ರನ ಒಡ್ಡೋಲಗಕ್ಕೆ ಹೋದರೆ, ನನ್ನನ್ನು ನೋಡಿ ಈ ವಿಶ್ವಾಮಿತ್ರನು ಸುಮ್ಮನಿರಲಾರದೆ ವಸಿಷ್ಠರನ್ನು ಎದುರುಹಾಕಿಕೊಂಡು ಪಣತೊಟ್ಟು, ಈಗ ಸೋತು, ಗಳಿಸಿದ್ದ ಮಹತ್ತರವಾದ ತಪಸ್ಸಿನ ಫಲವನ್ನು ಕಳೆದುಕೊಂಡವನು ಇಲ್ಲಿಗೆ ಬಂದನು" ಎಂದು ಅಲ್ಲಿರುವ ಎಲ್ಲಾ ಮುನಿಗಳು ಮಾತನಾಡಿಕೊಂಡು ನಗದೆ ಇರುವುದಿಲ್ಲ ಎಂದು ವಿಶ್ವಾಮಿತ್ರನು ತನ್ನ ಮನದಲ್ಲಿಯೇ ಕಲ್ಪಿಸಿಕೊಂಡು ಅಳುಕುತ್ತ, ಇಂತಹ ಅಪಮಾನಕ್ಕೆ ಗುರಿಯಾಗುವುದರ ಬದಲು ಸಾಯುವುದು ಮೇಲೆಂದು ಭಾವಿಸಿ, ತನ್ನನ್ನು ತಾನು ಕೊಂದುಕೊಳ್ಳಲು ಯೋಚಿಸಿ, ಮರುಗಳಿಗೆಯಲ್ಲಿಯೇ ಮಾನಸಿಕ ಕುಗ್ಗುವಿಕೆಯಿಂದ ಚೇತರಿಸಿಕೊಂಡು;

ಚಿತ್ತದಲಿ ನೊಂದಡೆ ಏನಹುದು... ಇದಕೆ ತಕ್ಕುದನ್ ಕಾಣಬೇಕು ಎಂದು ಚಿಂತಿಸಿ ನೋಡಿ, ಆ ನಿಷ್ಕರುಣನು ಮತ್ತೊಂದು ಉಪಾಯಮಮ್ ಕಂಡನ್= ಮನಸ್ಸಿನಲ್ಲಿ ನೋವನ್ನುಂಡರೆ ಏನಾಗುತ್ತದೆ. ಈಗ ನನಗೆ ಉಂಟಾಗಿರುವ ಸೋಲನ್ನು ತಪ್ಪಿಸಿಕೊಳ್ಳಲು ತಕ್ಕ ದಾರಿಯನ್ನು ಹುಡುಕಬೇಕು ಎಂದು ಚಿಂತಿಸಿ ನೋಡಿ, ಆ ಕಡುಕ್ರೂರಿಯಾದ ವಿಶ್ವಾಮಿತ್ರ ಮುನಿಯು ಮತ್ತೊಂದು ಒಳಸಂಚನ್ನು ಹೂಡಲು ನಿಶ್ಚಯಿಸಿದನು; **ಪುರದ ವಿಭವದ**=ಅಯೋಧ್ಯಾ ನಗರದ ಹಿರಿಮೆಯನ್ನು; **ಜನದ ಸಿರಿಯ**=ಪ್ರಜೆಗಳ ಒಲುಮೆಯ ಸಂಪತ್ತನ್ನು; **ವಿಸ್ತರದ ಕೇರಿಗಳ**=ವಿಸ್ತಾರವಾದ ಬೀದಿಗಳ; **ಕೈಗೆಯ್ದ ದುರ್ಗದ ಬಲುಹ**=ನಿರ್ಮಿಸಿರುವ ಬಲವಾದ ಕೋಟೆಯನ್ನು; **ತನ್ನ ಹಿರಿಯ ಅರಮನೆಯ**=ಸೂರ್ಯವಂಶದ ರಾಜರಿಂದ ತಲೆಮಾರಿನಿಂದ ತಲೆಮಾರಿಗೆ ಬಂದಿರುವ ದೊಡ್ಡ ಅರಮನೆಯನ್ನು;

ಕೇಳೀವನದ=ಕ್ರೀಡೆಗಳನ್ನು ಆಡಲೆಂದು ನಿರ್ಮಿಸಿರುವ ಉಪವನ; **ಲತಾಗೃಹದ**= ಹೂಬಳ್ಳಿಗಳನ್ನು ಮತ್ತು ಎಲೆಗಳ ಹಂಬುಗಳನ್ನು ಕಂಬಗಳಿಗೆ ನುಲಿದುಕೊಂಡು ಹಬ್ಬುವಂತೆ ಮಾಡಿ ನಿರ್ಮಿಸಿರುವ ಮಂಟಪಗಳಿಂದ; **ದೀಹದ ಖಗಮೃಗಾವಳಿಗಳ**=ಸಾಕಿದ ಪಕ್ಷಿಪ್ರಾಣಿಗಳ ಹಿಂಡಿನಿಂದ; **ವರ ಚಿತ್ರಶಾಲೆಗಳ**=

ಕಲಾತ್ಮಕ ಚಿತ್ರಗಳಿಂದ ಜೋಡಿಸಿಟ್ಟಿರುವ ಕೊಟಡಿಗಳ; **ಧನ ಧಾನ್ಯ ಸಂಚಯದ**=ಹಣ ಒಡವೆ ವಸ್ತು ದವಸಗಳ ಸಂಗ್ರಹದ; **ಪರಮ ವನಿತೆಯರ**=ಉತ್ತಮರಾದ ಹೆಂಗಸರು; **ನಾನಾ ರತ್ನಕೋಶದ**=ಬಹು ಬಗೆಯ ಮುತ್ತು ರತ್ನ ವಜ್ರದ ಹರಳುಗಳಿಂದ ತುಂಬಿರುವ ಬೊಕ್ಕಸದ;

ಉಬ್ಬರದ ಸೊಗಸನ್ ಕಂಡು ಮನ ಮರುಗದೇ=ಅಯೋಧ್ಯಾ ನಗರದಲ್ಲಿರುವ ಅತಿಶಯವಾದ ಸಿರಿಸಂಪದಗಳ ಸೊಗಸನ್ನು ಮತ್ತು ಒಲುಮೆಯ ಪ್ರಜೆಗಳನ್ನು ಕಂಡು ಹರಿಶ್ಚಂದ್ರನ ಮನಸ್ಸು ಸೋಲದಿರುವುದೇ; **ಪುರಕ್ಕೆ ಒಯ್ದು ನೋಡವೆನ್ ಎಂದನು**=ಅಯೋಧ್ಯಾ ನಗರಕ್ಕೆ ಹರಿಶ್ಚಂದ್ರನನ್ನು ಕರೆದುಕೊಂಡು ಹೋಗಿ, ಮತ್ತೊಮ್ಮೆ ಹರಿಶ್ಚಂದ್ರನ ಸತ್ಯದ ನಿಲುವನ್ನು ಒರೆಹಚ್ಚಿ ನೋಡುತ್ತೇನೆ ಎಂದು ವಿಶ್ವಾಮಿತ್ರ ಮುನಿಯು ತನ್ನಲ್ಲಿಯೇ ಹೇಳಿಕೊಂಡನು; **ಧರಣೀಶ, ಒಂದು ಮಾತುಂಟು. ಬಂದು ಹೋಗು ಎಂದು ಕರೆದು**=ರಾಜನೇ, ಒಂದು ಮಾತುಂಟು ಬಂದು ಹೋಗು ಎಂದು ತನ್ನ ಬಳಿಗೆ ಕರೆದು;

ನಿನ್ನ ನಂಬಿ ನಾನು ರಾಜ್ಯಮ್ ಗೆಯ್ವ ಭರದೊಳ್ ಅರಿಯದೆ ಹೋದಡೆ=ಕಾಡಿನಲ್ಲಿ ನೀನು ನನಗೆ ರಾಜ್ಯ ಸರ್ವಸ್ವವನ್ನು ಧಾರೆಯೆರೆದಿರುವೆ. ಇದನ್ನೇ ನಂಬಿಕೊಂಡು ನಾನು ರಾಜ್ಯವನ್ನಾಳಬೇಕೆಂಬ ಆತುರದಲ್ಲಿ ಮುಂದೆ ಏನಾಗುತ್ತದೆ ಎಂಬುದನ್ನು ತಿಳಿಯದೆ, ನೀನಿಲ್ಲದೆ ನಾನೊಬ್ಬನೇ ಅಯೋಧ್ಯಾ ನಗರಕ್ಕೆ ಹೋದರೆ; **ಎಲೆ ಮರುಳೆ, ಪರಿಜನಮ್ ಗದರಿಕೊಂಡು ಅಬ್ಬರಿಸಿ ನಿನಗೆ ಎಲ್ಲಿಯ ಅರಸುತನವೆಂದು ಮೀರಿ ಪುರದ ಬಾಗಿಲ ಬಲಿದು ಕಲುಗುಂಡ ಕರೆಯದೆ ಇರರ್**=ಅಯೋಧ್ಯೆಯಲ್ಲಿರುವ ನಿನ್ನ ಪ್ರಜೆಗಳು ನನ್ನನ್ನು ಗದರಿಸುತ್ತ, ಅಬ್ಬರಿಸುತ್ತ **'ಎಲೆ ತಿಳಿಗೇಡಿಯೇ, ನಿನಗೆ ಎಲ್ಲಿಯ ಅರಸುತನ'** ಎಂದು ನನ್ನನ್ನು ಲೆಕ್ಕಿಸದೆ, ಪುರದ ದಿಡ್ಡಿ ಬಾಗಿಲನ್ನು ಮುಚ್ಚಿ, ನನ್ನ ಮೇಲೆ ಕಲ್ಲಿನ ಸುರಿಮಳೆಯನ್ನು ಕರೆಯದೆ ಇರಲಾರರು; **ಎನ್ನನ್ ಒಯ್ದಿರಿಸಿ ಸರ್ವವನ್ ಒಪ್ಪುಗೊಟ್ಟು ಹೋಗು ಎಂದಡೆ**=ಆದ್ದರಿಂದ ನನ್ನನ್ನು ಅಯೋಧ್ಯಾ ನಗರಕ್ಕೆ ಕರೆದುಕೊಂಡು ಹೋಗಿ, ಪ್ರಜೆಗಳ ಮುಂದೆಯೇ ರಾಜಸರ್ವಸ್ವವನ್ನು ನನಗೆ ನೀಡಿ, ಅನಂತರ ನೀನು ಹೋಗು ಎಂದು ವಿಶ್ವಾಮಿತ್ರ ಮುನಿಯು ಹೇಳಿದಾಗ;

ಅವನಿಪನ್ ಒಡಂಬಟ್ಟನು=ಹರಿಶ್ಚಂದ್ರನು ಅಂತೆಯೇ ಆಗಲಿ ಎಂದು ಒಪ್ಪಿಕೊಂಡನು; **ನಡೆ ರಥವನ್ ಏರಿಕೊಳ್**=ನಡೆ ತೇರನ್ನೇರು; **ಒಲ್ಲೆನ್**=ಬೇಕಾಗಿಲ್ಲ; **ಏಕೊಲ್ಲೆ**=ಏತಕ್ಕೆ ಬೇಡ; **ಪರರ ಒಡವೆ ಎನಗೆ ಆಗದು**=ತೇರು ಬೇರೆಯವರದು. ನಾನು ಅದರಲ್ಲಿ ಹೋಗಬಾರದು; **ಏಕೆ ಆಗದು?... ಆನ್ ಇತ್ತೆನ್**=ಏಕೆ ಹೋಗಬಾರದು. ನಾನೇ ತೇರನ್ನು ಕೊಡುತ್ತಿರುವೆನು; **ಇತ್ತಡೆ**

ಕೊಳಲುಬಾರದು=ನೀನು ಕೊಟ್ಟರೂ ನಾನು ತೆಗೆದುಕೊಳ್ಳಬಾರದು; **ಏನ್ ಕಾರಣಮ್ ಬಾರದು**=ಯಾವ ಕಾರಣದಿಂದ ನೀನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ; ಪ್ರತಿಗ್ರಹ=ದಾನವನ್ನು ಪಡೆಯುವುದು; **ಎಮಗಮ್ ಪ್ರತಿಗ್ರಹ ಸಲ್ಲದು**=ನಾನು ಮತ್ತೊಬ್ಬರಿಂದ ದಾನವಾಗಿ ಏನನ್ನೂ ಪಡೆಯುವಂತಿಲ್ಲ;

ಕಡೆಗೆ ನಿನ್ನೊಡವೆ ಅಲ್ಲವೆ=ಎಷ್ಟೇ ಆದರೂ ಈ ತೇರು ನಿನ್ನದೇ ಅಲ್ಲವೇ; **ಅಲ್ಲ**=ನನ್ನದಲ್ಲ; **ಏಕಲ್ಲ**=ಏಕೆ ನಿನ್ನದಲ್ಲ; **ಕೊಡದ ಮುನ್ನ ಎನ್ನ ಒಡವೆ. ಕೊಟ್ಟ ಬಳಿಕ ಎನಗೆ ಎಲ್ಲಿಯ ಒಡವೆ ಎಂದು ಅರರೆ ದಾನಿಗಳ ಬಲ್ಲಹನು ಮುನಿಯೊಡನೆ ಸೂಳ್ ನುಡಿಗೊಟ್ಟನು**="ನಿನಗೆ ಧಾರೆಯೆರೆಯುವುದಕ್ಕೆ ಮೊದಲು ಅದು ನನ್ನ ಒಡವೆಯಾಗಿತ್ತು. ಕೊಟ್ಟ ಬಳಿಕ ಅದು ನನ್ನ ಒಡವೆ ಹೇಗಾಗುತ್ತದೆ" ಎಂದು ಅಬ್ಬಬ್ಬಾ ದಾನಿಗಳಲ್ಲೇ ಉತ್ತಮನಾದ ಹರಿಶ್ಚಂದ್ರನು ವಿಶ್ವಾಮಿತ್ರ ಮುನಿಗೆ ಪ್ರತ್ಯುತ್ತರವನ್ನು ನೀಡಿದನು;

ಬೇಡಿಕೊಂಬೆನ್ ಭೂಪ=ಬೇಡಿಕೊಳ್ಳುತ್ತಿದ್ದೇನೆ ರಾಜನೇ; **ನನ್ನೊಡನೆ ತೇರನ್ನೇರು; ಬೇಡ ಬೇಡ...ನಾ ಮಾಡಿದುದನ್ ಎನ್ನ ಕಣ್ಣಾರೆ ನೋಡುವೆನು**= ಬೇಡ ಬೇಡ ನಾನು ತೇರನ್ನೇರುವುದಿಲ್ಲ, ರಾಜ್ಯಸರ್ವಸ್ವವನ್ನು ನಿನಗೆ ಧಾರೆ ಎರೆದಿರುವ ನಾನು, ನನ್ನ ಕಣ್ಣಾರ ನಿನ್ನ ರಾಜತನವನ್ನು ನೋಡುತ್ತೇನೆ; **ನೀನ್ ಆಡಂಬರದೊಳು ರಥವೇರಿ ಚತುರಂಗಬಲವೆರಸಿ ನಡೆ ತಂದೆ**=ನೀನು ಆಡಂಬರದಿಂದ ತೇರನ್ನೇರಿ ಚತುರಂಗ ಬಲದಿಂದ ಕೂಡಿ ಅಯೋಧ್ಯಾ ನಗರದತ್ತ ನಡೆ ತಂದೆ; **ಎನ್ನ ಕಾಡಬೇಡ**=ನನ್ನನ್ನು ಪೀಡಿಸಬೇಡ; **ಅವಧಿ ಕಿರಿದು ಎಡೆ ದೂರ**=ನಿನಗೆ ಕೊಡಬೇಕಾಗಿರುವ ಸಂಪತ್ತನ್ನು ನಾನು ಹಿಂತಿರುಗಿಸಲು ಇರುವ ಕಾಲ ಬಹಳ ಕಡಿಮೆ. ಆದರೆ ಆ ಸಂಪತ್ತನ್ನು ಗಳಿಸಲು ನಾನು ಹೋಗಬೇಕಾಗಿರುವ ಕಾಶಿ ಪಟ್ಟಣ ಇಲ್ಲಿಂದ ಬಹಳ ದೂರವಿದೆ; **ಹೊತ್ತ ಹೋಗಾಡದಿರ್ದಡೆ**=ಕಾಲವನ್ನು ಸುಮ್ಮನೆ ಹಾಳುಮಾಡದೆ ಕಾಶಿಗೆ ನಾನು ಬೇಗ ಹೋಗಲು ಅವಕಾಶ ನೀಡಿದರೆ;

ತನ್ನನ್ ಒಯ್ದು ಮೇರುವಿನ ತುದಿ ಕೋಡನ್ ಏರಿಸಿದಾತ ನೀನ್ ಎಂದು ಮುನಿಪತಿಗೆ ಭೂಭುಜನ್ ಕೈಮುಗಿದನು=ನನ್ನನ್ನು ಕರೆದುಕೊಂಡು ಮೇರು ಪರ್ವತದ ತುತ್ತತುದಿಗೆ ಏರಿಸಿದ ಪುಣ್ಯ ನಿನ್ನದಾಗುತ್ತದೆ ಎಂದು ವಿಶ್ವಾಮಿತ್ರ ಮುನಿಗೆ ಹರಿಶ್ಚಂದ್ರನು ಕಯ್ ಮುಗಿದನು. ಇದೊಂದು ಅಣಕದ ತಿರುಳಿನಲ್ಲಿ ಬಳಕೆಯಾಗಿರುವ ಮಾತು. ಅಂದರೆ ಮತ್ತೆ ಮತ್ತೆ ನೀನು ಹೊಸ ಹೊಸ ಕಾಟವನ್ನು ಕೊಡದೆ, ನನ್ನನ್ನು ಬಿಟ್ಟರೆ ಸಾಕು ಅದೇ ನನ್ನ ಪಾಲಿಗೆ ನೀನು ಮಾಡುವ ದೊಡ್ಡ ಉಪಕಾರವಾಗುತ್ತದೆ; **ಅಕ್ಕರಿಂದಲ್ಲ ನೀನ್ ಓಡಿಹೋದಹೆ ಎಂಬ ಕಕ್ಕುಲಿತೆಗೆ ಏರು**

ಎಂದೆನೈಸೆ=ನಿನ್ನ ಮೇಲಣ ಪ್ರೀತಿಯಿಂದ ತೇರನ್ನು ಏರಿ ಅಯೋಧ್ಯಾ ನಗರಕ್ಕೆ ಬಾ ಎಂದು ಕರೆಯಲಿಲ್ಲ. ತೇರನ್ನೇರದಿದ್ದರೆ ನೀನು ಎಲ್ಲಿ ತಪ್ಪಿಸಿಕೊಂಡು ಓಡಿಹೋಗುವೆಯೋ ಎಂಬ ಚಿಂತೆಯಿಂದ ನನ್ನೊಡನೆ ತೇರನ್ನೇರಿ ಬಾ ಎಂದೆನು;

ಬಲುಗಾಹನ್ ಇಕ್ಕಯ್ಯ=ನಾನು ಓಡಿಹೋಗದಂತೆ ತಡೆಯಲು ದೊಡ್ಡ ಪಡೆಯನ್ನು ನೇಮಿಸು; **ಕಾಹಿನವರು ನಿನ್ನವರ್**=ಸೇನಾಪಡೆಯವರು ನಿನ್ನವರು; **ಅವರು ಬೇಡಯ್ಯ. ನಿನ್ನ ಮಕ್ಕಳಹ ಮುನಿಗಳನ್ ಬೆಸಸು ಎನಲು**=ನನ್ನ ಸೇನಾಪಡೆಯವರು ಬೇಡಯ್ಯ.ನಿನ್ನ ಮಕ್ಕಳಂತಿರುವ ಮುನಿಗಳನ್ನು 'ನನ್ನ ಬೆಂಗಾವಲಿಗೆ ನೇಮಿಸು' ಎಂದು ಹರಿಶ್ಚಂದ್ರನು ನುಡಿಯಲು; **ಬೆಸಸಿ**= ಹರಿಶ್ಚಂದ್ರನಿಗೆ ಮುನಿಗಳನ್ನೇ ಕಾವಲು ಪಡೆಯಾಗಿ ನೇಮಿಸಿ; **ಮುನಿ ರಕ್ಕಸನ್ ರಥವೇರಿ**=ಕ್ರೂರಿಯಾದ ವಿಶ್ವಾಮಿತ್ರ ಮುನಿಯು ತೇರನ್ನೇರಿ; **ಚತುರಂಗಬಲ ಬೆರಸಿ**=ತೇರು–ಆನೆ–ಕುದುರೆ–ಕಾಳ್ದಳದ ನಾಲ್ಕು ಬಗೆಯ ಸೇನಾಪಡೆಯ ಜತೆಗೂಡಿ; **ಸರ್ವಸಂಭ್ರಮದ ಸಡಗರಮ್ ಮಿಕ್ಕು ಮಿಗಲ್ ಅಯೋಧ್ಯಾಪುರಕೆ ನಡೆದನ್**=ತನ್ನ ಇಚ್ಛೆಯಂತೆಯೇ ಎಲ್ಲವೂ ನಡೆಯುತ್ತಿದೆಯೆಂಬ ಉತ್ಸಾಹ ತುಂಬಿದ ಸಡಗರ ಇಮ್ಮಡಿಗೊಂಡು ವಿಶ್ವಾಮಿತ್ರನು ಅಯೋಧ್ಯಾಪುರಕ್ಕೆ ಹೊರಟನು;

❖

ಪ್ರಸಂಗ–೧೩

ರಾಜ್ಯ ಸಮರ್ಪಣ

ಧರೆ ಬಿರಿಯಲ್ ಅಳ್ಳಿರಿವ ಅನಂತ ನಿಸ್ಸಾಳದ ಅಬ್ಬರವನ್ ಆಲಿಸಿ= ಭೂಮಿಯೇ ಬಿರುಕು ಬಿಡುವಂತೆ ದೊಡ್ಡ ದನಿಯಲ್ಲಿ ಕೇಳಿಬರುತ್ತಿರುವ ನಗಾರಿ ಡಮರುಗ ತಮಟೆ ಮುಂತಾದ ಚರ್ಮವಾದ್ಯಗಳ ಅಬ್ಬರವನ್ನು ಕೇಳಿ; ಕಾಡಿನ ಪ್ರಾಣಿ ಪಕ್ಷಿಗಳ ಉಪಟಳದಿಂದ ಪ್ರಜೆಗಳನ್ನು ಕಾಪಾಡಲೆಂದು ಹೋಗಿದ್ದ ರಾಜ ಹರಿಶ್ಚಂದ್ರನು ಹಿಂತಿರುಗುತ್ತಿರುವುದನ್ನು ಅರಿತು ಅಯೋಧ್ಯಾ ನಗರದಲ್ಲಿದ್ದ ಪ್ರಜೆಗಳು ರಾಜನನ್ನು ಸ್ವಾಗತಿಸಲು ಸಿದ್ಧತೆಯನ್ನು ಮಾಡತೊಡಗಿದರು; **ಪುರದ ಕೇರಿಗಳನ್ ಒಪ್ಪೆ ಸಿಂಗರಿಸಿ**=ಅಯೋಧ್ಯಾ ನಗರದ ಬೀದಿಬೀದಿಗಳನ್ನು ಗುಡಿಸಿ ಶುಚಿಗೊಳಿಸಿ ಅಲಂಕಾರ ಮಾಡಿ; **ಮನೆಮನೆಗಳೊಳು ಗುಡಿತೋರಣಂಗಳ ಸರ ತೆಗೆದು**=ಮನೆ ಮನೆಗಳ ಮೇಲೆ ಬಾವುಟಗಳನ್ನು ಮತ್ತು ಬಾಗಿಲುಗಳಲ್ಲಿ ತಳಿರು ತೋರಣಗಳ ಮಾಲೆಗಳನ್ನು ಕಟ್ಟಿ; **ಸಂಭ್ರಮದಲಿ**=ಅತ್ಯಂತ ಆನಂದ, ಸಡಗರ ಮತ್ತು ಉತ್ಸಾಹದಿಂದ;

ಅರರೆ... ಪರಿಜನಮ್ ಆ ಹರಿಶ್ಚಂದ್ರ ಭೂವರನನ್ ಮತ್ತೆ ಇದಿರ್ಗೊಳಲು ಶಶಿಯನ್ ಇದಿರ್ಗೊಂಡು ಹೆಚ್ಚುವ ಅಂಭೋಧಿಯಂತೆ ಕೋಟಾಕೋಟಿ ಕರಿ ತುರಗ ರಥ ಪತ್ತಿ ಬೆರಸಿ ನಡೆದರು=ಅಬ್ಬಬ್ಬಾ... ಪ್ರಜೆಗಳು ಆ ಹರಿಶ್ಚಂದ್ರ ರಾಜನನ್ನು ಮತ್ತೆ ಸ್ವಾಗತಿಸಲು ಹುಣ್ಣಿಮೆಯ ಚಂದ್ರನನ್ನು ಕಂಡು ಉಕ್ಕೆದ್ದು ಕುಣಿಯುವ

ಕಡಲಿನಂತೆ ಅಪಾರವಾದ ಸಡಗರದಿಂದ ಆನೆ, ಕುದುರೆ, ತೇರು, ಕಾಲ್ದಳದ ದೊಡ್ಡ ಸೇನಾಪಡೆಯೊಡನೆ ನಡೆದರು; **ಮುತ್ತಿ ಮುಸುಕಿದ ಹಲವು ಕೈದುಗಳ ಝಲ್ಲರಿಗಳ ಒತ್ತಿನೊಳು**=ಸುತ್ತಲೂ ಕವಿದುಕೊಂಡಿರುವ ಹಲವು ಬಗೆಯ ಆಯುಧಗಳ, ದೊಡ್ಡ ದೊಡ್ಡ ಚರ್ಮವಾದ್ಯಗಳ ಸಂದಣಿಯಲ್ಲಿ; **ತಳಿತ ಬೆಳುಗೊಡೆಗಳ ಇಡುಕುರ ನೆಳಲ ಕುತ್ತುರೊಳು**=ಹರಡಿಕೊಂಡಿರುವ ಬೆಳುಗೊಡೆಗಳ ಗುಂಪಿನ ನೆಳಲ ರಾಶಿಯಲ್ಲಿ; **ಡಾಳಿಸುವ ಚಮರಿ ಸೀಗುರಿಗಳ ಒಗ್ಗಿನ ಕುರುಹು ಪಿಡಿದು ನಡೆದು**= ಅತ್ತಿತ್ತ ಜೋರಾಗಿ ಬೀಸುತ್ತಿರುವ ಚಾಮರಗಳ ಗುಂಪಿನ ರಾಜ ಲಾಂಛನಗಳನ್ನು ಗುರುತಿಸಿ ನಡೆದು;

ಎತ್ತಿದ ಮೊಗಮ್ ನಿಲುಕಿ ನೋಳ್ಪ ಕಂಗಳು ಮುಗಿದು ಹೊತ್ತ ಕೈ=ರಾಜ ಹರಿಶ್ಚಂದ್ರನನ್ನು ನೋಡುವ ಆಸೆಯಿಂದ ಎತ್ತಿದ ಮೊಗ, ನಿಟ್ಟಿಸಿ ನೋಡುತ್ತಿರುವ ಕಣ್ಣುಗಳು, ಕರಗಳನ್ನು ಜೋಡಿಸಿಕೊಂಡು ಕಯ್ ಮುಗಿಯುತ್ತ ಬಂದ ಪ್ರಜೆಗಳು; **ಜೀಯ ಅವಧಾರು ಎಂದೆಂಬ ನುಡಿವೆತ್ತು ಹತ್ತಿರೆ ಬಂದು, ಮುನಿಯ ಮೊಗವಮ್ ಕಂಡ ಹೊತ್ತನ್ ಇನ್ನು ಏನ್ ಪೊಗಳ್ವೆನು**=ಒಡೆಯನೇ ನಮ್ಮ ನಮನಗಳನ್ನು ಸ್ವೀಕರಿಸು ಎಂದು ಒಲವು ನಲಿವಿನಿಂದ ಹೇಳುತ್ತ ಹತ್ತಿರ ಬಂದ ಪ್ರಜೆಗಳು ತೇರಿನಲ್ಲಿದ್ದ ವಿಶ್ವಾಮಿತ್ರ ಮುನಿಯ ಮೊಗವನ್ನು ಕಂಡ ಗಳಿಗೆಯಲ್ಲಿ ಪ್ರಜೆಗಳು ಗಾಸಿಗೊಂಡು ಸಂಕಟದಿಂದ ಪರಿತಪಿಸಿದ ಬಗೆಯನ್ನು ಇನ್ನು ಯಾವ ಬಗೆಯಲ್ಲಿ ಚಿತ್ರಿಸಲಿ ಎಂದು ಕವಿಯು ಉದ್ಗಾರದ ನುಡಿಯನ್ನಾಡಿದ್ದಾನೆ; **ನಸು ನನೆಯನ್ ಅಪ್ಪಿದ ಅಳಿಕುಳದಂತೆ**=ಇನ್ನು ಅರಳದ ಮೊಗ್ಗಿನ ಮಕರಂದವನ್ನು ಹೀರಲಾರದೆ ಕಂಗಾಲಾದ ದುಂಬಿಗಳ ಸಮೂಹದಂತೆ;

ಕಡುಹಸಿದು ಕಸುಗಾಯನ್ ಅಗಿದ ಗಿಳಿಗಳ ಬಳಗದಂತೆ=ಬಹಳ ಹಸಿದಿರುವಾಗ ಹೀಚುಕಾಯನ್ನು ಕಚ್ಚಿ, ಸಂಕಟಕ್ಕೆ ಒಳಗಾದ ಗಿಳಿಗಳ ಗುಂಪಿನಂತೆ; **ನಿಟ್ಟಿಸದೆ ವಿಷಮನ್ ಸವಿದ ಶಿಶುವಿಸರದಂತೆ**=ಗಮನಿಸಿದೆ ವಿಷವನ್ನು ತಿಂದು ಸಾವು ಬದುಕಿನ ನಡುವೆ ಒದ್ದಾಡುವ ಮಕ್ಕಳಂತೆ; **ಕೊರಡಮ್ ಕರ್ದುಕಿ ಚಂಚು ನೊಂದು ಕುಸಿದ ಪಿಕನಿಕರದಂತೆ**=ಒಣಗಿದ ಮರದ ತುಂಡನ್ನು ಕೊಕ್ಕಿನಿಂದ ಕುಕ್ಕಿ ಗಾಯಗೊಂಡು ಗಾಸಿಗೊಂಡ ಕೋಗಿಲೆಗಳ ಗುಂಪಿನಂತೆ; **ಪುರಜನಮ್ ಆಸತ್ತು ಬೇಸತ್ತು ಬಸವಳಿಯುತ**=ಪುರಜನರು ಜುಗುಪ್ಸೆಗೊಂಡು, ಬೇಸರಿಸಿಕೊಂಡು, ಮಯ್ ಮನದ ಶಕ್ತಿಯು ಉಡುಗಿದವರಾಗಿ; **ಹೊಲಗೆಟ್ಟ ಕರು ತಾಯನ್ ಅರಸುವಂತೆ**=ದಾರಿ ತಪ್ಪಿದ ಕರು ತಾಯಿಯನ್ನು ಹುಡುಕುವಂತೆ;

ಅಂದು ಮಾಮಸಕದಿಮ್ ಮಂದಿಗಳೊಳ್ ಭೂಪನನ್ ಅರಸಿದರು=ಆಗ ಅತಿಯಾದ ಆಕ್ರೋಶದಿಂದ ಕೂಡಿದವರಾಗಿ ಆ ಗುಂಪಿನಲ್ಲಿ ರಾಜ

ಹರಿಶ್ಚಂದ್ರನನ್ನು ಹುಡುಕತೊಡಗಿದರು; **ಹಗಲ್ ಒಗೆದ ಚಂದ್ರಕಳೆಯಂತೆ**=ಹಗಲಿನಲ್ಲಿ ಕಾಣಿಸಿಕೊಳ್ಳುವ ಕಾಂತಿಯಿಲ್ಲದ ಚಂದ್ರನ ಮೊಗದಂತೆ; **ಬಿರುವೈಶಾಖ ಅಗಿದ ಬನದಂತೆ**=ಬೇಸಗೆಯ ಸುಡು ಸುಡು ಬಿಸಿಲಿನ ಬೇಗೆಯಿಂದ ಒಣಗಿ ಬಾಡಿರುವ ಕಾಡಿನಂತೆ; **ಬಿಸಿಳೊಲು ಬಿಸುಟ ತಳಿರಂತೆ**=ಬಿಸಿಲಿನಲ್ಲಿ ಕಿತ್ತು ಬಿಸಾಕಿರುವುದರಿಂದ ಬಾಡಿ ಮುದುರಿಕೊಂಡಿರುವ ಚಿಗುರಿನಂತೆ; **ಮೊಗ ಕಂದಿ ಕಳೆಗುಂದಿ**=ಮೊಗ ಕಪ್ಪಾಗಿ ಕಳೆಗುಂದಿ; **ಅರುವೆ ಕಪ್ಪಡವುಟ್ಟು**=ಚಿಂದಿಚಿಂದಿಯಾಗಿರುವ ನಾರುಮಡಿಯನ್ನುಟ್ಟು; **ರಾಗವಳಿದು**=ಆನಂದ ಇಲ್ಲವಾಗಿ; **ಒಪ್ಪಗೆಟ್ಟು**=ಮಯ್ ಮನದ ಚೆಲುವನ್ನು ಕಳೆದುಕೊಂಡು; **ಅವನಿಪನ್ ಮಗನ್ ಅರಸಿ ಮಂತ್ರಿಸಹಿತ ಕೌಶಿಕನ ಹಿಂದೆ ದೇಸಿಗನಂತೆ ಕಾಹಿನೊಳು ಬರೆ ಕಂಡು**=ರಾಜ ಹರಿಶ್ಚಂದ್ರನು ತನ್ನ ಮಗ ಲೋಹಿತಾಶ್ವ, ಅರಸಿ ಚಂದ್ರಮತಿ ಮತ್ತು ಮಂತ್ರಿ ಸತ್ಯಕೀರ್ತಿಯೊಡನೆ ವಿಶ್ವಾಮಿತ್ರನ ತೇರಿನ ಹಿಂದೆ ಗತಿಗೆಟ್ಟವನಂತೆ ಸೇನಾಪಡೆಯ ಕಾವಲಿನಲ್ಲಿ ಬರುತ್ತಿರುವುದನ್ನು ನೋಡಿ; **ಬಗೆ ಬೆದರಿ**=ಪ್ರಜೆಗಳ ಎದೆ ನಡುಗಿ;

ಹೊದ್ದಿ ಹೊಡೆವಟ್ಟು=ಹರಿಶ್ಚಂದ್ರನ ಹತ್ತಿರಕ್ಕೆ ಹೋಗಿ, ಅಡ್ಡಬಿದ್ದು ನಮಿಸಿ; **ಕಾಣಿಕೆಯ ಚಿತ್ತೈಸು ಭೂಭುಜ**=ಉಡುಗೊರೆಯನ್ನು ಸ್ವೀಕರಿಸು ಮಹಾರಾಜ; **ಎನಗೆ ಅರಸುತನ ಮಾದು ಹೋಗಿ ವಿಶ್ವಾಮಿತ್ರಮುನಿಗೆ ಆದುದು. ಆತನನ್ ಕಂಡು ಕಾಣಿಕೆಯನಿತ್ತು ಅನುದಿನಮ್ ಬೆಸಕೈವುದು**=ಈಗ ನನಗೆ ಅರಸುತನ ಇಲ್ಲವಾಗಿ, ವಿಶ್ವಾಮಿತ್ರ ಮುನಿಯು ರಾಜನಾಗಿದ್ದಾನೆ. ತೇರಿನಲ್ಲಿರುವ ಅವನನ್ನು ಕಂಡು ನಮಿಸಿ, ರಾಜ ವಿಶ್ವಾಮಿತ್ರನಿಗೆ ಉಡುಗೊರೆಯನ್ನು ನೀಡಿ, ಪ್ರತಿನಿತ್ಯವೂ ಆತನ ಸೇವೆಯನ್ನು ಮಾಡುವುದು; **ಒಲ್ಲೆವು ಎನಲು**=ಪ್ರಜೆಗಳು ಆಗುವುದಿಲ್ಲ. ನಾವು ಅವನನ್ನು ರಾಜನೆಂದು ಒಪ್ಪಿಕೊಳ್ಳುವುದಿಲ್ಲ ಎನ್ನಲು;

ಬೋಧಿಸಿ=ರಾಜ್ಯವು ತನ್ನಿಂದ ವಿಶ್ವಾಮಿತ್ರ ಮುನಿಗೆ ವರ್ಗಾವಣೆಗೊಂಡ ಸನ್ನಿವೇಶವನ್ನು ಪ್ರಜೆಗಳಿಗೆ ಮನಗಾಣುವಂತೆ ತಿಳಿಯ ಹೇಳಿ; **ಬಲಾತ್ಕಾರದಿಂದ ಜನವ ಕಾಣಿಸಿ ಕಾಣಿಕೆಯ ಕೊಡಿಸಿ**=ಹರಿಶ್ಚಂದ್ರನು ಪ್ರಜೆಗಳನ್ನು ಬಲತ್ಕಾರದಿಂದ ಈ ಬದಲಾವಣೆಗೆ ಒಪ್ಪಿಸಿ, ವಿಶ್ವಾಮಿತ್ರನ ಮುಂದಕ್ಕೆ ತಾನೇ ಕರೆದುಕೊಂಡು ಬಂದು, ಉಡುಗೊರೆಯನ್ನು ಕೊಡಿಸಿ; **ಹಿಂದುಗೊಂಡು ಇನಕುಲಲಲಾಮನ್ ಎಯ್ತಂದು ಪುರಮಮ್ ಹೊಕ್ಕು**=ವಿಶ್ವಾಮಿತ್ರನ ತೇರನ್ನು ಹಿಂಬಾಲಿಸಿಕೊಂಡು ಬಂದ ಹರಿಶ್ಚಂದ್ರನು ಅಯೋಧ್ಯಾಪುರವನ್ನು ಪ್ರವೇಶಿಸಿ;

ಮನದೊಳ್ ಉತ್ಸವದ ಹೆಚ್ಚುಗೆ ಅಳಿದು ನಿಂದ ಮಂದಿಯ ನೋಡುತಮ್ ನಡೆದನು=ಕೇರಿ ಕೇರಿಗಳ ಇಕ್ಕೆಲದಲ್ಲಿಯೂ ಮನದಲ್ಲಿ ಸ್ವಾಗತದ ಸಡಗರ ಅಳಿದು, ಸಂಕಟದಿಂದ ನಿಂತಿದ್ದ ಪ್ರಜೆಗಳ ಮೊಗವನ್ನು ನೋಡುತ್ತ, ಅರಮನೆಯತ್ತ

ಹರಿಶ್ಚಂದ್ರನು ನಡೆದನು; **ನೂಕಿ ನಡೆದು ಅರಮನೆಯ ಹೊಕ್ಕು ಸಿಂಹಾಸನಕ್ಕೆ ಆ ಕೌಶಿಕನ್ ಬಂದು, ಭೂಭುಜನ ಕೈಯ ಪಿಡಿದು**=ತೇರಿನಿಂದ ಇಳಿದ ವಿಶ್ವಾಮಿತ್ರನು ವೇಗವಾಗಿ ನಡೆದು ಅರಮನೆಯನ್ನು ಹೊಕ್ಕು, ಸಿಂಹಾಸನದ ಬಳಿಗೆ ಬಂದು, ಹರಿಶ್ಚಂದ್ರನ ಕಯ್ಯನ್ನು ಹಿಡಿದುಕೊಂಡು;

ಈ ಕಟಕ... ಈ ಕೋಟೆ... ಈ ಕರಿಗಳ್... ಈ ತುರಗ... ಈ ರಥಗಳ್... ಈ ಪರಿಜನ... ಈ ಕೋಶ... ಈ ಕಾಂತೆ... ಈ ಕುವರನ್... ಈ ಮಂತ್ರಿ... ಈ ಕಾಮಿನೀ... ಜನಮ್ ಮರುಗದಂತೆ ಅರಸಾಗಬೇಕಾದಡೆ... ಎನ್ನ ಮಕ್ಕಳ ಮದುವೆಯಾಗು. ಕಾಡದೆ ಬಿಟ್ಟು ಹೋಹೆನ್=ಈ ರಾಜಧಾನಿ... ಈ ಕೋಟೆ... ಈ ಆನೆಯ ದಳ... ಈ ಕುದುರೆಯ ದಳ... ಈ ತೇರುಗಳು... ಈ ನಿನ್ನ ರಾಜ ಪರಿವಾರ ಮತ್ತು ಪ್ರಜೆಗಳು... ಈ ಬೊಕ್ಕಸ... ಈ ನಿನ್ನ ಹೆಂಡತಿ ಚಂದ್ರಮತಿ... ಈ ನಿನ್ನ ಮಗ ಲೋಹಿತಾಶ್ವ... ಈ ನಿನ್ನ ಮಂತ್ರಿ ಸತ್ಯಕೀರ್ತಿ... ರಾಣಿವಾಸದಲ್ಲಿರುವ ಹೆಂಗಸರು... ರಾಜ್ಯವನ್ನು ಕಳೆದು ಕೊಳ್ಳುವ ಸಂಕಟಕ್ಕೆ ಒಳಗಾಗದಂತೆ ನೀನ ಅರಸನಾಗಿಯೇ ಉಳಿಯಬೇಕೆಂದರೆ, ನನ್ನ ಮಕ್ಕಳನ್ನು ಮದುವೆಯಾಗು. ನಿನಗೆ ಯಾವ ತೊಂದರೆಯನ್ನು ಕೊಡದೆ, ನಿನ್ನ ರಾಜ್ಯಸಂಪತ್ತೆಲ್ಲವನ್ನೂ ನಿನಗೆ ಒಪ್ಪಿಸಿ, ನನ್ನ ಆಶ್ರಮಕ್ಕೆ ಹೋಗುತ್ತೇನೆ;

ಹೆತ್ತ ತಾಯನ್ ಮಾರಿ ತೊತ್ತ ಕೊಂಬರೆ=ಜನ್ಮಕೊಟ್ಟ ತಾಯಿಯನ್ನು ಮಾರಿ, ದಾಸಿಯನ್ನು ಕೊಳ್ಳುತ್ತಾರೆಯೇ; **ಮೂಗನ್ ಇತ್ತು ಕನ್ನಡಿಯ ನೋಡುವರೆ**= ಮೂಗನ್ನು ಕತ್ತರಿಸಿಕೊಂಡು ಕನ್ನಡಿಯನ್ನು ನೋಡುತ್ತಾರೆಯೇ; **ಮಾಣಿಕದ ತೊಡವನ್ ಒತ್ತೆಯಿಟ್ಟು ಒಡೆದ ಗಾಜಮ್ ಹಿಡಿವರೇ**=ರತ್ನದ ಒಡವೆಯನ್ನು ಅಡವಿಟ್ಟು, ಒಡೆದ ಗಾಜಿನ ಚೂರುಗಳನ್ನು ತೆಗೆದುಕೊಳ್ಳುತ್ತಾರೆಯೇ; **ಕೋಪದಿಮ್ ಸತ್ತು ಮದುವೆಯಹರೆ**=ಆಕ್ರೋಶ ಮತ್ತು ಆವೇಶದಲ್ಲಿ ಸಾವನ್ನಪ್ಪಿ, ಅನಂತರ ಮದುವೆಯಾಗುತ್ತಾರೆಯೆ;

ಕತ್ತುರಿಯ ಸುಟ್ಟು ಅರಳ ಕುರುಕಲನು ಗೆಯ್ವರೇ=ಸುವಾಸನೆಯಿಂದ ಕೂಡಿದ ಕಸ್ತೂರಿಯನ್ನು ಬೆಂಕಿಯಿಂದ ಸುಟ್ಟು, ಹುರಿಗಾಳನ್ನಾಗಿ ಮಾಡುತ್ತಾರೆಯೆ; ಈ ನಾಲ್ಕು ರೂಪಕದ ನುಡಿಗಳ ಮೂಲಕ ಹರಿಶ್ಚಂದ್ರನು ಹೊಲತಿಯರನ್ನು ಮದುವೆಯಾದರೆ, ತಾನು ತಿಳಿಗೇಡಿಯಾಗುತ್ತೇನೆ ಎಂಬುದನ್ನು ವಿಶ್ವಾಮಿತ್ರನಿಗೆ ಮನಗಾಣಿಸುತ್ತಿದ್ದಾನೆ; **ಚಿತ್ತೈಸು**=ಮನವಿಟ್ಟು ಕೇಳು; **ಹೊಲತಿಯರ ನೆರೆದು ನಾನ್ ಓವದಿ ಇಪ್ಪತ್ತೊಂದು ತಲೆವೆರಸಿ ನರಕಕ್ಕೆ ಹೋಹೇನೇ**=ನಿನ್ನ ಮಾತಿಗೆ ಮನಸೋತು ನಾನು ಹೊಲತಿಯರನ್ನು ಮದುವೆಯಾಗಿ ಇಪ್ಪತ್ತೊಂದು ತಲೆಮಾರು ನರಕಕ್ಕೆ ಹೋಗುತ್ತೇನೆಯೇ. ಈ ಮಾತುಗಳನ್ನು ಮತ್ತೊಂದು ತಿರುಳಿನಲ್ಲಿಯೂ ಗ್ರಹಿಸಬಹುದು. ಹೊಲತಿಯರನ್ನು ನಾನು ಮದುವೆಯಾದರೆ,

ಆ ಪಾಪವು ಸೂರ್ಯವಂಶದ ನನ್ನ ಹಿಂದಿನ ತಲೆಮಾರಿನ ಇಪ್ಪತ್ತೊಂದು ಮಂದಿ ರಾಜರನ್ನು ನನ್ನೊಡನೆ ನರಕಕ್ಕೆ ಒಯ್ಯುತ್ತದೆ; **ಮುನಿನಾಥ ಹೇಳ್**=ಮುನಿಗಳ ಒಡೆಯನಾದ ವಿಶ್ವಾಮಿತ್ರನೇ ನೀನೇ ಹೇಳು. ನಿನ್ನ ಆಜ್ಞೆಯಂತೆ ನಡೆದರೆ ನನಗೆ ಮತ್ತು ನನ್ನ ಸೂರ್ಯವಂಶಕ್ಕೆ ಕಳಂಕ ತಟ್ಟುವುದಿಲ್ಲವೇ;

ಒಲ್ಲನಿರಬೇಡ=ಮದುವೆಯಾಗುವುದಿಲ್ಲವೆಂದು ಹೇಳಬೇಡ; **ಲೇಸು ಒಲ್ಲೆ**=ನನ್ನ ನಿಲುವೇ ಸರಿಯಾಗಿದೆ. ನಾನು ಮದುವೆಯಾಗುವುದಿಲ್ಲ; **ಏಕೊಲ್ಲೆ**=ಏಕೆ ಮದುವೆಯಾಗುವುದಿಲ್ಲ; **ಎಮ್ಮಲ್ಲಿ ತಪ್ಪಿಲ್ಲಾ**=ನನ್ನಲ್ಲಿ ಯಾವ ತಪ್ಪು ಇಲ್ಲ; **ಆದಡೆ ಇನ್ನು ನೀನೀಗ ನಿನಗುಳ್ಳ ಪರಿವಾರಮಮ್ ಬೇಗದಲಿ ಕರಸು**=ನನ್ನ ಮಕ್ಕಳನ್ನು ಮದುವೆಯಾಗುವುದಿಲ್ಲವೆಂದು ನೀನು ನಿಶ್ಚಯಿಸಿದ್ದರೆ, ಈಗ ನಿನ್ನ ಪರಿವಾರದವರೆಲ್ಲರನ್ನು ಇಲ್ಲಿಗೆ ಬೇಗ ಕರೆಸು; **ಇಂತು ಚತುರಂಗಬಲ ಸೇನೆಯ ಸಲ್ಲಲಿತ ದೇಶಕೋಶವನು ಕಟಕವನು ಅವಕ್ಕುಳ್ಳ ಕುಲಕರಣ ದುರ್ಗಮ್ ಮುದ್ರೆ ಮೊದಲಾದುವೆಲ್ಲವಮ್ ಬಿಡದೆ ಒಪ್ಪುಗೊಟ್ಟು ಹೋಗು ಏಳು ಎನಲು**=ನಿನ್ನ ಪರಿವಾರದವರ ಮುಂದೆ ನಿನ್ನ ಚತುರಂಗಬಲದ ಸೇನೆಯನ್ನು; ಸುಂದರವಾದ ದೇಶ ಮತ್ತು ಬೊಕ್ಕಸವನ್ನು; ರಾಜಧಾನಿಯನ್ನು; ರಾಜಧಾನಿಯ ಆಡಳಿತಕ್ಕೆ ಸಂಬಂಧಪಟ್ಟ ಸಾಮಗ್ರಿ, ಮೊಹರು ಮತ್ತು ಇನ್ನಿತರ ದಾಖಲೆಗಳಲ್ಲಿ ಯಾವುದನ್ನೂ ಬಿಡದಂತೆ ನನಗೆ ಒಪ್ಪಿಸಿ ಹೋಗು ಸಿದ್ಧನಾಗು ಎಂದು ವಿಶ್ವಾಮಿತ್ರನು ಕಟುವಾಗಿ ನುಡಿಯಲು;

ಭೂನಾಥನು ಕರಸಿದನ್=ಹರಿಶ್ಚಂದ್ರನು ತನ್ನ ಪರಿವಾರದವರೆಲ್ಲರನ್ನೂ ಅರಮನೆಯ ಅಂಗಣಕ್ಕೆ ಕರೆಸಿದನು; **ಬಾಡಿದ ಮೊಗಮ್**=ಕಳೆಗುಂದಿದ ಮೊಗ; **ಬರತ ಬಾಯ್**=ಒಣಗಿದ ಬಾಯಿ; **ಸುರಿವ ನಯನಾಂಬು**=ಸುರಿಯುತ್ತಿರುವ ಕಣ್ಣೀರು; **ಪಾಡಳಿದ ಮತಿ**=ದಿಕ್ಕುತೋಚದ ಮನಸ್ಸು; **ನೀಡಿ ಬೆಳೆದ ಸುಯ್**=ಹೊಟ್ಟೆಯ ಸಂಕಟದಿಂದ ಹೊರಹೊಮ್ಮುತ್ತಿರುವ ನಿಟ್ಟುಸಿರು; **ದುಗುಡ ಒಕ್ಕಾಡುವ ಅಂಗಮ್**=ಮಯ್ ಮನದಲ್ಲಿ ತುಂಬಿಕೊಂಡಿರುವ ಆತಂಕದಿಂದ ಕಂಗಾಲಾಗಿರುವ ದೇಹ; **ನಿರೋಧಾಗ್ನಿಯಿಮ್ ಕುದಿದು ಮರುಗುವ ಮನಮ್**=ನಿರಾಶೆಯೆಂಬ ಬೆಂಕಿಯಿಂದ ಆಕ್ರೋಶಗೊಂಡು ಏನನ್ನೂ ಮಾಡಲಾಗದೆ ಮರುಗುತ್ತಿರುವ ಮನಸ್ಸು;

ಮಾಸಿದ ಮುದ=ಕಳೆಗುಂದಿದ ಹಿಗ್ಗು; **ಕೂಡೆ ಬಂದ ಅಖಿಳ ಪರಿವಾರಮಮ್, ಸತಿಯರಮ್, ನಾಡೆ ಚತುರಂಗ ಬಲವಮ್, ಪುರಜನಂಗಳಮ್ ಆ ಧೈರ್ಯನಿಧಿ ಭೂಪನು ನೋಡಿ ತೋರಿಸಿ**=ಅಪಾರವಾದ ಸಂಕಟದಿಂದ ತೊಳಲಾಡುತ್ತ ತನ್ನನ್ನು ಸುತ್ತುವರಿದ ಸಮಸ್ತ ಪರಿವಾರವನ್ನು, ಹೆಂಗಸರನ್ನು, ದೊಡ್ಡ ಚತುರಂಗ ಬಲದ

ಸೇನಾನಿಗಳನ್ನು, ಪುರಜನರನ್ನು ಆ ಕೆಚ್ಚೆದೆಯ ಹರಿಶ್ಚಂದ್ರನು ನೋಡಿ, ಅವರೆಲ್ಲರನ್ನೂ ವಿಶ್ವಾಮಿತ್ರ ಮುನಿಗೆ ತೋರಿಸಿ; **ಬೇರೆ ಬೇರೆ ಒಪ್ಪುಗೊಡುತಿರ್ದನ್**= ಅವರೆಲ್ಲರನ್ನೂ ಸಾಕ್ಷಿಯಾಗಿ ಇಟ್ಟುಕೊಂಡು, ತನ್ನ ರಾಜ್ಯ ಸಂಪತ್ತೆಲ್ಲವನ್ನೂ ಒಂದೊಂದಾಗಿ ಹೆಸರಿಸುತ್ತಾ, ವಿಶ್ವಾಮಿತ್ರನಿಗೆ ಒಪ್ಪಿಸತೊಡಗಿದನು;

ಇದು ರತ್ನ ಭಂಡಾರ=ಇದು ವಜ್ರ, ಮಾಣಿಕ್ಯ, ಮರಕತ ಮಣಿಗಳಿಂದ ತುಂಬಿರುವ ಬೊಕ್ಕಸ; **ಇದು ಹೇಮ ಭಂಡಾರ**=ಇದು ಚಿನ್ನದ ಒಡವೆಗಳಿಂದ ತುಂಬಿರುವ ಬೊಕ್ಕಸ; **ಇದು ಸುನಾಣೆಯ ವರ್ಗ**=ಇದು ನನ್ನ ರಾಜ್ಯದಲ್ಲಿ ಈಗ ಚಲಾವಣೆಯಲ್ಲಿರುವ ನಾಣ್ಯಗಳನ್ನು ಮುದ್ರಿಸುವ ಟಂಕಸಾಲೆ; **ಇದು ಪಟ್ಟಕರ್ಮಕುಲ**=ಇದು ರೇಷ್ಮೆಯ ಉಡುಗೆ ತೊಡುಗೆಗಳನ್ನು ನೇಯುವ ನೆಲೆ; **ಇದು ಬೆಳ್ಳಿ ಉಗ್ರಾಣ**=ಇದು ಬೆಳ್ಳಿಯ ಒಡವೆ ವಸ್ತುಗಳನ್ನು ದಾಸ್ತಾನು ಮಾಡಿರುವ ಕೊಟಡಿ; **ಇದು ಕಂಚಿನ ಉಗ್ರಾಣ**=ಇದು ಕಂಚಿನ ಪಾತ್ರೆಗಳನ್ನು ಮತ್ತು ಕರಕುಶಲವಸ್ತುಗಳನ್ನು ದಾಸ್ತಾನು ಮಾಡಿರುವ ಕೊಟಡಿ; **ಇದು ಸರ್ವ ಶಸ್ತ್ರಶಾಲೆ**= ಚತುರಂಗ ಸೇನೆಗೂ ಬೇಕಾದ ಎಲ್ಲಾ ಬಗೆಯ ಆಯುಧಗಳನ್ನು ಇಟ್ಟಿರುವ ಮನೆ;

ಇದು ಹಸ್ತಿ ಸಂದೋಹ=ಇದು ಆನೆಗಳ ಪಡೆ; **ಇದು ತುರಗ ಸಂತಾನ**=ಇದು ಕುದುರೆಯ ದಳ; **ಇದು ವರೂಥ ಪ್ರಕರ**=ಇದು ತೇರುಗಳ ಗುಂಪು; **ಇದು ಪದಾತಿ ವ್ರಾತ**=ಇದು ಕಾಲ್ದಳದ ಪಡೆ; **ನೋಡಿಕೋ ಎನುತ ಭೂನಾಥ ಕಂದರ್ಪನು ಆ ಮುನಿಗೆ ಒಪ್ಪಿಸಿದನ್**=ಎಲ್ಲವನ್ನೂ ಸರಿಯಾಗಿ ನೋಡಿಕೊಳ್ಳುವುದು ಎಂದು ಹರಿಶ್ಚಂದ್ರನು ನುಡಿಯುತ್ತ ಆ ವಿಶ್ವಾಮಿತ್ರ ಮುನಿಗೆ ಒಪ್ಪಿಸಿದನು; **ಇದು ಹಿರಿಯ ಬಿರುದಿನ ಮುದ್ರೆ**=ಇದು ರಾಜಮನೆತನದ ಬಿರುದಿನ ಆಡಳಿತದ ಮೊಹರು; **ಇದು ನಗರ**=ಇದು ಅಯೋಧ್ಯಾ ನಗರ; **ಇದು ಪೂರ್ವದ ಅರಮನೆ**=ಇದು ನಮ್ಮ ಹಿರಿಯರು ಬಾಳಿ ಬದುಕಿದ ಅರಮನೆ; **ಇದು ಅಖಿಳ ಪರಿವಾರ**=ಇದೆಲ್ಲವೂ ನನ್ನ ಸಮಸ್ತ ಪರಿವಾರ; ರಾಜವಂಶಕ್ಕೆ ಸೇರಿದ ಸಕಲವೂ ಇಲ್ಲಿದೆ; **ಇದು ಸಿವುಡಿ**=ಇದು ಲೆಕ್ಕದ ಪುಸ್ತಕ; ರಾಜ್ಯದ ಆಸ್ತಿಪಾಸ್ತಿಯ ವಿವರ ಮತ್ತು ಹಣಕಾಸಿನ ವ್ಯವಹಾರವನ್ನು ಬರೆದಿಟ್ಟಿರುವ ಕಿರ್ದಿ; **ಇದು ಕರಣ**=ಇದು ಬಗೆಬಗೆಯ ಸಾಮಗ್ರಿಗಳನ್ನಿಟ್ಟಿರುವ ಕೊಟಡಿ; **ಮಹಾಪುರುಷ, ಇದು ಮೇಲುಳ್ಳ ಸರ್ವಸ್ವ ನೋಡಿಕೋ ಎಂದು ವರ ಕೌಶಿಂಗೆ ಒಪ್ಪುಗೊಟ್ಟು**=ಮಹಾವ್ಯಕ್ತಿಯೇ, ನನ್ನ ರಾಜ್ಯದ ಅತ್ಯುತ್ತಮವಾದ ಸಂಪತ್ತೆಲ್ಲವನ್ನೂ ಚೆನ್ನಾಗಿ ನೋಡಿಕೊಳ್ಳುವುದು ಎಂದು ಹೇಳಿ ವಿಶ್ವಾಮಿತ್ರ ಮುನಿಗೆ ಹರಿಶ್ಚಂದ್ರನು ತನ್ನ ರಾಜ್ಯಸಂಪತ್ತೆಲ್ಲವನ್ನೂ ಒಪ್ಪಿಸಿ;

ಎಲ್ಲ ಸಂದುದೇ ಪರಿಣಾಮವೇ ಇನ್ನು ಹೋಹೇನೇ ಮುನಿನಾಥ ಕರುಣಿಸಿದಿರೇ ಎಂದು ಪೊಡವಂಟು ಹೋಹ ಅರಸನೊಡನೆ ಆ ಮುನಿಪನು ಎದ್ದನ್=ಎಲ್ಲವೂ

ನಿಮಗೆ ಸಂದಾಯವಾಯಿತಲ್ಲವೇ... ಈಗ ನಿಮಗೆ ಸಮಾಧಾನವಾಯಿತೇ... ಇನ್ನು ಹೊರಡುತ್ತೇನೆ ವಿಶ್ವಾಮಿತ್ರ ಮುನಿಯೇ, ಇನ್ನು ನನಗೆ ಹೋಗಲು ಅನುಮತಿಯನ್ನು ನೀಡುತ್ತೀರಲ್ಲವೇ ಎಂದು ನುಡಿದು, ಮುನಿಗೆ ನಮಿಸಿ, ಹೋಗುತ್ತಿರುವ ಹರಿಶ್ಚಂದ್ರನೊಡನೆ ವಿಶ್ವಾಮಿತ್ರನು ಮೇಲೆದ್ದನು; **ಪೊರಮಡುವ ಭೂಪಾಲನನ್ ಕಂಡು**=ಅರಮನೆಯಿಂದ ಹೊರಡುತ್ತಿರುವ ಹರಿಶ್ಚಂದ್ರನನ್ನು ಅಯೋಧ್ಯಾ ನಗರದ ಪ್ರಜೆಗಳು ನೋಡಿ; **ಕಣ್ಗೆಟ್ಟು ಮರುಗಿ**=ದಿಕ್ಕುತೋಚದಂತಾಗಿ ಸಂಕಟಪಡುತ್ತ;

ಬಸುರಮ್ ಹೊಸೆದು ಬಸವಳಿದು ಬಿಸುಸುಯ್ದು ಮೊರೆಯಿಟ್ಟು ಬಾಯ್ಬಿಟ್ಟು ಕೈನೀಡಿ ಕರೆದು ಕಟ್ಟೊರಲಿ ಸೈರಿಸಲಾರದೆ=ಹರಿಶ್ಚಂದ್ರನ ಅಗಲಿಕೆಯ ಸಂಕಟವನ್ನು ತಡೆದುಕೊಳ್ಳಲಾರದೆ ಪ್ರಜೆಗಳು ಹೊಟ್ಟೆಯನ್ನು ಹಿಸುಕಿಕೊಳ್ಳುತ್ತ... ಆಯಾಸಗೊಂಡು ನಿಟ್ಟುಸಿರು ಬಿಡುತ್ತ... ಆಕ್ರಂದನ ದನಿಯಿಂದ ಮೊರೆಯಿಡುತ್ತ ಸಂಕಟದಿಂದ ಬಾಯಿ ಬಿಡುತ್ತ ಹೋಗುತ್ತಿರುವ ಹರಿಶ್ಚಂದ್ರನನ್ನು ಕಯ್ ನೀಡಿ ಕರೆಯುತ್ತ, ದೊಡ್ಡ ದನಿಯಲ್ಲಿ ಅರಚುತ್ತ, ಹರಿಶ್ಚಂದ್ರನ ಅಗಲಿಕೆಯನ್ನು ತಡೆದುಕೊಳ್ಳಲಾಗದೆ; **ನೇಸರ ಕುಲಜ ಪೇಳು, ನೆರೆ ನಿನ್ನ ನಂಬಿ ನಚ್ಚಿರ್ದ ಪರಿವಾರಮಮ್ ಮರೆದೆಯೋ ತೊರೆದೆಯೋ ಮಾರಿದೆಯೊ... ಎಂದೆಂದು ಪೌರಜನವು ನುಡಿನುಡಿದು ಮಿಡುಮಿಡನೆ ಮಿಡುಕಿತ್ತು**=ಸೂರ್ಯವಂಶದ ರಾಜನೇ ಹೇಳು, ಅತಿಶಯವಾಗಿ ನಿನ್ನನ್ನೇ ನಂಬಿಕೊಂಡಿದ್ದ ನಮ್ಮೆಲ್ಲರನ್ನೂ ಮರೆದೆಯೋ ತ್ಯಜಿಸಿದೆಯೋ ಮಾರಿದೆಯೋ ಎಂದು ಆಕ್ರಂದನ ದನಿಯಿಂದ ನುಡಿಯುತ್ತ ಚಡಪಡಿಸುತ್ತ ನಡುಗುತ್ತಿದ್ದರು;

ದಂತಿಯಿಂದಿಳಿದು ನಡೆದು ಅರಿಯದವ, ಬರಿಗಾಲೊಳ್ ಎಂತು ಅಡಿಯನ್ ಇಡುವೆ=ಅಂಬಾರಿಯನ್ನು ಹೊತ್ತ ಆನೆಯ ಮೇಲೆ ಹೋಗುತ್ತಿದ್ದ ನೀನು, ಈಗ ಬರಿಗಾಲಿನಲ್ಲಿ ಹೇಗೆ ನಡೆಯುತ್ತೀಯೆ; **ಹಾಸಿನೊಳು ಪವಡಿಸುವಾತನ್, ಎಂತು ಕಲು ನೆಲದೊಳು ಒರಗುವೆ**=ಅರಮನೆಯ ಹಂಸತೂಲಿಕಾ ತಲ್ಪದ ಮೆತ್ತನೆಯ ಹಾಸುಗೆಯಲ್ಲಿ ಮಲಗಿ ನಿದ್ರಿಸುತ್ತಿದ್ದ ನೀನು, ಇನ್ನು ಮುಂದೆ ಕಲ್ಲು ಮಣ್ಣಿನಿಂದ ಕೂಡಿರುವ ಬರಿನೆಲದ ಮೇಲೆ ಹೇಗೆ ಮಲಗಿ ನಿದ್ರಿಸುವೆ; **ಸಿತಚ್ಛತ್ರ ತಂಪಿನೊಳು ಬಪ್ಪಾತ ನೀನು, ಎಂತು ಬರ ಬಿಸಿಲನ್ ಆನುವೆ**=ರಾಜ ಲಾಂಛನವಾದ ಬೆಳ್ಗೊಡೆಯ ನೆರಳಿನಲ್ಲಿ ಬರುತ್ತಿದ್ದ ನೀನು, ಇನ್ನು ಮುಂದೆ ಯಾವ ರೀತಿ ಬರಬಿಸಲನ್ನು ತಡೆದುಕೊಳ್ಳುವೆ;

ಪುರದೊಳ್ ಇಪ್ಪಾತನ್, ಎಂತು ಅರಣ್ಯದೊಳಿಪ್ಪೆ=ಅಯೋಧ್ಯಾಪುರದ ಅರಮನೆಯಲ್ಲಿದ್ದ ನೀನು, ಇನ್ನು ಮುಂದೆ ಕಾಡಿನಲ್ಲಿ ಹೇಗಿರುವೆ; **ಜನವನ್**

ಅಗಲ್ದು ಅರಿಯದವನ್, ಎಂತು ಏಕಾಕಿಯಾಗಿಪ್ಪೆ ಪೇಳ್ ಎಂದು ಸಮಸ್ತ ಜನವು ಬಾಯ್ವಿಟ್ಟುದು=ಸದಾಕಾಲ ಪ್ರಜೆಗಳಿಗೆ ಒಳಿತನ್ನು ಮಾಡುತ್ತ, ಅವರ ನಡುವೆಯೇ ಒಲವು ನಲಿವು ನೆಮ್ಮದಿಯಿಂದ ಬಾಳುತ್ತಿದ್ದ ನೀನು, ಈಗ ಅವರಿಂದ ದೂರವಾಗಿ ಯಾವ ರೀತಿ ಒಬ್ಬಂಟಿಯಾಗಿ ಇರುವೆ ಹೇಳು ಎಂದು ಪ್ರಜೆಗಳೆಲ್ಲರೂ ಸಂಕಟದಿಂದ ಮೊರೆಯಿಟ್ಟರು;

ಕೊಟ್ಟು ಬೇಸರದ ಮುಗುದ ಅರಸು ದೊರಕಿದನಲಾ ಎಂದು ಹೊರಗೆ ದಾನವ ಬೇಡುವವರುಂಟೆ=ದಾನ ಮಾಡುವುದರಲ್ಲಿ ತುಸುವಾದರೂ ಬೇಸರಪಟ್ಟುಕೊಳ್ಳದ, ಕಪಟವನ್ನು ಅರಿಯದ ಒಳ್ಳೆಯ ಮನಸ್ಸಿನ ರಾಜ ಸಿಕ್ಕಿದನು ಎಂದು ರಾಜ್ಯದ ಹೊರಗೆ ದಾನವನ್ನು ಯಾರಾದರೂ ಬೇಡಿದವರು ಇದ್ದಾರೆಯೇ. ಅಂದರೆ ಅರಮನೆಗೆ ಬಂದು ದಾನವನ್ನು ಪಡೆಯದೆ, ಕಾಡಿನಲ್ಲಿ ಪಡೆದಿರುವ ನಿನ್ನ ನಡೆನುಡಿ ಸರಿಯಲ್ಲ; **ಕಟ್ಟರೆಗಂಡ ಪಾಪಿ**=ಅತಿಯಾಸೆಯುಳ್ಳ ಪಾಪಿ; 'ಕಟ್ಟರೆಗಂಡ' ಎಂಬ ಪದಕ್ಕೆ ಸರಿಯಾದ ತಿರುಳು ತಿಳಿದುಬಂದಿಲ್ಲ; **ನಿಷ್ಕರುಣಿ**=ಕರುಣೆಯಿಲ್ಲದವನು; **ನಿರ್ದಯ**=ದಯೆಯಿಲ್ಲದವನು/ಕ್ರೂರವಾಗಿ ನಡೆದುಕೊಳ್ಳುವವನು; **ಮೂರ್ಖ**=ತಿಳಿಗೇಡಿ; **ನೀರಸ**=ಒಳ್ಳೆಯ ನಡೆನುಡಿಯನ್ನು ಮೆಚ್ಚದವನು; **ನಿರ್ಗುಣ**=ಒಳ್ಳೆಯ ಗುಣವಿಲ್ಲದವನು; **ನೆರೆ ಕೊಂದೆ**=ಅಯೋಧ್ಯಾ ನಗರದ ಪ್ರಜೆಗಳಾದ ನಮ್ಮೆಲ್ಲರನ್ನೂ ಸಂಪೂರ್ಣವಾಗಿ ಕೊಂದೆ;

ನಂಬಿ ನಚ್ಚಿರ್ದರ್ ಎಮ್ಮ ಒಡಲೊಳ್ ಅಳ್ಳಿರಿಯುತಿಪ್ಪ ಅಳಲ ಬೇಗೆಯ ಬೆಂಕಿಯುರಿ ನಿನ್ನನ್ ಇರಿಯದೇ ಹೇಳು=ಈಗ ನೀನು ಮಾಡಿರುವ ಕೇಡಿನಿಂದ ಹರಿಶ್ಚಂದ್ರ ರಾಜನನ್ನೇ ನಂಬಿಕೊಂಡು ನೆಮ್ಮದಿಯಿಂದ ಬಾಳುತ್ತಿದ್ದ ನಮ್ಮ ಒಡಲಿನಲ್ಲಿ ಚುಚ್ಚುತ್ತಿರುವ ಸಂಕಟದ ಕಿಚ್ಚಿನ ಬೆಂಕಿಯ ತಾಪವು ನಿನ್ನನ್ನು ಚುಚ್ಚದಿರುವುದೇ ಹೇಳು; ಅಂದರೆ ನಮ್ಮ ಹೊಟ್ಟೆಯ ಉರಿ ನಿನಗೂ ತಟ್ಟುತ್ತದೆ; **ವಿಶ್ವಾಮೃತ್ಯುವಾದೆ ವಿಶ್ವಾಮಿತ್ರ ಎನುತ ಇರ್ದರು**=ಜಗತ್ತಿನ ಜೀವರಾಶಿಗಳಿಗೆ ಒಳಿತನ್ನು ಮಾಡುವ ಗೆಳೆಯನಾಗಬೇಕಾಗಿದ್ದ ನೀನು, ನಿನ್ನ ವಂಚನೆಯ ಮತ್ತು ಕೇಡಿನ ನಡೆನುಡಿಯಿಂದ ಜಗತ್ತಿನ ಜೀವರಾಶಿಗಳ ಪಾಲಿಗೆ ಯಮರೂಪಿ ಯಾದೆಯಲ್ಲ ವಿಶ್ವಾಮಿತ್ರನೇ ಎಂದು ಪ್ರಜೆಗಳು ಹೀಯಾಳಿಸತೊಡಗಿದರು;

ಜಡೆಗಳೆದು ಮಕುಟಮಮ್=ಮುನಿ ವೇಷದ ತಲೆಯ ಮೇಲೆ ಎತ್ತಿಕಟ್ಟಿರುವ ಜಡೆಯನ್ನು ಕಿತ್ತುಬಿಸುಟು, ತಲೆಗೆ ತೊಡಲು ರಾಜ ಪಟ್ಟದ ಕಿರೀಟವನ್ನು; **ನಾರ ಸೀರೆಯನು ತೊರೆದು ಉಡಿಗೆಯಮ್**=ಮರಗಿಡಗಳ ತೊಗಟೆಯ ನೂಲಿನಿಂದ ಮಾಡಿರುವ ನಾರುಮಡಿಯನ್ನು ಬಿಟ್ಟು ಉಟ್ಟುಕೊಳ್ಳಲೆಂದು ನೆಯ್ದಿರುವ ಬಟ್ಟೆಯನ್ನು; **ರುದ್ರಾಕ್ಷಮಾಲೆಯಮ್ ಕಳೆದು ಮಣಿ ತೊಡಿಗೆಯಮ್**=ಮುನಿಗಳು

ಮಯ್ ಮೇಲೆ ತೊಟ್ಟುಕೊಳ್ಳುವ ರುದ್ರಾಕ್ಷಿ ಮಾಲೆಯನ್ನು ಕಳಚಿಹಾಕಿ, ಬೆಲೆ ಬಾಳುವ ರತ್ನ,ವಜ್ರ, ವೈಡೂರ್ಯದ ಹರಳಿನ ಒಡವೆಗಳನ್ನು; **ಕಂದಮೂಲವಮ್ ಒಲ್ಲದೆ ಊಟಮನ್**=ಗೆಡ್ಡೆಗೆಣಸಿನ ಉಣಸು ತಿನಸನ್ನು ಒಲ್ಲದೆ ರುಚಿಕರವಾದ ಊಟವನ್ನು; **ದರ್ಭೆಯಮ್ ಬಿಟ್ಟು ಅಸಿಯನು**=ಯಾಗವನ್ನು ಮಾಡುವಾಗ ಕಯ್ಯಲ್ಲಿ ಹಿಡಿದುಕೊಳ್ಳುವ ಮೊನಚಾದ ಹುಲ್ಲಿನ ಕಡ್ಡಿಯನ್ನು ಬಿಟ್ಟು, ಕತ್ತಿಯನ್ನು;

ಅಡವಿಯಮ್ ಬಿಟ್ಟು ನಗರಿಯ=ಕಾಡಿನ ವಾಸವನ್ನು ಬಿಟ್ಟು, ನಗರವಾಸವನ್ನು; **ಭಸಿತಮಮ್ ಬಿಟ್ಟು ಕಡುಸುಗಂಧಗಳ**=ಮಯ್ ಮೇಲೆ ವಿಭೂತಿಯನ್ನು ಬಳಿದುಕೊಳ್ಳುವುದನ್ನು ಬಿಟ್ಟು, ತುಂಬಾ ಸುವಾಸನೆಯಿಂದ ಕೂಡಿರುವ ವಸ್ತುಗಳನ್ನು ಮಯ್ ತುಂಬಾ ಲೇಪಿಸಿಕೊಳ್ಳಲು; **ಜಿತೇಂದ್ರಿಯತ್ವವ ಬಿಟ್ಟು ಜಗವರಿಯೆ ಮಡದಿಯರ ಕೂಡಲು**=ಪಂಚೇಂದ್ರಿಯಗಳ ಮೇಲಣ ಹತೋಟಿಯನ್ನು ಬಿಟ್ಟು, ಹೆಣ್ಣುಗಳ ಜತೆ ಕಾಮಪ್ರೇಮದ ನಂಟನ್ನು ಪಡೆದು ಸಂಸಾರ ಸುಖವನ್ನು ಅನುಭವಿಸಲೆಂದು; **ವ್ರತಕ್ಕೆ ಮುಪ್ಪಿನೊಳ್ ಮುಪ್ಪಾಯ್ತೆ**=ನಿನ್ನ ಮುನಿತನದ ಆಚರಣೆಗೆ ಈ ಮುಪ್ಪಿನ ವಯೋಮಾನದಲ್ಲಿ ಮುಪ್ಪು ಬಂದಿತೆ ಎಂದು ಪ್ರಜೆಗಳು ಹಂಗಿಸಿದರು;

ಮಲೆತು ಬೆನ್ನಟ್ಟುವ ಮಹಾ ಅರಿಷಡುವರ್ಗಮನ್ ಗೆಲಲ್ ಅರಿಯದವನ್, ಆವ ಹಗೆಗಳಮ್ ಗೆಲುವೆ=ಮಯ್ ಮನವನ್ನು ಎಡೆಬಿಡದೆ ಬೆನ್ನಟ್ಟಿ ಕಾಡುತ್ತಿರುವ ಕಾಮ/ಕ್ರೋಧ/ಮೋಹ/ಮದ/ಮತ್ಸರ/ಲೋಭ ಎಂಬ ದೊಡ್ಡ ಶತ್ರುಗಳನ್ನು ಹತ್ತಿಕ್ಕಿ ಗೆಲ್ಲಲು ಶಕ್ತನಾಗದ ನೀನು, ಜೀವನದಲ್ಲಿ ಯಾವ ಹಗೆಗಳನ್ನು ಗೆಲ್ಲುವೆ; **ನಿನ್ನೊಳಗೆ ಕರಣವ ಸಂತವಿಡಲ್ ಅರಿಯದವನ್, ಆವ ದೇಶವಮ್ ಸಂತವಿಡುವೆ**=ನಿನ್ನೊಳಗಿನ ಒಡಲನ್ನು ಶಾಂತಚಿತ್ತದಿಂದ ಇಟ್ಟುಕೊಳ್ಳಲು ತಿಳಿಯದವನು, ಯಾವ ದೇಶದ ಪ್ರಜೆಗಳನ್ನು ಪರಸ್ಪರ ಪ್ರೀತಿ ಕರುಣೆ ಸಹಬಾಳ್ವೆಯಿಂದ ಶಾಂತವಾಗಿರುವಂತೆ ನೋಡಿಕೊಳ್ಳುವೆ;

ಪುರುಷಾರ್ಥಕೋಶ=ಧರ್ಮ-ಕಾಮ-ಸಂಪತ್ತು-ಮೋಕ್ಷ ಎಂಬ ನಾಲ್ಕು ಸಂಗತಿಗಳಲ್ಲಿಯೂ ವ್ಯಕ್ತಿಯು ಯಶಸ್ಸನ್ನು ಗಳಿಸುವುದು; **ಪುರುಷಾರ್ಥ ಕೋಶಮನ್ ಸಲೆ ತಪಸ್ತೇಜದಿನ್ ಬಳಸಲ್ ಅರಿಯದನ್, ಆವ ತೇಜದಿಮ್ ಕೋಶಮಮ್ ಬಳಸಿದಪೆ**=ನಿನ್ನ ವ್ಯಕ್ತಿಗತ ಜೀವನದಲ್ಲಿ ಧರ್ಮ-ಕಾಮ-ಅರ್ಥ-ಮೋಕ್ಷಗಳನ್ನು ಸರಿಯಾಗಿ ತಪಸ್ಸಿನ ತೇಜಸ್ಸಿನಿಂದ ಆಚರಿಸಲು ಶಕ್ತನಲ್ಲದ ನೀನು, ಯಾವ ಬುದ್ಧಿಶಕ್ತಿಯಿಂದ ರಾಜ್ಯದ ಬೊಕ್ಕಸವನ್ನು ಪ್ರಜೆಗಳ ಹಿತಕ್ಕಾಗಿ ಬಳಸುತ್ತೀಯೆ; ರಾಜ್ಯವನ್ನು ಆಳುವ ಯೋಗ್ಯತೆಯಾಗಲಿ ಇಲ್ಲವೇ ಶಕ್ತಿಯಾಗಲಿ ನಿನ್ನಲ್ಲಿ ಇಲ್ಲ; **ಕಂಗೆಟ್ಟು, ಕಡುಪಾಪಿ ಮೂರ್ಖ ಕೌಶಿಕ ಕೇಳು ಕೇಳ್**=ಮುನಿತನವನ್ನು

ಬಿಟ್ಟು ರಾಜತನಕ್ಕೆ ಬಂದು ದಿಕ್ಕೆಟ್ಟಿರುವ ಕಡುಪಾಪಿಯೂ ತಿಳಿಗೇಡಿಯೂ ಆದ ವಿಶ್ವಾಮಿತ್ರನೇ, ನಮ್ಮ ಸಂಕಟದ ಮತ್ತು ಆಕ್ರೋಶದ ನುಡಿಗಳನ್ನು ಮನವಿಟ್ಟು ಕೇಳು;

ಪುರದ ಪುಣ್ಯಮ್ ಪುರುಷರೂಪಿಂದೆ ಪೋಗುತಿದೆ=ಪುರದ ಪುಣ್ಯವೇ ಹರಿಶ್ಚಂದ್ರನ ರೂಪದಲ್ಲಿ ಹೋಗುತ್ತಿದೆ. **ಪರಿಜನದ ಭಾಗ್ಯ ಅಡವಿಗೆ ನಡೆಯುತಿದೆ**= ರಾಜಾಶ್ರಯದಲ್ಲಿದ್ದ ಸಕಲ ಸೇವಕ ವರ್ಗದವರ ಸಿರಿಸಂಪದವೆಲ್ಲವೂ ಕಾಡಿನತ್ತ ನಡೆಯುತ್ತಿದೆ; **ಸಪ್ತ ಶರಧಿ ಪರಿವೃತ ಧರೆಯ ಸಿರಿಯ ಸೊಬಗು ಅಜ್ಞಾತವಾಸಕ್ಕೆ ಪೋಗುತಿದೆಕೋ**=ಏಳು ಕಡಲುಗಳಿಂದ ಸುತ್ತುವರಿದಿರುವ ಭೂಮಂಡಲದ ಸಿರಿಯ ಅಂದಚೆಂದವೆಲ್ಲವೂ ಯಾರಿಗೂ ಕಾಣದಂತೆ ಮರೆಯಾಗುತ್ತಿದೆ ನೋಡು ವಿಶ್ವಾಮಿತ್ರ; **ಎರೆವ ದೀನ ಅನಾಥರ ಆನಂದ ಅಡಗುತಿದೆ**=ದೀನರ ಮತ್ತು ಗತಿಹೀನರ ಬದುಕಿಗೆ ಆಸರೆಯಾಗಿದ್ದ ಹರಿಶ್ಚಂದ್ರನ ಹೋಗುವಿಕೆಯಿಂದ, ಅವರೆಲ್ಲರ ಬದುಕಿನ ಆನಂದವೇ ನಾಶವಾಗುತ್ತಿದೆ;

ವರಮುನೀಂದ್ರರ ಯಾಗರಕ್ಷೆ ಬಲವು ನಿರುತವು ಅಳಿಯುತಿದೆ ಎಂದು= ಉತ್ತಮರಾದ ಮುನಿಗಳು ಮಾಡಿದ ಯಾಗವು ಹರಿಶ್ಚಂದ್ರನನ್ನು ಒಳಗೊಂಡಂತೆ ಎಲ್ಲರನ್ನು ಕಾಪಾಡಬೇಕಾಗಿತ್ತು. ವಿಶ್ವಾಮಿತ್ರನೇ, ನಿನ್ನ ಕೇಡಿನ ಕಾರ್ಯದಿಂದ ಯಾಗದ ಬಲವೆಲ್ಲವೂ ದಿಟವಾಗಿಯೂ ನಾಶವಾಗುತ್ತಿದೆ ಎಂದು; **ಒಂದಾಗಿ ಬಂದು ಸಂದಿಸಿ ನಿಂದ ಮಂದಿ ನೆರೆ ಮೊರೆಯಿಟ್ಟುದು**=ಪ್ರಜೆಗಳೆಲ್ಲರೂ ಒಂದಾಗಿ ಬಂದು, ಜತೆಗೂಡಿ ನಿಂದು ವಿಶ್ವಾಮಿತ್ರ ಮುನಿಯ ಬಗ್ಗೆ ಆಕ್ರೋಶವನ್ನು ಮತ್ತು ಹರಿಶ್ಚಂದ್ರನ ಬಗ್ಗೆ ತಮ್ಮ ಸಂಕಟವನ್ನು ತೋಡಿಕೊಂಡರು; ರಾಜ್ಯವನ್ನು ವಿಶ್ವಾಮಿತ್ರನಿಗಿತ್ತು ಹರಿಶ್ಚಂದ್ರನು ಹೋಗುತ್ತಿರುವುದರಿಂದ ಪ್ರಜೆಗಳಾದ ತಮ್ಮೆಲ್ಲರ ಒಲವು ನಲಿವು ನೆಮ್ಮದಿಯ ಸಹಬಾಳ್ವೆಯಿಂದ ಕೂಡಿದ ಜೀವನದ ಒಳಿತೆಲ್ಲವೂ ಇಲ್ಲವಾಗುತ್ತದೆ ಎಂಬ ಸಂಕಟವನ್ನು ಪ್ರಜೆಗಳು ವ್ಯಕ್ತಪಡಿಸುತ್ತಿರುವುದನ್ನು ಈ ರೂಪಕದ ನುಡಿಗಳು ಸೂಚಿಸುತ್ತಿವೆ;

ವಸುಧೆ ಬಾಯ್ಬಿಡೆ=ಭೂಮಿಯು ಬಾಯ್ಬಿಡಲು ಅಂದರೆ ಭೂಕಂಪನದಿಂದ ಬಿರುಕುಬಿಡಲು; **ದೆಸೆಗಳ್ ಅಸವಳಿದು ಮರುಗೆ**=ದಿಕ್ಕುಗಳು ಶಕ್ತಿಗುಂದಿ ಕೊರಗಲು; **ನಿಟ್ಟಿಸಲಾರದೆ ಅಂಬರಮ್ ಕಂಬನಿಯನ್ ಉಗುಳೆ**=ಹರಿಶ್ಚಂದ್ರನ ಅಗಲಿಕೆ ಮತ್ತು ಪ್ರಜೆಗಳ ಸಂಕಟವನ್ನು ನೋಡಲಾರದೆ ಆಕಾಶವು ಕಣ್ಣೀರನ್ನು ಕರೆಯುತ್ತಿರಲು; **ಶೋಕಿಸುವ ಪರಿಜನದ ಅಳಲನ್ ಆರಿಸುತ**=ಪರಿತಪಿಸುತ್ತಿರುವ ತನ್ನ ಪ್ರಜೆಗಳ ಸಂಕಟವನ್ನು ಹೋಗಲಾಡಿಸುತ್ತ; **ಸರದೋರಿ ಸಂತವಿಡುತ**=ಸಾಂತ್ವನದ ನುಡಿಗಳಿಂದ ಪ್ರಜೆಗಳನ್ನು ಸಮಾಧಾನಮಾಡುತ್ತ; **ಪುರಮಮ್ ಮಸಗಿ ಮೀರಿ**

ಹೋಗುತ್ತ=ಹರಿಶ್ಚಂದ್ರನು ಅಯೋಧ್ಯಾಪುರದಿಂದ ವೇಗವಾಗಿ ಮುನ್ನಡೆದು ಹೋಗುತ್ತಿರಲು;

ಹಿಂದೆ ಸಂದಿಸಿ ಬಪ್ಪ ಕೌಶಿಕನ ಕಂಡು ನಿಂದು=ಹಿಂದೆ ತನ್ನನ್ನೇ ಹಿಂಬಾಲಿಸಿ ಕೊಂಡು ಬರುತ್ತಿರುವ ವಿಶ್ವಾಮಿತ್ರನನ್ನು ಕಂಡು, ನಿಂತುಕೊಂಡು; **ಅವನೀಶನ್ ಒಸೆದು ನಿಲಿಸುವ ಭರದೊಳ್ ಒಂದೆರಡು ಮಾತನಾಡಿದನ್. ಅದ ಏನ್ ಬಣ್ಣಿಸುವೆನು**=ಹರಿಶ್ಚಂದ್ರನು ವಿಶ್ವಾಮಿತ್ರನನ್ನು ಪ್ರೀತಿಯಿಂದ ತಡೆದು ನಿಲ್ಲಿಸುವ ಸಮಯದಲ್ಲಿ ಒಂದೆರಡು ನುಡಿಗಳನ್ನಾಡಿದನು. ಅದನ್ನು ಏನೆಂದು ತಾನೆ ಬಣ್ಣಿಸುವೆನು ಎಂದು ಕವಿಯು ಅಚ್ಚರಿಯನ್ನು ಪಡುತ್ತಿದ್ದಾನೆ;

ಹಿಂದೆ ರಾಜ್ಯಮ್ ಗೆಯ್ವ ಗರ್ವದಿಮ್=ಈ ಹಿಂದೆ ನಾನು ರಾಜ್ಯವನ್ನು ಆಳುತ್ತಿದ್ದಾಗ ಸೊಕ್ಕಿನಿಂದ; **ಹೊಲತಿಯರ ತಂದು ಕುಲವಮ್ ಕೆಡಿಸಲಾರದ ಅಳಲಿಮ್**=ನಿನ್ನ ಆಜ್ಞೆಯಂತೆ ಹೊಲತಿಯರನ್ನು ಮದುವೆಯಾಗಿ ಕುಲವನ್ನು ಕೆಡಿಸಿಕೊಳ್ಳಲಾರದ ಧರ್ಮಸಂಕಟದಿಂದ; **ನಿಮ್ಮನ್ ಒಂದೊಂದು ವಿಧದಿ ದಟ್ಟಿಸಿ ಜರಿದು**=ನಿಮ್ಮನ್ನು ಬಹುಬಗೆಯಲ್ಲಿ ಮೂದಲಿಸಿ ನಿಂದಿಸಿ; **ಮಾರುತ್ತರಮ್ ಕೊಟ್ಟು**=ನಿಮಗೆ ಎದುರಾಗಿ ನುಡಿದು; **ಕೆಟ್ಟು ನುಡಿದು ನಿಂದೆಗೆಯ್ದ ಅನ್ಯಾಯ ಪಾಪಿ ಚಂಡಾಲನ್**=ಕೆಟ್ಟ ಮಾತುಗಳನ್ನಾಡಿ, ತೆಗಳಿ ನಿಮ್ಮೊಡನೆ ಅನ್ಯಾಯವಾಗಿ ನಡೆದುಕೊಂಡ ಪಾಪಿ ಚಂಡಾಲನು ನಾನು; **ಎನ್ನಿಂದ ಅಧಮರ್ ಆರಯ್ಯ**=ಈ ಜಗತ್ತಿನಲ್ಲಿ ನನಗಿಂತಲೂ ಕೀಳಾದ ವ್ಯಕ್ತಿಗಳು ಯಾರಿದ್ದಾರಯ್ಯ;

ಸರ್ವ ಅಪರಾಧಿ ಆನ್=ನಿನ್ನೊಡನೆ ಎಲ್ಲ ರೀತಿಯಿಂದಲೂ ಕೆಟ್ಟದ್ದಾಗಿ ನಡೆದು ಕೊಂಡು ತಪ್ಪುಗಳನ್ನು ಮಾಡಿರುವವನು ನಾನು; **ತಂದೆ, ಕರುಣಮ್ ಕೆಡದಿರು ಎಂದು ಮುನಿಯನ್ ಹರಿಶ್ಚಂದ್ರನು ಬೇಡಿಕೊಂಡನು**=ತಂದೆಯ ಸ್ವರೂಪನಾದ ವಿಶ್ವಾಮಿತ್ರನೇ, ನನ್ನ ಬಗ್ಗೆ ಕ್ರೂರನಾಗಬೇಡ. ನನಗೆ ಕರುಣೆಯನ್ನು ತೋರು ಎಂದು ಹರಿಶ್ಚಂದ್ರನು ಮುನಿಯನ್ನು ಬೇಡಿಕೊಂಡನು;

ಮನದೊಳಗೆ ಮರುಗದಿರಿ ಚಿಂತಿಸದಿರಿ ಅಳಲದಿರಿ ಮುನಿಯದಿರಿ ನೋಯದಿರಿ ಧೃತಿಗೆಡದಿರಿ=ಕಂಬನಿ ಕರೆಯುತ್ತ ಸಂಕಟದಲ್ಲಿ ಮುಳುಗಿದ್ದ ತನ್ನ ಪ್ರಜೆಗಳನ್ನು ಕುರಿತು 'ಮರುಗಬೇಡಿ; ಚಿಂತಿಸಬೇಡಿ; ಶೋಕಿಸಬೇಡಿ; ಹೀಗಾಯಿತಲ್ಲ ಎಂದು ವಿಶ್ವಾಮಿತ್ರ ರಾಜನ ಬಗ್ಗೆ ಕೋಪಿಸಿಕೊಳ್ಳಬೇಡಿ; ನೋಯಬೇಡಿ; ಎದೆಗುಂದಬೇಡಿ' ಎಂದು ಹರಿಶ್ಚಂದ್ರನು ಅವರೆಲ್ಲರನ್ನೂ ಸಮಾಧಾನಪಡಿಸಿದನು;

ಈಗಳ್ ಎರಡನೆಯ ಶಿವನ್ ಎನಿಪ ಕೌಶಿಕನ್ ಒಡೆಯನಾದನ್=ಈಗ ಎರಡನೆಯ ಶಿವನೆಂದು ಹೆಸರಾಂತ ವಿಶ್ವಾಮಿತ್ರ ಮುನಿಯು ಲಾಳದೇಶದ ರಾಜನಾಗಿದ್ದಾನೆ; **ಆತನ ಪಾದಪಂಕಜಕ್ಕೆ ಎನಗೆ ಬೆಸಕೈವಂತೆ ಬೆಸಕೈವುದು**

ಅಂಜುವುದು ವಿನಯಮನ್ ನುಡಿವುದು ಓಲೈಸುತಿಹುದು ಎಂದು ಪರಿಜನಕೆ ಕೈಮುಗಿದು ಧೈರ್ಯನಿಧಿ ಹರಿಶ್ಚಂದ್ರನೃಪನು ಎಯ್ದೆ ಬೇಡಿಕೊಂಡನ್=ರಾಜ ವಿಶ್ವಾಮಿತ್ರನ ಪಾದಕಮಲಕ್ಕೆ ನನಗೆ ಸೇವೆಮಾಡುತ್ತಿದ್ದಂತೆಯೇ ಸೇವೆಯನ್ನು ಮಾಡುವುದು. ರಾಜನಿಗೆ ಎದುರಾಡದೆ ವಿನಯದಿಂದ ನುಡಿಯುವುದು. ಪ್ರೀತಿಯಿಂದ ಅವನ ಆಜ್ಞೆಯನ್ನು ನೆರವೇರಿಸುವುದು ಎಂದು ಕೆಚ್ಚೆದೆಯ ಹರಿಶ್ಚಂದ್ರನು ತನ್ನ ಪರಿಜನಕ್ಕೆ ಕಯ್ ಮುಗಿದು ಬಹಳವಾಗಿ ಬೇಡಿಕೊಂಡನು;

ಧರೆಗೆ ಅಧಿಕವೆನಿಪ ರವಿವಂಶದ ಇಕ್ಷ್ವಾಕು ಭೂವರನು ಮೊದಲ್ ಅನ್ವಯಾಗತವಾಗಿ ಈ ಪರಿವಾರ ಈ ದೇಶ ಈ ನಗರ ಬಂದುದು=ಇಡೀ ಭೂಮಂಡಲದಲ್ಲಿಯೇ ಹೆಚ್ಚಿನದು ಎಂದು ಹೆಸರಾಂತ ಸೂರ್ಯವಂಶದ ಇಕ್ಷ್ವಾಕು ರಾಜನಿಂದ ಮೊದಲುಗೊಂಡು ವಂಶಪರಂಪರೆಯಿಂದ ಈ ಪರಿವಾರ... ಈ ಲಾಳ ದೇಶ... ಈ ಅಯೋಧ್ಯಾ ನಗರ ನನ್ನ ಪಾಲಿಗೆ ಬಂದಿದೆ; **ಇಂದು ತನಕ ಆವ ಎಡರು ಬಡತನವನು ನೆರೆದು ಅರಿಯದಯ್ಯ**=ಈ ದಿನದ ತನಕ ಯಾವುದೇ ಅಡೆತಡೆಯನ್ನಾಗಲಿ ಬಡತನವನ್ನಾಗಲಿ ಕಂಡು ತಿಳಿಯದಯ್ಯ; **ನೀವಿನ್ನು ಇದಮ್ ರಕ್ಷಿಪುದು ಹೊರೆವುದು**=ನೀವು ಇನ್ನು ಮುಂದೆ ಈ ದೇಶವನ್ನು ಮತ್ತು ಈ ನನ್ನ ಪ್ರಜೆಗಳನ್ನು ಕಾಪಾಡುವುದು ಮತ್ತು ಸಲಹುವುದು;

ಇನಿತಮ್ ನಾ ನಿಮ್ಮಲ್ಲಿ ಬೇಡಿ ಪಡೆದೆ. ಎನಗೆ ಕರುಣಿಸು ಎಂದು ಕೈಮುಗಿದು ಮುನಿಗೆ ಹರಿಶ್ಚಂದ್ರನು ಅಪ್ಪಯಿಸಿಕೊಟ್ಟನು=ಇಷ್ಟನ್ನು ಮಾತ್ರ ನಾನು ನಿಮ್ಮಲ್ಲಿ ಬೇಡಿ ಪಡೆಯುತ್ತಿದ್ದೇನೆ. ಈ ನನ್ನ ಮೊರೆಯನ್ನು ಈಡೇರಿಸಿಕೊಡಿರೆಂದು ಕೇಳಿಕೊಳ್ಳು ತ್ತಿದ್ದೇನೆ. ನನಗೆ ಕರುಣೆಯನ್ನು ತೋರಿ ಎಂದು ಹರಿಶ್ಚಂದ್ರನು ವಿಶ್ವಾಮಿತ್ರ ಮುನಿಗೆ ತನ್ನೆಲ್ಲಾ ಹೊಣೆಗಾರಿಕೆಯನ್ನು ಒಪ್ಪಿಸಿಕೊಟ್ಟನು; **ಒಸೆದೀವ ತೆರಕಾರನ್ ಆರ್. ಆತನನ್ ನಿಯಾಮಿಸು ತಂದೆ ಎನೆ**=ನನ್ನಿಂದ ಹಣವನ್ನು ವಸೂಲುಮಾಡಲು ನೀನು ಅನುಗ್ರಹಿಸಿ ಕಳುಹಿಸುವ ತೆರಕಾರನು ಯಾರು. ಅವನನ್ನು ನೇಮಿಸಿ ನನ್ನೊಡನೆ ಕಳುಹಿಸು ತಂದೆ ಎಂದು ಹರಿಶ್ಚಂದ್ರನು ನುಡಿಯಲು;

ತನ್ನ ಶಿಷ್ಯಾಳಿಯೊಳು ನೋಡಿ=ವಿಶ್ವಾಮಿತ್ರನು ತನ್ನ ಶಿಷ್ಯರ ಗುಂಪಿನತ್ತ ಒಮ್ಮೆ ಕಣ್ಣಾಡಿಸಿ ಗಮನಿಸಿ; **ಹುಸಿ ಅಸೂಯಾ ನೀಚವೃತ್ತಿ ನಿರ್ದಾಕ್ಷಿಣ್ಯ ನಿಷ್ಕರುಣ ಅನೀತಿಗಳಲಿ ಹೆಸರುಳ್ಳ ಹಿರಿಯ ನಕ್ಷತ್ರಕನ್ ಎನಿಪ್ಪ ಮಾನಿಸನ ಎಕ್ಕಟಿ ಕರೆದು**= ಸುಳ್ಳು, ಹೊಟ್ಟೆಕಿಚ್ಚು, ನೀಚತನದ ಕೆಲಸ, ತುಸುವಾದರೂ ಮಾನವೀಯತೆಯಿಲ್ಲದ ಕ್ರೂರತನ ಮತ್ತು ಅನೀತಿಯ ನಡೆನುಡಿಯಲ್ಲಿ ಹೆಸರಾಂತ ನಕ್ಷತ್ರಕನೆಂಬ ಹಿರಿಯ ಶಿಷ್ಯನನ್ನು ಏಕಾಂತಕ್ಕೆ ಕರೆದು; **ಕೈವಿಡಿದು ಕಿವಿಯೊಡ್ಡಿ, ವಸುಧಾಧಿಪತಿಯ ಬಳಿವಿಡಿದು ಕಳುಹಲು ಬುದ್ಧಿ ಕಲಿಸಿದನ್. ಅದ ಏನ್ ಪೊಗಳ್ವೆನು**=ನಕ್ಷತ್ರಕನ

ಕಯ್ಯನ್ನು ಹಿಡಿದುಕೊಂಡು, ಅವನ ಕಿವಿಯ ಬಳಿಯಲ್ಲಿ ಪಿಸುನುಡಿಯನ್ನಾಡುತ್ತ, ಹರಿಶ್ಚಂದ್ರನ ಜತೆಯಲ್ಲಿ ಕಳುಹಿಸಿಕೊಡುವ ಮುನ್ನ, ಅವನು ಹರಿಶ್ಚಂದ್ರನ ಜತೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ತರಬೇತಿಯನ್ನು ನೀಡಿದನು; ಅದನ್ನು ಏನೆಂದು ತಾನೆ ಬಣ್ಣಿಸಲಿ ಎಂದು ಕವಿಯು ಅಚ್ಚರಿಪಟ್ಟಿದ್ದಾನೆ;

ಕೊಡುವ ಒಡವೆ ಬರಲಿ ಬಾರದೆ ಕೆಡಲಿ=ಕೊಡಬೇಕಾದ ಸಂಪತ್ತು ಬರಲಿ ಬಾರದೆ ನಾಶವಾಗಲಿ ಅದರ ಬಗ್ಗೆ ನೀನು ಚಿಂತಿಸಬೇಡ; **ಕಾನನದ ನಡುವೆ ತಗಹಿನಲಿ ಇರಿಸಿ**=ಕಾಶಿ ಪಟ್ಟಣವನ್ನು ಬೇಗ ತಲುಪದಂತೆ ಕಾಡಿನ ಹಾದಿಯಲ್ಲಿ ಹರಿಶ್ಚಂದ್ರನನ್ನು ತಡೆದು ನಿಲ್ಲಿಸಿ; **ಕೆಲವು ದಿನ ಉಪವಾಸ ಪಡಿಸಿರ್ದು**=ಕೆಲವು ದಿನ ಅನ್ನ ಆಹಾರ ಸಿಗದಂತೆ ಮಾಡಿ ಉಪವಾಸದಿಂದ ನರಳುವಂತೆ ಮಾಡಿ; **ಕೆಲವು ದಿನ ದೇಹವನ್ ಒಲ್ಲೆಂದು ನೆವವೊಡ್ಡಿ**=ಕೆಲವು ದಿನ ನಿನ್ನ ದೇಹದ ಆರೋಗ್ಯ ಸರಿಯಿಲ್ಲವೆಂಬ ನೆಪವನ್ನು ಒಡ್ಡಿ; **ಕೆಲವು ದಿವಸ ನಡೆವಾಗ ದಾರಿ ತಪ್ಪಿಸಿ ತಿರಿಪಿ**= ಹೋಗುತ್ತಿರುವಾಗ ಕೆಲವು ದಿನ ಉದ್ದೇಶಪೂರ್ವಕವಾಗಿಯೇ ಕಾಶಿಯತ್ತಣ ದಾರಿಯನ್ನು ತಪ್ಪಿಸಿ, ಕಾಡಿನಲ್ಲಿಯೇ ದಾರಿಗಾಣದೆ ಸುತ್ತುವಂತೆ ಮಾಡಿ;

ಕೆಲವು ದಿನ ಪಡಿಯ ಬೀಯಕ್ಕೆ ಆಣೆಯಿಟ್ಟು=ಕೆಲವು ದಿನ ನಿನಗೆ ಪ್ರತಿನಿತ್ಯವೂ ಊಟಕ್ಕೆಂದು ಹರಿಶ್ಚಂದ್ರನು ಕೊಡಬೇಕಾಗಿರುವ ದಿನಸಿಗಾಗಿ ಇಲ್ಲಸಲ್ಲದ ತೊಂದರೆಯನ್ನು ಕೊಡುತ್ತ; **ಇಂತು ಕೆಲವು ದಿನ ಕೆಡಿಸಿ ನುಡಿದು**=ಈ ರೀತಿ ಕೆಲವು ದಿನ ಕಿರುಕುಳವನ್ನು ಕೊಡುವಂತೆ ನುಡಿಯುತ್ತಿದ್ದು; **ಅವಧಿಯು ಆಯ್ತೆಂದು ಧರೆ ಅರಿಯೆ ನೃಪನನ್ ಹುಸಿಕನ್ ಎನಿಸು**=ಹರಿಶ್ಚಂದ್ರನು ಹಣ ಸಂಪಾದನೆಗೆ ಕಾಶಿ ಪಟ್ಟಣವನ್ನು ತಲುಪದಂತೆ ಅಡ್ಡಿಪಡಿಸಿ, ನನ್ನಿಂದ ತೆಗೆದುಕೊಂಡಿರುವ ಅವಧಿಯಲ್ಲಿ ಸಾಲವನ್ನು ಅವನು ಕೊಡಲಾಗದಂತೆ ಮಾಡಿ, ಜಗತ್ತು ತಿಳಿಯುವಂತೆ ಹರಿಶ್ಚಂದ್ರನನ್ನು ಸುಳ್ಳುಗಾರನನ್ನಾಗಿ ಮಾಡು;

ಕರುಣಿಸದಿರ್ ಅನುಗೊಡದಿರ್ ಅಗಲದಿರು ಅನುಸರಿಸದಿರು ಬಟ್ಟೆಯೂರಲ್ ಎಡೆಗೆಯ್ಯದಿರು=ಕರುಣೆ ತೋರಿಸಬೇಡ; ಕಾಶಿ ಪಟ್ಟಣಕ್ಕೆ ಬೇಗ ಹೋಗಲು ಅವಕಾಶ ಕೊಡಬೇಡ; ಅರೆಗಳಿಗೆಯೂ ಹರಿಶ್ಚಂದ್ರನನ್ನು ಬಿಟ್ಟಿರಬೇಡ; ಹರಿಶ್ಚಂದ್ರನ ಒಳ್ಳೆಯ ನಡೆನುಡಿಗೆ ಮರುಳಾಗಿ ಅವನಂತಾಗಬೇಡ; ದಾರಿಯ ನಡುವೆ ನೆಮ್ಮದಿಯಿಂದ ತಂಗಲು ಅವಕಾಶವನ್ನು ಕೊಡಬೇಡ; **ಕಡೆಗೆ ಆವ ಪರಿಯೊಳ್ ಆವಾವ ನಿಗ್ರಹ ನಿರೋಧ ಆಯಾಸಪಡಸುವ ಅಂದದಿ ಮಾಳ್ಪುದು**= ಈ ಬಗೆಯ ಅಡ್ಡಿ ಆತಂಕಗಳಿಗೆ ಹರಿಶ್ಚಂದ್ರ ಬಗ್ಗದಿದ್ದರೆ, ಕೊನೆಗೆ ಯಾವ ಯಾವ ರೀತಿಯಲ್ಲಾದರೂ ಹರಿಶ್ಚಂದ್ರನನ್ನು ಕಾಡಿಸಿ ಪೀಡಿಸಿ ಅಡೆತಡೆಗಳನ್ನೊಡ್ಡಿ ಬಳಲಿಸುವ ರೀತಿಯಲ್ಲಿ ಹರಿಶ್ಚಂದ್ರನ ಮಾನಸಿಕ ಶಕ್ತಿಯನ್ನು ಕುಗ್ಗಿಸುವುದು;

ಗುರುಭಕ್ತನಾದಡೆ ಅತಿಬುದ್ಧಿಯುಳ್ಳವನಾದಡೆ ಅರಸನನ್ ಕೆಡಿಸಿ ಹುಸಿ ತೋರು ಎಂದಡೆ=ನಿಜಕ್ಕೂ ನೀನು ನನ್ನ ಶಿಷ್ಯನೇ ಆಗಿದ್ದರೆ, ಅತಿಬುದ್ಧಿಯುಳ್ಳವನಾಗಿದ್ದರೆ, ಹರಿಶ್ಚಂದ್ರನ ನಡೆನುಡಿಯಲ್ಲಿ ಕೆಟ್ಟದ್ದು ಕಾಣುವಂತೆ ಮಾಡಿ, ಅವನು ಸುಳ್ಳನ್ನಾಡುವಂತೆ ಮಾಡು ಎಂದು ವಿಶ್ವಾಮಿತ್ರನು ತನ್ನ ತೆರಕಾರನಿಗೆ ಹೇಳಿದಾಗ; **ದೇವ, ಎನಗೆ ಅವನ್ ಕರಗುವನೆ**=ಪೂಜ್ಯ ಗುರುವೇ, ನನಗೆ ಅವನು ಬಗ್ಗುವನೇ. ನಾನು ಹರಿಶ್ಚಂದ್ರನನ್ನು ಸುಳ್ಳುಗಾರನನ್ನಾಗಿ ಮಾಡಲು ಸಾಧ್ಯವೇ; **ನೇಮಕ್ಕೆ ನೀನಿರ್. ಆನ್ ಬಂದು ಕಾಡುವೆನ್**=ತೆರಕಾರನ ಜಾಗದಲ್ಲಿ ನೀನು ಇರು. ನಾನು ಬಂದು ಕೊಡಬಾರದ ಕಿರುಕುಳವನ್ನು ನೀಡುತ್ತೇನೆ;

ಬಿಸಿಲಾಗಿ ಬಿರುಗಾಳಿಯಾಗಿ ಕಲುನೆಲವಾಗಿ ವಿಷಮಾಗ್ನಿಯಾಗಿ ನಾನಾ ಕ್ರೂರ ಮೃಗವಾಗಿ ಮಸಗಿ ಘೋರಾರಣ್ಯವಾಗಿ ಗರ್ಜಿಸಿ=ಬಿಸಿಲಾಗಿ; ಬಿರುಗಾಳಿಯಾಗಿ; ಕಲ್ಲು ನೆಲವಾಗಿ; ಭಯಂಕರವಾದ ಬೆಂಕಿಯಾಗಿ; ಬಹುಬಗೆಯ ಕ್ರೂರ ಪ್ರಾಣಿಗಳಾಗಿ ಮೇಲೆ ಎರಗಿ, ಉಗ್ರವಾದ ಕಾಡಿನ ರೂಪದಲ್ಲಿ ಅಬ್ಬರಿಸಿ; **ಕವಿವ ಭೂತ ಬೇತಾಳರಾಗಿ**=ಮಯ್ ಮೇಲೆ ಎರಗುವ ಭೂತ ಬೇತಾಳರಾಗಿ;

ಹಸಿವು ನೀರಡಿಕೆ ನಿದ್ರಾಲಸ್ಯವಾಗಿ ಸಂದಿಸಿ ಹೋಗಿ=ಹಸಿವು, ಬಾಯಾರಿಕೆಯಿಂದ ತೊಳಲುತ್ತ, ನಿದ್ರೆಯಿಲ್ಲದೆ ನರಳುವ ಹಾಗೆ ಮಾಡಿ; **ಹೊಕ್ಕಲ್ಲಿ ಹೊಕ್ಕು ಧಾವತಿಗೊಳಿಸಿ ಭೂಭುಜನನ್ ಹುಸಿಗೆ ಹೂಂಕೊಳಿಸುವೆನ್**= ಹರಿಶ್ಚಂದ್ರನು ಅಡಿಯಿಟ್ಟ ಕಡೆಯಲ್ಲೆಲ್ಲಾ ಹೋಗಿ ಅವನು ಬಳಲುವಂತೆ ಮಾಡಿ, ಅವನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇನೆ; **ಎನ್ನಿಂದ ಬಲ್ಲಿದರ್ ಅದಾರ್ ಎಂದನು**=ನನಗಿಂತ ಬಲಶಾಲಿಗಳು ಅದು ಯಾರಿದ್ದಾರೆ ಎಂದು ವಿಶ್ವಾಮಿತ್ರನು ತನ್ನನ್ನು ತಾನೇ ಹೊಗಳಿಕೊಂಡನು; **ಈತನ್ ಈ ಬಂದನ್ ಬೇರೊಬ್ಬನಲ್ಲ**= ಹರಿಶ್ಚಂದ್ರನೇ, ಈಗ ನಿನ್ನೊಡನೆ ತೆರಕಾರನಾಗಿ ಬರುತ್ತಿರುವವನು ಯಾರೋ ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ;

ಆಯಾಸಕಾರನ್ ಅತಿಗರುವನ್ ಅತಿಸುಖಿ=ಈತ ಬಹುಬೇಗ ಬಳಲುತ್ತಾನೆ. ಅಂದರೆ ಹೆಚ್ಚಿನ ಕಷ್ಟಕ್ಕೆ ಆಳಲ್ಲ. ಯಾರಿಗೂ ತಲೆಬಾಗದವನು. ಬಹಳ ಸುಖದಲ್ಲಿ ಬೆಳದುಬಂದವನು; **ಈತನ್ ಎಂದುದಮ್ ಮೀರದಿರು**=ಈತನು ಹೇಳುವ ಮಾತುಗಳನ್ನು ಮೀರಿ ನಡೆಯಬೇಡ; **ಧನವ ಕೊಡು. ನಡೆ ಅರಸ ಹೋಗು ಎನಲು**=ಈತನ ಕಯ್ಗೆ ನನಗೆ ಕೊಡಬೇಕಾದ ಹಣವನ್ನು ಕೊಡು. ಇನ್ನು ನಿನ್ನ ಪಯಣವನ್ನು ಮುಂದುವರಿಸು. ಹರಿಶ್ಚಂದ್ರನೇ ಹೊರಡು ಎನ್ನಲು; **ಮುನಿವರನ ಚರಣಕೆ ಎರಗಿ**=ವಿಶ್ವಾಮಿತ್ರ ಮುನಿಯ ಪಾದಕ್ಕೆ ನಮಿಸಿ; **ನೀರೆ ಸತಿ, ಸುತ ಮಂತ್ರಿವೆರಸಿ ರಿಪುಬಲ ಸೂರೆಕಾರನ್ ಒಲವಿಮ್ ತಿರುಗಿ ನಡೆವಾಗ**=ಹೆಂಡತಿ

ಚಂದ್ರಮತಿ, ಮಗ ಲೋಹಿತಾಶ್ವ, ಮಂತ್ರಿ ಸತ್ಯಕೀರ್ತಿಯ ಜತೆಗೂಡಿ ಶತ್ರುರಾಜ ಸೇನಾಬಲವನ್ನು ಸದೆಬಡೆಯಬಲ್ಲ ಶೂರನಾದ ಹರಿಶ್ಚಂದ್ರನು ಪ್ರೀತಿಯಿಂದ ತಿರುಗಿ ಕಾಶಿಯತ್ತ ನಡೆಯುವಾಗ;

ಮಂದಿ ಬಾಯಾರುತ್ತ ಚೀರುತ್ತ ಗೋಳಿಡುತ್ತ ಅಳುತ ಎದ್ದು ನಡೆದುದು ಏನ್ ಬಣ್ಣಿಸುವೆನು=ಹರಿಶ್ಚಂದ್ರನ ಅಗಲಿಕೆಯನ್ನು ಸಹಿಸಲಾರದೆ ಪ್ರಜೆಗಳು ದೊಡ್ಡ ದನಿಯಲ್ಲಿ ಕೂಗುತ್ತ, ಕಿರುಚುತ್ತ, ಗೋಳಿಡುತ್ತ, ಅಳುತ್ತ ಹರಿಶ್ಚಂದ್ರನ ಜತೆಜತೆಯಲ್ಲಿಯೇ ತಾವು ಅಯೋಧ್ಯಾಪುರವನ್ನು ಬಿಟ್ಟು ಹೊರಟರು. ಪ್ರಜೆಗಳ ಪರಿತಾಪವನ್ನು ಏನೆಂದು ಬಣ್ಣಿಸಲಿ ಎಂದು ಕವಿಯು ಉದ್ಗರಿಸಿದ್ದಾನೆ; **ಜನಪತಿ ಹರಿಶ್ಚಂದ್ರನ್ ಎಲ್ಲವಮ್ ಮುನಿಗಿತ್ತು ಅರಣ್ಯಕ್ಕೆ ನಡೆವಾಗಲು**=ಪ್ರಜೆಗಳ ಮೆಚ್ಚಿನ ಒಡೆಯನಾದ ಹರಿಶ್ಚಂದ್ರನು ಸಕಲ ರಾಜ್ಯಸಂಪತ್ತೆಲ್ಲವನ್ನೂ ಮುನಿಗೆ ಕೊಟ್ಟು ಕಾಡಿನತ್ತ ನಡೆಯುತ್ತಿರುವಾಗ;

ಆ ಪುರಜನಮ್ ಪರಿಜನ ಜನನಿ ಹಿಂಗಿದ ಶಿಶುಗೆ... ಸಸಿ ಬಿಟ್ಟ ಕುಮುದಕ್ಕೆ ದಿನನಾಥನ್ ಉಳಿದ ಕಮಲಕ್ಕೆ... ನೆರೆ ಸಿರಿ ಸಮೆದ ಮನೆಗೆ... ಜೀವಮ್ ತೊಲಗಿದ ಒಡಲಿಂಗೆ ತೈಲವಿಂಗಿದ ದೀಪ್ತಿಗೆ... ಉದಕ ಅರತ ಘನ ತಟಾಕಕ್ಕೆ... ಫಲ ಇಳುಹಿದ ಮರಕ್ಕೆ ನೆಟ್ಟನೆ ಜೋಡಿಯಾದುದು=ಅಯೋಧ್ಯಾಪುರದ ಪ್ರಜೆಗಳ ಮತ್ತು ರಾಜಪರಿವಾರದವರ ಮಯ್ ಮನದ ಸಂಕಟವು ತಾಯಿಯನ್ನು ಕಳೆದುಕೊಂಡ ಮಗುವಿಗೆ; ಚಂದ್ರನಿಲ್ಲದೆ ಮುದುಡಿದ ನೀಲಿತಾವರೆಗೆ; ಸೂರ್ಯನಿಲ್ಲದೆ ಮುದುಡಿದ ಬಿಳಿಯ ತಾವರೆಗೆ; ಸಂಪೂರ್ಣವಾಗಿ ಸಿರಿಸಂಪದ ನಾಶವಾದ ಮನೆಗೆ; ಜೀವವಿಲ್ಲದ ದೇಹಕ್ಕೆ; ಎಣ್ಣೆಯಿಲ್ಲದ ದೀಪಕ್ಕೆ; ನೀರು ಬತ್ತಿದ ದೊಡ್ಡ ಸರೋವರಕ್ಕೆ; ಹಣ್ಣೆಲ್ಲವನ್ನೂ ಕುಯ್ದುಕೊಂಡು ಬರಿದಾಗಿರುವ ಮರಕ್ಕೆ ಸಮಾನವಾಗಿತ್ತು;

❖

ಪ್ರಸಂಗ–೧೪

ಕಾಳ್ಗಿಚ್ಚಿನ ಸುಳಿಯಲ್ಲಿ

ಮಂತ್ರಿ ಎಡೆವಿಡದೆ ದಾರಿ ಅರುಪಲು=ಹರಿಶ್ಚಂದ್ರನು ಅಯೋಧ್ಯಾ ನಗರದಿಂದ ಹೊರಟು ಕಾಶಿಯತ್ತ ಕಾಲ್ನಡಿಗೆಯಲ್ಲಿ ಹೋಗುತ್ತಿರುವಾಗ, ಮಂತ್ರಿ ಸತ್ಯಕೀರ್ತಿಯು ಮುಂದಾಗಿ ನಡೆದು ನಿರಂತರವಾಗಿ ದಾರಿಯನ್ನು ತೋರಿಸುತ್ತಿರಲು; **ಮುಂದೆ ಸುತನ್ ಎಡದ ದೆಸೆಯಲಿ ಹಿಂದೆ ನಿಜಾಂಗನೆ ಬರೆ**= ತನ್ನ ಮುಂದೆ ಮಗ ಲೋಹಿತಾಶ್ವ, ಎಡದ ಪಕ್ಕದಲ್ಲಿ ತುಸು ಹಿಂದೆ ಹೆಂಡತಿ ಚಂದ್ರಮತಿಯು ಬರುತ್ತಿರಲು; **ಭೂಮಿಯೊಡೆಯನ್ ಒಡವೆಗಳ ಒಡೆತನಂಗಳನ್ ಒಡಂಬಟ್ಟು ಮುನಿಗಿತ್ತ ಚಿಂತೆ ತನ್ನ ಬಿಡೆ**= ಹರಿಶ್ಚಂದ್ರನು ರಾಜ್ಯದ ಸಂಪತ್ತು ಮತ್ತು ಒಡೆತನವನ್ನು ಮುನಿ ವಿಶ್ವಾಮಿತ್ರನಿಗೆ ಕೊಡಬೇಕಾಗಿ ಬಂದ ಮತ್ತು ಅನಂತರ ನಡೆದ ಸಂಗತಿಗಳೆಲ್ಲವನ್ನೂ ತನ್ನ ಮನಸ್ಸಿನಿಂದ ತೆಗೆದುಹಾಕಿ; **ದಕ್ಷಿಣವ ಬಿಟ್ಟು "ದಕ್ಷಿಣಾರ್ಥಂಗಳಮ್ ಕೊಡುವೆನ್" ಎಂಬ ಉತ್ತರವನ್ ಉತ್ತರಿಸಲ್**= ದಕ್ಷಿಣದ ದಿಕ್ಕಿನಲ್ಲಿದ್ದ ಅಯೋಧ್ಯಾ ನಗರವನ್ನು ತೊರೆದು "ವಿಶ್ವಾಮಿತ್ರನಿಗೆ ಕೊಡಬೇಕಾಗಿರುವ ದಕ್ಷಿಣೆಯ ಸಂಪತ್ತನ್ನು ನಲವತ್ತು ದಿನಗಳ ಒಳಗೆ ಕೊಡುವೆನು" ಎಂದಿರುವ ತನ್ನ ಮಾತನ್ನು ಉಳಿಸಿಕೊಳ್ಳಲೆಂದು;

ಆರುವಮ್ ನೆರವನ್ ಹಾರದ ಧೀರ, ಉತ್ತರಮ್ ಪಿಡಿದು ಆ ಕಾಂತಾರದೊಳಗೆ

ನಡೆದನ್=ಯಾರಿಂದಲೂ ಸಹಾಯವನ್ನು ಬಯಸದ ಕೆಚ್ಚೆದೆಯ ವೀರನಾದ ಹರಿಶ್ಚಂದ್ರನು ಉತ್ತರ ದಿಕ್ಕಿನಲ್ಲಿದ್ದ ಕಾಶಿ ಪಟ್ಟಣದ ದಾರಿಯನ್ನು ಹಿಡಿದು, ನಡುವೆಯಿದ್ದ ಒಂದು ಕಾಡಿನೊಳಗೆ ಬರುತ್ತಿದ್ದನು; **ನಡೆಗೆಡುವ ಸುತನನ್ ಅಡಿಗೆ ಎತ್ತಿಕೊಂಬ**=ಎಡವಿ ಕೆಳಗೆ ಬೀಳುವ ಮಗನನ್ನು ಎತ್ತಿಕೊಳ್ಳುವ; **ನಿಜ ಸತಿಯನ್ ಅಡಿಗಡಿಗೆ ಬೋಳೈಪ**=ತನ್ನ ಹೆಂಡತಿಯನ್ನು ಹೆಜ್ಜೆಹೆಜ್ಜೆಗೂ ಸಂತಯಿಸುವ; **ಬಳಲುವ ಚಮೂಪತಿಯನ್ ಬಿಡದೆ ಅಡಿಗಡಿಗೆ ಉಪಚರಿಪ**=ನಡೆನಡೆದು ಆಯಾಸಗೊಳ್ಳುತ್ತಿರುವ ಮಂತ್ರಿಯನ್ನು ಮರೆಯದೆ ಮತ್ತೆ ಮತ್ತೆ ಆರಯಿಕೆ ಮಾಡುವ; **ಅತಿ ಬಿಸಿಲು ಗಾಳಿ ಕಲು ಮುಳು ಕ್ಷುತ್ ಪಿಪಾಸೆ ಜಾಡ್ಯತೆಗಳ್ ಎಂಬ ಇಂತಿವರ ಕಾಟದಿಮ್ ಮೊಳೆವ**=ಅತಿಯಾದ ಬಿಸಿಲು, ಗಾಳಿ, ಕಲ್ಲು ಮುಳ್ಳುಗಳಿಂದ ಕೂಡಿರುವ ಹಾದಿಯಲ್ಲಿ ಹಸಿವು ಬಾಯಾರಿಕೆಯ ಸಂಕಟದ ಬೇನೆಗಳೆಂಬ ನಿಸರ್ಗ ಸಹಜವಾದ ತೊಂದರೆಗಳಿಂದ ಹುಟ್ಟುವ;

ಚಿತ್ತದ ಆವೇಶದ ಅಗ್ರದ ಭರದಲಿ ಧಾವತಿಯನ್ ಅರಿಯದೆ=ಮನಸ್ಸಿನ ತೀವ್ರ ಉದ್ವೇಗದ ಸನ್ನಿವೇಶದಲ್ಲಿ ಉಂಟಾಗುತ್ತಿರುವ ದಣಿವನ್ನು ಲೆಕ್ಕಿಸದೆ; **ಭೂಮಿಪನ್ ಅಕಟಕಟ ಕಾಲಕ್ಕೆ ಕೈಮುಗಿಯುತ ನಡೆದನ್**=ಹರಿಶ್ಚಂದ್ರನು ಕಾಲಕ್ಕೆ ಕಯ್ ಮುಗಿಯುತ್ತ ನಡೆದನು. ಅಂದರೆ ಮಾನವ ಜೀವಿಯ ಬದುಕಿನಲ್ಲಿ ಯಾವ ಕಾಲಕ್ಕೆ, ಎಂತಹ ಸನ್ನಿವೇಶ ಒದಗಿಬರುವುದೋ, ಅದನ್ನು ಯಾರೂ ಮೊದಲೇ ಊಹಿಸಲಾಗದು ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ; **ಮಂದೈಪ ಬಿಸಿಲ ಬಿಸಿಯಿಮ್ ನೆತ್ತಿ**=ಸುಡುಸುಡುವ ಬಿಸಿಲ ಬಿಸಿಯಿಂದ ನಡುತಲೆ; **ನೆಲದ ಬಿಸಿಯಿಂದ ಕಾಲ್**=ಕಾದ ನೆಲದ ಬಿಸಿಯಿಂದ ಕಾಲು; **ಕಡೆಗಣೆಸಿ ಕವಿವ ಕಾದ ಎಲರ ಬಿಸಿಯಿಂದ ದೇಹಮ್**=ಎಲ್ಲೆಡೆಯಲ್ಲಿಯೂ ಆವರಿಸಿಕೊಂಡಿರುವ ಬಿಸಿಗಾಳಿಯ ತಾಪದಿಂದ ದೇಹ; **ಕ್ಷುಧಾ ಅನಲನ ಬಿಸಿಯಿಂದ ಒಳಗು**=ಹಸಿವಿನ ಬೆಂಕಿಯ ಸುಡುವಿಕೆಯಿಂದ ಹೊಟ್ಟೆ;

ತೃಷೆಯ ಬಿಸಿಯಿಂದ ಬಾಯಿ ಬೆಂದು ಬಿರಿದು=ಬಾಯಾರಿಕೆಯ ತಾಪದಿಂದ ಬಾಯಿ ಒಣಗಿ, ತುಟಿಗಳು ಒಡೆದು; **ಅರಳುತ್ತ ಸಾಯುತ್ತ ನೋಯುತ್ತ**=ಬಿಸಿಲಿನ ತಾಪಕ್ಕೆ ಇಡೀ ದೇಹವೇ ಸುಟ್ಟಂತಾಗಿ ಸಾಯುವಂತಾಗಿ ನೋವನ್ನು ತಿನ್ನುತ್ತ; **ನಿಂದು ನಡೆದು**=ಬಳಲಿ ಬೆಂಡಾಗಿ ನಿಂತು, **ಮತ್ತೆ ನಡೆಯುತ್ತ, ಅಳುಕುತ್ತ ಬಳುಕುತ್ತ ಬರಬರಲು**=ನಡುಗುತ್ತ ಸುಸ್ತಿನಿಂದ ಅತ್ತಿತ್ತ ಬಾಗುತ್ತ ಅವರೆಲ್ಲರೂ ಬರುತ್ತಿರಲು; **ಮುಂದೆ ಬಳಿಕ**=ಅನಂತರ; **ಅಕಟ... ನಿಷ್ಕರುಣ ಮುನಿ ನೆನೆದ ಕುಟಿಲದ ಕುಂದನು ಏನ್ ಪೊಗಳ್ವೆನ್**=ಅಯ್ಯೋ... ಕರುಣೆಯಿಲ್ಲದ ವಿಶ್ವಾಮಿತ್ರ ಮುನಿಯು ಚಿಂತಿಸಿ ಹೂಡಿದ ವಂಚನೆಯ ಹೀನ ಸಂಚನ್ನು ಏನೆಂದು ಹೇಳಲಿ ಎಂದು ಕವಿಯ ಉದ್ಗರಿಸಿದ್ದಾನೆ; **ದಾವಾನಲನ್ ಕುತ್ತುರಾಗಿರ್ದ ಹೆಮ್ಮೆಳೆಗಳಮ್ ಸುಡುತ=**

ವಿಶ್ವಾಮಿತ್ರನಿಂದ ಉರಿದೆದ್ದ ಕಾಳ್ಗಿಚ್ಚು ಪೊದೆಪೊದೆಯಾಗಿದ್ದ ದೊಡ್ಡ ಮೆಳೆಗಳನ್ನು ಸುಡುತ್ತ;

ಬೆಳೆವೆತ್ತ ಬೆಟ್ಟವ ಸೀಳ್ದು ಸೆಕ್ಕೆಗಳೆಯುತ್ತ=ದೊಡ್ಡ ದೊಡ್ಡ ಬಂಡೆಗಳಿಂದ ಕೂಡಿದ್ದ ಬೆಟ್ಟವನ್ನು ಸೀಳಿ, ಕಲ್ಲಿನ ಚೆಕ್ಕೆಗಳನ್ನು ಎಬ್ಬಿಸುತ್ತ; **ಹುಲುವೆತ್ತ ದರಿಗಳ ಕರಿಕುವರಿಸುತ್ತ**=ಆಳವಾದ ಹಳ್ಳಕೊಳ್ಳಗಳಲ್ಲಿ ದಟ್ಟವಾಗಿ ಬೆಳೆದಿದ್ದ ಹುಲ್ಲನ್ನು ಸುಟ್ಟು ಕರಿಕಲು ಮಾಡುತ್ತ; **ಬೆಳೆದ ಮರದ ಇಡುಕುರೊಳು ನಿಂದು ಉರುಹುತ**= ದೊಡ್ಡದಾಗಿ ಬೆಳೆದಿದ್ದ ಮರದ ಕೊಂಬೆರೆಂಬೆಗಳ ಪೊದರುಗಳಲ್ಲಿ ಹಬ್ಬಿ ಎಲ್ಲವನ್ನು ಸುಡುತ್ತ; **ಹೊತ್ತುತ್ತ ಹೊಗೆಯುತ್ತ ಹಬ್ಬುತ್ತ ಹರಿದು ನೆಗೆಯುತ್ತ**=ಕಾಳ್ಗಿಚ್ಚಿನ ಬೆಂಕಿಯು ಹತ್ತಿ ಉರಿಯುತ್ತ, ದಟ್ಟವಾದ ಹೊಗೆಯು ಕವಿದು ಹರಡಿಕೊಂಡು ಮುಂದೆ ಮುಂದೆ ಸಾಗಿ, ಬೆಂಕಿಯ ಕೆನ್ನಾಲಿಗೆಗಳು ಎತ್ತರೆತ್ತರಕ್ಕೆ ನೆಗೆಯುತ್ತ; **ಗಗನವನು ತುಡುಕುತ್ತ**= ಮುಗಿಲನ್ನು ಮುಟ್ಟುತ್ತ ಅಂದರೆ ಕಾಳ್ಗಿಚ್ಚಿನ ಬೆಂಕಿಯ ಪ್ರಮಾಣ ತುಂಬಾ ಹೆಚ್ಚಾಗಿ; **ಅಸತ್ಯಕಾಂತಾರ**=ಅಸತ್ಯವೆಂಬ ಕಾಡು; ದಾವಾನಲನ್=ಕಾಳ್ಗಿಚ್ಚಿನಂತೆ ಇರುವವನು;

ಅಸತ್ಯಕಾಂತಾರ ದಾವನಲನನ್=ಸುಳ್ಳು ಎನ್ನುವ ಕಾಡಿಗೆ ಬೆಂಕಿಯಂತಿರುವ ಹರಿಶ್ಚಂದ್ರ. ಅಂದರೆ ಸುಳ್ಳನ್ನು ನಾಶಮಾಡುವ ವ್ಯಕ್ತಿ; **ಮತ್ತೆ ಅಂತು ಅಸತ್ಯಕಾಂತಾರ ದಾವಾನಲನನು ಅಡಸಿ ಸುತ್ತ ಮುತ್ತಿತ್ತು**=ಮತ್ತೊಮ್ಮೆ ವಿಶ್ವಾಮಿತ್ರನು ಹುಟ್ಟುಹಾಕಿದ ಕಾಳ್ಗಿಚ್ಚು ಹರಿಶ್ಚಂದ್ರನನ್ನು ಆಕ್ರಮಿಸಿಕೊಂಡು ಸುತ್ತ ಮುತ್ತಿಕೊಂಡಿತು; **ಕಾಶಿಯನು ಮುಟ್ಟಿ ಹೊಕ್ಕವನಲ್ಲ**=ಕಾಶಿ ಪಟ್ಟಣವನ್ನು ತಲುಪಿದವನಲ್ಲ; **ಮುನಿ ರಿಣವ ಕೊಟ್ಟಾತನಲ್ಲ**=ಮುನಿ ರುಣವನ್ನು ತೀರಿಸಿದವನಲ್ಲ; **ದಾನದ ಭೂಮಿಯಿಂದ ಪೊರಮಟ್ಟಾತನಲ್ಲ**=ನಾನು ದಾನವಾಗಿ ಕೊಟ್ಟ ನನ್ನ ರಾಜ್ಯದ ಎಲ್ಲೆಯಿಂದ ಹೊರಹೋದವನಲ್ಲ; **ಆಯು ತುಂಬಿ ಮಡಿದವನಲ್ಲ**=ಆಯುಸ್ಸು ತುಂಬಿ ಸತ್ತವನಲ್ಲ; **ಹೋಹಡೆ ಆನ್ ಒಬ್ಬನ್ ಅಸುವ ಬಿಟ್ಟಾತನಲ್ಲ**=ಸಾಯೋಣವೆಂದರೆ ನಾನು ಒಬ್ಬನೇ ಪ್ರಾಣವನ್ನು ಬಿಟ್ಟಾತನಲ್ಲ;

ನಿಜ ಸತಿ ಸುತರ್ ಮಂತ್ರಿ ಸಹ ನಟ್ಟಡವಿಯೊಳಗೆ ದಳ್ಳುರಿ ಹೊಯ್ದು ದುರ್ಮರಣವಟ್ಟು ಹೋಹಂತೆ ಆದುದೇ ಎಂದು ನೃಪತಿ ಮರುಗುತ್ತ ಮತ್ತೆ ಇಂತು ಎಂದನು=ತನ್ನ ಹೆಂಡತಿ ಮಗ ಮಂತ್ರಿಯೂ ಕೂಡ ನನ್ನಿಂದಾಗಿ ಕಾಡಿನ ನಡುವೆ ಕಾಳ್ಗಿಚ್ಚಿನ ಉರಿ ಹೊಡೆದು, ದುರಂತ ಮರಣವನ್ನು ಹೊಂದಿ ನಾಶವಾಗುವಂತೆ ಆಯಿತಲ್ಲವೇ ಎಂದು ಹರಿಶ್ಚಂದ್ರನು ಸಂಕಟಪಡುತ್ತ, ಮತ್ತೆ ಈ ರೀತಿ ನುಡಿದನು; **ಕಡಗಿ ಕರ್ಬೊಗೆ ಸುತ್ತಿ**=ಜೋರಾಗಿ ಬೀಸುತ್ತಿರುವ ಗಾಳಿಯ ರಭಸದಿಂದ ಕಪ್ಪನೆಯ ಹೊಗೆಯು ಸುತ್ತಿಕೊಂಡು; **ದಳ್ಳುರಿಗಳ್ ಅಲೆದು**=ಕಾಳ್ಗಿಚ್ಚಿನ ಕೆನ್ನಾಲಿಗೆಯ ಜ್ವಾಲೆಗಳು ಎಲ್ಲೆಡೆ ಹಬ್ಬುತ್ತ;

ಕೆಂಗಿಡಿ ಕೆದರಿ=ಬೆಂಕಿಯ ಕೆಂಪನೆಯ ಕಿಡಿಗಳು ಎಲ್ಲೆಡೆ ಚೆಲ್ಲಾಪಿಲ್ಲಿಯಾಗಿ ಹರಡುತ್ತಿರಲು; **ಕೆಂಡಂಗಳ್ ಅಡಸಿ ಸುಡೆ**=ಕೆಂಡದ ಉಂಡೆಗಳು ಮೇಲೆ ಬಿದ್ದು ಸುಡುತ್ತಿರಲು; **ಮಿಡುಮಿಡುನೆ ಮಿಡುಕಿ**=ಬೆಂಕಿಯ ತಾಪದಿಂದ ಬೆಂದು, ಜೀವ ಭಯದಿಂದ ಗಡಗಡನೆ ನಡುಗುತ್ತ; **ಬಾಯ್ಬಿಟ್ಟು ಒರಲಿ ಕೆಡೆದು**=ನೋವಿನಿಂದ ನರಳಿ ಚೀರುತ್ತ ಕೆಳಕ್ಕೆ ಉರುಳಿಬಿದ್ದು; **ಒಡಲು ಮಡಿದು**=ಮಯ್ ಸುಟ್ಟು ಜೀವ ಹೋಗಿ; **ಕೈಕಾಲ್ ಬೆಂದು**=ಕಾಳ್ಗಿಚ್ಚಿನ ದೊಡ್ಡ ಉರಿಯಲ್ಲಿ ಕಯ್ ಕಾಲು ಬೆಂದು; **ಸುಕ್ಕಿ ಸುಗಿದು**=ಮಯ್ ಮೇಲಣ ತೊಗಲು ಸುಟ್ಟು, ಮುರುಟಿಕೊಂಡು, ಜೋಲು ಬಿದ್ದು ನೇತಾಡುತ್ತ; **ಮಡದಿ ಸುತರ್ ಅಳಿವುದನು ಕಣ್ಣಾರೆ ಕಂಡು**=ನನ್ನ ಹೆಂಡತಿ ಮಕ್ಕಳು ಸಾಯುವುದನ್ನು ಕಣ್ಣಾರೆ ಕಂಡು; **ನಾನ್ ಕಡೆಯಲಿ ಅಳಿವುದರಿಂದ ಮುನ್ನ**=ನೀವೆಲ್ಲರೂ ಸಾಯುವುದಕ್ಕಿಂತ ಮುಂಚೆ;

ಈ ಬೇಗೆಯೊಳಗೆ ಅಡಗುವೆನ್=ಈ ಕಾಳ್ಗಿಚ್ಚಿನಲ್ಲಿ ನಾನು ಸಾವನ್ನಪ್ಪುತ್ತೇನೆ; **ಹಿಡಿಯಬೇಡ ಉಮ್ಮಳಿಸಬೇಡ ಎಂದು ನೃಪ ಬೀಳಲು ಅನುವಾದನು**=ನನ್ನನ್ನು ತಡೆಯಬೇಡ ಚಿಂತೆಯಿಂದ ಕಂಗಾಲಾಗಬೇಡ ಎಂದು ಹೇಳುತ್ತ, ಕಾಳ್ಗಿಚ್ಚಿನ ಬೆಂಕಿಯಲ್ಲಿ ಬೀಳಲು ಸಿದ್ಧನಾದನು; **ಭೂಭುಜ, ಮುಳಿದು ಮೊಗೆದು ಎಲ್ಲರಮ್ ಕೊಲ್ಲದೆ ಇಂದು ಎನ್ನನ್ ಒಬ್ಬಳನ ಕೊಂದಪುದೆ**=ರಾಜನೇ, ದಗದಗಿಸಿ ಉರಿಯುತ್ತಿರುವ ಈ ಕಾಳ್ಗಿಚ್ಚು ಕೆರಳಿ ಹಬ್ಬಿ ಆಕ್ರಮಿಸಿಕೊಂಡು ನಮ್ಮೆಲ್ಲರನ್ನೂ ಕೊಲ್ಲದೆ, ಈಗ ನನ್ನೊಬ್ಬಳನ್ನು ಮಾತ್ರ ಕೊಲ್ಲುವುದೆ; **ನಿಮ್ಮ ಕೂಡ ಸರಿಯೊಳು ಜೀವವಮ್ ಬಿಡುವುದು ಉಚಿತವಲ್ಲಮ್**=ನಿಮ್ಮ ಜತೆಯಲ್ಲಿಯೇ ನಾನು ಜೀವವನ್ನು ಬಿಡುವುದು ಸರಿಯಲ್ಲ;

ಬಳಿಕ ಬಿಡುವುದು ಅತ್ಯಧಮತನವು=ನೀವು ಸತ್ತ ನಂತರ ನಾನು ಸಾಯುವುದು ಅತ್ಯಂತ ನೀಚತನ. ಏಕೆಂದರೆ ನನ್ನ ಕಣ್ಣ ಮುಂದೆ ನೀವು ಸಾಯುವುದನ್ನು ನಾನು ನೋಡಲಾರೆ; **ಮುತ್ತೈದೆತನ**=ಮದುವೆಯಾದ ಒಂದು ಹೆಣ್ಣು ತಾನು ಸಾಯುವತನಕ ಗಂಡನೊಡನೆ ಬಾಳುವುದು; **ಮುತ್ತೈದೆತನದಲಿ ಮುಂದೆ ಹೋದಪೆನ್ ಕಳುಹಿಕೊಡಬೇಕು ಎಂದು ಗಂಡನನ್ ಪತಿವ್ರತೆಯರ ಆನಂದನಿಧಿ ಚಂದ್ರಮತಿ ಲಲ್ಲೆಗರೆದು ಮೆಯ್ಯಿಕ್ಕಿ ಬೇಡಿಕೊಂಡಳು**=ನೀವು ಜೀವಂತವಾಗಿ ಇರುವಾಗಲೇ ಮುತ್ತಯ್ದೆಯಾಗಿ ನಾನು ಮೊದಲು ಸಾಯುತ್ತೇನೆ. ಆದ್ದರಿಂದ ಕಾಳ್ಗಿಚ್ಚಿಗೆ ಮೊದಲು ಆಹುತಿಯಾಗಲು ನನಗೆ ಅನುಮತಿಯನ್ನು ಕೊಡಿ ಎಂದು ನುಡಿದು, ಪತಿವ್ರತೆಯ ಪಾಲಿಗೆ ಆನಂದದ ಸಂಪತ್ತಿನಂತಿರುವ ಚಂದ್ರಮತಿಯು ಹರಿಶ್ಚಂದ್ರನನ್ನು ಒಲವಿನಿಂದ ಮುದ್ದಾಡಿ, ನಮಸ್ಕರಿಸಿ ಬೇಡಿಕೊಂಡಳು; **ದೆಸೆಗಳಿಗೆ ನಮಿಸಿ, ದೈವಕ್ಕೆ ಎರಗಿ, ರವಿಗೆ ವಂದಿಸಿ**=ಚಂದ್ರಮತಿಯು ಎಲ್ಲ ದಿಕ್ಕುಗಳಿಗೆ ನಮಿಸಿ, ದೇವರಿಗೆ ಅಡ್ಡಬಿದ್ದು, ಸೂರ್ಯನಿಗೆ ನಮಸ್ಕರಿಸಿ;

ಕೋಟಿ ಭವಭವದೊಳ್ ಎನಗೆ ಈ ಹರಿಶ್ಚಂದ್ರ ವಸುಧೇಶನೇ ಗಂಡನಾಗಲಿ=ನನ್ನ ಇನ್ನು ಮುಂದಿನ ಕೋಟಿಗಟ್ಟಲೆ ಜನ್ಮಜನ್ಮಗಳಲ್ಲಿ ನನಗೆ ಈ ಹರಿಶ್ಚಂದ್ರ ರಾಜನೇ ಗಂಡನಾಗಲಿ; **ದಿಟಮ್ ಲೋಹಿತಾಶ್ವನೇ ಮಗನಾಗಲಿ**=ನಿಜವಾಗಿಯೂ ಲೋಹಿತಾಶ್ವನೇ ಮಗನಾಗಿ ಹುಟ್ಟಲಿ; **ವಸುಸತ್ಯಕೀರ್ತಿಯೇ ಮಂತ್ರಿಯಾಗಲಿ**=ಉತ್ತಮನಾದ ಸತ್ಯಕೀರ್ತಿಯೇ ಮಂತ್ರಿಯಾಗಲಿ; **ತರುಣ ಶಶಿಮೌಳಿಯೇ ದೈವವಾಗಲಿ**=ಎಳೆಯ ಚಂದ್ರನನ್ನು ಮುಡಿಯಲ್ಲಿ ತೊಟ್ಟಿರುವ ಶಿವನೇ ದೇವರಾಗಲಿ; **ಎಮ್ಮ ಇಳೆಯ ಪಾಲಿಸುವ ವಿಶ್ವಾಮಿತ್ರ ನಿತ್ಯನಾಗಲಿ ಎನುತ ಬೇಡಿಕೊಂಡು ಇಂತು ಎಂದಳು**=ಈಗ ನಮ್ಮ ರಾಜ್ಯವನ್ನು ಆಳುತ್ತಿರುವ ವಿಶ್ವಾಮಿತ್ರ ರಾಜನು ಎಂದೆಂದಿಗೂ ಒಡೆಯನಾಗಿರಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತ, ಈ ರೀತಿ ಮತ್ತೆ ನುಡಿದಳು;

ಪೊಡವೀಶ ಕೇಳ್=ರಾಜನೇ ಕೇಳು; **ಉಭಯ ಕುಲ ಶುದ್ಧೆಯಲ್ಲದಿರ್ದಡೆ**=ನಾನು ಹುಟ್ಟಿ ಬೆಳೆದ ತಾಯಿ ತಂದೆಯ ಮನೆತನ ಮತ್ತು ಮದುವೆಯಾಗಿ ಬಂದ ಗಂಡನ ಮನೆತನಗಳೆರಡರಲ್ಲಿಯೂ ಒಳ್ಳೆಯ ನಡೆನುಡಿಯಿಂದ ನಾನು ಬಾಳದಿದ್ದಲ್ಲಿ; **ನಿನ್ನನಲ್ಲದೆ ಅನ್ಯರನು ಲೆಕ್ಕಿಸಿದೆನಾದಡೆ**=ನಿನ್ನನ್ನಲ್ಲದೆ ಇತರ ಗಂಡಸರನ್ನು ನಾನು ಮನದಲ್ಲಿ ಬಯಸಿದ್ದರೆ; **ಹಿಂದೆ ನಿನಗೆ ಒಂದನ್ ಇಕ್ಕಿ ನಾನೊಂದನ್ ಉಂಡಡೆ**=ಸಂಸಾರವನ್ನು ನಡೆಸುವಾಗ ನಿನಗೆ ಸಾಮಾನ್ಯ ವಾದುದನ್ನು ಉಣಲಿಕ್ಕಿ, ನಾನು ರುಚಿಕರವಾದುದನ್ನು ಉಂಡಿದ್ದರೆ; **ಮೂರು ಕರಣವರಿಯೆ ಮೃಡನಲ್ಲದೆ ಅನ್ಯದೈವಕ್ಕೆ ನಮಿಸಿದಡೆ, ದಾವಾಗ್ನಿ ಎನ್ನ ಹೊಡೆದು ಮುಕ್ಕುವುದು ಮೇಣ್ ಅಲ್ಲದಿರ್ದಡೆ ಬಟ್ಟೆಗೊಟ್ಟಪುದು ಕೇಳ್ ಎಂದು ಬೊಬ್ಬೆಗೊಡುವ ಆ ಪೊತ್ತನ್ ಏನ್ ಪೊಗಳ್ವೆನು**=ಕಾಯ(ದೇಹ)–ವಾಚಾ (ಮಾತು)–ಮನಸಾ(ಮನಸ್ಸು) ಶಿವನಲ್ಲದೆ ಬೇರೆ ದೇವರಿಗೆ ನಮಿಸಿದ್ದರೆ, ಕಾಳ್ಗಿಚ್ಚು ನನ್ನನ್ನು ಅಪ್ಪಳಿಸಿ ಸುಟ್ಟು ಬೂದಿಮಾಡುವುದು ಇಲ್ಲವೇ ನಾನು ಕೆಟ್ಟ ನಡೆನುಡಿಯವಳಲ್ಲ ದಿದ್ದರೆ ನಮ್ಮೆಲ್ಲರಿಗೂ ದಾರಿಯನ್ನು ಬಿಡುವುದು ಕೇಳು ಎಂದು ದೊಡ್ಡ ದನಿಯಲ್ಲಿ ಚಂದ್ರಮತಿಯು ಹರಿಶ್ಚಂದ್ರನಿಗೆ ಹೇಳುತ್ತ, ಕಾಳ್ಗಿಚ್ಚಿನ ಜ್ವಾಲೆಯತ್ತ ನಡೆಯುತ್ತಿರುವ ಆ ಸನ್ನಿವೇಶವನ್ನು ಏನೆಂದು ಬಣ್ಣಿಸಲಿ ಎಂದು ಕವಿಯು ಉದ್ಗರಿಸಿದ್ದಾನೆ;

ತರುಣಿಯ ಮನಮ್ ಬೆದರಬೇಕೆಂದು ದಳ್ಳುರಿ ನೆಗೆದು ಗಗನಮಮ್ ತೀವಿ ಸುತ್ತಿ ಮುತ್ತಿರೆ ಕಂಡು ಹರಿದು ಹೊಕ್ಕಳು ಹೊಕ್ಕಳ್=ಚಂದ್ರಮತಿಯ ಮನದಲ್ಲಿ ಸಾವಿನ ಹೆದರಿಕೆಯನ್ನುಂಟುಮಾಡಲೆಂದು ದಗದಗನೆ ಉರಿಯುತ್ತಿರುವ ಬೆಂಕಿಯ ದೊಡ್ಡ ಜ್ವಾಲೆಗಳು ಮೇಲಕ್ಕೆ ಹಾರಿ, ಮುಗಿಲನ್ನು ಕವಿದುಕೊಂಡು, ಎಲ್ಲೆಡೆ ಹಬ್ಬುತ್ತಿರಲು ಚಂದ್ರಮತಿಯು ಅದನ್ನು ಕಂಡು ಅದರೊಳಕ್ಕೆ ನುಗ್ಗಿದಳು;

ಎಲೆಲೆ ಶಿವಶಿವ ಮಹಾದೇವ ಬಗೆಯದೆ ಹೊಕ್ಕಡೆ=ಅಬ್ಬಬ್ಬಾ ಶಿವ... ಶಿವ... ಮಹಾದೇವ ಚಂದ್ರಮತಿಯು ಬೆಂಕಿಯ ತಾಪವನ್ನಾಗಲಿ ಇಲ್ಲವೇ ತನ್ನ ಸಾವನ್ನಾಗಲಿ ಲೆಕ್ಕಿಸದೆ ಉರಿಯುತ್ತಿರುವ ಜ್ವಾಲೆಗಳ ಒಳಕ್ಕೆ ನುಗ್ಗಿದಾಗ;

ತರುಣ ಸೂರ್ಯನ್ ಕತ್ತಲೆಯನೆ ಹೊಕ್ಕಂತಾಯ್ತು=ಉದಯಕಾಲದಲ್ಲಿ ಬೆಳಕಿನ ಹೊಂಗಿರಣಗಳನ್ನು ಹರಡುತ್ತ ಮೂಡಿಬರುವ ಸೂರ್ಯನು ಕವಿದಿರುವ ಕತ್ತಲನ್ನು ಹೊಕ್ಕಂತೆ ಆಯಿತು. ಅಂದರೆ ಕತ್ತಲೆಯು ಅರೆಗಳಿಗೆಯಲ್ಲಿ ಇಲ್ಲವಾಯಿತು. ಸೂರ್ಯನಂತೆ ತೇಜಸ್ವಿನಿಯಾದ ಚಂದ್ರಮತಿಯು ಬೆಂಕಿಯ ಜ್ವಾಲೆಗಳ ನಡುವೆ ಹೋಗುತ್ತಿದ್ದಂತೆಯೇ, ಕಾಳ್ಗಿಚ್ಚು ಅಡಗಿತು ಎಂಬ ರೂಪಕದ ತಿರುಳಿನಲ್ಲಿ ಈ ನುಡಿಗಳು ಬಳಕೆಗೊಂಡಿವೆ; **ಭಾಪುರೆ**=ಮೆಚ್ಚುಗೆಯನ್ನು ಸೂಚಿಸುವಾಗ ಹೇಳುವ ಪದ; **ನೆರೆದ ಕೌಶಿಕನ ಕೃತಕಾಗ್ನಿ ಹರೆದೋಡಿ ಬಟ್ಟೆಗೊಟ್ಟುದು ಎಂಬಾಗಳ್ ಭಾಪುರೆ ಉತ್ತಮರ ಮುಂದೆ ಆವ ಠಕ್ಕು ಇರಲಾಪುದು**=ಚಂದ್ರಮತಿಯ ಸುತ್ತಲೂ ಮುತ್ತಿಕೊಂಡು ಉರಿಯುತ್ತಿದ್ದ ವಿಶ್ವಾಮಿತ್ರನು ಹುಟ್ಟುಹಾಕಿದ ಬೆಂಕಿಯು ಚದುರಿ ನಂದಿಹೋಗಿ, ದಾರಿಯನ್ನು ಬಿಟ್ಟುಕೊಟ್ಟಿತು. ಭಾಪುರೆ ಒಳ್ಳೆಯವರ ಮುಂದೆ ಯಾವ ಕಪಟತನ ತಾನೆ ನಿಲ್ಲಬಲ್ಲುದು;

ಸುರರ ಹೂಮಳೆಯ ತಂಪಿಮ್ ನೆಲನ ಬಿಸಿಯಾರಿತು=ಮುಗಿಲಿನಿಂದ ದೇವತೆಗಳು ಸುರಿಸಿದ ಹೂಮಳೆಯ ತಂಪಿನಿಂದ ನೆಲದ ಬಿಸಿಯು ಆರಿ ತಣ್ಣಗಾಯಿತು; **ಉರಿಯ ನೆವದಿಮ್ ಸತಿಯ ಶುಚಿತನವನ್ ಅರಿದು ಸಂತಸದಲಿ ಭೂವರನ್ ಅಪ್ಪಿದನ್**=ಕಾಳ್ಗಿಚ್ಚಿನ ಸನ್ನಿವೇಶದಿಂದಾಗಿ ಮಡದಿಯ ಒಳ್ಳೆಯ ನಡತೆಯನ್ನು ಮನದಟ್ಟುಮಾಡಿಕೊಂಡ ಹರಿಶ್ಚಂದ್ರನು ಒಲವು ನಲಿವಿನಿಂದ ಚಂದ್ರಮತಿಯನ್ನು ತಬ್ಬಿಕೊಂಡನು; **ಮಂತ್ರಿ ಎರಗಿದನ್**=ಮಂತ್ರಿ ಸತ್ಯಕೀರ್ತಿಯು ಚಂದ್ರಮತಿಗೆ ನಮಸಿದನು; **ಸುತನು ನಲಿದಾಡಿದನ್**=ಮಗ ಲೋಹಿತಾಶ್ವನು ಹಿಗ್ಗಿನಿಂದ ಕುಣಿಕುಣಿದಾಡಿದನು;

ಹರಕೃಪೆಯೊಳ್ ಅಗ್ನಿಭಯ ಎಂತಕ್ಕಿದು ಒಮ್ಮಿಂಗೆ ಪರಿಹರಿಸಿತು=ಶಿವನ ಅನುಗ್ರಹದಿಂದ ಬೆಂಕಿಯ ಅನಾಹುತ ಹೇಗೋ ಒಮ್ಮೆಲೆ ನಿವಾರಣೆಗೊಂಡಿತು; **ಉಗ್ರಮುನಿಗೆ ಇತ್ತ ಅವಧಿ ಸನಿಹವಾಯ್ತು**=ಭಯಂಕರನಾದ ಮುನಿಯು ಸಾಲ ತೀರಿಸಲು ಕೊಟ್ಟಿರುವ ಕಾಲಾವಕಾಶವು ಹತ್ತಿರ ಬರುತ್ತಿದೆ; **ಇರಬಾರದು. ಉರವಣಿಸಿ ನಡೆ ನಡೆ ಎನುತ್ತ ಹರಿತಂದು ವಿಂಧ್ಯವ ಕಳಿದರು**=ಇಲ್ಲಿಯೇ ನಿಲ್ಲಬಾರದು. ಬೇಗ ಬೇಗ ನಡೆಯಿರಿ ಎಂದು ಹರಿಶ್ಚಂದ್ರನು ಎಲ್ಲರನ್ನು ಎಚ್ಚರಿಸುತ್ತ, ಮುಂದೆ ಮುಂದೆ ಸಾಗಿ, ವಿಂದ್ಯ ಪರ್ವತದ ಪ್ರಾಂತ್ಯವನ್ನು ದಾಟಿದರು;

❖

ಪ್ರಸಂಗ–೧೫

ಕಾಶಿ ನಗರದಲ್ಲಿ ಹರಿಶ್ಚಂದ್ರ

ಹಲವು ನಗರಂಗಳಮ್ ಹಲವು ಅರಣ್ಯಂಗಳಮ್ ಹಲವು ಗಿರಿಗಳ ಕಳಿದು ನಡೆತರಲು=ಹಲವು ನಗರಗಳನ್ನು, ಕಾಡುಗಳನ್ನು ಮತ್ತು ಬೆಟ್ಟಗಳನ್ನು ದಾಟಿಕೊಂಡು ಸತಿ ಸುತ ಮಂತ್ರಿಯ ಜತೆಗೂಡಿ ಹರಿಶ್ಚಂದ್ರನು ಕಾಶಿ ನಗರದತ್ತ ನಡೆದುಬರುತ್ತಿರಲು; **ಮುಂದೆ ಘುಳುಘುಳು ಧ್ವಾನದಿಂದೆ ಎಸೆವ ಗಂಗಾನದಿ**= ಮುಂದೆ ಗುಳುಗುಳು ದನಿಯನ್ನು ಮಾಡುತ್ತ ತುಂಬಿ ಹರಿಯುತ್ತ ಕಂಗೊಳಿಸುತ್ತಿರುವ ಗಂಗಾನದಿಯು ಕಂಡುಬಂದಿತು; ಕವಿಯು ಇನ್ನು ಮುಂದಿನ ಕೆಲವು ಪದ್ಯಗಳಲ್ಲಿ ಗಂಗಾ ನದಿಯ ಬಗ್ಗೆ ಇಂಡಿಯಾ ದೇಶದ ಜನಮಾನಸದಲ್ಲಿರುವ ನಂಬಿಕೆಗಳನ್ನು ರೂಪಕದ ನುಡಿಗಳ ಮೂಲಕ ಚಿತ್ರಿಸಿದ್ದಾನೆ; ನುತ=ಹೊಗಳಿದ/ಪ್ರಸಿದ್ಧವಾದ; ಕಲಿ=ಕಲಿಯುಗ; ಮಲ=ಪಾಪ; ಕುಲ+ಅಪಕರ್ಷಣೆ; ಕುಲ=ರಾಶಿ; ಅಪಕರ್ಷಣ=ಕುಗ್ಗಿಸುವುದು; ಆನು=ನಾನು;

ನುತ ಕಲಿಮಲಕುಲಾಪಕರ್ಷಣೆ ಆನು=ಕಲಿಯುಗದಲ್ಲಿ ಜನರ ಪಾಪದ ರಾಶಿಯನ್ನು ನಿವಾರಿಸುವವಳು ನಾನು ಎಂದು ಹೆಸರನ್ನು ಪಡೆದಿದ್ದೇನೆ; **ವಿಪುಳ ಪಾತಕ ಕೋಟಿ ಕೋಟಿಯೆಂಬ ಜಲಜವನ ಚಂದ್ರಕಳೆ ಆನು**=ಅತಿ ಹೆಚ್ಚಾದ ಪಾತಕವೆಂಬ ಬಿಳಿಯ ತಾವರೆಯ ವನಕ್ಕೆ ಚಂದ್ರಕಾಂತಿಯು ನಾನು. ಇದೊಂದು ರೂಪಕ. ಚಂದ್ರನು ಮೂಡುತ್ತಿದ್ದಂತೆಯೇ ಬಿಳಿಯ ತಾವರೆಗಳು ಮುದುಡಿ ಕೊಳ್ಳುತ್ತವೆ. ಅಂತೆಯೇ ಗಂಗೆಯನ್ನು ನೋಡುತ್ತಿದ್ದಂತೆಯೇ ಜನರ ಪಾಪಗಳು

ಇಲ್ಲವಾಗುತ್ತವೆ; ಭವ=ಹುಟ್ಟು; ಕುಧರ=ಬೆಟ್ಟ; ಕುಲಿಶ+ಅಭಿದಾನ; ಕುಲಿಶ=ಇಂದ್ರನ ಬಳಿ ಇರುವ ವಜ್ರಾಯುಧ. ಇದು ಬೆಟ್ಟಗಳನ್ನು ನಾಶಮಾಡಬಲ್ಲ ಆಯುಧ; ಅಭಿಧಾನ=ಹೆಸರು;

ಭವಭಯ ಕುಧರ ಕುಲಿಶಾಭಿಧಾನೆಯು ಆನ್=ಮತ್ತೆ ಮತ್ತೆ ಮರುಹುಟ್ಟನ್ನು ಪಡೆಯುತ್ತಿರುವ ಮಾನವ ಜೀವಿಗಳ ಹೆದರಿಕೆಯೆಂಬ ಬೆಟ್ಟಗಳ ರೆಕ್ಕೆಗಳನ್ನು ಕತ್ತರಿಸಿಹಾಕುವ ವಜ್ರಾಯುಧವೆಂಬ ಹೆಸರನ್ನು ಪಡೆದವಳು ನಾನು. ಅಂದರೆ ನನ್ನನ್ನು ನೋಡಿದವರಿಗೆ ಮತ್ತು ನನ್ನಲ್ಲಿ ಮಿಂದವರಿಗೆ ಮರುಹುಟ್ಟು ಇರುವುದಿಲ್ಲ. ಅವರೆಲ್ಲರೂ ಹುಟ್ಟು ಸಾವಿನ ಸುಳಿಯಿಂದ ಪಾರಾಗಿ ಮುಕ್ತಿಯನ್ನು ಪಡೆಯುತ್ತಾರೆ; **ಎಂದು ಧರೆಗೆ ಅರುಪಲೆಂದು ಉಲಿವಂತೆ ವಿರಾಜಿಸಿದಳು**= ಎನ್ನುವುದನ್ನು ಜಗತ್ತಿಗೆ ತನ್ನ ಮಹಿಮೆಯನ್ನು ತಿಳಿಸಲೆಂದು ದನಿ ಮಾಡುತ್ತಿರುವಂತೆ ಹರಿಯುತ್ತ ಗಂಗೆಯು ಕಂಗೊಳಿಸಿದಳು; **ಆರಾದಡು ಬಿಡೆ ಕೇಳ್ದಡೆ ಅಘಹರಮ್**=ಯಾರೇ ಆದರೂ ಗಂಗೆಯಾದ ನನ್ನ ಮಹಿಮೆಯನ್ನು ಬಿಡದೆ ಕೇಳಿದರೆ, ಅವರು ಮಾಡಿದ್ದ ಪಾಪವೆಲ್ಲವೂ ತೊಲಗುತ್ತದೆ;

ನೆನೆಯೆ ಪುಣ್ಯೌಘ=ನನ್ನನ್ನು ನೆನೆದರೆ ಪುಣ್ಯದ ರಾಶಿ ದೊರೆಯುತ್ತದೆ; **ನುಡಿದಡೆ ಸರ್ವಸಿದ್ಧಿ**=ನನ್ನ ಬಗ್ಗೆ ಮಾತನಾಡಿದರೆ ವ್ಯಕ್ತಿಯ ಜೀವನದ ಎಲ್ಲ ಬಯಕೆಗಳು ಈಡೇರುತ್ತವೆ; **ಕಂಡಡೆ ಜನ್ಮ ನಾಶ**=ನನ್ನನ್ನು ನೋಡಿದರೆ ಸಾಕು, ಅವರಿಗೆ ಮರುಹುಟ್ಟು ಇರುವುದಿಲ್ಲ. ಹುಟ್ಟು ಸಾವಿನ ಸುಳಿಯಿಂದ ಪಾರಾಗಿ ಶಾಶ್ವತವಾದ ಮುಕ್ತಿಯನ್ನು ಪಡೆಯುತ್ತಾರೆ; **ಪೊಗಳ್ದಡೆ ಸುರೇಂದ್ರತ್ವ**=ನನ್ನ ಮಹಿಮೆಯ ಗುಣಗಾನ ಮಾಡಿದರೆ ದೇವೇಂದ್ರ ಪದವಿ ದೊರೆಯುತ್ತದೆ; **ಸೋಂಕಿದಡೆ ಕಮಲಜ ಪದವಿ**=ಗಂಗಾ ನದಿಯಲ್ಲಿ ಸ್ನಾನ ಮಾಡಿದರೆ ಬ್ರಹ್ಮನ ಪದವಿಯು ದೊರೆಯುತ್ತದೆ; **ಮರೆದು ಒಮ್ಮೆ ಕುಡಿತೆಗೊಂಡು ಕುಡಿದನಾದಡೆ ಮುಕ್ತಿ**=ಆಕಸ್ಮಿಕವಾಗಿಯಾದರೂ ಗಂಗಾ ನದಿಯ ನೀರನ್ನು ಒಮ್ಮೆ ಬೊಗಸೆಯಲ್ಲಿ ತೆಗೆದುಕೊಂಡು ಕುಡಿದರೆ ಮುಕ್ತಿಯು ದೊರೆಯುತ್ತದೆ;

ಅವಗಾಹ ಇರ್ದನಾದಡೆ ಗಣೇಶತ್ವ=ಗಂಗಾ ನದಿಯಲ್ಲಿ ಮುಳುಗಿ ಎದ್ದವನಾದರೆ ದೇವಲೋಕದಲ್ಲಿ ದೇವಗಣಗಳಿಗೆ ಒಡೆಯನಾಗುತ್ತಾನೆ; **ಸಾರ್ದಡೆ ಈ ಗಂಗೆಯಿಂದೆ ಮಹಾರುದ್ರತ್ವ ಪಡೆವರ್ ಎಂಬ ಮಹಿಮೆಗೆ ವೇದಮತವು ಸಾಕ್ಷಿ**=ವ್ಯಕ್ತಿಯ ಜೀವನವು ಗಂಗಾನದಿಯಲ್ಲಿಯೇ ಕೊನೆಗೊಂಡರೆ ಮಹಾರುದ್ರನ ಪದವಿಯನ್ನು ಪಡೆಯುತ್ತಾರೆ ಎಂದು ವೇದದಲ್ಲಿ ಒಕ್ಕಣೆಗೊಂಡಿರುವ ನುಡಿಗಳೇ ನನ್ನ ಮಹಿಮೆಗೆ ಸಾಕ್ಷಿಯಾಗಿವೆ; **ಭವ ಭಯಾಂಬುಧಿಯಮ್ ಉತ್ತರಿಸುವಂತೆ ಅವಗಾಹ ಇರ್ದುಮ್ ಉತ್ತರಿಸಿ ಈ ಗಂಗೆಯಿಂದೆ ಕೃತಾರ್ಥತೆಯನ್**

ಎಯ್ದುತಿಪ್ಪವರನ್ ಈಕ್ಷಿಸಿ=ಹುಟ್ಟು ಸಾವಿನಿಂದ ಕೂಡಿದ ಪ್ರಾಪಂಚಿಕ ಜೀವನದ ಅಂಜಿಕೆಯ ಸಾಗರವನ್ನು ದಾಟುವಂತೆ ನೀರಿನಲ್ಲಿ ಮುಳುಗೇಳುತ್ತ, ಪುಣ್ಯವನ್ನು ಪಡೆಯುತ್ತಿರುವವರನ್ನು ಗಂಗಾದೇವಿಯು ನೋಡುತ್ತ;

ಇಂದು ಪತಿಹಿತವೆಯಹ ಸುದತಿ=ಪತಿಗೆ ಒಳಿತನ್ನುಂಟು ಮಾಡುವ ಹೆಂಡತಿ ಚಂದ್ರಮತಿ; **ಅನೃತವನ್ ಅರಿಯದ ಅವನೀಶನ್**=ಸುಳ್ಳನ್ನು ಆಡದ ಹರಿಶ್ಚಂದ್ರ; **ಉಭಯ ಕುಲ ಶುದ್ಧನಹ ಕುವರನ್**=ತಾಯಿ ಮತ್ತು ತಂದೆಯ ಮನೆತನದಲ್ಲಿ ಉತ್ತಮ ಪುತ್ರನಾಗಿರುವ ಲೋಹಿತಾಶ್ವ; **ಈ ಸ್ವಾಮಿಹಿತವನಹ ಮಂತ್ರಿಯ ಸೋಂಕು**=ತನ್ನ ಒಡೆಯನಾದ ಹರಿಶ್ಚಂದ್ರನ ಒಳಿತನ್ನೇ ಬಯಸುವ ಮಂತ್ರಿಯ ಆಗಮನದಿಂದ; **ಇಂದು ನರಕಿಗಳು ತನ್ನೊಳಗೆ ತೊಳೆದ ದೋಷ ತವಿಲಾದುದು**= ಇಂದು ಪಾಪಿಗಳು ತನ್ನೊಳಗೆ ತೊಳದೆ ಪಾಪದ ಕಳಂಕವೆಲ್ಲವೂ ನಾಶವಾಯಿತು; **ತನಗೆ ಕೈಸಾರ್ದುದು ಎಂದು ಗಂಗೆ ಹೆಚ್ಚಿದಳು**=ತನಗೆ ಪುಣ್ಯವೆಲ್ಲವೂ ಮತ್ತೆ ದೊರಕಿದಂತಾಯತು ಎಂದು ಗಂಗಾದೇವಿ ಆನಂದವನ್ನು ಪಡುವಂತೆ ತುಂಬಿ ಹರಿದಳು; ಮದ್ದು=ಔಷಧ;

ನಡೆಯೂಡೆ ಮದ್ದು ವಿಷವೊಡಲಿಂಗೆ ಹಿತವೆಂಬ ನುಡಿಯಂತೆ ಉಳಿದ ಹಲವೆಡೆಯ ಸುಕ್ಷೇತ್ರಂಗಳೊಳಗೆ ಸುಖವಿಲ್ಲ ಪುಣ್ಯವುಂಟು=ರೋಗಿಯನ್ನು ಗುಣಪಡಿಸಲೆಂದು ಚೆನ್ನಾಗಿ ತಿನ್ನಿಸಿದ ಮದ್ದು ಬಾಯಿಗೆ ವಿಷದಂತೆ ಕಹಿಯಾಗಿದ್ದರೂ ದೇಹಕ್ಕೆ ಒಳಿತು ಎಂಬ ನುಡಿಯಂತೆ, ಕಾಶಿಯನ್ನು ಹೊರತು ಪಡಿಸಿ ಉಳಿದ ಹಲವು ದೇವತಾ ನೆಲೆಗಳಲ್ಲಿ ದೇಹಕ್ಕೆ ಸುಖ ದೊರಕುವುದಿಲ್ಲ, ಆದರೆ ಜೀವಕ್ಕೆ ಪುಣ್ಯ ಮಾತ್ರ ದೊರಕುತ್ತದೆ; **ಅವರ ಪರಿಯಲ್ಲ**=ಆದರೆ ಪುಣ್ಯ ಕ್ಷೇತ್ರವಾದ ಕಾಶಿಯು ಬೇರೆ ಕ್ಷೇತ್ರಗಳ ಹಾಗಲ್ಲ; **ಸುಖವುಂಟು ಪುಣ್ಯವುಂಟು**=ಈ ಕಾಶಿಯಲ್ಲಿ ಸುಖವೂ ಇದೆ; ಪುಣ್ಯವೂ ಇದೆ; ಪಾದೋದಕ=ಪಾದವನ್ನು ತೊಳೆದ ನೀರು; ಪನ್ನೀರು=ಪರಿಮಳದಿಂದ ಕೂಡಿದ ರುಚಿಕರವಾದ ನೀರು; **ಕುಡಿವ ಪಾದೋದಕಮ್ ಪನ್ನೀರ ಪಾನವಾದಡೆ**=ಇಲ್ಲಿ ಕುಡಿಯುವ ಪಾದೋದಕವು ಪನ್ನೀರ ಪಾನೀಯವಾದರೆ;

ಧರಿಸುವ ಪ್ರಸಾದಮ್ ಸುಧಾಪಿಂಡವಾದಡೆ=ತೆಗೆದುಕೊಳ್ಳುವ ಪ್ರಸಾದವು ಅಮೃತದ ಉಂಡೆಯಾದರೆ; **ಬಿಡುವರ್ ಆರ್ ಎನಿಪ್ಪಂತೆ**=ಯಾರು ತಾನೆ ಬಿಡುತ್ತಾರೆ ಎನ್ನುವಂತೆ; **ಜನದ ಇಹಪರಕೆ ಕಾಶೀಕ್ಷೇತ್ರವು ಸೊಗಸು**=ಜನರ ಇಹಲೋಕದ ನೆಮ್ಮದಿಯ ಬದುಕಿಗೆ ಮತ್ತು ಪರಲೋಕದ ಮುಕ್ತಿಗೆ ಕಾಶಿ ನಗರವು ಪವಿತ್ರವಾದ ನೆಲೆಯಾಗಿದೆ; ವೃಷಧ್ವಜ=ಶಿವನ ವಾಹನವಾದ ನಂದಿಯ ಚಿತ್ರವಿರುವ ಬಾವುಟ; **ಮುಗಿಲ ಬಸುರಮ್ ಬಗಿದು ನೆಗೆದೊಗೆದು ಮೀರಿ ಮೆರೆವ**

ಅಗಣಿತ ವೃಷಧ್ವಜಂಗಳ=ಆಕಾಶದ ಎತ್ತರಕ್ಕೆ ನೆಗೆದು ಹಾರುತ್ತ ಕಂಗೊಳಿಸುತ್ತಿರುವ ಲೆಕ್ಕವಿಲ್ಲದಷ್ಟು ನಂದಿ ಚಿತ್ರದ ಬಾವುಟಗಳ;

ಸೂರ್ಯಕೋಟಿಯಮ್ ತೆಗೆದವು ಎಂಬಂತೆ ಮಾರ್ಪೊಳೆವ ಹೊಂಗಳಸಂಗಳ=ಕೋಟಿ ಸೂರ್ಯರ ಪ್ರಜ್ವಲಿಸುವ ಬೆಳಕನ್ನು ಹೊರಹೊಮ್ಮಿಸುತ್ತಿದ್ದೇವೆ ಎಂಬಂತೆ ಪ್ರತಿಫಲಿಸುತ್ತಿರುವ ಗುಡಿಗೋಪುರಗಳ ಮೇಲಿನ ತುದಿಯಲ್ಲಿರುವ ಚಿನ್ನದ ಕಳಸಗಳ; **ಎಸೆವ ಶಿವನಿಳಯಂಗಳ ಸೊಗಸಿಗೆ ಎಡೆಯಾಡಿ ಆಡುತ ಪಾಡುತ ಎಯ್ತುಪ್ಪ**=ಕಂಗೊಳಿಸುತ್ತಿರುವ ಶಿವ ದೇವಾಲಯಗಳ ಅಂದಚೆಂದಕ್ಕೆ ಮನಸೋತು, ದೇಗುಲಗಳೆಲ್ಲವನ್ನೂ ಸುತ್ತಾಡಿ, ದೇವರ ನಾಮ ಸ್ಮರಣೆಯನ್ನು ಮಾಡುತ್ತ, ದೇವರ ಮಹಿಮೆಯನ್ನು ಕೊಂಡಾಡುವ ಹಾಡುಗಳನ್ನು ಹಾಡುತ್ತ ಬರುತ್ತಿರುವ;

ಪೊಗಳಿ ಪೊಡಮಡುವ=ದೇವರ ಮಹಿಮೆಯನ್ನು ಹೊಗಳಿ ನಮಸ್ಕರಿಸುವ; **ಬಲಗೊಂಬ**=ದೇಗುಲದ ಒಳ ಪ್ರಾಂಗಣದಲ್ಲಿ ಬಲಗಡೆಯಿಂದ ಸುತ್ತು ಹಾಕುವ; **ನೋಡುವ ನಲಿವ ನಗುವ ನಾನಾ ಜನವನ್ ಒತ್ತರಿಸಿ ನಡೆತಂದು ವಿಶ್ವಪತಿಯನ್ ಕಂಡನು**=ದೇವರನ್ನು ನೋಡಿ ಕುಣಿದಾಡುವ ಆನಂದಿಸುವ ಬಹುಬಗೆಯ ಜನರ ಗುಂಪಿನ ನಡುವೆ ಹರಿಶ್ಚಂದ್ರನು ಜಾಗವನ್ನು ಮಾಡಿಕೊಂಡು ಮುಂದೆ ಬಂದು ವಿಶ್ವದ ಒಡೆಯನಾದ ವಿಶ್ವನಾಥ ದೇವರ ವಿಗ್ರಹವನ್ನು ನೋಡಿದನು;

ನೋಡಿ ಪರಮಾನಂದ ಮೂಡಿ=ದೇವರನ್ನು ನೋಡುತ್ತಿದ್ದಂತೆಯೇ ಹೆಚ್ಚಿನ ಆನಂದ ಉಂಟಾಗಿ; **ಸುಖರಸದೊಳ್ ಓಲಾಡಿ**=ಒಲವು ನಲಿವು ನೆಮ್ಮದಿಯ ಭಾವಗಳಿಂದ ಹಿಗ್ಗಿ; **ಕೀರ್ತಿಸಿ ಹರಸಿ ಹಾಡಿ**=ದೇವರ ಮಹಿಮೆಯನ್ನು ಗುಣಗಾನ ಮಾಡುತ್ತ, ಹರಕೆಯನ್ನು ಕಟ್ಟಿಕೊಂಡು ಹಾಡುತ್ತ; **ಸದ್ಭಕ್ತಿಯಮ್ ಬೇಡಿ**=ಒಳ್ಳೆಯ ನಡೆನುಡಿಯಿಂದ ಬಾಳುವಂತಹ ಮನಸ್ಸನ್ನು ನೀಡುವಂತೆ ದೇವರಲ್ಲಿ ಮೊರೆಯಿಟ್ಟು; **ಮನದೊಳಗೆ ಮಾತಾಡಿ**=ಮನದೊಳಗೆ ತನ್ನ ಬದುಕಿನ ಆಗುಹೋಗುಗಳೆಲ್ಲವನ್ನೂ ದೇವರೊಂದಿಗೆ ಹೇಳಿಕೊಳ್ಳುತ್ತ;

ನೆರೆ ಬಿನ್ನಹಮ್ ಮಾಡಿ=ಈಗ ವಿಶ್ವಾಮಿತ್ರನ ರುಣವನ್ನು ತೀರಿಸಲು ನೆರವಾಗುವಂತೆ ಕೋರಿಕೊಂಡು; **ಪ್ರಸಾದ ಫಲವ ಸೂಡಿ**=ಪೂಜೆಯ ನಂತರ ಪ್ರಸಾದವಾಗಿ ನೀಡಿದ ಹೂವನ್ನು ತಲೆಯಲ್ಲಿ ಮುಡಿದುಕೊಂಡು; **ಪರಿಣಾಮವಮ್ ಮಾಡಿ**=ಬಗ್ಗಿ ನಮಸ್ಕರಿಸಿ; **ದುಃಸ್ಥಿತಿಯ ನೀಗಾಡಿ**=ತನಗೆ ಬಂದೊದಗಿರುವ ಸಂಕಟವನ್ನೆಲ್ಲಾ ಮಯ್ ಮನದಿಂದ ತೆಗೆದುಹಾಕಿ; **ಭವಜಲವನ್ ಈಸಾಡಿ ಬಲ್ಪಿಮ್ ಮನಮ್ ಮೂಡಿ ಬೀಳ್ಕೊಂಡು**=ಹುಟ್ಟಿನ ಸಾಗರವನ್ನು ಈಜಾಡಿ; ಅಂದರೆ ಹುಟ್ಟಿದ ನಂತರ ಬರುವ ಎಲ್ಲ ಬಗೆಯ

ಸಂಕಟವನ್ನು ಎದುರಿಸುವಂತಹ ಶಕ್ತಿಯು ಮನದಲ್ಲಿ ಮೂಡಲು, ದೇವ ಸನ್ನಿಧಿಯಿಂದ ಹೊರಟು; **ಸಂತಸದಿ ಉಳಿದ ಲಿಂಗಂಗಳಮ್ ನೋಡುತ ಮರಳಿದನ್**=ಆನಂದದಿಂದ ಬೇರೆ ಲಿಂಗಗಳೆಲ್ಲವನ್ನೂ ನೋಡುತ್ತ ದೇಗುಲದಿಂದ ಹೊರಬಂದನು;

ಗಡಿಗೆಟ್ಟ ಲಿಂಗಂಗಳ ಒಪ್ಪಕ್ಕೆ=ಕಾಶಿ ನಗರದ ಎಲ್ಲೆಡೆಯಲ್ಲಿಯೂ ಕಂಡು ಬರುತ್ತಿರುವ ಲಿಂಗಗಳ ಸೊಗಸಿಗೆ; **ಭೋಗಂಗಳ ಅಡಕಕ್ಕೆ**=ದೇವರ ವಿಗ್ರಹವಾದ ಲಿಂಗಗಳಿಗೆ ಮಾಡುತ್ತಿರುವ ಬಹುಬಗೆ ಪೂಜೆಗಳ ಆಚರಣೆಗೆ; **ಮಂಗಳದ ಮಸಕಕ್ಕೆ**=ಜಗತ್ತಿಗೆ ಮಂಗಳವನ್ನುಂಟುಮಾಡುವ ಸಡಗರಕ್ಕೆ; **ರಚನೆಗಳ ಸಡಗರಕೆ ಬೆರಗಾಗುತ**=ಪೂಜೆಯ ಆಚರಣೆಗಳ ಸೊಗಸಿಗೆ ಅಚ್ಚರಿಯನ್ನು ಪಡುತ್ತ; **ಎಲ್ಲಾ ನಿರೋಧಮಮ್ ಮರೆದು ನೋಡುತ್ತ ಅರಸನು ನಡೆಯುತಿರಲ್**=ತನ್ನ ಬದುಕಿನಲ್ಲಿ ನಡೆದ ಎಲ್ಲಾ ತೊಂದರೆಯನ್ನು ಮರೆತವನಾಗಿ, ದೇವರ ಪೂಜೆಯ ಅಂದಚೆಂದದ ಆಚರಣೆಗಳನ್ನು ಮತ್ತು ಜನರ ಉತ್ಸಾಹವನ್ನು ಹರಿಶ್ಚಂದ್ರನು ನೋಡುತ್ತ, ಕಾಶಿ ನಗರದ ಬೀದಿಯಲ್ಲಿ ನಡೆದು ಬರುತ್ತಿರಲು;

ಮಾರಿಯಂದದಿ ಇದಿರೆದ್ದು ಬಂದು=ಒಲಿದರೆ ಒಳಿತನ್ನು ಮಾಡುವ; ಮುನಿದರೆ ಸಾವುನೋವನ್ನುಂಟುಮಾಡುವ ದೇವತೆಯೆಂದು ಜನರು ನಂಬಿರುವ ಮಾರಿದೇವತೆಯಂತೆ ನಕ್ಷತ್ರಕನು ಹರಿಶ್ಚಂದ್ರನಿಗೆ ಅಡ್ಡಲಾಗಿ ಎದುರುಬಂದು ನಿಂತು; **ಹೊನ್ನನ್ ಕೊಡು**=ಗುರುಗಳಾದ ವಿಶ್ವಾಮಿತ್ರರಿಗೆ ಕೊಡಬೇಕಾದ ಸಂಪತ್ತನ್ನು ಕೊಡು; **ಇನ್ನು ತಳುವಿದಡೆ ಎನ್ನ ಪತಿ ಎನಗೆ ಕಡುಮುಳಿವನ್ ಎಂದು ಜರೆಯುತ್ತ ನಕ್ಷತ್ರಕನ್ ಸೆರಗಮ್ ತುಡುಕಿ ಹಿಡಿದನು**=ಇನ್ನು ತಡಮಾಡಿದರೆ ನನ್ನ ಒಡೆಯನಾದ ವಿಶ್ವಾಮಿತ್ರನು ನನ್ನ ಬಗ್ಗೆ ತುಂಬಾ ಕೋಪಿಸಿಕೊಳ್ಳುತ್ತಾನೆ ಎಂದು ನಿಂದಿಸುತ್ತ, ನಕ್ಷತ್ರಕನು ಹರಿಶ್ಚಂದ್ರನ ತೊಟ್ಟಿದ್ದ ಶಲ್ಯದ ಅಂಚನ್ನು ತಟ್ಟನೆ ಹಿಡಿದುಕೊಂಡನು; **ಪವ್ವನೆ ಪಾರು**=ಇದ್ದಕ್ಕಿದ್ದಂತೆ ಹಾರು/ಹಠಾತ್ತನೆ ಮೇಲಕ್ಕೆ ನೆಗೆ;

ಕೊಟ್ಟ ಅವಧಿಯಮ್ ನೆನೆದು ನೋಡಿ ಹವ್ವನೆ ಹಾರಿ=ರುಣವನ್ನು ಹಿಂತಿರುಗಿಸಲು ಕೊಟ್ಟಿದ್ದ ನಲವತ್ತು ದಿನದ ಕಾಲಾವಕಾಶವನ್ನು ನೆನಪಿಸಿಕೊಂಡು ಬೆಚ್ಚಿಬಿದ್ದು; **ಮುಟ್ಟಿ ಬಂದುದು ದಿನಮ್**=ಕೊಟ್ಟಿದ್ದ ಗಡುವು ದಿನಗಳು ಮುಗಿಯುತ್ತ ಬಂದಿವೆ; **ಕೈಕೊಂಡ ತೆರದವನ್ ಕಟ್ಟುಗ್ರನ್**=ವಸೂಲು ಮಾಡಲು ಬಂದಿರುವ ತೆರಕಾರನು ಮಹಾಕ್ರೂರಿ; **ಅಭ್ಯಾಸದವರಿಲ್ಲ**=ಈ ಕಾಶಿ ನಗರದಲ್ಲಿ ನನಗೆ ಪರಿಚಿತರಾದವರು ಯಾರೂ ಇಲ್ಲ; **ಚಾಚಲ್ ಅಡಪಿಲ್ಲ**=ಒತ್ತೆಯಿಟ್ಟು ಹಣವನ್ನು ಪಡೆಯೋಣವೆಂದರೆ, ಒತ್ತೆಯಿಡಲು ಬೆಲೆಬಾಳುವ ಯಾವುದೇ ಒಡವೆ ವಸ್ತುಗಳು ನನ್ನಲ್ಲಿಲ್ಲ; **ನಾನ್ ಕುಲಧರ್ಮವ ಬಿಟ್ಟು ತಿರಿವವನಲ್ಲ**=ಸೂರ್ಯವಂಶದ

ಮನೆತನದಲ್ಲಿ ಹುಟ್ಟಿ ಬೆಳೆದಿರುವ ನಾನು, ನನ್ನ ಕುಲದ ಆಚಾರ ಮತ್ತು ಸಂಪ್ರದಾಯಗಳನ್ನು ಬಿಟ್ಟು, ಇತರರ ಮುಂದೆ ಕಯ್ ಒಡ್ಡಿ ಬೇಡುವವನಲ್ಲ; **ಓಲೈಸಿ ನೆರೆ ಲಜ್ಜೆಗೆಟ್ಟು ಬೇಡುವಡೆ ಇಲ್ಲಿ ದೊರೆಯಿಲ್ಲ**=ಮನವೊಲಿಸಿಕೊಂಡು ಸಂಪೂರ್ಣವಾಗಿ ನಾಚಿಕೆಯನ್ನು ತೊರೆದು ಬೇಡೋಣವೆಂದರೆ ಕಾಶಿ ನಗರವನ್ನು ಯಾವೊಬ್ಬ ದೊರೆ ಆಳುತ್ತಿಲ್ಲ. ಇಲ್ಲಿ ಕಾಶಿನಾಥನಾದ ವಿಶ್ವೇಶ್ವರ ಸ್ವಾಮಿಯೇ ರಾಜ;

ಕೃಷಿಯಿಂದ ಹುಟ್ಟಿಸುವೆನ್ ಎಂಬಡೆ ಎಡೆಯಿಲ್ಲ=ಬೇಸಾಯವನ್ನು ಮಾಡಿ ಸಂಪತ್ತನ್ನು ಗಳಿಸೋಣವೆಂದರೆ ಅದಕ್ಕೆ ಕಾಲಾವಕಾಶವಿಲ್ಲ; **ಇನ್ನು ಏನ್ ಗೆಯ್ವೆನ್ ಎಂದು ಅರಸನು ಮರುಗಿದನ್**=ಇನ್ನು ಏನು ಮಾಡಲಿ ಎಂದು ಹರಿಶ್ಚಂದ್ರನು ತಳಮಳಿಸಿದನು; **ಏನ್ ಗೆಯ್ವೆ. ಚಿಂತಾಗ್ನಿ ಉರಿಯ ಹೊಯ್ಲಿಮ್ ಕರಗಿ ಹೋಗದಿರನ್. ಎಚ್ಚರಿಸಬೇಕು**=ಹರಿಶ್ಚಂದ್ರನ ತಳಮಳವನ್ನು ಕಂಡು ಮನನೊಂದ ಚಂದ್ರಮತಿಯು ತನ್ನಲ್ಲಿಯೇ ಈ ರೀತಿ ಆಲೋಚಿಸುತ್ತಾಳೆ. **“**ಈಗ ನಾನೇನು ಮಾಡಲಿ. ಚಿಂತೆಯೆಂಬ ಬೆಂಕಿಯ ಉರಿಯ ಹೊಡೆತಕ್ಕೆ ಸಿಲುಕಿ ನನ್ನ ಗಂಡ ಹರಿಶ್ಚಂದ್ರನು ನಾಶವಾಗುತ್ತಾನೆ. ಎಂತಾದರೂ ಮಾಡಿ ನಾನು ನನ್ನ ಗಂಡನನ್ನು ಉಳಿಸಿಕೊಳ್ಳಲೇಬೇಕು**”** ಎಂದು ನಿಶ್ಚಯಿಸಿಕೊಂಡು ಹರಿಶ್ಚಂದ್ರನಿಗೆ ಒಂದು ಸಲಹೆಯನ್ನು ನೀಡುತ್ತಾಳೆ; ಜಾವ=ದಿನದ ೨೪ ಗಂಟೆಯಲ್ಲಿ ೩ ಗಂಟೆಯ ಅವಧಿಯನ್ನು ಒಂದು ಜಾವ ಎಂದು ಗುರುತಿಸುತ್ತಾರೆ;

ಅವಧಿ ಮೇಗೆ ಎರಡು ಜಾವ=ಕೊಟ್ಟಿರುವ ನಲವತ್ತು ದಿನಗಳ ಕಾಲಾವಕಾಶದಲ್ಲಿ ಇನ್ನು ಎರಡು ಜಾವಗಳು ಉಳಿದಿವೆ; **ಇದರೊಳಗೆ ತಿದ್ದುವ ಬುದ್ಧಿಯಮ್ ಕಾಣಬೇಕಲ್ಲದೆ ಮೂಗುವಟ್ಟಿರ್ದಡೆ ಏನ್ ಅಹುದು**=ಈ ಅವಧಿಯೊಳಗೆ ಕೊಡಬೇಕಾಗಿರುವ ಸಂಪತ್ತನ್ನು ಹಿಂತಿರುಗಿಸುವ ದಾರಿಯನ್ನು ಕಾಣಬೇಕಲ್ಲದೆ, ಮೂಕವಾಗಿದ್ದರೆ ಏನಾಗುತ್ತದೆ; **ಇರದೆ ಬಳಿಕ ಏನ್ ಗೆಯ್ವೆ ಹೇಳ್**=ಮೂಕನಾಗದೆ ಈಗ ಇನ್ನೇನು ಮಾಡಲಿ ಹೇಳು ಎಂದು ಹರಿಶ್ಚಂದ್ರನು ಚಂದ್ರಮತಿಯನ್ನು ಮರುಪ್ರಶ್ನಿಸುತ್ತಾನೆ; **ಸಾಲದಲಿ ಪೋದನಿತು ಪೋಗಲಿ. ಎಮ್ಮಿಬ್ಬರಮ್ ಮಾರಿ, ಬಳಿಕ ಉಳಿದುದಮ್ ಕಾಣು. ನಡೆ ನಡೆ ಎಂದಳು**= ಸಾಲದ ಮೊತ್ತದಲ್ಲಿ ಕಡಿಮೆಯಾದಷ್ಟು ಆಗಲಿ. ನನ್ನನ್ನು ಮತ್ತು ಲೋಹಿತಾಶ್ವನನ್ನು ಮಾರಿ, ಇನ್ನುಳಿದ ಸಂಪತ್ತಿಗೆ ಬೇರೊಂದು ಪ್ರಯತ್ನವನ್ನು ಮಾಡು. ನಡೆ ನಡೆ ಬೇಗ ನಮ್ಮನ್ನು ಮಾರು ಎಂದು ಚಂದ್ರಮತಿಯು ಸಲಹೆಯನ್ನು ನೀಡಿದಳು;

ಕಡುನಿರೋಧಂಗೊಳಿಸಿ ದೇಶದಿಮ್ ಪರದೇಶಕೆ ಒಡವರಿಸಿತಲ್ಲದೆ, ಆನ್ ಇರ್ದು ನಿಮ್ಮನ್ ಮಾರುಗೊಡಲಾಪನೇ=ಆಗ ಹರಿಶ್ಚಂದ್ರನು ಅವಳ ಸಲಹೆಯನ್ನು

ನಿರಾಕರಿಸುತ್ತ **"ನಿಮ್ಮೆಲ್ಲರನ್ನೂ ಅಪಾರವಾದ ಸಂಕಟಕ್ಕೆ ಗುರಿಮಾಡಿ, ದೇಶವನ್ನು ಬಿಟ್ಟು ಪರದೇಶಕ್ಕೆ ನನ್ನೊಡನೆ ಬರುವಂತೆ ಮಾಡಿದ್ದಲ್ಲದೆ, ನಾನು ಜೀವಂತವಾಗಿರುವಾಗಲೇ ನಿಮ್ಮನ್ನು ಮಾರುವುದಕ್ಕೆ ಒಪ್ಪುತ್ತೇನೆಯೇ"** ಎಂದನು; **ಎಲೆ ಮರುಳೆ, ಸರ್ವಕ್ಕೆ ಮೊದಲು ಸತಿಸುತರು ತನ್ನ ಒಡಲು ಕಡೆ**=ನೀನು ಸರಿಯಾಗಿ ಆಲೋಚನೆ ಮಾಡದೆ ಈ ರೀತಿ ಮಾತನಾಡುತ್ತಿರುವೆ... ಹೆಂಡತಿ ಮತ್ತು ಮಗನ ಬಗ್ಗೆ ಮೋಹಕ್ಕೆ ಒಳಗಾಗಿ ಯಾವುದು ಸರಿ–ಯಾವುದು ತಪ್ಪು ಎಂಬುದನ್ನು ನೀನು ತಿಳಿಯದವನಾಗಿದ್ದೀಯೆ. ಕುಟುಂಬಕ್ಕೆ ಆಪತ್ತು ಬಂದಾಗ, ಸತಿಸುತರು ಮೊದಲು ತ್ಯಾಗಕ್ಕೆ ಮುಂದಾಗಬೇಕು. ಅನಂತರ ಪತಿಯು ಕಟ್ಟಕಡೆಯಲ್ಲಿ ಹೋರಾಡಬೇಕು;

ಸತ್ಯಕ್ಕೆ ನೇಮಕ್ಕೆ ಬಂಧನಕ್ಕೆ ಎಡೆಯಲ್ ಅಳುಪಲು ಶಿವ ಮನಮ್ ನೋಳ್ಪನೈ=ಸತ್ಯಕ್ಕೆ, ಒಳ್ಳೆಯ ಆಚರಣೆಗೆ ಮತ್ತು ಯಾವುದೇ ಬಗೆಯ ಸಂಕಟವನ್ನು ಎದುರಿಸಲು ಮುಂದಾಗದೆ ಹಿಂಜರಿದರೆ ಶಿವನು ಮನಸ್ಸನ್ನು ನೋಡುತ್ತಾನೆ. ಅಂದರೆ ವ್ಯಕ್ತಿಯ ಮನದಲ್ಲಿ ನಿಜವಾದ ಪ್ರೀತಿ ಇದೆಯೋ ಇಲ್ಲವೋ ಎಂಬುದನ್ನು ಒರೆಹಚ್ಚಿ ನೋಡುತ್ತಾನೆ;

ಲಜ್ಜೆಗೆಡದೆ ಎಮ್ಮ ಮಾರು ಮತ್ತೆ ಆದುದಾಗಲಿ ಎಂದಡೆ ಅವನಿಪನ್ ಒಡಂಬಟ್ಟನು=**"**ಹೆಂಡತಿ ಮತ್ತು ಮಗನನ್ನು ಮಾರಬೇಕಾದ ಪ್ರಸಂಗ ಒದಗಿಬಂದಿತೆಂದು ನಾಚಿಕೆಪಟ್ಟುಕೊಳ್ಳದೆ, ಹಿಂಜರಿಯದೆ ನಮ್ಮನ್ನು ಮಾರು. ಅನಂತರ ನಮ್ಮ ಸಂಸಾರದಲ್ಲಿ ಏನಾಗುತ್ತದೆಯೋ ಆಗಲಿ" ಎಂದು ಚಂದ್ರಮತಿಯು ಅಚಲವಾದ ನಿಶ್ಚಯದಿಂದ ನುಡಿಯಲು, ಹರಿಶ್ಚಂದ್ರನು ಆಕೆಯ ಸಲಹೆಯನ್ನು ಒಪ್ಪಿಕೊಂಡನು; ❖

ಪ್ರಸಂಗ–೧೬

ಪತ್ನೀ ಪುತ್ರ ವಿಕ್ರಯ

ಪತ್ನೀ ಪುತ್ರ ವಿಕ್ರಯ=ಹೆಂಡತಿ ಮತ್ತು ಮಗನ ಮಾರಾಟ;

ಪೊಡವಿಪನ್ ಸತಿಸುತರ ತಲೆಗಳಲಿ ಹುಲುಗಟ್ಟಿ=ಹೆಂಡತಿ ಮತ್ತು ಮಗನನ್ನು ಮಾರಾಟ ಮಾಡಲು ಒಪ್ಪಿಕೊಂಡ ಹರಿಶ್ಚಂದ್ರನು ಅವರ ತಲೆಗಳ ಮೇಲೆ ಹುಲ್ಲನ್ನು ಕಟ್ಟಿ; ಮಾರಾಟಕ್ಕೆ ಇಟ್ಟಿರುವ ವ್ಯಕ್ತಿಯ ತಲೆಗೆ ಹುಲ್ಲನ್ನು ಕಟ್ಟುವುದು ಅಂದಿನ ಕಾಲದಲ್ಲಿ ಇದ್ದಂತಹ ಒಂದು ಆಚರಣೆಯಾಗಿರಬಹುದು;

ನಾಚಿಕೆಯನ್ ಉಳಿದು ಕೈವಿಡಿದು ಮುಂದೊಡ್ಡಿ ತೋರುತಮ್=ಹೆಂಡತಿ ಮತ್ತು ಮಗನನ್ನು ಮಾರಾಟಮಾಡುವ ಹೀನಗತಿ ಬಂದಿತಲ್ಲ ಎಂಬ ಅಪಮಾನದ ಸಂಕಟವನ್ನು ಹತ್ತಿಕ್ಕಿಕೊಂಡು, ಅವರಿಬ್ಬರ ಕಯ್ಯನ್ನು ಹಿಡಿದು, ಜನಗಳ ಮುಂದೆ ಅವರನ್ನು ತೋರಿಸುತ್ತ; **ಗಡಿಗಳೊಳು ಬೀದಿಯೊಳು ಸಂದಿಯೊಳು ಪುರದೊಳ್ ಓರಂತೆ ನಡೆನಡೆದು**=ಕಾಶಿ ನಗರದ ಎಲ್ಲ ನೆಲೆಗಳಲ್ಲಿ, ಬೀದಿಯಲ್ಲಿ, ಸಂದಿಗೊಂದಿಗಳಲ್ಲಿ, ಪಟ್ಟಣದ ಒಳಗೆಲ್ಲಾ ಒಂದೇ ಸಮನೆ ಸುತ್ತುತ್ತ;

ಪೊಡವಿಪ ಹರಿಶ್ಚಂದ್ರಭೂವರನ ತನಯನನ್ ಮಡದಿಯನ್ ಮಾರುಗೊಂಬ ಅಧಿಕರಿಲ್ಲಾ ಎಂದು ಸತ್ಯನಿಧಿ ಭೂಪಾಲನು ನಿಡುಸರದೊಳ್ ಒರಲಿ ಜನಕೆ ಅರುಪುತ್ತ ತೊಳಲಿದನ್="ರಾಜ ಹರಿಶ್ಚಂದ್ರನ ಮಗನನ್ನು ಹೆಂಡತಿಯನ್ನು ಬೆಲೆಕೊಟ್ಟು ಕೊಂಡುಕೊಳ್ಳುವ ಸಿರಿವಂತರಿಲ್ಲವೇ" ಎಂದು ಸತ್ಯವಂತನಾದ

ಹರಿಶ್ಚಂದ್ರನು ನೀಳವಾದ ದನಿಯಲ್ಲಿ ಜೋರಾಗಿ ಕೂಗುತ್ತ, ಜನರಿಗೆ ಮಾರಾಟದ ಸಂಗತಿಯನ್ನು ತಿಳಿಸುತ್ತ, ಕಾಶಿ ನಗರದ ಎಲ್ಲೆಡೆಯಲ್ಲಿಯೂ ತಿರುಗಿದನು; **ಅನಿಮಿತ್ತ ಮುನಿವ ಮುನಿಪನ ಬೆಸದೊಳ್ ಅಗ್ನಿ ವಿಪ್ರನ ವೇಷದಿಂದ ಬಂದು**=ವಿನಾಕಾರಣ ಕೋಪಗೊಳ್ಳುವ ನಡೆನುಡಿಯ ವಿಶ್ವಾಮಿತ್ರನ ಆದೇಶದಂತೆ ಅಗ್ನಿದೇವನು ಬ್ರಾಹ್ಮಣನ ಉಡುಗೆತೊಡುಗೆಯನ್ನು ತೊಟ್ಟುಬಂದು;

ಆವಾವ ಸತಿಪುತ್ರರ್ ಎನಿಪರ್ ಅವರ್=ಹರಿಶ್ಚಂದ್ರನನ್ನು ಕುರಿತು "ನೀನು ಮಾರಾಟಕ್ಕಿಟ್ಟಿರುವ ಹೆಂಡತಿ ಮತ್ತು ಮಗ ಎನ್ನುವವರು ಯಾರು" ಎಂದು ವಿಚಾರಿಸಲು; **ಇವರ್ ಇಬ್ಬರ್**=ಇವರು ಇಬ್ಬರು ಎಂದು ಚಂದ್ರಮತಿಯನ್ನು ಮತ್ತು ಲೋಹಿತಾಶ್ವನನ್ನು ಹರಿಶ್ಚಂದ್ರನು ತೋರಿಸುತ್ತಾನೆ; **ಇವನ್ ಅಬಲನ್ ಈ ವನಿತೆ ಮುಪ್ಪಿನವಳು ಮನೆಯೊಳ್ ಇನ್ನು ಒಳ್ಳಿತಹರ್ ಆರುಂಟು ತಾ**=ಇವನು ಶಕ್ತಿಯಿಲ್ಲದ ಚಿಕ್ಕ ಹುಡುಗ. ಇವಳು ವಯಸ್ಸಾದ ಹೆಂಗಸು. ನಿನ್ನ ಮನೆಯಲ್ಲಿ ಇನ್ನು ಗಟ್ಟಿಮುಟ್ಟಾಗಿರುವಂತಹವರು ಯಾರಿದ್ದಾರೆ. ಅವರನ್ನು ಮಾರಾಟಕ್ಕಿಡು;

ಎನಗೆ ಉಳ್ಳರ್ ಇವರಯ್ಯ. ಕೊಂಡು ಎನ್ನ ಸಾಕಿಕೊಳ್ಳು=ನನ್ನವರು ಎಂದು ಇರುವವರು ಇವರಿಬ್ಬರು ಮಾತ್ರ. ಇವರನ್ನು ಕೊಂಡು, ನನ್ನನ್ನು ಕಾಪಾಡು; **ಬೆಲೆಯ ಹೇಳ್ ಎನಗೆ ಲಾಗಾಗೆ ಏಳೆಂಟು ದಿನಕೆ ಹೊನ್ ಕೊಡುವೆನ್**= ಬೆಲೆಯನ್ನು ಹೇಳು. ನನಗೆ ಸರಿ ಬಂದರೆ ಏಳೆಂಟು ದಿನದಲ್ಲಿ ಹಣವನ್ನು ಕೊಡುತ್ತೇನೆ;

ಇಂದು ಬೈಗಿಂದೊಳಗೆ ರಾಸಿ ಹೊನ್ನಮ್ ಕೊಡುವೆನ್ ಎಂದು ಭಾಷೆಯನ್ ಇತ್ತೆನ್=ಈ ದಿನ ಸಂಜೆಯೊಳಗೆ ನಾನು ಸಾಲವಾಗಿ ಹಿಂತಿರುಗಿಸಬೇಕಾದ ಹಣವನ್ನು ಕೊಡುತ್ತೇನೆ ಎಂದು ಮಾತು ಕೊಟ್ಟಿದ್ದೇನೆ; **ಈಯದಿರ್ದಡೆ ಹಾನಿ ಬಂದಪುದು**=ಕೊಡದಿದ್ದರೆ ನನಗೆ ಕೇಡಾಗುತ್ತದೆ; **ಲಾಗನರಸದೆ ನಿನ್ನ ಮನಕೆ ಬಂದನಿತು ಅರ್ಥಮಮ್ ಕರುಣಿಸು ತಂದೆ**=ಸಮಯಕ್ಕಾಗಿ ಕಾಯದೆ ನಿನ್ನ ಮನಸ್ಸಿಗೆ ಬಂದಷ್ಟು ಹಣವನ್ನು ಈಗಲೇ ನೀಡು ತಂದೆ; **ವನಿತೆಗೆ ಇಪ್ಪತ್ತು ಸಾಸಿರವನ್ ಈ ನಂದನಂಗೆ ಇಪ್ಪತ್ತು ಸಾಸಿರವನ್ ಈವೆನ್**=ಹೆಂಗಸಿಗೆ ಇಪ್ಪತ್ತು ಸಾವಿರವನ್ನು, ಈ ನಿನ್ನ ಮಗನಿಗೆ ಇಪ್ಪತ್ತು ಸಾವಿರವನ್ನು ಕೊಡುತ್ತೇನೆ;

ಎಮ್ಮ ತೆರಕಾರಗೆ ಬಂದುದು ಎನಿಸುವುದು=ನಮ್ಮಿಂದ ಸಾಲವನ್ನು ವಸೂಲು ಮಾಡಲು ಬಂದಿರುವ ತೆರಕಾರನ ಬಾಯಲ್ಲಿ "ಹಣವು ಸಂದಾಯವಾಗಿದೆ" ಎಂದು ಹೇಳಿಸು; **ಬಂದುದು**=ವಿಪ್ರನು ನಲವತ್ತು ಸಾವಿರ ಚಿನ್ನದ ನಾಣ್ಯಗಳನ್ನು ನಕ್ಷತ್ರಕನಿಗೆ ಕೊಡಲು ಆಗ ನಕ್ಷತ್ರಕನು "ಹಣವು ಸಂದಾಯವಾಗಿದೆ" ಎಂದನು; **ಬಂದುದೇ ನಕ್ಷತ್ರ ನಾಮ ಮುನಿ**=ನಕ್ಷತ್ರಕ ಮುನಿಯೇ, ನಾನು ಕೊಡಬೇಕಾದ ಹಣ

ನಿಮಗೆ ಕಯ್ ಸೇರಿತಲ್ಲವೇ; **ಏನು ಬಂದುದು. ಆನ್ ಬಂದ ದಿನ ಮೊದಲ್ ಇಂದು ತನಕ ಎನ್ನ ಹಿಂದುಳಿದ ಬತ್ತಾಯ ಬಂದುದು**=ಯಾವ ಹಣ ಬಂತು. ನಾನು ಬಂದ ದಿನದಿಂದ ಮೊದಲುಗೊಂಡು ಇಂದಿನವರೆಗೆ ನಿನ್ನೊಡನೆ ಬಂದಿದ್ದಕ್ಕಾಗಿ ನೀನು ನನಗೆ ಕೊಡಬೇಕಾದ ಕೂಲಿಯ ಹಣ ತಲುಪಿತು;

ಎನ್ನ ಒಡೆಯಂಗೆ ಕೊಡುವ ಹೊಸ ರಾಸಿ ಹೊನ್ನ ತಂದೀಗ ಕೊಡು=ನನ್ನ ಒಡೆಯನಾದ ವಿಶ್ವಾಮಿತ್ರನಿಗೆ ಕೊಡಬೇಕಾದ ದೊಡ್ಡ ಮೊತ್ತದ ಹಣವನ್ನು ತಂದು, ನನಗೆ ಒಪ್ಪಿಸು; **ಕೊಡದಡೆ ಇಲ್ಲ ಎನ್ನು ಹೋಗಬೇಕು**=ಕೊಡುವುದಕ್ಕೆ ನಿನ್ನಿಂದ ಆಗದಿದ್ದರೆ, ಕೊಡಲಾರೆ ಎಂದು ಹೇಳು. ನಾನು ಆಶ್ರಮಕ್ಕೆ ಹೋಗಬೇಕು; **ಈ ಹೊನ್ನ ಬತ್ತಾಯಕ್ಕೆ ತೆರುವನಲ್ಲ**=ನನ್ನ ಹೆಂಡತಿ ಮತ್ತು ಮಗನನ್ನು ಮಾರಿ ಬಂದಿರುವ ಹಣವನ್ನು ನಿನ್ನ ಕೂಲಿಯಾಗಿ ಕೊಡುವುದಿಲ್ಲ; **ಈ ಮಧ್ಯಸ್ಥ ವಿಪ್ರ ಮೆಚ್ಚಲು ಕೊಂಬೆನ್**=ನನ್ನ ನಿನ್ನ ನಡುವೆ ವಾದ ಬೇಡ. ಈ ವಿಪ್ರನು ನನ್ನ ಮಾತನ್ನು ಸರಿಯೆಂದು ಒಪ್ಪಿಕೊಂಡರೆ, ಹಣವನ್ನು ನಾನೇ ಇಟ್ಟುಕೊಳ್ಳುತ್ತೇನೆ; **ಅವನೀಶ ಕೇಳ್**=ಹರಿಶ್ಚಂದ್ರನೇ, ನಾನು ಬೇಡ. ನೀನೇ ವಿಪ್ರನನ್ನು ಯಾರು ಮಾತು ಸರಿ ಎಂದು ಕೇಳು;

ತಾತ, ಈತನ್ ಇನಿತು ಅರ್ಥವಮ್ ಕೊಂಬುದು ಉಚಿತವೆ ಪಕ್ಷೀಕರಿಸದೆ ಹೇಳು=ಹಿರಿಯನಾದ ವಿಪ್ರನೇ, ಈ ನಕ್ಷತ್ರಕನು ಇಷ್ಟೊಂದು ಹಣವನ್ನು ಕೂಲಿಯಾಗಿ ತೆಗೆದುಕೊಳ್ಳುವುದು ನ್ಯಾಯವೇ ಎಂಬುದನ್ನು ಯಾರೊಬ್ಬರ ಪರವನ್ನು ವಹಿಸದೆ ಸಮಚಿತ್ತದಿಂದ ಹೇಳು; **ನಾಲ್ಕೆರಡು ಮಾತಂಗದ ಉದ್ದದ ಅರ್ಥದ ಸಾಲವಮ್ ಬೇಡ ಬಂದವಂಗೆ ಇನಿತು ಘನವೇ**=ಅನೇಕ ಆನೆಗಳ ಎತ್ತರದಷ್ಟು ದೊಡ್ಡ ರಾಶಿಯ ಸಂಪತ್ತಿನ ಸಾಲವನ್ನು ವಸೂಲು ಮಾಡಲು ಬಂದವನಿಗೆ ಇಷ್ಟು ಸಣ್ಣ ಮೊತ್ತದ ಹಣವು ದೊಡ್ಡದೇ;

ಭೂತಳಾಧಿಪ, ಮುನಿದು ಪೇಳೆನ್. ಇರ್ದುದನ್ ಎಂಬೆನ್. ಈತಗೆ ಇದು ಮರಿಯಾದೆ=ಹರಿಶ್ಚಂದ್ರನೇ, ನಾನು ನಿನ್ನ ಬಗ್ಗೆ ಕೋಪಿಸಿಕೊಂಡು ಹೇಳುತ್ತಿಲ್ಲ. ಇರುವ ಸಂಗತಿಯನ್ನು ಹೇಳುತ್ತಿದ್ದೇನೆ. ಇಷ್ಟು ಮೊತ್ತದ ಹಣವನ್ನು ಈತನಿಗೆ ಕೊಡುವುದು ಆತನ ಜವಾಬ್ದಾರಿಗೆ ತಕ್ಕುದಾಗಿದೆ; **ಜಲವನುಳಿದ ಅಬುಜಕೆ ಆ ತರಣಿ ಮುನಿವನ್ ಎನೆ ನೆಲೆಗೆಟ್ಟು ಬಂದವರ್ಗೆ ಮುನಿಯದವರ್ ಆರ್**= ನೀರಿನಿಂದ ಹೊರಕ್ಕೆ ಹಾಕಲ್ಪಟ್ಟ ತಾವರೆಗೆ, ಆ ಸೂರ್ಯನು ಕೋಪಿಸಿ ಕೊಳ್ಳುತ್ತಾನೆ ಎಂದ ಮೇಲೆ, ಮನೆಮಟವನ್ನು ಕಳೆದುಕೊಂಡು ಬಂದ ಪರದೇಶಿಗಳಿಗೆ ಕೋಪಿಸಿ ಕೊಳ್ಳದವರು ಯಾರು;

ಈ ನುಡಿಗಳು ರೂಪಕದ ತಿರುಳಿನಲ್ಲಿ ಬಳಕೆಯಾಗಿವೆ. ಕೊಳದ ನೀರಿನ

ದಂಟಿನಲ್ಲಿ ತಾವರೆಯ ಹೂವು ಇದ್ದಾಗ ಸೂರ್ಯನ ಕಿರಣಗಳು ತಾವರೆಯನ್ನು ಅರಳಿಸುತ್ತವೆ. ಅದೇ ತಾವರೆಯ ಹೂವು ದಂಟಿನಿಂದ ಕಿತ್ತು ಹೊರಕ್ಕೆ ಬಿದ್ದಾಗ, ಅದೇ ಸೂರ್ಯನ ಕಿರಣಗಳು ಅದನ್ನು ಬಾಡಿಸುತ್ತವೆ. ಅಂತೆಯೇ ಸಂಪತ್ತನ್ನು ಕಳೆದುಕೊಂಡು ಗತಿಹೀನರಾದವರಿಗೆ ಯಾರೂ ಕರುಣೆಯನ್ನು ತೋರಿಸುವುದಿಲ್ಲ ಮತ್ತು ಅವರ ಪರವಾಗಿ ಮಾತನಾಡುವುದಿಲ್ಲ;

ಜನಪ, ವಿನಯದಿಮ್ ಕಂಡುದಮ್ ನುಡಿದಡೆ ಎನ್ನನ್ ನಿನಗೆ ಮುನಿದನ್ ಎಂದೆಂಬೆ=ಹರಿಶ್ಚಂದ್ರನೇ, ವಿನಯದಿಂದಲೇ ನಾನು ತಿಳಿದುಕೊಂಡಿದ್ದನ್ನು ಹೇಳಿದರೆ, ನಿನ್ನ ಬಗ್ಗೆ ನಾನು ಕೋಪಿಸಿಕೊಂಡಿದ್ದೇನೆ ಎಂದು ತಪ್ಪಾಗಿ ತಿಳಿದಿರುವೆ; **ನೀನ್ ಮುನಿದು ಮಾಡುವುದೇನು**=ನೀನು ನನ್ನ ಬಗ್ಗೆ ತಪ್ಪು ತಿಳಿದು ಕೋಪಿಸಿಕೊಂಡು ಏನನ್ನು ತಾನೆ ಮಾಡಬಲ್ಲೆ; **ಎಮ್ಮ ಒಡವೆಯಮ್ ಕೊಂಡೀಗ ಹೋಹೆವು ಎಂದು ನುಡಿದು**=ನಾವು ಕೊಂಡುಕೊಂಡಿರುವ ವಸ್ತುವನ್ನು ಈಗ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿ; ಸವುಡಿದೊತ್ತು=ಸವುಡಿ+ತೊತ್ತು;

ಸವುಡಿದೊತ್ತು=ಅಪ್ರಯೋಜಕಳಾದ ದಾಸಿ; ಕೂಲಿಯಾಳುಗಳನ್ನು ಇಲ್ಲವೇ ಒತ್ತೆಯಿಟ್ಟುಕೊಂಡವರನ್ನು ಬಯ್ಯುವಾಗ "ನೀನು ಯಾವ ಕೆಲಸಕ್ಕೂ ಬಾರದವನು/ಳು" ಎಂದು ಅಲ್ಲಗಳೆಯುವ ನುಡಿಗಟ್ಟು; **ಎಲಗೆ ಸವುಡಿದೊತ್ತೆ, ಏಳ್ ಮನೆಯ ಕೆಲಸಕ್ಕೆ ನಡೆ**=ಚಂದ್ರಮತಿಯನ್ನು ಕುರಿತು "ಎಲೆ ಹೆಂಗುಸೆ, ಕೆಲಸಕ್ಕೆ ಬಾರದವಳೆ, ಸಿದ್ಧಳಾಗು ಮನೆಯ ಕೆಲಸಕ್ಕೆ ನಡೆ; **ಎಲವೊ ಚಿಣ್ಣ, ಏಳು ಹುಲು ಹುಳ್ಳಿ ತರಲು ಕಾನನಕೆ ಹೋಗು ಎಂದು**=ಎಲವೊ ಬಾಲಕ, ತಯಾರಾಗು ಹುಲ್ಲು ಮತ್ತು ಒಣಗಿದ ಸಣ್ಣಪುಟ್ಟ ಕಟ್ಟಿಗೆಯನ್ನು ತರಲು ಕಾಡಿನತ್ತ ನಡೆ ಎಂದು ಅಬ್ಬರಿಸುತ್ತ;

ಅಕಟ ಆ ಕಪಟವಟು ವೇಷಮಯದ ಅನಿಲಸಖನು ಮಾನಿನಿಯನ್ ಕುಮಾರನನ್ ಜರೆದನ್=ಅಯ್ಯೋ... ಬ್ರಾಹ್ಮಣ ವೇಷವನ್ನು ತೊಟ್ಟಿರುವ ಅಗ್ನಿದೇವನು ಚಂದ್ರಮತಿಯನ್ನು ಮತ್ತು ಲೋಹಿತಾಶ್ವನನ್ನು ಗದರಿಸಿದನು; ಬೊಪ್ಪಯ್ಯ=ಅಪ್ಪನನ್ನು ಪ್ರೀತಿಯಿಂದ ಕರೆಯುವಾಗ ಬಳಸುವ ಪದ; **ಹೋಹೆನೇ ತಂದೆ...ಬೊಪ್ಪಯ್ಯ ಎಂದೆಂದು ಕಡುನೇಹದಿಂದ ಅಪ್ಪಿ**=ಅಪ್ಪಾ ಹೋಗುತ್ತೇನೆ ಎಂದು ಲೋಹಿತಾಶ್ವನು ಹೇಳುತ್ತ, ಹರಿಶ್ಚಂದ್ರನನ್ನು ಬಹಳ ಪ್ರೀತಿಯಿಂದ ಅಪ್ಪಿಕೊಂಡು; ಕಾಹೊನಲ್+ಒಳ್; ಕಾಹೊನಲ್=ಕಾಡಿನಲ್ಲಿ ತುಂಬಿ ಹರಿಯುವ ನದಿ; **ಕಂಬನಿಯ ಕಾಹೊನಲ್**=ಇದೊಂದು ರೂಪಕ. ಕಣ್ಣೀರಿನ ಕಡಲು ಎಂಬ ತಿರುಳಿನಲ್ಲಿ ಬಳಕೆಗೊಂಡಿದೆ;

ಕರುಣಮ್ ತೋರಿ ಕಂಬನಿಯ ಕಾಹೊನಲೊಳ್ ಅದ್ದುವ ಕುಮಾರನನ್=ಅಪ್ಪನನ್ನು ಬಿಟ್ಟಿರಲಾರದ ಸಂಕಟದಿಂದ ಕರುಣೆಯನ್ನು ಹುಟ್ಟಿಸುವಂತೆ ಕಣ್ಣೀರಿನ ಕಡಲಲ್ಲಿ ಮುಳುಗಿರುವ ಲೋಹಿತಾಶ್ವನನ್ನು; **ಕಾಲ್ಗೆರಗಿ ತಲೆವಾಗಿ ನಿಂದ ಸತಿಯ**=ಹರಿಶ್ಚಂದ್ರನ ಪಾದಗಳಿಗೆ ತಲೆ ಬಗ್ಗಿಸಿ ನಮಿಸುತ್ತಿರುವ ಚಂದ್ರಮತಿಯನ್ನು ವಿಪ್ರನು ನೋಡಿ; ಬೇಹೊಡೆಯ=ಹಣವನ್ನು ಕೊಟ್ಟು ಕೊಂಡುಕೊಂಡಿರುವ ಯಜಮಾನ;

ಬೇಹೊಡೆಯ ನಾನಿರಲು ಮಾರಿದವನನ್ ಕೇಳ್ವ ಸಾಹಸವ ನೋಡ ಎಂದು ಕೆಡೆಹೊಯ್ದು ನೂಕಿ=ದಣಿಯಾದ ನಾನಿರಲು, ಮಾರಿದವನ ಬಳಿ ಹೋಗಲು ಒಪ್ಪಿಗೆಯನ್ನು ಕೇಳುತ್ತಿರುವ ಇವರ ಕೆಚ್ಚನ್ನು ನೋಡು ಎಂದು ಅಬ್ಬರಿಸುತ್ತ ಚಂದ್ರಮತಿ ಮತ್ತು ಲೋಹಿತಾಶ್ವನನ್ನು ಕೆಳಕ್ಕೆ ಬೀಳುವಂತೆ ಹೊಡೆದು ಮುಂದಕ್ಕೆ ತಳ್ಳಿ; **ಅವನಿಪನ ಮನ ಮರುಗಬೇಹುದೆಂದು ಜರೆಯುತ್ತ ನಿಜಗೇಹಕ್ಕೆ ಕೊಂಡೊಯ್ದನ್**=ಹರಿಶ್ಚಂದ್ರನ ಮನಸ್ಸು ಗಾಸಿಗೊಂಡು ನರಳುವಂತೆ ಮಾಡಬೇಕೆಂದು ವಿಪ್ರನು ಅವರಿಬ್ಬರನ್ನು ಬಯ್ಯುತ್ತ, ತನ್ನ ಮನೆಗೆ ಕರೆದುಕೊಂಡು ಹೋದನು;

❖

ಪ್ರಸಂಗ–೧೭

ಹರಿಶ್ಚಂದ್ರನ ಮಾರಾಟ

ಖಗವಂಶದ ಇಕ್ಷ್ವಾಕು ಭೂವರನ ಪೀಳಿಗೆಯೊಳ್ ಒಗೆದ ತ್ರಿಶಂಕು ವಸುಧಾಧಿನಾಯಕನ ಹೆಮ್ಮಗ ಹರಿಶ್ಚಂದ್ರನನ್ ಮಾರುಗೊಂಡು ಓಲೈಸಿಕೊಂಬರಿಲ್ಲಾ ಎನ್ನುತ್ತ=ಸೂರ್ಯವಂಶದ ಮೊದಲ ರಾಜನಾದ ಇಕ್ಷ್ವಾಕುವಿನ ಮನೆತನದಲ್ಲಿ ಹುಟ್ಟಿದ; ಪ್ರಪಂಚಕ್ಕೆ ಉತ್ತಮ ಒಡೆಯನೆಂದು ಹೆಸರಾಂತ ತ್ರಿಶಂಕುವಿನ ಹಿರಿಯ ಮಗನಾದ ಹರಿಶ್ಚಂದ್ರನನ್ನು ಕೊಂಡುಕೊಂಡು ಸೇವೆಮಾಡಿಸಿಕೊಳ್ಳುವವರು ಯಾರಾದರೂ ಇರುವಿರಾ ಎಂದು ದೊಡ್ಡ ದನಿಯಲ್ಲಿ ಕೂಗಿ ಹೇಳುತ್ತ; **ಬಗೆಬಗೆದು ಪುರದ ಕೇರಿಯ ಮನೆಯೊಳ್**=ಬೇರೆ ಬೇರೆ ದಿಕ್ಕುಗಳಲ್ಲಿದ್ದ ಕಾಶಿ ನಗರದ ಬೀದಿಯ ಮನೆಗಳ ಮುಂದೆ ನಡೆದುಬಂದು; **ಅಡ್ಡ ಬೀದಿಗಳ ಬೀದಿಯ ನಿಂದ ನೆರವಿಗಳ ಜನಮುಮನ್ ಮಿಗೆ ಕೇಳಿಸುತ್ತ**=ಚಿಕ್ಕ ಚಿಕ್ಕ ಸಂದಿಗೊಂದಿಗಳಲ್ಲಿ ಮತ್ತು ದೊಡ್ಡ ದೊಡ್ಡ ಬೀದಿಗಳಲ್ಲಿ ಗುಂಪುಗುಂಪಾಗಿ ನಿಂತಿದ್ದ ಜನರಿಗೆ ಚೆನ್ನಾಗಿ ಕೇಳಿಸುವಂತೆ ಕೂಗಿ ಕೂಗಿ ಹೇಳುತ್ತ;

ಮಧ್ಯಾಹ್ನ ಮೊದಲಾಗಿ ಕಡೆ ಹಗಲ ತನಕ ತೊಳಲಿದನು=ಅಂದು ಮಧ್ಯಾಹ್ನದಿಂದ ಮೊದಲುಗೊಂಡು ಸಂಜೆಯವರೆಗೂ ಕಾಶಿ ನಗರದ ಎಲ್ಲೆಡೆಯಲ್ಲಿಯೂ ಹರಿಶ್ಚಂದ್ರನು ಒಂದೇ ಸಮನೆ ತಿರುಗಿದನು; **ಮಡದಿಯರನ್ ಇರಿಸಿಕೋ ಎಂದು ನಾನ್ ಬೇಡಿಕೊಂಡಡೆ**=ನನ್ನ ಇಬ್ಬರು ಹೆಣ್ಣುಮಕ್ಕಳನ್ನು ಮದುವೆಯಾಗು ಎಂದು ನಾನು ಇನ್ನಿಲ್ಲದಂತೆ ಕೇಳಿಕೊಂಡರೆ; **ಮೀರಿ**

ಹೊಲತಿಯರನ್ ಒಲ್ಲೆನ್ ಎಂಬ ಅಣ್ಣನನ್=ನನ್ನ ಮಾತನ್ನು ಲೆಕ್ಕಿಸದೆ ಹೊಲತಿಯರನ್ನು ಮದುವೆಯಾಗುವುದಿಲ್ಲ ಎಂಬ ಈ ಅಣ್ಣನನ್ನು; ಈ ಸನ್ನಿವೇಶದಲ್ಲಿ 'ಅಣ್ಣ' ಎಂಬ ಪದ ಹರಿಶ್ಚಂದ್ರನನ್ನು ಅಣಕಿಸುವ ತಿರುಳಿನಲ್ಲಿ ಬಳಕೆಗೊಂಡಿದೆ;

ಕಡೆಗೆ ಅನಾಮಿಕನ ಕಿಂಕರನಾಗಿ ಸುಡುಗಾಡ ಕಾವಂತೆ ಮಾಳ್ಪೆನ್ ಎಂದು=ಹರಿಶ್ಚಂದ್ರನು ಬೇರೆ ದಾರಿಯೇ ಇಲ್ಲದೆ ಚಂಡಾಲನ ದಾಸನಾಗಿ ಹೆಣಗಳನ್ನು ಸುಡುವ ಮಸಣವನ್ನು ಕಾಯುವಂತೆ ಮಾಡುತ್ತೇನೆ ಎಂದು ವಿಶ್ವಾಮಿತ್ರನು ಮತ್ತೊಂದು ಸಂಚನ್ನು ಹೂಡಲು ನಿಶ್ಚಯಿಸಿಕೊಂಡು; **ಕಡುಮೂರ್ಖ ಕೌಶಿಕನ್ ಕಾಲನನ್ ಕರೆದು**=ತಿಳಿಗೇಡಿಯಾದ ವಿಶ್ವಾಮಿತ್ರನು ಸಾವಿನ ದೇವತೆಯಾದ ಯಮನನ್ನು ಕರೆದು; **ನೀನ್ ಬಿಡದೆ ಅನಾಮಿಕನಾಗಿ ಧನವನಿತ್ತು ಅರಸನನ್ ಮುನ್ನೊಂದು ತಿಂಗಳ್ ತಡೆ ಎಂದು ಎನೆ ಕಳುಹೆ**=ನೀನು ಈ ಕೂಡಲೇ ಚಂಡಾಲನ ವೇಷವನ್ನು ತೊಟ್ಟು, ಕಾಶಿ ನಗರಕ್ಕೆ ಹೋಗಿ, ತನ್ನನ್ನು ಮಾರಾಟಕ್ಕೆ ಇಟ್ಟುಕೊಂಡಿರುವ ಹರಿಶ್ಚಂದ್ರನಿಗೆ ಹಣವನ್ನು ಕೊಟ್ಟು ಕೊಂಡುಕೊಂಡು, ಮುಂದಿನ ಒಂದು ತಿಂಗಳು ನಿನ್ನ ಬಳಿ ಇಟ್ಟುಕೊಂಡಿರು ಎಂದು ಹೇಳಿ ಕಳುಹಿಸಲು;

ಬಂದು, ಆ ಹೊತ್ತ ಹಾರಿರ್ದನು=ಯಮನು ಕಾಶಿ ನಗರಕ್ಕೆ ವೀರಬಾಹುಕನೆಂಬ ಹೆಸರಿನ ಚಂಡಾಲನ ವೇಷದಲ್ಲಿ ಬಂದು, ಹರಿಶ್ಚಂದ್ರನನ್ನು ತನ್ನ ದಾಸನಾಗಿ ಕೊಂಡುಕೊಳ್ಳಲು ಸಿದ್ಧನಾದನು; ದೇವಲೋಕದ ಯಮನು ಕಾಶಿ ನಗರದಲ್ಲಿ ಚಂಡಾಲನ ಉಡುಗೆತೊಡುಗೆಯಲ್ಲಿ ಕಾಣಿಸಿಕೊಂಡ ಬಗೆಯನ್ನು ಕವಿಯು ಚಿತ್ರಿಸಿದ್ದಾನೆ; **ಕಾರೊಡಲು**=ಕಪ್ಪನೆಯ ಮಯ್; **ಕೆಂಗಣ್ಣು**=ಕೆಂಪನೆಯ ಕಣ್ಣು; **ಕುಡಿದು ಕೊಬ್ಬಿದ ಬಸುರು**=ಮಾದಕ ಪಾನೀಯವನ್ನು ಕುಡಿಕುಡಿದು ಉಬ್ಬಿರುವ ಹೊಟ್ಟೆ; **ಕೆದರಿದ ತಲೆಯನ್ ಅಡಸಿ ಸುತ್ತಿದ ಮುಪ್ಪುರಿಯ ಬಾರಿ ಕಡ್ಡಣಿಗೆಯ**=ಕೆದರಿದ ತಲೆಗೂದಲನ್ನು ಬಿಗಿಯಾಗಿ ಒತ್ತಿಹಿಡಿದು ಮೂರು ಎಳೆಗಳಿಂದ ಹೆಣೆದಿರುವ ತೊಗಲಿನ ಪಟ್ಟಿಯಿಂದ ಕೂಡಿರುವ ಜಡೆ;

ಸಂಬಳಿ+ಕೋಲು=ಸಂಬಳಿಗೋಲು; ಸಂಬಳಿ=ಹೊಲೆಯ; **ಸಂಬಳಿಗೋಲು**=ಜನವಸತಿಯಿರುವ ಊರಿನ ಬೀದಿಗಳಲ್ಲಿ ಹೊಲೆಯನು/ಚಂಡಾಲನು ಬರುವಾಗ, ತನ್ನ ಬರುವಿಕೆಯನ್ನು ಜನರಿಗೆ ಹೇಳಿ, ಜನರು ಪಕ್ಕಕ್ಕೆ ಸರಿಯುವಂತೆ ಸೂಚಿಸಲೆಂದು ನೆಲದ ಮೇಲೆ ಕುಟ್ಟಲು ಬಳಸುತ್ತಿದ್ದ ದೊಣ್ಣೆ; **ಪಿಡಿದ ಸಂಬಳಿಗೋಲು**=ಕಯ್ಯಲ್ಲಿ ಹಿಡಿದಿರುವ ಸಂಬಳಿಗೋಲು;

ಪ್ರಾಚೀನ ಇಂಡಿಯಾದಲ್ಲಿದ್ದ ವರ್ಣವ್ಯವಸ್ಥೆಯ ಕಟ್ಟುಪಾಡುಗಳು ಬ್ರಾಹ್ಮಣ–ಕ್ಷತ್ರಿಯ–ವೈಶ್ಯರಿಗೆ ಮಾತ್ರ ವಿದ್ಯೆ, ಅಧಿಕಾರ ಮತ್ತು ಸಂಪತ್ತನ್ನು ಪಡೆದು ಬಾಳುವ ಅವಕಾಶವನ್ನು ನೀಡಿತ್ತು. ಶೂದ್ರರು ಈ ಮೂರು ವರ್ಣದವರ ಸೇವೆಗೆಂದೇ ಮೀಸಲಾಗಿದ್ದರು. ವರ್ಣವ್ಯವಸ್ಥೆಯ ಹೊರಗಿದ್ದ ಚಂಡಾಲರನ್ನು/ಹೊಲೆಯರನ್ನು ಮಾನವ ಸಮುದಾಯದ ಸಾಮಾಜಿಕ ಜೀವನದಿಂದಲೇ ದೂರವಿಡಲಾಗಿತ್ತು. ಮೇಲು ವರ್ಣದವರು ಚಂಡಾಲರನ್ನು/ಹೊಲೆಯರನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ ಮತ್ತು ಕೆಲವು ಕಡೆಗಳಲ್ಲಿ ಅವರನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಮುಟ್ಟಿಸಿಕೊಂಡರೆ ಮೈಲಿಗೆಯಾಗುತ್ತದೆ ಇಲ್ಲವೇ ಕೇಡು ತಟ್ಟುತ್ತದೆ ಎಂಬ ನಂಬಿಕೆಯು ಮೇಲು ವರ್ಣದವರ ಮನದಲ್ಲಿ ನೆಲೆಗೊಂಡಿತ್ತು.

ಊರ ಹೊರಗಿನ ಬಯಲುಗಳಲ್ಲಿ ಇಲ್ಲವೇ ನೆಲೆಗಳಲ್ಲಿ ವಾಸಿಸುತ್ತಿದ್ದ ಚಂಡಾಲರು/ಹೊಲೆಯರು ಮೇಲು ವರ್ಣದವರ ಮಲಮೂತ್ರಗಳ ಬುಟ್ಟಿಗಳನ್ನು ತಲೆಯ ಮೇಲೆ ಹೊತ್ತು ಊರಿನಿಂದ ಹೊರಕ್ಕೆ ಸಾಗಿಸುವ ಮತ್ತು ಊರೊಳಗೆ ದನಕರುಗಳು ಸತ್ತಾಗ, ಅವನ್ನು ಹೊರಕ್ಕೆ ಎಳೆದೊಯ್ದು ಯಾವುದೇ ಸಾಂಕ್ರಾಮಿಕ ರೋಗಗಳು ಹರಡದಂತೆ ಮಾಡುವ ಕೆಲಸವನ್ನು ಮಾಡಬೇಕಿತ್ತು. ಊರಿನೊಳಕ್ಕೆ ಈ ಕೆಲಸವನ್ನು ಮಾಡಲೆಂದು ಬರುವಾಗ ಪ್ರತಿಯೊಬ್ಬ ಚಂಡಾಲನೂ/ಹೊಲೆಯನೂ ತನ್ನ ಕಯ್ಯಲ್ಲಿ ಒಂದು ಸಂಬಳಿಗೋಲನ್ನು ಹಿಡಿದುಕೊಂಡಿದ್ದು, ಅದನ್ನು ನೆಲಕ್ಕೆ ಬಡಿಯುತ್ತ, ಎತ್ತರದ ದನಿಯಲ್ಲಿ "ಸಂಬೋಳಿ .ಸಂಬೋಳಿ" ಎಂದು ಕೂಗುತ್ತ ಬರಬೇಕಿತ್ತು. ಈ ಕೂಗನ್ನು ಕೇಳಿಯೇ ಮೇಲು ವರ್ಣದವರು ಅವರಿಂದ ದೂರಸರಿಯುತ್ತಿದ್ದರು. ಇಂತಹ ಅಮಾನವೀಯವಾದ ಧಾರ್ಮಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯು ಸಾವಿರಾರು ವರ್ಷಗಳಿಂದಲೂ ಇಂಡಿಯಾ ದೇಶದಲ್ಲಿ ಇದ್ದುದ್ದನ್ನು ಪ್ರಾಚೀನ ಕಾಲದಲ್ಲಿ ರಚನೆಗೊಂಡ ಎಲ್ಲ ಹೊತ್ತಗೆಗಳೂ ದಾಖಲಿಸಿವೆ;

ದಡದಡಿಸಿ ತರಹರಿಸುವ ಅಡಿಯ=ಸಡಗರದಿಂದ ಬಿರುಸಾಗಿ ಇಡುತ್ತಿರುವ ದೊಡ್ಡ ಹೆಜ್ಜೆಯ; **ಬಿಡದೆ ಢರನೆ ತೇಗಿ**=ನಡುನಡುವೆ ಢರ್ರನೆ ತೇಗುತ್ತ; **ನೆರವಿಯನ್ ಬಯ್ವ ಬಿರುನುಡಿಯ ಕಲಿ ವೀರಬಾಹುಕ ಬರುತ್ತಮ್**=ಸುತ್ತಮುತ್ತ ಇದ್ದ ತನ್ನ ದಾಸರನ್ನು ಗದರಿಸಿ ನಿಂದಿಸುವ ಒರಟು ನುಡಿಯನ್ನಾಡುತ್ತ ಕಲಿ ವೀರಬಾಹುಕನು ಕಾಶಿನಗರದ ಬೀದಿಯಲ್ಲಿ ಬರುತ್ತ; ಹಡಪಿಗ=ಎಲೆ ಅಡಕೆಯ ಚೀಲವನ್ನು ಹಿಡಿದುಕೊಂಡು ತನ್ನ ಒಡೆಯನು ಕೇಳಿದಾಗಲೆಲ್ಲಾ ತಾಂಬೂಲವನ್ನು ಕೊಡುವ ಸೇವಕ;

ಮಾರುವಡೆ ನಾನ್ ಕೊಂಡು ಹೊಂಗೊಡುವೆ ಎಂದು ತನ್ನ ಹಡಪಿಗನಿಂದ

ಕೇಳಿಸಿದನು=ತನ್ನನ್ನು ತಾನು ಮಾರಾಟಮಾಡಿಕೊಳ್ಳುವುದಾದರೆ ನಾನು ಹಣಕೊಟ್ಟು ತೆಗೆದುಕೊಳ್ಳುತ್ತೇನೆ ಎಂದು ಹರಿಶ್ಚಂದ್ರನಿಗೆ ಹೇಳುವಂತೆ ತನ್ನ ಹಡಪಿಗನಿಗೆ ವೀರಬಾಹುಕನು ಆಜ್ಞಾಪಿಸಿದನು; **ಕೊಡುವಾತನ್ ಆರು?... ಬೆಲೆ ಏನು?... ಮಾರಿಸಿಕೊಂಬ ಪೊಡವೀಶನ್ ಎಂಬನ್ ಆರೋ?...ವೀರಬಾಹು ಕೇಳ್ದಡೆ ಈಗಳ್ ಕೊಂಬನ್ ಎಂದು ಎನೆ**=ಹಡಪಿಗನು ಹರಿಶ್ಚಂದ್ರನ ಬಳಿಗೆ ಬಂದು "ಮಾರಾಟಮಾಡುತ್ತಿರುವ ವ್ಯಕ್ತಿ ಯಾರು... ಬೆಲೆ ಏನು... ಮಾರಿಕೊಳ್ಳುತ್ತಿರುವ ರಾಜನೆಂಬುವನು ಯಾರು ಎನ್ನುವ ವಿವರಗಳೆಲ್ಲವೂ ತಿಳಿದರೆ ನಮ್ಮ ದಣಿಯಾದ ವೀರಬಾಹುಕನು ಈಗಲೇ ಕೊಂಡುಕೊಳ್ಳುತ್ತಾನೆ" ಎಂದು ಹೇಳಲು; **ನೃಪನ್ ಬೆರಗಾಗಿ**=ಹರಿಶ್ಚಂದ್ರನು ಅಚ್ಚರಿಗೊಂಡು;

ಸೂರ್ಯವಂಶದಲಿ ಹುಟ್ಟಿ, ಮೃಡಮೂರ್ತಿ ವಾಸಿಷ್ಠಮುನಿಯ ಕಾರುಣ್ಯಮನ್ ಪಡೆದ ಎನ್ನನ್ ಈ ಹೊಲೆಯ ಮಾರುಗೊಂಡಪೆನೆ ಎಂದು ನುಡಿವ ಬಲುಹಮ್ ನೋಡು ನೋಡು ಎಂದು ಕಡುಮುಳಿದು ಅವನೀಶನು ಕೋಪಿಸಿದನ್=ಸೂರ್ಯವಂಶದಲ್ಲಿ ಹುಟ್ಟಿ, ಶಿವನಿಗೆ ಸಮಾನವಾದ ಮಹಿಮೆಯನ್ನು ಹೊಂದಿರುವ, ವಾಸಿಷ್ಠ ಮುನಿಯ ಅನುಗ್ರಹವನ್ನು ಪಡೆದು ಬೆಳೆದಿರುವ ನನ್ನನ್ನು ಈ ಹೊಲೆಯ ಕೊಂಡುಕೊಳ್ಳಲು ಸಿದ್ಧನಾಗಿದ್ದಾನೆ ಎಂದು ನುಡಿಯುತ್ತಿರುವ ಸೊಕ್ಕನ್ನು ನೋಡು ನೋಡು ಎಂದು ಹರಿಶ್ಚಂದ್ರನು ಬಹಳವಾಗಿ ಕೆರಳಿ ಕೋಪಗೊಂಡನು; **ನಡುಗದೆ, ಅಂಜದೆ, ಹೆದರದೆ, ಓಸರಿಸದೆ**=ನಡುಗದೆ, ಹಿಂಜರಿಯದೆ, ಹೆದರದೆ, ಹಿಮ್ಮೆಟ್ಟದೆ;

ಅಕಟಕಟ... ಕಡೆಯ ಹೊಲೆಯನ್ ಮೇರೆದಪ್ಪಿ ಬಂದು, ಎನ್ನ ತನ್ನೊಡೆಯಂಗೆ ಈಗಳ್ ದಾಸನಾಗು ಎಂದೆಂಬುದು=ಅಯ್ಯಯ್ಯೋ... ಕೀಳಾದ ಹೊಲೆಯನು ತನ್ನ ಎಲ್ಲೆಯನ್ನು ಮೀರಿ ಬಂದು, ನನ್ನನ್ನು ತನ್ನ ಒಡೆಯನಿಗೆ ಈಗ ದಾಸನಾಗು ಎಂದು ಹೇಳುತ್ತಿರುವುದು; ಮೇಲು ಕುಲದ ಕ್ಷತ್ರಿಯನಾದ ತನ್ನನ್ನು ಕೀಳು ಕುಲದ ಚಂಡಾಲನಾದ/ಹೊಲೆಯನಾದ ವ್ಯಕ್ತಿಯೊಬ್ಬ ಬಂದು, ಈ ರೀತಿ ಚಂಡಾಲನಿಗೆ/ ಹೊಲೆಯನಿಗೆ ದಾಸನಾಗು ಎಂದು ಹೇಳುತ್ತಿರುವುದು;

ಹರಿಶ್ಚಂದ್ರನ ಮಯ್ ಮನದಲ್ಲಿ "ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ" ಎಂಬ ವರ್ಣವ್ಯವಸ್ಥೆಯ ಮೇಲು ಕೀಳಿನ ತಾರತಮ್ಯವು ಬೇರೂರಿದೆ. ಕುಲದ ಹೆಮ್ಮೆ ಅವನನ್ನು ಎಡೆಬಿಡದೆ ಕಾಡುತ್ತಿದೆ;

ಇದು ಕಾಲಗುಣವೋ ಎನ್ನನು ಎಡೆಗೊಂಡ ಕರ್ಮಫಲವೋ=ಇದು ಬದಲಾದ ಕಾಲದ ನಡೆನುಡಿಯೋ ಇಲ್ಲವೇ ನನ್ನನ್ನು ಬೆನ್ನಟ್ಟಿದ ಕಳೆದ ಜನ್ಮದ ಪಾಪದ ಫಲವೋ; **ಕಡೆಗೆ ಮೆಣಸು ಹುಳಿತಡೆ ಜೋಳದಿಮ್ ಕುಂದೆ**=ಏನೇ ಆಗಲಿ

ಮೆಣಸು ಹುಳು ಬಿದ್ದು ಹಾಳಾದರೂ ಜೋಳಕ್ಕಿಂತ ಕಡಿಮೆಯಲ್ಲ. ಇದೊಂದು ಗಾದೆ ಮಾತು.

ಈ ಸನ್ನಿವೇಶದಲ್ಲಿ ಮೇಲು ಕುಲದವನಾದ ಹರಿಶ್ಚಂದ್ರನಾದ ನಾನು, ನನ್ನೆಲ್ಲಾ ರಾಜ್ಯಸಂಪತ್ತು ಮತ್ತು ಅಧಿಕಾರವನ್ನು ಕಳೆದು ಕೊಂಡಿದ್ದರೂ, ಕೀಳು ಕುಲದ ಚಂಡಾಲ/ಹೊಲೆಯನಿಗಿಂತ ಎಂದೆಂದಿಗೂ ಮೇಲಾಗಿರುವ ವ್ಯಕ್ತಿ ಎಂಬ ರೂಪಕದ ತಿರುಳಿನಲ್ಲಿ ಬಳಕೆಗೊಂಡಿದೆ; ಹರಿಶ್ಚಂದ್ರನ ಮಯ್ ಮನದಲ್ಲಿ ತನ್ನ ಕುಲದ ಬಗ್ಗೆ ಹೆಮ್ಮೆ ಮತ್ತು ಚಂಡಾಲ ಕುಲದ ಬಗ್ಗೆ ತಿರಸ್ಕಾರದ ಭಾವನೆಯು ಆಳವಾಗಿ ಬೇರೂರಿದೆ;

ನೋಡು ನೋಡು ಎಂದು ಅವನಿಪನ್ ಘುಡುಘುಡಿಸಿ ಕೋಪಾಟೋಪದಿಮ್ ಅನಾಮಿಕನನು ಜರೆದು ಝಂಕಿಸಿದನ್=ನೋಡು… ನೋಡು… ಈ ಹೊಲೆಯನ ಸೊಕ್ಕಿನ ವರ್ತನೆಯನ್ನು ಎಂದು ಹರಿಶ್ಚಂದ್ರನು ಅಬ್ಬರಿಸುತ್ತ, ಕೋಪೋದ್ರೇಕದಿಂದ ಹಡಪಿಗನನ್ನು ಬಯ್ದು ಗದರಿಸಿದನು; **ಕೇಳಿ ಬಂದು**= ಹಡಪಿಗನನ್ನು ನಿಂದಿಸಿ ಆಡಿದ ಮಾತುಗಳನ್ನು ಕೇಳಿದ ವೀರಬಾಹುಕನು ಹರಿಶ್ಚಂದ್ರನ ಬಳಿಗೆ ಬಂದು; **ಆರ ಜರೆದಪೆ**=ಯಾರನ್ನು ಬಯ್ಯುತ್ತಿರುವೆ; **ನಿನ್ನ ಹಡಪಾಳಿಯನ್**=ನಿನ್ನ ಹಡಪಿಗನನ್ನು; **ಅದೇಕೆ**=ಏತಕ್ಕೆ ಬಯ್ಯುತ್ತಿರುವೆ; **ಎನ್ನನ್ ಅರಿದರಿದು ಅನಾಮಿಕಂಗೆ ಆಳಾದಪಾ ಎಂದು ನುಡಿದನ್. ಕೀಳು ಮೇಲಮ್ ನೋಡದೆ ಇಂತು ಎನಬಹುದೆ**=ನಾನು ಯಾರೆಂಬುದು ಚೆನ್ನಾಗಿ ತಿಳಿದಿದ್ದರೂ, ಚಂಡಾಲನಿಗೆ/ಹೊಲೆಯನಿಗೆ ದಾಸನಾಗುವೆಯಾ ಎಂದು ಕೇಳಿದನು. ವ್ಯಕ್ತಿಯ ಕುಲದ ಕೀಳು ಮೇಲನ್ನು ಗಮನಿಸದೆ, ಈ ರೀತಿ ಮಾತನಾಡಬಹುದೆ;

ಕೀಳಾರು ಮೇಲಾರು=ಮಾನವರಲ್ಲಿ ಕೀಳು ಯಾರು ಮೇಲು ಯಾರು; **ಹದುಳವಿಪ್ಪ ಆನು ಚಾಂಡಾಳನೋ ಹುಸಿಯ ಹೊಲೆಯಮ್ ಹೊರುವ ನೀನು ಚಾಂಡಾಳನೋ ಹೇಳ್**=ದಿಟದ ನುಡಿಯನ್ನಾಡುತ್ತಿರುವ ನಾನು ಚಾಂಡಾಲನೋ… ಸುಳ್ಳಿನ ಕೆಟ್ಟ ನಡೆನುಡಿಯನ್ನು ಹೊಂದಿರುವ ನೀನು ಚಾಂಡಾಳನೋ ಹೇಳು; **ಆನ್ ಈಗ ಹುಸಿದುದೇನ್**=ನಾನು ಈಗ ಯಾವ ಸುಳ್ಳನ್ನಾಡಿದೆ; **ಹೊನ್ನುಳ್ಳ ಧನಿಕರ್ ಆರಾದೊಡಮ್ ಕೊಂಬವರ್ ಬನ್ನಿ. ಎನ್ನನ್ ಮಾರುಗುಡುವೆನ್ ಎಂದೆನೆ ದಿಟಮ್ ನನ್ನಿಯುಳ್ಳವನೆಂದು ಬಗೆದು ಬೇಡಿದೆನ್**=ಹಣವುಳ್ಳ ಸಿರಿವಂತರು ಯಾರಾದರೂ ಕೊಂಡುಕೊಳ್ಳುವವರು ಇದ್ದರೆ ಬನ್ನಿ. ನನ್ನನ್ನು ನಾನು ಮಾರಿ ಕೊಳ್ಳುತ್ತಿದ್ದೇನೆ ಎಂದು ನೀನು ಕೂಗಿ ಹೇಳಲು, ಇವನಾರೋ ನಿಜವಾಗಿಯೂ ಸತ್ಯವಂತನೆಂದು ತಿಳಿದು, ಕೊಂಡುಕೊಳ್ಳಲು ಹಡಪಿಗನಿಂದ ಹೇಳಿ ಕಳುಹಿಸಿದೆನು;

ಉತ್ತಮ ದ್ವಿಜರು ಕೊಂಬುದೆಂದು ಮುನ್ನ ನೀನಾಡಿತುಂಟೇ=ಉತ್ತಮ ಕುಲದ ಬ್ರಾಹ್ಮಣರು ಮಾತ್ರ ಕೊಂಡುಕೊಳ್ಳುವುದು ಎಂದು ಈ ಮೊದಲು ನೀನು ಹೇಳಿದ್ದುಂಟೆ... **ಹೇಳು ಭೂಪಾಲ, ನಿನ್ನ ನುಡಿ ನಿನಗೆ ಹಗೆಯಾಯ್ತು**=ಮಾತಾಡು ಹರಿಶ್ಚಂದ್ರ... ನೀನು ಆಡಿದ ಮಾತುಗಳೇ ನಿನಗೆ ಹಗೆಯಾಯಿತು. ಮಾತಿಗೆ ತಪ್ಪಿ ನಡೆಯುತ್ತಿರುವ ಸುಳ್ಳುಗಾರನು ನೀನು; **ಕಂಡುದನಲ್ಲದೆ ಎನ್ನೆ**=ನಾನು ನೀನಾಡಿದ ಮಾತಿನಂತೆ ನಡೆದುಕೊಂಡೆನೇ ಹೊರತು, ಬೇರೆ ಯಾವ ಸುಳ್ಳು ನನ್ನ ಬಾಯಿಂದ ಬಂದಿಲ್ಲ; **ಹೊಲೆಹುಸಿಯ ಹೊರುವವನ್ ನೀ ಹೊಲೆಯನಲ್ಲದೆ ಬಳಿಕ್ಕ ಆರ್ ಎಂದನು**=ಕುಲದ ಮದದಿಂದ ಸುಳ್ಳನ್ನಾಡಿದ ನೀನು ಹೊಲೆಯನಲ್ಲದೆ, ಬಳಿಕ್ಕ ಇನ್ನಾರು ಹೊಲೆಯರು ಎಂದು ವೀರಬಾಹುಕನು ಹರಿಶ್ಚಂದ್ರನ ಮಾತಿನಲ್ಲಿದ್ದ ತಪ್ಪನ್ನು ಎತ್ತಿ ತೋರಿಸಿದನು;

ವಿತ್ತವುಳ್ಳವರ್ಗಳ್ ಎನ್ನನ್ ಕೊಂಬುದೆಂದು ನುಡಿಯಿತ್ತು ದಿಟವು= ಹಣವುಳ್ಳವರು ನನ್ನನ್ನು ಕೊಂಡುಕೊಳ್ಳುವುದೆಂದು ನಾನು ಹೇಳಿದ್ದು ನಿಜ; **ಇನ್ನು ನಾನ್ ಒಗಡಿಸಿದೆನಾದಡೆ ಅನಿಮಿತ್ತ ಹುಸಿ ಬಂದಪುದು**=ಹಾಗೆ ಹೇಳಿದ ನಾನು ಈಗ ಕೊಳ್ಳುವವನು ಚಂಡಾಲನೆಂದು ಅಸಹ್ಯಪಟ್ಟುಕೊಂಡರೆ, ವಿನಾಕಾರಣ ಸುಳ್ಳನ್ನು ಹೇಳಿದ ಅಪವಾದಕ್ಕೆ ನಾನು ಗುರಿಯಾಗುತ್ತೇನೆ; **ಅವಧಿಗೆಟ್ಟಡೆ ಹಿಂದೆ ಮುನಿಗೆ ನಾನ್ ದಾನವಾಗಿ ಇತ್ತ ರಾಜ್ಯಮ್ ನಿರರ್ಥಮ್ ಪೋಗಿ, ಮೇಲೆ ಹುಸಿ ಹೊತ್ತಪ್ಪದು**=ಕೊಟ್ಟಿರುವ ಅವಧಿಯೊಳಗೆ ಸಂಪತ್ತನ್ನು ಕೊಡದಿದ್ದರೆ, ಈ ಹಿಂದೆ ವಿಶ್ವಾಮಿತ್ರ ಮುನಿಗೆ ರಾಜ್ಯವನ್ನು ದಾನವಾಗಿ ಕೊಟ್ಟ ನನ್ನ ಹೆಸರಿಗೂ ಕಳಂಕ ಬಂದು, ಅದರ ಜತೆಗೆ ಸುಳ್ಳುಗಾರನೆಂಬ ಕೆಟ್ಟ ಹೆಸರು ಬರುವುದು; **ಅದರಿಂದ ಮುನ್ನವೆ ಅನಾಮಿಕನ ಚಿತ್ತವಮ್ ಪಡೆವೆನ್ ಎಂದು ಓತು ಅವನೀಶನು ವೀರಬಾಹುಕನನ್ ಕರೆದನ್**=ಸುಳ್ಳುಗಾರನೆಂಬ ಅಪವಾದ ಬರುವುದಕ್ಕೆ ಮೊದಲೇ ಚಂಡಾಲನ ಮನಸ್ಸನ್ನು ಗೆಲ್ಲುವೆನು ಎಂದು ನಿಶ್ಚಯಿಸಿಕೊಂಡು, ಹರಿಶ್ಚಂದ್ರನು ವೀರಬಾಹುಕನನ್ನು ತನ್ನ ಬಳಿಗೆ ಕರೆದನು;

ಹುಸಿಯ ಹೊಲೆಹೊರೆಕಾರ ಮತ್ತೇಕೆ ಕರೆದೆ=ಸುಳ್ಳಿನ ಕೆಟ್ಟ ನಡೆನುಡಿಯವನೇ ಮತ್ತೇಕೆ ನನ್ನನ್ನು ಕರೆಯುತ್ತಿರುವೆ; **ತೆತ್ತ ಸಾಲದ ಭರದೊಳ್ ಅರಿಯದೆ ಆಡಿದ ನುಡಿಗೆ ಹೊತ್ತ ಹುಸಿ ಅಳಿಯಬೇಕು**=ಕೊಡಬೇಕಾಗಿದ್ದ ಸಾಲದ ಹೊರೆಯನ್ನು ತಡೆಯಲಾರದ ಸಂಕಟದಲ್ಲಿ ಏನನ್ನೂ ಆಡಬೇಕು ಎಂಬುದನ್ನು ತಿಳಿಯದೆ ನಾನು ಆಡಿದ ಮಾತುಗಳಿಗೆ ಅಂಟಿಕೊಂಡಿರುವ ಸುಳ್ಳು ನಾಶವಾಗಬೇಕು; **ನಿನ್ನ ಕುಲವಳಿದಲ್ಲದೆ ಅಳಿಯದು**=ನಿನ್ನ ಕುಲದ ಮೇಲರಿಮೆಯು ನಿನ್ನ ಮಯ್ ಮನದಿಂದ ತೊಲಗಿದಲ್ಲದೆ, ನಿನ್ನ ನಡೆನುಡಿಯಲ್ಲಿರುವ ಸುಳ್ಳು ನಾಶವಾಗುವುದಿಲ್ಲ; **ಇನ್ನು**

ಚಿತ್ತೈಸಿ ಕೇಳ್=ವೀರಬಾಹುಕನೇ, ಈಗ ನಾನು ಆಡುವ ಮಾತುಗಳನ್ನು ಮನಗೊಟ್ಟು ಕೇಳು; ನಾಡ ಮದ್ದು=ಗಿಡಮರಬಳ್ಳಿಗಳ ಎಲೆ, ತೊಗಟೆ ಮತ್ತು ಬೇರುಗಳನ್ನು ಅರೆದು ಮಾಡಿರುವ ನಾಟಿ ಔಷಧ; ಮದ್ದು=ರೋಗವನ್ನು ಗುಣಪಡಿಸುವಂತಹ ವಸ್ತು/ಔಷಧ; ಕುತ್ತ=ರೋಗ/ಬೇನೆ;

ನಾಡ ಮದ್ದಮ್ ತಿಂದು ಕುತ್ತ ಕೆಡದಿರಬಹುದೆ=ನಾಡ ಮದ್ದನ್ನು ಸೇವಿಸಿದರೆ, ಎಂತಹ ರೋಗವಾದರೂ ಗುಣವಾಗದೆ ಇರುವುದೇ; ಇದು ಒಂದು ನಾಣ್ನುಡಿ. ಜನರ ಅನುಭವದಿಂದ ತಯಾರಿಸಿದ ಮದ್ದನ್ನು ಸೇವಿಸಿದಾಗ ರೋಗ ಖಂಡಿತವಾಗಿಯೂ ಗುಣವಾಗುವಂತೆಯೇ, ವ್ಯಕ್ತಿಯು ತನ್ನ ತಪ್ಪನ್ನು ಅರಿತು, ಅದನ್ನು ಸರಿಪಡಿಸಿಕೊಂಡು ಬಾಳುವಂತಾದಾಗ, ಆತ ಒಳ್ಳೆಯ ವ್ಯಕ್ತಿಯಾಗುತ್ತಾನೆ ಎಂಬ ರೂಪಕದ ತಿರುಳಿನಲ್ಲಿ ಬಳಕೆಗೊಂಡಿದೆ; **ಸಾಲವಳಿಯಲು ಧನವನಿತ್ತು ರಕ್ಷಿಸು ಸಾಕು**=ಸಾಲವನ್ನು ತೀರಿಸಲು ಹಣವನ್ನು ಕೊಟ್ಟು ನನ್ನನ್ನು ಕಾಪಾಡು. ಅದೊಂದನ್ನು ಮಾತ್ರ ನಿನ್ನಿಂದ ಬಯಸುತ್ತಿರುವೆ; **ರವಿಕುಲಕೆ ಕುಂದು ಇಂದು ಬಂದಡಮ್ ಬರಲಿ**=ಸೂರ್ಯವಂಶಕ್ಕೆ ಕಳಂಕ ಇಂದು ನನ್ನಿಂದ ಬಂದರೂ ಬರಲಿ.

ಈಗಲೂ ಹರಿಶ್ಚಂದ್ರನ ಮಯ್ ಮನದಲ್ಲಿ ಕುಲದ ಮೇಲರಿಮೆಯು ತುಸುವಾದರೂ ಕಡಿಮೆಯಾಗಿಲ್ಲ; ಸುಳ್ಳನ್ನಾಡಬಾರದೆಂಬ ಎಚ್ಚರದ ಜತೆಜತೆಗೆ 'ಕುಲದಲ್ಲಿ ನಾನು ಮೇಲು, ಚಂಡಾಲ ಕೀಳು' ಎಂಬ ಇಂಡಿಯಾ ದೇಶದ ಸಾಮಾಜಿಕ ಜೀವನವನ್ನು ನಿಯಂತ್ರಿಸುತ್ತಿರುವ ವರ್ಣವ್ಯವಸ್ಥೆಯ ತಾರತಮ್ಯ ಹರಿಶ್ಚಂದ್ರನ ವ್ಯಕ್ತಿತ್ವದಲ್ಲಿ ರಕ್ತಗತವಾಗಿದೆ;

ಸಾಲವೇನು ನೂರಾರು ಸಾವಿರವೆ=ತೀರಿಸಬೇಕಾದ ಸಾಲ ಮೊತ್ತವೇನು ನೂರಾರು ಸಾವಿರವೇ; **ಕರಿಯನ್ ಏರಿ, ಕವಡೆ ಮೇಲಕ್ಕೆ ಮಿಡಿದಡೆ, ಬಿಡೆ ಹಬ್ಬಿ ಹಾರಿದ ಅನಿತು ಉದ್ದಕ್ಕೆ ಹೊಸ ಹೊನ್ನ ರಾಶಿಯನ್ ಸುರಿದು ಈಯಬೇಹುದು**= ಆನೆಯ ಮೇಲೆ ಹತ್ತಿ ನಿಂತು, ಕವಡೆಯೊಂದನ್ನು ಮೇಲಕ್ಕೆ ಚಿಮ್ಮುವಂತೆ ಎಸೆದರೆ, ಆಗ ಅದು ಏರಿದ ಎತ್ತರದಷ್ಟು ಉದ್ದಕ್ಕೆ ಹೊಸ ಹೊನ್ನ ರಾಶಿಯನ್ನು ಸುರಿದು ಕೊಡಬೇಕು; **ಏರಿದ ಅರ್ಥವನ್ ಈವೆ. ನೀನ್ ಮಾಳ್ಪುದೇನ್?... ಆಡಿ ತೋರು**= ನಿನ್ನ ಬೇಡಿಕೆಯಂತೆ ಕವಡೆಯು ಏರಿದ ಎತ್ತರದಷ್ಟು ಸಂಪತ್ತನ್ನು ಕೊಟ್ಟು ನಿನ್ನನ್ನು ಕೊಂಡುಕೊಳ್ಳುತ್ತೇನೆ. ನನ್ನ ದಾಸನಾಗಿ ಬರುವ ನೀನು ಏನು ಕೆಲಸಮಾಡಬಲ್ಲೆ ಎಂಬುದನ್ನು ನೀನೇ ಹೇಳು; **ಆವ ಹೊತ್ತು ಆವ ಕೆಲಸವನ್ ಈಯಲ್ ಆರೆನ್ ಎನ್ನದೆ ಮಾಳ್ಪೆನ್**=ಯಾವ ಸಮಯದಲ್ಲಾದರೂ ನೀನು ಯಾವ ಕೆಲಸವನ್ನು ಹೇಳಿದರೂ, ಆಗುವುದಿಲ್ಲ ಎಂದು ನುಡಿಯದೆ, ಅದನ್ನು ಮಾಡುತ್ತೇನೆ;

ಅಂತು ಆ ಧನಿಕನು ಒಡವೆಯನ್ ಈವೆನ್ ಎಂದನ್=ಈ ಮಾತುಕತೆಯ ನಂತರ ಆ ವೀರಬಾಹುಕನು ಸಂಪತ್ತನ್ನು ಕೊಡುತ್ತೇನೆ ಎಂದು ನುಡಿದನು; **ನುಡಿದ ಒಡವೆಯಮ್ ಕೊಡುವೆನ್**=ನೀನು ಕೇಳಿದಷ್ಟು ಸಂಪತ್ತನ್ನು ಕೊಡುತ್ತೇನೆ; **ನುಡಿದ ಅಂದದಿನ್ ನಡೆವೆನ್ ಎಂದು ಒಬ್ಬರು ಒಬ್ಬರಿಗೆ ನಂಬುಗೆಯಿತ್ತು**=ನಾನು ಮಾತು ಕೊಟ್ಟಿರುವ ರೀತಿಯಲ್ಲಿ ನಿನ್ನ ಸೇವೆಯನ್ನು ಮಾಡುತ್ತೇನೆ ಎಂದು ಒಬ್ಬರಿಗೆ ಒಬ್ಬರು ಒಪ್ಪಂದ ಮಾಡಿಕೊಂಡ ನಂತರ; **ವೀರಬಾಹು ಒಡೆಯನಾದನ್... ಇನಕುಲ ಹರಿಶ್ಚಂದ್ರನೃಪನು ಆಳಾದನ್**=ಚಂಡಾಲ ಕುಲದ ವೀರಬಾಹು ಒಡೆಯನಾದನು ಸೂರ್ಯಕುಲದ ಹರಿಶ್ಚಂದ್ರನು ದಾಸನಾದನು; **ಹಸ್ತಿಯಮ್ ಪಿಡಿದು... ಕವಡೆಯ ಮಿಡಿದು... ನಡೆ ನೋಡಿ... ಹೆಡಗೆ ಹೆಡಗೆಗಳೊಳ್ ಅರ್ಥವನು ಅಡಿಗಡಿಗೆ ತಂದು ಅಡಕಿ ಎಡೆವಿಡದೆ ಸುರಿದನ್**=ಆನೆಯೊಂದನ್ನು ಹಿಡಿದು ತಂದು, ಒಬ್ಬ ವ್ಯಕ್ತಿಯು ಅದರ ಮೇಲೆ ನಿಂತುಕೊಂಡು ಕವಡೆಯನ್ನು ಮಿಡಿದನು, ಅದು ಹಾರಿ ಹೋದ ಎತ್ತರವನ್ನು ಗಮನಿಸಿ ನೋಡಿ ಬಿದಿರಿನ ಬುಟ್ಟಿಗಳಲ್ಲಿ ಹೊನ್ನನ್ನು ಮತ್ತೆ ಮತ್ತೆ ತುಂಬಿಕೊಂಡು ತಂದು ರಾಶಿ ಹಾಕಿ ಒಂದೇ ಸಮನೆ ಸುರಿದನು;

ಕೌಶಿಕಮುನಿಯ ತೆರಕಾರ ತಲೆದೂಗಲು=ಇದನ್ನು ಕಂಡು ವಿಶ್ವಾಮಿತ್ರನ ತೆರಕಾರನಾದ ನಕ್ಷತ್ರಕನು ತಲೆಯನ್ನು ತೂಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಲು; **ಮುನಿಪ ಚಿತ್ತೈಸು, ಇತ್ತ ಅವಧಿಗೆ ಇನ್ನೆರಡು ಗಳಿಗೆ ಹೊತ್ತಿದೆ. ವಸ್ತುವಿದೆ ಸಂದುದೇ. ನುಡಿದು ಹುಸಿಯಿತ್ತಿಲ್ಲಲೇ. ತಂದೆ, ಆಯಸಮ್ ಪಡಿಸಿದೆನು. ತಡೆದೆನ್. ನಾನು ಅಳಲಿಸಿದೆ. ಅತ್ಯಂತ ಮೂಢನ್. ಎನ್ನ ಅವಗುಣವನ್ ಉಳಿದು ತಮ್ಮ ಉತ್ತಮಿಕೆಯನ್ ಮೆರೆದು ಕರುಣಿಸುವುದು. ಎಮ್ಮ ಹೆತ್ತಯ್ಯ ಕೌಶಿಕಂಗೆ ಓವಿ ಬಿನ್ನೈಸು ಎಂದು ಭೂಭುಜನ್ ಕೈಮುಗಿದನು**=ಮುನಿಯೇ ಕೇಳು, ಕೊಟ್ಟಿದ್ದ ಅವಧಿಗೆ ಇನ್ನು ಎರಡು ಗಳಿಗೆ ಸಮಯವಿದೆ. ಇಲ್ಲಿ ನಾನು ವಿಶ್ವಾಮಿತ್ರನಿಗೆ ಕೊಡಬೇಕಾಗಿದ್ದ ಹೊನ್ನ ರಾಶಿಯಿದೆ. ಇದು ನಿನಗೆ ಸಂದಾಯವಾಯಿತಲ್ಲವೇ. ನಾನು ಕೊಟ್ಟ ಮಾತಿಗೆ ತಪ್ಪಿ ನಡೆದು ಸುಳ್ಳನ್ನಾಡಲಿಲ್ಲವಲ್ಲವೇ. ತಂದೆ, ನಿನ್ನನ್ನು ಅಯೋಧ್ಯೆಯಿಂದ ಕಾಶಿ ನಗರದವರೆಗೆ ಕರೆತಂದು ಆಯಾಸ ಪಡಿಸಿ, ಸಂಕಟಕ್ಕೆ ಗುರಿಮಾಡಿದೆನು. ನಾನು ಬಹಳ ತಿಳಿಗೇಡಿ. ನನ್ನ ಕೆಟ್ಟಗುಣವನ್ನು ಮರೆತು, ತಮ್ಮ ಒಳ್ಳೆಯತನವನ್ನು ತೋರಿಸಿ, ನನ್ನನ್ನು ಕರುಣೆಯಿಂದ ಮನ್ನಿಸಿರಿ. ನಮ್ಮ ತಂದೆಯ ಸಮಾನರಾದ ವಿಶ್ವಾಮಿತ್ರರಿಗೆ ಇದೆಲ್ಲವನ್ನೂ ಪ್ರೀತಿಯಿಂದ ಅರಿಕೆ ಮಾಡಿಕೊಳ್ಳುವುದು ಎಂದು ಹರಿಶ್ಚಂದ್ರನು ನಕ್ಷತ್ರಕನಿಗೆ ಕಯ್ ಮುಗಿದನು;

ಭೂಪಾಲ, ಇನ್ನೇಕೆ ನುಡಿದು ಎನ್ನ ನಾಚಿಸುವೆ=ಹರಿಶ್ಚಂದ್ರನೇ ಸಾಲವನ್ನು ತೀರಿಸಿದ ನಂತರವೂ ಏಕೆ ಈ ರೀತಿ ನುಡಿದು ನಾನು ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡುತ್ತಿರುವೆ; **ನಿನ್ನಂತೆ ಸತ್ಯರ್ ಉತ್ತಮರ್ ಅಧಿಕ ಧೀವಶಿಗಳ್**

ಉನ್ನತ ಶಿವೈಕ್ಯರ್ ಇಳೆಯೊಳಗಿಲ್ಲ=ನಿನ್ನಂತಹ ಸತ್ಯವಂತರು, ಉತ್ತಮ ವ್ಯಕ್ತಿಗಳು, ಹೆಚ್ಚಿನ ಮನೋಶಕ್ತಿ ಮತ್ತು ಕೆಚ್ಚು ಉಳ್ಳವರು ಭೂಮಂಡಲದಲ್ಲಿಲ್ಲ; **ನಿನ್ನಿಷ್ಟ ಸಿದ್ಧಿ ಕೈಸಾರಲಿ ಎಂದು ತನ್ನ ಮನವುಕ್ಕಿ ಹಾರೈಸಿ, ಹರುಷದಿ ಹರಸಿ, ಹೊನ್ನನ್ ಅಡಕಲು ಅತ್ತಲ್ ಹೋದನ್**=ಜೀವನದಲ್ಲಿ ನಿನ್ನ ಬಯಕೆಗಳೆಲ್ಲವೂ ಈಡೇರಿ, ನಿನಗೆ ಒಳ್ಳೆಯದಾಗಲಿ ಎಂದು ಮನತುಂಬಿ ಒಳಿತನ್ನು ಕೋರಿ, ಆನಂದದಿಂದ ಹರಸಿ, ಹೊನ್ನನ್ನು ಸಾಗಿಸಲು ಅಯೋಧ್ಯೆಯತ್ತ ನಡೆದನು;

ಅಮರರು ಮರುಗಲು=ದೇವತೆಗಳು ಹರಿಶ್ಚಂದ್ರನ ಜೀವನದಲ್ಲಿ ನಡೆಯುತ್ತಿರುವ ಪ್ರಸಂಗಗಳನ್ನು ಕಂಡು ಮರುಗುತ್ತಿರಲು; **ಇತ್ತಲು ನನ್ನಿಕಾರನ್ ಪತಿಯ ಹಿಂದೆ ನಡೆದು ಹೊಲಗೇರಿಗೆ ಎಯ್ತುಂದನ್**=ಈ ಕಡೆ ಸತ್ಯವಂತನಾದ ಹರಿಶ್ಚಂದ್ರನು ಒಡೆಯನಾದ ವೀರಬಾಹುಕನ ಹಿಂಬಾಲಿಸಿಕೊಂಡು ಹೊಲಗೇರಿಗೆ ಬಂದನು;

❖

ಪ್ರಸಂಗ–೧೮

ಸುಡುಗಾಡಿನ ಕಾವಲುಗಾರನಾಗಿ ಹರಿಶ್ಚಂದ್ರ

ಸುಡುಗಾಡು=ಹೆಣಗಳನ್ನು ಸುಡುವ ಜಾಗ/ಮಸಣ:

ಹಲವು ಎಲುವಿನ ಎಕ್ಕೆಗಳ ಬಿಗಿದು ಬೀವಮ್ ನೆಯ್ದು ನುಲಿಯ ಮಂಚದ ಮೇಲೆ=ಹಲವು ಪ್ರಾಣಿಗಳ ಮೂಳೆಗಳನ್ನು ಮಂಚದ ಚೌಕಟ್ಟಿಗೆ ಜೋಡಿಸಿ, ನರಗಳನ್ನು ಹಗ್ಗಮಾಡಿಕೊಂಡು ಹೆಣೆದ ಮಂಚದ ಮೇಲೆ; **ಹಂದೊಗಲ ಹಾಸಿನೊಳು**=ಹಸಿಯ ತೊಗಲಿನ ಹಾಸುಗೆಯಲ್ಲಿ ಒರಗಿ ಕುಳಿತುಕೊಂಡು; **ಹೊಲೆಯನ್ ಓಲಗವಿತ್ತು**=ಹೊಲೆಯನಾದ ವೀರಬಾಹುಕನು ತನ್ನ ಮನೆಯಲ್ಲಿ ಸಹಚರರೊಡನೆ ಮಾತನಾಡುತ್ತ; **ನರಕಪಾಲದೊಳು ತೀವಿದ ಹಸಿಯ ಗೋಮಾಂಸವ ಮೆಲುತ**=ಮಾನವನ ತಲೆಬುರುಡೆಯಲ್ಲಿ ತುಂಬಿರುವ ಹಸಿಯ ಗೋಮಾಂಸವನ್ನು ತಿನ್ನುತ್ತ; **ಮದ್ಯವನ್ ಈಂಟುತಿರ್ಪ ಪತಿಯನ್ ಕಂಡು ನೆಲದಲ್ಲಿ ಕುಳ್ಳಿರ್ದ ರವಿಕುಲನ ಹೆಗಲ ಮೇಲೆ**=ಹೆಂಡವನ್ನು ಕುಡಿಯುತ್ತಿರುವ ತನ್ನ ಒಡೆಯನಾದ ವೀರಬಾಹುಕನನ್ನು ಹರಿಶ್ಚಂದ್ರನು ಕಂಡು, ಅವನ ಬಳಿಬಂದು, ನೆಲದ ಮೇಲೆ ಕುಳಿತುಕೊಂಡನು. ತನ್ನ ಕಾಲ ಬಳಿ ಕುಳಿತ ಹರಿಶ್ಚಂದ್ರನ ಹೆಗಲ ಮೇಲೆ;

ಎಲೆಲೆ... ಕಾಲನ್ ನೀಡಿದನು=ಅಬ್ಬಬ್ಬಾ... ವೀರಬಾಹುಕನು ಕಾಲನ್ನು ಹಾಕಿದನು; **ಕಾಲನ್ ಒಂದೆರಡು ಕುಲಗಿರಿಯ ಭಾರವೆನಲು**=ಕಾಲಿನ ತೂಕವು

ಒಂದೆರಡು ದೊಡ್ಡ ಪರ್ವತಗಳ ಹೊರೆಯೆನ್ನುವಂತಿತ್ತು; **ಏಳ್ ಅಬುಧಿ ಕಡೆಯಾದ ಸರ್ವರಾಜ್ಯಶ್ರೀಯ ಮೇಳದೊಳು ವೀರಸಿರಿಯಮ್ ವಿಜಯಸಿರಿಗಳಮ್ ತಾಳಲಾಪ ಅದಟುಳ್ಳ ಭುಜವು ಅನಾಮಿಕನ ಪದಭಾರಕ್ಕೆ ಬಸವಳಿವುದೇ**=ಏಳು ಸಮುದ್ರಗಳಿಂದ ಸುತ್ತುವರಿದ ಸಕಲ ರಾಜ್ಯಸಂಪತ್ತಿನ ಕೂಟದಲ್ಲಿ ಪರಾಕ್ರಮದ ಸಂಪತ್ತನ್ನು ಮತ್ತು ವಿಜಯದ ಸಂಪತ್ತಿನ ಜವಾಬ್ದಾರಿಯನ್ನು ಹೊರುವ ಶೂರತನವುಳ್ಳ ಹರಿಶ್ಚಂದ್ರನ ಭುಜವು ಚಂಡಾಲನಾದ ವೀರಬಾಹುಕನ ಕಾಲಿನ ಭಾರಕ್ಕೆ ಆಯಾಸಗೊಳ್ಳುವುದೇ;

ಕಾಳೆಗದೊಳ್ ಅರಿನೃಪರ ಖಂಡಮಮ್ ರುಧಿರಮಮ್ ಕಾಳಿಜವನ್ ಅಡಗನ್ ಒಳ್ಗರುಳ ಹಿಣಿಲಮ್ ಹೊರುವ ಬಾಳ ಪಡೆದಿಪ್ಪನ್=ರಣರಂಗದಲ್ಲಿ ಶತ್ರುರಾಜರ ಮಾಂಸ ಖಂಡವನ್ನು, ರಕ್ತವನ್ನು, ಪಿತ್ತಜನಕಾಂಗವನ್ನು, ಮಾಂಸವನ್ನು, ಕರುಳಿನ ಗೊಂಚಲನ್ನು ಕಿತ್ತೆಸೆಯುವ ಕತ್ತಿಯನ್ನು ಪಡೆದಿರುವ ಶೂರನಾದ ಹರಿಶ್ಚಂದ್ರನು; **ಈ ಹೇಯಕ್ಕೆ ಹೇಸುವನೆ ಎನಿಸಿ ಲೆಕ್ಕಿಸದೆ ಇರ್ದನು**= ವೀರಬಾಹುಕನ ಕೀಳಾದ ವರ್ತನೆಗೆ ಹಿಂಜರಿಯುತ್ತೇನೆಯೇ ಎನ್ನುವಂತೆ ಹರಿಶ್ಚಂದ್ರನು ಇದನ್ನು ತನಗೆ ಆಗುತ್ತಿರುವ ಅಪಮಾನವೆಂದು ತಿಳಿಯದೆ ಸಹಿಸಿಕೊಂಡನು;

ಎಲವೊ, ನೀ ದಿಟ ರಾಯನಾದಡೆ ಅಳುಕದೆ ಬಂದು ನೆಲದಲ್ಲಿ ಕುಳ್ಳಿರ್ಪೆ= ಎಲವೊ, ನೀನು ನಿಜಕ್ಕೂ ರಾಜನೇ ಆಗಿದ್ದರೆ, ಈ ರೀತಿ ಹಿಂಜರಿಯದೆ ಬಂದು ನೆಲದಲ್ಲಿ ಕುಳಿತಿರುವೆ; **ಸತ್ಕುಲಜನಾದಡಮ್ ಹೊಲೆಯನಾದ ಎನ್ನ ಕಾಲಮ್ ಹೊರುವೆ**=ಮೇಲು ಕುಲದಲ್ಲಿ ಹುಟ್ಟಿದವನಾಗಿದ್ದರೂ ಹೊಲೆಯನಾದ ನನ್ನ ಕಾಲನ್ನು ಹೊರುತ್ತಿರುವೆ; **ಮುನಿಮತೋಚಿತ ಶಿವಾರ್ಚಕನಾದಡೆ ಹೊಲಸಿನ ಅಟ್ಟುಳಿಗೆ ಕೊಕ್ಕರಿಸದಿಹೆ**=ಮುನಿಗಳ ಆಶಯಕ್ಕೆ ತಕ್ಕ ಶಿವ ಪೂಜಕನಾಗಿದ್ದರೆ, ಹಸಿಯ ಗೋಮಾಂಸವನ್ನು ತಿನ್ನುತ್ತ, ಹೆಂಡವನ್ನು ಕುಡಿಯುತ್ತ ನಾನು ಕೊಡುತ್ತಿರುವ ಹಿಂಸೆಗೆ ತುಸುವಾದರೂ ಅಸಹ್ಯಪಟ್ಟುಕೊಳ್ಳದೆ ಸುಮ್ಮನಿರುವೆ;

ರಾಜ್ಯಸಿರಿ ತೊಲಗಿದಡೆ ಪೂರ್ವಗುಣ ಅಳಿವುದೇ=ರಾಜ್ಯದ ಸಂಪತ್ತು ಹೋದ ಮಾತ್ರಕ್ಕೆ ರಾಜತನದ ನಡೆನುಡಿಗಳು ನಾಶವಾಗುತ್ತವೆಯೇ; **ಭೂಪಾಲನಲ್ಲ... ಮುನ್ನ ಭವಿನಿಲಯದೊಳು ತಲೆಮುಟ್ಟಿ ದುಡಿದ ಗಾವದಿಯೈಸೆ**=ನೀನು ರಾಜನಾಗಿರಲಿಲ್ಲ. ಈ ಮೊದಲು ಸಿರಿವಂತನ ಮನೆಯಲ್ಲಿ ಮಯ್ ಬಗ್ಗಿಸಿ ತಲೆ ತಗ್ಗಿಸಿ ಜೀತದಾಳಾಗಿ ದುಡಿಯುತ್ತಿದ್ದ ತಿಳಿಗೇಡಿಯಲ್ಲವೇ ಎಂದು ವೀರಬಾಹುಕನು ಹರಿಶ್ಚಂದ್ರನನ್ನು ಹಂಗಿಸಿದನು; **ಹಸುವನ್ ಅಳಿ**=ಹಸುವನ್ನು ಕೊಲ್ಲು; **ಹಾರುವನನ್ ಇರಿ**= ಬ್ರಾಹ್ಮಣನನ್ನು ಹೊಡಿ; **ಮಾತೆಪಿತರ ಬಾಧಿಸು**= ತಾಯಿತಂದೆಯರನ್ನು ಪೀಡಿಸು; **ಸುತನ ತಿವಿ**=ಮಗನನ್ನು ಗುದ್ದು; **ಸತಿಯ ಕೊಲು**=ಹೆಂಡತಿಯನ್ನು ಕೊಲ್ಲು;

ಮಾರಿಗೆ ಒರೆಗಟ್ಟು=ಒಲಿದವರಿಗೆ ಒಳಿತನ್ನು ಮಾಡುವ, ಮುನಿದವರಿಗೆ ಕೆಡುಕನ್ನು ಮಾಡುವ ಮಾರಿ ದೇವತೆಗೆ ಎದುರುಬೀಳು; **ವಿಷವ ಕುಡಿ**=ನಂಜನ್ನು ಕುಡಿ; **ಹಾವ ಹಿಡಿ**=ಹಾವನ್ನು ಹಿಡಿ; **ಹುಲಿಗೆ ಮಲೆ**=ಹುಲಿಯೊಡನೆ ಕಾದಾಡು; **ದಳ್ಳುರಿಯೊಳ್ ಅಡಗು ಹೋಗು ಎಂದು ಒಡೆಯನು ಬೆಸಸಿದಡೆ**=ದಗದಗನೆ ಉರಿಯುತ್ತಿರುವ ಬೆಂಕಿಯಲ್ಲಿ ಬೀಳು ಹೋಗು ಎಂದು ಒಡೆಯನಾದ ನೀನು ಆಜ್ಞಾಪಿಸಿದರೆ;

ನಾನ್ ಆರೆನ್ ಎನಬಾರದು ಎಂಬಾಗಳ್=ನಿನ್ನ ತೊತ್ತಾದ ನಾನು "ನನ್ನಿಂದ ಆ ಕೆಲಸ ಆಗದು" ಎನ್ನಬಾರದು ಎಂಬ ಒಪ್ಪಂದವಿರುವಾಗ; **ಅಸವಸದೊಳ್ ಇವಕೆ ಅಲಸಿ ಸೆಡೆದೆನಾದಡೆ**=ನೀನು ಹೇಳಿದ್ದನ್ನು ಮಾಡಲು ಹಿಂದೆ ಮುಂದೆ ನೋಡಿ ಅಂದರೆ ಮಾಡಲೋ ಬೇಡವೋ ಎಂದು ತೊಳಲಾಡಿ, ನೀನು ಹೇಳಿದ ಕೆಲಸಕ್ಕೆ ಸೋಮಾರಿಯಾಗಿ ಹಿಂಜರಿದವನಾದರೆ;

ಕೊಟ್ಟ ಬೆಸನ ನಡಸುವೆನ್ ಎಂಬ ನುಡಿ ಸಡಿಲವಾಗದೇ ಹೇಳ್=ನೀನು ಕೊಟ್ಟ ಕೆಲಸವನ್ನು ಮಾಡುತ್ತೇನೆ ಎಂದು ನಾನು ಕೊಟ್ಟಿರುವ ಮಾತಿಗೆ ತಪ್ಪಿ ನಡೆದಂತಾಗುವುದಿಲ್ಲವೇ ನೀನೇ ಹೇಳು; **ಏನನ್ ಆನ್ ಬೆಸನ್ ಇತ್ತೊಡೆ, ನೀನ್ ಅದ ಬಿಡದೆ ನಡಸುವಾ**=ನಾನು ಯಾವುದೇ ಕೆಲಸವನ್ನು ಹೇಳಿದರೂ, ಅದನ್ನು ಇಲ್ಲ ಎನ್ನದೆ ನೀನು ಮಾಡುವೆಯಾ; **ನಡಸದಿರ್ದಡೆ ನೀನು ಕೊಟ್ಟ ಒಡವೆ ದಾನವೇ**=ನೀನು ಹೇಳಿದ ಕೆಲಸವನ್ನು ನಾನು ಮಾಡದಿದ್ದರೆ, ನೀನು ನನಗಾಗಿ ಕೊಟ್ಟಿರುವ ಸಂಪತ್ತು ದಾನವೇ; **ಬಗೆಯೆ ಕರಿ ಹೂಳುವನಿತು ಅರ್ಥಮನ್ ಕೊಂಡು, ಮಾಡದೆ ಮಾಣ್ದಡೆ**=ಹಾಗೆ ನೋಡಿದರೆ ಒಂದು ಆನೆಯನ್ನು ಮುಚ್ಚುವಷ್ಟು ಅಪಾರವಾದ ಸಂಪತ್ತನ್ನು ನಿನ್ನಿಂದ ಪಡೆದು, ನೀನು ಹೇಳಿದ ಕೆಲಸವನ್ನು ಮಾಡದಿದ್ದರೆ;

ಈ ನೆಲಮ್ ಹೊರುವುದೇ=ಈ ಜಗತ್ತು ನನ್ನನ್ನು ಹೊರುವುದೇ. ಇದೊಂದು ನುಡಿಗಟ್ಟು. ಈ ಜಗತ್ತಿನಲ್ಲಿ ಯಾವುದೇ ವ್ಯಕ್ತಿಯು ಒಳ್ಳೆಯ ನಡೆನುಡಿಯಿಂದ ಬಾಳದಿದ್ದರೆ, ಅವನು ಭೂಮಿಗೆ ಹೊರೆಯಾಗುತ್ತಾನೆ ಎಂಬ ತಿರುಳಿನಲ್ಲಿ ಬಳಕೆ ಯಾಗಿದೆ; **ನಾನಿತ್ತ ನಂಬುಗೆಗೆ ಹಾನಿಯಾಗದೆ ಹೋಹುದೇ**="ಯಾವ ಹೊತ್ತು ಯಾವ ಕೆಲಸವನ್ನು ಹೇಳಿದರೂ, ನನ್ನಿಂದಾಗುವುದಿಲ್ಲ ಎಂದು ಹೇಳದೆ ಮಾಡುತ್ತೇನೆ" ಎಂದು ನಾನು ಕೊಟ್ಟಿರುವ ಮಾತಿಗೆ ಹಾನಿಯುಂಟಾಗು ವುದಿಲ್ಲವೇ;

ಸುಡುಗಾಡನ್ ಆನಂದದಿಮ್ ಕಾದುಕೊಂಡಿರುತಿರು ಎಂದು ಬೆಸಸಿದನು= ಕಾಶಿ ನಗರದಲ್ಲಿರುವ ಸುಡುಗಾಡಿನ ಕಾವಲುಗಾರನಾಗಿ ಜವಾಬ್ದಾರಿಯನ್ನು ಹೊತ್ತುಕೊಂಡು, ಆನಂದದಿಂದ ಅಲ್ಲಿನ ಕೆಲಸವನ್ನು ಮಾಡುತ್ತಿರು ಎಂದು

ವೀರಬಾಹುಕನು ಹರಿಶ್ಚಂದ್ರನಿಗೆ ಆಜ್ಞಾಪಿಸಿದನು; **ಮನದ ಅನುವರಿಯಲು**= ಮಸಣದ ಕಾವಲುಗಾರನಾಗಿ ತಾನು ಮಾಡಬೇಕಾದ ಕೆಲಸಗಳೇನು ಎಂಬುದನ್ನು ವೀರಬಾಹುಕನಿಂದ ತಿಳಿದುಕೊಳ್ಳಲೆಂದು;

ಸುಡುಗಾಡ ಕಾಹವು ಎಂದೆ ಏನ್ ಅದರ ಪಂಥಮಮ್ ನುಡಿದು ಪೇಳ್= ಮಸಣವನ್ನು ಕಾಯಬೇಕು ಎಂದು ನುಡಿದೆ. ಅಲ್ಲಿ ನಾನು ಮಾಡಬೇಕಾದ ಕೆಲಸಗಳೇನು ಎಂಬುದನ್ನು ವಿವರವಾಗಿ ಹೇಳು; **ಹಾಗ**=ಕಾಶಿ ನಗರದಲ್ಲಿ ಚಲಾವಣೆಯಲ್ಲಿದ್ದ ಒಂದು ನಾಣ್ಯದ ಹೆಸರು; **ಸುಡುವ ನೆಲದೆರೆಯ ಹಾಗ ಹೆಣದ ಉಡಿಗೆಯಮ್ ತಂದು ಎನಗೆ ಕೊಡುವುದು**=ಹೆಣವನ್ನು ಸುಡಲು ಬಳಸುವ ಮಸಣದ ನೆಲಕ್ಕೆ ತೆರಿಗೆಯಾಗಿ ತೆಗೆದುಕೊಳ್ಳುವ ನಾಣ್ಯ ಮತ್ತು ಹೆಣದ ಮಯ್ ಮೇಲಿನ ಬಟ್ಟೆಯನ್ನು ನನಗೆ ತಂದು ಕೊಡುವುದು;

ಆ ತಲೆಯಕ್ಕಿಯಮ್ ನಿನ್ನ ಸಂಬಳಕ್ಕೆ ಪಡಿಯಾಗಿ ಕೊಂಡುಂಬುದು=ಹೆಣದ ತಲೆಯ ಭಾಗದಲ್ಲಿ ಇಡುವ ಅಕ್ಕಿಯನ್ನು ನಿನ್ನ ಸಂಬಳಕ್ಕೆ ಧಾನ್ಯವಾಗಿ ಪಡೆದು ಕೊಂಡು, ಊಟ ಮಾಡುವುದು; **ಅಳುಪದಿರು ಹುಸಿಯದಿರು ಬಿಡದಿರು ಎಂದು**= ಇದಕ್ಕಿಂತ ಹೆಚ್ಚಿನದನ್ನು ಬಯಸಬೇಡ... ಸುಳ್ಳನ್ನಾಡಬೇಡ... ಜವಾಬ್ದಾರಿಯನ್ನು ಮರೆಯದಿರು ಎಂದು ಹೇಳಿ; **ವನಧಿ ಮುದ್ರಿತಧರಾಪತಿಗೆ ಉಡುಗೊರೆಯ ವೀಳೆಯದ ಕೂಡೆ ತಾ ಹಿಡಿದ ಸಂಬಳಿಗೋಲ ಮುದ್ರೆಗೊಟ್ಟನ್**=ಕಡಲು ಸುತ್ತುವರಿದಿದ್ದ ಭೂಮಂಡಲಕ್ಕೆ ಈ ಮೊದಲು ಒಡೆಯನಾಗಿದ್ದ ಹರಿಶ್ಚಂದ್ರನಿಗೆ ವೀರಬಾಹುಕನು ಎಲೆ ಅಡಕೆ ಸುಣ್ಣ ಮೊದಲಾದುವುಗಳಿಂದ ಕೂಡಿದ್ದ ತಾಂಬೂಲದ ಜತೆಗೆ, ತನ್ನ ಕಯ್ಯಲ್ಲಿದ್ದ ಸಂಬಳಿ ಕೋಲನ್ನು ಸುಡುಗಾಡಿನ ಕಾವಲಿನ ಅಧಿಕಾರದ ಗುರುತಾಗಿ ಕೊಟ್ಟನು;

ಪುರದೊಳಗೆ ಎಯ್ದೆ ಜನವರಿಯೆ ಹೆಸರ ಹೇಳುತ್ತ, ಸಾರುತ್ತ, ಮೈಗುರುಹ ತೋರಿಸುತ ಹರೆಯ ಮೊಳಗಿಸುತ, ಮೆರೆಯುತ್ತ ಹೋಗು, ಏಳ್ ಎಂದು ಕಳುಪೆ= ಕಾಶಿ ನಗರದ ಜನರೆಲ್ಲರೂ ಹೊಸದಾಗಿ ನೇಮಕಗೊಂಡಿರುವ ಸುಡುಗಾಡಿನ ಕಾವಲುಗಾರನು ಯಾರೆಂಬುದನ್ನು ತಿಳಿಯುವಂತೆ ಪುರದ ಬೀದಿ ಬೀದಿಗಳಲ್ಲಿ ನಿನ್ನ ಹೆಸರನ್ನು ಹೇಳುತ್ತ, ನೀನು ವಹಿಸಿಕೊಂಡಿರುವ ಸುಡುಗಾಡಿನ ಕಾವಲುಗಾರನ ಹುದ್ದೆಯನ್ನು ಜೋರಾಗಿ ಹೇಳುತ್ತ, ನಿನ್ನ ಮಯ್ ಗುರುತನ್ನು ತೋರಿಸುತ್ತ, ತಮಟೆಯನ್ನು ಬಡಿಯುತ್ತ ಎಲ್ಲರ ಕಣ್ಣಿಗೂ ಎದ್ದು ಕಾಣುವಂತೆ ಪುರದೊಳಗೆ ಒಂದು ಸುತ್ತು ಬಂದು, ಅನಂತರ ಸುಡುಗಾಡಿಗೆ ಹೋಗು ಎಂದು ಕಳುಹಿಸಲು; **ಎಲ್ಲವ ಮಾಡುತ ಪೊರಮಟ್ಟನ್**=ವೀರಬಾಹುಕನು ಹೇಳಿದಂತೆ ಎಲ್ಲವನ್ನೂ ಮಾಡಲೆಂದು ಹರಿಶ್ಚಂದ್ರನು ವೀರಬಾಹುಕನ ಮನೆಯಿಂದ ಹೊರಟನು.

❖

ಪ್ರಸಂಗ–೧೯

ಸುಡುಗಾಡಿನ ಕಾಯಕದಲ್ಲಿ ಹರಿಶ್ಚಂದ್ರ

ನಸುಕುಸಿದ ದೇಹ=ತುಸು ಆಯಾಸಗೊಂಡಿರುವ ಮಯ್. ತನ್ನ ಹೆಂಡತಿ, ಮಗ ಮತ್ತು ತಾನು ಮಾರಾಟಗೊಂಡ ಸನ್ನಿವೇಶಗಳಲ್ಲಿ ಹರಿಶ್ಚಂದ್ರನ ಮಯ್ ಮನ ಗಾಸಿಗೊಂಡು, ಅವನ ದೇಹದ ಕಸುವು ತುಸು ಉಡುಗಿದೆ; ಕಂಕರಿ+ಕೋಲ್+ಅನ್; ಕಂಕರಿಗೋಲು=ಹೊಲೆಯನಾದವನ ಕಯ್ಯಲ್ಲಿರುವ ಕೋಲು. ಇದನ್ನು ನೋಡಿ ಮೇಲುಕುಲದವರು ಇವನು ಹೊಲೆಯನೆಂದು ತಿಳಿದು, ದೂರಸರಿಯುತ್ತಿದ್ದರು; **ಕಂಕರಿಗೋಲನ್ ಇರಿದು ಕೈವಿಡದೆ ಬಾರಿಸುತ**= ಕಂಕರಿ ಕೋಲನ್ನು ಬೀದಿಯಲ್ಲಿನ ನೆಲದ ಮೇಲೆ ಒಂದೇ ಸಮನೆ ಕುಟ್ಟುತ್ತ; ಸಂಬಳಿ=“ನಾನು ಹೊಲೆಯ. ದಾರಿ ಬಿಡಿ” ಎಂದು ಮೇಲುಕುಲದವರಿಗೆ ಸೂಚನೆಯನ್ನು ಕೊಡುವ ಪದ;

ಸತ್ಯಸಂಪನ್ನನು ಸಂಬಳಿ ಸಂಬಳಿ ಎಂದೆಂದು ಕೊಸರುತಿಹ ಬಾಯ್ವೆರಸಿ ಬೀದಿ ಬೀದಿಯೊಳು ಸುಳಿದನ್=ಸತ್ಯವಂತನಾದ ಹರಿಶ್ಚಂದ್ರನು ‘ಸಂಬಳಿ ಸಂಬಳಿ’ ಎಂದು ಎತ್ತರದ ದನಿಯಲ್ಲಿ ಕೂಗಿ ಹೇಳುತ್ತ… ಕಾಶಿ ನಗರದ ಬೀದಿ ಬೀದಿಗಳಲ್ಲಿ ಜನಗಳ ಕಣ್ಣಿಗೆ ಕಾಣಿಸಿಕೊಂಡನು; **ಚಾವಡಿ ಹೆಣನ ನೆಲದೆರೆಯ ಹಾಗ ಶವದ ಉಡಿಗೆ**=ಹೆಣವನ್ನು ಸುಡುವ ನೆಲದ ತೆರಿಗೆಯಾಗಿ ಕೊಡಬೇಕಾದ ನಾಣ್ಯ ಮತ್ತು ಹೆಣದ ಮಯ್ ಮೇಲಣ ಬಟ್ಟೆಯು ನನ್ನ ಒಡೆಯನಾದ ವೀರಬಾಹುಕನಿಗೆ ಸಲ್ಲುತ್ತವೆ; **ಸುಡುಗಾಡಿನ ಅಧಿಕಾರ ಮುದ್ರೆ ಕಟ್ಟಾಣೆ**=ಸುಡುಗಾಡಿನ ಅಧಿಕಾರದ ಈ

ಸಂಬಳಿಗೋಲನ್ನು ಹಿಡಿದು ಹೇಳುತ್ತಿದ್ದೇನೆ. ಇದು ಕಾಶಿ ನಗರದ ಯಾವೊಬ್ಬ ಪ್ರಜೆಯೂ ಮೀರಬಾರದ ವೀರಬಾಹುಕನ ಆಜ್ಞೆ;

ಹೆಣನ ತಲೆಯಕ್ಕಿ ಎನಗಾಯ್ತು=ಹೆಣದ ತಲೆಯ ಬಳಿ ಇಟ್ಟಿರುವ ಅಕ್ಕಿ ನನ್ನ ಪಾಲಿಗೆ ಬರುತ್ತದೆ; **ಎನ್ನ ಮರಹಿಕ್ಕಿ ರಾತ್ರಿಯೊಳು ಸುಟ್ಟಿರಾದಡೆ**=ನನ್ನ ಕಣ್ಣು ತಪ್ಪಿಸಿ ರಾತ್ರಿಯ ವೇಳೆ ಹೆಣವನ್ನು ಸುಟ್ಟಿರಾದರೆ; **ತೆರೆಯನು ಕೊಡದಿರ್ದಡೆ**= ತೆರಿಗೆಯನ್ನು ಕೊಡದಿದ್ದರೆ; **ಎನ್ನಾಣೆ... ಪತಿ ವೀರಬಾಹುವಿನ ಮಡದಿಯರ ಕಾಲಾಣೆ**=ನನ್ನಾಣೆ... ನನ್ನ ಒಡೆಯನಾದ ವೀರಬಾಹುಕನ ಹೆಂಡತಿಯರ ಪಾದದಾಣೆ; **ಮೀರಿದಡೆ ಕೆಡಹಿ ತಡೆಗಡಿವನ್ ಎಂದು ಊರೊಳಗೆ ಸಾರುತ್ತ ತೋರುತ್ತ ರುದ್ರಭೂಮಿಗೆ ನಡೆದನು**=ಯಾರಾದರೂ ಹೆಣವನ್ನು ಸುಡುಗಾಡಿಗೆ ತಂದಾಗ, ಈ ಕಟ್ಟುಪಾಡುಗಳನ್ನು ಮೀರಿದರೆ, ಅವರನ್ನು ಕೆಳಕ್ಕೆ ಬೀಳಿಸಿ ಅಡ್ಡಗಟ್ಟಿ ತಡೆಯುತ್ತೇನೆ ಎಂದು ಕಾಶಿನಗರದಲ್ಲಿ ಸಾರುತ್ತ, ತನ್ನ ಅಧಿಕಾರದ ಗುರುತನ್ನು ತೋರಿಸುತ್ತ, ಸುಡುಗಾಡಿಗೆ ಬಂದನು; ಸುಡುಗಾಡಿನ ಉದ್ದಗಲದಲ್ಲಿ ಕಂಡುಬರುತ್ತಿರುವ ನೋಟಗಳನ್ನು ಇನ್ನು ಮುಂದಿನ ನುಡಿಗಳಲ್ಲಿ ಚಿತ್ರಿಸಲಾಗಿದೆ;

ಕಂಗೆ ಭಯವೆನೆ ಬೇವ ಹೆಣನ ಹಿಂಡುಗಳ=ಸುಡುಗಾಡಿನ ಉದ್ದಗಲದಲ್ಲಿ ನೋಡುವ ಕಣ್ಣುಗಳಿಗೆ ಹೆದರಿಕೆಯನ್ನುಂಟುಮಾಡುವಂತೆ ಉರಿಯುತ್ತಿರುವ ಚಿತೆಗಳಲ್ಲಿ ಬೇಯುತ್ತಿರುವ ಹೆಣಗಳ; **ಮೂಗಿಂಗೆ ಹಗೆಯೆನೆ ಕವಿವ ಕರ್ಬೊಗೆಯ ಕೌರ**=ಮೂಗಿಗೆ ಹಗೆಯೆನ್ನುವಂತೆ ಅಂದರೆ ಉಸಿರು ಕಟ್ಟುವಂತೆ ಆವರಿಸುತ್ತಿರುವ ಕಪ್ಪನೆಯ ಹೊಗೆಯೊಡನೆ ಬೆರೆತಿರುವ ಹೆಣಗಳ ಸುಟ್ಟವಾಸನೆಯ ಕಮರು; **ಕರ್ಣಂಗಳಿಗೆ ಅಮಂಗಲ ಧ್ವನಿಗಳನ್ ನೆರಪುವ ಅಬಲೆಯರ ಮಲ್ಲಾಮಲ್ಲಿ**= ಕಿವಿಗಳಿಗೆ ಸಂಕಟದ ದನಿಗಳನ್ನು ಆಲಿಸುವಂತೆ ಮಾಡುತ್ತಿರುವ ಹೆಂಗಸರ ಗೋಳಾಟ; **ಹಿಂಗದೆ ಒತ್ತೊತ್ತೆಯಿಮ್ ಮೆಯ್ಯನ್ ಒತ್ತುವ ಜನದ ಜಂಗುಳಿಯ**= ಹಿಂದಕ್ಕೆ ಸರಿಯದೆ ಗುಂಪುಗುಂಪಾಗಿ ಒಬ್ಬರು ಮತ್ತೊಬ್ಬರನ್ನು ಒತ್ತರಿಸಿಕೊಂಡು ನುಗ್ಗುತ್ತಿರುವ ಜನರ ಗುಂಪಿನ; **ಕಾಲೂರಲ್ ಅರಿದು ಎನಿಸಿ**=ಸುಡುಗಾಡಿನಲ್ಲಿ ನೆರೆದಿರುವ ಜನಗಳ ಗುಂಪಿನ ನಡುವೆ ಹರಿಶ್ಚಂದ್ರನು ಕಾಲಿಡಲು ಜಾಗವಿಲ್ಲದೆ;

ನೆರೆದ ಹಲವಂಗದ ಅಸ್ಥಿಗಳನ್ ಆಯುತ್ತ ಅವನೀಶನು ಆ ಸುಡುಗಾಡನ್ ಹೊಕ್ಕನ್=ಹರಿಶ್ಚಂದ್ರನು ನೆಲದ ಮೇಲೆ ಹರಡಿಕೊಂಡಿದ್ದ ಹಲವು ದೇಹಗಳ ಮೂಳೆಗಳನ್ನು ಆಯ್ದು, ತಾನು ಹೋಗಲು ದಾರಿಯನ್ನು ಮಾಡಿಕೊಳ್ಳುತ್ತ, ಸುಡುಗಾಡಿನ ಒಳಕ್ಕೆ ಬಂದನು; **ನಡೆದು ಹರಿಹರಿದು**=ಸುಡುಗಾಡಿನ ಎಲ್ಲೆಡೆ ಯಲ್ಲಿಯೂ ಬಿರುಸಾಗಿ ಓಡಾಡುತ್ತ; **ಎಲವೊ ಸುಡದಿರು ಸುಡದಿರ್ ಸುಟ್ಟಡೆ, ನಿಮಗೆ ವೀರಬಾಹುಕನಾಣೆ ಎಂದು ಭೂಪಾಲನು ಜಡಿಜಡಿದು**=ಎಲವೊ

ಸುಡಬೇಡಿ... ಸುಡಬೇಡಿ... ತೆರಿಗೆಯನ್ನು ಕೊಡದೆ ನೀವು ಸುಟ್ಟರೆ ನಿಮಗೆ ವೀರಬಾಹುಕನ ಆಜ್ಞೆಯಂತೆ ಹೆಣವನ್ನು ಸುಡುವುದಕ್ಕೆ ನಾನು ಬಿಡುವುದಿಲ್ಲ ಎಂದು ಅಬ್ಬರಿಸಿ ಗದರಿಸುತ್ತ; **ನೆಲದೆರೆಯ ಹಾಗವನ್**=ಸುಡುಗಾಡಿನ ನೆಲದ ತೆರಿಗೆಯ ನಾಣ್ಯವನ್ನು; **ಉಟ್ಟ ಕಪ್ಪಡಂಗಳನು**=ಹೆಣಕ್ಕೆ ತೊಡಿಸಿದ್ದ ಬಟ್ಟೆಗಳನ್ನು; **ತಲೆಯಕ್ಕಿಗಳನು**=ಹೆಣದ ತಲೆಯ ಬಳಿ ಇಟ್ಟಿದ್ದ ಅಕ್ಕಿಯನ್ನು;

ಸುಡುಗಾಡೊಳ್ ಅಲ್ಲಲ್ಲಿಗೆ ಎಯ್ದಿ, ಬೇಡುವ ಭರದೊಳ್=ಸುಡುಗಾಡಿನಲ್ಲಿ ಎಲ್ಲೆಡೆಯಲ್ಲಿಯೂ ನುಗ್ಗಿ ಹೋಗಿ, ತೆರಿಗೆಯ ನಾಣ್ಯ ಮತ್ತು ವಸ್ತುಗಳನ್ನು ಕೇಳಿ ಪಡೆಯುವ ಆತುರದಲ್ಲಿ; **ಎಡಹುತ್ತ. ತಾಗುತ್ತಲ್, ಎಲುಗಳಮ್ ಮೆಟ್ಟಿ, ತನ್ನಡಿಗಳ್ ಅಳುಕಿತ್ತನ್ ಅರಿಯದೆ ಹಾಸುಹೊಕ್ಕು ಹರಿದಾಡಿದನ್**=ಎಡವಿ ಬೀಳುತ್ತ ಅಲ್ಲಲ್ಲಿ ಬಿದ್ದಿದ್ದ ಮೂಳೆಗಳ ಮೇಲೆ ಕಾಲಿಟ್ಟಾಗ, ಮೊನಚಾದ ಕೆಲವು ಮೂಳೆಗಳು ಪಾದಕ್ಕೆ ಚುಚ್ಚಿಕೊಂಡು ಉಂಟಾದ ನೋವನ್ನು ಲೆಕ್ಕಿಸದೆ, ಸುಡುಗಾಡಿನ ಉದ್ದಗಲದಲ್ಲಿ ಒಂದೇ ಸಮನೆ ಸುತ್ತಾಡಿದನು; **ಮತ್ತಾಗ ವಸುಧಾಧೀಶನು**=ಈ ರೀತಿ ವೀರಬಾಹುಕನ ಆಜ್ಞೆಯಂತೆ ಸುಡುಗಾಡಿಗೆ ಹೆಣಗಳನ್ನು ಒಪ್ಪಮಾಡಲೆಂದು ತಂದಿದ್ದವರಿಂದ ತೆರಿಗೆಯನ್ನು ವಸೂಲು ಮಾಡಿದ ನಂತರ ಹರಿಶ್ಚಂದ್ರನು ಈಗ ತನ್ನ ವಾಸಕ್ಕೆ ಒಂದು ಗುಡಿಸಲನ್ನು ಕಟ್ಟಿಕೊಳ್ಳಲು ತೊಡಗುತ್ತಾನೆ;

ಸುಡುಗಾಡ ನಟ್ಟನಡುವಣ ದಡದ ತುತ್ತತುದಿಯೊಳು=ಸುಡುಗಾಡಿನ ನಟ್ಟನಡುವೆಯಿದ್ದ ಎತ್ತರದ ದಿಣ್ಣೆಯ ಮೇಲೆ; **ವಿಮಾನ**=ಹೆಣವನ್ನು ಸಾಗಿಸುವ ಚಟ್ಟ; **ವಿಮಾನದ ಮರಂಗಳನು**=ಹೆಣವನ್ನು ಹೊತ್ತು ತಂದ ಚಟ್ಟಕ್ಕೆ ಕಟ್ಟಿದ್ದ ಮರದ ತುಂಡುಗಳನ್ನು; **ಕಡೆ ಹೊತ್ತಿ ಉರಿಕರಿಯಾದ ಕರಿಕೊಳ್ಳಿಗಳನ್ ಅರಸಿ ತಂದು**= ಒಂದು ಕಡೆ ಉರಿದು ಕರಿಕಲಾಗಿ ಅರೆಬೆಂದು ಉಳಿದಿದ್ದ ಸವುದೆಯ ತುಂಡುಗಳನ್ನು ಹುಡುಕಿ ತಂದು; ಸಿದ್ದಿಗೆ=ಹೆಣವನ್ನು ಹೊತ್ತುಕೊಂಡು ಬರಲು ಕಟ್ಟಿರುವ ಚಟ್ಟ; **ಸಿದ್ದಿಗೆಯ ನುಲಿಯ ಒತ್ತಿ ಬಿಗಿಬಿಗಿದು ಹಂಜರಿಸಿ**=ಚಟ್ಟವನ್ನು ಕಟ್ಟಲು ಬಳಸಿದ್ದ ಹಗ್ಗವನ್ನು ತಂದು, ಅದನ್ನು ಮರದ ತುಂಡುಗಳಿಗೆ ಒತ್ತಿ ಬಿಗಿಬಿಗಿದು ತಡಿಕೆಯನ್ನು ಬಿಗಿದು;

ತವಗವನ್ ಇಕ್ಕಿ=ಜಗಲಿಯನ್ನು ಕಟ್ಟಿ; **ಮತ್ತೆ ಮೇಲೊಂದು ತಲೆಗುಡಿಸಲಮ್ ಕಟ್ಟಿ**=ಮತ್ತೆ ಅದರ ಮೇಲೊಂದು ವಾಸಿಸಲು ಅನುಕೂಲವಾಗುವಂತೆ ಗುಡಿಸಲನ್ನು ಕಟ್ಟಿ; **ಇರುಳು ಹಗಲೆನ್ನದೆ ಒಡೆಯನ್ ಬೆಸಸಿದಂತೆ ಕಾಯುತ್ತಿರ್ದನ್**= ರಾತ್ರಿ ಹಗಲು ಎನ್ನದೆ ಒಡೆಯನಾದ ವೀರಬಾಹುಕನ ಆಜ್ಞೆಯಂತೆ ಹರಿಶ್ಚಂದ್ರನು ಸುಡುಗಾಡನ್ನು ಕಾಯುತ್ತಿದ್ದನು; ಹರಿಶ್ಚಂದ್ರನು ಕಾಶಿ ನಗರದಲ್ಲಿ ವಾಸಿಸುತ್ತ, ತನ್ನ ಹಿಂದಿನ ರಾಜ ಸಂಪತ್ತೆಲ್ಲವನ್ನೂ ಸುಡುಗಾಡಿನ ಬದುಕಿನಲ್ಲಿಯೇ ಕಾಣುತ್ತಿದ್ದಾನೆ;

ವರ ವಾರಣಾಸಿ ಮಧ್ಯವೆ ಲಾಳದೇಶ=ಉತ್ತಮವಾದ ವಾರಣಾಸಿಯ ನಡುವೆಯಿದ್ದ ಸುಡುಗಾಡೇ ಲಾಳದೇಶ; **ಅಚ್ಚರಿಯ ಕಾಶೀಪುರವು ಅಯೋಧ್ಯೆ**= ಅಂದಚೆಂದದಿಂದ ಕೂಡಿ ನೋಡುವ ಕಣ್ಮನಗಳಿಗೆ ಅಚ್ಚರಿಯನ್ನುಂಟುಮಾಡುವ ಕಾಶಿ ಪುರವೇ ರಾಜಧಾನಿಯಾದ ಅಯೋಧ್ಯೆ;

ಶ್ಮಶಾನ ಧರೆಯು ಅರಮನೆ=ಸುಡುಗಾಡಿನ ನೆಲವೇ ಅರಮನೆಯ ಬೀಡು; **ಪ್ರೇತಗಾಹಿನ ತವಗ ಮಣಿಪೀಠ**=ಸುಡುಗಾಡಿನ ಕಾವಲಿಗೆಂದು ಕಟ್ಟಿಕೊಂಡಿರುವ ಜಗಲಿಯೇ ರತ್ನ ವಜ್ರಗಳಿಂದ ಕೂಡಿರುವ ಸಿಂಹಾಸನ; **ಪರಿಣಾಮವೆ ಆರೋಗಣೆ**=ಸುಡುಗಾಡಿನಲ್ಲಿ ತನ್ಮಯತೆಯಿಂದ ಮಾಡುತ್ತಿರುವ ಕೆಲಸಗಳೇ ಒಳ್ಳೆಯ ಊಟ; **ಪರಮಧೃತಿ ಚತುರಂಗಸೇನೆ**=ಆಪತ್ತಿಗೆ ಮತ್ತು ಅಪಮಾನಕ್ಕೆ ಅಂಜದ ಕೆಚ್ಚಿನ ನಡೆನುಡಿಯೇ ಚತುರಂಗ ಸೇನೆ; **ಸಂಬಳಿಗೋಲು ಕರವಾಳು**= ಕಯ್ಯಲ್ಲಿ ಹಿಡಿದಿರುವ ಸಂಬಳಿಗೋಲೇ ಕತ್ತಿ;

ಸತ್ಯ ಭಂಡಾರ=ಸತ್ಯದ ವ್ಯಕ್ತಿತ್ವವೇ ಒಡವೆವಸ್ತುಗಳಿಂದ ತುಂಬಿರುವ ಬೊಕ್ಕಸ; **ಪತಿಯಾಜ್ಞೆ ಭಾಸುರತರ ಕ್ಷತ್ರಧರ್ಮಂಗಳೆಂದೇ ಹರಿಶ್ಚಂದ್ರನು ಕಾಣುತಿರ್ದನು**= ಒಡೆಯನಾದ ವೀರಬಾಹುಕನ ಆಜ್ಞೆಯನ್ನು ಚೆನ್ನಾಗಿ ಪಾಲಿಸುತ್ತಿರುವುದೇ ತೇಜಸ್ಸಿನಿಂದ ಕಂಗೊಳಿಸುವ ಕ್ಷತ್ರಿಯ ಧರ್ಮದ ಪರಿಪಾಲನೆಯೆಂದು ಹರಿಶ್ಚಂದ್ರನು ಸುಡುಗಾಡಿನ ಬದುಕಿನಲ್ಲಿಯೇ ರಾಜತನದ ಸಿರಿಸಂಪದವೆಲ್ಲವನ್ನೂ ಕಾಣುತ್ತಿದ್ದನು;

❖

ಪ್ರಸಂಗ–೨೦

ಲೋಹಿತಾಶ್ವನ ಮರಣ

ಇತ್ತ **ನೃಪನ್ ಇಂತು ದಿವಸಮ್ ಕಳೆಯುತಿರಲ್**=ಇತ್ತ ಹರಿಶ್ಚಂದ್ರನು ಈ ರೀತಿಯಲ್ಲಿ ಕಾಶಿ ನಗರದ ಸುಡುಗಾಡಿನಲ್ಲಿ ಕಾವಲುಗಾರನಾಗಿ ದಿನಗಳನ್ನು ಕಳೆಯುತ್ತಿರಲು; **ಅತ್ತಲ್ ಅಂತು ಅವರನ್ ಒತ್ತಿಟ್ಟ ಮನೆಯನ್ ಏನ್ ಪೊಗಳ್ವೆನ್**= ಅತ್ತ ಆ ರೀತಿಯಲ್ಲಿ ಚಂದ್ರಮತಿ ಮತ್ತು ಲೋಹಿತಾಶ್ವನನ್ನು ಕೊಂಡುಕೊಂಡ ಬ್ರಾಹ್ಮಣನ ಮನೆಯಲ್ಲಿ ಅವರು ಪಡುತ್ತಿರುವ ಸಂಕಟವನ್ನು ಏನೆಂದು ವಿವರಿಸಲಿ ಎಂದು ಕವಿಯು ಉದ್ಗಾರವೆಳೆದಿದ್ದಾನೆ; ಬ್ರಾಹ್ಮಣನ ಮನೆಯ ಜನರು ಎಂತಹ ಕ್ರೂರಿಗಳಾಗಿದ್ದರು ಎಂಬುದನ್ನು ರೂಪಕಗಳ ಮೂಲಕ ಕವಿಯು ಚಿತ್ರಿಸಿದ್ದಾನೆ; **ಅದು ಸೂನೆಗಾರರ ತಿಂತಿಣಿಯ ನಿಳಯ**=ಅದು ಕೊಲೆಗಡುಕರಿಂದ ತುಂಬಿದ ಮನೆ; **ರಕ್ಕಸಿಯ ಮಾಡ**=ರಕ್ಕಸಿಯ ಉಪ್ಪರಿಗೆ. ಅಂದರೆ ಅಲ್ಲಿದ್ದ ಮನೆಯೊಡತಿಯು ಮಹಾಕ್ರೂರಿ;

ಹಾವಿನ ಹೇಳಿಗೆ=ಹಾವನ್ನು ಇಡುವ ಬಿದಿರಿನ ಬುಟ್ಟಿ. ಅಂದರೆ ಯಾವ ಗಳಿಗೆಯಲ್ಲಿ ಯಾವ ಆಪತ್ತು ಚಂದ್ರಮತಿ ಮತ್ತು ಲೋಹಿತಾಶ್ವನಿಗೆ ಬರುವುದೋ ಹೇಳಲಾಗದು; **ಅಂತಕನ ನಗರ**=ಸಾವಿನ ದೇವತೆಯಾದ ಯಮನ ಪಟ್ಟಣ; **ಮೃತ್ಯುವಿನ ಬಲುಬಾಣಸದ ಹಂತಿ**=ಸಾಲು ಸಾಲು ಸಾವನ್ನುಂಟು ಮಾಡುವ ದೊಡ್ಡ ಅಡುಗೆಯ ಮನೆ; **ಮಾರಿಯ ಮೂರಿಯಾಟದ ಎಡೆ ಎಂಬಾಗಳ್**= ಮಾರಿ

ದೇವತೆಯ ಮುಂದೆ ಕೋಣನನ್ನು ಬಲಿಕೊಡುವ ಆಚರಣೆಯನ್ನು ಮಾಡುವ ಜಾಗ ಎನ್ನುವಂತಿರುವ; **ಅಕಟ... ಅವನಿಪನ ಸತಿಪುತ್ರರು ಮನೆಯವರ ದುರ್ಧರದೊಳ್ ಎಂತು ಜೀವಿಪರ್**=ಅಯ್ಯೋ... ಹರಿಶ್ಚಂದ್ರನ ಹೆಂಡತಿ ಮಕ್ಕಳು ಬ್ರಾಹ್ಮಣನ ಮನೆಯವರ ಕೊಡುತ್ತಿರುವ ತಡೆಯಲಾರದ ಹಿಂಸೆಯನ್ನು ಅನುಭವಿಸುತ್ತ ಅದಾವ ರೀತಿಯಲ್ಲಿ ಅಲ್ಲಿ ಜೀವಿಸಿದ್ದಾರೆಯೋ;

ಒಡೆಯನ್ ಅತಿಕೋಪಿ=ಮನೆಯ ಯಜಮಾನ ಅತಿಕೋಪವುಳ್ಳವನು; **ಹೆಂಡತಿ ಮಹಾಮೂರ್ಖೆ**=ಅವನ ಹೆಂಡತಿ ದೊಡ್ಡ ತಿಳಿಗೇಡಿ; **ಮಗ ಕಡುದೂರ್ತ**= ಅವರ ಮಗ ತುಂಬಾ ಕೆಟ್ಟ ನಡೆನುಡಿಯವನು; **ಸೊಸೆಯಾದಡೆ ಅಧಿಕ ನಿಷ್ಠುರೆ**=ಸೊಸೆಯಾದರೊ ಬಹಳ ಒರಟುತನದವಳು; ಮನೆಯ **ನಡೆವವರು ದುರ್ಜನರು**=ಮನೆಯಲ್ಲಿದ್ದ ಕೆಲಸದ ಆಳುಗಳು ಕೆಟ್ಟ ನಡೆನುಡಿಯವರು; **ನೆರೆಮನೆಯವರು ಮಿಥ್ಯವಾದಿಗಳು**=ಅಕ್ಕಪಕ್ಕದ ಮನೆಯವರು ಇಲ್ಲಸಲ್ಲದ್ದನ್ನು ಹೇಳುವ ಸುಳ್ಳುಗಾರರು; **ಪಶುಗಳ್ ಅಗಡು**=ಹಿಡಿತಕ್ಕೆ ಸಿಕ್ಕದ ತೊಂಡುದನಗಳು ಆ ಮನೆಯಲ್ಲಿದ್ದವು;

ಅಡಿಗಡಿಗೆ ಕೋಪಿಸುವ, ಸಾಯ ಸದೆಬಡಿವ, ಕಾಳ್ಗೆಡೆವ, ಕರಕರಿಪ, ಸೆಣಸುವ, ತಪ್ಪ ಸಾಧಿಸುವ, ಕೆಡೆಯೊದೆವ ಮಾರಿಗೆ ಆರದೆ ಅವನಿಪನ ಸತಿಪುತ್ರರು ಸತ್ತು ಹುಟ್ಟುತಿಹರ್=ಪದೇ ಪದೇ ಕೋಪಿಸಿಕೊಳ್ಳುವ; ಸಾಯುವಂತೆ ಹಲ್ಲೆಮಾಡುವ; ಕೆಟ್ಟ ಕೆಟ್ಟ ಮಾತುಗಳನ್ನಾಡುವ; ಕಾಟವನ್ನು ಕೊಡುವ; ಸಿಡಿಮಿಡಿಗೊಳ್ಳುವ; ಒಂದಲ್ಲ ಒಂದು ಬಗೆಯ ತಪ್ಪನ್ನು ಹುಡುಕಿ ಬಯ್ಯುತ್ತಿರುವ; ಕೆಳಕ್ಕೆ ಬೀಳುವಂತೆ ಒದೆಯುವ ಹಿಂಸೆಯನ್ನು ತಡೆಯಲಾರದೆ ಹರಿಶ್ಚಂದ್ರನ ಹೆಂಡತಿ ಮಕ್ಕಳು ಪ್ರತಿ ದಿನವೂ ಸತ್ತು ಹುಟ್ಟುತ್ತಿದ್ದರು. ಅಂದರೆ ಕಿರುಕುಳದ ಬೇಗೆಯಲ್ಲಿ ಒಂದೇ ಸಮನೆ ಬೇಯುತ್ತಿದ್ದರು;

ಹಲವು ಸೂಳ್ ಒಡೆಯನ ಅರಮನೆಗೆ ಎಡೆವಿಡದೆ ನೀರ್ ಅಡಕಿ=ಪ್ರತಿ ದಿನವೂ ಹಲವು ಸಾರಿ ಯಜಮಾನನ ದೊಡ್ಡ ಮನೆಗೆ ಹೊರಗಡೆಯಿಂದ ಒಂದೇ ಸಮನೆ ನೀರನ್ನು ತಂದು ತುಂಬಿ; **ಕೊಟ್ಟನಿತು ಬತ್ತವ ಮಿದಿದು**=ಅವರು ಕೊಟ್ಟ ಬತ್ತವನ್ನು ಒರಳಿನಲ್ಲಿ ಒನಕೆಯಿಂದ ಕುಟ್ಟಿ ಹಸನು ಮಾಡಿ, ಅಕ್ಕಿಯನ್ನು ತೆಗೆದು; **ಒಡಲಿಗೆ ಎಯ್ದೆ ಎಡೆಯಿಕ್ಕಿದ ಅನಿತುಮನೆ ಉಂಡು**=ಹೊಟ್ಟೆಗೆ ಉಣಲೆಂದು ಅವರು ನೀಡಿದಷ್ಟನ್ನು ಉಂಡು; **ಇರುಳುಮ್ ಹಗಲುಮ್ ಎನ್ನದೆ ಓರಂತೆ ಕುದಿವ ಮಡದಿಯ ಕುಮಾರನ್ ಉದಯದೊಳ್ ಎದ್ದು ಹೋಗಿ**=ರಾತ್ರಿ ಹಗಲೆನ್ನದೆ ಒಂದೇ ಸಮನೇ ದುಡಿಯುತ್ತಿರುವ ಲೋಹಿತಾಶ್ವನು ಬೆಳಗಿನ ಜಾವದಲ್ಲಿ ಎದ್ದು ಹೋಗಿ;

ನಿಚ್ಚ ತನ್ನ ಒಡನಾಡಿಗಳ್ ಬೆರಸಿ ಹೇರಡವಿಯಲಿ ಹುಲುಹುಳ್ಳಿಯಮ್ ಕೊಂಡು=ನಿತ್ಯವೂ ತನ್ನ ಓರಿಗೆಯ ಮಕ್ಕಳ ಜತೆಗೂಡಿ ದೊಡ್ಡ ಕಾಡಿನಲ್ಲಿರುವ ಹುಲ್ಲನ್ನು ಕೊಯ್ದು ಮತ್ತು ಒಣಗಿದ ಕಟ್ಟಿಗೆಯ ಸಣ್ಣ ಸಣ್ಣ ತುಂಡುಗಳನ್ನು ಆಯ್ದು ತಂದು; **ಬೈಗೆ ಬಂದು**=ಕಾಡಿನಿಂದ ಸಂಜೆಯಲ್ಲಿ ಹಿಂತಿರುಗಿ ಬಂದು; **ಇಂತು ಕಾಲವನು ಸವೆಯಿಸುತಿರ್ದನು**=ಈ ರೀತಿ ಕಾಲವನ್ನು ತಳ್ಳುತ್ತಿದ್ದನು; **ಓರಂತೆ ತಲ್ಲಣಿಸಿ ಹೆದರಿ**=ಮನೆಯವರು ನೀಡುತ್ತಿರುವ ಕಿರುಕುಳ ಮತ್ತು ಒಂದೇ ಸಮನೆ ಮಾಡುತ್ತಿರುವ ಕೆಲಸದ ಹೊರೆಯಿಂದ ಚಿಂತೆಗೀಡಾಗಿ ಹೆದರಿಕೊಂಡು; **ಕಣ್ಗೆಟ್ಟು ಓಡಬಾರದು ಇರಬಾರದು ಉರೆ ಸಾಯಬಾರದು ಬದುಕಬಾರದು ಎಂಬಂತೆ**= ದಿಕ್ಕುತೋಚದಂತಹ ಸನ್ನಿವೇಶಕ್ಕೆ ಗುರಿಯಾಗಿ ಅಲ್ಲಿಂದ ಓಡಿಹೋಗಲಾರದ... ಕಿರುಕುಳದ ಮನೆಯಲ್ಲಿ ಇರಲಾಗದ... ಇತ್ತ ಸಾಯಲಾಗದ... ಅತ್ತ ಬದುಕಲಾಗದ ಇಬ್ಬಗೆಯ ಸಂಕಟವೆನ್ನುವಂತೆ;

ತನ್ನೊಡಲಿಂಗೆ ಬಪ್ಪ ದುಃಖಂಗಳಿಗೆ ಸಾಕ್ಷಿಯಾಗಿ=ತನ್ನ ಮಯ್ ಮನಕ್ಕೆ ಬಂದ ಸಂಕಟಗಳೆಲ್ಲವನ್ನು ಸಹಿಸಿಕೊಳ್ಳುತ್ತ; **"ಧಾರಿಣಿಯೊಳ್ ಅವನಿಪನ ಸತ್ಯ ಸಲಬೇಹುದು" ಎಂಬ ಆರಯ್ಕೆವಿಡಿದು ನಡೆಯುತ್ತಿಪ್ಪ ನಾರಿಯ ಕುಮಾರಂಗೆ ಬಂದ ಸಂಕಟದ ಸಂವರಣೆಯನ್ ಆದಾವ ಜೀವರು ಕೇಳ್ವರು**= ಭೂಮಂಡಲದಲ್ಲಿ ನಮ್ಮ ತಂದೆಯಾದ ಹರಿಶ್ಚಂದ್ರನ ಸತ್ಯದ ನಡೆನುಡಿಯು ಉಳಿಯಬೇಕು" ಎಂಬ ಉದ್ದೇಶದಿಂದ ಬಾಳುತ್ತಿರುವ ಲೋಹಿತಾಶ್ವನಿಗೆ ಬಂದ ಸಂಕಟದ ಪರಿಸ್ಥಿತಿಯನ್ನು ಅದು ಯಾರು ತಾನೆ ಕೇಳಿ ಸಹಿಸಿಕೊಳ್ಳಬಲ್ಲರು. ಅಂದರೆ ಲೋಹಿತಾಶ್ವನಿಗೆ ಬಹು ದೊಡ್ಡ ಆಪತ್ತು ಬರಲಿದೆ ಎಂಬುದನ್ನು ಈ ನುಡಿಗಳು ಸೂಚಿಸುತ್ತಿವೆ; **ಎಂದಿನಂತೆ ಉದಯಕಾಲದೊಳ್ ಎದ್ದು ಹುಲುಹುಳ್ಳಿಗೆಂದು ಅರಣ್ಯಕ್ಕೆ ನಡೆದು**= ಲೋಹಿತಾಶ್ವನು ಪ್ರತಿ ದಿನದ ದುಡಿಮೆಯನ್ನು ಮಾಡಲೆಂದು ಒಂದು ದಿನ ಬೆಳಗಿನ ಸಮಯದಲ್ಲಿ ಎದ್ದು ಹುಲ್ಲು ಮತ್ತು ಕಟ್ಟಿಗೆಯ ಪುಳ್ಳೆಯನ್ನು ತರಲೆಂದು ಕಾಡಿಗೆ ನಡೆದು ಬಂದು;

ಅಲ್ಲಲ್ಲಿ ಹೋಗಿ ಹಲವು ಅಂದದ ಅಡುಗಬ್ಬನ್ ಆಯ್ದು ಒಟ್ಟಿ ಹೊರೆಗಟ್ಟಿ ಹೊತ್ತು=ಕಾಡಿನ ಅನೇಕ ಕಡೆಗಳಲ್ಲಿ ತಿರುತಿರುಗಿ, ಚೆನ್ನಾಗಿರುವ ಕಟ್ಟಿಗೆಯ ತುಂಡು ಗಳನ್ನು ಆಯ್ದು, ಒಂದೆಡೆ ರಾಶಿ ಮಾಡಿ, ಹೊರೆಯನ್ನು ಕಟ್ಟಿ ಹೊತ್ತುಕೊಂಡು; **ಓರಗೆಯ ಮಕ್ಕಳೊಡನೆ ನಿಂದು**=ತನ್ನ ಒಡನಾಡಿಗಳೊಡನೆ ನಿಂತು ಆಯಾಸವನ್ನು ಪರಿಹರಿಸಿಕೊಳ್ಳುತ್ತ; **ಮಧ್ಯಾಹ್ನದ ಉರಿ ಬಿಸಿಲೊಳ್ ಎದೆ ಬಿರಿಯೆ**=ಮಧ್ಯಾಹ್ನದ ಉರಿ ಬಿಸಿಲಿನ ತಾಪದಿಂದ ಎದೆ ನೋಯುತ್ತಿರಲು; **ಜವಗುಂದಿ ತಲೆಕುಸಿದು ನಡೆಗೆಟ್ಟು**=ದೇಹದ ಬಲವು ಕಡಿಮೆಯಾಗಿ, ತಲೆ ತಿರುಗಿ, ನಡೆಯಲಾರದೆ ಕಾಲುಗಳು ಸುಸ್ತಾಗಿ; **ಬಾಯಾರಿ ಹಣೆಯಿಂದ ಬೆಮರುಗೆ**=ಬಾಯಾರಿಕೆಯಿಂದ

ತೊಳಲುತ್ತ, ಹಣೆಯಲ್ಲಿ ಬೆವರು ಹರಿಯುತ್ತಿರಲು;

ನೆತ್ತಿ ಹೊತ್ತಿ ತೇಂಕುತ್ತ ಹರಿತಪ್ಪಾಗಳ್ ಏನ್ ಪೊಗಳ್ವೆನು=ತಲೆಯ ಮೇಲೆ ಹುಲ್ಲು ಮತ್ತು ಕಟ್ಟಿಗೆಯ ಹೊರೆಯನ್ನು ಹೊತ್ತುಕೊಂಡು, ಏದುಸಿರನ್ನು ಬಿಡುತ್ತ ಬರುತ್ತಿರುವ ಲೋಹಿತಾಶ್ವನಿಗೆ ಬಂದ ಆಪತ್ತನ್ನು ಏನೆಂದು ತಾನೆ ವಿವರಿಸಲಿ ಎಂದು ಕವಿಯು ಉದ್ಗರಿಸುತ್ತಿದ್ದಾನೆ; **ಕೆಲದ ಮೆಳೆಯ ಒತ್ತಿನೊಳಗಿರ್ದ ಹುತ್ತಿನೊಳು ನಳನಳಿಸಿ ಕೋಮಲತೆಯಿಮ್ ಕೊಬ್ಬಿ ಕೊನೆವಾಯ್ದು ಕಂಗೆ ಅಳವಟ್ಟು ಬೆಳೆದ ಎಳೆಯ ದರ್ಭೆಯಮ್ ಕಂಡು ಹಾರಯಿಸಿ**=ಹುಲ್ಲು ಮತ್ತು ಪುಳ್ಳೆಯ ಹೊರೆಯನ್ನು ಹೊತ್ತುಕೊಂಡು ಕಾಡಿನಿಂದ ಬರುತ್ತಿದ್ದ ಲೋಹಿತಾಶ್ವನು ಕಾಲುದಾರಿಯ ಪಕ್ಕದ ಮೆಳೆಗೆ ಸೇರಿದಂತಿದ್ದ ಹುತ್ತದ ಮೇಲೆ ಹುಲುಸಾಗಿ ಬೆಳೆದು ದಟ್ಟವಾಗಿ ಹಬ್ಬಿ ಹರಡಿಕೊಂಡು, ಕಣ್ಣಿಗೆ ಎದ್ದು ಕಾಣುವಂತೆ ಕಂಗೊಳಿಸುತ್ತಿದ್ದ ಎಳೆಯ ಮೊನಚಾದ ಎಳೆಯ ಹುಲ್ಲನ್ನು ಕಂಡು ಬಯಸಿ;

ನಾನ್ ಇದನೆಲ್ಲವ ಗಳಗಳನೆ ಕೊಯ್ದುಕೊಂಡು ಎಯ್ದು ಇತ್ತಡೆ, ಎನ್ನೊಡೆಯ ಮುಳಿಯದಿಹನ್ ಎಂಬ ಆಸೆಯಿಮ್=ನಾನು ಇಂತಹ ಸೊಗಸಾದ ದರ್ಭೆಯನ್ನು ಬೇಗನೆ ಕೊಯ್ದುಕೊಂಡು ಹೋಗಿ ಕೊಟ್ಟರೆ, ಒಡೆಯನು ಆನಂದಗೊಂಡು ಎಂದಿನಂತೆ ನನ್ನ ಬಗ್ಗೆ ಕೋಪಿಸಿಕೊಳ್ಳುವುದಿಲ್ಲ ಎಂಬ ಆಸೆಯಿಂದ; **ಹೊರೆಯನ್ ಇಳುಹಿ**=ಹೊತ್ತಿದ್ದ ಹೊರೆಯನ್ನು ಕೆಳಕ್ಕೆ ಇಳಿಸಿ; **ಮತ್ತೆ ಎಳಸಿ ಕುಡುಗೋಲ್ ಪಿಡಿದು**=ಮತ್ತೆ ದರ್ಭೆಯನ್ನು ಕುಯ್ಯಲೆಂದು ಕುಡುಗೋಲನ್ನು ಹಿಡಿದುಕೊಂಡು; **ಅಸ್ತಾದ್ರಿಯಮ್ ಸಾರ್ದ ಮಾರ್ತಾಂಡನಂತೆ ಸಾರ್ದನ್**=ಪಶ್ಚಿಮದ ದಿಕ್ಕಿನ ಬೆಟ್ಟದ ಒತ್ತಿಗೆ ಬರುವ ಸೂರ್ಯನಂತೆ ಹುತ್ತದ ಬಳಿಗೆ ಬಂದನು;

ಹೊದೆ ಕಡಿದು=ದಟ್ಟವಾಗಿ ಬೆಳೆದಿದ್ದ ಮೆಳೆಯನ್ನು ಕತ್ತರಿಸಿ; **ಹುತ್ತನು ಹತ್ತಿ ಸುತ್ತಿದ ಎಳಹುಲ್ಲ ಹೊದರ ಅಡಸಿ ಹಿಡಿದು, ಬಿಡದೆ ಅರಿದು ಸೆಳೆಯಲ್**=ಹುತ್ತದ ಮೇಲೆ ನಿಂತುಕೊಂಡು, ಹುತ್ತದ ಸುತ್ತಲೂ ಮೇಲೆ ಕೆಳಗೆ ಬೆಳೆದಿದ್ದ ಎಳೆಯ ಹುಲ್ಲಿನ ತೆಂಡೆಯನ್ನು ಒತ್ತಿಹಿಡಿದು, ಬಿಡದೆ ಕತ್ತರಿಸಿ ಜಗ್ಗಿಸಿ ಕೀಳುತ್ತಿರಲು; **ಕೈಯ ಹದರನ್ ಒಡೆಗಚ್ಚಿ ಜಡಿಯುತ್ತ ಭೋಂಕನೆ ಬಂದ ರೌದ್ರಸರ್ಪನನು ಕಂಡು ಹೆದರಿ**=ಲೋಹಿತಾಶ್ವನ ಕಯ್ಯಿನ ಮಣಿಕಟ್ಟನ್ನು ಕಚ್ಚಿಹಿಡಿದು ಬುಸುಗುಡುತ್ತ ಭೋಂಕನೆ ಬಂದ ಉಗ್ರವಾದ ಹಾವನ್ನು ಕಂಡು ಹೆದರಿಕೊಂಡು; **ಹವ್ವನೆ ಹಾರಿ ಹಾ ಎಂದು ಕೈಕಾಲ ಕೆದರಿ**=ಕೂಡಲೇ ಮೇಲಕ್ಕೆ ನೆಗೆದು… ಹಾ ಎಂದು ಅರಚುತ್ತ ಕಯ್ ಕಾಲನ್ನು ಜೋರಾಗಿ ಒದರಿ;

ಅಕಟಕಟ… ಮದಮ್ ಉದಿತ ರಾಹುಗ್ರಸ್ತವಾದ ತರುಣೇಂದುಬಿಂಬಮ್ ನೆಲಕ್ಕೆ ಬೀಳ್ವಂದದೆ ತಲೆಕೆಳಗಾಗಿ ಕೆಡೆದನ್=ಅಯ್ಯಯ್ಯೋ… ಸೊಕ್ಕಿನಿಂದ

ಮರೆಯುತ್ತಿರುವ ರಾಹುವಿನಿಂದ ಹಿಡಿಯಲ್ಪಟ್ಟ ಎಳೆಯ ಚಂದ್ರ ಬಿಂಬ ನೆಲಕ್ಕೆ ಉರುಳಿಬೀಳುವ ರೀತಿಯಲ್ಲಿ ಲೋಹಿತಾಶ್ವನು ಹುತ್ತದ ಬುಡದಲ್ಲಿ ಬಿದ್ದನು; **ಹುತ್ತಿನಿಮ್ ಫಣಿವೆರಸಿ ಕೆಡೆಯೆ ಕಂಡು, ಒಡನಿರ್ದ ಜತ್ತಕಂಗಳು ಹೆದರಿ ಬಿಟ್ಟೋಡಿ ಊರತ್ತಲ್ ಹೋದರ್**=ಹುತ್ತದ ಮೇಲಿನಿಂದ ಹಾವಿನ ಜತೆಗೂಡಿಯೇ ಲೋಹಿತಾಶ್ವನು ಕೆಳಕ್ಕೆ ಬಿದ್ದುದನ್ನು ಕಂಡು, ಜತೆಯಲ್ಲಿದ್ದ ಹುಡುಗರು ಹೆದರಿಕೊಂಡು, ಅವನನ್ನು ಅಲ್ಲಿಯೇ ಬಿಟ್ಟು ಬಿದ್ದಂಬೀಳ ಓಡುತ್ತ ಕಾಶಿ ನಗರದತ್ತ ಹೋದರು;

ಇತ್ತಮ್ ತಾಯ್ಗೆ ಹಲುಬಿ ತಂದೆಯ ಕರೆದು ದೆಸೆದೆಸೆಗೆ ಬಾಯ ಬಿಟ್ಟು ನೆತ್ತಿಗೇರಿದ ವಿಷದ ಕೈಯಿಂದ ಮಡಿದನ್=ಇತ್ತ ಲೋಹಿತಾಶ್ವನು ತಾಯಿಗಾಗಿ ರೋದಿಸುತ್ತ ತಂದೆಯ ಹೆಸರನ್ನು ಹಿಡಿದು ಕೂಗುತ್ತ, ದಿಕ್ಕುದಿಕ್ಕಿಗೆ ಬಾಯಿಬಿಡುತ್ತ, ತಲೆಗೇರಿದ ನಂಜಿನಿಂದ ಮರಣಹೊಂದಿದನು;

ರವಿ "ಈ ಹೊತ್ತು ಎನ್ನ ಕುಲದ ಕುಡಿ ಮುರುಟಿತು" ಎಂದು ಉಮ್ಮಳಮ್ ಪೆತ್ತು, "ಬೀಳದೆ ಮಾಣೆನ್" ಎಂಬಂತೆ ಅಂದು ಪಡುವಣ ಕಡಲೊಳು ಬಿದ್ದನ್= ಸೂರ್ಯನು "ಈ ಹೊತ್ತು ನನ್ನ ಕುಲದ ಚಿಗುರು ಮುದುಡಿಹೋಯಿತು" ಎಂದು ಸಂಕಟಪಡುತ್ತ "ಮರೆಯಾಗದೆ ಇರಲಾರೆನು" ಎನ್ನುವಂತೆ, ಅಂದು ಪಶ್ಚಿಮದ ಕಡಲಿನಲ್ಲಿ ಮರೆಯಾದನು;

❖

ಪ್ರಸಂಗ–೨೧

ಲೋಹಿತಾಶ್ವನ ಮರಣದ ಸುದ್ದಿಯಿಂದ ಕಂಗಾಲಾದ ಚಂದ್ರಮತಿ

ತನಯನ್ ಎಂದುಮ್ ಬಪ್ಪ ಹೊತ್ತಿಂಗೆ ಬಾರದಿರೆ ಮನನೊಂದು=ಹುಲ್ಲು ಮತ್ತು ಪುಳ್ಳೆಯನ್ನು ತರಲೆಂದು ಪ್ರತಿ ದಿನ ಕಾಡಿಗೆ ಹೋಗಿ ಬರುತ್ತಿದ್ದ ಲೋಹಿತಾಶ್ವನು ಹಿಂತಿರುಗಿ ಬರುವ ವೇಳೆಯಾಗಿದ್ದರೂ ಇಂದು ಬಾರದಿರುವುದನ್ನು ಕಂಡು ಚಂದ್ರಮತಿಯು ಮನದಲ್ಲಿ ತುಂಬಾ ಆತಂಕಗೊಂಡು; **ಎನ್ನ ಕಂದನ್ ಇದೇಕೆ ತಳುವಿದನ್ ಎಂದೆನುತ**=ನನ್ನ ಕಂದನು ಇದೇಕೆ ತಡಮಾಡಿದನು ಎಂದು ತನಗೆ ತಾನೆ ಹೇಳಿಕೊಳ್ಳುತ್ತ; **ಸುಯ್ಯುತ್ತ, ಮರುಗುತ್ತ, ಬಸುರಮ್ ಹೊಸೆದು, ಕೊನೆವೆರಳ ಮುರಿದುಕೊಳುತ**=ಸಂಕಟ ಹೆಚ್ಚಾಗುತ್ತಿರಲು ನಿಟ್ಟುಸಿರನ್ನು ಬಿಡುತ್ತ, ಕೊರಗುತ್ತ, ಹೊಟ್ಟೆಯಲ್ಲಿನ ಉರಿಯನ್ನು ತಡೆಯಲಾರದೆ ಹೊಟ್ಟೆಯನ್ನು ಹಿಸುಕಿಕೊಳ್ಳುತ್ತ, ಉದ್ವೇಗವನ್ನು ಹತ್ತಿಕ್ಕಿಕೊಳ್ಳಲೆಂದು ಕಿರುಬೆರಳನ್ನು ಒತ್ತೊತ್ತಿ ಹಿಡಿದುಕೊಳ್ಳುತ್ತ;

ತನುವ ಮರೆದು ಅಡಿಗಡಿಗೆ ಹೊರಗನ್ ಆಲಿಸಿ=ತನ್ನನ್ನೇ ತಾನು ಮರೆತು, ಪದೇ ಪದೇ ಮನೆಯ ಹೊರಗಡೆಯಿಂದ ಕೇಳಿಬರುವ ಶಬ್ದವನ್ನು ಆಲಿಸುತ್ತ; **ಮತ್ತೆ ಮನೆಯೊಡತಿಗೆ ಅಂಜಿ**=ಹೊರಕ್ಕೆ ಹೋಗಲಾಗದೆ ಮನೆಯ ಯಜಮಾನಿಗೆ ಹೆದರಿಕೊಂಡು; **ಕೆಲಸವನು ಮಾಡುತಿಪ್ಪ ವನಿತೆಗಾದ ಆಪತ್ತನ್ ಆಲಿಸದೆ ಕೆಟ್ಟು**

ದಟ್ಟಿಸುವರ್=ಕೆಲಸವನ್ನು ಮಾಡುತ್ತಿರುವ ಚಂದ್ರಮತಿಗೆ ಬಂದೊದಗಿದ ಆಪತ್ತನ್ನು ಬ್ರಾಹ್ಮಣನ ಮನೆಯವರು ಮನಗೊಟ್ಟು ಕೇಳದೆ, ಕೆಟ್ಟ ನುಡಿಗಳನ್ನಾಡಿ ಚಂದ್ರಮತಿಯನ್ನೇ ಗದರಿಸಿ ಮೂದಲಿಸುತ್ತಿರುವರು; **ಅದನ್ ಏನೆಂಬೆನು**= ಚಂದ್ರಮತಿಯ ಸಂಕಟವನ್ನು ಮತ್ತು ಮನೆಯೊಡೆಯರ ಕರುಣೆಯಿಲ್ಲದ ಕೆಟ್ಟ ನಡೆನುಡಿಯನ್ನು ಏನೆಂದು ತಾನೆ ವಿವರಿಸಲಿ ಎಂದು ಕವಿಯು ಉದ್ಗರಿಸು ತ್ತಿದ್ದಾನೆ; ಈ ಸನ್ನಿವೇಶದಲ್ಲಿ ಚಂದ್ರಮತಿಯ ಮಯ್ ಮನದಲ್ಲಿ ಉಂಟಾದ ಸಂಕಟದ ತೀವ್ರತೆಯನ್ನು ಕವಿಯು ರೂಪಕಗಳ ಮೂಲಕ ಚಿತ್ರಿಸಿದ್ದಾನೆ;

ಒಳಗೆ ಉಡಿದ ನಾರಾಚದ ಏರಿನಂದದಿ=ಹಗೆಯು ಬಿಟ್ಟ ಬಾಣವು ದೇಹದೊಳಗೆ ತುಂಡಾಗಿ ಸೇರಿಕೊಂಡಾಗ ಉಂಟಾದ ಗಾಯದಂತೆ; ಆವಗೆ=ಹಸಿ ಮಣ್ಣಿನಿಂದ ತಯಾರಿಸಿದ ಹೆಂಚು ಮಡಕೆ ಮುಂತಾದ ಸಾಮಗ್ರಿಗಳನ್ನು ಸುಡುವ ಕುಂಬಾರನ ಒಲೆ; **ಹೊರಗ ಬಳಸದೆ ಒಳಗೊಳಗೆ ಏಗುವ ಆವಗೆಯ ಶಿಖಿಯಂತೆ**= ಕುಂಬಾರನ ಆವಗೆಯ ಬೆಂಕಿಯು ಹೊರಕ್ಕೆ ಕಾಣಿಸಿಕೊಳ್ಳದೆ, ಒಳಗೊಳಗೆ ಕವರಿಕೊಂಡು ಉರಿಯುತ್ತಿರುವ ಬೆಂಕಿಯಂತೆ; **ಕೆಳೆಗೊಂಡ ಹಗೆಗಳ ಒಳಗಣ ಮುಳಿಸಿನ ಅಂದದಿಮ್**=ಮೇಲುನೋಟಕ್ಕೆ ಗೆಳೆಯರಂತೆ ಕಂಡು ಬಂದರೂ ಮನದಲ್ಲಿ ಕೋಪವನ್ನು ಹೊಂದಿರುವ ಹಗೆಗಳಂತೆ; **ಮನೆಯವರ ಮಾರಿಗಂಜಿ**= ಬ್ರಾಹ್ಮಣನ ಮನೆಯವರ ಕಿರುಕುಳ ಮತ್ತು ಹಿಂಸೆಗೆ ಹೆದರಿಕೊಂಡು;

ಬಳಸಿ ಬಿರಿವ ಎದೆ=ಒಳಗೊಳಗೆ ಬಿರಿಯುವ ಎದೆ. ಅಂದರೆ ಹೇಳಲಾಗದ ನೋವಿನಿಂದ ಮನಸ್ಸು ಪರಿತಪಿಸುತ್ತಿದೆ; **ಬಿಕ್ಕುವ ಅಳ್ಳೆ**=ಸಂಕಟದ ತೀವ್ರತೆಯಿಂದ ಏದುಸಿರು ಬಿಡುವಾಗ ಏರಿಳಿತಕ್ಕೆ ಒಳಗಾಗುವ ಪಕ್ಕೆಗಳು; **ಕಣ್ಗಳೊಳ್ ಒರೆವ ಜಲ**=ಕಣ್ಣುಗಳಿಂದ ಒತ್ತಿಬರುತ್ತಿರುವ ನೀರು; **ಗಂಟಲಿನ ಸೆರೆಗಳ್ ಒಡೆದು ಉಬ್ಬಿ ಬಿಗಿದು**=ಗಂಟಲಿನ ನರಗಳು ಎದ್ದು ಕಾಣುವಂತೆ ಉಬ್ಬಿ ಬಿಗಿದುಕೊಂಡು; **ಮುಕ್ಕುಳಿಸಿದ ಅಕ್ಕೆಗಳ್ ಎಸೆವ ಸತಿಯ ಅಳಲು**=ಹೊರಹೊಮ್ಮಿದ ಮೂಕ ರೋದನದಿಂದ ಪರಿತಪಿಸುತ್ತಿರುವ ಚಂದ್ರಮತಿಯ ಸಂಕಟವು; **ಸೀಗೆಯೊಳಗಣ ಬಾಳೆಗೆ ಎಣೆಯಾದುದು**=ಸೀಗೆಯ ಮೆಳೆಯ ಒಳಗೆ ಸಿಲುಕಿರುವ ಬಾಳೆಯ ಗಿಡದಂತಾಯಿತು; ಅಂದರೆ ಸೀಗೆಯ ಮೆಳೆಯ ಮುಳ್ಳುಗಳಿಗೆ ಸಿಲುಕಿದ ಬಾಳೆಯ ಎಲೆಗಳು ಹರಿದುಹೋಗುತ್ತವೆ. ಅಂತೆಯೇ ಬ್ರಾಹ್ಮಣನ ಮನೆಯವರ ಕಿರುಕುಳ ಮತ್ತು ಹಿಂಸೆಯಿಂದ ಚಂದ್ರಮತಿಯು ನಿರಂತರವಾಗಿ ನೋಯುತ್ತಿದ್ದಾಳೆ ಎಂಬ ರೂಪಕದ ತಿರುಳಿನಲ್ಲಿ ಬಳಕೆಯಾಗಿದೆ;

ಅಡವಿಯೊಳು ಹೊಲಬುಗೆಟ್ಟನೋ=ಕಾಡಿಗೆ ಹೋಗಿಬರುವಾಗ ದಾರಿ ತಪ್ಪಿದನೋ; **ಗಿಡುವಿನೊಳಗೆ ಹುಲಿ ಹಿಡಿದುದೋ**=ಕಾಡಿನ ಮರಗಿಡಗಳ

ಮರೆಯಲ್ಲಿದ್ದ ಹುಲಿಯು ಹಿಡಿಯಿತೋ; **ಕಳ್ಳರ್ ಒಯ್ದರೋ**=ಕಳ್ಳರು ಹಿಡಿದು ಕೊಂಡು ಹೋದರೋ; **ಭೂತ ಸಂಕುಲಮ್ ಹೊಡೆದುವೋ**=ದೆವ್ವಗಳ ಗುಂಪು ಬಲಿತೆಗೆದುಕೊಂಡವೋ; **ನೀರೊಳ್ ಅದ್ದನೋ**=ನೀರಿನಲ್ಲಿ ಮುಳುಗಿದನೋ; **ಮರದ ಕೊಂಬೆ ಏರಿ ಬಿದ್ದನೋ**=ಮರದ ಕೊಂಬೆಯನ್ನೇರಿ ಆಕಸ್ಮಿಕವಾಗಿ ಕೆಳಕ್ಕೆ ಬಿದ್ದನೋ; **ಫಣಿ ತಿಂದುದೋ**=ಹಾವು ಕಚ್ಚಿತೋ; **ಕಡುಹಸಿದು ನಡೆಗೆಟ್ಟು ನಿಂದನೋ ಎಂದು ಇಂತು ಮಡದಿ ಹಲವಮ್ ಹಲಬುತ ಅಂಗಣದೊಳಿರೆ**= ಬಹಳ ಹಸಿದು ಸುಸ್ತಾಗಿ ನಡೆಯಲಾಗದೆ ಎಲ್ಲಿಯಾದರೂ ನಿಂತಿರುವನೋ ಎಂದು ಚಂದ್ರಮತಿಯು ಹಲವು ರೀತಿಗಳಲ್ಲಿ ಲೋಹಿತಾಶ್ವನು ಇನ್ನೂ ಬಾರದಿರುವುದಕ್ಕೆ ಕಾರಣಗಳನ್ನು ಊಹಿಸಿಕೊಂಡು ಕಣ್ಣೀರು ಹಾಕುತ್ತ ಮನೆಯ ಮುಂದಣ ಅಂಗಳದಲ್ಲಿರಲು;

ಹೊತ್ತಿ ಹೊಡಕರಿಸಿದ ಅಳಲ ಕರ್ಬೊಗೆಯಂತೆ ಕವಿವ ಕತ್ತಲೆಯೊಳಗೆ ನಿಂದಿರ್ದಳು=ಬೆಂಕಿಯು ಹತ್ತಿಕೊಂಡು ಜ್ವಾಲೆಗಳು ಉರಿದೆದ್ದಾಗ ಆವರಿಸಿಕೊಂಡ ದಟ್ಟನೆಯ ಕಪ್ಪಾದ ಹೊಗೆಯಂತೆ ಸಂಕಟವೆಂಬ ಹೊಗೆಯಿಂದ ಸುತ್ತುವರಿದ ಚಂದ್ರಮತಿಯು ಕವಿಯುತ್ತಿರುವ ಕತ್ತಲೆಯೊಳಗೆ ಮನೆಯ ಮುಂದಿನ ದಾರಿಯಲ್ಲಿ ಹೋಗಿಬರುವವರನ್ನು ಗಮನಿಸುತ್ತ ನಿಂತಿದ್ದಳು; **ಬಂದರಮ್ "ಲೋಹಿತಾಶ್ವಾ" ಎಂದು**=ದಾರಿಯಲ್ಲಿ ಬರುತ್ತಿರುವವರನ್ನು ಕಂಡು "ಲೋಹಿತಾಶ್ವ" ಎಂದು; **ಬಟ್ಟೆಯೊಳು ನಿಂದರಮ್ "ಲೋಹಿತಾಶ್ವಾ" ಎಂದು**= ದಾರಿಯಲ್ಲಿ ನಿಂತವರನ್ನು ನೋಡಿ "ಲೋಹಿತಾಶ್ವ" ಎಂದು; **ಗಾಳಿ ಗಿರಿಕ್ ಎಂದಡಮ್ "ಲೋಹಿತಾಶ್ವಾ" ಎಂದು ಕರೆಕರೆದು**=ಬೀಸುವ ಗಾಳಿ ತುಸು ದನಿ ಮಾಡಿದರು "ಲೋಹಿತಾಶ್ವ" ಎಂದು ಮಗನ ಹೆಸರನ್ನು ಮತ್ತೆ ಮತ್ತೆ ಕರೆಯುತ್ತ;

ಬಿಡೆ ಬೀದಿ ಕರುವಿನಂತೆ ಮಂದಮತಿಯಾಗಿರ್ದ ಚಂದ್ರಮತಿಗೆ=ಕಟ್ಟದೆ ಬಿಟ್ಟಿರುವ ಬೀದಿಯ ಕರು ತನ್ನಿಚ್ಚೆ ಬಂದ ಕಡೆ ತಿರುಗುವಂತೆ ಸಂಕಟದ ತೀವ್ರತೆಯಿಂದ ಆಲೋಚನಾ ಶಕ್ತಿಯನ್ನೇ ಕಳೆದುಕೊಂಡಿದ್ದ ಚಂದ್ರಮತಿಗೆ; **ಒಬ್ಬನ್ ಎಯ್ತಂದು**=ಒಬ್ಬ ಹುಡುಗನು ಚಂದ್ರಮತಿಯ ಬಳಿಗೆ ಬಂದು; **ಇಂದು ಕೂಡೆ ಹೋಗಿರ್ದು ಕಂಡೆನ್**=ಇಂದು ಲೋಹಿತಾಶ್ವನೊಡನೆ ನಾನು ಕಾಡಿಗೆ ಹೋಗಿದ್ದು ನೋಡಿದೆನು; **ನಿನ್ನ ಕಂದನ ಒಂದು ಉಗ್ರಫಣಿ ತಿಂದು ಜೀವಮ್ ಕಳೆದನ್ ಎಂದು ಹೇಳಿದನ್**=ನಿನ್ನ ಮಗನನ್ನು ಒಂದು ಭಯಂಕರವಾದ ಹಾವು ಕಚ್ಚಿ, ಅವನು ಪ್ರಾಣವನ್ನು ಬಿಟ್ಟನು ಎಂದು ಹೇಳಿದನು; **ಆಗಳು**=ಆಗ ಚಂದ್ರಮತಿಯು ಆ ಹುಡುಗನನ್ನು ಕೇಳುತ್ತಾಳೆ; **ಅಕ್ಕಟಾ, ಏಕೆ ಕಚ್ಚಿತ್ತು ಆವ ಕಡೆ ಆವ ಹೊಲನ್ ಕುಮಾರನ್ ಮಡಿದ ಠಾವು ಎನಿತು ದೂರ**=ಅಯ್ಯೋ... ಹಾವು ಏಕೆ

ಕಚ್ಚಿತು... ಯಾವ ಕಡೆ ಕಚ್ಚಿತು... ಕಚ್ಚಿದ ಪ್ರದೇಶ ಯಾವುದು... ನನ್ನ ಮಗನು ಸತ್ತ ಜಾಗವು ಇಲ್ಲಿಂದ ಎಷ್ಟು ದೂರದಲ್ಲಿದೆ;

ಈ ಕಡೆಯೊಳ್ ಈ ಹೊಲದೊಳ್ ಈ ಮರದ ಕೆಲದ ಹುತ್ತಿನ ಹುಲ್ಲ ಕೊಯ್ಯೆ ಕೈಯ ನೂಕಿ, ಫಣಿ ಅಗಿಯೆ ಕೆಡೆದನ್=ಆ ಹುಡುಗನು ಒಂದು ದಿಕ್ಕಿನ ಕಡೆಗೆ ಕಯ್ಯನ್ನು ತೋರಿಸುತ್ತ "ಈ ಕಡೆಯಲ್ಲಿ ಒಂದು ಹೊಲದಲ್ಲಿ ಒಂದು ಮರದ ಪಕ್ಕದಲ್ಲಿದ್ದ ಹುತ್ತದ ಮೇಲೆ ಬೆಳೆದಿದ್ದ ಹುಲ್ಲನ್ನು ಕೊಯ್ದಾಗ, ಅವನ ಕಯ್ಯನ್ನು ತಳ್ಳಿ ಹಾವು ಕಚ್ಚಲು ಸತ್ತುಬಿದ್ದನು; **ದೂರವಲ್ಲಲ್ಲ ಬೇಕಾದಡೆ ಈಗ ಹೋಗು**=ಇಲ್ಲಿಂದ ಬಹಳ ದೂರವೇನಲ್ಲ. ಬೇಕಾದರೆ ಈಗಲೇ ಹೋಗು;

ಕೇಳ್, ಅಲ್ಲದಿರ್ದಡೆ ಬಳಿಕ ಅನೇಕ ಭಲ್ಲುಕ, ಜಂಬುಕಮ್, ಘೂಕ, ವೃಕಗಳ್ ಎಳೆಯದೆ ಬಿಡವು ಎಂದನು=ಕೇಳು, ರಾತ್ರಿಯಾಗಿದೆಯೆಂದು ಹಿಂಜರಿದು ನೀನು ಈಗಲೇ ಹೋಗದಿದ್ದರೆ ಕಾಡಿನಲ್ಲಿರುವ ನಾನಾ ಬಗೆಯ ಪ್ರಾಣಿಗಳಾದ ಕರಡಿ, ನರಿ, ಗೂಬೆ, ತೋಳಗಳು ಹೆಣವನ್ನು ಎಳೆದುಕೊಂಡುಹೋಗಿ ತಿನ್ನದೆ ಇರುವುದಿಲ್ಲ ಎಂದನು; **ನುಡಿಯಲ್ ಅರಿದು ಎನಿಸಿ**=ತಾಯಿ ಚಂದ್ರಮತಿಯ ಎದೆಯಲ್ಲಿ ಸಂಕಟ ತುಂಬಿ ಬಂದು ಮಾತನಾಡಲಾಗದೆ; **ಮೇರೆಯ ಮೀರುವ ಅಳಲನ್ ಅಳವಡಿಸಿ ಬಂದು**=ಚಂದ್ರಮತಿಯು ಅತಿ ಹೆಚ್ಚಾದ ಸಂಕಟವನ್ನು ಹತ್ತಿಕ್ಕಿಕೊಂಡು ಮನೆಯೊಳಕ್ಕೆ ಬಂದು; **ಒಡೆಯನ ಅಡಿಗಳ ಮೇಲೆ ಕೆಡೆದು ಬಾಯ್ವಿಡುತ**=ಒಡೆಯನ ಪಾದಗಳ ಮೇಲೆ ಬಿದ್ದು ಅಂಗಲಾಚಿ ಬೇಡಿಕೊಳ್ಳುತ್ತ;

ಅರಣ್ಯದೊಳ್ ಎನ್ನ ಮಗನ್ ಉಗ್ರ ಕಾಳೋರಗಮ್ ಕಚ್ಚಿ ಮಡಿದನ್ ಎಂದು ನುಡಿಯೆ=ಕಾಡಿನಲ್ಲಿ ನನ್ನ ಮಗನು ಭಯಂಕರವಾದ ಕರಿಯ ನಾಗರ ಹಾವು ಕಚ್ಚಿ ಮರಣ ಹೊಂದಿದನು ಎಂದು ಹೇಳಲು; **ಲೇಸಾಯ್ತು. ಮಡಿದರೆ ಮಡಿದನ್ ಎಂದು ಕೆಡೆ ನುಡಿಯೆ**=ಮನೆಯೊಡೆಯನಾದ ಬ್ರಾಹ್ಮಣನು "ಒಳ್ಳೆಯದಾಯ್ತು. ಸತ್ತರೆ ಸತ್ತ ಎಂದು ತಾತ್ಸಾರದಿಂದ ಕೆಟ್ಟ ಮಾತನಾಡಲು; **ಬಂಟರನು ಕೊಟ್ಟು... ಅರಿಸಿಸೈ ತಂದೆ**=ಸೇವಕರನ್ನು ಕಳುಹಿಸಿ, ನನ್ನ ಮಗನು ಎಲ್ಲಿದ್ದಾನೆ ಎಂಬುದನ್ನು ಹುಡುಕಿಸು ತಂದೆ ಎಂದು ಚಂದ್ರಮತಿ ಮೊರೆಯಿಡಲು; **ನಡುವಿರುಳು ಬಂಟರುಂಟೇ ನಿದ್ದೆಗೆಯ್ಯಬೇಕು**=ಈ ನಡುರಾತ್ರಿಯಲ್ಲಿ ಬಂಟರು ಎಲ್ಲಿ ದೊರೆಯುತ್ತಾರೆ ನಾನು ನಿದ್ದೆ ಮಾಡಬೇಕು; **ಏಳು ಕಾಡದಿರ್**=ತನ್ನ ಪಾದ ಬಳಿಯಲ್ಲಿದ್ದ ಚಂದ್ರಮತಿಯನ್ನು "ಮೇಲೇಳು ಸುಮ್ಮನೆ ನನ್ನನ್ನು ಪೀಡಿಸಬೇಡ" ಎಂದನು;

ನರಿಗಳ್ ಎಳೆಯದ ಮುನ್ನ ದಹಿಸಬೇಡವೆ ತಂದೆ, ಕರುಣಿಸು=ನರಿಗಳು ಬಾಯಿಹಾಕಿ ಎಳೆದು ತಿನ್ನುವುದಕ್ಕೆ ಮೊದಲು, ಹೆಣವನ್ನು ಸುಡಬೇಕಲ್ಲವೇ ತಂದೆ.

ಕರುಣೆಯನ್ನು ತೋರು; **ದುರ್ಮರಣವಟ್ಟ ಶೂದ್ರನನು ಸಂಸ್ಕರಿಸುವವರ್ ಆವಲ್ಲ ಎಂದು ಎನಲ್ಕೆ**=ಅಕಾಲಿಕವಾಗಿ ಮರಣವನ್ನು ಹೊಂದಿದ ಶೂದ್ರನಿಗೆ ಅಂತ್ಯ ಸಂಸ್ಕಾರವನ್ನು ಮಾಡುವವರು ನಾವಲ್ಲ ಎಂದು ಹೇಳಲು; **ಆನಾದಡಮ್ ಹೋಗಿ ಕಂಡು ಮಗನ ಉರಿಗಿತ್ತು ಬಪ್ಪೆನೇ**=ನಾನಾದರೂ ಹೋಗಿ ನೋಡಿ, ಮಗನ ಹೆಣವನ್ನು ಒಪ್ಪಮಾಡಿ, ಬೆಂಕಿಗೆ ಹಾಕಿ ಬರಲೇ;

ಕೆಲಸಮನ್ ಬಿಟ್ಟು ಹರಿಯದೆ, ಇರ್ದುದನ್ ಎಯ್ದೆ ಗೆಯ್ದು ಹೋಗು ಎನಲು=ಉಳಿದಿರುವ ಮನೆಗೆಲಸವನ್ನು ಬಿಟ್ಟು ಹೋಗದೆ, ಇರುವುದನ್ನು ಚೆನ್ನಾಗಿ ಮಾಡಿ, ಅನಂತರ ಹೋಗು ಎಂದು ಒಪ್ಪಿಗೆಯನ್ನು ನೀಡಲು; **ಚಚ್ಚರಿದಿ ಮಾಡುವ ಕಜ್ಜವೆಲ್ಲವನ್ ಮಾಡಿ**=ಬೇಗಬೇಗನೆ ಮಾಡಬೇಕಾದ ಕೆಲಸವೆಲ್ಲವನ್ನು ಮಾಡಿ ಮುಗಿಸಿ; **ಒಯ್ಯನೆ ಮನೆಯನು ಹೊರವಂಟಳ್**=ಮರುಗಳಿಗೆಯಲ್ಲಿಯೇ ನೇರವಾಗಿ ಮನೆಯಿಂದ ಕಾಡಿನತ್ತ ನಡೆದಳು;

❖

ಪ್ರಸಂಗ–೨೨

ಚಂದ್ರಮತಿಯ ಸಂಕಟ

ದಟ್ಟೈಸಿ ಮಡಲಿರಿವ ಕಾಳದೊಳು ನಡುವಿರುಳು=ದಟ್ಟವಾಗಿ ಹಬ್ಬಿರುವ ಕತ್ತಲೆಯಿಂದ ತುಂಬಿದ ನಡುರಾತ್ರಿಯಲ್ಲಿ ಕಾಡಿನಲ್ಲಿ ಚಂದ್ರಮತಿಯು ಒಬ್ಬಳೇ ನಡೆದು ಬರುತ್ತಿರುವಾಗ; **ನಟ್ಟ ಮುಳ್ಳುಗಳನ್**=ಕಾಲಿಗೆ ಚುಚ್ಚಿಕೊಂಡ ಮುಳ್ಳುಗಳನ್ನು; **ಎಡಹಿದ ಕಲ್ಲ**=ಮುಗ್ಗರಿಸಿ ಬೀಳುವಂತೆ ತಾಕಿದ ಕಲ್ಲುಗಳನ್ನು; **ಹಾಯ್ದ ಮರಮುಟ್ಟನ್**=ಅಡ್ಡಲಾಗಿದ್ದ ಮರಗಿಡಗಳನ್ನು; **ಏರಿದ ದಡನನ್**=ಹತ್ತಿದ ದಿಣ್ಣೆಯನ್ನು; **ಇಳಿದ ಕುಳಿಯಮ್**=ಇಳಿದ ಹಳ್ಳವನ್ನು; **ಬಿದ್ದ ದರಿಗಳಮ್**= ತಿಳಿಯದೆ ಬಿದ್ದ ಕೊಳ್ಳಗಳನ್ನು; **ಹಿಡಿದ ಗಿಡುವ**=ಉಟ್ಟ ಬಟ್ಟೆಯು ಸಿಕ್ಕಿಕೊಂಡ ಮುಳ್ಳಿನ ಗಿಡವನ್ನು; **ಬಿಟ್ಟ ತಲೆಯಮ್**=ಕೂದಲು ಕೆದರಿದ ತಲೆಯನ್ನು; **ಬಿಚ್ಚಿದ ಉಡಿಗೆಯಮ್ ಮರೆದು**=ಮುಳ್ಳಿನ ಕೊಂಬೆರೆಂಬೆಗೆ ಸಿಕ್ಕಿ ಹರಿದು ಹೋಗಿ ಸಡಿಲಗೊಂಡ ಉಡುಗೆಯ ಮೇಲೆ ಪರಿವೆಯೇ ಇಲ್ಲದೆ;

ಗೋಳಿಟ್ಟು ಬಾಯ್ವಿಟ್ಟು ಮೊರೆಯಿಡುತ ನಡೆತಂದು=ಕಗ್ಗತ್ತಲ ರಾತ್ರಿಯಲ್ಲಿ ಕಾಡಿನ ಹಾದಿಯಲ್ಲಿ ಬರುತ್ತಿರುವಾಗ ಉಂಟಾದ ಯಾವೊಂದು ಅಡೆತಡೆ ಗಳನ್ನಾಗಲಿ ಇಲ್ಲವೇ ನೋವನ್ನಾಗಲಿ ಲೆಕ್ಕಿಸದೆ ಚಂದ್ರಮತಿಯು ಪುತ್ರಶೋಕದಿಂದ ಗೋಳಿಡುತ್ತ, ಸಂಕಟದಿಂದ ಬಾಯ್ ಬಾಯ್ ಬಿಡುತ್ತ, ಕಂದನಿಗೆ ಏನೂ ಆಗದಿರಲೆಂದು ದೇವರಲ್ಲಿ ಮೊರೆಯಿಡುತ್ತ ಮುಂದೆ ಮುಂದೆ

ಬಂದಳು; **ಹುಲುವಟ್ಟೆಯೊಳು ಬೆಳೆದ ಹೆಮ್ಮರನ ಮಲಗಿಸಿ ನಿಂದ ಹುಳ್ಳಿಹೊರೆಯಮ್ ಕಂಡಳು**=ಕಾಡಿನ ಕಾಲುದಾರಿಯೊಂದರಲ್ಲಿ ಬೆಳೆದಿದ್ದ ದೊಡ್ಡ ಮರವೊಂದಕ್ಕೆ ಒರಗಿಸಿ ನಿಲ್ಲಿಸಿದ್ದ ಸಣ್ಣ ಕಟ್ಟಿಗೆಗಳ ಹೊರೆಯನ್ನು ನೋಡಿದಳು; **ಈ ಎಡೆಯೊಳ್ ಇನ್ನಿರದೆ ಮಾಣನ್ ಎನುತಮ್ ಬಂದು ತಾಯಿ ಕರೆದಳು**=ಈ ಜಾಗದಲ್ಲಿಯೇ ಲೋಹಿತಾಶ್ವನು ಇದ್ದೇ ಇರುತ್ತಾನೆ ಎಂದು ತನಗೆ ತಾನೆ ಹೇಳಿಕೊಂಡು, ಕಟ್ಟಿಗೆ ಹೊರೆಯ ಬಳಿಗೆ ಬಂದು ಮಗನನ್ನು ಕರೆಯತೊಡಗಿದಳು;

ಮಗನೆ ಮಗನೇ ಹರಿಶ್ಚಂದ್ರ ರಾಯನ ಕುಮಾರ ಪೇಳ್, ಆವ ತಾವು ಒಳಕೊಂಡುದಯ್ಯ=ಮಗನೇ ಹರಿಶ್ಚಂದ್ರ ರಾಜನ ಮಗನೇ ಹೇಳು, ಯಾವ ಜಾಗದಲ್ಲಿ ನೀನು ಸೇರಿಕೊಂಡಿರುವೆ; **ನೀನ್ ಎಲ್ಲಿರ್ದಪೆ ಕಂದಾ**=ನೀನು ಈಗ ಎಲ್ಲಿ ಇದ್ದೀಯೆ ಕಂದಾ; **ಓ ಎಂಬುದೇನು**=ನನ್ನ ಕರೆಗೆ 'ಓ' ಎಂದು ಹೇಳುತ್ತಿರುವುದೇನು; **ಬಾಯ ಬಿಡದೆ ಇತ್ತ ಬಾ ಎಂಬುದೇನು**=ಬಾಯನ್ನು ತೆರೆಯದೆ "ಈ ಕಡೆಗೆ ಬಾ" ಎಂದು ಕರೆಯುತ್ತಿರುವುದೇನು; **ತಂದೇ, ಎನ್ನನ್ ಒಲ್ಲದಡೆ ಸಾಯೆಂಬುದೇನು**=ನನ್ನನ್ನು ಬಯಸದಿದ್ದರೆ "ಸಾಯಿ" ಎಂದು ಹೇಳುತ್ತಿರುವುದೇನು; ೧. ಓ ಎಂಬುದೇನು; ೨. ಬಾಯ ಬಿಡದೆ ಇತ್ತ ಬಾ ಎಂಬುದೇನು; ೩. ತಂದೇ, ಎನ್ನನ್ ಒಲ್ಲದಡೆ ಸಾಯೆಂಬುದೇನು–ಈ ಮೂರು ವಾಕ್ಯಗಳು ಚಂದ್ರಮತಿಯು ಮಗನ ಸಾವಿನ ಸಂಕಟವನ್ನು ತಡೆಯಲಾರದೆ, ದಿಕ್ಕುತೋಚದಂತಾಗಿ ಒಂದೆರಡು ಗಳಿಗೆ ಮನಸ್ಸಿನ ಮೇಲೆ ಹತೋಟಿಯನ್ನು ಕಳೆದುಕೊಂಡು ಪರಸ್ಪರ ಸಂಬಂಧವಿಲ್ಲದ ಮಾತುಗಳನ್ನಾಡುತ್ತಿರುವುದನ್ನು ಸೂಚಿಸುತ್ತಿವೆ;

ಉಸುರದೆ ಇರಲೇಕೆ ತರುಣ ಎಂದು ಹಂಬಲಿಸುತ ಒರಲಿದಳು=ನಾನು ಇಷ್ಟೆಲ್ಲಾ ಕೂಗಿ ಕರೆಯುತ್ತಿದ್ದರೂ ನೀನು ಮಾತನಾಡದೆ ಇರುವುದೇಕೆ ಮಗನೇ ಎಂದು ದೊಡ್ಡ ದನಿಯಲ್ಲಿ ಅರಚುತ್ತ ರೋದಿಸತೊಡಗಿದಳು; **ವಿಷದ ಹೊಗೆಯೊಯ್ದು ಹಸುರಾದ ಮೈ**=ದೇಹದ ನರನಾಡಿಗಳಲ್ಲಿ ಹಾವಿನ ವಿಷ ಹರಡಿಕೊಂಡು ಹಸುರು ಬಣ್ಣವನ್ನು ತಳೆದಿರುವ ದೇಹ; **ಮೀರಿ ನೊರೆ ಒಸರ್ವ ಗಲ್ಲಮ್**=ಬಾಯಿಂದ ಉಕ್ಕಿಬಂದ ನೊರೆಯು ಸುರಿಯುತ್ತಿರುವ ಗಲ್ಲ; **ಕಂದಿದ ಉಗುರ್ಗಳ್**=ಜೀವಕಳೆಯನ್ನು ಕಳೆದುಕೊಂಡ ಉಗುರುಗಳು; **ಅರೆ ತೆರೆದು ಅಗುರ್ವಿಸುವ ಕಣ್**=ಅರ್ಧ ತೆರೆದು ದಿಗಿಲು ಹುಟ್ಟಿಸುವಂತೆ ಕಾಣುವ ಕಣ್ಣುಗಳು; **ಹರಿದು ಹುಲುಹಿಡಿದ ಹರಹಿದ ಕೈಗಳ್**=ಕಿತ್ತಿರುವ ಹುಲ್ಲನ್ನು ಹಿಡಿದುಕೊಂಡು ಮುಂದಕ್ಕೆ ಒಡ್ಡಿರುವ ಕೈಗಳು;

ಉಂಬ ಹೊತ್ತು ಉಣ ಹಡೆಯದೆ ಹಸಿದು ಬೆನ್ಗೆ ಅಡರ್ದ ಬಸುರ್=ಉಣ್ಣುವ

ಸಮಯದಲ್ಲಿ ಉಣಿಸು ತಿನಸು ದೊರೆಯದೆ ಹಸಿದು, ಬೆನ್ನಿಗೆ ಕಚ್ಚಿಕೊಂಡಿರುವ ಹೊಟ್ಟೆ; **ಅಕಟಕಟ ಮಡಿದ ಗೋಣ್**=ಅಯ್ಯಯ್ಯೋ ಜೋತುಬಿದ್ದ ಕೊರಳು; **ಹುತ್ತಿನ ಮೊದಲೊಳು ದೆಸೆಗೆ ಉರುಳಿ**=ಹುತ್ತದ ಬುಡದಲ್ಲಿ ಒಂದು ಕಡೆಗೆ ಉರುಳಿಬಿದ್ದು; **ಹುಡಿಹೊಕ್ಕು ಬರತ ಬಾಯ್ ಬೆರಸಂದು**=ಮಣ್ಣಿನ ದೂಳು ತುಂಬಿಕೊಂಡು ಒಣಗಿದ ಬಾಯಿಯಿಂದ ಕೂಡಿ; **ಬಸವಳಿದ ನಿಜಸುತನ ಹರಿಶ್ಚಂದ್ರನ ಅರಸಿ ಕಂಡಳು**=ಜೀವಕಳೆದುಕೊಂಡಿರುವ ತನ್ನ ಮಗನನ್ನು ಚಂದ್ರಮತಿಯು ನೋಡಿದಳು; **ಕಂಡ ಕಾಣ್ಕೆಯೊಳು**=ಮಗನನ್ನು ನೋಡನೋಡು ತ್ತಿದ್ದಂತೆಯೇ; **ಶಿವಶಿವ... ನಿಂದ ನಿಲವಿನಲಿ ದಿಂಡುಗೆಡೆದಳು**=ಶಿವ ಶಿವ ನಿಂತುಕೊಂಡಿದ್ದ ನೆಲೆಯಿಂದಲೇ ದೊಪ್ ಎಂದು ಕೆಳಕ್ಕೆ ಬಿದ್ದಳು;

ಮೇಲೆ ಹೊರಳಿದಳು=ಮಗನ ದೇಹದ ಮೇಲೆ ಉರುಳಾಡಿದಳು; **ಬಿಗಿಯಪ್ಪಿಕೊಂಡು ಹೊಟ್ಟೆಯನು ಹೊಸೆಹೊಸೆದು**=ಮಗನ ದೇಹವನ್ನು ಬಿಗಿಯಾಗಿ ತಬ್ಬಿಕೊಂಡು, ಹೊಟ್ಟೆಯ ಮೇಲೆ ಕಯ್ಯಿಟ್ಟು ಮತ್ತೆ ಮತ್ತೆ ಸವರುತ್ತ; **ಮೋರೆಯ ಮೇಲೆ ಮೋರೆಯಿಟ್ಟು**=ಅವನ ಮೊಗದ ಮೇಲೆ ತನ್ನ ಮೊಗವನ್ನಿಟ್ಟು; **ಓವದೆ ಒರಲಿ**=ಸಂಕಟವನ್ನು ತಡೆಯಲಾರದೆ ಅರಚುತ್ತ; **ಮುಂಡಾಡಿ ಮುದ್ದುಗೆಯ್ದು**=ಮುತ್ತಿಟ್ಟು ಮುದ್ದುಮಾಡಿ; **ಓರಂತೆ ಕರೆದು ಕರೆದು**=ಒಂದೇ ಸಮನೆ ಮಗನ ಹೆಸರನ್ನು ಕರೆಯುತ್ತ; **ಅಂಡಲೆದು ಲಲ್ಲೆಗರೆದು ಅತ್ತತ್ತು ಬಲವಳಿದು ಬೆಂಡಾಗಿ**=ಮಗನ ಸುತ್ತಲೂ ತಿರುಗುತ್ತ ಮತ್ತೆ ಮತ್ತೆ ಮುದ್ದಾಡುತ್ತ ಅತ್ತು ಅತ್ತು ದೇಹದ ಬಲವು ಉಡುಗಿ ನಿತ್ರಾಣಗೊಂಡು; **ಜೀವವು ಇಕ್ಕೆ ಎಂಬ ಆಸೆಯಿಮ್**= ಲೋಹಿತಾಶ್ವನು ಜೀವಂತವಾಗಿರಬಹುದೆಂಬ ಆಸೆಯಿಂದ;

ಲಲನೆ ತೇಂಕು ತಾಣಂಗಳಮ್ ಬಗೆದಳು=ಚಂದ್ರಮತಿಯು ಲೋಹಿತಾಶ್ವನ ಮಯ್ಯಲ್ಲಿ ಉಸಿರಾಟದ ಕ್ರಿಯೆಯನ್ನು ಸೂಚಿಸುವ ಅಂಗಾಂಗಗಳನ್ನು ಗಮನಿಸ ತೊಡಗಿದಳು; **ಮೂಗಿನೊಳ್ ಉಸುರನ್**=ಮೂಗಿನಲ್ಲಿ ಉಸಿರಾಡುವಿಕೆಯನ್ನು; **ಅಳ್ಳೆಯೊಳು ಹೊಯ್ಲನ್**=ಎರಡು ಪಕ್ಕೆಗಳ ಮಿಡಿತವನ್ನು; **ಉಗುರೊಳು ರಜವನ್**=ಉಗುರಿನಲ್ಲಿ ಮೆತ್ತಿಕೊಂಡಿರುವ ಮಣ್ಣಿನ ಕಣಗಳನ್ನು; **ಎದೆಯೊಳ್ ಅಲ್ಲಾಟಮಮ್**=ಎದೆಯ ಬಡಿತದ ಏರಿಳಿತವನ್ನು; **ಕೈಯ ಮೊದಲೊಳು ಮಿಡುಕನ್**=ಕಯ್ಯಿನ ಮಣಿಕಟ್ಟಿನ ಎಡೆಯಲ್ಲಿ ರಕ್ತ ಸಂಚಾರದ ನಾಡಿಯ ಮಿಡಿತವನ್ನು; **ಅಂಗದೊಳು ನೋವನ್**=ದೇಹದಲ್ಲಿ ಉಂಟಾಗಿರುವ ಗಾಯಗಳ ನೋವನ್ನು; **ಅಕ್ಷಿಯೊಳು ಬೆಳ್ಪಮ್**=ಕಣ್ಣಿನಲ್ಲಿ ಹೊಳಪನ್ನು; **ಭಾಳದೊಳು ಬೆಮರನು**=ಹಣೆಯಲ್ಲಿ ಬೆವರನ್ನು; **ಲಲಿತ ಕಂಠದೊಳ್ ಉಲುಕನ್**= ಕೋಮಲವಾದ ಗಂಟಲಿನ ಭಾಗದ ಉಬ್ಬುತಗ್ಗಿನ ಅಲುಗುವಿಕೆಯನ್ನು;

ಅಂಘ್ರಿಯೊಳು ಬಿಸಿಯನ್=ಪಾದದಲ್ಲಿನ ಬಿಸಿಯನ್ನು; **ಅಂಗುಳಿಗಳೊಳು ಚಿಟುಕನ್**=ಕಯ್ ಬೆರಳುಗಳ ನಟಿಕೆಯನ್ನು; **ಉಂಗುಟದೊಳ್ ಅರುಣಾಂಬುವಮ್**=ಕಯ್ ಮತ್ತು ಕಾಲಿನ ಹೆಬ್ಬೆರಳುಗಳಲ್ಲಿ ರಕ್ತದ ಕೆಂಪನ್ನು; **ನಾಲಗೆಯೊಳ್ ಇಂಪನ್**=ನಾಲಗೆಯಲ್ಲಿ ರುಚಿಯನ್ನು; **ರೋಮದಲಿ ಬಲ್ಪನ್**=ರೋಮಗಳ ಬಿಗುಹನ್ನು; **ಸಲೆ ಆರಯ್ದು ಕಾಣದೆ ನೊಂದಳು**=ಒಂದೇ ಸಮನೆ ನೋಡಿ ತಡಕಾಡಿ, ಯಾವೊಂದು ಅಂಗದಲ್ಲಿಯೂ ಜೀವಕಳೆಯನ್ನು ಕಾಣದೆ ತೀವ್ರವಾದ ಸಂಕಟಕ್ಕೆ ಒಳಗಾದಳು; **ಹಡೆದ ಒಡಲು ಹುಡಿಯಾಯ್ತು ಮಗನೆ**=ಹೆತ್ತ ಒಡಲು ಮಣ್ಣಾಯಿತು ಮಗನೆ; **ಮಗನು ಉಂಟೆಂದು ಕಡಗಿ ಹೆಚ್ಚುವ ಮನಮ್ ಹೊತ್ತಿ ಹೊಗೆಯಿತ್ತು**=ಮಗನು ಇದ್ದಾನೆಂದು ಉತ್ಸಾಹದಿಂದ ಬೀಗುತ್ತಿದ್ದ ಮನದಲ್ಲಿ ಸಂಕಟದ ಬೆಂಕಿ ಹೊತ್ತಿಕೊಂಡು ಹೊಗೆಯಾಡುತ್ತಿದೆ; **ಬಿಡದೆ ಅಡರಿ ನಿಟ್ಟಿಸಿ ನಲಿವ ದಿಟ್ಟಿ ಕೆಟ್ಟುವು**=ಸದಾಕಾಲ ನಿನ್ನತ್ತಲೇ ನೋಡುತ್ತ ಹಿಗ್ಗಿನಿಂದ ನಲಿಯುತ್ತಿದ್ದ ನನ್ನ ಕಣ್ಣುಗಳು ಕುರುಡಾದವು;

ಸೋಂಕಿ ಪುಳಕಿಸುವ ಕರಣಂಗಳು ಕಡಿವಡೆದುವು=ನಿನ್ನನ್ನು ತಬ್ಬಿಕೊಂಡು ರೋಮಾಂಚನಗೊಳ್ಳುತ್ತಿದ್ದ ಪಂಚೇಂದ್ರಿಯಗಳು ತುಂಡುತುಂಡಾದವು/ ಪಂಚೇಂದ್ರಿಯಗಳ ಶಕ್ತಿಯೇ ಉಡುಗಿಹೋಯಿತು : **ಒಸೆದು ಹೆಸರ್ಗೊಳುತಿಪ್ಪ ನಾಲಗೆಯ ಕುಡಿ ಮುರುಟಿತು**=ಒಲವು ನಲಿವಿನಿಂದ ನಿನ್ನ ಹೆಸರನ್ನು ಕರೆಯುತ್ತಿದ್ದ ನಾಲಗೆಯು ಕುಡಿಯು ಸೊಟ್ಟಗಾಯಿತು; **ಎಲೆ ಕಂದ, ಒಮ್ಮೊಮ್ಮೆ ನುಡಿಯನ್ ಆಲಿಪ ಕಿವಿಯ ಹಡಿಗೆತ್ತುದು ಎಂದೆನುತ್ತ ಇಂದುಮುಖಿ ಮರುಗಿ ಬಾಯ್ವಿಟ್ಟಳಂದು**=ಎಲೆ ಕಂದ, ಆಗಾಗ್ಗೆ ನೀನಾಡುವ ಮಾತುಗಳನ್ನು ಪ್ರೀತಿಯಿಂದ ಕೇಳುತ್ತಿದ್ದ ಕಿವಿಯ ದ್ವಾರವು ಮುಚ್ಚಿಹೋಯಿತು ಎಂದು ಚಂದ್ರಮತಿಯು ಕೊರಗುತ್ತ ಸಂಕಟದಿಂದ ರೋದಿಸುತ್ತಿದ್ದಳು; **ಸಿರಿ ಹೋದ ಮರುಕವನು**=ರಾಜ್ಯದ ಒಡೆತನ ಮತ್ತು ಸಂಪತ್ತನ್ನು ಕಳೆದುಕೊಂಡ ದುಗುಡವನ್ನು; **ನೆಲೆಗೆಟ್ಟ ಚಿಂತೆಯನು**=ಹುಟ್ಟಿ ಬೆಳೆದು ಬಾಳುತ್ತಿದ್ದ ತಾಯಿನಾಡನ್ನು ತೊರೆದು ಬಂದ ಚಿಂತೆಯನ್ನು;

ಪರದೇಶಮಮ್ ಹೊಕ್ಕ ನಾಚಿಕೆಯನ್=ಮತ್ತೊಂದು ನಾಡಿಗೆ ಗತಿಗೇಡಿಗಳಾಗಿ ಬಂದ ನಾಚಿಕೆಯನ್ನು; **ಅರಿಯದ ಅನ್ಯರ ಮನೆಯ ತೊತ್ತಾದ ಭಂಗವನು**=ಯಾರೆಂದು ಗೊತ್ತಿಲ್ಲದ ಬೇರೆಯವರ ಮನೆಯ ದಾಸರಾದ ಅಪಮಾನವನ್ನು; **ನಿಮ್ಮಯ್ಯಗೆ ಅಜ್ಞಾತವಾದ ಅಳಲನು**=ನಿಮ್ಮ ಅಪ್ಪನು ಯಾವ ಕಡೆಯಲ್ಲಿದ್ದಾನೆಯೋ... ಏನಾಗಿರುವನೋ ಎಂಬುದನ್ನು ತಿಳಿಯದ ಸಂಕಟವನ್ನು; **ನೆರೆದು ಮನೆಯವರ್ ಎಯ್ದೆ ಕರಕರಿಪ ದುಃಖವನು**=ಒಡೆಯನ ಮನೆಯವರೆಲ್ಲರೂ ಜತೆಗೂಡಿ ಕೊಡುತ್ತಿದ್ದ ಕ್ರೂರವಾದ ಹಿಂಸೆಯ ಸಂಕಟವನ್ನು;

ತರಳ, ನಿನ್ನನ್ ನೋಡಿ ಮರೆದು ಪರಿಣಾಮವಮ್ ಧರಿಸುತಿಪ್ಪ ಎನ್ನ ಗೋಣಮ್ ಕೊಯ್ದೆ=ಮಗನೇ, ನಿನ್ನ ಮೊಗವನ್ನು ನೋಡುತ್ತ, ಎಲ್ಲ ಬಗೆಯ ಸಂಕಟವನ್ನು ಮರೆತು, ತಾಳ್ಮೆಯಿಂದ ನೋವೆಲ್ಲವನ್ನೂ ಉಣ್ಣುತ್ತಿದ್ದ ನನ್ನ ಕೊರಳನ್ನು ಕತ್ತರಿಸಿದೆ;

ಇನ್ನಾರ ನೋಡಿ ಮರೆದಪೆನ್=ಇನ್ನು ಯಾರನ್ನು ನೋಡಿ ನನ್ನ ಸಂಕಟವನ್ನೆಲ್ಲಾ ಮರೆಯಲಿ; **ಹರಿಶ್ಚಂದ್ರ ಭೂಪತಿ ಅತಿಲಜ್ಜೆಗೆಟ್ಟು, ಅನ್ಯರ ಆಳಾಗಿ ಹಸಿವು ನಿದ್ದೆಯಮ್ ತೊರೆದು ಧಾವತಿಗೊಂಡು ದುಡಿದು ಧನವನ್ ಆರ್ಜಿಸಿ ನಮ್ಮ ಬಿಡಿಸುವ ಆರ್ತದ ಮೋಹದಿಮ್ ಬಂದು ಸುತನ ಕರೆಯೆಂದಡೆ ಏನೆಂಬೆನ್**= ಹರಿಶ್ಚಂದ್ರ ಮಹಾರಾಜನು ನಾಚಿಕೆಯನ್ನು ಬಿಟ್ಟು ಕಂಡವರ ಮನೆಯ ಆಳಾಗಿ, ಹಸಿವು ನಿದ್ರೆಯನ್ನು ಲೆಕ್ಕಿಸದೆ ಪರಿಶ್ರಮದಿಂದ ದುಡಿಮೆಯನ್ನು ಮಾಡಿ, ಹಣವನ್ನು ಸಂಪಾದಿಸಿ, ನಮ್ಮನ್ನು ದಾಸ್ಯದಿಂದ ಬಿಡಿಸುವ ಬಯಕೆಯ ಮೋಹದಿಂದ ಬಂದು, ಮಗನನ್ನು ಕರೆ ಎಂದಡೆ ಏನೆಂದು ಹೇಳಲಿ; **ಆವುದ ತೋರಿ ಪತಿಯ ಮರುಕವನು ಮರೆಯಿಸುವೆನ್**=ಯಾವುದನ್ನು ತೋರಿ ಹರಿಶ್ಚಂದ್ರನ ಸಂಕಟವನ್ನು ಹೋಗಲಾಡಿಸುವೆನು;

ಎನ್ನ ಕಂದ ಉಗ್ರ ಅಹಿಗೆ ಆಹುತಿಯಾದನ್ ಎಂದು ಪೇಳ್ವೆನೆ ಎಂದು ಇಂದುಮುಖಿ ಬಾಯ್ಬಿಟ್ಟಳು=ನನ್ನ ಮಗ ಭಯಂಕರವಾದ ಹಾವು ಕಚ್ಚಿ ಸಾವನ್ನಪ್ಪಿದನು ಎಂದ ಹೇಳಲೇ ಎಂದು ಚಂದ್ರಮತಿಯು ಸಂಕಟದಿಂದ ಪರಿತಪಿಸಿದಳು; **ಏವೆನ್ ಏವೆನ್ ಎಲೆ ಮಗನೇ ಮಗನೇ**=ಈಗ ನಾನೇನು ಮಾಡಲಿ ಏನು ಮಾಡಲಿ ಎಲೆ ಮಗನೇ ಮಗನೇ; **ಸಾವೇಕಾಯಿತ್ತು ಎಲೆ ಚೆನ್ನಿಗನೇ**=ನಿನಗೆ ಸಾವು ಏಕೆ ಬಂದಿತು ಎಲೆ ಸುಂದರಾಂಗನೇ; **ಇರಿದೆಯಲಾ ಎನ್ನನು ಸುಕುಮಾರ**=ನನ್ನನ್ನು ಕೊಂದುಬಿಟ್ಟೆಯಲ್ಲಾ ಸುಕುಮಾರ; **ಕೊರೆದೆಯಲಾ ಕೊರಳನು ಜಿತಮಾರಾ**=ಕೊರಳನ್ನು ಕತ್ತರಿಸಿದೆಯಲ್ಲಾ ಶಿವನೇ; **ಎತ್ತಣ ಬರಸಿಡಿಲ್ ಎರಗಿತೊ ನಿನ್ನ**=ನಿನ್ನ ಮೇಲೆ ಯಾವ ಕಡೆಯಿಂದ ಬಂದ ಬರಸಿಡಿಲು ಬಡಿಯಿತೊ; **ಹುತ್ತಿನ ಹತ್ತಿರೆ ಒರಗಿದೆ ಚೆನ್ನ**=ಹುತ್ತದ ಹತ್ತಿರದಲ್ಲಿ ಮಲಗಿರುವೆ ಚೆನ್ನ;

ಹಾವು ಹಿಡಿಯೆ ಹಾ ಎಂದು ಒರಲಿದೆಯಾ=ಹಾವು ಕಚ್ಚಿದಾಗ 'ಹಾ' ಎಂದು ಕೂಗಿಕೊಂಡೆಯಾ; **ಸಾವಾಗ ಅವ್ವಾ ಎಂದ ಅಳಲಿದೆಯಾ**=ಸಾಯುವ ಗಳಿಗೆಯಲ್ಲಿ "ಅವ್ವಾ" ಎಂದು ಅರಚುತ್ತ ಸಂಕಟಪಟ್ಟೆಯಾ; **ರನ್ನದ ಕನ್ನಡಿ ಸಿಡಿದುದೊ ದೇವಾ**= ನನ್ನ ಪಾಲಿನ ರತ್ನದ ಕನ್ನಡಿ ಒಡೆದು ಚೂರುಚೂರಾಯಿತೊ ದೇವಾ; **ಹೊನ್ನ ಕಳಸ ಕಡೆದು ಒಡೆದುದೊ ದೇವಾ**=ಬಂಗಾರದ ಕಳಸ ಕಳಚಿಕೊಂಡು ಮುರಿದುಹೋಯಿತೊ ದೇವಾ; **ಎನ್ನ ಕಡವರಮ್ ಸೂರೆಹೋಯಿತೋ**=ನನ್ನ ಬಳಿಯಿದ್ದ ಸಿರಿಸಂಪದವೆಲ್ಲಾ ಲೂಟಿಯಾಯಿತೋ;

ಹೊನ್ನ ಪ್ರತಿಮೆಯ ಅಸು ಹಾರಿಹೋಯಿತೋ=ಚಿನ್ನದ ಪ್ರತಿಮೆಯ ತೇಜಸ್ಸು ಇನ್ನಿಲ್ಲವಾಯಿತೋ; **ಇನವಂಶದ ಲತೆ ಕುಡಿ ಮುರುಟಿತ್ತೋ**=ಸೂರ್ಯವಂಶದ ಬಳ್ಳಿಯ ಚಿಗುರು ಬಾಡಿಹೋಯಿತಲ್ಲಾ; **ಜನಪನಿಟ್ಟ ಸುರತರು ಮುರಿಯಿತ್ತೋ**= ರಾಜನು ನೆಟ್ಟು ಬೆಳೆಸಿದ ಕಲ್ಪವೃಕ್ಷ ಮುರಿದುಬಿದ್ದಿತ್ತೋ; **ಕಾಲ, ಕರುಣವಿಲ್ಲದೆ ನೀನ್ ಒಯ್ದೆ**=ಯಮದೇವನೇ, ಕರುಣೆಯಿಲ್ಲದೆ ನೀನು ನನ್ನ ಮಗನನ್ನು ಸಾವಿನ ಮನೆಗೆ ಸಾಗಿಸಿದೆ; **ಬಾಲನನ್ ಅಗಲಿಸಿ ಕೊರಳಮ್ ಕೊಯ್ದೆ**=ಮಗನನ್ನು ನಮ್ಮಿಂದ ದೂರ ಮಾಡಿ ನಮ್ಮ ಕೊರಳನ್ನು ಕತ್ತರಿಸಿದೆ;

ಆರ ಸಿರಿಯನ್ ಎಳೆತಂದನೊ ಮುನ್ನ=ಈ ಮೊದಲು ನನ್ನ ಹಿಂದಿನ ಹುಟ್ಟು ಗಳಲ್ಲಿ ಯಾರ ಸಂಪತ್ತನ್ನು ಅಪಹರಿಸಿದ್ದೆನೊ; **ಆರ್ ಅಳಲಲು ಸೆಳೆಕೊಂಡೆನೊ ಹೊನ್ನ**=ಯಾರನ್ನು ಸಂಕಟಕ್ಕೆ ಗುರಿಮಾಡಿ ಅವರ ಹೊನ್ನನ್ನು ಕಿತ್ತುಕೊಂಡಿದ್ದೆನೊ; **ಅಲ್ಲದಡೆ ಈ ಅಳಲಪ್ಪುದೆ ನನಗೆ**=ಅಂತಹ ಪಾಪಗಳನ್ನು ಹಿಂದಿನ ಜನ್ಮಗಳಲ್ಲಿ ನಾನು ಮಾಡದಿದ್ದರೆ, ಈ ಜನ್ಮದಲ್ಲಿ ಇಂತಹ ಸಂಕಟ ನನಗೆ ಬರುತ್ತಿತ್ತೆ; **ಇಲ್ಲಿ ವೃಥಾ ಸಾವಪ್ಪುದೆ ನಿನಗೆ**=ಇಲ್ಲಿ ನಿನಗೆ ವಿನಾಕಾರಣ ಇಂತಹ ಸಾವು ಬರುತ್ತಿತ್ತೆ. ಅಂದರೆ ಹೆತ್ತ ತಾಯಿಯಾದ ನನ್ನ ಪಾಪದ ಕಾರಣದಿಂದಾಗಿ ನಿನಗೆ ಅಕಾಲಿಕ ಸಾವು ಬಂದಿದೆ ಎಂದು, ಲೋಹಿತಾಶ್ವನ ಮರಣಕ್ಕೆ ತಾನೇ ಹೊಣೆಗಾರಳು ಎನ್ನುವಂತೆ ಚಂದ್ರಮತಿಯು ಸಂಕಟಪಡುತ್ತಿದ್ದಾಳೆ;

ಹೆತ್ತ ಹೊಟ್ಟೆ ಉರಿಯುತ್ತಿದೆ ಮಗನೆ=ಹೆತ್ತ ತಾಯಿಯ ಹೊಟ್ಟೆಯು ಸಂಕಟದ ಬೆಂಕಿಯಿಂದ ಉರಿಯುತ್ತಿದೆ ಮಗನೆ; **ಎತ್ತಿದ ತೋಳನು ಕೆತ್ತಿದೆ ಮಗನೆ**=ನಿನ್ನನ್ನು ಸಾಕಿ ಸಲಹಿ ಎತ್ತಿ ಆಡಿಸಿದ ತಾಯಿಯ ತೋಳನ್ನು ಕತ್ತರಿಸಿದೆ ಮಗನೆ; **ಹಾಡುವ ಬಾಯಲಿ ಮಣ್ಣನು ಹೊಯ್ದೆ**=ಜೋಗುಳವನ್ನು ಹಾಡುವ ಬಾಯಲ್ಲಿ ಮಣ್ಣನ್ನು ಹಾಕಿದೆ; **ನೋಡುವ ಕಣ್ಣಲಿ ಸುಣ್ಣವ ಹೊಯ್ದೆ**=ನಿನ್ನನ್ನು ನೋಡಿ ಹಿಗ್ಗುವ ಕಣ್ಣುಗಳಿಗೆ ಸುಣ್ಣವನ್ನು ಸುರಿದೆ; **ಪಾಪಿಯೆನ್ನ ನೀನೊಮ್ಮೆಗೆ ನೋಡಾ**= ಪಾಪಿಯಾದ ನನ್ನನ್ನು ನೀನು ಒಮ್ಮೆ ನೋಡಾ; **ಕೋಪವನ್ ಉಳಿದು ಒಯ್ಯನೆ ಮಾತಾಡಾ**=ನನ್ನ ಮೇಲಣ ಕೋಪವನ್ನು ಮರೆತು ಕೂಡಲೇ ಮಾತಾಡು; **ನುಡಿದಡೆ ಪಾಪವೆ ಹೆತ್ತವರೊಡನೆ**=ಹೆತ್ತ ತಾಯಿತಂದೆಯ ಜತೆಯಲ್ಲಿ ಮಾತನಾಡಿದರೆ ಪಾಪ ಬರುವುದೆ;

ಕಡುಮುಳಿಸೇ ಮಗನೇ ಎನ್ನೊಡನೆ=ಮಗನೇ, ನನ್ನೊಡನೆ ತುಂಬಾ ಕೋಪವೇ ನಿನಗೆ; **ಬಾರೈ ಬಹಳ ಸಿರಿಯ ಸಿಂಗಾರ**=ಬಹು ದೊಡ್ಡ ಸಿರಿಯ ಚೆಲುವನೇ ನನ್ನ ಬಳಿಗೆ ಬಾ; **ಬಾರೈ ಸುಜನಜನಕ್ಕೆ ಆಧಾರ**=ಒಳ್ಳೆಯ ಜನಕ್ಕೆ ಆಶ್ರಯವನ್ನು ನೀಡಿದವನೆ ನನ್ನ ಬಳಿಗೆ ಬಾ; **ಏಳ್, ಎನ್ನ ಆನಂದಾಮೃತ ಶರಧಿ**=

ನನ್ನ ಪಾಲಿನ ಆನಂದದ ಅಮೃತ ಸಾಗರವೇ ಮೇಲೇಳು; **ಏಳ್, ಅಖಿಳ ಗುಣಾರ್ಣವ ಕಳಾನಿಧಿ**=ಸಮಸ್ತ ಸದ್ಗುಣಗಳ ಸಾಗರದಂತಿರುವ ಕಲಾವಂತನೇ ಮೇಲೇಳು; **ಹಲ್ಲಣಿಸಿದ ವಾರುವವಿದೆ ಮಗನೆ**=ರಣರಂಗದಲ್ಲಿ ಹಗೆಗಳನ್ನು ಸದೆಬಡಿಯಲು ಜೀನು ಕಡಿವಾಣಗಳನ್ನು ತೊಡಿಸಿ ಸಿದ್ಧವಾಗಿರುವ ಕುದುರೆಯಿದೆ ಮಗನೆ; **ಮಲ್ಲಾಮಲ್ಲಿಯ ರಥವಿದೆ ಮಗನೆ**=ಹಗೆಗಳನ್ನು ಎದುರಿಸಿ ಹೋರಾಡಲು ತೇರು ಸಿದ್ಧವಾಗಿದೆ ಮಗನೆ;

ಗಜಘಟೆಗಳು ಹಲ್ಲಣಿಸಿವೆ ಮಗನೆ=ಆನೆಗಳ ಗುಂಪು ಸಜ್ಜಾಗಿವೆ ಮಗನೆ; **ನಿಜಪರಿವಾರಕೆ ಬೆಸಗೊಡು ಮಗನೆ**=ನಿನ್ನ ಸೇನೆಯ ಚತುರಂಗ ಬಲಕ್ಕೆ ಆಜ್ಞೆಯನ್ನು ಮಾಡು ಮಗನೆ; **ನೆತ್ತರ ಕಡಲೊಳಗೆ ಇಭಕುಲ ಬೀಳೆ**=ಹಗೆಗಳ ಆನೆಗಳ ಸೇನೆಯು ರಕ್ತದ ಕಡಲಿನಲ್ಲಿ ಬೀಳಲು; **ಮೊತ್ತದ ತುರಂಗಗಳು ಬೆಂಡೇಳೆ**= ಹಗೆಗಳ ಕುದುರೆಗಳ ಸೇನೆಯು ನಿತ್ರಾಣಗೊಂಡು ಕುಸಿದು ಬೀಳಲು; **ಮಣಿಮಕುಟದ ಭಟರ ಅಟ್ಟೆಗಳಾಡೆ**=ರತ್ನದ ಕಿರೀಟವನ್ನು ತೊಟ್ಟಿದ್ದ ಹಗೆಯ ಕಾದಾಳುಗಳ ರುಂಡವಿಲ್ಲದ ಮುಂಡಗಳು ರಣರಂಗದಲ್ಲಿ ಚೆಲ್ಲಾಡಲು; **ಮಣಿದು ಭೂತಸಂಕುಳ ಕುಣಿದಾಡೆ**=ರಣರಂಗದಲ್ಲಿ ಮಡಿದ ಕಾದಾಳುಗಳ ರಕ್ತ ಮಾಂಸ ಮೂಳೆಗಳನ್ನು ಹೊಟ್ಟೆಬಿರಿಯುವಂತೆ ತಿನ್ನಬಹುದು ಎಂಬ ಹಿಗ್ಗಿನಿಂದ ದೆವ್ವಗಳು ನಿನಗೆ ತಲೆಬಾಗಿ ಕುಣಿದಾಡಲು;

ಮಾರಿ ಮೃತ್ಯುಗಳಿಗೆ ಓಕರೆ ಹುಟ್ಟೆ=ನಿನ್ನ ಪರಾಕ್ರಮದ ಹೋರಾಟದಿಂದ ರಣರಂಗದಲ್ಲಿ ಉಂಟಾಗುತ್ತಿರುವ ದೊಡ್ಡ ಪ್ರಮಾಣದ ಸಾವುನೋವನ್ನು ಅರಗಿಸಿಕೊಳ್ಳಲಾರದೆ ಸಾವಿನ ದೇವತೆಗಳಾದ ಮಾರಿ ಮತ್ತು ಯಮದೇವನೇ ವಾಂತಿ ಮಾಡಿಕೊಳ್ಳುವಂತಾಗಲು; **ಕ್ರೂರ ಜವಂಗೆ ಅತಿಭೀಕರ ಹುಟ್ಟೆ**= ಕ್ರೂರಿಯಾದ ಯಮನಿಗೆ ಅತಿಹೆದರಿಕೆಯು ಉಂಟಾಗಲು; **ತಪನ ಕುಲದ ವಿಜಯಶ್ರೀ ಒಪ್ಪೆ**=ಸೂರ್ಯಕುಲದ ವಿಜಯಲಕ್ಷ್ಮಿಯು ಒಪ್ಪುವಂತೆ; **ರಿಪುಬಲವಮ್ ಕೊಂದು ಅಳಿದಡೆ ತಪ್ಪೆ**=ಈ ರೀತಿ ಹಗೆಯ ಅತಿದೊಡ್ಡ ಚತುರಂಗ ಬಲವನ್ನು ಕೊಂದು, ರಣರಂಗದಲ್ಲಿ ನೀನು ವೀರಮರಣವನ್ನು ಅಪ್ಪಿದರೆ ಅದು ತಪ್ಪಲ್ಲ; **ಧರೆಯನಾಳ್ವ ಸಿರಿಯಮ್ ಕಳೆದು**=ಭೂಮಂಡಲವನ್ನು ಆಳುವ ಸಂಪತ್ತನ್ನು ಕಳೆದುಕೊಂಡು;

ಇಂದು ಉರಗನ ವಿಷದ ಅಗ್ನಿಯೊಳ್ ಉರೆ ಬೆಂದು=ಇಂದು ಹಾವಿನ ವಿಷದ ಬೆಂಕಿಯಲ್ಲಿ ಬಹಳವಾಗಿ ಬೆಂದು; **ಅಡವಿಯೊಳ್ ಈ ಪರಿ ಕೆಡೆವರೆ ವೀರ**= ಕಾಡಿನಲ್ಲಿ ಈ ರೀತಿ ಸತ್ತುಬೀಳುವುದೇ ವೀರ; ಅಂದರೆ ಈ ರೀತಿ ಹಾವು ಕಚ್ಚಿ ಸಾಯುವ ಬದಲು ವೀರಕುಮಾರನಾದ ನೀನು ರಣರಂಗದಲ್ಲಿ ಹೋರಾಡುತ್ತ

ವೀರಮರಣವನ್ನು ಹೊಂದಬೇಕಿತ್ತು; **ಪೊಡವಿಯ ಒಡೆಯನ ಅಗ್ಗದ ಸುಕುಮಾರ**=ಭೂಮಂಡಲದ ಒಡೆಯನಾದ ಹರಿಶ್ಚಂದ್ರನ ಉತ್ತಮನಾದ ಪುತ್ರನೇ; **ಏನ ಮಾಳ್ಪೆ**=ನಾನೇನು ಮಾಡಲಿ; **ನಾ ಮಾಡಿರ್ದುದನು ತಾನ್ ಉಂಬುದು ವಿಧಿ ಮಾಡಿದ ಹದನು**=ಪ್ರತಿಯೊಬ್ಬ ವ್ಯಕ್ತಿಯು ಹಿಂದಿನ ಜನ್ಮಗಳಲ್ಲಿ ತಾನು ಮಾಡಿದ ಪಾಪಪುಣ್ಯಗಳಿಗೆ ತಕ್ಕಂತೆ ಈ ಜನ್ಮದಲ್ಲಿ ಒಳಿತುಕೆಡುಕನ್ನು ಅನುಭವಿಸಬೇಕೆಂಬುದು ವಿಧಿ ಮಾಡಿದ ಕಟ್ಟಲೆ ಎಂದು ಚಂದ್ರಮತಿಯು ತನ್ನನ್ನು ತಾನೇ ಸಮಾಧಾನಪಡಿಸಿಕೊಳ್ಳುತ್ತಿದ್ದಾಳೆ;

ಕರುಣಿಸಿ ಕಾಯ್ವೈ ಗೌರೀರಮಣ=ಕರುಣೆಯನ್ನು ನೀಡಿ ಕಾಪಾಡು ಶಿವನೇ; **ನರಕಿಯ ನೋಡು ಎಲೆ ಅಗಜಾರಮಣ**=ನನ್ನಂತಹ ಪಾಪಿಯತ್ತ ನೋಡು ಎಲೆ ಶಿವನೇ; **ಕರುಣಿಸು ಪಾಪಿಯ ಪಂಪಾಪತಿಯೆ**=ಪಾಪಿಯಾದ ನನ್ನ ಮೇಲೆ ಕರುಣೆಯನ್ನು ತೋರಿಸು ಪಂಪಾಪತಿಯಾದ ವಿರೂಪಾಕ್ಷ ದೇವನೇ; **ಕರುಣಿಸು ಅನಾಥೆಗೆ ಕಾಶೀಪತಿಯೆ**=ಗತಿಗೇಡಿಯಾದ ನನಗೆ ಕರುಣೆಯನ್ನು ತೋರಿಸು ಕಾಶೀಪತಿಯಾದ ವಿಶ್ವನಾಥನೇ; **ಇನ್ನು ಇನಿತರಿಂದ ಮೇಲೆ ಎಮ್ಮ ಒಡೆಯನ್ ಅರಸಿ ಬಂದು ಎನ್ನನ್ ಒಯ್ದಡೆ ಬಳಿಕ ಸುಡಹಡೆಯೆನ್ ಎಂಬುದನು ತನ್ನಲ್ಲಿ ತಾನೆ ತಿಳಿದು ಎದ್ದು**=ನಾನು ಮನೆಯಿಂದ ಬಂದು ಬಹಳ ಹೊತ್ತಾಗಿರುವುದರಿಂದ, ಇನ್ನು ನಮ್ಮ ಒಡೆಯನಾದ ಆ ಬ್ರಾಹ್ಮಣನು ನನ್ನನ್ನು ಹುಡುಕಿಕೊಂಡು ಬಂದು, ನನ್ನನ್ನು ಎಳೆದುಕೊಂಡುಹೋದರೆ, ಅನಂತರ ನನ್ನ ಮಗನ ಹೆಣವನ್ನು ಸುಡಲಾಗುವುದಿಲ್ಲ ಎಂಬ ವಾಸ್ತವವನ್ನು ತನ್ನಲ್ಲಿ ತಾನೇ ತಿಳಿದುಕೊಂಡು ಚಂದ್ರಮತಿಯು ಮೇಲೆದ್ದು;

ಪುತ್ರನ ಶವವ ಹೊತ್ತು ದೆಸೆದೆಸೆಗೆ ತಿರುಗಿ=ಮಗನ ಹೆಣವನ್ನು ಹೊತ್ತುಕೊಂಡು, ಎಲ್ಲ ಕಡೆಗೂ ಸುತ್ತಲೂ ನೋಡಿ; **ಮುನ್ನ ಎಲ್ಲರನ್ ಸುಡುವ ಠಾವು ಆವುದೆಂದು ನೋಳ್ಪನ್ನೆಗಮ್**=ಈ ಮೊದಲು ಸತ್ತವರೆಲ್ಲರನ್ನೂ ಸುಡುವ ಜಾಗ ಯಾವುದೆಂದು ಹುಡುಕುತ್ತಿರುವಾಗ; **ಹಲವು ಕೆಲವು ಉರಿಯ ಬೆಳಗಮ್ ಕಂಡು**= ಒಂದು ಕಡೆಯಲ್ಲಿ ದಗದಗನೆ ಉರಿಯುತ್ತಿರುವ ಬೆಂಕಿಯ ಬೆಳಕಿನ ಹಲವು ಚಿತೆಗಳನ್ನು ನೋಡಿ; **ನನ್ನಿಕಾರನ್ ಕಾವ ಕಾಡತ್ತ ನಡೆವಾಗ ಬಟ್ಟೆಯೊಳ್ ಅದ ಏನ್ ಪೊಗಳ್ವೆನು**=ಸತ್ಯವಂತನಾದ ಹರಿಶ್ಚಂದ್ರನು ಕಾಯುತ್ತಿದ್ದ ಸುಡುಗಾಡಿನತ್ತ ಚಂದ್ರಮತಿಯು ಮಗನ ಹೆಣವನ್ನು ಹೊತ್ತುಕೊಂಡು ಹೋಗುತ್ತಿರುವಾಗ ದಾರಿಯಲ್ಲಿ ಆದುದನ್ನು ಏನೆಂದು ವಿವರಿಸಲಿ ಎಂದು ಕವಿಯು ಉದ್ಗರಿಸುತ್ತಿದ್ದಾನೆ;

❖

ಪ್ರಸಂಗ–೨೩

ಸುಡುಗಾಡಿನಲ್ಲಿ ಹರಿಶ್ಚಂದ್ರ ಮತ್ತು ಚಂದ್ರಮತಿ

ಬೆಂಕಿಯ ಉರಿಯನ್ನು ಕಂಡು ಸುಡುಗಾಡಿನ ಕಡೆ ಚಂದ್ರಮತಿಯು ಲೋಹಿತಾಶ್ವನ ಹೆಣವನ್ನು ಹೊತ್ತುಕೊಂಡು ಬರುತ್ತಿರುವಾಗ ವಿಶ್ವಾಮಿತ್ರನು ಅನೇಕ ಬಗೆಯ ಅಡೆತಡೆಗಳನ್ನು ಒಡ್ಡುತ್ತಾನೆ; ಮುಂಡ=ಮಾನವನ ತಲೆಯಿಲ್ಲದ ದೇಹದ ಭಾಗ; **ಕೆಡೆದ ಮುಂಡದ**=ಬಿದ್ದಿರುವ ಮುಂಡಗಳ; **ಬಿದ್ದ ತಲೆಯ**=ಬಿದ್ದಿರುವ ತಲೆಗಳ; **ಚಲ್ಲಿದ ಕರುಳ**=ನೆಲದ ಮೇಲೆ ಹರಡಿಕೊಂಡು ಬಿದ್ದಿರುವ ಕರುಳಿನ ಉಂಡೆಗಳ; **ಪಡಲಿಟ್ಟ ಕಾಳಿಜದ**=ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಪಿತ್ತಜನಕಾಂಗದ; **ಕೋಳ್ಗೆಸರ ಮಿದುಳ**=ಹಸಿಹಸಿಯಾದ ಕೆಸರಿನಲ್ಲಿ ಬಿದ್ದಿರುವ ಮಿದುಳಿನ; **ಹೊನಲಿಡುವ ರಕುತದ ಕಡಲೊಳ್**=ಹರಿಯುತ್ತಿರುವ ನೆತ್ತರಿನ ಕೋಡಿಯಲ್ಲಿ;

ಅಡಿಯಿಡಲು ಬಾರದು ಎಂಬಂತೆ ವಿಶ್ವಾಮಿತ್ರನು ಅಡವಿಯೊಳಗೆ ಎಯ್ದೆ ನಾನಾ ಭಯಂಕರವ ಸಾಲಿಡಲ್=ವಿಶ್ವಾಮಿತ್ರನು ಚಂದ್ರಮತಿಯು ಬರುತ್ತಿರುವ ಕಾಲು ಹಾದಿಯಲ್ಲಿ ಹೆಜ್ಜೆಯಿಡಲಾಗದಂತೆ ಭಯಂಕರವಾದ ರೀತಿಯಲ್ಲಿ ಮಾನವರ ದೇಹದ ರಕ್ತಮಾಂಸದಿಂದ ಕೂಡಿದ ಭಾಗಗಳನ್ನು ಚಲ್ಲಾಪಿಲ್ಲಿಯಾಗಿ ಹರಡಿಕೊಂಡು ಬಿದ್ದಿರುವಂತೆ ಕೃತಕವಾಗಿ ನಿರ್ಮಿಸಿದ್ದಾನೆ; **ಪುತ್ರಶೋಕಗ್ರಹಾವಿಷ್ಟತೆಯ ಕಡುಪಿನಿಮ್ ಅದನು ಲೆಕ್ಕಿಸದೆ ಬಂದು**=ಪುತ್ರಶೋಕದ ತೀವ್ರತೆಯಲ್ಲಿ ನೊಂದು ಬೇಯುತ್ತಿರುವ ಚಂದ್ರಮತಿಯು ಅದೆಲ್ಲವನ್ನು ಲೆಕ್ಕಿಸದೆ ಮುನ್ನಡೆದು;

ಸುಡುಗಾಡೊಳ್ ತನಯನ ಶವವನು ಇಳುಹಿದಳು=ಹೊತ್ತಿರುವ ಮಗನ ಶವವನ್ನು ಸುಡುಗಾಡಿನಲ್ಲಿ ಒಂದೆಡೆ ಕೆಳಕ್ಕೆ ಇಳಿಸುತ್ತಾಳೆ; **ಗಳಗಳನೆ**=ಕಟ್ಟಿಗೆಯ ತುಂಡುಗಳಿಗೆ ಬೆಂಕಿ ಚೆನ್ನಾಗಿ ಹತ್ತಿಕೊಂಡು ಉರಿಯುವಾಗ ಕೇಳಿಬರುವ ಶಬ್ದ; **ಕೊಳ್ಳಿ**=ಉರಿಯುತ್ತಿರುವ ಕಟ್ಟಿಗೆ; **ಕರಿಯ ಕೊಳ್ಳಿ**=ಅರ್ಧ ಬೆಂದ ನಂತರ ಬೆಂಕಿಯು ಆರಿಹೋಗಿರುವ ಮಸಿಹಿಡಿದ ಕೊಳ್ಳಿ; **ಸಿದಿಗೆ**=ಚಿತೆ;

ಗಳಗಳನೆ ಮುನ್ನ ಬೆಂದು ಉಳಿದಿರ್ದ ಕರಿ ಕೊಳ್ಳಿಗಳನ್ ಎಲ್ಲವಮ್ ಸಿದಿಗೆ ತಂದೊಟ್ಟಿ=ಗಳಗಳನೆ ಮೊದಲು ಬೆಂದು ಉಳಿದಿದ್ದ ಕರಿಯ ಕೊಳ್ಳಿಗಳೆಲ್ಲವನ್ನೂ ಆಯ್ದು ತಂದು, ಚಿತೆಯ ಮೇಲೆ ಜೋಡಿಸಿ; **ಮೇಲೆ ಮಂಗಳಮಯ ಕುಮಾರನನ್ ಪಟ್ಟಿರಿಸಿ**=ಚಿತೆಯ ಮೇಲೆ ಮಂಗಳಕರನಾದ ಕುಮಾರನನ್ನು ಮಲಗಿಸಿ; **ಉರಿವ ಅಗ್ನಿಯಮ್ ಪಿಡಿದು ಕೆಲದೊಳ್ ನಿಂದು**=ಉರಿಯುತ್ತಿರುವ ಕೊಳ್ಳಿಯೊಂದನ್ನು ಹಿಡಿದುಕೊಂಡು ಚಿತೆಯ ಪಕ್ಕದಲ್ಲಿ ನಿಂತು; **ಹುಟ್ಟಿದಲ್ಲಿ ಹುಟ್ಟು... ಬೆಳೆದಲ್ಲಿ ಬೆಳೆ ಎಂದು ನುಡಿದು**=ಈ ಜನ್ಮದಲ್ಲಿ ಯಾವ ಸೂರ್ಯವಂಶದ ಮನೆತನದಲ್ಲಿ ಹುಟ್ಟಿದ್ದೆಯೋ ಅದೇ ಮನೆತನದಲ್ಲಿ ಮತ್ತೆ ಹುಟ್ಟಿ ಬಾ... ಯಾವ ಅಯೋಧ್ಯಾ ನಗರದ ಅರಮನೆಯಲ್ಲಿ ರಾಜಕುವರನಾಗಿ ಬೆಳೆದೆಯೋ ಅಲ್ಲಿಯೇ ಬೆಳೆದು ದೊಡ್ಡವನಾಗು ಎಂದು ನುಡಿದು; **ಇಳುಹಲ್ ಅನುಗೆಯ್ದು**=ಚಿತೆಗೆ ಬೆಂಕಿ ಇಡಲು ಸಿದ್ಧಳಾಗಿ; **ಇಳುಹಲಾರದೆ ಅಳವಳಿದು ಬಾಯಳಿದು ಮೊರೆಯಿಟ್ಟಡೆ**= ಕೊಳ್ಳಿಯಿಡಲಾರದೆ ನಿತ್ರಾಣಗೊಂಡು, ಗೋಳಾಡುತ್ತ, ಮಗನ ಹೆಸರನ್ನು ಹಿಡಿದು ಕೂಗಿಕೊಳ್ಳುತ್ತಿರಲು;

ಭೂಪನು ಆ ದನಿ ಕೇಳ್ದು ನಿದ್ರೆ ತಿಳಿದೆದ್ದು ಬಂದನು=ಸುಡುಗಾಡಿನಲ್ಲಿ ಕಾವಲುಗಾರನಾಗಿದ್ದ ಹರಿಶ್ಚಂದ್ರನು ಆ ಗೋಳಿನ ದನಿಯನ್ನು ಕೇಳಿ, ಎಚ್ಚರಗೊಂಡು ಚಿತೆಯ ಬಳಿಗೆ ಬಂದನು; **ನಟ್ಟಿರುಳು ಸುಡುಗಾಡೊಳ್ ಒಬ್ಬಳ್ ಓರಂತೆ ಬಾಯ್ವಿಟ್ಟು ಹಲುಬುವ ವೀರನಾರಿ ಆವಳೊ**=ಈ ನಡುರಾತ್ರಿಯಲ್ಲಿ ಸುಡುಗಾಡಿನಲ್ಲಿ ಒಬ್ಬಳೇ ಒಂದೇ ಸಮನೆ ಗೋಳಾಡುತ್ತ ಸಂಕಟಪಡುತ್ತಿರುವ ದಿಟ್ಟೆಯಾದ ಹೆಂಗಸು ಯಾರಿರಬಹುದು; **ಮೀರಿ ಸುಟ್ಟೆಯಾದಡೆ ನಿನಗೆ ವೀರಬಾಹುಕನಾಣೆ**=ಸುಡುಗಾಡಿನ ಕಟ್ಟಲೆಯನ್ನು ಲೆಕ್ಕಿಸಿದೆ ಸುಟ್ಟೆಯಾದಡೆ ನಿನಗೆ ವೀರಬಾಹುಕನ ಆಣೆ/ವೀರಬಾಹುಕನ ಆಜ್ಞೆಯಂತೆ ದಂಡನೆಯನ್ನು ನೀಡಲಾಗುತ್ತದೆ;

ಕದ್ದು ಸುಡಬಂದೆ ನಿನ್ನ ನಿಟ್ಟೆಲುವ ಮುರಿವೆನ್ ಎಂದು ಭೂಪನು ಉರವಣಿಸಿ ಜರೆಯುತ್ತ ದಟ್ಟಿಸುತ ಬಂದು=ಕದ್ದು ಸುಡಲು ಬಂದಿರುವೆಯಲ್ಲಾ ನಿನ್ನ ಬೆನ್ನುಮೂಳೆಯನ್ನು ಮುರಿಯುತ್ತೇನೆ ಎಂದು ಹರಿಶ್ಚಂದ್ರನು ಅಬ್ಬರಿಸಿ ನಿಂದಿಸುತ್ತ

ಗದರಿಸುತ್ತ ಬಂದು; **ಹಿಡಿದಿರ್ದ ಕಿಚ್ಚಮ್ ಕೆದರಿ**=ಆಕೆಯ ಕಯ್ಯಲ್ಲಿದ್ದ ಕೊಳ್ಳಿಯನ್ನು ಕಿತ್ತುಕೊಂಡು ದೂರ ಎಸೆದು; **ಮುಟ್ಟಿಗೆಯ ಮೇಲಿರ್ದ ಸುತನ ಹಿಂಗಾಲ್ ಪಿಡಿದು, ಸೆಳೆದು ಬಿಸುಟನ್**=ಚಿತೆಯ ಮೇಲಿದ್ದ ಲೋಹಿತಾಶ್ವನ ಹಿಂಗಾಲನ್ನು ಹಿಡಿದೆಳೆದು ಕೆಳಕ್ಕೆ ಬಿಸಾಡಿದನು;

ಬಿಸುಡದಿರು ಬಿಸುಡದಿರು ಬೇಡಬೇಡ ಅಕಟಕಟ ಹಸುಳೆ ನೊಂದಹನ್ ಎಂದು ಬೀಳ್ವನನ್ ಎತ್ತಿ ತಕ್ಕಿಸಿಕೊಂಡು=ಬಿಸುಡದಿರು... ಬಿಸುಡದಿರು... ಬೇಡಬೇಡ... ಅಯ್ಯಯ್ಯೋ... ಮಗು ನೊಂದುಹೋಗುತ್ತಾನೆ ಎಂದು ಚಂದ್ರಮತಿಯು ಉದ್ವೇಗದಿಂದ ನುಡಿಯುತ್ತ, ಕೆಳಗಡೆ ಬಿದ್ದಿದ್ದ ಮಗನನ್ನು ತಬ್ಬಿಕೊಂಡು; **ಕುಲವ ನೋಡದೆ ಬೇಡಿಕೊಂಬೆನ್. ಇವನ್ ಎನ್ನ ಮಗನಲ್ಲ ನಿನ್ನ ಸಿಸುವಿನೋಪಾದಿ ಸುಡಲ್ ಅನುಮತವನಿತ್ತು ರಕ್ಷಿಸು ಕರುಣಿ**=ನೀನು ಕುಲದಲ್ಲಿ ಚಂಡಾಲನೆಂದು ಗೊತ್ತಿದ್ದರೂ ಅದನ್ನು ಮರೆತು ಬೇಡಿಕೊಳ್ಳುತ್ತಿದ್ದೇನೆ. ಇವನು ನನ್ನ ಮಗನಲ್ಲ. ನಿನ್ನ ಮಗನೆಂದು ತಿಳಿದು ಸುಡಲು ಅನುಮತಿಯನ್ನು ಕೊಟ್ಟು ಕಾಪಾಡು ಕರುಣಿ;

ಇಂತಹ ಸಂಕಟದ ಸಮಯದಲ್ಲಿಯೂ ಚಂದ್ರಮತಿಯ ಮನದಲ್ಲಿ ತನ್ನ ಎದುರಿಗೆ ಇರುವ ಕಾವಲುಗಾರನು ಕೀಳು ಕುಲದವನು ಎಂಬ ಭಾವನೆಯು ಹೆಡೆ ಎತ್ತಿದೆ; ಇದಕ್ಕೆ ಕಾರಣವೇನೆಂದರೆ ಬ್ರಾಹ್ಮಣ/ಕ್ಷತ್ರಿಯ/ವೈಶ್ಯ/ಶೂದ್ರ ಎಂಬ ನಾಲ್ಕು ಬಗೆಯ ವರ್ಣ ವ್ಯವಸ್ಥೆ, ಸಾಮಾಜಿಕ ಜೀವನದಿಂದಲೇ ಹೊರಹಾಕಿರುವ ಚಂಡಾಲರು ಮತ್ತು ಹೊಲೆಯರು ಎಂಬ ಮತ್ತೊಂದು ವಿಂಗಡಣೆ ಮತ್ತು ನೂರೆಂಟು ಜಾತಿಗಳು ಹಾಗೂ ಸಾವಿರಾರು ಬಗೆಯ ಉಪಜಾತಿಗಳ ಹೆಣಿಗೆಯಿಂದ ರೂಪುಗೊಂಡಿರುವ ಇಂಡಿಯಾ ದೇಶದ ಸಾಮಾಜಿಕ ರಚನೆ. ಇದರಿಂದಾಗಿ ಜನಜೀವನದ ನಿತ್ಯ ವ್ಯವಹಾರಗಳ ಪ್ರತಿಯೊಂದು ಗಳಿಗೆಯಲ್ಲಿಯೂ ಪ್ರತಿಯೊಬ್ಬ ವ್ಯಕ್ತಿಯ ಮಯ್ ಮನದಲ್ಲಿಯೂ ಮೇಲು ಕೀಳಿನ ವರ್ಣ ಮತ್ತು ಜಾತಿ ಭಾವನೆಯು ಹಾಸುಹೊಕ್ಕಾಗಿರುತ್ತದೆ; ಇಂತಹ ವರ್ತನೆಗೆ ಚಂದ್ರಮತಿಯೂ ಹೊರತಾಗಿಲ್ಲ;

ಎಲೆ ಮರುಳೆ, ಹೆಣನ್ ಉಟ್ಟುದಮ್ ಮಸಣವಾಡಗೆಯ ಹಾಗವನು ಕೊಟ್ಟಲ್ಲದೇ ಏನ್ ಎಂದಡಮ್ ಬಿಡೆನ್=ಎಲೆ ತಿಳಿಗೇಡಿಯೇ, ಸುಡುಗಾಡಿನ ನಿಯಮದಂತೆ ಹೆಣಕ್ಕೆ ತೊಡಿಸಿರುವ ಬಟ್ಟೆಯನ್ನು ಮತ್ತು ಸುಡುಗಾಡಿನ ನೆಲದ ತೆರಿಗೆಯ ನಾಣ್ಯವನ್ನು ಕೊಡದಿದ್ದರೆ, ನೀನು ಯಾವ ರೀತಿ ಮೊರೆಯಿಟ್ಟು ಗೋಳಾಡಿದರೂ, ನಿನ್ನ ಮಗನ ಹೆಣವನ್ನು ಸುಡುವುದಕ್ಕೆ ಬಿಡುವುದಿಲ್ಲ; **ಇಂದು ಎನಗೆ ಕೊಡಲ್ ಏನು ಇಲ್ಲ. ಲೋಗರ ಮನೆಯ ಬಡದಾಸಿ ಕರುಣಿಸು**=ಈಗ ನನ್ನ ಬಳಿ ಸುಡುಗಾಡಿನ ನೆಲದ ತೆರಿಗೆಯನ್ನು ಕೊಡಲು ಯಾವ ಹಣವೂ ಇಲ್ಲ. ಸಿರಿವಂತರ ಮನೆಯ ಬಡದಾಸಿ ನಾನು. ದಯೆತೋರು;

ನಿನ್ನ ಕೊರಳಿನೊಳ್ ಇರ್ದ ಕಡು ಚೆಲುವ ತಾಳಿಯನ್ ಅದನ್ ಅಡವನಿರಿಸಿ ಬಳಿಕ ನೀ ಬಿಡಿಸಿಕೋ ಎನಲು=ನಿನ್ನ ಕೊರಳಿನಲ್ಲಿರುವ ತುಂಬ ಅಂದವಾದ ತಾಳಿಯನ್ನು ಅಡವಿಟ್ಟು ಹಣವನ್ನು ತರುವುದು. ಅನಂತರ ಅದನ್ನು ಬಿಡಿಸಿಕೊಳ್ಳುವೆಯಂತೆ ಎಂದು ಪರಿಹಾರವನ್ನು ಸೂಚಿಸಲು; **ಮಡದಿ ಕರನೊಂದು**=ಚಂದ್ರಮತಿಯು ಬಹಳವಾಗಿ ಸಂಕಟಕ್ಕೆ ಒಳಗಾಗಿ ಪರಿತಪಿಸುತ್ತ; **ಅಕಟ… ಪೊಡವಿಪತಿ ಮಡಿದ ಕೇಡು ಅಡಸಿತು. ಅಲ್ಲದಡೆ ಎನ್ನ ಗುಪ್ತ ಮಂಗಳಸೂತ್ರದ ಎಡೆಯ ಹೊಳೆಹೊಳೆವ ಐದೆದಾಳಿಯನ್ ಇದನ್ ಶ್ವಪಚನ್ ಎಂತು ಕಂಡಪನ್**=ಅಯ್ಯೋ… ಹರಿಶ್ಚಂದ್ರನು ಸಾವನ್ನಪ್ಪಿದ ದುರಂತ ಉಂಟಾಗಿದೆ. ಇಲ್ಲದಿದ್ದರೆ ನನ್ನ ಕೊರಳಿನಲ್ಲಿ ಹೊಳೆಹೊಳೆಯುತ್ತಿರುವ ಮುತ್ತಯ್ದೆತನದ ಮಂಗಳಸೂತ್ರವಾದ ತಾಳಿಯನ್ನು ಈ ಚಂಡಾಲನು ಹೇಗೆ ತಾನೆ ನೋಡುತ್ತಿದ್ದ; "ತನ್ನ ಕೊರಳಿನಲ್ಲಿದ್ದ ತಾಳಿಯು ಗಂಡನಾದ ಹರಿಶ್ಚಂದ್ರನಿಗೆ ಮಾತ್ರ ಕಾಣುತ್ತಿತ್ತು. ಹರಿಶ್ಚಂದ್ರನು ಸತ್ತುಹೋಗಿರುವುದರಿಂದ, ಈಗ ಅದು ಬೇರೆಯವರ ಕಣ್ಣಿಗೆ ಕಾಣುತ್ತಿದೆ" ಎಂಬ ಒಂದು ನಂಬಿಕೆಯು ಚಂದ್ರಮತಿಯ ಮನದಲ್ಲಿತ್ತು;

ವಿಗತ ಸಪ್ತದ್ವೀಪಪತಿಯ ಬಸುರಲಿ ಬಂದು ಮಗನೆ, ನಿನಗೆ ಒಮ್ಮೆಟ್ಟು ಸುಡುಗಾಡು ಹಗೆಯಾಯ್ತೆ=ಈ ಮೊದಲು ಏಳು ದ್ವೀಪಗಳ ಒಡೆಯನಾಗಿದ್ದ ಹರಿಶ್ಚಂದ್ರ ಮಹಾರಾಜನ ಮಗನಾಗಿ ಹುಟ್ಟಿಬಂದು, ಮಗನೇ ಈಗ ನಿನಗೆ ಸುಡುಗಾಡಿನಲ್ಲಿ ಒಂದು ಪಾದದ ಅಗಲ ಜಾಗ ಸಿಗದಂತಾಯಿತೆ; **ಮಿಗೆ ಸಕಲ ಲೋಕದೊಳು ತನ್ನ ಆಣೆ ಸಲುವನ ಕುಮಾರನ್ ಎನಿಸುವ ನಿನ್ನನು ಬಗೆಯದೆ ಈ ಚಂಡಾಲನ್ ಆಣೆಯಿಡುವಂತಾಯ್ತೆ**=ಎಲ್ಲಕ್ಕಿಂತ ಹೆಚ್ಚಾಗಿ ಇಡೀ ಜಗತ್ತಿನಲ್ಲಿಯೇ ಯಾರ ಆಜ್ಞೆಯು ನಡೆಯುತ್ತಿತ್ತೋ ಅಂತಹ ರಾಜನಾಗಿದ್ದವನ ಮಗನಾದ ನಿನ್ನನ್ನು ಯಾರೆಂದು ತಿಳಿಯದೆ, ಈ ಚಂಡಾಲನು ನಿನಗೆ ಆಜ್ಞೆ ಮಾಡುವಂತಾಯಿತೆ; ಅಂದರೆ ನಿನ್ನನ್ನು ಸುಡಲು ಕಟ್ಟಲೆಯನ್ನು ಹಾಕುವಂತಾಯಿತೆ; **ಜಗದ ನವನಿಧಿಗೆ ಒಡೆಯನ ಆತ್ಮಭವನ್ ಎನಿಸಿ ಮುಟ್ಟಿಗೆಯ ಸುಂಕದ ಹಾಗವಿಲ್ಲಾಯ್ತೆ ಮಗನೆ ಎಂದು ಹಂಬಲಿಸುತ ಅಳಲಿದಳು**= ಜಗತ್ತಿನಲ್ಲಿರುವ ಒಂಬತ್ತು ಬಗೆಯ ಸಂಪತ್ತಿಗೆ ಒಡೆಯನಾಗಿದ್ದ ಹರಿಶ್ಚಂದ್ರನ ಮಗನಾಗಿ ಹುಟ್ಟಿ, ಸುಡುಗಾಡಿನಲ್ಲಿ ಚಿತೆಯ ಸುಂಕವನ್ನು ಕೊಡಲು ಹಣವಿಲ್ಲದಂತಾಯಿತೆ ಎಂದು ಪ್ರಲಾಪಿಸುತ್ತ ಸಂಕಟಪಟ್ಟಳು;

ವನಿತೆಯ ಅಳಲಮ್ ಕೇಳ್ದು ನಡುಗಿ=ಚಂದ್ರಮತಿಯ ಪ್ರಲಾಪವನ್ನು ಕೇಳಿದ ಹರಿಶ್ಚಂದ್ರನು ತೀವ್ರವಾದ ಸಂಕಟದಿಂದ ನಡುಗಿಹೋಗಿ; **ವಿಶ್ವಾಮಿತ್ರ ಮುನಿ ಎನಗೆ ಮತ್ತೆ ಮಾಡಿದ ತೊಡಕು ಇದಾಗದಿರದು ಎನುತ ಮನದೊಳು ಮರುಗುತ=**

ವಿಶ್ವಾಮಿತ್ರ ಮುನಿಯು ನನಗೆ ಮತ್ತೆ ತಂದೊಡ್ಡಿರುವ ಕಷ್ಟವಲ್ಲದೆ, ಇದು ಬೇರೆಯಲ್ಲ ಎಂದುಕೊಂಡು ಮನದಲ್ಲಿ ಕೊರಗುತ್ತ; **ಎಲೆ ತರುಣಿ, ಈ ತರಳನ್ ಆವ ಲೋಕದೊಳ್ ಆಣೆ ಸಲುವುದು ಎನಿಸುವ ಭೂಪನ ತನಯನ್**=ಎಲೆ ತರುಣಿ, ಈ ಹುಡುಗನು ಯಾವ ರಾಜ್ಯವನ್ನಾಳುವ ರಾಜನ ಮಗ; **ನೆಲದೆರೆಯನ್ ಇಕ್ಕು ಎನಲು, ಕೊಡಲಿಲ್ಲದೆ ಅಧಿಕರ ಪೆಸರ್ಗೊಳಲು ಬಿಡುವೆನೆ**=ಸುಡುಗಾಡಿನ ನೆಲದ ತೆರಿಗೆಯನ್ನು ಕೊಡು ಎಂದು ನಾನು ಕೇಳಲು, ಕೊಡಲು ಹಣವಿಲ್ಲದೆ, ದೊಡ್ಡವರ ಹೆಸರನ್ನು ಹೇಳಿದರೆ ಬಿಟ್ಟುಬಿಡುತ್ತೇನೆಯೇ; **ಶೋಕಿಸುವ ಹೊತ್ತು, ಹುಸಿದು ಶೋಕಿಸುವೊಡೆ ಏನಹುದು ಎಂದನು ಅವನೀಶನು**=ಸಂಕಟದಿಂದ ಪರಿತಪಿಸುವ ಸಮಯದಲ್ಲಿ ಸುಳ್ಳನ್ನಾಡುತ್ತ ಗೋಳಾಡಿದರೆ ಏನು ಪ್ರಯೋಜನ ಎಂದು ಹರಿಶ್ಚಂದ್ರನು ಚಂದ್ರಮತಿಯನ್ನು ನಿಂದಿಸಿದನು;

ಹಿಂದುಳಿದ ಸಂಪದವನ್ ಎಣಿಸುವುದು ಹುಸಿಯಲ್ಲ. ಇಂದು ಈಗ ತೋರಬಪ್ಪುದೆ. ಹುಸಿಯದುಂಟೆ ತಪ್ಪೆ=ನಮಗೆ ಹಿಂದೆ ಇದ್ದ ಸಂಪತ್ತನ್ನು ನೆನೆದುಕೊಳ್ಳುವದು ಹೇಗೆ ಸುಳ್ಳಾಗುತ್ತದೆ. ಅದು ಇಂದು ನಮ್ಮ ಪಾಲಿಗೆ ಬರುವುದಿಲ್ಲ ಎನ್ನುವುದು ನಿಜ. ಆದರೆ ನೆನೆದುಕೊಳ್ಳುವುದರಲ್ಲಿ ತಪ್ಪೇನು; **ಅದಕೇನ್**=ಹಾಗೆ ನೆನೆದುಕೊಳ್ಳುವುದರಿಂದ ಪ್ರಯೋಜನವೇನು ಎಂದ ಹರಿಶ್ಚಂದ್ರನು ಮತ್ತೆ ಆ ಹುಡುಗನ ಬಗ್ಗೆ ವಿಚಾರಿಸುತ್ತಾನೆ; **ಆತನ್ ಆರ ಮಗನ್ ಆವ ಪೆಸರ್ ಆವ ನಾಡ ಅರಸನ್**=ಆ ಹುಡುಗನು ಯಾರ ಮಗ… ಅವನ ಹೆಸರೇನು… ಅವನ ತಂದೆ ಯಾವ ನಾಡಿನ ಅರಸ; **ಸಂದ ರವಿಕುಲತಿಲಕನ್ ಎನಿಪ ಆ ತ್ರಿಶಂಕುವಿನ ನಂದನನ್ ಅಯೋಧ್ಯಾಪತಿ ಹರಿಶ್ಚಂದ್ರನ್ ಎನೆ**=ಹೆಸರಾಂತ ಸೂರ್ಯವಂಶದಲ್ಲಿಯೇ ಉತ್ತಮನು ಎನಿಸದ ಆ ತ್ರಿಶಂಕು ಮಹಾರಾಜನ ಮಗ ಅಯೋಧ್ಯಾಪತಿಯಾದ ಹರಿಶ್ಚಂದ್ರ ಎಂದು ಚಂದ್ರಮತಿಯು ಹೇಳಲು; **ನೊಂದು**=ಹರಿಶ್ಚಂದ್ರನು ಮನದಲ್ಲಿ ಗಾಸಿಗೊಂಡು; **ಆತನ ಅಂಗನೆ ಕುಮಾರರ್ ಏನಾದರ್ ಎಲ್ಲಿ ಇರ್ದಪರು ಹೇಳ್**=ಆತನ ಹೆಂಡತಿ ಮತ್ತು ಮಗ ಏನಾದರು ಈಗ ಅವರು ಎಲ್ಲಿದ್ದಾರೆ ಹೇಳು;

ಪೊಡವೀಶ್ವರನ್ ಹಿಂದೆ ಹರಸಿ ಹಾಳಮ್ ಬಿಟ್ಟು ಹಡೆದ ಸುತನ್ ಈತನ್ ಆತನ ವನಿತೆ ನಾನ್=ರಾಜನಾಗಿದ್ದ ಹರಿಶ್ಚಂದ್ರನು ಈ ಹಿಂದೆ ವರುಣದೇವನಿಗೆ ಹರಸಿಕೊಂಡು ನೆಲವನ್ನು ದಾನವಾಗಿ ನೀಡಿ ಪಡೆದ ಮಗನು ಈತ… ಹರಿಶ್ಚಂದ್ರನ ಹೆಂಡತಿ ನಾನು; **ಈ ತನಯನ್ ಮಡಿದ ಕಾರಣ ಆವುದು**=ಈ ಮಗನು ಸಾಯುವುದಕ್ಕೆ ಕಾರಣವೇನು; **ಎಮ್ಮಿಬ್ಬರಮ್ ಮಾರುಗೊಂಡ ಒಡೆಯನ ಅರಮನೆಗೆ ಹುಲುಹುಳ್ಳಿಯಮ್ ತಪ್ಪೆನ್ ಎಂದು ಅಡವಿಗೆ ಎಯ್ದಿದಡೆ, ಅಲ್ಲಿ**

ಕಾಳೋರಗಮ್ ಕಚ್ಚಿ ಈ ಕಂದನ್ ಮಡಿದನ್=ನಮ್ಮಿಬ್ಬರನ್ನು ಕೊಂಡುಕೊಂಡ ಒಡೆಯನ ದೊಡ್ಡ ಮನೆಗೆ ಹುಲ್ಲು ಮತ್ತು ಪುಳ್ಳೆಯನ್ನು ತರುತ್ತೇನೆ ಎಂದು ಕಾಡಿಗೆ ಲೋಹಿತಾಶ್ವನು ಹೋದರೆ, ಅಲ್ಲಿ ಭಯಂಕರವಾದ ಹಾವು ಕಚ್ಚಿ ಈ ಕಂದನು ಸತ್ತನು. **ಈ ವಿಧಿಗೆ ಸೇರಿತು**=ಈ ರೀತಿಯ ಸಾವು ಇವನ ಹಣೆಬರಹದಲ್ಲಿತ್ತು;

ಹರಿಶ್ಚಂದ್ರನ ಇರವೇನ್= ಈಗ ಹರಿಶ್ಚಂದ್ರನು ಸ್ಥಿತಿಯು ಹೇಗಿದೆಯೊ ಎಂದು ಚಂದ್ರಮತಿಯು ಪರಿತಪಿಸಿದಳು; **ನುಡಿಯಲ್ ಅರಿಯದೆ**=ಹೇಗೆ ಮಾತನಾಡ ಬೇಕೆಂಬುದನ್ನು ತಿಳಿಯದೆ/ಹೇಗೆ ವ್ಯವಹರಿಸಬೇಕು ಎಂಬ ಅರಿವಿಲ್ಲದೆ; **ಸಕಲ ರಾಜ್ಯಮಮ್ ಹೋಗಾಡಿ**=ಸಕಲ ರಾಜ್ಯವನ್ನು ಕಳೆದುಕೊಂಡು; **ಕಡೆಗೆ ಅಧಿಕ ಋಣಿಯಾಗಿ ನೆಲೆಗೆಟ್ಟು**=ಕೊನೆಗೆ ಹೆಚ್ಚಿನ ಸಾಲಗಾರನಾಗಿ ನೆಲೆಯನ್ನು ಕಳೆದುಕೊಂಡು; **ಮಂತ್ರಿ ಬೆರಸು ಅಡವಿಗುರಿಯಾಗಿ**=ಮಂತ್ರಿಯ ಜತೆಗೂಡಿ ಕಾಡುಪಾಲಾಗಿ; **ಕೈವಿಡಿದ ಸತಿಪುತ್ರರಮ್ ಸುಕ್ಷೇತ್ರದೊಳಗೆ ಮಾರಿ**=ಕಯ್ ಹಿಡಿದ ಹೆಂಡತಿಯನ್ನು ಮತ್ತು ಹೆತ್ತ ಮಗನನ್ನು ಕಾಶಿನಗರದಲ್ಲಿ ಮಾರಾಟಮಾಡಿ; **ಕಡೆಗೆ ಚಂಡಾಲ ಕಿಂಕರನಾಗಿ**=ಕೊನೆಗೆ ಚಂಡಾಲನ ದಾಸನಾಗಿ; **ದೋಷಕ್ಕೆ ನಡುಗದೆ**=ಅಪಮಾನಕ್ಕೆ ಹೆದರದೆ; **ಕುಲಾಚಾರಮಮ್ ಬಿಟ್ಟು**=ಕುಲದ ಸಂಪ್ರದಾಯ ಮತ್ತು ಆಚಾರವನ್ನು ತ್ಯಜಿಸಿ; **ಜನಕೆ ನಗೆಗೆಡೆಯಾದ ಪಾತಕ ಹರಿಶ್ಚಂದ್ರನ್ ಅವನನ್ ಏನೆಂದು ನೆನೆದಪೆ**=ಜನಗಳ ಬಾಯಲ್ಲಿ ತಿರಸ್ಕಾರದ ನಗೆಗೆ ಈಡಾದ ಪಾಪಿ ಹರಿಶ್ಚಂದ್ರ. ಅವನಲ್ಲಿ ಯಾವ ಒಳ್ಳೆಯ ಗುಣವಿದೆಯೆಂದು ನೆನೆದು ಕೊಳ್ಳುತ್ತಿರುವೆ; ಚಂದ್ರಮತಿಯು ದೇವರಾದ ಶಿವನ ರೂಪ ಮತ್ತು ಮಹಿಮೆಯ ಬಗ್ಗೆ ಜನಮನದಲ್ಲಿರುವ ಹತ್ತಾರು ಬಗೆಯ ನಂಬಿಕೆ ಮತ್ತು ಕಲ್ಪನೆಯ ಚಿತ್ರಗಳನ್ನು ಬಣ್ಣಿಸುತ್ತ, ಶಿವನು ಯಾವ ರೂಪಿನಲ್ಲಿದ್ದರೂ, ಯಾವ ವೇಷವನ್ನು ತೊಟ್ಟಿದ್ದರೂ ಮತ್ತು ಏನನ್ನೇ ಮಾಡಿದ್ದರೂ ಇಡೀ ಜಗತ್ತಿಗೆ ಹೇಗೆ ಆತನೊಬ್ಬನನ್ನೇ ದೇವರೆಂದು ಜನರು ನಂಬಿದ್ದಾರೆಯೋ ಅಂತೆಯೇ ಹರಿಶ್ಚಂದ್ರನು ಈಗ ಯಾವುದೇ ರೀತಿಯಲ್ಲಿದ್ದರೂ ಏನೇ ಆಗಿದ್ದರೂ ಆತನೇ ನನ್ನ ಪತಿ ನನಗೆ ಗತಿ ಮತ್ತು ಮತಿ ಎಂದು ಹೇಳತೊಡಗುತ್ತಾಳೆ;

ಜಡೆವೊತ್ತಡಮ್=ಶಿವನು ತಲೆಯಲ್ಲಿ ಜಡೆಯನ್ನು ಎತ್ತಿಕಟ್ಟಿಕೊಂಡು ಸಂನ್ಯಾಸಿ ಯಾಗಿದ್ದರೂ; **ಹಸಿಯ ತೊವಲ್ ಉಟ್ಟಡಮ್**=ಶಿವನು ಹಸಿಯ ಚರ್ಮವನ್ನು ಉಡುಗೆಯಾಗಿ ಉಟ್ಟುಕೊಂಡಿದ್ದರೂ; **ನಾಡ ಸುಡುಗಾಡಿನೊಳಗೆ ಇರ್ದಡಮ್**= ಶಿವನು ನಾಡಿನ ಸುಡುಗಾಡಿನಲ್ಲಿ ವಾಸವಿದ್ದರೂ; **ನರಕಪಾಲಮಮ್ ಪಿಡಿದು ತಿರಿದು ಇರ್ದಡಮ್**=ಶಿವನು ತಲೆಬುರುಡೆಯನ್ನು ಹಿಡಿದುಕೊಂಡು ಭಿಕ್ಷೆಯನ್ನು ಬೇಡುತ್ತಿದ್ದರೂ; **ವಿಷ ಉಂಡಡಮ್**=ಶಿವನು ನಂಜನ್ನು ಕುಡಿದರೂ; ದೇವತೆಗಳು

ಮತ್ತು ರಕ್ಕಸರು ಹಾಲಿನ ಕಡಲನ್ನು ಕಡೆದಾಗ ಅಮೃತದ ಜತೆಗೆ ವಿಷ ಬಂದಿತೆಂದು, ಅಮೃತವನ್ನು ದೇವತೆಗಳು ಕೊಂಡೊಯ್ದರೆ, ವಿಷವನ್ನು ಶಿವನು ಕುಡಿದು ಜಗತ್ತಿನ ಜೀವಿಗಳನ್ನು ಕಾಪಾಡಿದನೆಂಬ ಪುರಾಣ ಕತೆಯಿದೆ; **ಶವಶಿರೋಮಾಲೆ ಕಟ್ಟಿರ್ದಡಮ್**=ತಲೆಬುರುಡೆಯ ಮಾಲೆಯನ್ನು ಹಾಕಿಕೊಂಡಿದ್ದರೂ; **ಕಡು ಮರುಳ್ ಪಡೆಯ ಸಂಗಡ ಬತ್ತಲಿರ್ದಡಮ್**=ದೊಡ್ಡ ಸಂಕೆಯ ಪಿಶಾಚಿಗಳ ಗುಂಪಿನೊಡನೆ ಮಯ್ ಮೇಲೆ ಬಟ್ಟೆಯಿಲ್ಲದೆ ಬತ್ತಲೆಯಿದ್ದರೂ;

ಮೃಡನಲ್ಲದೆ ಅಖಿಲಲೋಕಕ್ಕೆ ಒಡೆಯನಿಲ್ಲ ಎಂಬ ನುಡಿಯಂತಿರೆ= ಶಿವನಲ್ಲದೆ ಸಮಸ್ತಲೋಕಕ್ಕೆ ಒಡೆಯನಿಲ್ಲ ಎಂಬ ನುಡಿಯಂತೆ; **ಎನಗೆ ಆ ಹರಿಶ್ಚಂದ್ರನಲ್ಲದೆ ಇನ್ನಾರು ಗತಿ ಮತಿ ಎಂದಳು**=ನನಗೆ ಆ ಹರಿಶ್ಚಂದ್ರನಲ್ಲದೆ ಬೇರೆ ಇನ್ನಾರು ದಿಕ್ಕಿಲ್ಲವೆಂದು ತನ್ನ ಪಾಲಿಗೆ ಈಗಲೂ ಹರಿಶ್ಚಂದ್ರನೇ ಸರ್ವಸ್ವವಾಗಿದ್ದಾನೆ ಎಂದು ನುಡಿದಳು; ಚಂದ್ರಮತಿಯು ತನ್ನ ಬಗ್ಗೆ ಆಡಿದ ಒಲವು ಮತ್ತು ನಂಬಿಕೆಯ ನುಡಿಗಳನ್ನು ಕೇಳಿ ಹರಿಶ್ಚಂದ್ರನು ಹಲವಾರು ಬಗೆಯ ಒಳಮಿಡಿತಗಳ ಒತ್ತಡದಿಂದ ಮಾನಸಿಕವಾಗಿ ಕುಗ್ಗಿಹೋಗುತ್ತಾನೆ; **ಉರುವ ಅಬಲೆಯ ಉಚಿತವಚನಮ್ ಕರ್ಣಪಥದಿನ್ ಒಳಗೆ ಎರಗಿ**=ಉತ್ತಮಳಾದ ಚಂದ್ರಮತಿಯ ಒಲವಿನ ಮತ್ತು ನಂಬಿಕೆಯ ಮಾತುಗಳು ಕಿವಿಯ ಮೂಲಕ ಮನವನ್ನು ಮುಟ್ಟಿ;

ಚಿತ್ತವನು ತೊತ್ತಳದುಳಿದು=ಮನಸ್ಸನ್ನು ಗಾಸಿಗೊಳಿಸಿ; **ಧೈರ್ಯಮಮ್ ಬರಿಕೈದು**=ಮನದ ಕೆಚ್ಚನ್ನು ಬರಿದುಮಾಡಿ; **ಕರಣಂಗಳಮ್ ಕದಡಿ**= ಪಂಚೇಂದ್ರಿಯಗಳನ್ನು ಕಳವಳಕ್ಕೆ ಗುರಿಪಡಿಸಿ; **ಹೆಮ್ಮೆಯಮ್ ಹರಿದು**=ತನ್ನ ಬಗ್ಗೆ ತನ್ನಲ್ಲಿಯೇ ಇದ್ದ ಮೇಲರಿಮೆಯನ್ನು ಅಡಗಿಸಿ; **ಅಳಲನ್ ಒದೆದು ಎಬ್ಬಿಸಿ**=ಈಗ ಬಂದಿರುವ ಸಂಕಟವನ್ನು ಸರಿಯಾಗಿ ತಿಳಿದುಕೊಳ್ಳುವಂತೆ ಮಾಡಿ; **ಮರುಕಮಮ್ ಮಸೆದು**=ದುಗುಡವನ್ನು ಹೆಚ್ಚಿಸಿ; **ಕಂಬನಿ ಪೊನಲ ಕೋಡಿಯಮ್ ಕೊರೆದು**=ಕಣ್ಣೀರಿನ ಪ್ರವಾಹದ ಕೋಡಿಯನ್ನು ಕೊರೆದು; **ಮತಿಗತಿ ಮಾಯೆಯಮ್ ತೋರಿ ಮೀರಿ**=ಬುದ್ಧಿಗೆ ಕವಿದುಕೊಂಡಿರುವ ತಪ್ಪುಗ್ರಹಿಕೆಗಳನ್ನು ತಿಳಿಯುವಂತೆ ಮಾಡಿ; **ನೇಸರ ಕುಲಜನ್ ಓರಂತೆ** ಸಿಗ್ಗಾಗಿ=ಸೂರ್ಯಕುಲದ ಹರಿಶ್ಚಂದ್ರನು ಒಂದೇ ಸಮನೆ ನಾಚಿಕೊಂಡು; **ತಾ ಮಾಡಿದ ಅಪರಾಧಮಮ್ ನೆನೆದನ್**=ಇದುವರೆಗೂ ತಾನು ಮಾಡಿದ ತಪ್ಪುಗಳೆಲ್ಲವನ್ನೂ ನೆನೆದುಕೊಂಡನು;

ಈ ಸತಿಯನ್ ಈ ಶುಚಿಯನ್ ಈ ಪತಿವ್ರತೆಯ ನಾನ್ ಈಸು ಧಾವತಿಗೆ ಒಳಗುಮಾಡಿದೆನು=ಇಂತಹ ಹೆಂಡತಿಯನ್ನು... ಇಂತಹ ಶೀಲವತಿಯನ್ನು... ಇಂತಹ ಪತಿವ್ರತೆಯನ್ನು ಇಷ್ಟೊಂದು ಸಂಕಟಕ್ಕೆ ಗುರಿಮಾಡಿದೆನು; **ನೀಚ**

ದ್ವಿಜೇಶಂಗೆ ಈ ಸುತನನ್ ಈ ಸುಖಿಯನ್ ಮಾರಿ ಮರೆದು=ನೀಚನಾದ ಬ್ರಾಹ್ಮಣನಿಗೆ ಇಂತಹ ಮಗನನ್ನು... ಇಂತಹ ಕೋಮಲೆಯನ್ನು ಮಾರಿ, ಅವರನ್ನು ಮರೆತು; **ಈ ಸೊಬಗ ಸುಕುಮಾರನ ಓಸರಿಸದೆ ಉರಗ ಕೊಲುವಂತೆ ಮಾಡಿದೆನ್ ಎಂಬ**=ಇಂತಹ ಚೆಲುವನಾದ ಸುಪುತ್ರನ ಒಳಿತನ್ನು ಬಯಸದೆ ಹಾವು ಕಚ್ಚಿ ಸಾಯುವಂತೆ ಮಾಡಿದೆನು ಎನ್ನುವ; **ವಾರಾಶಿ**=ಕಡಲು; **ಹೇಸಿಕೆಯ ವಾರಾಶಿ ತುಂಬಿ ತುಳುಕಾಡಿ**=ಜುಗುಪ್ಸೆಯ ಭಾವನೆಯು ತುಂಬಾ ಹೆಚ್ಚಾಯಿತು ಎಂಬ ರೂಪಕದ ತಿರುಳಿನಲ್ಲಿ ಬಳಕೆಗೊಂಡಿದೆ;

ಹೇಸಿಕೆಯ ವಾರಾಶಿ ತುಂಬಿ ತುಳುಕಾಡಿ ಹೊರಸೂಸುವ ಅಳಲಮ್ ನಿಲಿಸಿ ನಿಲಿಸಲಾರದೆ ಮಗನ ಮೇಲೆ ದೊಪ್ಪನೆ ಕೆಡೆದನು=ತನ್ನ ಬೇಜವಾಬ್ದಾರಿತನದ ವರ್ತನೆಯ ಬಗ್ಗೆ ಜುಗುಪ್ಸೆಯ ಕಡಲು ತುಂಬಿ ತುಳಿಕಾಡಿ ಹೊರಚೆಲ್ಲುತ್ತಿರುವ ಸಂಕಟವನ್ನು ತಡೆದುಕೊಳ್ಳಲಾಗದೆ ಮಗನ ಮೇಲೆ ದೊಪ್ಪನೆ ಉರುಳಿದನು; **ತನಗೆ ಹೊಯ್ ಕೈಯಪ್ಪ ಭೂಭುಜರನ್ ಓಲೈಸಿ ಧನವನ್ ಆರ್ಜಿಸಿ ತಂದು, ಸೆರೆಯ ಬಿಡಿಸುವನ್ ಎಮ್ಮ ಜನಪನೆಂದು ಆನ್ ಇರಲು**=ತನಗೆ ಸಮಾನರಾಗಿರುವ ರಾಜರ ನೆರವಿನಿಂದ ಸಂಪತ್ತನ್ನು ಗಳಿಸಿ ತಂದು, ಬ್ರಾಹ್ಮಣನ ಮನೆಯ ಜೀತದ ಸೆರೆಯಿಂದ ನಮ್ಮನ್ನು ಬಿಡಿಸುತ್ತಾನೆ ನಮ್ಮ ರಾಜನೆಂದು ನಾನು ನಂಬಿಕೊಂಡಿರಲು; **ಮಾದಿಗಂಗೆ ಆಳಾಗಿ ಸುಡುಗಾಡ ಕಾವ ಭಾಗ್ಯ ನಿನಗಾಯ್ತೆ ಭೂಪಾಲ ಎಂದು**= ಮಾದಿಗನಿಗೆ ಆಳಾಗಿ ಸುಡುಗಾಡನ್ನು ಕಾಯುವ ಭಾಗ್ಯ ನಿನಗೆ ಆಯಿತೆ ರಾಜನೇ ಎಂದು ನುಡಿಯುತ್ತ; **ದುಃಖಕ್ಕೆ ಪುತ್ರನ ಶೋಕದ ಉರಿಗೆ ತನು ಹೇವರಿಸಿ**= ಹರಿಶ್ಚಂದ್ರನಿಗೆ ಬಂದೊದಗಿರುವ ಸಂಕಟಕ್ಕೆ ಮತ್ತು ಮಗ ಲೋಹಿತಾಶ್ವನ ಸಾವಿನ ಶೋಕದ ಉರಿಗೆ ದೇಹವು ಕುಗ್ಗಿ; **ವನಿತೆ ತಾ ಮನನೊಂದು ಬೆಂದು ಬೆರಗಾಗಿ ಚಿಂತಿಸುತ**=ಚಂದ್ರಮತಿಯು ಮನನೊಂದು ಬೆಂದು ಅಚ್ಚರಿಗೊಂಡು ಚಿಂತಿಸುತ್ತ; **ತೂಕದ ಕೋಲ ತೊಲೆ**=ವಸ್ತುಗಳನ್ನು ತೂಕ ಮಾಡಲು ಬಳಸುವ ತಕ್ಕಡಿಯ ಮೇಲು ಭಾಗದಲ್ಲಿರುವ ದಪ್ಪನೆಯ ಕೋಲು;

ತೂಕದ ಕೋಲ ತೊಲೆಯಾದಳು=ವಸ್ತುವಿನ ಭಾರ ಮತ್ತು ತೂಕದ ಬಟ್ಟಿನ ಭಾರವೆರಡನ್ನು ತಡೆಯಲಾರದೆ ಅತ್ತಿತ್ತ ಹೊಯ್ದಾಡುವ ತಕ್ಕಡಿಯ ದಂಡದಂತೆ ಮಾನಸಿಕ ಸಂಕಟದ ತುಯ್ದಾಡುವಿಕೆಯಲ್ಲಿ ಸಿಲುಕಿದಳು;

ಕಂದ... ಪ್ರಕಟ ರಾಜ್ಯಭ್ರಷ್ಟನಾಗಿ ಚಂಡಾಲಸೇವಕನಾದ ಪಾಪಿಯನ್ ನೀಚನನ್ ಅನೂನಪಾತಕನನ್ ಎನ್ನನ್ ಪೋಲ್ತು ಕೆಡದೆ=ಮಗನೇ... ಎಲ್ಲರಿಗೂ ಗೊತ್ತಿರುವಂತೆ ರಾಜ್ಯವನ್ನು ಕಳೆದುಕೊಂಡು ಚಂಡಾಲನ ದಾಸನಾದ ಪಾಪಿಯೂ ನೀಚನೂ ಹೆಚ್ಚಿನ ತಪ್ಪುಗಳನ್ನು ಮಾಡಿದ ನನ್ನಂತೆ ನೀನು ಹಾಳಾಗದೆ; **ನಿಮ್ಮಜ್ಜ**

ತ್ರಿಶಂಕು ಭೂವರನ ಅಂದದಿ ಸಕಲ ರಾಜ್ಯಕ್ಕೆ ಈ ಕುಮಾರಕನ್ ಒಡೆಯನಾಗದಿರನ್ ಎಂಬ ನಂಬುಗೆಯಲ್ ಆನ್ ಇರಲು=ನಿಮ್ಮ ಅಜ್ಜನಾದ ತ್ರಿಶಂಕು ಮಹಾರಾಜನಂತೆ ಸಕಲ ರಾಜ್ಯಕ್ಕೆ ಈ ನನ್ನ ಮಗನು ಒಡೆಯನಾಗದೆ ಇರುವುದಿಲ್ಲ ಎಂಬ ನಂಬುಗೆಯಿಂದ ನಾನು ಕೂಡಿದ್ದರೆ; **ಅಕಟ, ನೀನು ನಿಷ್ಕಾರಣಮ್ ಮಡಿವರೇ ತಂದೆ ಎಂದು ಅರಸನು ಅಳಲ್ ತೊಡಗಿದನ್**=ಅಯ್ಯೋ, ನೀನು ವಿನಾಕಾರಣ ಈ ರೀತಿ ಸಾವನ್ನಪ್ಪುತ್ತಾರೆಯೇ ತಂದು ಎಂದು ಹರಿಶ್ಚಂದ್ರನು ಸಂಕಟದಿಂದ ಪರಿತಪಿಸತೊಡಗಿದನು;

ಮುಂದೆ ನೀನ್ ಆಳಲಿಹ ಧರೆಯನ್ ಅನ್ಯರಿಗೆ ಇತ್ತನ್ ಎಂದು ನುಡಿಸೆಯೊ= ಮುಂದೆ ನೀನು ಆಳಬೇಕಾಗಿದ್ದ ಭೂಮಂಡಲವನ್ನು ಬೇರೆಯವರಿಗೆ ನಾನು ಕೊಟ್ಟೆನು ಎಂಬ ಮುನಿಸಿನಿಂದ ನನ್ನನ್ನು ಮಾತನಾಡಿಸುತ್ತಿಲ್ಲವೋ; **ಮತ್ತೆ ಅದಲ್ಲದೆ ಎಮ್ಮಿಬ್ಬರಮ್ ತಂದು ಲೋಗರಿಗೆ ಮಾರಿದನ್ ಎಂದು ನುಡಿಸೆಯೋ**=ಅದೂ ಅಲ್ಲದೆ ನನ್ನನ್ನು ಮತ್ತು ನನ್ನ ತಾಯಿ ಚಂದ್ರಮತಿಯನ್ನು ಬೇರೆಯ ಜನರಿಗೆ ಮಾರಿದನು ಎಂಬ ಸಂಕಟದಿಂದ ನನ್ನನ್ನು ಮಾತನಾಡಿಸುತ್ತಿಲ್ಲವೋ; **ಚಾಂಡಾಲಸೇವೆ ಮಾಡಿ ನಿಂದೆಯಿಲ್ಲದ ಸೂರ್ಯಕುಲಕೆ ಕುಂದಮ್ ತಂದನ್ ಎಂದು ನುಡಿಸೆಯೊ**=ಚಾಂಡಾಲನ ದಾಸನಾಗಿ ಕಳಂಕವಿಲ್ಲದ ಸೂರ್ಯವಂಶಕ್ಕೆ ಕೆಟ್ಟಹೆಸರನ್ನು ತಂದನು ಎಂದು ನನ್ನನ್ನು ಮಾತನಾಡಿಸುತ್ತಿಲ್ಲವೋ; **ನುಡಿಯದಿಹ ಹದನನ್ ಅರುಪಬೇಕು ಎಂದು ಒರಲಿ ಬಾಯ್ಬಿಟ್ಟು ಕರೆದು ಸುತನಲ್ಲಿ ಮಾರುತ್ತರವನು ಹಾರಿದನು**=ನಾನು ಎದುರಿಗೆ ಇದ್ದರೂ ನನ್ನೊಡನೆ ಮಾತನಾಡದಿರುವುದಕ್ಕೆ ಕಾರಣವೇನೆಂಬುದನ್ನು "ಲೋಹಿತಾಶ್ವನೇ ತಿಳಿಸು" ಎಂದು ಸಂಕಟದಿಂದ ಪ್ರಲಾಪಿಸುತ್ತ, ಮಗನಿಂದ ಮರುಮಾತನ್ನು ಕೇಳಲು ಬಯಸಿದನು;

ಅರಿರಾಯರೊಳು ಕಾದಿ ಮಡಿದಾತನಲ್ಲ=ಶತ್ರುರಾಜರೊಡನೆ ಹೋರಾಡಿ ಮರಣವನ್ನು ಅಪ್ಪಿದವನಲ್ಲ; **ಮುನಿವರರ ಯಾಗವ ಕಾದು ಮಡಿದಾತನಲ್ಲ**= ಉತ್ತಮರಾದ ಮುನಿಗಳ ಯಾಗದ ಆಚರಣೆಗೆ ಅಡಚಣೆಯನ್ನು ಒಡ್ಡುವವರೊಡನೆ ಹೋರಾಡಿ ಸತ್ತವನಲ್ಲ; **ದೇವರಿಗೆ ಹಿತವಾಗಿ ಮಡಿದವನಲ್ಲ**= ದೇವರಿಗೆ ಮೆಚ್ಚುಗೆಯಾಗುವಂತೆ ಒಳ್ಳೆಯ ಕೆಲಸವೊಂದನ್ನು ಮಾಡುವಾಗ ಸತ್ತವನಲ್ಲ; **ಮಾಂಸದಾನವ ಬೇಡಿದರ್ಗೆ ಒಡಲನು ಅರಿದರಿದು ಕೊಟ್ಟು ಮಡಿದವನಲ್ಲ**=ದೇಹದ ಮಾಂಸದಾನವನ್ನು... ಅಂದರೆ ಬೇಡಿದವರಿಗೆ ದೇಹದ ಅಂಗಾಂಗಗಳನ್ನು ಕತ್ತರಿಸಿ ಕತ್ತರಿಸಿ ಕೊಟ್ಟು ಸತ್ತವನಲ್ಲ. ಈ ನುಡಿಗಳು 'ಶಿಬಿ' ಎಂಬ ಚಕ್ರವರ್ತಿಯ ಜೀವನದಲ್ಲಿ ನಡೆದ ಪ್ರಸಂಗವನ್ನು ಹೇಳುತ್ತಿವೆ. ಗಿಡುಗ

ಪಕ್ಷಿಯು ಪಾರಿವಾಳ ಪಕ್ಷಿಯನ್ನು ಬೇಟೆಯಾಡಲೆಂದು ಬೆನ್ನು ಹತ್ತಿ ಬಂದಾಗ, ಪಾರಿವಾಳವು ಶಿಬಿ ಚಕ್ರವರ್ತಿಯ ಬಳಿಬಂದು ಶರಣಾಗಿ ತನ್ನ ಪ್ರಾಣವನ್ನು ಉಳಿಸಬೇಕೆಂದು ಮೊರೆಯಿಡುತ್ತದೆ. ಆಗ ಶಿಬಿ ಚಕ್ರವರ್ತಿಯು ಪಾರಿವಾಳದ ಜೀವವನ್ನು ಉಳಿಸುವ ಭರವಸೆಯನ್ನು ನೀಡಿ, ತನ್ನ ದೇಹದ ಭಾಗಗಳನ್ನು ಕತ್ತರಿಸಿ ಕತ್ತರಿಸಿ ಗಿಡುಗ ಪಕ್ಷಿಗೆ ನೀಡತೊಡಗುತ್ತಾನೆ. ಇದು ದೇವತೆಗಳಾದ ಇಂದ್ರ ಮತ್ತು ಅಗ್ನಿ ಜತೆಗೂಡಿ ಶಿಬಿ ಚಕ್ರವರ್ತಿಯ ದಾನಶೀಲತೆಯನ್ನು ಒರೆಹಚ್ಚಬೇಕೆಂದು ಹೂಡಿದ್ದ ಆಟವಾಗಿರುತ್ತದೆ. ಇಂದ್ರನು ಗಿಡುಗನಾಗಿ, ಅಗ್ನಿಯು ಪಾರಿವಾಳವಾಗಿ ರೂಪವನ್ನು ತಳೆದು ಈ ರೀತಿ ಶಿಬಿ ಚಕ್ರವರ್ತಿಯನ್ನು ಪರೀಕ್ಷಿಸಿ, ಅವನ ಪರೋಪಕಾರ ಗುಣಕ್ಕೆ ಮೆಚ್ಚುಗೆಯನ್ನು ಸೂಚಿಸಿ ಹರಸುತ್ತಾರೆ;

ಹುಳ್ಳಿಯಮ್ ತರಹೋಗಿ ಕಾಡೊಳಗೆ ಬಡಹಾವು ಕಚ್ಚಿ, ಮುನಿವರಿಗೆ ನಗೆಗೆಡೆಯಾಗಿ ನಿಷ್ಕಾರಣಮ್ ಮಡಿವರೇ ಕಂದ ಹೇಳ್=ಒಣ ಕಟ್ಟಿಗೆಯ ತುಂಡುಗಳನ್ನು ತರಲುಹೋಗಿ ಕಾಡಿನಲ್ಲಿ ಹಾವು ಕಚ್ಚಿ, ನಮ್ಮನ್ನು ಕಂಡು ಹೊಟ್ಟೆಕಿಚ್ಚುಪಡುವವರ ಮುಂದೆ ನಗೆಪಾಟಲಾಗುವಂತೆ ಇಂತಹ ರೀತಿಯಲ್ಲಿ ಸಾಯುತ್ತಾರೆಯೇ ಕಂದ ಹೇಳು. ಅಂದರೆ ಸೂರ್ಯವಂಶದ ರಾಜಕುವರನಾದ ನೀನು ಮಹತ್ತರವಾದ ಕೆಲಸದಲ್ಲಿ ತೊಡಗಿದ್ದಾಗ ವೀರಮರಣ ಬರಬೇಕಿತ್ತೇ ಹೊರತು, ಇಂತಹ ಸಾಮಾನ್ಯವಾದ ಕೆಲಸದಲ್ಲಿ ತೊಡಗಿದ್ದಾಗ ಸಾವು ಬರಬಾರದಿತ್ತು; **ಮೇಗೆ ಮಗನ್ ಅರಸಾಗಬೇಕೆಂಬ ಮರುಕದಿಮ್ ಯಾಗಕ್ಕೆ ಸುತನನ್ ಅರಿದು ಇಕ್ಕಲಾರದೆ ಲೋಭಿಯಾಗಿ ಮುನಿಪುತ್ರನನ್ ಮಾರುಗೊಂಡು ಇತ್ತನ್ ಎಂಬ ಅಪಕೀರ್ತಿಯೇ ಉಳಿದುದು**=ಇದೆಲ್ಲಕ್ಕಿಂತ ಹೆಚ್ಚಾಗಿ "ಹರಿಶ್ಚಂದ್ರನು ತನ್ನ ಮಗನು ಅರಸನಾಗಬೇಕೆಂಬ ಕೊರಗಿನಿಂದ ವರುಣದೇವನಿಗೆ ಹರಕೆ ಹೊತ್ತಿದ್ದಂತೆ ಮಗನನ್ನು ಬಲಿಕೊಡಲಾರದೆ, ಮಗನನ್ನು ಉಳಿಸಿಕೊಳ್ಳಬೇಕೆಂಬ ವ್ಯಾಮೋಹದಿಂದ ಅಜೀಗರ್ತನೆಂಬ ಮುನಿಯ ಮಗನನ್ನು ಹಣಕೊಟ್ಟು ಕೊಂಡುಕೊಂಡು, ತನ್ನ ಮಗನ ಬದಲು ಮುನಿಯ ಮಗನನ್ನು ಯಾಗಕ್ಕೆ ಬಲಿಕೊಟ್ಟನು" ಎಂಬ ಕೆಟ್ಟಹೆಸರು ನನ್ನ ಪಾಲಿಗೆ ಶಾಶ್ವತವಾಗಿ ಉಳಿಯಿತು; ಮೂರು ಗಾದೆಗಳನ್ನು ಹೇಳುವುದರ ಮೂಲಕ ಹರಿಶ್ಚಂದ್ರನು ತನಗೆ ಬಂದ ಹೀನಗತಿಯನ್ನು ಹೇಳಿಕೊಳ್ಳುತ್ತಾನೆ;

ಲೋಗರ ಮಗನನ್ ಇಕ್ಕೆ ನೆಲೆಯ ನೋಡಿದನ್= ಬೇರೆಯವರ ಮಗನನ್ನು ಬಲಿಕೊಟ್ಟು, ತಾನು ಇರಬೇಕಾದ ನೆಲೆಯನ್ನು ನೋಡಿದನು.ಈ ಗಾದೆಯ ತಿರುಳನ್ನು ಸೂಚಿಸುವ 'ಬಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳವನ್ನು ನೋಡಿದರು' ಎಂಬ ಗಾದೆಯು ಜನರ ನಿತ್ಯಜೀವನದ ಮಾತುಕತೆಗಳಲ್ಲಿ

ಬಳಕೆಯಾಗುತ್ತಿದೆ; **ಅಕಟ... ಸಾಗುದುರೆಗೆ ಹುಲ್ಲನ್ ಅಡಕಿದನು**=ಅಯ್ಯೋ... ಇನ್ನೇನು ಸಾಯುತ್ತಲಿರುವ ಕುದುರೆಯ ಮುಂದೆ ರಾಶಿ ರಾಶಿ ಹುಲ್ಲನ್ನು ಸುರಿದನು; ಅಂದರೆ ಹರಿಶ್ಚಂದ್ರನು ತನ್ನ ಮಗನ ಉಳಿವಿಗೋಸ್ಕರ ಬೇರೆಯವರ ಮಗನನ್ನು ಬಲಿಕೊಟ್ಟರೂ, ಕೊನೆಗೆ ಈತನ ಮಗನೂ ಉಳಿಯಲಿಲ್ಲ ಎಂಬ ತಿರುಳಿನಲ್ಲಿ ಬಳಕೆಗೊಂಡಿದೆ; **ಒಣಗಿದ ಹಣ್ಣ ಕಾಗೆ ಕದುಕಿತ್ತು ಎಂದು**=ರಸ ಹಿಂಗಿಹೋಗಿ ಒಣಗಿಹೋಗಿರುವ ಹಣ್ಣನ್ನು ಕಾಗೆ ಕುಕ್ಕಿತು ಎಂಬ ಗಾದೆಯು ಮಾಡಿದ ಕೆಲಸದಿಂದ ಯಾವುದೇ ಪ್ರಯೋಜನವಾಗಲಿಲ್ಲ ಎಂಬ ತಿರುಳನ್ನು ಹೊಂದಿದೆ. ಅಂತೆಯೇ ಹರಿಶ್ಚಂದ್ರನು ವರುಣ ದೇವನಿಗೆ ಕೊಟ್ಟ ಮಾತಿನಂತೆ ಮಗನನ್ನು ಯಾಗದಲ್ಲಿ ಬಲಿಕೊಡದೆ ಉಳಿಸಿಕೊಳ್ಳಲು ಮಾಡಿದ ಕುತಂತ್ರದಿಂದ ಲೋಹಿತಾಶ್ವನನ್ನು ಉಳಿಸಿಕೊಳ್ಳಲು ಆಗಲಿಲ್ಲವೆಂದು;

ಸಂದ ಜನ ನಿಂದೆಗೆಯ್ವ ಅಂದವಾಯ್ತು ಎನಗೆ=ನನ್ನನ್ನು ಬಲ್ಲ ಪ್ರಜೆಗಳು ನಿಂದೆಯನ್ನು ಮಾಡುವ ರೀತಿಯಾಯ್ತು ನನ್ನ ಬಾಳು; **ಸುತನ ರೂಪಿನ ಸೊಬಗನ್**=ಮಗನ ರೂಪಿನ ಚೆಲುವನ್ನು; **ಅಂಗಸುಕುಮಾರದ ಉನ್ನತಿಯ**= ಅವನ ಅಂಗದ ಕೋಮಲತೆಯ ಹಿರಿಮೆಯನ್ನ; **ಬಾಲ್ಯದ ಚೆಲುವನ್**=ಬಾಲ್ಯದ ಅಂದಚೆಂದ ಆಟವನ್ನು; **ಎಲ್ಲಾ ಕಳಾಪ್ರವೀಣತೆಯ**=ಎಲ್ಲಾ ಬಗೆಯ ಕಲೆಯ ಚತುರತೆಯನ್ನು; **ಗುರುವಿಕೆಯ**=ದೊಡ್ಡತನದ **ನಡೆನುಡಿಯನ್ನು; ಗಾಡಿಯ**= ಚೆಲುವನ್ನು; **ಧೃತಿಯನ್**=ಕೆಚ್ಚನ್ನು; **ಒಟ್ಟಜೆಯನ್**=ಪರಾಕ್ರಮವನ್ನು; **ಅಳವಟ್ಟ ನುಡಿಯ ಚದುರ**=ಜೀವನದಲ್ಲಿ ಅಳವಡಿಸಿಕೊಂಡ ಮಾತಿನ ಕುಶಲತೆಯನ್ನು; **ನುತಲಕ್ಷಣಾವಳಿಯನ್**=ಕೊಂಡಾಡುವಂತಹ ಒಳ್ಳೆಯ ನಡೆನುಡಿಗಳನ್ನು; **ಅಧಿಕ ಗುಣಗಣವನ್**=ದೊಡ್ಡದಾದ ಗುಣಗಳನ್ನು; **ಆಯತಿಗೆಟ್ಟು ನೆನೆದು ಶೋಕಿಪೆನ್ ಎಂದಡೆ ಆ ಕಲ್ಪಶತ ಎಯ್ದದು**=ವ್ಯಾಪ್ತಿಯನ್ನು ಮೀರಿ ನೆನೆಸಿಕೊಂಡು ಶೋಕಿಸುತ್ತೇನೆ ಎಂದರೆ ನೂರು ಯುಗಗಳಾದರೂ ಸಾಲದು; **ಅರಸ, ದುಃಖವನು ಸಂತೈಸಿಕೊಂಡು ಎನ್ನನ್ ಅವಧರಿಸು**= ಅರಸ, ಪುತ್ರಶೋಕವನ್ನು ಸಹಿಸಿಕೊಂಡು ನಾನು ಹೇಳುವ ಮಾತುಗಳನ್ನು ಕೇಳು;

ಪುದಿದ ಇರುಳು ಕಡೆಗಾಣ್ಬ ಕುರುಹು ಆಗುತಿದೆ=ಕವಿದಿದ್ದ ಇರುಳು ಮುಗಿಯುವ ಕುರುಹು ಆಗುತ್ತಿದೆ; **ಸೂರ್ಯನ್ ಉದಯಿಸಿದನಾದಡೆ ಎನ್ನವರ್ ಎನ್ನನ್ ಅರಸಿ ತಳುವಿದಳ್ ಎಂದು ಕೊಲ್ಲದೆ ಇರರ್**=ಸೂರ್ಯನು ಹುಟ್ಟಿಬಂದ ಕೂಡಲೇ ನನ್ನ ಒಡೆಯನ ಕಡೆಯವರು ನನ್ನನ್ನು ಹುಡುಕಿಕೊಂಡು ಬಂದು ನೋಡಿ, ಮನೆಗೆಲಸಕ್ಕೆ ಬರಲು ತಡಮಾಡಿದಳು ಎಂದು ಕೊಲ್ಲದೆ ಇರುವುದಿಲ್ಲ; **ಅರಸ, ಈ ಕುಮಾರನನ್ ಈಗ ದಹಿಸಬೇಕು ಎಂದು ಸುದತಿ ನುಡಿಯಲು**=ಅರಸ,

ಈ ನಮ್ಮ ಮಗನನ್ನು ಈಗ ಸುಡಬೇಕು ಎಂದು ಚಂದ್ರಮತಿಯು ಹೇಳಲು; **ಅವನೀಶ ನುಡಿದನ್**=ಹರಿಶ್ಚಂದ್ರನು ಅವಳ ಮಾತಿಗೆ ಈ ರೀತಿ ಉತ್ತರಿಸಿದನು; **ತೆರೆಯನಿಕ್ಕದೆ ಸುಡಲ್ ಬಾರದು. ಉಳ್ಳಡೆ ಕೊಡು. ಇಲ್ಲದಡೆ ಬೇಗದಿ ಹೋಗಿ ನಿನ್ನ ಒಡೆಯನನ್ ಬೇಡಿ ತಾ. ತಾರದಿರೆ ಸುಡಲ್ ಬೇಡ**=ಹೆಣ ಸುಡಲು ಕೊಡಬೇಕಾದ ತೆರಿಗೆಯನ್ನು ಕೊಡದಿದ್ದರೆ ಸುಡುವುದಕ್ಕಾಗುವುದಿಲ್ಲ. ಇದ್ದರೆ ಕೊಡು. ಇಲ್ಲದಿದ್ದರೆ ಬೇಗ ಹೋಗಿ ನಿನ್ನ ಒಡೆಯನನ್ನು ಬೇಡಿ ಪಡೆದು ತರುವುದು. ತೆರಿಗೆಯ ಹಣವನ್ನು ತರುವುದಕ್ಕೆ ಆಗದಿದ್ದರೆ ಸುಡಲು ಆಗುವುದಿಲ್ಲ; **ಒಡೆಯರ್ ಈವವರಲ್ಲ**=ಒಡೆಯರು ಕೊಡುವವರಲ್ಲ;

ಬೇಡಿ ನೋಡಿ ಕೊಡದಡೆ, ಋಣಂಬಡು= ಬೇಡಿ ನೋಡು. ಕೊಡದಿದ್ದರೆ ಸಾಲಮಾಡು; **ಹುಟ್ಟದಿರ್ದಡೆ ಸುಡುವ ಗೊಡವೆ ಬೇಡ**=ಸಾಲ ಸಿಗದಿದ್ದರೆ ಸುಡುವ ಚಿಂತೆಯೇ ಬೇಡ; **ಅನ್ನೆಗಮ್ ಬಂದನಿತು ಬಕ್ಕೆ ಎಂದು**=ಅಲ್ಲಿಯ ತನಕ ಹೆಣವನ್ನು ಸುಡುವುದಕ್ಕೆ ಕೊಡಬೇಕಾಗಿರುವ ತೆರಿಗೆಯ ವಸ್ತುಗಳಲ್ಲಿ ಬಂದಷ್ಟು ಬರಲಿ ಎಂದು ನುಡಿದು; **ತರುಣನ್ ಉಟ್ಟುದನು ಪೊಡವೀಶ್ವರನ್ ಕೊಂಡು**=ಲೋಹಿತಾಶ್ವನು ತೊಟ್ಟಿದ್ದ ಬಟ್ಟೆಯನ್ನು ಸುಡುಗಾಡಿನ ಕಾವಲುಗಾರನಾದ ಹರಿಶ್ಚಂದ್ರನು ಬಿಚ್ಚಿ ತೆಗೆದುಕೊಂಡು; **ಅತ್ತಲ್ ತಿರುಗಿ ತನ್ನ ಕಾಪಿನ ಗುಡಿಗೆ ನಡೆಗೊಂಡನ್**= ಹಿಂತಿರುಗಿ ತನ್ನ ಕಾವಲಿನ ಗುಡಿಸಲಿನತ್ತ ಹೊರಟನು;

❖

ಪ್ರಸಂಗ–೨೪

ಚಂದ್ರಮತಿಯ ಮೇಲೆ ಕೊಲೆಯ ಆರೋಪ

ಇತ್ತಲ್ ಪುರಕೆ ಬರುತಿಪ್ಪ ಮಡದಿಗೆ ಎಡೆವಟ್ಟೆಯೊಳು ಬಂದ ಸಂಕಟವನ್ ಇನ್ನಾವ ಜೀವರು ಕೇಳ್ವರು=ಈ ಕಡೆ ಸುಡುಗಾಡಿನಲ್ಲಿ ಕೊಡಬೇಕಾದ ತೆರಿಗೆಯ ಹಣವನ್ನು ಸಾಲವಾಗಿ ಪಡೆದು ಬರಲೆಂದು ಕಾಶಿ ನಗರದತ್ತ ಬರುತ್ತಿರುವ ಚಂದ್ರಮತಿಗೆ ದಾರಿಯ ನಡುವೆ ಉಂಟಾದ ಸಂಕಟವನ್ನು ಯಾವ ಜೀವರು ತಾನೆ ಕೇಳುವುದಕ್ಕೆ ಆಗುತ್ತದೆ. ಅಂದರೆ ಅವಳ ಬಂದೊದಗಲಿರುವ ಸಂಕಟವು ಬಹು ದೊಡ್ಡದೆಂದು ಕವಿಯು ಉದ್ಗರಿಸುತ್ತಿದ್ದಾನೆ; **ಮುಂದೆ ಭೂಪನ ಸತಿಗೆ ಉಪದ್ರವಮ್ ಮಾಡಬೇಕೆಂದು ಕೌಶಿಕ ಮುನೀಂದ್ರನ್ ನೆನೆದು ಚಿಂತಿಸುತ್ತ ಒಂದು ಉಪಾಯಮ್ ಕಂಡು**=ಕಾಶಿನಗರದತ್ತ ಬರುತ್ತಿರುವ ಚಂದ್ರಮತಿಗೆ ಕಾಟವನ್ನು ಕೊಟ್ಟು ಅಡ್ಡಿಯನ್ನುಂಟುಮಾಡಬೇಕೆಂದು ವಿಶ್ವಾಮಿತ್ರ ಮುನಿಯು ಮತ್ತೊಂದು ಸಂಚನ್ನು ನೆನೆದು ಆಲೋಚಿಸುತ್ತ;

ಚೋರರಮ್ ಕೆಲಬರಮ್ ನಿರ್ಮಿಸುತ ಅವರ್ಗೆ ಎಂದನು=ತನ್ನ ಮಾಯಾಶಕ್ತಿಯಿಂದ ಕೆಲವು ಕಳ್ಳರನ್ನು ಹೊಸದಾಗಿ ರೂಪಿಸಿ, ಅವರಿಗೆ ಈ ರೀತಿ ಆದೇಶವನ್ನು ನೀಡಿದನು; **ಇಂದು ನೀವ್ ಈ ಪುರವನ್ ಆಳ್ವ ಅರಸನ ಅಣುಗನನ್ ಕೊಂದು, ಆಕೆ ಬಪ್ಪ ಬಟ್ಟೆಯೊಳಿರಿಸಿ ಬನ್ನಿ ಹೋಗಿ ಎಂದು ಬೆಸಸಲು**=ಈಗ ನೀವು

ಈ ಪುರವನ್ನು ಆಳುತ್ತಿರುವ ಅರಸನ ಮಗನನ್ನು ಕೊಂದು, ಚಂದ್ರಮತಿಯು ಬರುತ್ತಿರುವ ದಾರಿಯಲ್ಲಿ ಹೆಣವನ್ನು ಇಟ್ಟು ಬನ್ನಿ ಎಂದು ಅಪ್ಪಣೆ ಮಾಡಲು; **ಯತಿಪನ ಆಜ್ಞೆಯಿಂದ ಅವದಿರ್ ಎಯ್ತಂದು ಪೊಳಲಮ್ ಸಾರ್ದರು**= ಮುನಿಯ ಆಜ್ಞೆಯಂತೆ ಆ ಕೊಲೆಗಡುಕರು ಬಂದು ಕಾಶಿನಗರದ ಒಳಹೊಕ್ಕರು; **ಚೋರರ್ ಒಳಪೊಕ್ಕು ಮಿಕ್ಕು ಆ ಪುರದ ಭೂಪನ ಕುಮಾರನನ್ ಕಂಡು ಓಡಿಬಂದು**= ಕೊಲೆಗಡುಕರು ಅರಮನೆಯ ಒಳನುಗ್ಗಿ ಮುನ್ನಡೆದು, ಕಾಶಿ ನಗರದ ರಾಜನ ಮಗನನ್ನು ಕಂಡು, ರಾಜಕುಮಾರನನ್ನು ಅಪಹರಿಸಿಕೊಂಡು ಅರಮನೆಯಿಂದ ಹೊರಕ್ಕೆ ಓಡಿಬಂದು;

ಗೊಂದಿಯೊಳ್ ಅಲಂಕಾರಮಮ್ ಕೊಂಬ ಭರದಿನ್ ಕೊರಳನ್ ಅರಿಯಲ್= ನಗರದ ಸಂಧಿಯಲ್ಲಿ ಜನರ ಕೊರಳಿನಿಂದ ಬೆಲೆಬಾಳುವ ಒಡವೆಯನ್ನು ರಭಸದಿಂದ ಕಿತ್ತುಕೊಳ್ಳುವಂತೆ, ಕಾಶಿನಗರದ ಬೀದಿಯಲ್ಲಿ ಅರಸನ ಮಗನ ಕೊರಳನ್ನು ಒಂದೇ ಏಟಿಗೆ ಕತ್ತರಿಸಲು; **ಆ ಶಿಶು ಒರಲಲ್**=ಆ ಮಗುವು ನೋವಿನಿಂದ ಕೂಗಿಕೊಳ್ಳಲು; **ಆ ದನಿಯನು ದೂರದಿಮ್ ಕೇಳ್ದು**=ಮಗುವಿನ ಆಕ್ರಂದನ ದನಿಯನ್ನು ದೂರದಿಂದಲೇ ಕೇಳಿದ ಚಂದ್ರಮತಿಯು; **ಓಜೆ ಹುಟ್ಟದ ಅವಿಚಾರ**=ವಿವೇಕವನ್ನು ಕಳೆದುಕೊಂಡ ವಿಚಾರ/ಚಿಂತನೆ; **ಎನ್ನ ಮಗನಾಗದಿರನ್**=ಕಿರುಚುತ್ತಿರುವ ಕಂದ ನನ್ನ ಮಗನಾಗದೇ ಇರಲಾರ. ಅಂದರೆ ಆತ ನನ್ನ ಮಗನೇ; **ಆರೋ ನಿರೋಧಿಸುವರ್ ಎಂದು ಓಜೆ ಹುಟ್ಟದ ಅವಿಚಾರದಿಮ್ ಹರಿದಳ್ ಎಂಬಾಗಳ್**=ಯಾರೋ ತಡೆದು ತೊಂದರೆ ಕೊಡುತ್ತಿದ್ದಾರೆ ಎಂದು ವಿವೇಕವಿಲ್ಲದೆ ತಪ್ಪಾಗಿ ಭಾವಿಸಿಕೊಂಡು, ಗೋಳಿನ ದನಿ ಕೇಳಿಬಂದ ಕಡೆಗೆ ನುಗ್ಗಿದಳು ಎನ್ನುವಾಗ; ಈ ರೀತಿ ಚಂದ್ರಮತಿಯು ಗೋಳಿನ ಧ್ವನಿಯ ಕೇಳಿ ಬಂದ ಕಡೆಗೆ ಹೋಗುವಾಗ, ಸುಡುಗಾಡಿನಲ್ಲಿ ತನ್ನ ಮಗ ಲೋಹಿತಾಶ್ವನು ಹೆಣವಾಗಿ ಬಿದ್ದಿರುವುದನ್ನೇ ಮರೆತಿದ್ದಾಳೆ;

ಜಗವರಿಯಲು ಅತಿದುಃಖಿಗೆ ಉಂಟೇ ಬುದ್ಧಿ=ಅತಿ ಸಂಕಟದಲ್ಲಿರುವವರಿಗೆ ಸರಿಯಾದ ಆಲೋಚನಾ ಶಕ್ತಿಯಾಗಲಿ ಇಲ್ಲವೇ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುವ ವಿವೇಕವಾಗಲಿ ಇರುವುದಿಲ್ಲ ಎಂಬುದು ಜಗತ್ತಿನಲ್ಲಿ ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ ಎಂದು ಕವಿಯು ಉದ್ಗಾರವೆಳೆದಿದ್ದಾನೆ; **ಸಾರೆ ಬರೆ**=ಚಂದ್ರಮತಿಯು ಕೊಲೆಗಡುಕರ ಬಳಿಗೆ ಓಡೋಡಿ ಬರುತ್ತಿದ್ದಂತೆಯೇ; **ಬಿಟ್ಟೋಡಿ ಹೋದ ಚೋರರ ಖಡ್ಗ ಧಾರೆಯಿಮ್ ಬಸವಳಿದ ಹಸುಳೆಯನ್ ತನ್ನಯ ಕುಮಾರನೆಂದೇ ಬಗೆದು**=ಬಿಟ್ಟು ಓಡಿಹೋದ ಕೊಲೆಗಡುಕರ ಕತ್ತಿಯ ಪೆಟ್ಟಿನಿಂದ ಗಾಸಿಗೊಂಡಿದ್ದ ರಾಜಕುಮಾರನನ್ನು ತನ್ನ ಮಗನೆಂದೇ

ಚಂದ್ರಮತಿಯು ನಂಬಿಕೊಂಡು; **ಕರೆಕರೆದು ತಲೆದಡವಿ ತಡವರಿಸಿ ಮೆಯ್ ಕುರುಹನು ಹಾರುತಿರೆ**=ಲೋಹಿತಾಶ್ವ... ಲೋಹಿತಾಶ್ವ ಎಂದು ಮತ್ತೆ ಮತ್ತೆ ಕರೆಯುತ್ತ, ಅರಸನ ಮಗನ ತಲೆಯನ್ನು ಮುಟ್ಟಿ ನೇವರಿಸುತ್ತ, ತನ್ನ ಮಗನ ಮಯ್ಯ ಗುರುತನ್ನು ಅವನಲ್ಲಿ ಕಾಣಲು ತಡಕಾಡುತ್ತಿರಲು; **ಬೊಂಬುಳಿ**=ಒಂದು ಬಗೆಯ ಚರ್ಮ ವಾದ್ಯ; **ಕೊಂಬು**=ಕಹಳೆ; **ಭೇರಿ**=ನಗಾರಿ;

ಬಾರಿಸುವ ಬೊಂಬುಳಿಯ ಕೊಂಬುಗಳ ಭೇರಿಗಳ ಬೊಬ್ಬೆಗಳ ಕಳಕಳದೊಳ್ ಅರಸಿ ಬಂದು ಆರುತ್ತ ಹರಿತಂದ ಹಿರಿಯ ಹುಯ್ಯಲ ಭಟರು ಸತಿಯನು ಕಂಡು ಪಿಡಿದರು=ಅರಮನೆಯಿಂದ ಅಪಹರಣಗೊಂಡ ರಾಜಪುತ್ರನನ್ನು ಹುಡುಕಲೆಂದು ಕಾಶಿನಗರದ ಬೀದಿಬೀದಿಗಳಲ್ಲಿ ಬೊಂಬುಳಿಯ ಕಹಳೆಗಳ ನಗಾರಿಗಳ ಬಾರಿಸುತ್ತ, ಎತ್ತರದ ದನಿಯಲ್ಲಿ ಜೋರಾಗಿ ಕೂಗುತ್ತ ಬರುತ್ತಿರುವ ರಾಜಭಟರು ಚಂದ್ರಮತಿಯನ್ನು ನೋಡಿ, ಆಕೆಯನ್ನೇ ಕೊಲೆಗಡುಕಿಯೆಂದು ತಿಳಿದು ಹಿಡಿದು ಕೊಂಡರು; **ಎಲೆಲೆ ಇವಳು ರಕ್ಕಸಿಯಾಗದಿರಳ್**=ಎಲೆಲೆ ಇವಳು ರಕ್ಕಸಿಯಲ್ಲದೆ ಮಾನವಳಲ್ಲ; **ನಾವ್ ಇಲ್ಲಿ ಕೊಲಬೇಡವು**=ನಾವು ಇಲ್ಲಿ ಇವಳನ್ನು ಕೊಲ್ಲುವುದು ಬೇಡ; **ಈ ಅಂಗವೆರಸಿ ಕೊಂಡೊಯ್ದು ಭೂತಲಪತಿಗೆ ಕೊಡುವೆವು ಎಂದು**=ಈ ಮಗುವಿನ ಹೆಣದೊಡನೆ ಇವಳನ್ನು ಸೆರೆಹಿಡಿದು ರಾಜನಿಗೆ ಕೊಡುತ್ತೇವೆ ಎಂದು ರಾಜಭಟರು ತಮ್ಮಲ್ಲಿಯೇ ತೀರ್ಮಾನಿಸಿಕೊಂಡು;

ಅಸುವಳಿದ ಹಸುಳೆಯಮ್ ಹೊರಿಸಲಾಗ=ಜೀವವಿಲ್ಲದ ಮಗುವನ್ನು ಅವಳ ಮೇಲೆ ಹೊರಿಸಿದಾಗ; **ತಲೆಯಿಂದ ಒಸರ್ವ ರಕುತ ಸುರಿದು ಉಟ್ಟ** ಸೀರೆ **ತೊಪ್ಪನೆ ತೋಯೆ**=ಮಗುವಿನ ತಲೆಯಿಂದ ತೊಟ್ಟಿಕ್ಕುತ್ತಿರುವ ರಕುತ ಸುರಿದು, ಚಂದ್ರಮತಿಯು ಉಟ್ಟಿದ್ದ ಸೀರೆಯೆಲ್ಲವೂ ರಕ್ತದಿಂದ ಒದ್ದೆಯಾಗಲು; **ಲಲನೆಯನ್ ಹೆಡಗೈಯ ಬಲಿದ ನೇಣಮ್ ಪಿಡಿದು ಕಿತ್ತ ಅಲಗುಗಳ ನಡುವೆ ರಾಜಬೀದಿಯೊಳಗೆ ಜಡಿಜಡಿದು ನಡಸಿ ತಂದರು**=ಚಂದ್ರಮತಿಯ ಒಂದು ಕಯ್ಯನ್ನು ಹಿಂದಕ್ಕೆ ನುಲಿದು ಹಗ್ಗವನ್ನು ಬಿಗಿದು ಕಟ್ಟಿ, ಬಿಚ್ಚುಗತ್ತಿಗಳ ಪಹರೆಯಲ್ಲಿ ರಾಜಬೀದಿಗಳಲ್ಲಿ ನಿಂದಿಸುತ್ತ ರಾಜನ ಬಳಿಗೆ ಕರೆತಂದರು; **ಎನ್ನನ್ ಇವರ್ ಆಡಿಸದಡೆ ಏನನ್ ಆಡುವೆನ್ ಎಂದು ತನ್ನ ಮನದೊಳು ತಾನೆ ತಿಳಿದು ನಿಶ್ಚಯಿಸಿದಳು**=ನನ್ನನ್ನು ಇವರು ಕೇಳಿದರೆ ಏನನ್ನು ಹೇಳಲಿ ಎಂದು ಚಂದ್ರಮತಿಯು ತನ್ನ ಮನದಲ್ಲಿ ತಾನೇ ಚಿಂತಿಸಿ, ಒಂದು ನಿಲುವನ್ನು ತಳೆದಳು;

ಮುನ್ನ ಏಗಳ್ ಆವಾವ ದುಃಖವುಂಟು ಅವನ್ ಎಯ್ದೆ ಕಂಡೆನ್ ಉಂಡೆನು ತಣಿದೆನು. ಇನ್ನೇನ ಕಾಣಲಿರ್ದಪೆನ್. ಅರಸ, ಕೇಳಿದಡೆ ನಿನ್ನ ಮಗನನ್ ಕೊಂದ ಪಾಪಿ ಆನ್ ಎಂದಾಡಿ ಅನ್ಯಾಯದಿಮ್ ಸಾವೆನ್ ಎನುತ ಬರಲ್=ಈ ಮೊದಲು

ನನ್ನ ಜೀವನದಲ್ಲಿ ಈಗಾಗಲೇ ಮಾನವನ ಬದುಕಿನಲ್ಲಿ ಯಾವ ಯಾವ ಸಂಕಟಗಳುಂಟು, ಅವೆಲ್ಲವನ್ನೂ ಚೆನ್ನಾಗಿ ಕಂಡಿದ್ದೇನೆ; ಉಂಡಿದ್ದೇನೆ; ಸೋತು ಸುಣ್ಣವಾಗಿದ್ದೇನೆ. ಇದಕ್ಕಿಂತಲೂ ಕೆಟ್ಟದ್ದನ್ನು ಏನನ್ನು ತಾನೆ ಕಾಣಲಿರುವೆನು. ಅರಸ ಕೇಳಿದರೆ ನಿನ್ನ ಮಗನನ್ನು ಕೊಂದ ಪಾಪಿ ನಾನೇ ಎಂದು ಹೇಳಿ, ಅನ್ಯಾಯ ವಾಗಿಯೇ ಸಾವನ್ನು ಅಪ್ಪುತ್ತೇನೆ ಎಂದು ತೀರ್ಮಾನಿಸಿಕೊಂಡು ಬರುತ್ತಿರಲು; **ಓಲಗದ ಗಜಬಜವನ್ ಏನ್ ಪೊಗಳ್ವೆನು**=ರಾಜನು ಕರೆದಿದ್ದ ಓಲಗದಲ್ಲಿ ಕೇಳಿಬರುತ್ತಿರುವ ಗದ್ದಲವನ್ನು ಏನೆಂದು ವಿವರಿಸಲಿ ಎಂದು ಕವಿಯು ಉದ್ಗರಿಸಿದ್ದಾನೆ; ರಾಜನಿಗಾಗಲಿ ಇಲ್ಲವೇ ರಾಜನ ಒಡ್ಡೋಲಗದಲ್ಲಿದ್ದ ಸೇನಾಪಡೆಯವರಿಗಾಗಲಿ ಚಂದ್ರಮತಿಯನ್ನು ರಾಜಭಟರು ಹಿಡಿದುಕೊಂಡು ಬರುತ್ತಿರುವುದು ಇನ್ನೂ ತಿಳಿದಿಲ್ಲ. ಆದ್ದರಿಂದ ರಾಜನ ಒಡ್ಡೋಲಗದಲ್ಲಿದ್ದ ವರೆಲ್ಲರೂ ಆತಂಕ, ಆಕ್ರೋಶ ಮತ್ತು ಸಂಕಟವನ್ನು ವ್ಯಕ್ತಪಡಿಸುತ್ತಿದ್ದಾರೆ;

ಅಲ್ಲಿ ನೋಡು ಇಲ್ಲಿ ನೋಡು; ಅತ್ತ ಹರಿ ಇತ್ತ ಹರಿ; ತುರಗಮಮ್ ಹಲ್ಲಣಿಸು; ಕೈದುಗೊಳ್ಳು; ಊರಮನೆ ಎಲ್ಲವಮ್ ಸೋದಿಸುವುದು; ಊರ ದಾರಿಗಳಲ್ಲಿ ಕಂಡಿರಾದಡೆ ಕಳ್ಳರ ಕೊಲ್ಲು; ತಿದಿಯನ್ ಉಗಿ ಎಂಬ ಕಳಕಳರವದ ಘಲ್ಲಣೆಯ ಭಟರ ತಿಂತಿಣಿಯೊಳ್ ಓಲಗಮ್ ಕೊಟ್ಟು=ಅಲ್ಲಿ ನೋಡು ಇಲ್ಲಿ ಹುಡುಕು. ಅತ್ತ ಹೋಗು... ಇತ್ತ ಬಾ. ಕುದುರೆಗೆ ಜೀನನ್ನು ಹಾಕಿ ಸಿದ್ಧಪಡಿಸು. ಆಯುಧವನ್ನು ಹಿಡಿದುಕೊಳ್ಳಿರಿ. ಊರಿನ ಮನೆಗಳೆಲ್ಲವನ್ನು ಹೊಕ್ಕು ರಾಜಪುತ್ರನನ್ನು ಹುಡುಕಿರಿ. ಊರ ದಾರಿಗಳಲ್ಲಿ ಅಪಹರಣಕಾರರು ನೋಡಿದರೆ ಕೂಡಲೇ ಕೊಲ್ಲಿರಿ. ಅಪಹರಣಕಾರರ ಚರ್ಮವನ್ನು ಸುಲಿಯಿರಿ ಎಂದು ಭಯಂಕರವಾಗಿ ಕೂಗುತ್ತಿರುವ ರಾಜಭಟರ ಗುಂಪಿನಲ್ಲಿ ರಾಜನು ಪ್ರಜಾ ನೇತಾರರ ಸಭೆಯನ್ನು ಕರೆದು; **ಉಪ್ಪರಿಗೆ ಜಡಿದು ಅಲ್ಲಾಡುವಂತೆ ಕೋಪಾಗ್ನಿ ರೂಪಾದ ಭೂಪನಿರಲು**= ಮಹಡಿಯ ಅಂತಸ್ತುಗಳಿಂದ ಕೂಡಿದ ಅರಮನೆಯೇ ಅಲ್ಲಾಡುವಂತೆ ಕೋಪೋದ್ರೇಕದಿಂದ ರಾಜನು ಇರಲು; 'ಉಪ್ಪರಿಗೆ ಜಡಿದು ಅಲ್ಲಾಡುವಂತೆ' ಎಂಬ ನುಡಿಗಳು ರಾಜನ ಕೋಪದ ತೀವ್ರತೆಯನ್ನು ಸೂಚಿಸುವ ರೂಪಕದ ತಿರುಳಿನಲ್ಲಿ ಬಳಕೆಗೊಂಡಿವೆ;

ಅವಧರಿಸು, ಹಸುಳೆಯನ್ ಕದ್ದು ಕೊಂಡೊಯ್ದು ನೋಯಿಸಿದ ರಕ್ಕಸಿಯ ಹಿಡಿತಂದೆವು ಎನಲು=ಅರಸರೇ ಕೇಳಿರಿ, ಮಗುವನ್ನು ಕದ್ದು ತೆಗೆದುಕೊಂಡು, ಹೋಗಿ ಜೀವವನ್ನು ತೆಗೆದ ರಕ್ಕಸಿಯನ್ನು ಹಿಡಿದುತಂದಿದ್ದೇವೆ ಎಂದು ರಾಜಭಟರು ಅರಿಕೆ ಮಾಡಿಕೊಂಡರು; **ಕಂಡು ಶಂಕಿಸುತ ನೀನಾರ್ ಎತ್ತಣವಳ್ ಸುಕುಮಾರಕನನ್ ಏಕೆ ಕೊಂದೆ ಎಂದು ಅರಸನ್ ಬೆಸಗೊಳಲು**=ರಾಜಭಟರ

ಮಾತನ್ನು ಕೇಳಿ, ಚಂದ್ರಮತಿಯತ್ತ ನೋಡಿದ ರಾಜನು, ರಾಜಭಟರು ಮಾಡುತ್ತಿರುವ ಆಪಾದನೆಯ ಮಾತನ್ನು ನಂಬದೆ "ನೀನು ಯಾರು ಯಾವ ಊರಿನವಳು… ನನ್ನ ಮಗನನ್ನು ಏಕೆ ಕೊಂದೆ" ಎಂದು ಕೇಳಲು;

ಆನ್ ದನುಜೆಯಲ್ಲ. ಆನ್ ಮನುಜೆ. ಅರ್ಥ ವಿಷಯದ ಅಪೇಕ್ಷೆಯಿಮ್ ಈ ಸಿಸುವ ಕೊಂಡೊಯ್ದು ಕೊಂದೆನ್. ಎನ್ನನ್ ನೀನ್ ಒಲಿದಂತೆ ಮಾಡು ಎಂದಳ್ ಆ ರಾಣಿ ವಸುಧಾಧಿಪತಿಗೆ=ಆಗ ಚಂದ್ರಮತಿಯು ತಾನು ಮೊದಲೇ ತೀರ್ಮಾನಿಸಿ ಕೊಂಡಿರುವಂತೆ ಕೊಲೆಯ ಆಪಾದನೆಯನ್ನು ತನ್ನ ಮಯ್ ಮೇಲೆ ಹಾಕಿ ಕೊಳ್ಳುತ್ತ "ನಾನು ರಕ್ಕಸಿಯಲ್ಲ. ನಾನು ಮಾನವಳು. ಸಂಪತ್ತನ್ನು ದೋಚಬೇಕೆಂಬ ದುರುದ್ದೇಶದಿಂದ ಈ ಮಗುವನ್ನು ಕೊಂಡೊಯ್ದು ಕೊಂದೆನು" ಎಂದು ರಾಜನ ಮಾತಿಗೆ ಉತ್ತರಿಸಿದಳು; **ಹೆದರದಿರು ತೆಕ್ಕದಿರು ಅಂಜದಿರು. ಹೇಳು, ಲೋಗರ್ ಇಟ್ಟುದೊ ನಿನ್ನ ಕೃತಕವೋ. ಧರ್ಮಾಧಿಕರಣದವರಮ್ ಕರಸುವೆನ್. ನುಡಿಸುವೆನ್. ಕಾವೆನ್ ಎಂದು ಅವನಿಪನ್ ಬೆಸಗೊಂಡಡೆ**="ಹೆದರಿಕೊಳ್ಳಬೇಡ. ನಿಜವಾಗಿ ನಡೆದುದು ಏನೆಂಬುದನ್ನು ಹೇಳಲು ಹಿಂಜರಿಯಬೇಡ ನಡುಗಬೇಡ. ಹೇಳು, ಬೇರೆ ಯಾರಾದರೂ ಕೊಲೆಯನ್ನು ಮಾಡಿ ನಿನ್ನ ಮೇಲೆ ಈ ರೀತಿ ಆಪಾದನೆಯನ್ನು ಹೊರಿಸುತ್ತಿದ್ದಾರೆಯೋ… ನೀನೇ ಕೊಲೆಮಾಡಿದೆಯೋ… ನ್ಯಾಯಾಧಿಪತಿಗಳನ್ನು ಕರೆಸುತ್ತೇನೆ. ಅವರಿಂದ ಈ ಪ್ರಕರಣವನ್ನು ವಿಚಾರಣೆ ನಡೆಸುತ್ತೇನೆ. ನೀನು ಕೊಲೆಯನ್ನು ಮಾಡದಿದ್ದರೆ ನಿನ್ನನ್ನು ಕಾಪಾಡುತ್ತೇನೆ" ಎಂದು ರಾಜನು ವಿವರವಾಗಿ ಹೇಳಲು;

ಇದಕೆ ಇನ್ನು ಧರ್ಮಾಧಿಕರಣ ಏಗುವುದು. ಕೊಂದುದು ದಿಟಮ್. ಸತ್ತ ಶಿಶು ಕೈಯಲಿದೆ. ಇದಕೆ ತಕ್ಕುದನ್ ಈಗ ಕಾಂಬುದು ಎಂದು ಜೀವದಾಸೆಯನ್ ಏನುವಮ್ ಹಾರದೆ ಆಡಿದಳು=ಕೊಲೆಪಾತಕಿಯಾದ ನಾನೇ ಒಪ್ಪಿಕೊಳ್ಳುತ್ತಿರುವಾಗ ಇದರಲ್ಲಿ ನ್ಯಾಯಾಸ್ಥಾನ ಏನು ತಾನೆ ಮಾಡುವುದು. ಕೊಂದುದು ನಿಜ. ಸತ್ತ ಮಗು ನನ್ನ ಕಯ್ಯಲ್ಲಿದೆ. ಇದಕ್ಕೆ ತಕ್ಕ ದಂಡನೆಯನ್ನು ವಿಧಿಸುವುದು ಎಂದು ಜೀವದ ಆಸೆಯನ್ನು ತುಸುವಾದರೂ ಬಯಸದೆ ಚಂದ್ರಮತಿಯು ನುಡಿದಳು; ರಾಜನ ಒಡ್ಡೋಲಗದಲ್ಲಿದ್ದ ಸಭಿಕರಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ರಾಜನ ತಾಳ್ಮೆಯಿಂದ ಕೂಡಿದ ಉದಾರಗುಣವನ್ನು ಒಪ್ಪದೆ, ಚಂದ್ರಮತಿಗೆ ದಂಡನೆಯನ್ನು ಕೊಡುವಂತೆ ಒತ್ತಾಯ ಮಾಡತೊಡಗುತ್ತಾರೆ; **ಕೊಂದೆ ಕೊಂದೆನ್ ಕೊಂದೆನ್ ಎಂದು ತನ್ನಿಂದ ತಾನೆ ಎಂದಡೆ, ಇನ್ನೇಕೆ ಲೋಕದ ಮಾತು**=ಕೊಂದೆ ಕೊಂದೆನು ಕೊಂದೆನು ಎಂದು ಆಕೆಯೇ ಹೇಳುತ್ತಿರುವಾಗ, ಇನ್ನೇಕೆ ನ್ಯಾಯ ಪಂಚಾಯಿತ್ತಿಯ ಮಾತು;

ಕೊಂದರಮ್ ಕೊಂದು ಕಳೆವುದೆ ಧರ್ಮ=ಕೊಲೆ ಮಾಡಿದವರನ್ನು ಕೊಂದು ನಾಶಮಾಡುವುದೇ ಧರ್ಮ; **ಜಗವರ್ತಿಯಮ್ ಹೊತ್ತಿಸು**=ದೊಡ್ಡ ಉರಿಯನ್ನು ಹಾಕಿಸಿ, ಇವಳನ್ನು ಬೆಂಕಿಗೆ ಹಾಕಿಸು; **ಎಳೆಹೂಟೆಯಮ್ ಹೂಡಿಸು**=ಹಲಬೆಯ ನೊಗಕ್ಕೆ ಇವಳನ್ನು ಬಿಗಿದು ಕಟ್ಟಿ ದನದಂತೆ ಇವಳಿಂದ ಎಳೆಸು; **ಸಂದುಸಂದಮ್ ಕಡಿಸು**=ಇವಳ ಇಡೀ ದೇಹವನ್ನು ಗಿಣ್ಣುಗಿಣ್ಣುಗೂ ಕತ್ತರಿಸು; **ಕಿವಿಮೂಗನ್ ಅರಿ**=ಕಿವಿ ಮೂಗನ್ನು ಕತ್ತರಿಸು; **ಬಹಳದಿಂದ ತಿವಿ**=ಈಟಿ ಭರ್ಜಿಗಳಿಂದ ಜೋರಾಗಿ ತಿವಿಸು; **ಎಂದು ಒಬ್ಬರ್ ಒಂದೊಂದನ್ ಎಂದುದು ಆ ಮಂದಿ ತನತನಗೆ ನುಡಿಯುತ್ತಿರಲು**=ಒಡ್ಡೋಲಗದಲ್ಲಿ ಪ್ರಜೆಗಳು ಒಬ್ಬರು ಒಂದೊಂದು ಬಗೆಯ ದಂಡನೆಯನ್ನು ಕೊಡುವಂತೆ ರಾಜನಲ್ಲಿ ಕೇಳಿಕೊಳ್ಳುವುದಲ್ಲದೆ, ತಮ್ಮ ತಮ್ಮಲ್ಲಿಯೇ ದಂಡನೆಯ ರೀತಿಯನ್ನು ಕುರಿತು ಮಾತನಾಡಿಕೊಳ್ಳುತ್ತಿರಲು;

ಅರಸನು ವೀರಬಾಹುಕನ ಕರಸಿದನ್=ಪ್ರಜೆಗಳ ಮಾತಿಗೆ ಮನ್ನಣೆಯನ್ನು ನೀಡುವಂತೆ ಅರಸನು ವೀರಬಾಹುಕನನ್ನು ಒಡ್ಡೋಲಗಕ್ಕೆ ಕರೆಸಿದನು;

ಭೂನುತ=ಭೂಮಂಡಲದಲ್ಲಿ ಹೊಗಳಿಕೆಗೆ ಪಾತ್ರನಾಗಿದ್ದ/ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ;

ಭೂನುತ ಕುಮಾರನನ್ ದಹಿಸಿ, ದೂವೆಯ ಕೆಲದೊಳ್ ಈ ನರಕಿ ವನಿತೆಯನ್ ಅನಾಮಿಕನ ಕಯ್ಯೊಳ್ ಅನುಮಾನವಿಲ್ಲದೆ ಕೊಲಿಸು ಹೋಗು ಎಂದು ವೀರಬಾಹುಕನ ಕೈಯಲಿ ಕಳುಹಲು=ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ ನನ್ನ ಮಗನನ್ನು ಸುಡುಗಾಡಿನಲ್ಲಿ ಸುಟ್ಟು, ಅವನ ಚಿತೆಯ ಬೂದಿಯ ಪಕ್ಕದಲ್ಲಿಯೇ ಈ ಕೆಟ್ಟ ಹೆಂಗಸನ್ನು ಚಂಡಾಲನ ಕಯ್ಯಲ್ಲಿ ಯಾವುದೇ ಹಿಂಜರಿಕೆಯಿಲ್ಲದೆ ಕೊಲ್ಲಿಸು.. ಹೋಗು ಎಂದು ಅರಸನು ಆಜ್ಞಾಪಿಸಿ, ಚಂದ್ರಮತಿಯನ್ನು ವೀರಬಾಹುಕನ ವಶಕ್ಕೆ ಒಪ್ಪಿಸಿ, ಕಳುಹಿಸಿದನು;

ಏನ್ ಎಂದುದಮ್ ಮಾಳ್ಪೆನ್ ಎಂದು ಸುಡುಗಾಡನ್ ಅತ್ಯಾನಂದದಿಮ್ ಕಾವ ಚಂದುಗನ ಕೈಯೊಳ್ ಈ ಹೀನವನಿತೆಯ ಕೊಲಿಸುವೆನ್ ಬೇಗ ಕರೆ ಎನಲ್ಕೆ=ವೀರಬಾಹುಕನು ರಾಜನ ಆಜ್ಞೆಯನ್ನು ಪಾಲಿಸಲು ಚಂದ್ರಮತಿಯನ್ನು ಸುಡುಗಾಡಿಗೆ ಕರೆದುಕೊಂಡು ಬಂದು ತನ್ನ ಹತ್ತಿರದಲ್ಲಿದ್ದ ದಾಸನೊಬ್ಬನಿಗೆ ಈ ರೀತಿ ಹೇಳುತ್ತಾನೆ. "ಒಡೆಯನಾದ ತಾನು ಏನು ಹೇಳಿದರೂ ಮಾಡುತ್ತೇನೆ ಎಂದು ನುಡಿದು ಸುಡುಗಾಡನ್ನು ಅತಿ ಆನಂದದಿಂದ ಕಾಯುತ್ತಿರುವ ಹರಿಶ್ಚಂದ್ರನ ಕಯ್ಯಲ್ಲಿ ಈ ಕೆಟ್ಟ ಹೆಂಗಸನ್ನು ಕೊಲ್ಲಿಸುತ್ತೇನೆ. ಅವನನ್ನು ಬೇಗ ಇಲ್ಲಿಗೆ ಬರುವಂತೆ ಕರೆ" ಎಂದು ಹೇಳಲು; **ಅರರೆ ಭೂಪನ್ ಬಂದನು**=ಅಬ್ಬಬ್ಬಾ ಕೂಡಲೇ ಹರಿಶ್ಚಂದ್ರನು ವೀರಬಾಹುಕನು ಇದ್ದ ಎಡೆಗೆ ಬಂದನು; **ವಸುಧಾಧಿಪತಿಯ**

ನೇಹದ ಮಗನ ಕೊಂದ ರಕ್ಕಸಿ ಇವಳನ್ ಆ ರುದ್ರಭೂಮಿಯೊಳಗೆ ಎಯ್ದೆ ತಪ್ಪಿಸದೆ ಕೊರಳಮ್ ಕೊರೆದು ಬಿಸುಡು ಎಂದು ಬೆಸನ ಕೊಡಲ್= "ಕಾಶಿರಾಜನ ಒಲವಿನ ಮಗನನ್ನು ಕೊಂದ ರಕ್ಕಸಿ ಇವಳನ್ನು, ಸುಡುಗಾಡಿನ ಆ ಎಡೆಯಲ್ಲಿ ಕಿಂಚಿತ್ತು ಕರುಣೆ ತೋರಿಸದೆ ಕೊರಳನ್ನು ಕತ್ತರಿಸಿ ಬಿಸಾಡು" ಎಂದು ಆಜ್ಞಾಪಿಸಲು;

ಮುಂದಲೆಯ ಅಡಸಿ ಪಿಡಿದು ಕುಸುಕಿ ಕೆಡೆಮೆಟ್ಟಿ ಕೈಗಳ ಸೇದಿ ಬೆಂಗೆ ಬಾಗಿಸಿ ಬಿಗಿದು ಹೆಡಗಯ್ಯ ನೇಣಿಂದ ಹೊಡೆದು ದಟ್ಟಿಸಿ=ಚಂದ್ರಮತಿಯ ಮುಂದಲೆಯನ್ನು ಬಿಗಿಯಾಗಿ ಒತ್ತಿ ಹಿಡಿದು, ಮುಡಿಯನ್ನು ಕೆಳಕ್ಕೆ ಅದುಮಿ, ಕೆಳಕ್ಕೆ ಬೀಳುವಂತೆ ತುಳಿದು, ಎರಡು ಕಯ್ಗಳನ್ನು ಎಳೆದು, ಬೆನ್ನಿನ ಹಿಂದಕ್ಕೆ ಕಟ್ಟಿ ಬಿಗಿದು, ಬಿಗಿದು ಕಟ್ಟಿದ ಆ ಹೆಡಗಯ್ಯ ಮೇಲೆ ಹಗ್ಗದಿಂದ ಹೊಡೆದು ಹೀಗಳೆಯುತ್ತ; **ಪಾಪಿ ಹೊಲತಿ, ನಡೆನಡೆ ಎಂದು ತನ್ನ ತವಗದ ಎಡೆಗೆ ನಡಸಿ ತಂದನ್**=ಪಾಪಿ ಹೊಲತಿಯೇ, ನಡೆ ನಡೆ ಎಂದು ಅಬ್ಬರಿಸುತ್ತ, ಸುಡುಗಾಡಿನಲ್ಲಿದ್ದ ಬಲಿಕೊಡುವ ಕಟ್ಟೆಯ ಕಡೆಗೆ ಚಂದ್ರಮತಿಯನ್ನು ಕರೆತಂದನು;

❖

ಪ್ರಸಂಗ–೨೫

ವಿಶ್ವೇಶ್ವರ ಸಾಕ್ಷಾತ್ಕಾರ

ವಿಶ್ವೇಶ್ವರ=ಈಶ್ವರ/ಕಾಶಿ ವಿಶ್ವನಾಥ; ಸಾಕ್ಷಾತ್ಕಾರ=ಕಣ್ಣಿಗೆ ಕಾಣಿಸುವುದು/ ಗೋಚರಿಸುವುದು; ವಿಶ್ವೇಶ್ವರ ಸಾಕ್ಷಾತ್ಕಾರ=ಕಾಶಿ ವಿಶ್ವನಾಥನ ದರ್ಶನ;

ಕುಲಜ=ಕುಲದಲ್ಲಿ ಹುಟ್ಟಿರುವವನು/ವಂಶಕ್ಕೆ ಸೇರಿದವನು; ಹೆಂದು=ಕುಗ್ಗು/ ಕುಂದು; ತರುಣೇಂದುಧರನ್=ಎಳೆಯ ಚಂದಿರನನ್ನು ಮುಡಿಯಲ್ಲಿ ಮುಡಿದವನು; **"ತರುಣೇಂದುಧರನಹ ವಿಶ್ವಪತಿ ಇಂದು ಎನ್ನ ಕುಲಜನ್ ಎನಿಸುವ ಹರಿಶ್ಚಂದ್ರನನ್ ಹೆಂದದ ಚತುರ್ದಶ ಜಗಂಗಳ್ ಅರಿವಂತು ಮೆರೆವ ಸಂಭ್ರಮದ ಸಡಗರವ ನೋಳ್ಪೆನ್"** ಎಂದು = **"**ಕಾಶಿ ವಿಶ್ವನಾಥನು ಈ ದಿನ ನನ್ನ ಕುಲದವನಾದ ಹರಿಶ್ಚಂದ್ರನನ್ನು ಬ್ರಹ್ಮಾಂಡದಲ್ಲಿ ಶಾಶ್ವತವಾಗಿರುವ ಹದಿನಾಲ್ಕು ಲೋಕಗಳು ತಿಳಿಯುವಂತೆ ಮೆರೆಸುವ ಸಂಭ್ರಮದ ಸಡಗರವನ್ನು ನೋಡುತ್ತೇನೆ**"** ಎಂದುಕೊಂಡು; **ಅಪವಿತ್ರ ತಿಮಿರಪಟಲ ಅಮಿತ್ರನು ಎಂದು ಎನಿಪನ್ ಅಂಬುಜಮಿತ್ರನ್**=ಕವಿದಿರುವ ಕತ್ತಲೆಗೆ ಹಗೆಯೆನಿಸಿರುವ ಸೂರ್ಯನು; **ಕುಂದದ ಉದ್ದವನ್ ಏರಿ ನಿಂದಿರ್ದನೋ ಎನಿಪ್ಪ ಅಂದದಿಂದ**=ಎಂದೆಂದಿಗೂ ಕುಗ್ಗದೆ ಎತ್ತರವಾಗಿ ಉದ್ದಕ್ಕೆ ಹಬ್ಬಿದ್ದ ಬೆಟ್ಟವನ್ನು ಹತ್ತಿ ನಿಂತಿದ್ದಾನೆಯೋ ಎನ್ನಿಸುವ

ರೀತಿಯಲ್ಲಿ; **ಉದಯಗಿರಿ ಶಿಖರಕ್ಕೆ ರಾಗದಿಮ್ ಬಂದನ್**=ಉದಯಗಿರಿಯ ತುತ್ತತುದಿಗೆ ಒಲವಿನಿಂದ ಬಂದನು; ಸೂರ್ಯೋದಯವನ್ನು ಒಂದು ರೂಪಕವಾಗಿ ಕವಿಯು ಚಿತ್ರಿಸುತ್ತ, ಇಂದು ಹರಿಶ್ಚಂದ್ರನ ಜೀವನಲ್ಲಿ ಒಳಿತನ್ನುಂಟುಮಾಡುವ ಬಹು ದೊಡ್ಡ ಪ್ರಸಂಗವೊಂದು ನಡೆಯುತ್ತದೆ ಎಂಬುದನ್ನು ಸೂಚಿಸುತ್ತಿದ್ದಾನೆ;

ಹೆಡಗಯ್ಯ ಬಿಗಿದ ನೇಣಮ್ ಕೊಯ್ದು ಬಿಸುಟು=ಬಲಿಕೊಡುವ ಕಟ್ಟೆಯ ಬಳಿಗೆ ಚಂದ್ರಮತಿಯನ್ನು ಕರೆತಂದ ಹರಿಶ್ಚಂದ್ರನು ಆಕೆಯ ಬೆನ್ನ ಹಿಂದೆ ಸೇರಿಸಿ ಬಿಗಿದಿದ್ದ ಕಯ್ಗಳ ಹಗ್ಗವನ್ನು ಕೊಯ್ದು ಬಿಸಾಡಿ; **ನಿಡುದಡದಲ್ಲಿ ಮೂಡ ಮುಂತಾಗಿ ಕುಳ್ಳಿರಿಸಿ**=ಎತ್ತರದ ದಿಣ್ಣೆಯ ಮೇಲೆ ಮೂಡಲು ದಿಕ್ಕಿಗೆ ಎದುರಾಗಿ ಕುಳ್ಳಿರಿಸಿ; **ಹಿಂದಡದಲ್ಲಿ ಕುಸಿದು ನೀಡಡಿಯಿಟ್ಟು ನಿಂದು**=ದಿಣ್ಣೆಯ ಹಿಂದೆ ಹರಿಶ್ಚಂದ್ರನು ತಾನು ತುಸು ಬಗ್ಗಿ ತನ್ನ ಒಂದು ಪಾದವನ್ನು ಮುಂದಕ್ಕೆ ಇಟ್ಟು ನಿಂತುಕೊಂಡು; **ಖಡ್ಗವ ಸೆಳೆದು ಜಡಿದು ನೋಡಿ**=ಕತ್ತಿಯನ್ನು ಒರೆಯಿಂದ ಹೊರಸೆಳೆದು ಒಮ್ಮೆ ಜಳಪಿಸಿ ನೋಡಿ; **ಹೆಡತಲೆಗೆ ಮೋಹಿ ಕೈಯೆತ್ತಿ**=ಚಂದ್ರಮತಿಯ ಹಿಂಬದಿಯ ತಲೆಗೆ ಗುರಿಯಿಡುವಂತೆ ಒಮ್ಮೆ ಕತ್ತಿಯನ್ನು ಅವಳ ಕುತ್ತಿಗೆಯ ಮೇಲಿಟ್ಟು, ಈಗ ಕತ್ತಿಯನ್ನು ಮೇಲೆತ್ತಿ;

ಕಂಧರ ಹರಿಯೆ ಹೊಡೆಯಲ್ ಅನುವಾದೆನ್ ಅನುವಾದೆನ್ ಅನುವಾಗು ಆಗು=ಕೊರಳು ಕತ್ತರಿಸಿ ಬೀಳುವಂತೆ ಹೊಡೆಯಲು ಸಿದ್ದನಾಗಿದ್ದೇನೆ ಸಿದ್ಧನಾಗಿದ್ದೇನೆ... ಜೀವವನ್ನು ಬಿಡಲು ಸಿದ್ಧಳಾಗು ಆಗು; **ಮಡದಿ, ನಿನ್ನ ದೈವವನು ಬಿಡದೆ ನೆನೆ**=ಎಲೆ ಹೆಂಗಸೇ ನಿನ್ನ ದೇವರನ್ನು ಮರೆಯದೆ ನೆನೆದುಕೊ; **ಎನ್ನೊಡೆಯನನ್ ಹರಸು ಹರಸು**=ನನ್ನ ಒಡೆಯನಾದ ವೀರಬಾಹುಕನಿಗೆ ಒಳಿತಾಗಲೆಂದು ಹಾರಯಿಸು; ಅಷ್ಟದೇಹಿ=ಶಿವ/ಕಾಶಿ ವಿಶ್ವನಾಥ;

ಆ ಹೊಯ್ದನ್ ಆ ಹೊಯ್ದನ್ ಎಲೆಲೆ ಶಿವಶಿವ ಅಷ್ಟದೇಹಿ ನೀನೇ ಶರಣು ಅಬಲೆಯನು ರಕ್ಷಿಸು=ಅದೋ ನೋಡಿ ಹೊಡೆದನು... ಅದೋ ನೋಡಿ ಹೊಡೆದನು... ಎಲೆಲೆ ಶಿವಶಿವ... ಶಿವನೇ ನೀನೇ ಗತಿ. ಚಂದ್ರಮತಿಯನ್ನು ಕಾಪಾಡು; **ದುರ್ಮೋಹಿ ಪಾಪಿ ವಿಶ್ವಾಮಿತ್ರ ಇನ್ನಾದಡಮ್ ಸತಿಯ ಕೊಲೆಯಮ್ ನಿಲಿಸಲು ಹೋಹುದೇನ್ ಎಂದು**=ಕೆಟ್ಟ ಹಟಸಾಧನೆಯಲ್ಲಿ ತೊಡಗಿರುವ ಪಾಪಿ ವಿಶ್ವಾಮಿತ್ರನು ಈಗಲಾದರೂ ಚಂದ್ರಮತಿಯ ಕೊಲೆಯನ್ನು ನಿಲ್ಲಿಸಲು ಹೋಗುವನೇನು ಎಂದು ಹಂಬಲಿಸುತ್ತ; **ಓವಿ ಬೇಡಿಕೊಳುತಮ್**=ಚಂದ್ರಮತಿಯನ್ನು ಕಾಪಾಡುವಂತೆ ಶಿವನನ್ನು ಪ್ರೀತಿಯಿಂದ ಬೇಡಿಕೊಳ್ಳುತ್ತ; **ಹೂಮಳೆ**=ಮಳೆಯ ನೀರು ಸುರಿಯುವಂತೆ ಹೂವುಗಳನ್ನು ಮೇಲಿನಿಂದ

ಸುರಿಸುವುದು/ಎರಚುವುದು; **ಸುರವ್ಯೂಹಮ್ ಅಂಬರದಲ್ಲಿ ಹೂಮಳೆಗಳಮ್ ಪಿಡಿದು ಮೋಹರಮ್ ಪೆತ್ತು ನೋಡುತ್ತಿರಲು**=ದೇವತೆಗಳ ಗುಂಪು ಆಕಾಶದಲ್ಲಿ ಹೂಮಳೆಯನ್ನು ಸುರಿಸಲೆಂದು ಗುಂಪುಗುಂಪಾಗಿ ನೆರೆದು ಸುಡುಗಾಡಿನಲ್ಲಿ ನಡೆಯುತ್ತಿರುವ ಪ್ರಸಂಗವನ್ನು ನೋಡುತ್ತಿರಲು;

ಹರಕೆಗಳನ್ ಅವಧರಿಸು ಎಂದಳು=ನಾನು ದೇವರಲ್ಲಿ ಕೇಳಿಕೊಳ್ಳುವ ಬಯಕೆಗಳನ್ನು ಕೇಳು ಎಂದಳು; **ಪದ್ಮಾಸನ**=ಯೋಗವನ್ನು ಮಾಡುವಾಗ ಕುಳಿತುಕೊಳ್ಳುವ ಒಂದು ಬಗೆ; **ಬಲಿದ ಪದ್ಮಾಸನಮ್**=ಯೋಗವನ್ನು ಮಾಡುವಾಗ ತಳೆಯುವ ಮನೋಬಲ; ಈಗ ಚಂದ್ರಮತಿಯು ಯೋಗಾಸನವನ್ನು ಹಾಕಲು ಆಗುವುದಿಲ್ಲ. ಏಕೆಂದರೆ ಈಗಾಗಲೇ ಅವಳ ಕೊರಳು ಬಲಿಪೀಠದಲ್ಲಿದೆ; **ಮುಗಿದ ಅಕ್ಷಿ**=ಮುಚ್ಚಿರುವ ಕಣ್ಣುಗಳು; **ಮುಚ್ಚಿದ ಅಂಜಲಿ ಬೆರಸಿ**=ಕಯ್ಗಳೆರಡನ್ನು ಜೋಡಿಸಿ; **ಗುರುವಸಿಷ್ಠಂಗೆ ಎರಗಿ**=ಗುರು ವಸಿಷ್ಠರಿಗೆ ಮನದಲ್ಲಿಯೇ ನಮಿಸಿ; **ಶಿವನ ನಿರ್ಮಲರೂಪ ನೆನೆದು**=ಶಿವನ ಪವಿತ್ರವಾದ ರೂಪವನ್ನು ನೆನೆದುಕೊಳ್ಳುತ್ತ; **ಮೇಲಮ್ ತಿರುಗಿ ನೋಡಿ**=ಆಕಾಶದ ಕಡೆಗೆ ಮೊಗವೆತ್ತಿ ನೋಡುತ್ತ;

ಭೂ ಚಂದ್ರ ಅರ್ಕ ತಾರಂಬರಮ್ ಕಲಿ ಹರಿಶ್ಚಂದ್ರರಾಯನ್ ಸತ್ಯವೆರಸಿ ಬಾಳಲಿ ಮಗನ್ ಮುಕ್ತನಾಗಲಿ ಮಂತ್ರಿ ನೆನದುದಾಗಲಿ ರಾಜ್ಯದ ಒಡೆಯ ವಿಶ್ವಾಮಿತ್ರ ನಿತ್ಯನಾಗಲಿ ಹರಕೆ ಹೊಡೆ ಎಂದಳು=ಭೂಮಿ ಚಂದ್ರ ಸೂರ್ಯ ನಕ್ಷತ್ರ ಮಂಡಲದಿಂದ ಕೂಡಿರುವ ಆಕಾಶವಿರುವ ತನಕ, ಶೂರನಾದ ಹರಿಶ್ಚಂದ್ರ ರಾಜನು ಸತ್ಯದ ನಡೆನುಡಿಯಿಂದ ಕೂಡಿ ಬಾಳಲಿ. ಮಗ ಲೋಹಿತಾಶ್ವನು ಜೀತದ ಸೆರೆಯಿಂದ ಬಿಡುಗಡೆಯನ್ನು ಹೊಂದಲಿ. ಮಂತ್ರಿಯು ರಾಜನ ಮತ್ತು ರಾಜ್ಯದ ಹಿತಕ್ಕಾಗಿ ನೆನೆದುದೆಲ್ಲವೂ ನೆರವೇರಲಿ. ರಾಜ್ಯದ ಒಡೆಯನಾದ ವಿಶ್ವಾಮಿತ್ರನು ಚಿರಂಜೀವಿಯಾಗಿರಲಿ. ದೇವರಲ್ಲಿ ಇದೇ ನನ್ನ ಕೋರಿಕೆ ಕೊರಳನ್ನು ಕತ್ತರಿಸು ಎಂದಳು;

ಹರಕೆಯಮ್ ಕೇಳಿ ಹವ್ವನೆ ಹಾರಿ ಬೆರಗಾಗಿ ಮರವಟ್ಟು ನಿಂದು=ಆ ಹೆಂಗಸಿನ ಹರಕೆಯನ್ನು ಕೇಳಿ ಹರಿಶ್ಚಂದ್ರನು ಬೆಚ್ಚಿಬಿದ್ದು ಅಚ್ಚರಿಗೊಂಡು ನಿಶ್ಚಲನಾಗಿ ನಿಂತುಕೊಂಡು; **ಭಾಪುರೆ**=ವ್ಯಕ್ತಿಯ ಮನಸ್ಸು ಅಚ್ಚರಿ ಇಲ್ಲವೇ ಗಾಸಿಗೊಂಡಾಗ ಬಾಯಿಂದ ಹೊರಬೀಳುವ ಉದ್ಗಾರದ ನುಡಿ; **ವಿಧಿ**=ಹುಟ್ಟಿದಾಗಲೇ ವ್ಯಕ್ತಿಯ ಜೀವನದಲ್ಲಿ ಏನೇನು ಆಗಬೇಕು ಎಂಬುದನ್ನು ದೇವರು ನಿರ್ಧರಿಸಿರುತ್ತಾನೆ. ದೇವರ ನಿರ್ಧಾರದಂತೆಯೇ ಒಳಿತು ಕೆಡುಕುಗಳೆಲ್ಲವೂ ವ್ಯಕ್ತಿಗೆ ಉಂಟಾಗುತ್ತವೆ. ಅದನ್ನು ತಪ್ಪಿಸಲು ಇಲ್ಲವೇ ತಿದ್ದಲು ಯಾರಿಂದಲೂ ಆಗುವುದಿಲ್ಲವೆಂಬ ಪರಂಪರಾಗತವಾದ ನಂಬಿಕೆಯು ಜನಮನದಲ್ಲಿ ನೆಲೆಯೂರಿದೆ; **ಭಾಪುರೆ**

ವಿಧಿಯ ಮುಳಿಸೆ=ತೀವ್ರವಾದ ಮಾನಸಿಕ ಗಾಸಿಗೆ ಒಳಗಾದ ಹರಿಶ್ಚಂದ್ರನು ತನಗೆ ಎದುರಾಗಿ ವಿಧಿಯು ಹೂಡುತ್ತಿರುವ ಸಂಚುಗಳನ್ನು ನೋಡಿ 'ಭಾಪುರೆ... ವಿಧಿಯ ಕೋಪವೇ' ಎಂದು ಸಂಕಟ ಮತ್ತು ವ್ಯಂಗ್ಯದಿಂದ ನುಡಿಯುತ್ತಾನೆ;

ಹೋದ ಇರುಳ್ ಎನ್ನ ಸುತನ ದುರ್ಮರಣಮಮ್ ತೋರಿ=ಕಳೆದ ರಾತ್ರಿ ನನ್ನ ಮಗನ ದುರಂತ ಮರಣವನ್ನು ತೋರಿ; **ಕೈಯೊಡನೆ ಮತ್ತೆ ಈಗಳ್ ಎನ್ನ ವರಸತಿಯ ತಲೆಯನ್ ಆನ್ ಎನ್ನ ಕೈಯಾರೆ ಪಿಡಿದು ಅರಿವಂತೆ ಮಾಡಿದೆ**=ಅದರ ಜತೆಜತೆಗೆ ಮತ್ತೆ ಈಗ ನನ್ನ ಹೆಂಡತಿಯ ತಲೆಯನ್ನು ನಾನೇ ನನ್ನ ಕಯ್ಯಾರೆ ಹಿಡಿದು ಕತ್ತರಿಸುವಂತಹ ಪ್ರಸಂಗವನ್ನು ತಂದೊಡ್ಡಿರುವೆ; **ಇದಕ್ಕೆ ನಾನ್ ಇನಿತು ಹೇವರಿಸುವವನಲ್ಲ**=ಈ ಕಗ್ಗೊಲೆಯನ್ನು ಮಾಡುವುದಕ್ಕೆ ನಾನು ತುಸುವೂ ಹಿಂಜರಿಯುವವನಲ್ಲ; **ಪತಿಯಾಜ್ಞೆ ಉಳಿದಡೆ ಸಾಕು ಎನುತ್ತ ಕೊಲಲ್ ಅನುವಾದನು**= "ಈ ಹೆಂಗಸಿನ ತಲೆಯನ್ನು ಕತ್ತರಿಸು" ಎಂದು ಹೇಳಿರುವ ನನ್ನ ಒಡೆಯನಾದ ವೀರಬಾಹುಕನ ಆಜ್ಞೆ ನೆರವೇರಿದರೆ ಸಾಕು ಎನ್ನುತ್ತ ಕೊಲ್ಲಲು ಸಿದ್ಧನಾದನು; **ಮನದ ಶಂಕೆಯನ್ ಅಳಿದು**=ಹರಿಶ್ಚಂದ್ರನು ತನ್ನ ಮನದಲ್ಲಿ ಉಂಟಾದ ತೊಳಲಾಟವನ್ನು ಹತ್ತಿಕ್ಕಿಕೊಂಡು; **ಹೊಡೆಯಲ್ ಅನುವಾದ ಭೂಪನ ಭಾವಮನ್ ವಿಶ್ವಾಮಿತ್ರನು ಕಂಡು**=ಕೊಲ್ಲಲು ಸಿದ್ಧನಾದ ಹರಿಶ್ಚಂದ್ರನ ಅಚಲವಾದ ನಿಲುವನ್ನು ವಿಶ್ವಾಮಿತ್ರನು ನೋಡಿ; **ಅಂಬರದೊಳಿದ್ದು**=ಆಕಾಶದ ಪ್ರಾಂತ್ಯದಲ್ಲಿ ನಿಂತುಕೊಂಡು;

ಕೇಳ್, ಹೊಡೆಯಬೇಡ ಎನ್ನ ನಂದನೆಯರನ್ ಮದುವೆಯಾದಡೆ ಸತ್ತ ಮಗನನ್ ಎತ್ತುವೆನ್...ಇವಳ ತಲೆಗಾವೆನು... ಕೊಂಡ ಧನಮಮ್ ವಿನಯದಿಮ್ ಕೊಟ್ಟು, ನಿನ್ನ ಬಂಧನಮೋಕ್ಷಮಮ್ ಮಾಡಿ ರಾಜ್ಯಮಮ್ ಪೊಗಿಸಿ ಮುನ್ನಿನ ಪರಿಯಲಿ ಇರಿಸುವೆನ್ ಎಂದನ್= "ಎಲೆ ಹರಿಶ್ಚಂದ್ರನೇ ನನ್ನ ಮಾತನ್ನು ಕೇಳು, ಕೊಲ್ಲಬೇಡ... ನನ್ನ ಹೆಣ್ಣುಮಕ್ಕಳನ್ನು ಮದುವೆಯಾದರೆ, ಸತ್ತಿರುವ ನಿನ್ನ ಮಗನನ್ನು, ಬದುಕಿಸುತ್ತೇನೆ. ನಿನ್ನ ಹೆಂಡತಿಯ ಜೀವವನ್ನು ಉಳಿಸುತ್ತೇನೆ. ನಿನ್ನಿಂದ ವಶಪಡಿಸಿಕೊಂಡಿರುವ ಸಂಪತ್ತೆಲ್ಲವನ್ನೂ ಉದಾರತೆಯಿಂದ ನಿನಗೆ ಕೊಟ್ಟು, ವೀರಬಾಹುಕನ ದಾಸ್ಯದಿಂದ ನಿನ್ನನ್ನು ಬಿಡುಗಡೆ ಮಾಡಿಸಿ, ಅಯೋಧ್ಯೆಗೆ ಕರೆದೊಯ್ದು ಪಟ್ಟವನ್ನು ಕಟ್ಟಿ, ಮೊದಲಿನಂತೆಯೇ ನಿನ್ನನ್ನು ರಾಜನನ್ನಾಗಿ ಇರಿಸುತ್ತೇನೆ" ಎಂದನು;

ತಿರುಗಿ ಮೇಲಮ್ ನೋಡಿ ಕಂಡು=ಹರಿಶ್ಚಂದ್ರನು ತಲೆಯೆತ್ತಿ ಮೇಲೆ ನೋಡಿ ವಿಶ್ವಾಮಿತ್ರನನ್ನು ಕಂಡು; **ಇದೇನ್ ಮುನಿ ನಿಮ್ಮ ಹಿರಿಯತನಕೆ ಈ ಮಾತು ಯೋಗ್ಯವೇ**=ಇದೇನು ಮುನಿಯೇ... ಇಂತಹ ಮಾತುಗಳನ್ನಾಡುತ್ತಿರುವೆ. ನಿಮ್ಮ

ಹಿರಿಯತನಕ್ಕೆ ಈ ಮಾತು ಯೋಗ್ಯವೇ... ಇಂತಹ ಮಾತುಗಳು ನಿಮ್ಮ ಬಾಯಿಂದ ಬರಬಾರದು; ಕೇಳ್, **ಎನ್ನ ಸಿರಿಪೋದಡೇನು ರಾಜ್ಯಮ್ ಪೋದಡೇನು ನಾನ್ ಆರ ಸಾರಿ ಇರ್ದಡೇನು ವರಪುತ್ರನ ಅಸುವಳಿದು ಪೋದಡೇನ್ ನಾನ್ ಎನ್ನ ತರುಣಿಯನ್ ಕೊಂದಡೇನ್ ಕುಂದೆ**=ಕೇಳು, ನನ್ನ ಸಂಪತ್ತು ಹೋದರೇನು ರಾಜ್ಯ ಹೋದರೇನು... ನಾನು ಯಾರ ಬಳಿ ಇದ್ದರೇನು... ನನ್ನ ಪ್ರೀತಿಯ ಮಗನ... ಜೀವ ಹೋಗಿದ್ದರೇನು. ನಾನು ನನ್ನ ಹೆಂಡತಿಯನ್ನು ಕೊಂದರೆ, ಅದು ನನ್ನಿಂದಾದ ತಪ್ಪಾಗುವುದಿಲ್ಲ; **ಸತ್ಯವನು ಬಿಟ್ಟಿರನ್ ಎನಿಸಿದಡೆ ಸಾಕು ಎಂದು**= "ಹರಿಶ್ಚಂದ್ರನು ಸತ್ಯದ ನಡೆನುಡಿಯನ್ನು ಬಿಟ್ಟಿರನು" ಎಂದು ಜನರಿಂದ ಹೇಳಿಸಿಕೊಂಡು ಬಾಳಿದರೆ ಅದೇ ಸಾಕು ಎಂದು ನುಡಿದು;

ಹರಿಶ್ಚಂದ್ರನ ಪಾಲಿಗೆ ಸತ್ಯವೆಂದರೆ "ಈಗ ತನ್ನ ಒಡೆಯನಾಗಿರುವ ವೀರಬಾಹುಕನ ಆಜ್ಞೆಯಂತೆ ನಡೆದುಕೊಳ್ಳುವುದು. ತಾನು ಕೊಲ್ಲಬೇಕಾದ ವ್ಯಕ್ತಿಯು ತನ್ನ ಹೆಂಡತಿಯೇ ಆಗಿದ್ದರೂ, ಆಕೆಯ ಮೇಲಣ ವ್ಯಾಮೋಹದಿಂದ ಆಕೆಯನ್ನು ಉಳಿಸಲು ಯಾವುದೇ ಆಲೋಚನೆಯನ್ನು ಮಾಡದೆ, ಸ್ವಾಮಿದ್ರೋಹವನ್ನು ಮಾಡದಿರುವುದು. "ಆವ ಹೊತ್ತು ಆವ ಕೆಲಸವನ್ ಈಯಲ್ ಆರೆನ್ ಎನ್ನದೆ ಮಾಳ್ಪೆನ್–ಯಾವ ಸಮಯದಲ್ಲಾದರೂ ನೀನು ಯಾವ ಕೆಲಸವನ್ನು ಹೇಳಿದರೂ, ಆಗುವುದಿಲ್ಲ ಎಂದು ನುಡಿಯದೆ, ಅದನ್ನು ಮಾಡುತ್ತೇನೆ." ಎಂದು ವೀರಬಾಹುಕನಿಗೆ ತಾನು ಕೊಟ್ಟಿರುವ ಮಾತಿನಂತೆ ನಡೆದುಕೊಳ್ಳುವದು;

ಎತ್ತಿ ಹಿಡಿದ ಖಡ್ಗವ ಜಡಿಯುತ ಇಂತು ಎಂದನು=ಚಂದ್ರಮತಿಯ ಕೊರಳನ್ನು ಕತ್ತರಿಸಲು ಸಿದ್ಧವಾಗಿದ್ದ ಕತ್ತಿಯನ್ನು ಜಳಪಿಸುತ್ತ ಈ ರೀತಿ ನುಡಿದನು; **ಇನ್ನೆಗಮ್ ಆನ್ ಇಂದು ತನಕಮ್ ಎನ್ನ ದುಷ್ಕರ್ಮವಶದಿಂದಾದ ಕರ್ಮವೆಂದು ಬಗೆದೆನ್**= ಇಲ್ಲಿಯವರೆಗೂ ನಾನು ಇಂದಿನ ತನಕ ನನ್ನ ಜೀವನದಲ್ಲಿ ಉಂಟಾಗುತ್ತಿದ್ದ ಎಲ್ಲ ಕಷ್ಟನಷ್ಟಗಳು ನಾನು ಮಾಡಿದ ಕೆಟ್ಟಕೆಲಸಗಳ ಪರಿಣಾಮವೆಂದು ತಿಳಿದಿದ್ದೆನು; **ಕಡೆಗೆ ನಿನ್ನ ಗೊಡ್ಡಾಟವೇ**=ಇದೆಲ್ಲವೂ ನಿನ್ನ ಹಟಸಾಧನೆಗಾಗಿ ನೀನು ಹೂಡುತ್ತಿರುವ ಸಂಚು, ಕೊಡುತ್ತಿರುವ ಕಾಟ ಮತ್ತು ಮಾಡುತ್ತಿರುವ ವಂಚನೆ ಎಂಬುದು ಈಗ ಮನವರಿಕೆಯಾಯಿತು;

ಹೊಲೆಯನಾದವನ್, ಇನ್ನು ಸತಿಗಿತಿಯ ಕೊಲೆಗೆ ಹೇಸಿ ಬೆನ್ನೀವೆನೇ= ಹೊಲೆಯನಾಗಿರುವ ನಾನು ಇನ್ನು ನನ್ನ ಹೆಂಡತಿಯ ಕೊಲೆಗೆ ಅಸಹ್ಯಪಟ್ಟು ಕೊಂಡು ಹಿಂಜರಿಯುತ್ತೇನೆಯೇ; **ಸಡಿಫಡ**=ತಿರಸ್ಕಾರ ಇಲ್ಲವೇ ಕೋಪವನ್ನು ಸೂಚಿಸುವ ಪದ. ಛೀ...ತೂ ಎಂಬ ತಿರುಳನ್ನು ಉಳ್ಳ ಪದ; **ಸೆಡೆ**=ಹೆದರು/

ನಡುಗು/ಕುಗ್ಗು; **ಇದಮ್ ತೋರಿ ಸಿಕ್ಕಿಸಬಂದ ಗನ್ನಗತಕಕ್ಕೆ ಸೆಡೆವೆನೆ. ಸಡಿಫಡ ಎನುತ ಆರ್ದು**=ಹೆಂಡತಿ ಮತ್ತು ಮಗನ ಜೀವದ ಉಳಿವು ಹಾಗೂ ರಾಜ್ಯದ ಸಂಪತ್ತಿನ ಆಸೆಯನ್ನು ನನ್ನ ಮುಂದೆ ಒಡ್ಡಿ, ನನ್ನನ್ನು ಸುಳ್ಳಿನ ಬಲೆಯಲ್ಲಿ ಸಿಲುಕಿಸಲು ನೀನು ಮಾಡುತ್ತಿರುವ ವಂಚನೆಗೆ ಹೆದರುತ್ತೇನೆಯೇ… ಸಡಿಫಡ ಎನ್ನುತ್ತ ಅಬ್ಬರಿಸಿ;

ಎಲೆಲೆ ಶಿವಶಿವ… ಮಹಾದೇವ ನನ್ನಿಕಾರನ್ ವಧುವನ್ ಹೊಡೆದನ್ ಹೊಡೆದನು=ಎಲೆಲೆ… ಶಿವಶಿವ ಮಹಾದೇವ… ಸತ್ಯವಂತನಾದ ಹರಿಶ್ಚಂದ್ರನು ಚಂದ್ರಮತಿಯ ಕೊರಳ ಮೇಲೆ ಕತ್ತಿಯಿಂದ ಹೊಡೆದನು; **ಮಡದಿಯ ಎಡೆಗೊರಳ ನಡುವೆ ಅಡಸಿ ಹೊಡೆದ ಕಡುಗದ ಬಾಯಕಡೆಯ ಹೊಡೆಗಳನ್ ಆಂತು**= ಚಂದ್ರಮತಿಯ ಕೊರಳು ಕತ್ತರಿಸಿ ತುಂಡಾಗಿ ಬೀಳುವಂತೆ ಹರಿಶ್ಚಂದ್ರನು ಕೊರಳಿನ ಜಾಗದ ನಡುವೆ ಮೇಲಿನಿಂದ ಹೊಡೆದ ಕತ್ತಿಯ ಅಲಗಿನ ಹೊಡೆತವನ್ನು ದೇವರಾದ ಕಾಶಿ ವಿಶ್ವನಾಥನು ತಡೆಹಿಡಿದು; **ಕೆಂಜಡೆಯ**=ಕೆಂಪಾದ ಜಡೆಯ; **ಶಶಿಕಳೆಯ**=ಚಂದ್ರಕಾಂತಿಯ; **ಸುರನದಿಯ**=ಗಂಗಾ ನದಿಯ; **ಬಿಸಿಗಣ್ಣ**= ಬೆಂಕಿಯನ್ನು ಕಾರುವ ಕಣ್ಣಿನ; **ಫಣಿಕುಂಡಲದ**=ಹಾವನ್ನು ಕೊರಳಿನಲ್ಲಿ ಒಡವೆಯಾಗಿ ಹಾಕಿಕೊಂಡಿರುವ; **ಪಂಚಮುಖದ**=ಅಯ್ದು ಮೊಗಗಳನ್ನುಳ್ಳ; **ಎಡದ ಗಿರಿಜೆಯ**=ಎಡದ ಕಡೆಗೆ ಗಿರಿಜೆಯಿರುವ; **ತಳಿತ ದಶಭುಜದ**= ಹರಡಿಕೊಂಡ ಹತ್ತು ಭುಜಗಳ; **ಪುಲಿದೊಗಲಿನ ಉಡಿಗೆಯ**=ಹುಲಿಯ ತೊಗಲಿನ ಉಡುಗೆಯ;

ಮಹಾವಿಷ್ಣು ನಯನವೇರಿಸಿದ=ಮಹಾವಿಷ್ಣುವಿನ ಕಣ್ಣುಗಳನ್ನು ಹೊಂದಿರುವ; **ಮೆಲ್ಲಡಿಯ ಕಾಶೀರಮಣ ವಿಶ್ವನಾಥನ್ ಮೂಡಿದನು**=ಮೃದು ಪಾದವುಳ್ಳ ಕಾಶಿನಗರದ ಒಡೆಯನಾದ ವಿಶ್ವನಾಥನು ಕತ್ತಿಯಂಚಿನ ಎಡೆಯಲ್ಲಿ ಮೂಡಿ ಬಂದು ಚಂದ್ರಮತಿಯನ್ನು ಉಳಿಸಿದನು; **ಸುರರ ನೆರವಿ ಜಯಜಯ ಎನುತಿರೆ**= ದೇವತೆಗಳ ಸಮೂಹ ಜಯ ಜಯ ಎನ್ನುತ್ತಿರಲು; **ಅಪ್ರತಿಮದೇವಾಧಿದೇವ ಪಂಪಾವಿರೂಪಾಕ್ಷನೆಡೆಗೆ**=ಜಗತ್ತಿನಲ್ಲಿಯೇ ಎಲ್ಲರಿಗಿಂತ ಮಿಗಿಲಾದ ಮಹಾದೇವ ಪಂಪಾ ವಿರೂಪಾಕ್ಷನಿರುವ ಜಾಗಕ್ಕೆ; ಉತ್ತರ ಇಂಡಿಯಾದ ಕಾಶಿನಗರದಲ್ಲಿರುವ ವಿಶ್ವನಾಥ ಮತ್ತು ದಕ್ಷಿಣ ಇಂಡಿಯಾದ ಪಂಪಾಕ್ಷೇತ್ರದಲ್ಲಿರುವ ವಿರೂಪಾಕ್ಷ ದೇವರು ಬೇರೆ ಬೇರೆಯಲ್ಲ; ಶಿವನಿಗೆ ಇರುವ ಎರಡು ಹೆಸರುಗಳು;

ಮುರಹರನ್ ಬಂದನ್=ಮುರನೆಂಬ ರಕ್ಕಸನನ್ನು ಕೊಂದ ವಿಷ್ಣು ಬಂದನು; **ಅಬ್ಜಾಸನನ್ ಬಂದನ್**=ತಾವರೆಯ ಹೂವನ್ನು ಪೀಠವನ್ನಾಗುಳ್ಳ ಬ್ರಹ್ಮ ಬಂದನು; **ಅಮರರ ವರನ್ ಬಂದನ್**=ದೇವತೆಗಳ ಒಡೆಯನಾದ ದೇವೇಂದ್ರ ಬಂದನು;

ಅಗಜಾಪಿತನ್ ಬಂದನ್=ಪಾರ್ವತಿಯ ತಂದೆಯಾದ ಪರ್ವತರಾಜ ಬಂದನು; **ಈಶ್ವರಸುತನ್ ಬಂದನ್**=ಈಶ್ವರನ ಮಗನಾದ ಷಣ್ಮುಖ ಬಂದನು; **ಈರಾರು ರವಿಗಳು ಬಂದರ್**=ಹನ್ನೆರಡು ಮಂದಿ ಸೂರ್ಯರು ಬಂದರು;

ಇಕ್ಷು ಕೋದಂಡ ಬಂದ=ಕಬ್ಬನ್ನು ಬಿಲ್ಲನ್ನಾಗಿ ಹೊಂದಿರುವ ಮನ್ಮಥ ಬಂದನು; **ಸುರುಚಿರ ನವಗ್ರಹಂಗಳು ಬಂದರ್**=ಪ್ರಕಾಶಮಾನವಾದ ತೇಜಸ್ಸಿನಿಂದ ಬೆಳಗುವ ಒಂಬತ್ತು ಗ್ರಹಗಳಾದ ಸೂರ್ಯ/ಸೋಮ/ಮಂಗಳ/ಬುಧ/ಗುರು/ಶುಕ್ರ/ಶನಿ/ರಾಹು/ಕೇತು ಬಂದರು; **ಎಯ್ದುವ ಅವಸರದೊಳ್ ಅವರ್ ಇವರ್ ಎನ್ನಲೇಕೆ**=ಕಾಶಿನಗರದ ಸುಡುಗಾಡಿನ ನೆಲೆಗೆ ಬರುತ್ತಿರುವ ಸಮಯದಲ್ಲಿ ಅವರು ಬಂದರು ಇವರು ಬಂದರು ಎನ್ನುವುದೇಕೆ; **ಇನ್ನು ಸರ್ವದೇವರು ಬಂದರ್**=ಇರುವ ಎಲ್ಲಾ ದೇವರು ಬಂದರು; **ಕುಡಿದ ಔಷಧಮ್ ಬಾಯ್ಗೆ ನಿಗ್ರಹಮ್ ಮಾಡಿ, ತಾಳ್ದ ಒಡಲಿಂಗೆ ಸುಖವನ್ ಈವಂತೆ**=ಬೇನೆ ಬಂದಾಗ ಕುಡಿದ ಔಷಧವು ನಾಲಿಗೆಗೆ ಕಹಿಯನ್ನುಂಟುಮಾಡಿದರೂ, ಒಳಸೇರಿದ ನಂತರ ದೇಹದಲ್ಲಿನ ರೋಗವನ್ನು ಗುಣಪಡಿಸಿ ವ್ಯಕ್ತಿಗೆ ಒಳಿತನ್ನುಂಟುಮಾಡುವಂತೆ;

ಲೋಕದ ಕಣ್ಗೆ ಕಡುಮುಳಿದರಂತೆ ತೋರಿಸಿ=ಲೋಕದಲ್ಲಿ ಜನರ ಕಣ್ಣಿಗೆ ಬಹಳ ಕೋಪಿಸಿಕೊಂಡು ಜಿದ್ದಾಜಿದ್ದಿ ಹೋರಾಟ ಮಾಡುವವರಂತೆ ಕಾಣಿಸಿಕೊಂಡು; **ಸತ್ಯಶುದ್ಧವಪ್ಪನ್ನೆಗಮ್ ಕಾಡಿ ನೋಡಿ**=ಸತ್ಯದ ನಡೆನುಡಿಯು ಪರಿಪೂರ್ಣವಾಗಿ ಕಂಡುಬರುವ ತನಕ ಬಹುಬಗೆಯ ಕಾಟಗಳನ್ನು ಕೊಟ್ಟು, ಒರೆಹಚ್ಚಿ ನೋಡಿ; **ಕಡೆಯೊಳು ಹರಿಶ್ಚಂದ್ರರಾಯಂಗೆ ಗಣವೆರಸಿ ಮೃಡನನ್ ಎಳತಂದಿತ್ತು**=ಕೊನೆಯಲ್ಲಿ ಹರಿಶ್ಚಂದ್ರರಾಜನ ಬಳಿಗೆ ದೇವಗಣಗಳ ಜತೆಗೂಡಿ ಶಿವನನ್ನು ಕರೆತಂದು ಕಾಣಿಸಿ; **ಮೂಜಗದ ಕಡೆಗೆ ಕೀರ್ತಿಯಮ್ ಹರಹಿದ ಮುನಿವರೇಣ್ಯ ವಿಶ್ವಾಮಿತ್ರ ವಸಿಷ್ಠ ಸಹಿತ ಬಂದನು**=ಮೂರು ಜಗದ ಉದ್ದಗಲದಲ್ಲಿಯೂ ಹರಿಶ್ಚಂದ್ರನು ಸತ್ಯವಂತನೆಂಬ ಕೀರ್ತಿಯು ಹರಡುವಂತೆ ಮಾಡಿದ ಉತ್ತಮ ಮುನಿಯಾದ ವಿಶ್ವಾಮಿತ್ರನು ವಸಿಷ್ಠ ರಿಸಿಗಳ ಜತೆಗೂಡಿ ಸುಡುಗಾಡಿಗೆ ಬಂದನು;

ಆಗ ಹರಿಶ್ಚಂದ್ರನು ಹಿಂದಿನದೆಲ್ಲವನ್ನು ನೆನದು=ಆಗ ಹರಿಶ್ಚಂದ್ರನು ತನ್ನ ಕಣ್ಣ ಮುಂದೆ ಕಾಶಿ ವಿಶ್ವನಾಥ... ದೇವಾಧಿದೇವತೆಗಳು... ವಿಶ್ವಾಮಿತ್ರ ಮುನಿ ಮತ್ತು ಗುರು ವಸಿಷ್ಠರು ಬಂದು ನೆರೆದಿರುವುದನ್ನು ನೋಡಿ, ಈ ಹಿಂದೆ ನಡೆದ ಪ್ರಸಂಗ ಗಳೆಲ್ಲವನ್ನೂ ನೆನಪಿಸಿಕೊಂಡು; **ಚಾಂಡಾಲ ಕಿಂಕರನಾಗಿ, ಹೊಲೆವೇಷವನು ಹೊತ್ತು, ಸುಡುಗಾಡ ಕಾದ ಶವಶಿರದ ಅಕ್ಕಿಯನು ಹೇಸದೆ ಉಂಡು ಜೀವಿಸುವ, ವರಪುತ್ರನ್ ಅಳಿದುದನು ಕಣ್ಣಾರೆ ಕಂಡು, ಘನಪತಿವ್ರತೆಯಪ್ಪ ನಿಜಸತಿಯ ಕೊಂದ ನೀಚನು ಮೂರ್ಖನ್ ಆನ್. ಎನ್ನ ಠಾವಿಂಗೆ ಇದೇಕೆ ಪಾವನಮೂರ್ತಿ ನೀವು**

ಬಿಜಯಮ್ ಗೆಯ್ದಿರಿ ಎಂದು ಅಭವನ ಅಂಘ್ರಿಯಲಿ ಸೈಗೆಡೆದನು= ಹರಿಶ್ಚಂದ್ರನು ತನ್ನನ್ನು ತಾನು ಹೀಗಳೆದುಕೊಳ್ಳುತ್ತ "ಚಂಡಾಲನ ದಾಸನಾಗಿ, ಹೊಲೆಯನ ಉಡುಗೆ ತೊಡುಗೆಯನ್ನು ತೊಟ್ಟು, ಸುಡುಗಾಡನ್ನು ಕಾಯುತ್ತ ಹೆಣದ ತಲೆಯ ಅಕ್ಕಿಯನ್ನು ಅಸಹ್ಯಪಟ್ಟುಕೊಳ್ಳದೆ ಉಂಡು ಜೀವಿಸುತ್ತ; ಉತ್ತಮನಾದ ಮಗನು ಸಾವನ್ನಪ್ಪಿದ್ದನ್ನು ಕಣ್ಣಾರೆ ಕಂಡು, ಮಹಾಪತಿವ್ರತೆಯಾದ ಹೆಂಡತಿಯನ್ನು ಕೊಂದ ನೀಚನೂ ತಿಳಿಗೇಡಿಯೂ ನಾನಾಗಿದ್ದೇನೆ. ನನ್ನಂತಹ ಕೀಳು ವ್ಯಕ್ತಿಯಿರುವ ಕಡೆಗೆ ಇದೇಕೆ ಪವಿತ್ರರೂಪಿಯಾದ ನೀವು ಬಂದಿರಿ" ಎಂದು ನುಡಿದು ದೇವರಾದ ವಿಶ್ವನಾಥನ ಪಾದದ ಮೇಲೆ ದಿಂಡುರುಳುತ್ತಾನೆ;

ಹರಿಶ್ಚಂದ್ರನು ಚಂಡಾಲನಿಗೆ ದಾಸನಾಗಿ ಮತ್ತು ಹೊಲೆಯನ ಉಡುಗೆ ತೊಡುಗೆಯನ್ನು ತೊಟ್ಟು ಬಾಳುತ್ತಿರುವುದಕ್ಕೆ ತುಂಬಾ ಸಂಕಟಕ್ಕೆ ಒಳಗಾಗಿದ್ದಾನೆ. ವರ್ಣ ವ್ಯವಸ್ಥೆಯಲ್ಲಿ ಕುಲದ ಶ್ರೇಷ್ಠತೆಯನ್ನು ಉಳಿಸಿಕೊಂಡು ಕಾಪಾಡಿ ಕೊಳ್ಳುವುದೇ ಬಹು ದೊಡ್ಡ ಸಾಧನೆ ಎಂಬ ನಂಬಿಕೆಯಿದೆ. ಹರಿಶ್ಚಂದ್ರನಿಗೆ ಇಂತಹ ಸನ್ನಿವೇಶದಲ್ಲಿಯೂ 'ತಾನು ಹೊಲೆಯನಾಗಿ ಬಾಳುವಂತಾಯಿತು' ಎಂಬ ಕೀಳರಿಮೆಯ ಸಂಕಟವಿದೆ;

ವರ್ಣ ವ್ಯವಸ್ಥೆ ಮತ್ತು ಜಾತಿ ವ್ಯವಸ್ಥೆಯಿರುವ ಯಾವುದೇ ಸಮಾಜದಲ್ಲಿ ವ್ಯಕ್ತಿಯೊಬ್ಬನು ಜನಸಮುದಾಯದ ಒಳಿತಿಗಾಗಿ ಎಂತಹ ಮಹತ್ತರವಾದ ಸಾಧನೆಯನ್ನು ಮಾಡಿದ್ದರೂ, ಬೇರೆಯವರಿಗೆ ಕೊಟ್ಟ ಭಾಷೆಗೆ ತಪ್ಪಿ ನಡೆಯ ದಿದ್ದರೂ, ಪರಮ ಪ್ರಾಮಾಣಿಕತನದ ನಡೆನುಡಿಯನ್ನು ಹೊಂದಿ 'ಸಮಾಜದಲ್ಲಿ ಬಹಳ ಒಳ್ಳೆಯ ವ್ಯಕ್ತಿ' ಎಂಬ ಹೆಸರನ್ನು ಬಹಿರಂಗದಲ್ಲಿ ಪಡೆದಿದ್ದರೂ, ಅಂತರಂಗದ ಆತನ ಮಯ್ ಮನದಲ್ಲಿ ವರ್ಣ ಇಲ್ಲವೇ ಜಾತಿಯ ಮೇಲರಿಮೆಯ ಭಾವನೆಯು ಹೋಗಿರುವುದಿಲ್ಲ ಎಂಬುದಕ್ಕೆ ಹರಿಶ್ಚಂದ್ರನು ನಡೆನುಡಿಗಳೇ ಸಾಕ್ಷಿಯಾಗಿವೆ;

ಹರಿಶ್ಚಂದ್ರನು ತನ್ನನ್ನು ತಾನು ಹೀಗಳೆದುಕೊಂಡು ಮಯ್ ಮನದಲ್ಲಿ ಕುಗ್ಗಿ ಹೋಗಿರುವುದನ್ನು ಗುರುತಿಸಿದ ಕಾಶಿಪತಿಯು ಹರಿಶ್ಚಂದ್ರನ ಮನದಲ್ಲಿ ಕವಿದಿದ್ದ ಕೀಳರಿಮೆಯನ್ನು ಹೋಗಲಾಡಿಸುವಂತೆ ಕೆಲವು ಸಂಗತಿಗಳನ್ನು ಹರಿಶ್ಚಂದ್ರನಿಗೆ ಮನದಟ್ಟು ಮಾಡುತ್ತಾನೆ;

ಅಂಜಬೇಡ. ಏಳು ಭೂರಮಣ=ತನ್ನ ಪಾದಗಳ ಮೇಲೆ ದಿಂಡುರುಳಿದ್ದ ಹರಿಶ್ಚಂದ್ರನನ್ನು ಕಾಶಿಪತಿಯು ಮೇಲೆತ್ತುತ್ತ "ಹೆದರಬೇಡ ಮೇಲೇಳು ಹರಿಶ್ಚಂದ್ರ"; **ಘನ ಸತ್ಯವೇ ಜೀವ ಎಂದಿರ್ದ ನಿನ್ನ ಹೊಲೆಯನ ಸೇವೆ ಗುರುಸೇವೆ=** ದೊಡ್ಡದಾಗಿರುವ ಸತ್ಯವನ್ನೇ ನಿನ್ನ ಜೀವವೆಂದು ತಿಳಿದು ಸುಡುಗಾಡನ್ನು

ಕಾಯುತ್ತಿರುವ ನಿನ್ನ ಹೊಲೆಯನ ಸೇವೆಯೇ... ಗುರುಸೇವೆ; **ಹೊತ್ತ ಹೊಲೆವೇಷ ಪಾವನ ಪುಣ್ಯ ವೇಷ**=ನೀನು ತೊಟ್ಟಿರುವ ಹೊಲೆಯನ ಉಡುಗೆ ತೊಡುಗೆಯೇ... ಪವಿತ್ರವಾದ ಪುಣ್ಯದ ವೇಷ; **ಸುಡಗಾಡ ರಕ್ಷಿಸುವ ಇರವು ತಾ ಯಜ್ಞರಕ್ಷೆಯ ಇರವು**=ಸುಡುಗಾಡನ್ನು ಕಾಯುತ್ತಿರುವ ನಿನ್ನ ಕೆಲಸವು... ನೀನು ಯಾಗವನ್ನು ಕಾಪಾಡುತ್ತಿರುವ ಕಾಯಕಕ್ಕೆ ಸಮನಾಗಿದೆ; **ಅಪೇಯ**=ಕುಡಿಯಬಾರದ; **ಚಾಂದ್ರಾಯಣ**=ಇದೊಂದು ವ್ರತ/ನೋಂಪಿ/ಆಚರಣೆ. ಹುಣ್ಣಿಮೆಯ ದಿನಗಳಲ್ಲಿ ಚಂದ್ರನ ಬೆಳವಣಿಗೆಗೆ ತಕ್ಕಂತೆ ದಿನಕ್ಕೆ ಒಂದೊಂದು ತುತ್ತು ಅನ್ನವನ್ನು ಹೆಚ್ಚಿಸುತ್ತ ಉಣ್ಣುವುದು. ಅಮವಾಸ್ಯೆಯ ದಿನಗಳಲ್ಲಿ ಚಂದ್ರನ ಕುಗ್ಗುವಿಕೆಗೆ ತಕ್ಕಂತೆ ದಿನಕ್ಕೆ ಒಂದೊಂದು ತುತ್ತು ಅನ್ನವನ್ನು ಕಡಿಮೆಯಾಗು ಉಣ್ಣುವುದು; **ಅಪೇಯ ಚಾಂದ್ರಾಯಣ**=ಹುಣ್ಣಿಮೆ ಮತ್ತು ಅಮವಾಸ್ಯೆಯ ಕಾಲದಲ್ಲಿ ನಿಯಮಕ್ಕೆ ತಕ್ಕಂತೆ ಊಟಮಾಡುವ ಮೂಲಕ ಆಚರಿಸುವ ದೇವತಾ ಆಚರಣೆ;

ಅನುದಿನಮ್ ಭುಂಜಿಸಿದ ಶವದ ಶಿರದ ಅಕ್ಕಿಯಲ್ಲ. ಅದು ಅಪೇಯ ಚಾಂದ್ರಾಯಣಮ್=ಪ್ರತಿದಿನವೂ ನೀನು ಊಟ ಮಾಡಿದುದು ಶವಶಿರದ ಅಕ್ಕಿಯಲ್ಲ. ಅದು ಚಂದ್ರಾಯಣವೆಂಬ ಒಂದು ವ್ರತದ ಆಚರಣೆಯ ಕೂಳು; **ಪುತ್ರನ ಅಳಿವು ಜನ್ಮ ನಿಕಾಯದ ಅಳಿವು**=ನಿನ್ನ ಮಗನ ಸಾವು... ಮತ್ತೆ ಮತ್ತೆ ಹುಟ್ಟು ಸಾವಿನ ಸುಳಿಯಿಂದ ನೀನು ಪಾರಾಗಿರುವುದನ್ನು ಸೂಚಿಸುತ್ತದೆ; **ಅಂಗನಾ ಹನನ ಮಾಯಾ ಹನನ ಎಂದು ಅಭವ ಪರಸುತ್ತ**=ಚಂದ್ರಮತಿಯನ್ನು ಕೊಲ್ಲಲು ನೀನು ಕತ್ತಿಯಿಂದ ಹೊಡೆದದ್ದು... ನಿನ್ನೊಳಗಿನ ಮೋಹವನ್ನು ನಾಶಗೊಳಿಸಿದಂತಾಗಿದೆ ಎಂದು ಕಾಶಿಪತಿಯು ಹರಿಶ್ಚಂದ್ರನನ್ನು ಹರಸುತ್ತ;

ಕಣ್ಣಾಲಿ ಜಲವಮ್ ತೊಡೆದು ಸಂತೈಸಿ=ಹರಿಶ್ಚಂದ್ರನ ಕಣ್ಣೀರನ್ನು ಒರೆಸಿ ಸಮಾಧಾನಪಡಿಸುತ್ತ; **ಭಸಿತಮಮ್ ಭಾಳದೊಳಗಿಟ್ಟು ತೆಗೆದಪ್ಪಿ**=ವಿಭೂತಿಯನ್ನು ಹರಿಶ್ಚಂದ್ರನ ಹಣೆಗೆ ಬಳಿದು, ಅವನನ್ನು ತಬ್ಬಿಕೊಂಡು; **ಕೌಶಿಕನ ಕರೆದು**= ವಿಶ್ವಾಮಿತ್ರನನ್ನು ತನ್ನ ಮುಂದಕ್ಕೆ ಕರೆದು ಕಾಶಿಪತಿಯು ಈ ರೀತಿ ಹೇಳುತ್ತಾನೆ; **ಎಲೆ ಮುನಿಪ, ಸುಕುಮಾರನ ತೋಳ ಹಿಡಿದೆತ್ತಿ ತಾ ಬೇಗ ಎಂದು ಎನಲ್ಕೆ**= ವಿಶ್ವಾಮಿತ್ರ ಮುನಿಯೇ, ಲೋಹಿತಾಶ್ವನ ತೋಳನ್ನು ಹಿಡಿದೆತ್ತಿ ಕರೆದುಕೊಂಡು ಬೇಗ ಬಾ ಎಂದು ಹೇಳಲು;

ಮುನಿಪಾಳಕನ್ ವಿಷವೇರಿ ಸತ್ತ ಅರಸುಪುತ್ರನನ್ ಏಳೇಳು ಲೋಹಿತಾಶ್ವಾಂಕ ಎನೆ... ಬೆಬ್ಬಳಿಸುತ ಎದ್ದನ್. ಏನ್ ಬಣ್ಣಿಸುವೆನು=ಮುನಿಗಳ ಒಡೆಯನಂತಿರುವ ವಿಶ್ವಾಮಿತ್ರನು ಹಾವು ಕಚ್ಚಿ ವಿಷವೇರಿ ಸತ್ತಿದ್ದ ಲೋಹಿತಾಶ್ವನ ಹೆಣದ ಬಳಿಗೆ ಬಂದು “ಎದ್ದೇಳು ಕೀರ್ತಿವಂತನಾದ ಲೋಹಿತಾಶ್ವ” ಎನ್ನಲು, ಬೆರಗು

ಗೊಳಿಸುವಂತೆ ಮೇಲೆದ್ದನು; ಅದನ್ನು ಏನೆಂದು ತಾನೆ ಬಣ್ಣಿಸಲಿ ಎಂದು ಕವಿಯು ಉದ್ಗರಿಸಿದ್ದಾನೆ;

ಈಗ ಮತ್ತೆ ಕಾಶಿ ವಿಶ್ವನಾಥನು 'ಯಾರು ಯತಿ... ಯಾರು ಹೊಲೆಯ' ಎಂಬುದನ್ನು ಒಕ್ಕಣೆಮಾಡುತ್ತ, ಜಾತಿ ಸೂಚಕವಾದ ' ಹೊಲೆಯ' ಎಂಬ ಪದಕ್ಕೆ ಹೊಸಬಗೆಯ ವ್ಯಾಖ್ಯಾನವನ್ನು ಮಾಡಿ, 'ಕೆಟ್ಟ ನಡೆನುಡಿಯುಳ್ಳವನು' ಎಂಬ ತಿರುಳನ್ನು ಆ ಪದಕ್ಕೆ ನೀಡುತ್ತಾನೆ; 'ಕೆಟ್ಟ ನಡೆನುಡಿಯುಳ್ಳವನು' ಎಂದರೆ ತನ್ನ ಮತ್ತು ತನ್ನ ಕುಟುಂಬದ ಒಳಿತಿಗಾಗಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುವವನು; 'ಯತಿ' ಎಂದರೆ ಕೇವಲ ತಪೋಸಾಧನೆಯನ್ನು ಮಾಡಿದವನಲ್ಲ. ನಿಜ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳುತ್ತಿರುವವನು; 'ಒಳ್ಳೆಯ ನಡೆನುಡಿಯುಳ್ಳವನು' ಎಂದರೆ ತನ್ನ ಮತ್ತು ತನ್ನ ಕುಟುಂಬದ ಒಳಿತಿಗಾಗಿ ಸಹಮಾನವರಿಗೆ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವವನು;

ಅತಿ ಹುಸಿವ ಯತಿ ಹೊಲೆಯ=ಅತಿಯಾಗಿ ಸುಳ್ಳಾಡುವ ಯತಿಯು ಕೆಟ್ಟ ವ್ಯಕ್ತಿ; **ಹುಸಿಯದಿಹ ಹೊಲೆಯನ್ ಉನ್ನತ ಯತಿವರನು**=ಸುಳ್ಳನ್ನಾಡದ ಹೊಲೆಯನು ಉತ್ತಮನಾದ ವ್ಯಕ್ತಿ;

ಪಂಚಪಾತಕ=ಅಯ್ದು ಬಗೆಯ ಕೆಟ್ಟ ಕೆಲಸಗಳು. ೧.ಬ್ರಾಹ್ಮಣನನ್ನು ಕೊಲ್ಲುವುದು. ೨. ಹೆಂಡ ಕುಡಿಯುವುದು. ೩.ಚಿನ್ನವನ್ನು ಕದಿಯುವುದು. ೪.ಗುರುವಿನ ಹೆಂಡತಿಯನ್ನು ಕೂಡುವುದು. ೫.ಈ ನಾಲ್ಕು ಬಗೆಯ ಕೆಟ್ಟ ಕೆಲಸವನ್ನು ಮಾಡಿದವರ ಜತೆಗೂಡುವುದು;

ಹುಸಿದು ಮಾಡುವ ಮಹಾಯಜ್ಞ ಶತವು ಎಯ್ದೆ ಪಂಚಪಾತಕ=ಸುಳ್ಳನ್ನಾಡಿ ಮಾಡುವ ನೂರು ಯಾಗಗಳು ಎಲ್ಲ ರೀತಿಯಿಂದಲೂ ಅಯ್ದು ಬಗೆಯ ಪಾಪಗಳಿಗೆ ಸಮ; **ಸತ್ಯ ಬೆರಸಿದ ನ್ಯಾಯವದು ಲಿಂಗಾರ್ಚನೆ**=ಸತ್ಯದಿಂದ ಕೂಡಿದ ನ್ಯಾಯವೇ ಲಿಂಗಕ್ಕೆ ಮಾಡುವ ಪೂಜೆ; **ಶ್ರುತಿಮತವಿದು... ಎನ್ನಾಜ್ಞೆ**=ಇದು ವೇದಗಳಲ್ಲಿ ಹೇಳಿರುವ ವಿಚಾರ. ಇದರಂತೆಯೇ ಎಲ್ಲರೂ ಬಾಳಬೇಕೆಂಬುದು ನನ್ನ ಆಜ್ಞೆ;

ನಿನ್ನಂತೆ ಸತ್ಯರ್ ಈ ಕ್ಷಿತಿಯೊಳ್ ಇನ್ನಾರುಂಟು ಹೇಳ್ ಎಂದು ಪಾರ್ವತೀಪತಿ ಹರಿಶ್ಚಂದ್ರನನ್ ತಲೆದಡವಿ ಬೋಳೈಸಿ ಕೌಶಿಕಂಗೆ ಇಂತು ಎಂದನು=ನಿನ್ನ ಹಾಗೆ ಸತ್ಯವಂತರು ಈ ಭೂಮಂಡಲದಲ್ಲಿ ಇನ್ನಾರಿದ್ದಾರೆ ಹೇಳು ಎಂದು ಪಾರ್ವತಿಯ ಪತಿಯಾದ ವಿಶ್ವನಾಥನು ಹರಿಶ್ಚಂದ್ರನ ತಲೆಯನ್ನು ನೇವರಿಸಿ, ಸಂತಯಿಸಿ, ವಿಶ್ವಾಮಿತ್ರನನ್ನು ಕುರಿತ ಮತ್ತೆ ಈ ರೀತಿ ಹೇಳಿದನು; ನಿನ್ನ+ಅಲೆ; ಅಲೆ=ಹಿಂಸೆ/

ಕಾಟ/ತೊಂದರೆ; **ವಿಶ್ವಾಮಿತ್ರ, ನುಡಿಯೊಳ್ ಅನೃತಮ್ ತೋರದಂತೆ ನಿನ್ನಲೆಗೆ ನಿಂದಡೆ, ಮೆಚ್ಚಿ ಮೇಲೇನ ಕೊಡುವೆನೆಂದು ಎಂದೆಂದೆ ಬೇಗದಿಂದ ಅದ ಕೊಡು**=ವಿಶ್ವಾಮಿತ್ರ, ಅಂದು ದೇವೇಂದ್ರನ ಒಡ್ಡೋಲಗದಲ್ಲಿ ನಿನಗೂ ವಸಿಷ್ಠ ಮುನಿಗೂ ಹರಿಶ್ಚಂದ್ರನ ವಿಚಾರದಲ್ಲಿ ವಾಗ್ವಾದ ನಡೆದಾಗ "ಹರಿಶ್ಚಂದ್ರನು ಆಡುವ ಮಾತಿನಲ್ಲಿ ಸುಳ್ಳು ಕಂಡುಬರದಂತೆ ನಿನ್ನ ಕಾಟಕ್ಕೆ ಮಣಿಯದೆ ಸತ್ಯವಂತನಾಗಿಯೇ ಉಳಿದುಕೊಂಡರೆ, ಮೆಚ್ಚಿ ಏನನ್ನು ಕೊಡುವೆನು" ಎಂದು ಹೇಳಿದ್ದೆ... ಹರಿಶ್ಚಂದ್ರನಿಗೆ ಅದನ್ನು ಬೇಗ ಕೊಡು; **ಆನ್ ಐವತ್ತು ಕೋಟಿ ವರುಷ ಬಿಡದೆ ಮಾಡಿದ ತಪಃಫಲದೊಳ್ ಅರ್ಧವನ್ ಆಂತೆ**=ಕಾಶಿಪತಿಯೇ, ನಾನು ಅಯ್ವತ್ತು ಕೋಟಿ ವರುಶದಲ್ಲಿ ನಿರಂತರವಾಗಿ ಮಾಡಿದ ತಪಸ್ಸಿನ ಫಲದಲ್ಲಿ ಅರ್ಧವನ್ನು ನಾನಿಟ್ಟುಕೊಂಡು, ಇನ್ನುಳಿದ ಅರ್ಧವನ್ನು ಹರಿಶ್ಚಂದ್ರನಿಗೆ ಕೊಡುತ್ತಿದ್ದೇನೆ;

ಕಡುಮುಳಿದು ಕಾಡಿ ನೋಡಿದೆನು ಮೆಚ್ಚಿದೆನ್ ಇನ್ನು ಹಿಡಿ ಎಂದು ಉಸಿರ್ದು ಮುನಿಗಳ ದೇವನು ಅರಸಂಗೆ ಫಲವೆಲ್ಲವಮ್ ಕೊಟ್ಟನ್=ಹರಿಶ್ಚಂದ್ರನ ಬಳಿಗೆ ಬಂದು "ನಿನ್ನ ಬಗ್ಗೆ ಬಹಳ ಕೋಪಿಸಿಕೊಂಡು ನಿನ್ನನ್ನು ನಾನಾ ಬಗೆಗಳಲ್ಲಿ ಕಾಡಿ ನೋಡಿದೆನು. ನೀನು ಯಾವುದಕ್ಕೂ ಅಂಜದೆ ಅಳುಕದೆ ಸುಳ್ಳನ್ನಾಡದೆ ಸತ್ಯವಂತನಾಗಿಯೇ ಬಾಳಿದೆ. ನಿನ್ನ ಸತ್ಯದ ನಡೆನುಡಿಯನ್ನು ಮೆಚ್ಚಿದ್ದೇನೆ, ಇನ್ನು ತೆಗೆದುಕೊ" ಎಂದು ಹೇಳಿ ಮುನಿಗಳ ಒಡೆಯನಾದ ವಿಶ್ವಾಮಿತ್ರನು ಹರಿಶ್ಚಂದ್ರನಿಗೆ ತನ್ನ ತಪಸ್ಸಿನ ಅರ್ಧ ಫಲವನ್ನು ಕೊಟ್ಟನು; ಮತ್ತೆ ತನ್ನ ಮಾತನ್ನು ಮುಂದುವರಿಸಿ ಹರಿಶ್ಚಂದ್ರನಿಗೆ ಈ ರೀತಿ ಹೇಳುತ್ತಾನೆ; **ಪೊಡವಿಯ ಒಡೆತನದ ಪಟ್ಟವನ್ ಅಯೋಧ್ಯಾಪುರದ ನಡುವೆ ಕಟ್ಟುವೆನ್ ಏಳು ನಡೆ ರಥವನ್ ಏರು ಎಂದು ಕೌಶಿಕನ್ ಮೃಡ ಸಮಕ್ಷದೊಳು ಎನಲು**=ಭೂಮಂಡಲದ ಒಡೆತನದ ರಾಜಪಟ್ಟವನ್ನು ಅಯೋಧ್ಯಾಪುರದ ಜನರ ಮುಂದೆ ಕಟ್ಟುವೆನು. ಎದ್ದೇಳು ನಡೆ. ತೇರನ್ನು ಹತ್ತು ಎಂದು ವಿಶ್ವಾಮಿತ್ರ ಮುನಿಯು ಶಿವನ ಮುಂದುಗಡೆ ನುಡಿಯಲು;

ಕಡೆತನಕ ಮುನ್ ಜೀವತವ ಕೊಂಡೆನು. ಒಡೆಯನುಳ್ಳವನ್ ಆನು ಬರಬಾರದಯ್ಯ ನಿಮ್ಮಡಿಗಳಿಗೆ ದಾನವಾಗಿತ್ತ ವಸುಮತಿಯತ್ತಲ್ ಅಡಿಯನ್ ಇಡುವವನಲ್ಲ. ಇದನ್ ಬೆಸಸಬೇಡಿ ಎಂದು ಭೂನಾಥ ಕೈಮುಗಿದನು=ನನ್ನ ಜೀವಿತದ ಕೊನೆತನಕ ದಾಸನಾಗಿ ಸೇವೆಯನ್ನು ಮಾಡುತ್ತೇನೆಂದು ಹೇಳಿ ವೀರ ಬಾಹುಕನಿಗೆ ನನ್ನನ್ನು ಮಾರಿಕೊಂಡಿದ್ದೇನೆ. ವೀರಬಾಹುಕನನ್ನು ಒಡೆಯನನ್ನಾಗಿ ಉಳ್ಳವನು ನಾನು. ದಾಸನಾಗಿರುವ ನಾನು ಬರಬಾರದಯ್ಯ. ಇದು ಮಾತ್ರವಲ್ಲದೆ ನಿಮಗೆ ದಾನವಾಗಿ ಕೊಟ್ಟಿರುವ ಭೂಮಂಡಲದ ಕಡೆಗೆ ಮತ್ತೆ ಹೆಜ್ಜೆಯನ್ನು ಇಡುವವನಲ್ಲ. 'ರಾಜ್ಯಕ್ಕೆ ಒಡೆಯನಾಗು' ಎಂಬುದನ್ನು ಮಾತ್ರ ಆಜ್ಞಾಪಿಸಬೇಡಿ

ಎಂದು ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ಕಯ್ ಮುಗಿದನು;

ಎಲೆ ಜನಪ, ಆನ್ ಏಕೆ ರಾಜ್ಯವೇಕೆ=ಹರಿಶ್ಚಂದ್ರನೇ... ನಾನೇಕೆ ರಾಜ್ಯವೇಕೆ. ಮುನಿಯಾಗಿರುವ ನನಗೂ ರಾಜ್ಯಕ್ಕೂ ಎತ್ತಣ ಸಂಬಂಧ; **ಸತ್ಯಸಂಧಾನಮಮ್ ನೋಡಲೆಂದು ಉಳ್ಳುದೆಲ್ಲವ ಕೊಂಡಡೆ ಏನ್ ಎಂಬನೋ ಎಂದು ಕಾಡಿ ನೋಡಿದೆನ್ನೈಸೆ**=ನಿನ್ನ ನಡೆನುಡಿಯಲ್ಲಿ ಸತ್ಯದ ಆಚರಣೆಯನ್ನು ಒರೆಹಚ್ಚಿ ನೋಡಲೆಂದು ರಾಜ್ಯದ ಒಡೆತನವನ್ನು ಮತ್ತು ಸಂಪತ್ತನ್ನು ವಶಪಡಿಸಿಕೊಂಡರೆ ಏನನ್ನು ಮಾಡುತ್ತಾನೆಯೋ ಎಂದು ಅನೇಕ ಅಡೆತಡೆಗಳನ್ನು ಒಡ್ಡಿದೆನೆ ಹೊರತು ಮತ್ತೇನಲ್ಲ;

ಸರ್ವರಾಜ್ಯಮ್ ನಿನ್ನದು=ಇಡೀ ರಾಜ್ಯವೆಲ್ಲವೂ ಎಂದೆಂದಿಗೂ ನಿನ್ನದು; **ಕೀನಾಶನನ್ ಕರೆದು ವೀರಬಾಹುಕನಾಗಿ ಭೂನಾಥನನ್ ನಿಲಿಸಿ, ಬೇಡಿದ ಅರ್ಥವ ಕೊಟ್ಟು, ನೀನೆ ತರುಬು ಎಂದು ಕಳುಹಿದೆನ್ನೈಸೆ. ಕೃತಕವಲ್ಲ ಎಂದು ನಂಬುಗೆಯಿತ್ತನು**=ಕಾಶಿನಗರದಲ್ಲಿ ನಿನ್ನನ್ನು ನೀನೇ ಮಾರಾಟಕ್ಕಿಟ್ಟುಕೊಂಡು ಬೀದಿಬೀದಿಗಳಲ್ಲಿ ನಿರಾಶೆಯಿಂದ ಅಲೆಯುತ್ತಿದ್ದಾಗ ದೇವತೆಯಾದ ಯಮನನ್ನು ಕರೆದು ವೀರಬಾಹುಕನಾಗಿ ಹೋಗಿ ಹರಿಶ್ಚಂದ್ರನನ್ನು ಕೊಂಡುಕೊಂಡು, ಅವನು ಕೇಳಿದಷ್ಟು ಸಂಪತ್ತನ್ನು ಕೊಟ್ಟು, ನಿನ್ನ ಬಳಿ ಇಟ್ಟುಕೊ ಎಂದು ನಾನೇ ಯಮನನ್ನು ಕಳುಹಿಸದೆನಲ್ಲವೇ. ಈ ನನ್ನ ಮಾತು ಸುಳ್ಳಲ್ಲ ಎಂದು ವಿಶ್ವಾಮಿತ್ರನು ವಿಶ್ವಾಸದಿಂದ ನುಡಿದನು;

ಪೊಡವಿಪನ ವಾಕ್ಯದೊಳು ಹುಸಿಯ ನೀನ್ ಪಿಡಿದೆಯಾದಡೆ ನಾನು ಮುನಿತನವನ್ ಉಳಿದು ನರಶಿರದ ಓಡ ಹಿಡಿದು ಮದ್ಯಪಿಯಾಗಿ ತೆಂಕಮುಖವಹೆನ್ ಎಂದು ದೇವಸಭೆಯೊಳಗೆ ನಾನು ನುಡಿದು ಭಾಷೆಯನಿತ್ತೆ= ವಿಶ್ವಾಮಿತ್ರ ಮುನಿಯೇ, ರಾಜ ಹರಿಶ್ಚಂದ್ರನ ಮಾತಿನಲ್ಲಿ ಸುಳ್ಳನ್ನು ನೀನು ಕಂಡುಹಿಡಿದರೆ, ನಾನು ಮುನಿತನವನ್ನು ಬಿಟ್ಟು, ಮಾನವನ ತಲೆಬುರುಡೆಯಲ್ಲಿ ಮದ್ಯವನ್ನು ತುಂಬಿಕೊಂಡು ಕುಡುಕನಾಗಿ ದಕ್ಷಿಣ ದಿಕ್ಕಿಗೆ ಮೊಗಮಾಡಿ ಹೋಗುತ್ತೇನೆ ಎಂದು ದೇವೇಂದ್ರನ ಒಡ್ಡೋಲಗದಲ್ಲಿ ನಾನು ನುಡಿದು ನಿನಗೆ ಮಾತು ಕೊಟ್ಟಿದ್ದೆ ಎಂದು ವಸಿಷ್ಠ ಮುನಿಯು ನುಡಿದು ಹರಿಶ್ಚಂದ್ರನ ಬಳಿಗೆ ಬಂದು;

ನೀನ್ ಎನ್ನ ಭಾಷೆಯಮ್ ನಡಸಿ ರಕ್ಷಿಸಿದೆ. ಸತ್ಯವ ಮೆರೆದೆ ಎಂದು ವಾಸಿಷ್ಠನ್ ತಲೆದಡವಿ ಈಶನ ಸಮಕ್ಷದೊಳು ಅವನಿಪತಿಗೆ ತನ್ನನ್ ಕೊಟ್ಟನ್=ನೀನು ನನ್ನ ಮಾತಿನಂತೆ ನಡೆದುಕೊಂಡು ನನ್ನನ್ನು ಕಾಪಾಡಿದೆ. ಸತ್ಯವನ್ನು ಮೆರೆದೆ ಎಂದು ವಸಿಷ್ಠನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ, ಹರಿಶ್ಚಂದ್ರನ ತಲೆಯನ್ನು ಪ್ರೀತಿಯಿಂದ

ನೇವರಿಸಿ, ಕಾಶಿನಾಥನ ಮುಂದುಗಡೆ ಹರಿಶ್ಚಂದ್ರನಿಗೆ ತನ್ನನ್ನೇ ಕೊಟ್ಟನು. ಅಂದರೆ ಗುರು ವಸಿಷ್ಠನ ಅನುಗ್ರಹಕ್ಕೆ ಹರಿಶ್ಚಂದ್ರನು ಸಂಪೂರ್ಣವಾಗಿ ಪಾತ್ರನಾದನು; **ಕರುಣದಿಮ್ ಧರ್ಮ ಅರ್ಥ ಕಾಮ ಮೋಕ್ಷಂಗಳಮ್ ಸುರಿದು, ನಿನ್ನಯ ಪುಣ್ಯಕಥೆ ಸರ್ವಲೋಕದೊಳಗೆ ಇರಲಿ**=ಕರುಣೆಯ ನಡೆನುಡಿಗಳಿಂದ ಧರ್ಮ, ಸಂಪತ್ತು, ಕಾಮ ಮತ್ತು ಮೋಕ್ಷವನ್ನು ಪಡೆದು ಬಾಳುವ ರೀತಿನೀತಿಗಳನ್ನು ಜನರಿಗೆ ತಿಳಿಸುತ್ತ ನಿನ್ನ ಪುಣ್ಯಕತೆಯು ಸರ್ವಲೋಕದಲ್ಲಿಯೂ ಇರಲಿ;

ಅಭವನಿಮ್ ಬೇಕಾದ ವರವ ನೀನ್ ಬೇಡು ಭೂಪಾಲ=ನನ್ನಿಂದ ನಿನಗೆ ಬೇಕಾದ ವರವನ್ನು ಬೇಡು ಎಂದು ಕಾಶಿ ವಿಶ್ವನಾಥನು ಹರಿಶ್ಚಂದ್ರನಿಗೆ ಹೇಳುತ್ತಾನೆ; **ಹರೆಯದ ಈ ಕಾಶಿಯೊಳು ನಿನ್ನ ಮಂದಿರದ ಮೇಲೆರಡು ಯೋಜನದೊಳ್ ಎನ್ನಯ ಕೀರ್ತಿಪುರ ಹೇಮ ವಿರಚಿತದೊಳ್ ಇರಬೇಹುದು ಎಂದು ಬೇಡಿದಡೆ**=ವಿಸ್ತಾರವಾದ ಈ ಕಾಶಿಯಲ್ಲಿ ನಿನ್ನ ಮಂದಿರದಿಂದ ಎರಡು ಯೋಜನ ದೂರದಲ್ಲಿ ನನ್ನ ಹೆಸರಿನ ಕೀರ್ತಿಪುರವು ಚಿನ್ನದಿಂದ ನಿರ್ಮಾಣಗೊಳ್ಳಬೇಕು ಎಂದು ಹರಿಶ್ಚಂದ್ರನು ಕಾಶಿ ವಿಶ್ವನಾಥನನ್ನು ಬೇಡಿಕೊಳ್ಳಲು;

ಅಂದು ಅಗಜೇಶನು ಅದಮ್ ಕೊಟ್ಟನ್=ಅಂದು ಕಾಶಿಪತಿಯು ಹರಿಶ್ಚಂದ್ರನ ಬೇಡಿಕೆಯನ್ನು ಈಡೇರಿಸಿದನು; **ಹರನ ಸಭೆಯೊಳಗೆ**=ಶಿವನ ಓಲಗದಲ್ಲಿ; **ಮುರಹರನ ಸಭೆಯೊಳಗೆ**=ವಿಷ್ಣುವಿನ ಓಲಗದಲ್ಲಿ; **ವಾಗ್ವರನ ಸಭೆಯೊಳಗೆ**=ಬ್ರಹ್ಮನ ಓಲಗದಲ್ಲಿ; ಪವಿಧರನ ಸಭೆಯೊಳಗೆ=ದೇವೇಂದ್ರನ ಓಲಗದಲ್ಲಿ; **ದಿನಕರನ ಸಭೆಯೊಳಗೆ**=ಸೂರ್ಯನ ಓಲಗದಲ್ಲಿ; **ಭಾಸುರಶಿಖಿಯ ಸಭೆಯೊಳಗೆ**= ಹೊಳೆಯುತ್ತಿರುವ ಅಗ್ನಿದೇವನ ಓಲಗದೊಳಗೆ; **ಶಶಿಯೊಂದು ಸಭೆಯ ನಡುವೆ**=ಚಂದ್ರನ ಒಂದು ಓಲಗದಲ್ಲಿ;

ಪರಮ ಮುನಿಸಭೆಯೊಳಗೆ=ಉತ್ತಮರಾದ ಮುನಿಗಳ ಓಲಗದಲ್ಲಿ; **ವರನೃಪರ ಸಭೆಯೊಳಗೆ**=ಉತ್ತಮರಾದ ರಾಜರ ಓಲಗದಲ್ಲಿ; **ಧರಣಿಪನ ಕಥನವೇ ಕಥನ; ಮಾತೇ ಮಾತು**=ಹರಿಶ್ಚಂದ್ರನು ಸತ್ಯದ ಉಳಿವಿಗಾಗಿ ಪಟ್ಟ ಸಂಕಟ ಮತ್ತು ತಳೆದ ಕೆಚ್ಚೆದೆಯ ನಡೆನುಡಿಗಳ ಕತೆಯೇ ಕೇಳಿಬರುತ್ತಿದೆ; ಎಲ್ಲಿಹೋದರೂ ಹರಿಶ್ಚಂದ್ರನಿಗೆ ಸಂಬಂಧಿಸಿದ ಮಾತೇ ಕೇಳಿಬರುತ್ತಿವೆ; **ಪರವಿಲ್ಲ**=ಬೇರೆ ಮಾತುಗಳೇ ಇಲ್ಲ; **ಬೇರೆ ಅನ್ಯವಾರ್ತೆಗಳು ಹುಗಲಿಲ್ಲ ಎಂಬಾಗಳ್ ಏನ್ ಪೊಗಳ್ವೆನ್**=ಇತರ ಸುದ್ದಿಗಳು ಪ್ರಸ್ತಾಪಿಸಲು ಅವಕಾಶವೇ ಇಲ್ಲ ಎನ್ನುವಂತಿರುವುದನ್ನು ಏನೆಂದು ತಾನೇ ಕೊಂಡಾಡಲಿ ಎಂದು ಕವಿಯ ಅಚ್ಚರಿಯಿಂದ ಉದ್ಗರಿಸಿದ್ದಾನೆ;

ಧರೆಯೊಳು ಹರಿಶ್ಚಂದ್ರ ಚಾರಿತ್ರಮಮ್ ಕೇಳ್ದ ನರರ್ ಏಳು ಜನ್ಮದಿಮ್ ಮಾಡಿರ್ದ ಪಾತಕವು ತರಣಿ ಉದಯದ ಮುಂದೆ ನಿಂದ ತಿಮಿರದ ತೆರದೆ

ಹರೆಯುತಿಹುದು=ಭೂಮಂಡಲದಲ್ಲಿ ಹರಿಶ್ಚಂದ್ರನ ಸತ್ಯದ ನಡೆನುಡಿಯನ್ನು ಕೇಳುವ ಮಾನವರು ಹಿಂದಿನ ತಮ್ಮ ಏಳು ಜನ್ಮಗಳಲ್ಲಿ ಮಾಡಿದ್ದ ಪಾಪವೆಲ್ಲವೂ ಸೂರ್ಯೋದಯವಾಗುತ್ತಿದ್ದಂತೆಯೇ ಲಯಗೊಳ್ಳುವ ಕತ್ತಲೆಯಂತೆ ಇಲ್ಲವಾಗುತ್ತದೆ; **ಏಕೆಂದಡೆ ಹರನೆಂಬುದೇ ಸತ್ಯ ಸತ್ಯವೆಂಬುದು ಹರನು. ಎರಡಿಲ್ಲವೆಂದು ಶ್ರುತಿ ಸಾರುತಿರಲು**=ಏಕೆಂದರೆ ಹರನೆಂಬುದೇ ಸತ್ಯ. ಸತ್ಯವೆಂಬುದೇ ಹರನು. ಸತ್ಯದ ನಡೆನುಡಿ ಬೇರೆಯಲ್ಲ ಹರ ಬೇರೆಯಲ್ಲವೆಂದು ವೇದಗಳು ಸಾರುತ್ತಿರಲು; ದೇವರಾದ ಶಿವನು ಕಲ್ಲು/ಮಣ್ಣು/ಮರ/ಲೋಹದಿಂದ ಮಾಡಿದ ವಿಗ್ರಹರೂಪಿಯಾಗಿಲ್ಲ. ಜನಸಮುದಾಯದ ನಿತ್ಯ ಜೀವನದ ಒಳ್ಳೆಯ ನಡೆನುಡಿಗಳೇ ಶಿವನ ರೂಪದಲ್ಲಿವೆ. ಹರನನ್ನು ಜಡರೂಪದಲ್ಲಿ ಕಾಣದೆ, ಸತ್ಯದ ನಡೆನುಡಿಯ ಚೈತನ್ಯರೂಪದಲ್ಲಿ ಕಾಣಬೇಕೆಂಬ ಸಂಗತಿಯನ್ನು ಈ ನುಡಿಗಳು ಸೂಚಿಸುತ್ತಿವೆ;

ಅರರೆ ಆ ವಾಕ್ಯವ ನಿರುತವ ಮಾಡಿ ಮೂಜಗಕೆ ತೋರಿದ ಹರಿಶ್ಚಂದ್ರ ಕಥೆ ಕೇಳ್ದಡೆ=ಅಬ್ಬಬ್ಬಾ... ಆ ಮಾತನ್ನು ನಿಜವನ್ನಾಗಿ ಮಾಡಿ ಮೂರು ಜಗತ್ತಿಗೆ ತೋರಿದ ಹರಿಶ್ಚಂದ್ರ ಕತೆಯನ್ನು ಕೇಳಿದರೆ; **ಅನೃತವರಿಯದ ಹೊಲೆಯನನ್ ನೆನೆಯೆ ಪುಣ್ಯವೆಂದು ಎನೆ**=ಸುಳ್ಳನ್ನಾಡದ ಹೊಲೆಯನನ್ನು ನೆನೆದರೆ ಪುಣ್ಯವೆಂದು ಎನ್ನಲು;

ಸೂರ್ಯಕುಲಜ ಕಲಿ ದಾನಿ ಸತ್ಯನ್ ವಸಿಷ್ಠನ ಶಿಷ್ಯನ್ ಅಧಿಕ ಶೈವನ್ ಕಾಶಿಯೊಳ್ ಮೆರೆದ ವೇದಪ್ರಮಾಣ ಪುರುಷ ಘನನೃಪ ಹರಿಶ್ಚಂದ್ರನ್ ಎಂದಡೆ= ಇನ್ನು ಸೂರ್ಯವಂಶದಲ್ಲಿ ಹುಟ್ಟಿದವನು, ಕಲಿಯೂ, ದಾನಿಯೂ, ಸತ್ಯವಂತನೂ, ವಸಿಷ್ಠನ ಶಿಷ್ಯನೂ, ಹೆಚ್ಚಿನ ಶೈವನೂ, ಕಾಶಿಯಲ್ಲಿ ಹೆಸರನ್ನು ಪಡೆದವನು, ವೇದದಲ್ಲಿ ಹೇಳಿರುವಂತೆ ಬಾಳುತ್ತಿರುವ ವ್ಯಕ್ತಿಯೂ, ದೊಡ್ಡ ರಾಜನಾಗಿರುವ ಹರಿಶ್ಚಂದ್ರನನ್ನು ನೆನೆದರೆ ಇನ್ನು ಹೆಚ್ಚಿನ ಪುಣ್ಯವು ದೊರೆಯುತ್ತದೆ;

ಕಾವ್ಯಮುಖದಿಮ್ ಜನ ಬದುಕಬೇಕು=ಕಾವ್ಯದಲ್ಲಿ ನಿರೂಪಣೆಗೊಳ್ಳುವ ಕಥಾವಸ್ತು, ಪಾತ್ರಗಳು, ಪಾತ್ರಗಳ ನಡುವಣ ಮಾತುಕತೆ, ವರ್ಣನೆಗಳು ಮತ್ತು ಇನ್ನಿತರ ಸಂಗತಿಗಳ ಮೂಲಕ "ಮಾನವ ಸಮುದಾಯದ ಜೀವನದ ಆಗುಹೋಗುಗಳಲ್ಲಿ ಯಾವುದು ಒಳ್ಳೆಯದು–ಯಾವುದು ಕೆಟ್ಟದ್ದು; ಯಾವುದು ನೀತಿ–ಯಾವುದು ಅನೀತಿ; ಯಾವುದು ದಿಟ–ಯಾವುದು ಸುಳ್ಳು; ಯಾವುದು ನಿಸರ್ಗ ಸಹಜವಾದುದು–ಯಾವುದು ಮಾನವ ಕಲ್ಪಿತವಾದುದು" ಎಂಬ ಸಾಮಾಜಿಕ ಅರಿವನ್ನು ಪಡೆದುಕೊಂಡು, ಜೀವನದ ವ್ಯವಹಾರಗಳಲ್ಲಿ ಕೆಟ್ಟದ್ದನ್ನು ತೊಡೆದುಕೊಂಡು, ಒಳ್ಳೆಯದನ್ನು ಅಳವಡಿಸಿಕೊಂಡು ಇಡೀ ಮಾನವ

ಸಮುದಾಯ ಪರಸ್ಪರ ಪ್ರೀತಿ. ಕರುಣೆ, ತಾಳ್ಮೆ, ಜವಾಬ್ದಾರಿ ಮತ್ತು ಸಮಾನತೆಯಿಂದ ಬಾಳಬೇಕೆಂಬ ಸಾಮಾಜಿಕ ಎಚ್ಚರವನ್ನು ಹೊಂದಿ ಬಾಳುವುದು.

ಮಹಾಲಿಂಗಭಕ್ತರ ಭಕ್ತನು ಕವಿ ರಾಘವಾಂಕನ್ ಆತನ ಪೊಗಳ್ದು ಕಾವ್ಯ ಮುಖದಿಮ್ ಜನ ಬದುಕಬೇಕೆಂದು ಅನಪೇಕ್ಷೆಯಿಂದ ಪೇಳ್ದನ್= ಮಹಾಲಿಂಗದ ಭಕ್ತರನ್ನು ಮೆಚ್ಚಿಕೊಂಡು ಪೂಜಿಸುವ ಕವಿಯಾದ ರಾಘವಾಂಕನು ಸತ್ಯವಂತನಾದ ಹರಿಶ್ಚಂದ್ರನನ್ನು ಗುಣಗಾನ ಮಾಡಿ, ಕಾವ್ಯದ ಮೂಲಕ ಜನ ಬದುಕಬೇಕೆಂದು ಯಾವುದೇ ಬಯಕೆಯಿಲ್ಲದೆ ಅಂದರೆ ಸಂಪತ್ತು, ಕೀರ್ತಿ ಇಲ್ಲವೇ ಉನ್ನತ ಅಧಿಕಾರವನ್ನು ಪಡೆಯಬೇಕೆಂಬ ಇಚ್ಚೆಯಿಲ್ಲದೆ ಒಳ್ಳೆಯ ಉದ್ದೇಶದಿಂದ ಈ ಕಾವ್ಯವನ್ನು ಹೇಳಿದನು;

❖

ಬರಹಗಾರ

ಹೆಸರು : ಸಿ.ಪಿ.ನಾಗರಾಜ (೧೯೪೫)

ತಾಯಿ : ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು : ಎಂ.ಎ., ಪಿಎಚ್.ಡಿ.,

ಕೆಲಸ : ಕನ್ನಡ ಅಧ್ಯಾಪಕ

೧೯೭೧–೭೨ ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

೧೯೭೨–೨೦೦೩ ಭಾರತಿ ಕಾಲೇಜು, ಕಾಳಮುದ್ದನದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

೨೦೦೬–೨೦೨೧ ತೇಜಸ್ವಿ ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ

೧. ಮುದ್ರಿತ ಪುಸ್ತಕಗಳು

ನಾಟಕ: ಭಾಗೀರಥಿ –– ಅಂಬೆ –– ಹಾವು –– ಅಂಗಿಬಟ್ಟೆ –– ಒಂದು ರೂಪಾಯಿ –– ಕಳ್ಳರಿದ್ದಾರೆ ಎಚ್ಚರಿಕೆ –– ಹೆಣದ ಹಣ –– ಮೂರು ಸಾಮಾಜಿಕ ನಾಟಕಗಳು

ಗದ್ಯ: ಕರಿಯನ ಪುರಾಣ –– ಕನಕನ ಅವ್ವ –– ಹಳ್ಳಿಗಾಡಿನ ರೂವಾರಿ –– ಡಾ.ಬಂದೀಗೌಡ –– ಆಣೆ ಪ್ರಮಾಣಗಳು –– ಬಯ್ಗುಳ –– ಸರ್ವಜ್ಞ ವಚನಗಳ ಓದು –– ಅಲ್ಲಮ ವಚನಗಳ ಓದು –– ಶಿವಶರಣೆಯರ ವಚನಗಳ ಓದು ––

ಶಿವಶರಣರ ವಚನಗಳ ಓದು –– ಬಸವಣ್ಣ ವಚನಗಳ ಓದು –– ಮುದ್ದೆಗಂಟು –– ಶಿವಶರಣಶರಣೆಯರ ವಚನಗಳ ಓದು –– ಪಂಪ ಭಾರತ ಓದು ಸರ್ವಜ್ಞ ಮತ್ತು ಅಲ್ಲಮ ವಚನಗಳ ಓದು –– ವಚನದಿಂದ ಆಯ್ದ ಸಾಲುಗಳ ಓದು –– ಕುವೆಂಪು ಕವನಗಳ ಓದು –– ಕನ್ನಡ ಬಯ್ಗುಳ ಓದು –– ಬಸವಯುಗದ ವಚನಕಾರರು –– ಕನಕದಾಸರ ರಾಮಧಾನ್ಯ ಪ್ರಸಂಗ ಓದು –– ಬ್ರೆಕ್ಟ್ ಕವನಗಳ ಓದು –– ರವೀಂದ್ರನಾಥ ಠಾಕೂರ್ ಕವನಗಳ ಓದು –– ಸೀತಾ ಪರಿತ್ಯಾಗ ಪ್ರಸಂಗ –– ಕುಮಾರವ್ಯಾಸ ಭಾರತ ಓದು: ಕೀಚಕನ ಪ್ರಸಂಗ ಮತ್ತು ಉತ್ತರ ಕುಮಾರನ ಪ್ರಸಂಗ –– ರಾಘವಾಂಕ : ಹರಿಶ್ಚಂದ್ರ ಕಾವ್ಯ ಪ್ರಸಂಗ ಓದು.

೨. ಡಿಜಿಟಲ್ ಪುಸ್ತಕಗಳು:

೧. ಕನ್ನಡ ಸಾಹಿತ್ಯ ಸಂಚಯ
   https://cpnagaraj.sanchaya.net
೨. ಮೈಲಾಂಗ್–ಕನ್ನಡ ಇ ಬುಕ್ಸ್ – ಆಡಿಯೋ ಬುಕ್ಸ್
   https://mylang.in
೩. ಋತುಮಾನ
   https://ruthumana.com

3. C P Nagaraj-You Tube

Play lists
ಸರ್ವಜ್ಞನ ವಚನಗಳ ಓದು–೧೩ ಎಪಿಸೋಡ್
ಅಲ್ಲಮನ ವಚನಗಳ ಓದು– ೩೬ ಎಪಿಸೋಡ್
ಬಸವಣ್ಣನ ವಚನಗಳ ಓದು–೨೬ ಎಪಿಸೋಡ್
ಶಿವಶರಣಶರಣೆಯರ ವಚನಗಳ ಓದು–೫೨ ಎಪಿಸೋಡ್
ವಚನದಿಂದ ಆಯ್ದ ಸಾಲುಗಳ ಓದು–೧೬೨ ಎಪಿಸೋಡ್
ಮುದ್ದೆಗಂಟು–೬೦ ಎಪಿಸೋಡ್
ಹಳ್ಳಿಗಾಡಿನ ರೂವಾರಿ ಜಿ.ಮಾದೇಗೌಡ–೧೫ ಎಪಿಸೋಡ್
ಜನಪರ ಚೇತನ ಡಾ.ಬಂದೀಗೌಡ–೧೫ ಎಪಿಸೋಡ್
ಕುವೆಂಪು ಕವನಗಳ ಓದು–೧೩ ಎಪಿಸೋಡ್
ಪಂಪ ಭಾರತ ಪ್ರಸಂಗಗಳು – ೯ ಎಪಿಸೋಡ್
ಆಣೆ ಪ್ರಮಾಣಗಳ ಓದು–೧೦
ಕನಕದಾಸರ ರಾಮಧಾನ್ಯ ಪ್ರಸಂಗ–೧

ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಸೀತಾ ಪರಿತ್ಯಾಗ ಪ್ರಸಂಗ–೬
ಡಿ.ಎನ್. ಶಂಕರ ಭಟ್ – ಭಾಷೆಯ ಬಗೆಗೆ ನೀವೇನು ಬಲ್ಲಿರಿ–೪೧
ಸಿ.ಎಚ್. ರಾಜಶೇಖರ್– ಸಮಗ್ರ ಬುದ್ಧ ಸಾಹಿತ್ಯ ಮಾಲೆ–೩೦
ಕೆ.ವಿ. ನಾರಾಯಣ– ನುಡಿಯರಿಮೆ ಬರಹಗಳು–೨೬
ಕೆ.ವಿ. ನಾರಾಯಣ– ಕನ್ನಡ ಜಗತ್ತು : ಅರ್ಧ ಶತಮಾನ – ೯೧
ದೇವನೂರು ಮಹಾದೇವ – ಎದೆಗೆ ಬಿದ್ದ ಅಕ್ಷರ–೨೯
ಬಿ.ವಿ. ವೀರಭದ್ರಪ್ಪ – ವೇದಗಳಲ್ಲಿ ಜನಸಾಮಾನ್ಯರು–೪೦

ಗೂಗಿ ವಾ ಥಿಯಾಂಗೊ ವೈಚಾರಿಕ ಬರಹಗಳು–೧೩
(ಅನುವಾದ : ಎಚ್.ಎಸ್. ನಾಗಭೂಷಣ)

ಮುರಳಿಧರ ಜಗತಾಪ – ಸಮಾಜ ಸುಧಾರಕ ಮಹಾತ್ಮ ಫುಲೆ – ೨೭
(ಅನುವಾದ : ಅಕಿಂಚನ)

ಬರ್ಟ್ರೆಂಡ್ ರಸೆಲ್ – ಸುಖ ಸಾಧನೆ – ೬೪
(ಅನು : ಯೋಗನರಸಿಂಹಮ್)

ರೈನರ್ ಮಾರಿಯಾ ರಿಲ್ಕ್ – ಯುವಕವಿಗೆ ಬರೆದ ಪತ್ರಗಳು – ೧೦
(ಅನು : ಓ.ಎಲ್. ನಾಗಭೂಷಣ ಸ್ವಾಮಿ)

ರವೀಂದ್ರನಾಥ ಠಾಕೂರ್ ಕವನಗಳ ಓದು–೧೬

ಬ್ರೆಕ್ಟ್ ಕವನಗಳ ಓದು–೧೯

ಕನ್ನಡ ಬಯ್ಗುಳ ಓದು–ಪಿಎಚ್.ಡಿ. ಬರಹ–೨೦

ಮಹಾಶ್ವೇತಾದೇವಿಯವರ ಬದುಕು ಬರಹ – ೨೬
(ಲೇಖಕರು : ಎಚ್.ಎಸ್. ಶ್ರೀಮತಿ)

ಕುಮಾರವ್ಯಾಸ ಭಾರತ ಓದು : ಕೀಚಕನಕ ಪ್ರಸಂಗ – ೧೩
ಕುಮಾರವ್ಯಾಸ ಭಾರತ ಓದು : ಉತ್ತರ ಕುಮಾರನ ಪ್ರಸಂಗ – ೧೦

ವಿಳಾಸ : ಸಿ.ಪಿ.ನಾಗರಾಜ, 75, 5ನೇ ಕ್ರಾಸ್, 'ಎ' ಬ್ಲಾಕ್, ಕ್ರಿಷ್ಣ ಗಾರ್ಡನ್, ಆರ್.ವಿ. ಕಾಲೇಜು ಅಂಚೆ, ಬೆಂಗಳೂರು–560 059. ಮೊ : 9986347521
e-mail : ngy7777@gmail.com

ಸಿ.ಪಿ.ನಾಗರಾಜ ಅವರು ಇಪ್ಪತ್ತೈದು ಪ್ರಸಂಗಗಳಲ್ಲಿ ಹರಿಶ್ಚಂದ್ರ ಕಾವ್ಯದ ನಾಟಕೀಯತೆಯ ಶೈಲಿ–ವಿಸ್ತಾರವನ್ನು ಕವಿಯ ನಾಟಕೀಯ ಭಾಷೆಯ ಚೌಕಟ್ಟನಲ್ಲಿಯೇ ಹಿಡಿದಿದ್ದಾರೆ. ಕಾವ್ಯದ ಧೋರಣೆಯನ್ನು ಎತ್ತಿಹಿಡಿಯಲು ಕವಿಯು ಎತ್ತಿಕೊಂಡ ವಸ್ತುವೂ ಕೇಳುಗರಿಗೆ/ನೋಡುಗರಿಗೆ ರಸಜನ್ಯವಾಗುವಂತದ್ದೇ ಆಗಿದೆ. ವೈಭವದ ಉತ್ಕರ್ಷದಿಂದ ಪಾತಾಳಕ್ಕೆ ಇಳಿಯುವ ರಾಜ ಕುಟುಂಬದ ಕಥೆ ಕರುಣರಸವನ್ನು ಉಕ್ಕಿಸುತ್ತದೆ. ಪಾತ್ರಗಳ ಸಂವಾದ, ಸ್ವಗತಗಳು ಇದನ್ನು ಆಗುಮಾಡುತ್ತವೆ.

ಅದರಿಂದ ಇದನ್ನು ನಾಗರಾಜ ಅವರು ನಾಟಕೀಯ ಪ್ರಸಂಗಗಳನ್ನಾಗಿ ಮಾಡಿರುವುದರಲ್ಲಿ ಔಚಿತ್ಯವಿದೆ. ಕತೆಯ ಎಲ್ಲಾ ರಸಘಟ್ಟಗಳೂ ಈ ಪ್ರಸಂಗಗಳನ್ನು ಓದುವಾಗಲೇ ದಕ್ಕುತ್ತವೆ. ಇಡೀ ಹರಿಶ್ಚಂದ್ರ ಕಾವ್ಯದ ಸಂವಾದದ ನಾಟಕೀಯತೆಯನ್ನೇ ಬಳಸಿ ನೀನಾಸಂ ನಲ್ಲಿ ಹರಿಶ್ಚಂದ್ರ ನಾಟಕವನ್ನು ಮಾಡಿದ್ದನ್ನು ಇಲ್ಲಿ ನೆನೆಯಬಹುದು.

ನಾಗರಾಜ ಅವರೇ ರೂಪಿಸಿದ ಪಂಪ ಭಾರತದ ಪ್ರಸಂಗದಲ್ಲಿ ಪಾತ್ರಗಳು ಮಾತಾಡುವ ಕನ್ನಡಕ್ಕೂ, ಹರಿಶ್ಚಂದ್ರ ಕಾವ್ಯ ಪ್ರಸಂಗದಲ್ಲಿ ಪಾತ್ರಗಳು ಮಾತಾಡುವ ಕನ್ನಡಕ್ಕೂ ವ್ಯತ್ಯಾಸವಿದೆ ಎನ್ನುವುದನ್ನು ಓದಿ ನೋಡಿದರೆ ಗೊತ್ತಾಗುತ್ತದೆ. ಈ ವ್ಯತ್ಯಾಸವು ವಸ್ತುವನ್ನು ನಿರ್ವಹಿಸಿದ ಕವಿಯ ಭಾಷೆಯ ಗುಣಾತ್ಮಕ ವ್ಯತ್ಯಾಸವೇ ಆಗಿದೆ. ಇಂಥ ಕಾರಣಕ್ಕೂ ನಾಗರಾಜ ಅವರ ಈ ಪ್ರಯೋಗಗಳು ಪ್ರಯೋಜನಕಾರಿಯಾಗಿವೆ. ಕಾವ್ಯದ ಪದಗಳನ್ನು ಬಿಡಿಸಿ ವಿಂಗಡಿಸಿ ಆಡುಮಾತಿನ ಕಾಕುವಿಗೆ ತರುವ ನಾಗರಾಜ ಅವರ ಪರಿಶ್ರಮದಿಂದಾಗಿ ವಿಭಿನ್ನ ಚೈತನ್ಯವು ಓದುವಿಕೆಗೆ ದಕ್ಕುತ್ತದೆ. ಸಿ.ಪಿ.ನಾಗರಾಜ ಅವರ ಈ ಪ್ರಯತ್ನಗಳು ಹಳೆಗನ್ನಡ ಕಾವ್ಯಗಳ ಹೊಸ ಓದಿಗೆ ಪ್ರಚೋದಿಸುವ ಮೀಟುಗೋಲಾಗಲಿ ಎಂದು ಹಾರೈಸುತ್ತೇನೆ.

ಬಸವರಾಜ ಕಲ್ಗುಡಿ

ನಾಸು ಸ್ಮಾರಕ ಪ್ರಕಾಶನ,
ಬೆಂಗಳೂರು.

ರೂ. 400/-